ಧರ್ಮಾಮೃತ

ಪ್ರಸ್ತಾವನೆ

ಹಳಗನ್ನಡದ ಕಥನಪ್ರಪಂಚದಲ್ಲಿ ನಯಸೇನನಿಗೆ ಬಹು ಮುಖ್ಯವಾದ ಸ್ಥಾನವಿದೆ. ಇವನ ಕಾವ್ಯವಾದ 'ಧರ್ಮಾಮೃತ'ದಲ್ಲಿ ಕಾವ್ಯಶಕ್ತಿಗಿಂತಲೂ ಕಥನಶಕ್ತಿ ಮೇಲುಗೈ ಪಡೆದಿದೆ. ಕ್ರಿ. ಶ. ೧೧೧೨ ರಲ್ಲಿ ತನ್ನ ಕಾವ್ಯವನ್ನು ಬರೆದು ಮುಗಿಸಿದ ಇವನು ಕಟ್ಟಾ ಕನ್ನಡದ ಅಭಿಮಾನಿ. ಅವನ ಹೊತ್ತಿಗೆ ಚಂಪೂ ಕಾವ್ಯ ಪ್ರಕಾರವು ಜಡ್ಡುಗಟ್ಟಿಹೋಗಿತ್ತು; ದಾರಿ ಸವೆದು ಇಳುಕಲಾಗಿತ್ತು. ಅಲ್ಲದೆ ಜೈನಮತವು ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಿತ್ತು. ಇವನ ನಂತರ ಅನತಿಕಾಲದಲ್ಲಿಯೇ ಕಾಣಿಸಿಕೊಂಡ ವೀರಶೈವ ಚಳುವಳಿಯ ಗುದ್ದಲಿಪೂಜೆ ಇವನ ಕಾಲದ ಹೊತ್ತಿಗಾಗಲೇ ನಡೆದಿತ್ತು. ಹಾಗಾಗಿ ಸ್ವಧರ್ಮಪಕ್ಷಪಾತಿಯಾದ ನಯಸೇನನಿಗೆ ಕಾವ್ಯರಚನಾಶಕ್ತಿಯನ್ನು ತನ್ನ ಮತವನ್ನು ಜನಪ್ರಿಯಗೊಳಿಸಲು ಬಳಸಿಕೊಳ್ಳಬೇಕೆಂಬ ತೀವ್ರ ಬಯಕೆ ಉಂಟಾಗಿರಬೇಕು. ಅದರಿಂದಾಗಿ ಅವನು ತನ್ನ ಏಕೈಕ ಕೃತಿಯನ್ನು ಜೈನಧರ್ಮದ ಪ್ರತಿಪಾದನೆಗೆಂದೇ ಮೀಸಲಿಟ್ಟ. ಯಾವಾಗ ಲೇಖಕನಲ್ಲಿ ಜನಸಮುದಾಯವನ್ನು ತಲುಪಬೇಕೆಂಬ ಹಂಬಲ ಪ್ರಬಲವಾಗುವುದೋ ಆಗ ಬರವಣಿಗೆಗೆ ಜಾನಪದದ ಆಸರೆ ಬೇಕಾಗುತ್ತದೆ. ನಯಸೇನನೂ ಇದಕ್ಕೆ ಹೊರತಲ್ಲ.

ತನ್ನ ಕಾಲಕ್ಕೆ ಚಂಪೂ ಸಂಸ್ಕೃತದ ಅತೀವ ಪ್ರಭಾವಕ್ಕೆ ಒಳಗಾಗಿ ಪೆಡಸಾಗಿದ್ದಾಗ, ನಯಸೇನನಲ್ಲಿನ ಕನ್ನಡ ಪ್ರಜ್ಞೆ ಪುಟಿದೆದ್ದಿತು. ಬಹು ಗಟ್ಟಿಯಾಗಿ ಕನ್ನಡಪರವಾದ ಘೋಷಣೆಗಳನ್ನು ಅವನು ಕೂಗಿದ. 'ಧರ್ಮಾಮೃತ'ದ ಪೀಠಿಕಾಭಾಗದಲ್ಲಿ ವಾಚ್ಯವಾಗಿಯೇ ಅವನ ಈ ಕನ್ನಡತನ ನಮಗೆ ಕೇಳುತ್ತದೆ. "ಪೊಸಗನ್ನಡದಿಂ ವ್ಯಾವರ್ಣಿಸುವೆಂ ಸತ್ಕಥೆಯನೆಂದು ಕನ್ನಡಮಂ ಚಿಂತಿಸಿ ಕೂಡಲಾಱದಕ್ಕಟ ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ?" ಎಂದು ಅವನು ಪ್ರಶ್ನಿಸುತ್ತಾನೆ. ಕವಿಗಳು ಎದುರಿಸುವ ಭಾಷಾಸಂಬಂಧೀ ಸಮಸ್ಯೆಯೊಂದನ್ನು ಇಲ್ಲಿ ನಯಸೇನ ಪ್ರಸ್ತಾಪಿಸಿದ್ದಾನೆ. ಹೊಸಗನ್ನಡದಲ್ಲಿ ತನ್ನ ಕೃತಿಯನ್ನು ರಚಿಸುವೆನೆಂದು ಹೊರಟ ಕವಿಯು ಕನ್ನಡದಲ್ಲಿ ಚಿಂತಿಸುತ್ತ ಅದಕ್ಕೆ ಸಂಸ್ಕೃತ ಮಾತುಗಳಲ್ಲಿ ಅಭಿವ್ಯಕ್ತಿ ನೀಡಲು ಹೊರಟರೆ ಅವನ ಕಾವ್ಯ ಎಡಬಿಡಂಗಿಯಾಗುತ್ತದೆಂಬ ಮಾತನ್ನು ನಯಸೇನ ಸಮಂಜಸವಾಗಿ ಇಲ್ಲಿ ವಿಶ್ಲೇಷಿಸಿದ್ದಾನೆ. ಭಾವನೆ ಮತ್ತು ಭಾಷೆಗಳಿಗೆ ಅವಿನಾ ಸಂಬಂಧವಿರುತ್ತದೆ; ಕಾವ್ಯದ ಮಟ್ಟಿಗೆ ಇದು ಇನ್ನೂ ಸೂಕ್ಷ್ಮವಾಗಿರುತ್ತದೆ. ಕನ್ನಡದ ಪ್ರೇಮ–ಸಂಸ್ಕೃತದ ವ್ಯಾಮೋಹದಿಂದ ಆಗುವ ಅನಾಹುತದ ಸ್ಪಷ್ಟ ಕಲ್ಪನೆ ನಯಸೇನನಿಗಿದೆ. ಇದು ಎಲ್ಲ ಕಾಲದಲ್ಲೂ ಕಾಣಬರುವ ಇಬ್ಬಂದಿತನವಾದ್ದರಿಂದ ಅವನ ಮಾತು ನಮಗೆ ಇಂದಿಗೂ ಪ್ರಸ್ತುತವಾಗುತ್ತದೆ.

ಹೀಗಾಗಿ ನಯಸೇನ ಬಹು ಗಟ್ಟಿದನಿಯಲ್ಲಿ ಕನ್ನಡಪರವಾದ ಮಾತುಗಳನ್ನಾಡಿದ. ಅವನ ಸಂಸ್ಕೃತ ಪಾಂಡಿತ್ಯಕ್ಕೇನೂ ಕೊರತೆಯಿಲ್ಲದಿದ್ದರೂ ಕನ್ನಡದ ಮೇಲೆ ಅದು ಸವಾರಿ ಮಾಡುವುದನ್ನು ಅವನು ಸಹಿಸದಾದ. ಹೀಗಾಗಿ "ಸಕ್ಕದಮಂ ಪೇೞ್ವೊಡೆ ನೆಱೆ ಸಕ್ಕದಮಂ ಪೇೞ್ಗೆ; ಸುದ್ದಗನ್ನಡದೊಳ್ ತಂದಿಕ್ಕುವುದೆ ಸಕ್ಕದಮಂ? ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ?" ಎಂದು ಗುಡುಗುತ್ತಾನೆ ಅವನು. ಸಂಸ್ಕೃತದ ಬಗ್ಗೆ ಅವನಿಗೆ ಬೇಸರವಿಲ್ಲ, ಆದರೆ ಅದು ಕನ್ನಡತನವನ್ನು ಮಸುಕುಮಾಡುವಷ್ಟು ಮೇಲುಗೈ ಪಡೆಯಬಾರದು. ಕನ್ನಡ–ಸಂಸ್ಕೃತಗಳನ್ನು ಬೆರೆಸುವುದೆಂದರೆ ಅವನ ಮಟ್ಟಿಗೆ ತುಪ್ಪ–ಎಣ್ಣೆಗಳನ್ನು ಬೆರೆಸಿದ ಹಾಗೆ; ಕನ್ನಡ ತುಪ್ಪ, ಸಂಸ್ಕೃತ ಎಣ್ಣೆ! ಈ ಮಾತು ಆಡಿ ತನ್ನ ಸಮಕಾಲೀನ ಸಂಸ್ಕೃತ ಪಂಡಿತರ ಅವಹೇಳನಕ್ಕೆ ಒಳಗಾಗಿರಬಹುದಾದ ನಯಸೇನ ಅದಕ್ಕೆ ಸೊಪ್ಪು ಹಾಕುವವನಲ್ಲ. ತನ್ನ ಆದರ್ಶಕ್ಕೆ ತಕ್ಕ ಹಾಗೆ ಕಾವ್ಯವನ್ನು ರಚಿಸುವ ಮೂಲಕ ಅದನ್ನು ಆಚರಣೆಗೆ ತಂದಿದ್ದಾನೆ. ಅವನದು ಚಂಪೂ ಕಾವ್ಯವೇ; ಆದರೆ ಅದರಲ್ಲಿ ಹಿಂದಿನ

ಕವಿಗಳ ರಚನೆಗಳಲ್ಲಿರುವ ಹಾಗೆ ಸಂಸ್ಕೃತದ ಪ್ರಾಬಲ್ಯವಿಲ್ಲ. ಬದಲಾಗಿ ಅದು ಕನ್ನಡದ ರಾಣಿಯನ್ನು ಅನುಸರಿಸುವ ಸಖಿಯಂತಿದೆ. ಅದೂ ಅವನದು ಜಾನಪದದ ಅಂದರೆ ಜನಸಾಮಾನ್ಯರ ಸವಿಗನ್ನಡ. ಪದ್ಯಗಳಿಗಿಂತ ಗದ್ಯ ಅಲ್ಲಿ ಅನೇಕ ಪಾಲು ಹೆಚ್ಚು; ಅದೂ ರಂಜಕವಾದ ಗದ್ಯ. ಅದಕ್ಕೆ ಕಾರಣ ಅವನ ಕಾವ್ಯದಲ್ಲಿ ಬಳಕೆಗೊಂಡಿರುವ ಗಾದೆ–ನಾಣ್ಣುಡಿಗಳು ಮತ್ತು ಉಪಮೆಗಳು. ಅವುಗಳ ಪಟ್ಟಿ ಮಾಡಿದರೆ ಅದೇ ಒಂದು ಹೊತ್ತಗೆಯಾಗಬಹುದು, ಅಷ್ಟಿದೆ!

ಜನಸಮುದಾಯಕ್ಕೆ ತನ್ನ ಕಾವ್ಯವು ಹತ್ತಿರವಾಗುವ ಮೂಲಕ ಅವರ ಒಲವನ್ನು ತನ್ನ ಧರ್ಮದ ಕಡೆ ಎಳೆಯ ಬಯಸಿದ ನಯಸೇನನು ಅದಕ್ಕಾಗಿ ಜನರಿಗೆ ಹಿಡಿಸುವಂತೆ ಕತೆಗಳನ್ನು ಹೇಳಿ ಧರ್ಮದ ಆಂತರ್ಯವನ್ನು ಜನಮನದಲ್ಲಿ ಬಿತ್ತಲು ಪ್ರಯತ್ನಿಸಿದ. ಅದಕ್ಕೆ ಅವನು ಆರಿಸಿಕೊಂಡದ್ದು ಹಿಂದಿನ ಕವಿಗಳಂತೆ ದೀರ್ಘ ಕಥನಗಳನ್ನಲ್ಲ; ಕಿರುಗತೆಗಳನ್ನು. ಜೈನಧರ್ಮದ ಹದಿನಾಲ್ಕು ತತ್ವಗಳೆಂದರೆ: ಸಮ್ಯಕ್‍ದರ್ಶನ, ಅದರ ಎಂಟು ಅಂಗಗಳಾದ ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ ಮತ್ತು ಧರ್ಮಪ್ರಭಾವನೆಗಳು ಮತ್ತು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳೆಂಬ ಐದು ಅಣುವ್ರತಗಳು. ವಿಪುಲಗಿರಿಯಲ್ಲಿ ಶ್ರೀ ವರ್ಧಮಾನಸ್ವಾಮಿಗಳ ಸಮವಸರಣವು ಬಂದು ನೆಲೆಸಿದೆಯೆಂಬ ವಿಷಯವನ್ನು ತಿಳಿದ ಮಗಧಾಧಿಪತಿಯಾದ ಶ್ರೇಣಿಕ ಮಹಾರಾಜನು ತನ್ನ ಪಟ್ಟದೊಡತಿ ಚೇಳಿನೀದೇವಿಯೊಡನೆ ಅಲ್ಲಿಗೆ ಬಂದಾಗ, ಹುಟ್ಟು–ಸಾವುಗಳ ಚಕ್ರದಿಂದ ಮುಕ್ತಿ ಪಡೆಯಲು ದಾರಿ ಯಾವುದೆಂದು ಅಲ್ಲಿದ್ದ ಗೌತಮಗಣಧರರನ್ನು ಕೇಳುತ್ತಾನೆ. ಆಗ ಅವರು ಮೇಲಿನ ಹದಿನಾಲ್ಕು ತತ್ವಗಳ ಬಗೆಗಿನ ಕತೆಗಳನ್ನು ಹೇಳುತ್ತಾರೆಂದು ಕಲ್ಪಿಸಿಕೊಂಡು ಅವುಗಳನ್ನು ಕವಿ ನಿರೂಪಣೆ ಮಾಡಿದ್ದಾನೆ. ಹೀಗಾಗಿ ಕಾವ್ಯದಲ್ಲಿ ಹದಿನಾಲ್ಕು ಆಶ್ವಾಸಗಳಿವೆ.

ಈ ಕತೆಗಳಿಗೆ ಯಾವುದೇ ಏಕ ಆಧಾರಗ್ರಂಥವಿರುವಂತೆ ನಮಗೆ ತಿಳಿಯದು. ಅನೇಕ ಮೂಲಗಳಿಂದ ಕವಿ ಅವುಗಳನ್ನು ಸಂಗ್ರಹಿಸಿರಬಹುದು. ಆದರೆ ಕತೆಯನ್ನು ಹೇಳುವ ರೀತಿ ಮಾತ್ರ ನಯಸೇನನದೇ ಆಗಿದೆ. ಅವನಿಗೆ ಕಥನಕಲೆಗೆ ಪ್ರಾಯಶಃ ದುರ್ಗಸಿಂಹನ 'ಪಂಚತಂತ್ರ'ವು ಮೇಲ್ಪಂಕ್ತಿ ಹಾಕಿರಬಹುದು. ದುರ್ಗಸಿಂಹನು ತನ್ನ ಕಾವ್ಯವನ್ನು ಬರೆದು ಮುಗಿಸಿದ್ದು ಕ್ರಿ.ಶ. ೧೦೩೧ ರಲ್ಲಿ; ನಯಸೇನನ ಕಾವ್ಯ ರಚಿತವಾದದ್ದು ಕ್ರಿ.ಶ. ೧೧೧೨ ರಲ್ಲಿ. 'ಪಂಚತಂತ್ರ'ವು ಯಾವುದೇ ಮತಗ್ರಂಥವಾಗದೆ ಲೌಕಿಕ ರಚನೆಯಾದ್ದರಿಂದ ಅದನ್ನು ಅನುಸರಿಸಲು ನಯಸೇನನಿಗೆ ಹೆಚ್ಚಿನ ಮುಜುಗರವಾಗಲಿಲ್ಲವೆಂದು ತೋರುತ್ತದೆ. ಇಲ್ಲಿನ ಕೆಲವು ಕತೆಗಳಲ್ಲಿ ಸ್ಪಷ್ಟವಾಗಿ ಅದರ ಛಾಯೆ ಕಾಣುತ್ತದೆ. ಅದರಲ್ಲೂ ಅಸ್ತೇಯದ ಬಗೆಗಿನ ಕತೆಯಲ್ಲಿನ ಉಪಕತೆಗಳು ನೇರವಾಗಿ 'ಪಂಚತಂತ್ರ'ದ ಪ್ರಭಾವಕ್ಕೆ ಒಳಗಾಗಿರುವುದು ಎದ್ದು ತೋರುವಂಥದು. ಅಲ್ಲಿ ಶಿವಭೂತಿಯ ಕತೆ ಇಲ್ಲಿ ಕೌಶಿಕನ ಕತೆಯಾಗಿದೆ; ಹೆಸರುಗಳು ಮತ್ತಿತರ ಕೆಲವು ಅಂಶಗಳಲ್ಲಿ ಸ್ವಲ್ಪ ಬದಲಾವಣೆಯಿದ್ದರೂ ಅವೆರಡರಲ್ಲಿನ ಸಾಮ್ಯ ಬಹಳ. ಹಾಗೆಯೇ ಮುಂಗುಸಿಯನ್ನು ಕೊಂದ ಕತೆ. ಅಲ್ಲಿ ಸಾಕಿದ ಮುಂಗುಸಿಯನ್ನು ಕೊಂದವನು ಚಂದ್ರದತ್ತನಾದರೆ ಇಲ್ಲಿ ಅವನ ಹೆಂಡತಿ ಆ ಕೆಲಸ ಮಾಡುತ್ತಾಳೆ; ಎರಡೂ ಕಡೆಗಳಲ್ಲಿ ಹೆಂಡತಿಯ ಹೆಸರು ಯಜ್ಞದತ್ತೆಯೇ ಆಗಿರುವುದು ಆಕಸ್ಮಿಕವೇನಲ್ಲ. ಸರ್ವಾರುಜಾಪಹಾರಿ ಮಾವಿನ ಹಣ್ಣಿನ ಕತೆ, ಅನಂತಶ್ರೀ ಎಂಬ ಸೂಳೆಯ ಕತೆ ಮತ್ತು ಮೇಧಾವಿ ಮುನಿಯ ಕತೆ ಇವುಗಳಲ್ಲಿ 'ಪಂಚತಂತ್ರ'ದ ಕಥಾನಿರೂಪಣೆಯ ಪ್ರಭಾವ ಇರುವುದು ಕಾಣುತ್ತದೆ. ಉಳಿದ ಕತೆಗಳಲ್ಲಿ ನಯಸೇನನದೇ ಸ್ವಂತಿಕೆಯಿದೆ.

ಅವನು ತನ್ನ ಕಾಲದಲ್ಲಿ ಉಪಲಬ್ಧವಿದ್ದ ಕನ್ನಡ, ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿನ ಸಾಹಿತ್ಯವನ್ನೆಲ್ಲ ಓದಿಕೊಂಡಿದ್ದಿರಬೇಕು; ಅದರಲ್ಲೂ ಕಥಾಸಾಹಿತ್ಯವನ್ನು. ಕನ್ನಡದ ಜೈನ ಕಾವ್ಯಗಳಲ್ಲದೆ 'ವಡ್ಡಾರಾಧನೆ' ಮತ್ತು ಚಾವುಂಡರಾಯನ ಕತೆಗಳ ಮೇಲೆ ಸಹಜವಾಗಿಯೇ ಅವನ ಗಮನ ಹೆಚ್ಚು ಹರಿದಿದ್ದಿರಬೇಕು. ಆದರೆ ನಯಸೇನನಲ್ಲಿ 'ವಡ್ಡಾರಾಧನೆ'ಯಲ್ಲಿನ ಶ್ರೇಷ್ಠ ಕತೆಗಾರಿಕೆಯು ಕಾಣುವುದಿಲ್ಲ; ಇವನ ಆಶಯವೂ ಅಲ್ಲಿನದಕ್ಕಿಂತ ಭಿನ್ನ. ನಯಸೇನನ ಉದ್ದೇಶ ತನ್ನ ಮತವನ್ನು ಜನಸಾಮಾನ್ಯರಲ್ಲಿ ಹೆಚ್ಚು ಪ್ರಚುರಪಡಿಸುವುದಾದ್ದರಿಂದ ಆ ದಿಸೆಯಲ್ಲಿ ಅವನ ಗಮನ ಹೆಚ್ಚು

ಹರಿದಿದೆ; ನಿರೂಪಣಾ ಧಾಟಿ ಮತ್ತು ಭಾಷೆಯ ಬಳಕೆಯಲ್ಲಿ ಇದು ಎದ್ದು ತೋರುತ್ತದೆ. ಆದರೂ ಕತೆಯನ್ನು ಹೇಳುವ ರೀತಿ ಅನೇಕ ಕಡೆಗಳಲ್ಲಿ ತುಂಬ ಮನನೀಯವಾಗಿದೆ. ದಯಾಮಿತ್ರ ಸೆಟ್ಟಿ–ವಸುಭೂತಿಯ ಕತೆ (ಸಮ್ಯಕ್‌ದರ್ಶನ) ಸೂರ್ಪನೆಂಬ ಕಳ್ಳನ ಕತೆ (ಉಪಗೂಹನ) ಮತ್ತು ಬಲಿಯ ಕತೆ (ಧರ್ಮಪ್ರಭಾವನೆ) – ಇಂಥ ಕಡೆಗಳಲ್ಲಿ ನಯಸೇನನ ಕತೆಗಾರಿಕೆ ಕುಶಲತೆಯಿಂದ ಕೂಡಿದೆ. ಧನಕೀರ್ತಿಯ ಕತೆಯಲ್ಲಿ (ಅಹಿಂಸೆ) ಚಂದ್ರಹಾಸನ ಕತೆಯನ್ನೇ ಕಾಣಬಹುದು. ಮುಂದೆ ಲಕ್ಮೀಶನು ಚಂದ್ರಹಾಸನ ಕತೆಯನ್ನು ತುಂಬ ಜನಪ್ರಿಯಗೊಳಿಸಿದರೂ ನಯಸೇನನ ಕಾಲಕ್ಕಾಗಲೇ ಇದೇ ಆಶಯದ ಕತೆ (ಧರ್ಮವಂತರನ್ನು ದೈವ ಕಾಪಾಡುತ್ತದೆ) ಜನಜನಿತವಾಗಿದ್ದಿರಬೇಕು. ಅದನ್ನು ತನ್ನ ಆಶಯಕ್ಕನುಗುಣವಾಗಿ ನಿರೂಪಿಸುವ ಜಾಣ್ಮೆಯನ್ನು ನಯಸೇನ ಇಲ್ಲಿ ತೋರಿದ್ದಾನೆ. ಅವನ ಕಾವ್ಯದಲ್ಲಿ ಕಾಣುವ ಮಾಲೋಪಮೆಗಳು ನಮ್ಮನ್ನು ಆಕರ್ಷಿಸುತ್ತವೆ. ಅವನು ಕೊಡುವ ಉಪಮೆಗಳಲ್ಲಿ ಲೋಕಜ್ಞಾನ ಢಾಳಾಗಿ ಕಾಣಿಸುತ್ತದೆ. ನಯಸೇನ ಮುನಿಯಾಗಿದ್ದಂತೆ ತೋರುತ್ತದೆ. ಆದರೂ ಅವನು ಜನಸಾಮಾನ್ಯರ ಬದುಕನ್ನು ಎಷ್ಟು ಹತ್ತಿರದಿಂದ ಬಲ್ಲವನೆಂಬುದು ಅಚ್ಚರಿ ಹುಟ್ಟಿಸುವಂತಿದೆ. ಎ. ಆರ್. ಕೃಷ್ಣಶಾಸ್ತ್ರಿಗಳು ಅಭಿಪ್ರಾಯಪಡುವಂತೆ "ಈ ಗ್ರಂಥವು ಕುಮಾರವ್ಯಾಸಭಾರತ, ತೊರವೆ ರಾಮಾಯಣ ಮುಂತಾದ ಗ್ರಂಥಗಳಂತೆ ಜನಸಾಮಾನ್ಯರಂಜಕವಾಗಿದ್ದಂತೆ ತೋರುತ್ತದೆ". ಈ ಕಾರಣದಿಂದಲೇ ನಯಸೇನನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಂಡಿರುವುದು.

ಇಷ್ಟಾದರೂ 'ಧರ್ಮಾಮೃತ'ವು ಹಳಗನ್ನಡದಲ್ಲಿರುವುದರಿಂದ ಈಗಿನವರಿಗೆ ಅದನ್ನು ಅರ್ಥಮಾಡಿಕೊಳ್ಳಲು ವಿಶೇಷ ಪರಿಶ್ರಮ ಆವಶ್ಯಕ. ಅದರ ಪ್ರತಿ ಸಾಲನ್ನೂ ನೇರವಾಗಿ ಹೊಸಗನ್ನಡಕ್ಕೆ ಅನುವಾದ ಮಾಡುವ ಪ್ರಯತ್ನಗಳು ನಡೆದಿವೆ. ಅದರಲ್ಲಿ ಮೂಲವನ್ನೇ ಚಚು ತಪ್ಪದೆ ಅನುಸರಿಸಿರುವುದರಿಂದ ಆಧುನಿಕ ಓದುಗರಿಗೆ ನಿರೂಪಣೆ ಕುಂಠಿತಗೊಂಡಂತೆ ಕಾಣಬಹುದು. ಪೆಡಸಾಗದಂತೆ ಕಥಾನಿರೂಪಣೆ ಇರುವುದಾದರೂ ಅಲ್ಲಿ ಉಪಮೆಗಳ ಸಾಲು ಹಾಗೂ ವಿಪರೀತ ಪಾರಿಭಾಷಿಕ ವಿವರಣೆಗಳು ಎಷ್ಟೋ ಕಡೆಗಳಲ್ಲಿ ಮುಖ್ಯವಾದುದನ್ನೇ ಮರೆಮಾಡುತ್ತವೆ. ಹಾಗಾಗಿ ನಿರೂಪಣೆಯ ಓಟ ಕೆಡದಂತೆ, ಅತಿ ಪಾರಿಭಾಷಿಕತೆಯನ್ನು ನಿವಾರಿಸಿಕೊಂಡು, ಆದರೆ ನಯಸೇನನ ಶೈಲಿಯ ಪರಿಚಯವಾಗುವಂತೆ ಪುನರ್ನಿರೂಪಣೆ ಮಾಡುವ ಕ್ರಮವನ್ನು ಇಲ್ಲಿ ಅನುಸರಿಸಿದೆ. ಮೂಲದಲ್ಲಿನ ಧಾಟಿಯನ್ನು ಉಳಿಸಿಕೊಳ್ಳಲು ಇದರಲ್ಲಿ ಪ್ರಯತ್ನಿಸಲಾಗಿದೆ. ಜನರು ಇವುಗಳನ್ನು ಕತೆಗಳಾಗಿ ಓದಬೇಕೆಂಬುದು ಪುನರ್ನಿರೂಪಕನ ಹಂಬಲ. ಹಳಗನ್ನಡದಲ್ಲಿನ ಕತೆಗಳ ಬಗ್ಗೆ ಆಸಕ್ತಿಯಿರುವವರಿಗೆ ಇದರಿಂದ ಅನುಕೂಲವಾಗುವುದೆಂಬ ಆಸೆ ಲೇಖಕನದು.

ಪರಿವಿಡಿ

ಸಮ್ಯಕ್‌ದರ್ಶನ

ಒಮ್ಮೆ ಮಗಧದೇಶದ ಮಹಾರಾಜನಾದ ಶ್ರೇಣಿಕನ ರಾಜಸಭೆಗೆ ಮುನೀಂದ್ರನುತರಾದ ಗೌತಮರು ಆಗಮಿಸಿದರು. ಅವರಾದರೋ ಭವ್ಯಾವಳಿಗೆ ಚಂದ್ರನಂತೆ ಶೋಭಿಸುತ್ತಿದ್ದವರು, ಸಮಸ್ತಶಾಸ್ತ್ರವಿದರೂ ಧರ್ಮೋಪದೇಶಕರೂ ಆಗಿದ್ದವರು. ಅವರನ್ನು ಶ್ರೇಣಿಕ ಮಹಾರಾಜನು ಭಕ್ತಿಯಿಂದ ಶ್ರೇಷ್ಠಸಂಪತ್ತಾದ ಧರ್ಮವನ್ನು ಕುರಿತು ಕೇಳಿದ. ಅಷ್ಟು ಹೊತ್ತಿಗೆ ಋಷಿನಿವೇದಕನೊಬ್ಬನು ಬಂದು, ಆರು ಋತುಗಳ ಫಲಗಳನ್ನೂ ತಂದು ರಾಜನಿಗೆ ಕಾಣಿಕೆ ಕೊಟ್ಟು, ವಿಪುಲಾದ್ರಿಯ ಮೇಲೆ ಕೊನೆಯ ತೀರ್ಥಂಕರರಾದ ಶ್ರೀ ವರ್ಧಮಾನ ಸ್ವಾಮಿಗಳ ಸಮವಸರಣವು ಬಂದು ನೆಲೆಸಿದೆಯೆಂದು ಬಿನ್ನವಿಸಿದ. ಅದನ್ನು ಕೇಳಿ ಶ್ರೇಣಿಕನು ತಕ್ಷಣ ಸಿಂಹಾಸನದಿಂದಿಳಿದು ವಿಪುಲಾದ್ರಿಯ ದಿಕ್ಕಿನಲ್ಲಿ ಏಳು ಅಡಿಗಳನ್ನು ನಡೆದು ತಲೆ ಬಾಗಿ ಋಷಿನಿವೇದಕನಿಗೆ ಸಂತೋಷದಿಂದ ಕಾಣಿಕೆಗಳನ್ನು ಕೊಟ್ಟು ಆನಂದಭೇರಿ ಯನ್ನು ಹೊಯ್ಸಿದ. ಅಲ್ಲದೆ ಪ್ರತೀಹಾರಿಯನ್ನು ಬರಮಾಡಿಕೊಂಡು ಊರಿನ ಜನರೆಲ್ಲ ಪೂಜಾದ್ರವ್ಯಗಳ ಸಮೇತ ವಿಪುಲಗಿರಿಗೆ ಹೊರಡಬೇಕೆಂದು ಸಾರಲು ಆಣತಿಯಿತ್ತ; ತಾನು ಮಡದಿ ಚೇಳಿನೀದೇವಿಯೊಂದಿಗೆ ಪಟ್ಟದಾನೆಯನ್ನೇರಿ ಪರಿವಾರಸಮೇತನಾಗಿ ವಿಪುಲಾಚಲಕ್ಕೆ ಹೊರಟ.

ದೂರದಲ್ಲಿಯೇ ಆನೆಯಿಂದಿಳಿದು, ಬೆಳ್ಗೊಡೆ ವಾಹನ ಮುಂತಾದ ರಾಜಚಿಹ್ನೆಗಳನ್ನೆಲ್ಲ ಬಿಟ್ಟು ಸಮವಸರಣದ ಹತ್ತಿರ ಬಂದು ಗಂಧಕುಟಿಯನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿ ವರ್ಧಮಾನ ಸ್ವಾಮಿಗಳ ಪಾದಕಮಲಗಳನ್ನು ಅರ್ಚಿಸಿ ತ್ರಿಲೋಕಸ್ವಾಮಿಗೆ ಅಭಿಮುಖನಾಗಿ ಶ್ರೇಣಿಕ ಮಹಾರಾಜನು ಕೈಜೋಡಿಸಿ ಅರಳಿದ ಹೃದಯದವನಾಗಿ ನಿರ್ಭರಭಕ್ತಿಯಿಂದೆರಗಿ ನಿಂತು, "ದೇವನೇ, ನಿಮ್ಮ ಮುಖಚಂದ್ರನು ದುರಿತತಿಮಿರವನ್ನು ಪರಿಹರಿಸುವಂಥದು. ವೀರಜಿನಪ, ನಿರ್ವೃತಿಸೌಖ್ಯವನ್ನು ನಾವು ಬೇಗ ಹೊಂದುವುದನ್ನು ಕರುಣಿಸಬೇಕು" ಎಂದು ಬೇಡಿಕೊಂಡ. ಆನಂತರ ಜ್ಞಾನರ್ಧಿಸಂಪನ್ನರಾದ ಗೌತಮ ಸ್ವಾಮಿಗಳಿಗೆ ನಮಸ್ಕರಿಸಿ, "ಮುನೀಶ್ವರನೇ, ತಿರ್ಯಕ್, ನಾರಕ, ಮಾನವ ಹಾಗೂ ಅಮರಲೋಕಗಳಲ್ಲಿ ನೆಲೆಗೊಂಡು ಮುಕ್ತಿಯನ್ನು ಪಡೆಯದೆ, ಹುಟ್ಟುತ್ತ ಸಾಯುತ್ತ ರಾಟೆಯಂತೆ ತಿರುಗುತ್ತ ಅನುಭವಿಸುವ ಸಂಸಾರದುಃಖದಿಂದ ಹೊರಬಂದು ಶಾಶ್ವತಸುಖವನ್ನು ಹೊಂದುವ ಬಗೆಯನ್ನು ದಯವಿಟ್ಟು ತಿಳಿಸಬೇಕು" ಎಂದು ಬಿನ್ನವಿಸಿಕೊಂಡ. ಅವರ ಮುಂದೆ ನಾಲ್ಕು ಬಗೆಯ ದೇವಸಮೂಹವು ತಲೆಬಾಗಿ ಕೈಮುಗಿದುಕೊಂಡು ನಿಂತಿರಲು, ಚಂದ್ರಕಿರಣಗಳಂತೆ ಹೊಳೆಯುವ ದಂತಪಂಕ್ತಿಯುಳ್ಳವರಾದ ಹಾಗೂ ಸರ್ವಜನಸ್ತುತರಾದ ಗೌತಮರು ಸಮುದ್ರ ಘೋಷದಂತಹ ಗಂಭೀರ ಧ್ವನಿಯಿಂದ ತತ್ವವನ್ನು ಉಪದೇಶಿಸಿದರು.

"ನೀನು ಕೇಳಿದ ಚತುರ್ಗತಿಯನ್ನು ಸೀಳುವಂತಹುದೂ ಹುಟ್ಟುಸಾವುಗಳಿಂದ ದೂರವಾದದ್ದೂ ಆದ ಸಾರವತ್ತಾದ ನಿರಂತರ ಸುಖವು ಮುಕ್ತಿಯ ಹೊರತು ಬೇರೆಲ್ಲಿಯೂ ಸಿಕ್ಕಲಾರದು. ಅಂತಹ ಮುಕ್ತಿಯು ಮೂರುಲೋಕಗಳಿಗೂ ಮಂಗಳವನ್ನುಂಟುಮಾಡುವ ಸಮ್ಯಕ್‌ದರ್ಶನವಿಲ್ಲದೆ ದೊರಕಲಾರದು. ಆ ಸಮ್ಯಕ್‌ದರ್ಶನವು ಕರುಣಲಬ್ಧಿಯಿಂದಲ್ಲದೆ ದೊರಕದು. ಸಮ್ಯಕ್‌ದರ್ಶನವಿಲ್ಲದೆ ನಿರಂತರವಾದ ಮುಕ್ತಿಶ್ರೀಯನ್ನು ಪಡೆಯುತ್ತೇನೆ ಎಂಬುವವನು ಕಣ್ಣುಗಳಿಲ್ಲದೆ ನೋಡಬಹುದು, ಮಣ್ಣಿಲ್ಲದೆ ಬೆಳೆಯಬಹುದು, ಹೆಣ್ಣಿಲ್ಲದೆ ಮಕ್ಕಳನ್ನು ಪಡೆಯಬಹುದು, ಹರಿಗೋಲಿಲ್ಲದೆ ನದಿಯನ್ನು ದಾಟಬಹುದೆಂಬ ಹಚ್ಚ ಹಸಿ ಎಗ್ಗನನ್ನು ಹೋಲುತ್ತದೆ. ಆದ್ದರಿಂದ ವರಚಕ್ರವರ್ತಿಪದವಿಗೂ, ಇಂದ್ರನ ವೈಭವಕ್ಕೂ, ಪರಮ ಅರ್ಹಂತಪದಕ್ಕೂ ಶುದ್ಧದರ್ಶನವು ಅತ್ಯವಶ್ಯಕವಾದುದು. ಅಂತಹ ದರ್ಶನವು ಎಂತಹುದೆಂದರೆ, ಹದಿನೆಂಟು ದೋಷಗಳನ್ನು ಬಿಟ್ಟವನೂ ಸರ್ವಜ್ಞನೂ ಇಂದ್ರಪೂಜಿತನೂ ಆದವನು ಹೇಳಿದುದು ಆಗಮ; ಅದು ಲೋಕೈಕಪೂಜ್ಯ ವಾದುದು; ಅಂಥ ಆಗಮದ ಉಪಯೋಗವೇ ತತ್ವ ಎಂದು ನಂಬಿರುವುದೇ ಸೌಖ್ಯಾನ್ವಿತವಾದ ನಿರ್ವೃತಿಶ್ರೀಸ್ಪರ್ಶನಕ್ಕೆ ಮಾರ್ಗ. ಆ ದರ್ಶನವುಳ್ಳವನಿಗೆ ಭವನಜ್ಯೋತಿಷ್ಕರ, ವ್ಯಂತರಾಸ್ಪದ, ಅಲ್ಪಾಯು, ಕಾಮತಾಪ, ಅಬಲತೆ, ನಿರ್ಧನತ್ವ,

ದುರಾಸ್ಪದಭೋಗ, ಅವನಿಜತ್ವ, ಉಗ್ರನರಕಗಳು ಉಂಟಾಗವು. ಹೀಗಿರಬೇಕಾದರೆ, ಅಂತಹ ದರ್ಶನದ ಪ್ರಯೋಜನವನ್ನು ಯಾರು ಬಣ್ಣಿಸಲು ಸಾಧ್ಯ? ಯೋಧರಿಗೆ ಅದಟು ಹೇಗೋ, ಮುಖತಾವರೆಗೆ ಮೂಗು ಹೇಗೋ, ಉರಿಯವ ದೀಪಕ್ಕೆ ಎಣ್ಣೆ ಹೇಗೋ, ಬಲಿಷ್ಠವಾದ ದೇಹಕ್ಕೆ ಪ್ರಾಣ ಹೇಗೋ, ಮರಗಳಿಗೆ ಬೇರುಗಳು ಹೇಗೋ, ಸಕಲ ದರ್ಶನಗಳಿಗೂ ಸಮ್ಯಕ್‌ದರ್ಶನವೆಂಬುದು ಹಾಗೆ ಇರುವಂಥದು. ಸುಂದರಿಯರಿಲ್ಲದ ಸಭೆ, ಮುದ್ದಾದ ಮಕ್ಕಳಿಲ್ಲದ ಮನೆ, ನೀರಿಲ್ಲದ ಬಾವಿ, ವಿಶೇಷದುರ್ಗವಿಲ್ಲದ ರಾಜನ ಉಗ್ರತೆ, ಜನೋನ್ನತಿಯಿಲ್ಲದ ನಾಡು, ಪ್ರೀತಿಯಿಲ್ಲದ ಹೆಂಡತಿ, ದಯೆಯಿಲ್ಲದ ಧರ್ಮ – ಇವುಗಳನ್ನು ಒಪ್ಪಲಾಗುವುದೇ? ಬೆಳೆಯಿಲ್ಲದ ಹೊಲ, ರಕ್ಷಣೆಯಿಲ್ಲದ ಆಡಳಿತದಂತೆ ದರ್ಶನವಿಲ್ಲದ ಧರ್ಮ. ಪಾಪಗಳಿಗೆ ಪಕ್ಕಾಗಿ ಜನ್ಮಾಂತರಗಳಲ್ಲಿ ತಿರ್‍ರನೆ ತಿರುಗದೆ ಸುಖನಿಲಯವಾದ ಮುಕ್ತಿಶ್ರೀಯನ್ನು ಸೇರಬಯಸುವ ಭವ್ಯನು ಪರಮಾದರದಿಂದ ದರ್ಶನವನ್ನು ತಾಳಬೇಕು. ಶರೀರಕ್ಕೆ ಅವಯವಗಳಿದ್ದಂತೆ ಹಾಗೂ ಮರಕ್ಕೆ ಕೊಂಬೆಗಳಿದ್ದಂತೆ ಆ ದರ್ಶನಸೌಖ್ಯಕ್ಕೆ ಎಂಟು ಅಂಗಗಳು: ನಿಶ್ಶಂಕೆ (ಜೈನದರ್ಶನದಲ್ಲಿ ಸಂಶಯ ತಾಳದಿರುವುದು), ನಿಷ್ಕಾಂಕ್ಷೆ (ಸುಖಭೋಗಗಳ ಆಸೆಯಿಲ್ಲದಿರುವುದು), ನಿರ್ವಿಚಿಕಿತ್ಸೆ (ದೇಹದ ಮೇಲೆ ಪ್ರೇಮವಾಗಲೀ ದ್ವೇಷವಾಗಲೀ ಇಲ್ಲದಿರುವುದು), ಅಮೂಢದೃಷ್ಟಿತ್ವ (ಅನ್ಯಮಾರ್ಗವನ್ನು ಅನುಸರಿಸದಿರುವುದು), ಉಪಗೂಹನ (ಜೈನದರ್ಶನದ ಬಗೆಗಿನ ಸಂದೇಹವನ್ನು ನಿವಾರಿಸುವುದು), ಸ್ಥಿತಿಕರಣ (ಸರಿಯಾದ ನಂಬಿಕೆಯನ್ನು ಬಿಡದಿರುವುದು), ವಾತ್ಸಲ್ಯ ಹಾಗೂ ಧರ್ಮಪ್ರಭಾವನೆಗಳು. ಅಂತಹ ಎಂಟು ಅಂಗಗಳಿಂದ ರಂಜಿಸುವ ಅನರ್ಘ್ಯವಾದ ದರ್ಶನಕ್ಕೆ ಹಿಂಸೆ (ಕೊಲ್ಲದ), ಸತ್ಯ (ಹುಸಿಯದ), ಅಸ್ತೇಯ (ಕಳವು ಮಾಡದ), ಬ್ರಹ್ಮಚರ್ಯೆ (ಪರಸ್ತ್ರೀವ್ಯಾಮೋಹವಿಲ್ಲದ) ಮತ್ತು ಅಪರಿಗ್ರಹ (ಪಡೆಯುವುದಕ್ಕೆ ಆಸೆಪಡದ) ಎಂಬ ಐದು ರತ್ನಗಳಾದ ಅಣುವ್ರತಗಳನ್ನು ಸೇರಿಸಿ, ಆ ಹದಿನಾಲ್ಕನ್ನು ಅತ್ಯಂತ ದೃಢಹೃದಯದಿಂದ ತಾಳಿದವನಿಗೆ ನಿರಂತರ ಸೌಖ್ಯವು ದೊರೆಯುವುದರಲ್ಲಿ ಲೇಶವಾದರೂ ಸಂದೇಹವಿಲ್ಲ. ಹೀಗೆ ಇವೆಲ್ಲವನ್ನೂ ಪಡೆದ ನರನ ಸೌಖ್ಯವನ್ನು ಏನೆಂದು ಹೊಗಳುವುದು? ಇವುಗಳಲ್ಲಿ ಒಂದನ್ನು ಪಡೆದವನಿಗೂ ಮುಕ್ತಿಲಕ್ಷ್ಮಿಯು ದೂರವಲ್ಲ" ಎಂದು ಗಣಧರದೇವರು ವಿವರಿಸಿದರು. ಅವರಿಗೆ ಮಗಧಾವನೀ ವಲ್ಲಭನು ಭಕ್ತಿಯಿಂದ ನಮಸ್ಕರಿಸಿ, "ಪೂಜ್ಯರೇ, ದರ್ಶನ, ಅದರ ಅಷ್ಟಾಂಗಗಳು ಮತ್ತು ಪಂಚಾಣುವ್ರತಗಳು – ಈ ಹದಿನಾಲ್ಕರಲ್ಲಿ ಒಂದೊಂದರ ಬಗ್ಗೆಯೂ ನನಗೆ ದಯವಿಟ್ಟು ತಿಳಿಸಿಕೊಡಬೇಕು; ಇವುಗಳನ್ನು ಅನುಸರಿಸಿ ನಿರ್ವೃತಿಸುಖವನ್ನು ಪಡೆದ ಮಹಾಚರಿತರ ಕತೆಗಳನ್ನು ಹೇಳಬೇಕು" ಎಂದು ಬಿನ್ನವಿಸಿಕೊಂಡ. ಅದನ್ನು ಮನ್ನಿಸಿ ಗುರುಗಳು ತಮ್ಮ ಮೃದುಮಧುರಗಂಭೀರ ಧ್ವನಿಯಿಂದ ಹೇಳಲು ತೊಡಗಿದರು.

ಸಂತಸದಿಂದ ಪರಸ್ಪರ ತಾಕುವ ಜಲಚರಗಳ ಹೊಡೆತದಿಂದ ಎದ್ದ ಶೀತೋದಕದಿಂದಲೂ, ಆ ನೀರಿನಲ್ಲಿ ಹುಟ್ಟಿದ ಮುತ್ತುಗಳಿಂದಲೂ ಕೂಡಿ, ಶುಭ್ರವಾದ ಮೋಡ ಹಾಗೂ ನಕ್ಷತ್ರಸಮೂಹಗಳ ಹಾಗೆ ಶೋಭಿಸುವ ಆಕಾಶದಂತೆ ಎಸೆವ ಸಮುದ್ರದಿಂದ ಜಂಬೂದ್ವೀಪವು ಆವೃತಗೊಂಡಿತ್ತು. ಜಿನಾಭಿಷೇಕಕ್ಕೆ ತಕ್ಕುದಾದ ಮಜ್ಜನಪೀಠದಂತೆ ಮಹಿಮೆಯಿಂದ ಮಂದರಪರ್ವತವು ತ್ರೈಲೋಕ್ಯಾಭ್ಯುದಯವನ್ನುಂಟುಮಾಡುತ್ತ ಆ ದ್ವೀಪದ ನಟ್ಟನಡುವೆ ಮೆರೆದಿತ್ತು. ಆ ಮೇರುಗಿರಿಯ ದಕ್ಷಿಣಭಾಗದ ಭರತಕ್ಷೇತ್ರದಲ್ಲಿ ಸೌರಾಷ್ಟ್ರವೆಂಬುದು ನಾಡು. ಅದರ ರಾಜಧಾನಿ ಗಿರಿನಗರವು ಜಿನಭವನಗಳಿಂದಲೂ, ದೊಡ್ಡ ಕೆರೆಗಳು ಹಾಗೂ ಸರೋವರಗಳಿಂದಲೂ ತುಂಬಿದ್ದು ಸಮೃದ್ಧಿಯಲ್ಲಿ ಕುಬೇರನ ನಗರದಂತೆ ಕಂಗೊಳಿಸುತ್ತಿತ್ತು. ಆ ನಾಡನ್ನು ಆಳುವವನು ವಿಶ್ವಸೇನನೆಂಬ ಮಹಾಮಾಂಡಲಿಕ. ಅವನ ರಾಜಶ್ರೇಷ್ಠಿಯು ಅನ್ವಯಶುದ್ಧನೂ ಪ್ರಸಿದ್ಧನೂ ಆದ ದಯಾಮಿತ್ರಸೆಟ್ಟಿ ಎಂಬುವವನು. ಅವನು ಸಿರಿಯಲ್ಲಿ ಕುಬೇರನನ್ನೇ ತಲ್ಲಣಗೊಳಿಸುವವನು; ಭೋಗದಲ್ಲಿ ಆದಿಶೇಷನ ಜೊತೆಗೇ ಸ್ಪರ್ಧಿಸುವವನು; ಔದಾರ್ಯಗುಣದಲ್ಲಿ ಕಲ್ಪವೃಕ್ಷದ ಜೊತೆ ಮೇಲಾಟ ನಡೆಸುವವನು!

ಹೀಗೆ ಅಳತೆಯಿಲ್ಲದ ಐಶ್ವರ್ಯದಿಂದಲೂ, ಹೋಲಿಕೆಯಿಲ್ಲದ ಭೋಗದಿಂದಲೂ, ಅಪರಿಮಿತ ಜಿನಭಕ್ತಿಯಿಂದಲೂ ಮೆರೆಯುತ್ತ ಬಾಳುತ್ತಿದ್ದವನಿಗೆ ಒಂದು ದಿನ ಈ ಬಗೆಯ ಆಲೋಚನೆ ಬಂತು: "ಮಾನವನು ತನಗೆ ಹಣವಿದೆಯೆಂದು

ಸುಮ್ಮನಿರಲಾಗದು. ಬೇಕಾದಷ್ಟು ಹಣವಿದ್ದರೂ ಮತ್ತೆ ಹಣವನ್ನು ಗಳಿಸುವುದೇಕೆ? ಧನವಿದ್ದರೆ ಇಹಪರಗಳೆರಡನ್ನೂ ಸಾಧಿಸಬಹುದು" ಎಂದು ಭಾವಿಸಿ, ಅದಕ್ಕಾಗಿ ತಾನು ವ್ಯಾಪಾರ ಮಾಡುವೆನೆಂದು ತೀರ್ಮಾನಿಸಿದ. ಅಂತೆಯೇ ಸಾಕಷ್ಟು ಸರಕನ್ನು ತುಂಬಿಕೊಂಡು ಶುಭದಿನದಂದು ತನ್ನ ಬೀಡನ್ನು ಬಿಟ್ಟು, ತನ್ನನ್ನು ಆಶ್ರಯಿಸಿ ಬರುವವರಿಗಾಗಿ ಕಾದಿದ್ದ. ಆಗ ಒಬ್ಬ ಬ್ರಾಹ್ಮಣ ಬರುವುದು ಕಾಣಿಸಿತು; ಅವನ ಕೊರಳಲ್ಲಿ ಜನಿವಾರ, ಹಣೆಯಲ್ಲಿ ನೀಳವಾದ ಬೊಟ್ಟು, ಬೆರಳಲ್ಲಿ ದರ್ಭೆ ಹಾಗೂ ಮೈಮೇಲೆ ಕಾವಿಯು ಆವರಿಸಿತ್ತು. ಅವನು ಬಂದವನೇ ವೇದಋಕ್ಕನ್ನು ಹೇಳಿ ದಯಾಮಿತ್ರಸೆಟ್ಟಿಗೆ ಅಕ್ಷತೆಯನ್ನಿತ್ತ. ಆಗ ಸೆಟ್ಟಿಯು, "ತಮ್ಮ ಹೆಸರೇನು? ತಾವು ಎಲ್ಲಿಂದ ಬಂದಿರಿ; ಎಲ್ಲಿಗೆ ಹೊರಟಿದ್ದೀರಿ? ಇಲ್ಲಗೆ ಬಂದ ಕಾರಣವೇನು?" ಎಂದು ವಿಚಾರಿಸಿದ. ಅದಕ್ಕೆ ಆ ಹಾರುವನು ಹೀಗೆ ಉತ್ತರಿಸಿದ: "ನನ್ನ ಹೆಸರು ವಸುಭೂತಿ ಎಂದು. ನಾನು ಪ್ರಸಿದ್ಧವಾದ ತೆಂಕನಾಡಿನಿಂದ ಬಂದೆ. ನಾನು ಬಂದ ಉದ್ದೇಶ ಲೋಕಪ್ರಸಿದ್ಧವಾದ ಗಂಗೆಯಲ್ಲಿ ಸ್ನಾನಮಾಡುವುದು. ಆದರೆ ದಾರಿಯುದ್ದಕ್ಕೂ ಕಾಡಿದ್ದು ಅಲ್ಲಿ ಕ್ರೂರಮೃಗಗಳಿಂದಲೂ ವನಚರರಿಂದಲೂ ಪ್ರಾಣಭಯವಿರುವುದರಿಂದ ಜೊತೆಗೆ ಯಾರಾದರೂ ಸಿಕ್ಕುವರೇನೋ ಎಂದು ವಿಚಾರಿಸುತ್ತಿರುವಾಗ, ನೀವು ಹೋಗುವ ವಿಷಯವನ್ನು ಪುರಜನರು ಹೇಳಿದರು. ಅದಕ್ಕೇ ನಿಮ್ಮ ಸಹಾಯವನ್ನು ಬೇಡಲು ಬಂದೆ" ಎಂದ. ಆಗ ದಯಾಮಿತ್ರ ಸೆಟ್ಟಿಯು, "ಬಹಳ ಒಳ್ಳೆಯದು, ಜೊತೆಗೆ ಬನ್ನಿ" ಎಂದು ಆಹ್ವಾನಿಸಿದ. ಇದರಿಂದ ವಸುಭೂತಿಗೆ ತುಂಬ ಸಂತೋಷವಾಯಿತು. ಮಾರನೆಯ ದಿನ, ಸೆಟ್ಟಿಯು ತನ್ನ ಪರಿವಾರದ ಜನಗಳ ಜೊತೆಗೆ ಬಂದಿದ್ದ ತನ್ನ ಮೂವತ್ತೆರಡು ಮಂದಿ ಹೆಂಡಿರು, ಬಂಧುವರ್ಗ ಹಾಗೂ ತನ್ನ ಹಿರಿಯ ಮಗನನ್ನು ಕರೆದು, "ನಾನು ಹೇಗೆ ಮಾಡುತ್ತಿರುವೆನೋ ಅಂತೆಯೇ ನಾನು ವಾಪಸು ಬರುವವರೆಗೂ ನೀವು ಸದಾ ಮುನಿಸಂಕುಲಕ್ಕೆ ಮೊದಲು ಅನ್ನವನ್ನು ನೀಡಿ; ನಿಮ್ಮನ್ನು ಆಶ್ರಯಿಸಿರುವ ಭವ್ಯಜನಕ್ಕೆ ಜಿನಪೂಜೆಗೆ ಬೇಕಾದ ವಸ್ತುಗಳನ್ನು ಪ್ರತಿಸಲ ಸಂತೋಷದಿಂದ ದಾನ ಮಾಡಿರಿ" ಎಂದು ಕೈಮುಗಿದು ಬೇಡಿಕೊಂಡ. ಆನಂತರ ಪ್ರಯಾಣ ಆರಂಭಿಸಿದ; ಊರಿನ ಬಹಿರುದ್ಯಾನದವರೆಗೂ ಬಂದ ಬಂಧುಜನರನ್ನೂ ಮಕ್ಕಳನ್ನೂ ಹಿಂದಿರುಗಲು ಹೇಳಿ ತನ್ನ ಪ್ರಯಾಣವನ್ನು ಮುಂದುವರೆಸಿದ.

ದಯಾಮಿತ್ರಸೆಟ್ಟಿಗೆ ಒಂದು ವ್ರತವಿತ್ತು; ದಿನವೂ ಮೂರು ಗಳಿಗೆಯವರೆಗಾದರೂ ಧರ್ಮಶ್ರವಣ ಮಾಡಿದಲ್ಲದೆ ಊಟಮಾಡದಿರುವುದೇ ಅದು. ಅದಕ್ಕನುಗುಣವಾಗಿ ಬೀಡು ಬಿಟ್ಟಾಗ ಸಕಲ ಶ್ರಾವಕವರ್ಗಕ್ಕೆ ಅವನು ಧರ್ಮವನ್ನು ಕುರಿತು ಹೇಳುತ್ತಿದ್ದ. ಅದನ್ನು ಕಂಡು ವಸುಭೂತಿಯು ನಕ್ಕು ಹೀಗೆಂದುಕೊಂಡ: "ಅಯ್ಯೋ, ಈ ಸೆಟ್ಟಿಯು ವಿಚಾರವಂತನಲ್ಲ; ಲಜ್ಜೆಗೆಟ್ಟ ಸವಣರ ಮಾತನ್ನು ನಿಜವೆಂದು ನಂಬಿಕೊಂಡು, ಅವರ ಠಕ್ಕಿನಿಂದ ಮತಿಗೆಟ್ಟು ಕೆಟ್ಟ. ಈ ಭೂಮಿಯಲ್ಲಿ ಬಹುಜನರು ಪೂಜಿಸುವ ದೇವರನ್ನೂ ಮಹಾಧರ್ಮವನ್ನೂ ಬಿಟ್ಟು ಅಪ್ರಸಿದ್ಧವಾದ ಈ ಕುಸುಕುರುಧರ್ಮವನ್ನು ಹೇಗೆ ನಂಬಿದ! ದೇಹದಂಡಿಸಿ ಆಯಾಸಗೊಳ್ಳದೆ ಬೇರೆಯವರ ಮನೆಯಲ್ಲಿ ಮಾಯಾವಿತನದಿಂದ ಉಣ್ಣುವವರ ಯುಕ್ತಿಯನ್ನು ತಿಳಿಯದೆ ಈ ಸೆಟ್ಟಿ ಕೆಟ್ಟ. ಬೇಡಿ ತಂದ ಅನ್ನವನ್ನು ಚೆನ್ನಾಗಿ ತೊಳೆದು ಊಟಮಾಡರು, ಸರಿಯಾಗಿ ಸ್ನಾನ ಮಾಡರು. ಅಂತಹ ಶ್ರವಣರು ಯಾವ ತಪಸ್ಸನ್ನು ಕಂಡಿದ್ದಾರೆ? ಇವನು ದಡ್ಡ. ಜಗದಧಿವಲ್ಲಭನಾದ ದೇವರನ್ನು ಲಡ್ಡುಗೆ ಹಾಗೂ ಹಲವು ತೆರನಾದ ಹೂಗಳಿಂದಲೂ ನಾನಾ ವ್ರತಗಳಿಂದಲೂ ಪೂಜಿಸಿ ಈ ಸವಣರು ಕೃಶರಾಗುತ್ತಾರೆಯೇ? ಕುಲಗೆಡಿಸಿ, ಸ್ನಾನ ಮಾಡದೆ, ದೇಹದಲ್ಲಿ ಮಹಾ ಕೊಳಕನ್ನು ಹೊತ್ತು ಕಂಗೆಟ್ಟ ಸವಣರನ್ನು ಕಂಡು ಕುಲದೈವವೆಂದು ನಂಬಿರುವ ಚಂಚಲಚಿತ್ತನಾದ ಇಂತಹ ಗಾವಿಲನನ್ನು ನಾನೆಲ್ಲೂ ಕಂಡಿಲ್ಲ" ಎಂದು ಮರುಗಿದ. "ಇವನ ಹಣವೂ ಬುದ್ಧಿಯೂ ವ್ಯರ್ಥವಾಗದ ಹಾಗೆ ತಿಳಿದ ರೀತಿಯಲ್ಲಿ ಇವನಿಗೆ ಬುದ್ಧಿ ಹೇಳಿ ಇವನು ನಂಬಿರುವ ಈ ಧರ್ಮವನ್ನು ಬಿಡಿಸಿ, ನನ್ನ ಧರ್ಮದಲ್ಲಿ ತೊಡಗಿಸುತ್ತೇನೆ" ಎಂದು ನಿರ್ಧರಿಸಿದ.

ಅಂತೆಯೇ ಸೂಕ್ತ ಸಮಯದಲ್ಲಿ ದಯಾಮಿತ್ರಸೆಟ್ಟಿಗೆ ಹೀಗೆಂದ: "ವಸ್ತುಗಳಲ್ಲಿ ಶ್ರೇಷ್ಠವಾದವನ್ನು ಕೊಳ್ಳುವ ಜಾಣರೆಂದು ವ್ಯಾಪಾರಿಗಳನ್ನು ರಾಜರುಗಳೂ ಗೌರವಿಸುತ್ತಾರೆ; ಭೂಮಿಯ ಜನರೂ ಹೊಗಳುತ್ತಾರೆ. ಎಲ್ಲ ವಸ್ತುಗಳನ್ನೂ ಬಲ್ಲ ನಿನ್ನಂತಹ ಬುದ್ಧಿವಂತರು ಬಹಳ ಜನರಿಲ್ಲ. ಆದರೆ ನಿನ್ನಂತಹವರೂ ನಿರ್ಲಜ್ಜರಾದ ಸವಣರ ಮಾತಿಗೆ ಮರುಳಾಗಿರುವುದಕ್ಕಾಗಿ ನನಗೆ ಬೆರಗಾಗಿದೆ. ತಮ್ಮ ಮಾಯಕಾರತನದಿಂದ ಜನರನ್ನು ಮೋಸಗೊಳಿಸಿ, ದೇವಕಾರ್ಯದಲ್ಲಿ ಸ್ವಲ್ಪವಾದರೂ ನೋಯದೆ ಸುಖದಲ್ಲಿರುವ ಸವಣರ ಉಪಾಯದ ಬಗ್ಗೆ ಸ್ವಲ್ಪ ಯೋಚಿಸಿ ನೋಡು. ಕೊಳಕನ್ನು ಹೊಂದಿ, ನಾಚಿಕೆಯಿಲ್ಲದೆ ಬೆತ್ತಲೆಯಿದ್ದು, ಸೋಮಾರಿತನದಿಂದ ಹಲ್ಲನ್ನೂ ಉಜ್ಜದ, ಸ್ನಾನ ಮಾಡದ ಕುಲಗೆಟ್ಟವರನ್ನು ನೀನು ಮನ್ನಿಸಬಹುದೇ? ಇನ್ನೂ ಚಿಂತಿಸಿದರೆ, ಅವರ ಕಾರ್ಯವೆಲ್ಲ ಕೂಳಿನ ಕಾರಣಕ್ಕಾಗಿಯಲ್ಲದೆ ಸದ್ಗತಿಯ ಕಾರಣಕ್ಕಾಗಿ ಅಲ್ಲ; ಏಕೆಂದರೆ ಸದ್ಗತಿ ಪಡೆಯಲು ದೇಹದಂಡನೆ ಆವಶ್ಯಕ; ಅದು ನಿಮ್ಮ ಸವಣರಲ್ಲಿ ಕಿಂಚಿತ್ತಾದರೂ ಇಲ್ಲ; ಅಂತಹವರನ್ನೂ ಅವರ ದೈವವನ್ನೂ ಕೊಂಡಾಡುವ ನಿನ್ನ ಮರುಳಿಗೆ ನನಗೆ ಸೋಜಿಗವಾಗುತ್ತದೆ" ಎಂದು ನುಡಿದ. ಇದನ್ನು ಕೇಳಿದ ದಯಾಮಿತ್ರಸೆಟ್ಟಿ ಮುಗುಳ್ನಕ್ಕು ತನ್ನಲ್ಲೇ ಹೀಗೆಂದುಕೊಂಡ: ಕಾಡಿನಲ್ಲಿ ಮಾಣಿಕ್ಯವನ್ನು ಕಂಡ ಬೇಡನು ಅದನ್ನು ಒಮ್ಮೆ ಅಗಿದು ಇದು ಹಣ್ಣಲ್ಲ ಎಂದು ಬಿಸಾಡಿದನೆಂಬ ಗಾದೆ ಮಾತು ಈ ಬ್ರಾಹ್ಮಣನಲ್ಲಿ ನಿಜವಾಗುತ್ತಿದೆ. ಹೆಗ್ಗಣಕ್ಕೆ ಹಾಗೂ ಗುಣಹೀನರಿಗೆ ಬೆಳಗ್ಗೆ ಕಾಣದು, ರಾತ್ರಿ ಕಾಣಿಸುತ್ತದೆ; ಹಾಗೆಯೇ ಜಡರಿಗೆ ಉಜ್ವಲಧರ್ಮ ಅರ್ಥವಾಗದೆ ಸುಮ್ಮನೆ ಸಂಕಟಪಡುತ್ತಾರೆ. ಕಪ್ಪೆ ಸಮುದ್ರವನ್ನು ಕಾಣದು, ಅದರಿಂದ ಸಮುದ್ರಕ್ಕೆ ಕುಂದೆ; ಗೂಬೆ ಸೂರ್ಯನನ್ನು ಕಾಣದು, ಅದರಿಂದ ಸೂರ್ಯನಿಗೇನು ಭಂಗ; ಕಾಗೆ ಚಂದ್ರನನ್ನು ಕಂಡರಿಯದು, ಅದರಿಂದ ಶಶಿಗೆ ಹೀನವೇ; ಹಾಗೆಯೇ ಸಜ್ಜನರ ಒಳಿತನ್ನು ಅರಿಯದೆ ದಿವ್ಯರನ್ನು ಹಳಿದರೆ ಅವರಿಗೇನು ನಷ್ಟ? ಮದ್ದುಗುಣಿಕೆಯನ್ನು ಮೆದ್ದವನಿಗೆ ಕಲ್ಲು ಮಣ್ಣು ಮರವೆಲ್ಲ ಹೊಂಬಣ್ಣವಾಗಿ ಕಾಣುವಂತೆ ಕರ್ಮದ ತೀವ್ರತೆಯಿಂದ ಈ ಹಾರುವನಿಗೆ ಲೌಕಿಕಧರ್ಮವೇ ಧರ್ಮವಾಗಿ ತೋರುತ್ತಿದೆ. ಆದರೆ ಇವನಿಗೆ ಸದ್ಧರ್ಮವನ್ನು ಒಮ್ಮೆಗೇ ಹೇಳಿದರೆ ಪಿತ್ತಜ್ವರವಿರುವವನಿಗೆ ಕುದಿಯುವ ಹಾಲನ್ನು ಎರೆದಂತೆಯೂ, ಮಗುವಿನ ಕೈಯಲ್ಲಿ ಹರಿತವಾದ ಕತ್ತಿಯನ್ನು ಕೊಟ್ಟಂತೆಯೂ ಆಗುತ್ತದೆ. ಆದ್ದರಿಂದ ಇವನಿಗೆ ಅದನ್ನೆಲ್ಲ ಉಪಾಯವಾಗಿ ತಿಳಿಸಬೇಕು ಎಂದುಕೊಂಡು ಆಗ ಸುಮ್ಮನಾದ.

ಎಂಟುಹತ್ತು ದಿನಗಳ ನಂತರ ಒಂದು ದಿನ ದಯಾಮಿತ್ರನು ವಸುಭೂತಿಯನ್ನು ಕರೆಸಿ ಅವನಿಗೆ ಆಸನವನ್ನು ಕೊಟ್ಟು ಕೂಡಲು ಹೇಳಿದ. ಅವನು ಕೂತ ಮೇಲೆ ಬಹಳ ಮನ್ನಣೆ ಮಾಡಿ ಆದರದಿಂದ ಕರ್ಪೂರವೀಳ್ಯವನ್ನು ಕೊಟ್ಟು ಸೆಟ್ಟಿಯು ಹೀಗೆ ಹೇಳಿದ: "ಭಟ್ಟರೆ ಕೇಳಿ, ನಿಮ್ಮನ್ನು ಬಿಟ್ಟು ಬೇರೆ ಸತ್ಕುಲಜರು ಯಾರಿದ್ದಾರೆ? ನನ್ನ ಪುಣ್ಯೋದಯದಿಂದ ನಿಮ್ಮಿಂದಾಗಿ ಸದ್ಗತಿಯ ರೀತಿಯನ್ನು ಅರಿತೆ." ಇದನ್ನು ಕೇಳಿ ವಸುಭೂತಿಯು ಮಹಾಮಹಿಮೆವೆತ್ತಂತೆ ಉಬ್ಬಿಹೋದ. ಆಗ ದಯಾಮಿತ್ರಸೆಟ್ಟಿಯು ಮೆಲ್ಲನೆ ಇಂತೆಂದ: "ನಮ್ಮ ವಂಶದಲ್ಲಿ ಒಂದು ದೊಡ್ಡ ನೋಂಪಿಯುಂಟು. ನಾನು ಅದರ ಬಗ್ಗೆ ಮರೆತಿದ್ದೆ, ಆದರೆ ಈಗ ಅದನ್ನು ನಮ್ಮ ತಂದೆ ಆಚರಿಸುತ್ತಿದ್ದ ರೀತಿಯಲ್ಲೇ ಮಾಡಲು ಯೋಚಿಸಿದ್ದೇನೆ. ಅದರ ಸ್ವರೂಪ ಹೀಗಿದೆ: ಮನೋಜಮದಹರನೂ ಸುರಾಸುರ ಮಕುಟತಟಘಟಿತ ಚರಣಾರವಿಂದನೂ ಆದ ಅರ್ಹತ್ಪರಮೇಶ್ವರನು ನಮ್ಮ ಕುಲದೈವ ಹಾಗೂ ಇಷ್ಟದೈವ. ಜಿನೇಶ್ವರಸಾಕ್ಷಿಯಾಗಿ ಮಹರ್ಷಿಗಳಿಂದ ಆ ನೋಂಪಿಯನ್ನು ಮಾಡಿಸಿ ಅವರಿಗೆ ಬೇಡಿದುದನ್ನು ನೀಡುವುದು ಸಂಪ್ರದಾಯ. ಅದನ್ನು ಮಾಡುವ ಕಾಲ ಸಮೀಪಿಸುತ್ತಿದೆ; ಆದರೆ ಹತ್ತಿರದಲ್ಲಿ ಯಾರೂ ಮಹರ್ಷಿಗಳಿಲ್ಲ. ಆದರೇನು? ಹಾಲೇ ಮದ್ದು ಎಂಬಂತೆ ಭೂಲೋಕಸ್ತುತರಾದ ನಿಮ್ಮಂತಹ ಒಬ್ಬರು ಜಗತ್ತಿನಲ್ಲಿದ್ದರೆ ಸಾಲದೆ? ನಿಮಗಿಂತ ಕುಲದಲ್ಲಾಗಲೀ ಶೀಲದಲ್ಲಾಗಲೀ ಉತ್ತಮರಾದವರು ಯಾರಿದ್ದಾರೆ? ದೊಡ್ಡದೊಂದು ತೊರೆಯಲ್ಲಿ ಬಿದ್ದರೆ ಜೊತೆಯಲ್ಲಿರುವವರು ಮೇಲೆತ್ತಬೇಕೇ ಹೊರತು ಬೇರೆಯವರನ್ನು ಹುಡುಕಿಕೊಂಡು ಹೋಗಲಾಗುತ್ತದೆಯೇ? ಹಾಗೆಯೇ ನಮಗೆ ಋಷಿಗಳೇ ಬೇಕು, ಇತರರು ಆಗದು ಎಂಬ ನಿಯಮವೇನಿಲ್ಲ. ನೀವು ಅವರಿಗಿಂತ ಸಾವಿರ ಪಾಲು

ದೊಡ್ಡವರು; ನಿಮಗೆ ಮಾಡಿದ ದಾನದ ಫಲವು ಉಕ್ಕುವ ಹಾಲಿನಂತೆ ಇಮ್ಮಡಿಯಾಗುವುದು. ಆದ್ದರಿಂದ ನೀವು ನೋಂಪಿಯನ್ನು ಮಾಡಿಸಿ ಆನಂತರ ಬೇಕಾದಷ್ಟು ದಕ್ಷಿಣೆಯನ್ನು ಬೇಡಿಕೋಳ್ಳಿ" ಎಂದು ಕೇಳಿಕೊಂಡ. ಇದನ್ನು ಕೇಳಿದ ವಸುಭೂತಿಯ ಮನಸ್ಸಿನಲ್ಲಿಯೇ ಸಂಭ್ರಮಗೊಂಡ. ಮದ್ದಿಗಾಗಿ ಅಗೆಯಲು ಹೋದವನಿಗೆ ನಿಧಿ ಕಾಣಿಸಿದಂತೆ ಹಿಗ್ಗಿದ. ಪರಮ ಕೊಳಕರಾದ ಸವಣರಿಗೆ ದಾನ ಮಾಡುವವನು ನಮ್ಮಂತಹ ಸದ್ಬ್ರಾಹ್ಮಣರಿಗೆ ಕೊಡುವುದು ಏನಾಶ್ಚರ್ಯ? ಇವನ ಬಳಿ ಹೊನ್ನು ಜೋಳದ ರಾಶಿಯ ಹಾಗಿದೆ. ನಾನು ಏನು ಬೇಡಿದರೂ ಇವನು ಕೊಡುವುದೇನೂ ಸುಳ್ಳಾಗದು. ಈ ವೈಶ್ಯಪುತ್ರನು ಸುಳ್ಳಾಡುವವನಲ್ಲ ಎಂದುಕೊಂಡ. ಒಳ್ಳೆಯದೇ ಆಯಿತು, ಮೆಟ್ಟಿತ್ತಿದರೆ ಆ ಕಡೆ ಚಪ್ಪಟೆ ಎಂಬಂತೆ ನಾನು ಬೇಡಿದಷ್ಟು ಹಣ ದೊರೆಯುತ್ತದೆ. ಅಪಾರ ಹಣವನ್ನು ಬೇಡಿ ತೆಗೆದುಕೊಂಡು ಊರಿಗೆ ಹೋಗಿ ಹೆಂಡಿರುಮಕ್ಕಳೊಂದಿಗೆ ಸುಖವಾಗಿ ಬಾಳುವೆನು, ಬಯಸಿದ ಇಷ್ಟಭೋಗಗಳನ್ನು ಅನುಭವಿಸುವೆನು ಎಂದು ನಿರ್ಧರಿಸಿದ.

ನೋಂಪಿಯನ್ನು ಮಾಡಿಸಲು ತೀರ್ಮಾನಿಸಿದ ವಸುಭೂತಿಯು ಅದರ ವಿವರಗಳನ್ನು ತಿಳಿಸುವಂತೆ ದಯಾಮಿತ್ರನನ್ನು ಕೇಳಿಕೊಂಡ. ಆಗ ವೈಶ್ಯವಂಶಲಲಾಮನು, ನೋಂಪಿ ಮುಗಿಯುವವರೆಗೂ ಊಟದಲ್ಲಿ ನೆಲ್ಲಕ್ಕಿ ಅನ್ನವನ್ನೂ ತಿಳಿದುಪ್ಪವನ್ನೂ ಬೇರೆಯವರು ಬಡಿಸಿದುದನ್ನು ಮೌನದಿಂದ ಉಂಡು, ಮಾರನೆಯ ದಿನ ಊಟದ ಹೊತ್ತಿನವರೆಗೂ ನೀರು ಊಟ ತಾಂಬೂಲಗಳನ್ನು ಸೇವಿಸದೆ, ಮರೆತು ಸಹ ಮನೆಯಿಂದ ಹೊರಗೆ ಕಾಲಿಡದೆ, ಹಗಲು ರಾತ್ರಿ ಓದಿನಲ್ಲಿ ಕಾಲ ಕಳೆಯಬೇಕು. ಅಲ್ಲದೆ, ನೋಂಪಿಯ ಪ್ರಾರಂಭದಲ್ಲಿಯೂ ಕೊನೆಯಲ್ಲಿಯೂ ಮಂದರ ಪರ್ವತದಂತೆ ಧೈರ್ಯದಿಂದ ಕೂಡಿ ಲಾಭ ಪಡೆದ ವರ್ತಕನಂತೆ ಉತ್ಸಾಹದಿಂದ, ಹೇಡಿಯ ಹಾಗೆ ನೋವಿಗೆ ಅಳುಕದೆ, ಹೊಟ್ಟೆ ತುಂಬ ಉಂಡವನ ಹಾಗೆ ಸಾಕು ಎನ್ನದೆ, ದೃಢಚಿತ್ತದಿಂದಿದ್ದು, ತಲೆಯ ಕೂದಲೆಲ್ಲವನ್ನೂ ತೆಗೆಸಿಕೊಂಡು ನಮಗೆ ಕೊಡಬೇಕು; ಆದರೆ ಹಾಗೆ ಕೊಟ್ಟು ಮನಸ್ಸಿನಲ್ಲಿ ದುಖಿಸಬಾರದು; ಮುಂಚಿನ ವಿನೋದಗಳನ್ನು ಮರೆತಾದರೂ ನೆನೆಯಬಾರದು. ಸ್ವಾಧ್ಯಾಯಪರನಾಗಿ ಯಾವುದಕ್ಕೂ ಆಸೆಪಡದೆ ಎರಡು ತಿಂಗಳ ತನಕ ನಾವು ಹೇಳಿದಂತೆ ಕ್ರಮ ತಪ್ಪದೆ ನೋಂಪಿಯನ್ನು ನೆರವೇರಿಸಬೇಕು. ಒಂದು ಮರೆಯಲ್ಲಿ ಮಲಗಬೇಕು; ಮೈ ಕೊಳೆ ಹೆಚ್ಚಾಯಿತೆಂದು ಸ್ನಾನ ಮಾಡಬಾರದು; ಹಲ್ಲುಜ್ಜದೆ, ಹೆಣ್ಣಿಗಾಗಿ ಹಂಬಲಿಸದೆ, ತಲ್ಲಣಿಸದೆ ಚಟುವಟಿಕೆಯಿಂದಲೇ ಇರಬೇಕು.

ಇದನ್ನೆಲ್ಲ ಕೇಳಿ ಹಾಗೆ ಮಾಡುವುದರ ಕಷ್ಟವರಿಯದೆ, ಎಳೆಗರು ಭಯವರಿಯದು ಎಂಬಂತೆ, ಆ ಬ್ರಾಹ್ಮಣನು ಹಣದ ಆಸೆಯಿಂದ ಒಪ್ಪಿಕೊಂಡ. ನನ್ನನ್ನು ನೋಡಿ ನಗುವವರು ಇಲ್ಲಿ ಯಾರಿದ್ದಾರೆ; ಇರುವುದು ದೂರದೇಶ ತಾನೇ? ತಾಳ್ಮೆಯಿಂದ ನೋಂಪಿಯನ್ನು ಮಾಡಿ ಬೇಕಾದಷ್ಟು ಹೊಳೆವ ಹೊನ್ನನ್ನು ಬೇಡಿಕೊಳ್ಳುತ್ತೇನೆ ಎಂದುಕೊಂಡ. ಒಂದು ಗಳಿಗೆ ಉಸಿರು ಕಟ್ಟಿ ತಲೆಯನ್ನು ಬೋಳಿಸಿಕೊಂಡರೆ ಹೊನ್ನ ರಾಸಿ ದೊರೆಯುತ್ತದೆ; ತಲೆಯಲ್ಲಿ ಮತ್ತೆ ಕೂದಲಲ್ಲದೆ ಹುಲ್ಲು ಬೆಳೆಯುತ್ತದೆಯೇ? ಎಂದು ಸಮಾಧಾನ ತಂದುಕೊಂಡ. ಊಟ ಮಾಡಬೇಕಾದದ್ದು ನೆಲ್ಲಕ್ಕಿಯನ್ನವನ್ನು ತಾನೇ? ತಾಂಬೂಲ, ಎರಡು ಹೊತ್ತಿನ ಊಟ, ಸ್ನಾನ – ಇವುಗಳು ಇಲ್ಲ ಎಂಬುದು ತಾನೇ? ತಿಂಗಳು ಎಂಬುದೇನೂ ಬಹಳ ಕಾಲವಲ್ಲ – ಹೀಗೆಂದು ತನ್ನಲ್ಲಿಯೇ ಕನಸು ಕಾಣುತ್ತಿದ್ದ.

ಆ ವರ್ತಕಶ್ರೇಷ್ಠನು ಪಯಣವನ್ನು ನಿಲ್ಲಿಸಿ ಮಾರನೆಯ ದಿವಸ ಎಲ್ಲ ಪಾಪಗಳಿಗೂ ಪ್ರಳಯಸ್ವರೂಪನಾದ ಜಿನಸ್ವಾಮಿಗೆ ತೂರ್ಯರವದ ನಡುವೆ ಮಹಾಭಿಷೇಕ ಮತ್ತು ಪೂಜೆಗಳನ್ನು ಮಾಡಿಸಿ ವಸುಭೂತಿಯನ್ನು ಉತ್ತರಮುಖವಾಗಿ ಕೂಡಿಸಿದ. ದಾಂಡಿಗರು ತಲೆಗೂದಲನ್ನು ಕೀಳಲಾರಂಭಿಸಿದರು; ಅವನಾದರೋ ಶುಂಠಿ ತಿಂದ ಕೋತಿಯ ಹಾಗೆ ಕಳವಳಪಟ್ಟು ನೋವಿನಿಂದ ತಲೆಯನ್ನು ತಿರುಗಿಸಿದ; 'ಅಯ್ಯೋ' ಎಂದು ಕಿರಿಚಿದ. ಶರೀರವು ನಡುಗುತ್ತಿರಲು, ಜೋರಾಗಿ ಹಲ್ಲು ಕಡಿಯುತ್ತ, ಎದೆ ಡವಡವಗುಟ್ಟುತ್ತಿರಲು, ಹೇಡಿಯ ಮೇಲೆ ಹಾವು ಬಿದ್ದ ಹಾಗೆ ದೇಹ ಮರಗಟ್ಟಲು, ಕಣ್ಣೀರು ಸುರಿಯಲು ಅಂಗೈಯಿಂದ ಅದನ್ನು ಒರೆಸಿಕೊಂಡ. ಔಡುಗಚ್ಚಿ, 'ಅಹಹಾ' ಎಂದು ಎಡಗೈಯಿಂದ ತಡವರಿಸುತ್ತ ಸಾಸವೆ

ನೀರನ್ನು ಕುಡಿದ ಹಾಗೆ ಸಂಕಟದಿಂದ ದಿಗ್ಭ್ರಮೆಗೊಂಡ. ಕುದುರೆಯೇರಿದ ಕುರುಬನಂತೆ ನಡುಗುತ್ತ, ಹೆಣವನ್ನು ಕಂಡ ಹೇಡಿಯಂತೆ ಕಣ್ಣುಗಳನ್ನು ಮುಚ್ಚಿಕೊಂಡು, ಬಿನ್ನಪಗೈಯುವ ಒಕ್ಕಲಿಗನಂತೆ ಬಿಕ್ಕುತ್ತ, ಗ್ರಹಪೀಡಿತನಂತೆ ತೊನೆಯುತ್ತ ತಡೆದುಕೊಳ್ಳಲಾರದ ನೋವಿನಿಂದ ಬೆಬ್ಬಳಿವೋಗಿ, ಕತ್ತಿಯ ಮೋಹದಿಂದ ಮಗುವನ್ನು ಹಿಡಿದರೆಂಬ ಗಾದೆಯಂತೆ, ಹೊನ್ನ ಮೋಹದಿಂದ ಮನಸ್ಸನ್ನು ಗಟ್ಟಿ ಮಾಡಿಕೊಂಡು ಮೋಕ್ಷಲಕ್ಷ್ಮಿಯ ವಿವಾಹಗೃಹದ ಭೂಮಿಶೋಧನೆ ಯೆನಿಸುವ ಲೋಚನ್ನು ಹೇಗೋ ಸೈರಿಸಿಕೊಂಡ. ವಿನಯಸಮುದ್ರನೂ ಸತ್ಯದ ತವರು ಎನಿಸಿದ ಸೆಟ್ಟಿಯು ಹೇಳಿದ ಮಾರ್ಗದಲ್ಲಿ ಹೇಗೋ ಉಪವಾಸವಿದ್ದು, ಅನುನಯದಿಂದಲೂ ಏಕಚಿತ್ತದಿಂದಲೂ ಉಳಿದ.

ಮಾರನೆಯ ದಿನ, ಸೆಟ್ಟಿ ಹೇಳಿದಂತೆ ಅವನು ಹೇಳಿದಂತೆ ನಿಂತಿದ್ದು ಪಾಣಿಪಾತ್ರೆಯಲ್ಲಿ ಸಕ್ಕರೆ ಬೆರೆಸಿದ ಹಾಲನ್ನು ಕುಡಿದ. ಆಮೇಲೆ ಸೊಗಸಾದ ತುಪ್ಪದಿಂದ ಮಾಡಿದ ಹೋಳಿಗೆ, ಮಂಡಗೆ, ರುಚಿಯಾದ ಲಡ್ಡುಗೆ, ಚಕ್ಕುಲಿ ಗಾರಿಗೆ ಪೂರಿಗೆ ಮೊದಲಾದ ನಾನಾ ಭಕ್ಷ್ಯಗಳನ್ನು ಮೆದ್ದ. ತೊರೆಯಲ್ಲಿ ಹೋಗುವವನಿಗೆ ತೆಪ್ಪವಿಕ್ಕಿದ ಹಾಗಿದ್ದ ಗಟ್ಟಿ ಮೊಸರನ್ನು ಹೊಟ್ಟೆಗಿಳಿಸಿದ. ಆಮೇಲೆ ಗಮಗಮಿಸುವ ನೆಲ್ಲಕ್ಕಿಯನ್ನ, ತಿಳಿದುಪ್ಪ, ಹೊಟ್ಟು ತೆಗೆದ ಹೆಸರು ಬೇಳೆಯ ಸವಿಯಾದ ತೊವ್ವೆಯನ್ನೂ, ಅಮೃತಕ್ಕೂ ಮಿಗಿಲಾದ ರಸಾಯನಕ್ಕಿಂತಲೂ ರುಚಿಯಾದ ದಿವ್ಯಾಹಾರವನ್ನು ಕಂಠಪೂರ್ತಿ ಉಂಡ. ಅವನಿಗೆ ತಿಂದು ಸುಸ್ತೇ ಆಗಿತ್ತು. ಆದರೂ ಆಮೇಲೆ ಬಾಳೆ, ಕರ್ಜೂರ, ಕಿತ್ತಿಳೆ, ಕಮ್ಮರದ ಇಮ್ಮಾವು, ನೇರಿಳೆ, ನಾರಂಗ, ಹೇರಿಳೆ ಮುಂತಾದ ತನಿವಣ್ಣುಗಳನ್ನು ಆಸೆಯಿಂದ ಮೆದ್ದ. ಕೈತೊಳೆದುಕೊಂಡು ತಂಪಾದ ಆಲಿಕಲ್ಲ ನೀರನ್ನು ಬೇಕಾದಷ್ಟು ಕುಡಿದು ದಯಾಮಿತ್ರನ ಜೊತೆ ಸಂತೋಷದಿಂದ ಮಾತನಾಡಿ ಅವನೊಡನೆ ವಿಹಾರಕ್ಕೆ ಬಂದು ಮರದ ಆಸನದ ಮೇಲೆ ಕುಳಿತುಕೊಂಡ.

ಆಗ ಅವನ ಮನಸ್ಸಿನಲ್ಲಿ ಕೆಲವು ಆಲೋಚನೆಗಳು ಬಂದವು. ಅದು ಚೆನ್ನಾಗಿತ್ತು, ಇದು ಸೊಗಸಾಗಿತ್ತು ಎಂದು ಬೇರೆ ಬೇರೆ ಹೇಳಬೇಕೇಕೆ; ಎಲ್ಲ ಭಕ್ಷ್ಯಗಳೂ ತಿನಿಸುಗಳೂ ಇಂದ್ರನು ಉಣ್ಣುವ ಅಮೃತಕ್ಕಿಂತಲೂ ಸಾವಿರ ಪಟ್ಟು ರುಚಿಯಾಗಿದ್ದವು ಎಂದು ತನ್ನ ಬದುಕಿನಲ್ಲಿಯೇ ಅಪೂರ್ವವಾಗಿದ್ದ ಅಡಿಗೆಯ ಬಗ್ಗೆ ಆಶ್ಚರ್ಯಪಟ್ಟ. ರಾತ್ರಿ ಬಿದ್ದ ಕನಸುಗಳನ್ನು ಹಗಲು ನೆನೆಸಿಕೊಳ್ಳುವವನಂತೆ ಊಟವನ್ನೇ ನೆನೆಸಿಕೊಂಡು ಹಗಲೆಲ್ಲ ಸಂತೋಷದಿಂದ ಕೂಡಿದ್ದ. ಆದರೆ ಸೂರ್ಯ ಮುಳುಗಿದ ಒಂದು ಜಾವದ ನಂತರ ಇದ್ದಕ್ಕಿದ್ದಂತೆ ಅಸದಳವಾದ ಬಾಯಾರಿಕೆಯುಂಟಾಯಿತು. ಅದನ್ನು ಸಹಿಸಲಾರದೆ ನಿಟ್ಟುಸಿರು ಬಿಟ್ಟ; ಬದುಕುವುದೇ ಅಸಾಧ್ಯ ಎನ್ನಿಸಿತು. ಕೋಡಗವನ್ನು ಹುಲ್ಲಿನಲ್ಲಿ ಮುಚ್ಚಿದರೆ ಅದು ಸಿಡಿಮಿಡಿಗೊಳ್ಳುವಂತೆ ಅವನು ಸಿಡಿಮಿಡಿಗೊಂಡ; ಇದನ್ನು ಬೇರೆಯವರಿಗೆ ಹೇಳಲಾರದೆ ಮಾಗಿಯ ಕಾಲದ ಕೋಗಿಲೆಯ ಹಾಗೆ ತನ್ನಲ್ಲೇ ಅದುಮಿಕೊಂಡು ಮರಳಿನ ದಿಬ್ಬದಂತೆ ಜರ್‍ರನೆ ಜರಿದ. ಬಾಯಿ ಬಿಡುತ್ತ, ನೆಲದ ಮೇಲೆ ಹೊರಳಾಡುತ್ತ, ಹೊರಗೆ ಹೋಗಿ ತಂಪಾದ ಜಾಗದಲ್ಲಿ ಉರುಳಿಕೊಳ್ಳುತ್ತ ವಸುಭೂತಿಯು ಮನಸ್ಸಿನಲ್ಲಿ ತಂಪಿಲ್ಲದೆ ಧೈರ್ಯiಗೆಟ್ಟ. ತಬ್ಬಲಿಯ ತಲೆಯ ಮೇಲಿನ ಕಿರೀಟವನ್ನು ಆಲಿಕಲ್ಲ ಮಳೆ ಉರುಳಿಸಿತು ಎಂಬ ಹಾಗೆ ಹಿಂದಿನ ಎಲ್ಲ ರಾತ್ರಿಗಳಿಗಿಂತ ಇಂದಿನ ರಾತ್ರಿ ನಿಡಿದಾಯಿತು, ಕೆಟ್ಟೆ ಎಂದು ಹಲುಬಿದ. ಕಾಲಕಳೆದಂತೆ ಬಾಯಾರಿಕೆ ಹೆಚ್ಚಾಗುತ್ತ ಅದನ್ನು ಸೈರಿಸಲಾಗದೆ ಅವನು ಮರುಗುವ ಸಾರಂಗದ ಮರಿಯಂತೆ ಒಂದೇ ಸಮನೆ ಕುದಿದ.

ಕಾಲ ಸರಿಯುವುದನ್ನೇ ಅವನು ಮೌಹೂರ್ತಿಕನಂತೆ ಗಮನಿಸುತ್ತಿದ್ದ; ಹಾಗೆ ಆ ರಾತ್ರಿಯ ನಾಲ್ಕು ಜಾವ ಕಳೆಯಿತು. ಹೆಬ್ಬಾವಿನ ಹಾಗೆ ಮುದುರಿಕೊಳ್ಳುತ್ತ, ಜಾವದ ಕಾಪಿನ ಭಟರಂತೆ ಎಚ್ಚರಗೊಳ್ಳುತ್ತ, ಮರುಳನ ಹಾಗೆ ತನ್ನಲ್ಲಿ ತಾನೇ ಮಾತಾಡಿಕೊಳ್ಳುತ್ತ, ಮಳೆಯನ್ನು ಎದುರು ನೋಡುವ ಒಕ್ಕಲಿಗನಂತೆ ಆಕಾಶವನ್ನೇ ನೋಡುತ್ತ, ಚಾತಕಪಕ್ಷಿಯಂತೆ ಆಕಾಶದ ನೀರಿಗೆ ಬಾಯಿಬಿಡುತ್ತ, ಜ್ವರ ಬಂದವನಂತೆ ಗಾಳಿಗಾಗಿ ಹಂಬಲಿಸುತ್ತ ಇಡೀ ರಾತ್ರಿ ಕಣ್ಣು ಬಿಟ್ಟುಕೊಂಡೇ ಕಳೆದ. ಅಂತೂ ಬೆಳಗಾಯಿತು. ಇದನ್ನು ಸಹಿಸಿಕೊಳ್ಳದೇ ಹೋದರೆ ಹೊನ್ನುಗಳ ಸಂಪಾದನೆ ಹೋಗುವುದು, ಧೈರ್ಯದಿಂದ

ಸಹಿಸಿಕೊಳ್ಳೋಣವೆಂದರೆ ನೀರಿಗಾಗಿ ನನ್ನ ಪ್ರಾಣ ಹೋಗುವುದಲ್ಲ್ಲ ಎಂದು ಎರಕಕ್ಕೆ ಹಾಕಿದ ಲೋಹದ್ರವದಂತೆ ಕುದಿಯುತ್ತಿದ್ದ. ಆಗಿದ್ದ ತೀರ್ಮಾನದಂತೆ ದಯಾಮಿತ್ರಸೆಟ್ಟಿಯ ಮನೆಗೆ ಹೋಗಿ ಹಿಂದಿನಂತೆಯೇ ಆಸೆಯಿಂದ ಊಟಮಾಡಿದ. ಅಂದು ರಾತ್ರಿ ಅವನ ಸಂಕಟ ಹಿಂದಿನ ದಿನದ ಎರಡರಷ್ಟಾಯಿತು. ಆ ಮಾರನೆಯ ದಿನವಂತೂ ಅವನಿಗೆ ಭಕ್ಷ್ಯವೆಂದರೆ ದಿಗಿಲುಗೊಳ್ಳುವಂತಾಯಿತು, ಹಾಲೆಂದರೆ ಬೆದರುವಂತಾಯಿತು, ತುಪ್ಪವನ್ನು ಕಂಡಾಗ ಬೆಚ್ಚುವಂತಾಯಿತು. ಬಾಯಾರಿಕೆಯ ಭಯದಿಂದ ಏನು ಬಡಿಸಹೋದರೂ ಬೇಡ ಎಂಬುದನ್ನು ಕಂಡ ಸೆಟ್ಟಿಯು, "ಆದ ಒಪ್ಪಂದದಂತೆ ನಾನು ಏನು ಬಡಿಸಿದರೂ ನೀವು ಮಾತನಾಡದೆ ಉಣ್ಣಬೇಕು. ಗುಣವಂತರೂ ಸತ್ಕುಲಜರೂ ಆದ ನಿಮಗೆ ಇದೇನು ದೊಡ್ಡದು? ಅಳಿಪರಾದ ಋಷಿಗಳು ಹಾಕಿದ್ದನ್ನೆಲ್ಲ ಮಾತನಾಡದೆ ತಿನ್ನುತ್ತಾರೆ. ಭೂಸುರರಾದ ನಿಮಗಿದೇನು ಮಹಾ?" ಎಂದ. ವಸುಭೂತಿಯು ಅದಕ್ಕೆ ಏನು ಹೇಳಲೂ ತಿಳಿಯದೆ ಸುಮ್ಮನೆ ಒಳಗುದಿಪಟ್ಟು ಊಟಮಾಡಿದ.

ಹೀಗೆಯೇ ಏಳೆಂಟು ದಿನಗಳಾದವು. ಅವನಿಗೆ ಊಟವೆಂದರೆ ನಡುಗುವಂತಾಯಿತು. ಕೈಯಿಂದ ಊಟಮಾಡುವುದೂ, ಬೆತ್ತಲೆಯಿರುವುದೂ, ನೆಲದ ಮೇಲೆ ಮಲಗುವುದೂ ತುಂಬ ಕಷ್ಟಕರ ಎಂದು ಅವನು ಸೈರಣೆಗೆಟ್ಟ. ನಸುಗುನ್ನಿ ಸೋಕಿದಂತೆ ಅವನ ಮೈಯಲ್ಲೆಲ್ಲ ಅಸಾಧ್ಯ ನವೆ; ಅದನ್ನು ಸೈರಿಸಲಾರದೆ ಎರಡೂ ಕೈಗಳಿಂದ ಪರಪರ ಕೆರೆದುಕೊಂಡ. ಕೆರೆಗೆ ಹೋಗಿ ತೃಪ್ತಿಯಾಗುವ ಹಾಗೆ ಸ್ನಾನ ಮಾಡಿ, ಇಷ್ಟವಾಗುವ ತಿನಿಸನ್ನು ತಿಂದು, ಊರಿನ ಜನರೊಂದಿಗೆ ಹರಟೆ ಹೊಡೆಯುತ್ತ ಕಾಲ ಕಳೆಯದೆ; ಒಂದೇ ಬಗೆಯ ಊಟ, ಮೈನವೆ, ಸಂಕಟಪಡಿಸುವ ಬಾಯಾರಿಕೆಗಳಿಂದ ತಿಗುಳನಾಡಿನಲ್ಲಿ ಸೆರೆಯಾದಂತೆ ಅತೀವ ಉಮ್ಮಳದಿಂದ ಇನ್ನು ತಡೆದುಕೊಳ್ಳಲು ಸಾಧ್ಯವೇ ಇಲ್ಲ ಎಂಬ ಸ್ಥಿತಿಯಿಂದಾಗಿ ವಸುಭೂತಿಯು ಬಡಕಲಾದ.

ಗಾಳಿಗೊಡ್ಡಿದ ಸೊಡರಿನಂತೆ ನಡುಗುತ್ತ, ಏಟು ತಿಂದ ಕಳ್ಳನಂತೆ ತಲ್ಲಣಗೊಂಡು, ಬಾವುಟದಂತೆ ಅಲ್ಲಾಡುತ್ತ, ಮಲ್ಲರ ಜೊತೆ ಜಗಳವಾಡಿದವನಂತೆ ತಗ್ಗಿ, ಹುಣಿಸೆ ಕಾಯಿ ತಿಂದವನಂತೆ ನಡುಗುತ್ತ, ಹಾವನ್ನು ತುಳಿದವನಂತೆ ಭಯಗೊಂಡು ತಂಪಿನಿಂದ ದನಿ ಹೊರಡದ ತಮ್ಮಟೆಯಂತೆ ಕುಗ್ಗಿ ಸಮ್ಯಕ್ತ್ವಚೂಡಾಮಣಿಯಾದ ದಯಾಮಿತ್ರನಿಗೆ ಹೀಗೆ ಹೇಳಿದ: "ಹುಲಿಯ ಮೀಸೆಯಲ್ಲಿ ಹೆದರಿಕೆಯಿಲ್ಲದೆ ಉಯ್ಯಾಲೆಯಾಡಬಹುದು, ನಂಜನ್ನು ನೆಕ್ಕಬಹುದು, ಸಿಂಹದ ಮೇಲೇರಿ ಕುಳಿತುಕೊಳ್ಳಬಹುದು, ಬೆಂಕಿಯಲ್ಲಿ ಹಾಯಬಹುದು, ಸೊಕ್ಕಿದ ಆನೆಯನ್ನು ಎದುರಿಸಬಹುದು, ಆದರೆ ನಿನ್ನ ನೋಂಪಿಯನ್ನು ಯಾವ ಧೀರನೂ ಸೈರಿಸಿಕೊಳ್ಳಲಾರ. ಬಾಯಾರಿಕೆ, ಮೈಯ ನವೆ, ಸೈರಿಸಲಾಗದ ತಲೆನೋವು, ಅಲುಗಾಡದಂತಹ ಪರಿಸ್ಥಿತಿ – ಇವುಗಳಲ್ಲಿ ಪ್ರತಿಯೊಂದೂ ಮನುಷ್ಯರನ್ನು ಅಧೀರವಾಗಿಸಬಲ್ಲದು. ಕೇಳು, ಕಳೆದ ಏಳೆಂಟು ದಿನಗಳು ನನಗೆ ಏಳೆಂಟು ವರ್ಷಗಳೆಂಬಂತೆ ಅನುಭವವಾಯಿತು. ಈ ದುಃಖವನ್ನು ಯಾರು ತಾನೇ ಸೈರಿಸಿಕೊಳ್ಳಬಲ್ಲರು? ಹೇರಿನ ಮೇಲೆ ಬಂಡೆಗಲ್ಲು, ಗಾಯದ ಮೇಲೆ ಏಟು, ಕೊಲೆಯ ಮೇಲೆ ಸುಲಿಗೆ ಎಂಬ ಹಾಗೆ ಸಂತಾಪದ ಮೇಲೆ ಸಂತಾಪವನ್ನುಂಟುಮಾಡುವ ನಿನ್ನ ನೋಂಪಿಯೆಂಬ ಗರಗಸಕ್ಕೆ ನನ್ನ ಮೈಯನ್ನೊಡ್ಡಲಾರೆ! ಮುಂದೆ ಒಂದೆರಡು ತಿಂಗಳು ವಿಶೇಷ ನೋಂಪಿಯನ್ನು ಬೇಕಾದರೆ ನಡೆಸುತ್ತೇನೆ; ನನ್ನ ಈ ಉಮ್ಮಳಿಕೆ ನಿವಾರಿಸುವಂತೆ ನಿಮ್ಮ ಅಧ್ಯಕ್ಷರ ಜೊತೆ ಹೋಗಿ ಕೆರೆಯಲ್ಲಿ ಸ್ನಾನ ಮಾಡಿ ಬರಲು ಮತ್ತು ಒಂದಷ್ಟು ನೀರನ್ನು ಕುಡಿದು ನಿಮ್ಮ ಬೀಡಿನಲ್ಲಿ ಒಂದೆರಡು ಗಳಿಗೆ ಅಡ್ಡಾಡುವುದಕ್ಕೆ ಅವಕಾಶ ಕೊಡು" ಎಂದು ಗೋಗರೆದ. ಅದನ್ನು ಕೇಳಿ ದಯಾಮಿತ್ರನು ಬಾಯ ತಂಬುಲ ಹೊರಚೆಲ್ಲುವಂತೆ ಪಕಪಕನೆ ನಕ್ಕು ಹೇಳಿದ: "ಇತರರು ಪರಾಕ್ರಮದಿಂದ ಹುಲಿಯನ್ನು ಹಿಡಿದರೂ ಅದೇನು ಮಹಾ ಎಂದು ಹೀಯಾಳಿಸಿ, ತಾನು ಹಿಡಿದದ್ದು ಇಲಿಯಾದರೂ ಅತಿಶಯ ಎಂದು ಭಾವಿಸುವುದು ಜನರಿಗೆ ಸಹಜ. ಹಾವಿಲ್ಲದ ಕಡೆ ಕಪ್ಪೆಗಳು ಜೋರಾಗಿ ವಟಗುಟ್ಟುತ್ತವೆ; ಹಾವೇನಾದರೂ ಸುಳಿದರೆ ಸತ್ತ ಹಾಗಿರುತ್ತವೆ. ಅಂತೆಯೇ, ಮಹಾಪರೀಷಹಗಳು ತಮ್ಮನ್ನು ಕದಡುವವರೆಗೂ ತಾವು ಆಚರಿಸುವ ವ್ರತಗಳೇ ಸರಿಯೆಂದು ಜನ ಬೀಗುತ್ತಾರೆ; ಪರೀಷಹಗಳು ಒದಗಿದಾಗ ದಿಕ್ಕೆಟ್ಟು ದುಃಖಿಸುತ್ತಾರೆ.

ಕಡುಮೂರ್ಖರಾದವರು ತಮ್ಮಿಚ್ಛೆಗೆ ಸರಿಹೊಂದುವುದನ್ನೇ ಹಿರಿದು ಎಂದುಕೊಳ್ಳುತ್ತಾರೆ. ಜಿನಮಾರ್ಗದಲ್ಲಿ ನಡೆಯುವುದೇನು ಸುಲಭವೇ? ಇಲ್ಲ, ಕಡಲೆಯನ್ನು ತಿನ್ನುವಂತೆ ಕಲ್ಲುಗಳನ್ನು ತಿನ್ನುವುದು ಸಾಧ್ಯವೇ? ಹೀಗೆ ಮಾಡಲು ಕಷ್ಟಕರವಾದುದೂ ಫಲದಲ್ಲಿ ಮಾತ್ರ ಹಿರಿಯವೂ ಆದ ಹನ್ನೆರಡು ಬಗೆಯ ತಪಸ್ಸುಗಳನ್ನೂ; ಸಹಿಸಲು ಸಾಧ್ಯವಿಲ್ಲದ ಇಪ್ಪತ್ತೆರಡು ಬಗೆಯ ಮಹಾಪರೀಷಹಗಳನ್ನೂ; ಮೋಕ್ಷಕ್ಕೆ ಮೆಟ್ಟಿಲುಗಳೆನಿಸುವ ಇಪ್ಪತ್ತೆಂಟು ಮೂಲಗುಣಗಳನ್ನೂ; ಮಹಾವ್ರತಕ್ಕೆ ವಜ್ರಪ್ರಾಕಾರವೆನಿಸಿರುವ ಪಂಚಾಚಾರಗಳನ್ನೂ; ರತ್ನತ್ರಯವನ್ನು ಕಾಪಾಡುವ ಕೋಟೆಯೆನಿಸಿರುವ ಹದಿಮೂರು ಚಾರಿತ್ರಗಳನ್ನೂ; ಸಕಲಗುಣಗಳೆನ್ನುವ ರತ್ನಗಳಿಗೆ ಕರಂಡವೆನಿಸುವ ದಶಧರ್ಮವನ್ನೂ; ಒಂದನ್ನಾದರೂ ಒಂದು ದಿನವೂ ಬಿಡದೆ ಸಾಯುವವರೆಗೂ ಹಿಂಜರಿಯದೆ ಅಲಸದೆ ಉದಾಸೀನಮಾಡದೆ ಬೆದರದೆ ಆಚರಿಸುವ ಮಹರ್ಷಿಗಳ ಮನದ ಸ್ಥೈರ್ಯವನ್ನು ಯಾರು ತಾನೇ ಬಣ್ಣಿಸಬಲ್ಲರು? ಅಯ್ಯೋ, ಅವುಗಳಲ್ಲಿ ಕಿರಿಯವಾದ ಒಂದೆರಡು ಪರೀಷಹಗಳಿಗೇ ನೀವು ಭಯಪಟ್ಟಿರಲ್ಲ!"

ಇದನ್ನೆಲ್ಲ ಕೇಳಿ ವಸುಭೂತಿಗೆ ವಿಸ್ಮಯವುಂಟಾಯಿತು. ಮಜ್ಜಿಗೆ ಮಾರುವ ಮುದುಕಿಗೇ ಆಸೆಯಿಂದ ಮಜ್ಜಿಗೆಯನ್ನು ಕುಡಿಸಿದರೆಂಬ ರೀತಿಯಲ್ಲಿ ನಾನು ಮುನಿಸಂಕುಲವನ್ನು ಅಹಂಕಾರದಿಂದ ಹಳಿದೆ; ಸೆಟ್ಟಿಯು ಮುನಿಸಿಕೊಂಡು ನನ್ನ ಸಿಟ್ಟನ್ನೂ ನನ್ನಲ್ಲಿಯೇ ಕಳೆದನಲ್ಲ ಎಂದುಕೊಂಡ. ರಾಜಧಾನಿಯನ್ನು ಕಾಣದವನಿಗೆ ಹಳ್ಳಿಯೇ ದೊಡ್ಡ ಊರಾಗಿ ಕಾಣುವ ಹಾಗೆ ಧೈರ್ಯವಂತರಾದ ಮಹರ್ಷಿಗಳ ತಪೋಮಾರ್ಗವನ್ನು ತಿಳಿಯದ ನನ್ನಂತಹವರಿಗೆ ನಮ್ಮ ಚಾರಿತ್ರವೇ ಹಿರಿದೆನ್ನಿಸುವುದು ಸಹಜ. ಆದರೆ ವ್ಯಾಪಾರಿಗಳಲ್ಲಿ ದಡ್ಡತನವಿಲ್ಲ, ಸೂಳೆ ಸಾಧುವಲ್ಲ ಎಂಬ ಗಾದೆಯಂತೆ ಇವನು ದಡ್ಡನಲ್ಲ, ಇವನು ಅನುಸರಿಸುವ ಧರ್ಮವೇ ಸರಿಯಾದ ಧರ್ಮ ಎಂದು ಭಾವಿಸಿದ. ಸೈರಿಸಲು ಯಾರಿಗೂ ಕಷ್ಟಕರವೆನಿಸುವ ಪರೀಷಹಗಳನ್ನು ಸೈರಣೆಯಿಂದ ಗೆಲ್ಲುವ ಮುನಿಶ್ರೇಷ್ಠರ ಬಳಿ ಜಿನಧರ್ಮದ ಸಾರವನ್ನು ಅರಿತು ನಂಬಿದವರು ಇತರರನ್ನೇಕೆ ಅನುಸರಿಸುತ್ತಾರೆ? ಮೇರುಪರ್ವತವನ್ನು ನೋಡಿದವರಿಗೆ ಭೂಮಿಯು ಕಿರಿದಾಗಿ ಕಾಣುವುದು ಸಹಜವೇ ಎಂದು ಅವನಿಗನ್ನಿಸಿತು. ಹೀಗಾಗಿ ವಸುಭೂತಿಯು ವಾತ್ಸಲ್ಯರತ್ನಾಕರನಾದ ದಯಾಮಿತ್ರನಿಗೆ ಕೈಮುಗಿದು, "ನೀವು ಅನುಸರಿಸುವ ಧರ್ಮವೇ ಶ್ರೇಷ್ಠವಾದುದೆಂಬುದು ನನಗೆ ಮನವರಿಕೆಯಾಗಿದೆ; ದಯವಿಟ್ಟು ನಿಮ್ಮ ಧರ್ಮದ ವಿಷಯವನ್ನು ನನಗೆ ತಿಳಿಸಿಕೊಡಬೇಕು" ಎಂದು ಕೇಳಿಕೊಂಡ. ಅದಕ್ಕೆ ದಯಾಮಿತ್ರನು, "ಮಾತ್ಸರ್ಯವಿಲ್ಲದೆ, ಕೋಪಗೊಳ್ಳದೆ, ಹಟಮಾಡದೆ, ಪೂರ್ವಾಗ್ರಹದಿಂದ ಸಿಟ್ಟು ಮಾಡಿಕೊಳ್ಳದೆ ಒಂದೇ ಮನಸ್ಸಿನಿಂದ ಯಾರು ಪರಮಾರ್ಥದ ಬಗ್ಗೆ ಕೇಳುತ್ತಾರೆಯೋ ಅವರು ಧರ್ಮದ ಒಳಗನ್ನು ಅರಿಯುವರು. ಕನ್ನಡಿಯಲ್ಲಿ ನೋಡಿಕೊಳ್ಳುವವನಿಗೆ ಅವನ ಹಿಂಬದಿ ಕಾಣದು; ಬರಿದೇ ಕೂಗಾಡುವವನು ಸನ್ನುತವಾದ ಸದ್ಧರ್ಮವನ್ನು ಅರಿಯಲಾರ. ಜರಡಿಯ ಹಾಗೆ ಕಸವನ್ನು ಹಿಡಿಯದೆ, ಬಕದಂತೆ ಧೂರ್ತನಾಗದೆ, ಗಿಳಿಯಂತೆ ಹಲವನ್ನು ಒದರದೆ, ಹುಲಿಯಂತೆ ಮೇಲೆ ಹಾಯದೆ ಏಕಚಿತ್ತದಿಂದ ನೀವು ಕೇಳುವಿರಾದರೆ ಆ ಬಗ್ಗೆ ನಾನು ಹೇಳುತ್ತೇನೆ" ಎಂದು ಉತ್ತರಿಸಿದ. ಅದಕ್ಕೆ ವಸುಭೂತಿಯು ಅನ್ಯ ಭಾವನೆಯಿಲ್ಲದೆ ಒಂದೇ ಮನಸ್ಸಿನಿಂದ ಕೇಳುವೆನೆಂದು ಆಶ್ವಾಸನೆಯಿತ್ತ ಮೇಲೆ ಸೆಟ್ಟಿಯು ಸುಖಕ್ಕೆ ಆಗರವಾದ ಸದ್ಧರ್ಮವನ್ನು ಕುರಿತು ಹೇಳತೊಡಗಿದನು.

ಎಲ್ಲರೂ ಸೇರಿ ಕಳ್ಳು ಕುಡಿಯುತ್ತಿರುವಾಗ 'ಧರ್ಮದ ಕಳ್ಳು' ಎಂದು ಬಡವರಿಗೆ ನೀಡುತ್ತಾರೆ; ಅದನ್ನು ಧರ್ಮವೆಂದು ಹೇಳಲಾದೀತೇ? ಪರವನಿತೆಗೆ ಮನಸೋತು ಸಹಿಸಿಕೊಳ್ಳಲಾರದೆ ತನಗೆ ಅನುಕೂಲಕರವಾದುದನ್ನು ಇದೇ ಧರ್ಮ, ಇದಕ್ಕೆ ಸಮಾನವಿಲ್ಲವೆಂದು ತನ್ನ ಕೆಲಸ ಮುಂದುವರೆಸುವುದು ಸದ್ಧರ್ಮವೇ? ಸಹಿಸಲಸಾಧ್ಯವಾದ ರೋಗದಿಂದ ನರಳುವವನು 'ನಿನ್ನ ಧರ್ಮ, ನನ್ನನ್ನು ಕೊಂದುಬಿಡು' ಎಂದು ಹೇಳಿದಾಗ ಇರಿದು ಕೊಲ್ಲುವುದು ಸದ್ಧರ್ಮವೆಂದು ನಂಬಬಹುದೇ? ಕಳವು ಕೊಲೆಗಳು ಪಾಪಕಾರ್ಯಗಳೆಂದು ಜಗತ್ತಿನಲ್ಲಿ ಎಲ್ಲರಿಗೂ ಗೊತ್ತಿರುವಾಗ, ಕೊಳ್ಳೆ ಹೊಡೆದು ತಂದ ಹಣವನ್ನೂ ಬೇಟೆಯಲ್ಲಿ ಪ್ರಾಣಿಗಳನ್ನು ಕೊಂದು ತಂದ ಮಾಂಸವನ್ನೂ ಹಂಚಿಕೊಳ್ಳುವುದೂ ಧರ್ಮವೇ? ಅರಸು ಎಂಬ

ಹೆಸರು ಧಾರುಣೀಶ್ವರನಿಗೆ ಹೇಗೋ ನಾಟಕದ ಅರಸು ಪಾತ್ರಧಾರಿಗೂ ಅದೇ ರೀತಿ ಅನ್ವಯಿಸುತ್ತದೆ. ಹಾಗೆಂದಾಕ್ಷಣ, ಆ ಪಾತ್ರಧಾರಿಗೆ ಆಜ್ಞಾಶಕ್ತಿ ಬಂದು ಬಿಡುತ್ತದೆಯೇ? ಬಿಳಿ ಪುಡಿಯನ್ನು ಹಿಟ್ಟು ಎಂದು ಕರೆದಾಕ್ಷಣ ಅದಕ್ಕೆ ಅಕ್ಕಿಹಿಟ್ಟಿನ ರುಚಿ ಬರುತ್ತದೆಯೇ? ಕಾಡುಕಬ್ಬು ಹೆಸರಿನಿಂದ ಕಬ್ಬು ಎನ್ನಿಸಿಕೊಂಡರೂ ಮೆಲುವ ಕಬ್ಬಾಗಲು ಸಾಧ್ಯವೇ? ಹೊನ್ನು ಎಂಬ ಹೆಸರು ಕನಕಕ್ಕೆ ಹೇಗೋ ಮದ್ದುಗುಣಿಕೆಗೂ ಅನ್ವಯಿಸುತ್ತದೆ; ಅಷ್ಟರಿಂದಲೇ ಅದಕ್ಕೆ ಎಲ್ಲೆಡೆ ಮಾನ್ಯತೆ ದೊರೆಯುತ್ತದೆಯೇ? ಹಾಲು ಎಂಬ ಹೆಸರಿನ ಕಾರಣದಿಂದ ಹಸುವಿನ ಹಾಲಿನ ರುಚಿ ಕಳ್ಳಿ ಹಾಲಿಗೆ ಬಂದುಬಿಡುತ್ತದೆಯೇ? ಹಾಗೆಯೇ ತುಪ್ಪ–ಗೇರುತುಪ್ಪ, ಕುದುರೆ–ಬಿಸಿಲ್ಗುದುರೆಗಳು. ಅಂತೆಯೇ, ಧರ್ಮ ಎಂಬ ಹೆಸರು ಕುಧರ್ಮಕ್ಕೂ ಅನ್ವಯಿಸಿದಾಕ್ಷಣ ಅದು ಸದ್ಧರ್ಮದ ಫಲಗಳನ್ನು ನೀಡಬಲ್ಲದೇ? ಸಾಧ್ಯವಿಲ್ಲ. ಸಾಧಾರಣ ಲೋಹಗಳು ರಸಸಂಸರ್ಗದಿಂದ ಹೊನ್ನಾಗುತ್ತವೆ; ಗೇರುರಸದ ಸಂಸರ್ಗದಿಂದ ಅದು ಸಾಧ್ಯವಾಗದು. ಅಂತೆಯೇ, ಸದ್ಧರ್ಮದಿಂದ ಒದಗುವ ಸುಖವು ಕೊಲ್ಲುವ ಧರ್ಮದಿಂದ ಬರಲು ಸಾಧ್ಯವಾಗದು. ದೆವ್ವದ ಪ್ರಯಾಣದಲ್ಲಿ ತರಗೆಲೆಯೇ ಸಂಗಡಿಗ; ಹಾಗೆಯೇ ಪಾಪಿಗೆ ಕುತ್ಸಿತ ಧರ್ಮವೇ ಸದ್ಧರ್ಮವೆಂಬಂತೆ ಕಾಣುತ್ತದೆ. ಎಲ್ಲ ಬಗೆಯ ಸುಖಗಳನ್ನೂ ಅನುಭವಿಸಬೇಕೆಂಬ ಮನಸ್ಸಿದ್ದರೆ, ಕೊಲ್ಲದ ಧರ್ಮವನ್ನು ಆದರದಿಂದ ನಂಬಿ ಆಶ್ರಯಿಸಬೇಕು.

ಅದು ಜೈನಾಗಮವಲ್ಲದೆ ಬೇರಲ್ಲ. ಅದು ದೋಷರಹಿತನಾದ ಪರಮಾತ್ಮನ ಮುಖಕಮಲದಿಂದ ಹೊಮ್ಮುವಂಥದು. ಸಾವು, ಚಿಂತೆ, ಭಯ, ಮದ, ಕೋಪ, ಮೋಹ, ಖೇದ, ರೋಗ, ಬೆವರು, ಬಾಯಾರಿಕೆ, ದುಃಖ, ಊಟ, ಜನನ, ಲೋಭ, ಆಶ್ಚರ್ಯ, ಕಾಮಬಾಧೆ, ನಿದ್ದೆ – ಇವೆಲ್ಲವನ್ನೂ ಗೆದ್ದವನು ಆ ಜಿನೇಶ್ವರ. ಅವನು ಇಂದ್ರಾರ್ಚಿತಪಾದ; ಅವನೇ ಸೌಖ್ಯಕ್ಕೆ ಕಾರಣ. ಒರಟಾದ ಹವಳದ ಸರವನ್ನು ಹಾಕಿಕೊಳ್ಳುವವರು ಹೆಚ್ಚಾಗಿದ್ದಾರೋ, ಐದೆಳೆ ಮುತ್ತಿನ ಸರವನ್ನು ಹಾಕಿಕೊಳ್ಳುವವರು ಹೆಚ್ಚಿಗೆ ಇರುವರೋ? ತಾಳೆಯ ಓಲೆಯನ್ನು ಧರಿಸುವರು ಹೆಚ್ಚೋ, ಹೊನ್ನ ಓಲೆಯನ್ನು ಧರಿಸುವವರು ಹೆಚ್ಚೋ? ಶ್ರೇಷ್ಠ ರತ್ನಗಳನ್ನು ಅರಿತವರು ಹೆಚ್ಚಿಗೆ ಇರುವರೋ, ಕಲ್ಲು–ಹುಲ್ಲುಗಳನ್ನು ಅರಿತವರು ಹೆಚ್ಚೋ? ಹಾಗೆಯೇ, ಕುತ್ಸಿತ ದೇವರನ್ನು ತಿಳಿಯುವಂತೆ ನರರು ಜಿನನನ್ನು ತಿಳಿಯಬಲ್ಲರೇ? ಆದ್ದರಿಂದ ಸುವಸ್ತುವನ್ನು ಅರಿತವರೂ ಸುವಸ್ತುವನ್ನು ಕೊಡುವವರೂ ಕೆಲವರು ಮಾತ್ರವೇ; ಕುವಸ್ತುವನ್ನು ಅರಿತವರೂ ಕೊಡುವವರೂ ಮಾತ್ರ ಹಲವರು. ಆದರೆ ಸುವಸ್ತುವನ್ನು ವಸ್ತುಪರೀಕ್ಷಕರಿಂದಲ್ಲದೆ ತಿಳಿಯಬರುವುದಿಲ್ಲ; ಕುವಸ್ತುವನ್ನಾದರೆ ನೇಗಿಲು ಹಿಡಿದವರೂ ದನಗಾಹಿಗಳೂ ಅರಿಯುತ್ತಾರೆ. ಸರ್ವಜ್ಞನು ಸುವಸ್ತುವೇ; ಆದ್ದರಿಂದ ವಸ್ತುಪುರುಷರಿಗಲ್ಲದೆ ಅದನ್ನು ತಿಳಿಯಲು ಬಾರದು. ಪರಮಾತ್ಮನು ಪರಮಾರ್ಥ ಮತ್ತು ದೋಷರಹಿತ. ಆತನು ಹೇಳಿದ್ದೇ ಆಗಮ; ಆ ಪರಮಾಗಮದ ಅರ್ಥವೇ ತತ್ವವೆಂಬ ನಂಬಿಕೆಯೇ ಸಮ್ಯಕ್ತ್ವ. ಅದು ಏನು ಮಾಡಿದರೂ ದೊರಕುವಂತಹುದಲ್ಲ; ಪುಣ್ಯದಿಂದ ಮಾತ್ರ ದೊರಕುವಂತಹುದು. ಅದು ದೊರೆತರೆ ಮಾತ್ರ ಅನಂತ ಸುಖ. ಹೀಗೆಂದು ಆ ವಣಿಗ್ವಂಶಲಲಾಮನು ವಿವರಿಸಿದ. ಅದನ್ನು ಕೇಳಿದ ವಸುಭೂತಿಯು ತಾಗಿ ಬಾಗಿದವನಂತೆ ಮೊದಲಿನ ದರ್ಪವನ್ನು ಕಳೆದುಕೊಂಡು ಬಗ್ಗಡವಾದ ನೀರು ತಿಳಿಗೊಂಡ ಹಾಗೆ ಮನಸ್ಸಿನಲ್ಲಿ ನಿರ್ಮಲನಾಗಿ ತನಗೆ ಸಮ್ಯಕ್‌ದರ್ಶನ ವುಂಟಾದುದಕ್ಕೆ ಆನಂದಪಟ್ಟ. ಅದಕ್ಕೆ ಕಾರಣನಾದ ಸಮ್ಯಕ್ತ್ವಚೂಡಾಮಣಿಯಾದ ಸೆಟ್ಟಿಯನ್ನು ನಾನಾ ಬಗೆಯಲ್ಲಿ ಹೊಗಳಿದ. ಅವನು ಮುಂದೆ ದರ್ಶನದಲ್ಲಿ ದೃಢತೆಯನ್ನು ಹೊಂದಿದ.

ಮಾರನೆಯ ದಿನ ವರ್ತಕವಂಶಪವಿತ್ರನಾದ ಸೆಟ್ಟಿಯು ತನ್ನ ಪ್ರಯಾಣವನ್ನು ಮುಂದುವರೆಸಿ, ಸ್ವಲ್ಪ ಕಾಲದ ನಂತರ ನಂದ್ಯಾವಲಿಯೆಂಬ ಹೇರಡವಿಯಲ್ಲಿ ಬೀಡು ಬಿಟ್ಟ. ಅಲ್ಲಿ ಅವನ ಬೀಡಿನ ಮೇಲೆ ವನಚರರು ದಾಳಿ ಮಾಡಿದರು. ಆದರೆ ಸೆಟ್ಟಿಯು ತನ್ನ ಪರಿವಾರದೊಡನೆ ಅವರ ವಿರುದ್ಧ, ಆನೆಗಳ ಸಮೂಹವನ್ನು ಸಿಂಹಗಳ ಗುಂಪು ಎದುರಿಸುವಂತೆ, ಧೈರ್ಯದಿಂದ ಕಿಚ್ಚು ಕಿಡಿಯಾಗಿ ಕಾದ. ಆದರೆ, ಯಾರ ಆಯುಸ್ಸು ಮುಗಿದಿದೆ ಎಂಬುದನ್ನು ಬಾಣವು ಬಲ್ಲುದು ಎಂಬಂತೆ, ದೂರದಲ್ಲಿದ್ದ ವಸುಭೂತಿಯನ್ನು ಹರಿತವಾದ ಒಂದು ಬಾಣವು ಬಂದು ನಾಟಿತು. ಅವನು ನೋವಿನಿಂದ ಉರುಳಿದ. ತನ್ನ

ಸಾಯುವ ಗಳಿಗೆಯನ್ನು ಯಾರು ತಾನೇ ಬಲ್ಲರು? ಆ ಕಡೆ, ಬೇಡರ ಗರ್ವದಗುರ್ವನ್ನು ಕೆಡಿಸಿ ಕಾಳಗದಲ್ಲಿ ಗೆದ್ದ ದಯಾಮಿತ್ರನು ವಾಪಸ್ಸು ಬೀಡಿಗೆ ಬಂದ. ನೋಡಿದರೆ, ಅಲ್ಲಿ ವಸುಭೂತಿಯ ಗಾಯ ಅಗಾಧವಾಗಿದೆ! ಆಗ ಸೆಟ್ಟಿಯು ಧರ್ಮಪಕ್ಷಪಾತದಿಂದ ಅವನಿಗೆ ಸನ್ಯಸನವನ್ನು ಕೊಟ್ಟು, ಪಂಚನಮಸ್ಕಾರವನ್ನು ಹೇಳಲು ತೊಡಗಿದ. ಆಗ ವಸುಭೂತಿಯು ತನಗೆ ಜಿನನೇ ದೈವವೆಂಬ ಭಾವನೆಯಿಂದ ದಯಾಮೂಲವಾದ ಧರ್ಮವನ್ನು ನೆನೆಯುತ್ತಲೇ ಸತ್ತು, ದರ್ಶನಫಲದಿಂದಾಗಿ ಸೌಧರ್ಮಕಲ್ಪದಲ್ಲಿನ ಮಣಿಪ್ರಭಾವಿಮಾನದಲ್ಲಿ ಮಣಿಕುಂಡಲನೆಂಬ ದೇವನಾಗಿ ಹುಟ್ಟಿದ.

ಅಲ್ಲಿ ಅವನನ್ನು ಕುರಿತು ದೇವತೆಗಳ ಗುಂಪು, "ಮಹಾಪ್ರಭುವೇ, ಇದು ನೀನಿರುವ ಶ್ರೇಷ್ಠ ವಿಮಾನ; ನೂತನ ಲಾವಣ್ಯದಿಂದ ಕೂಡಿದ ಈ ದೇವಾಂಗನೆಯರು ನಿನ್ನ ಕಾಂತಾಜನರು; ಈ ವಿಬುಧಾಳಿಯು ನಿನ್ನ ಪರಿವಾರ. ಇವರನ್ನೆಲ್ಲ ಸ್ವೀಕರಿಸಿ ಕಾಪಾಡು, ದೇವಾ" ಎಂದು ಕೇಳಿಕೊಂಡಿತು. ಆ ದೇವನಿಗೆ ವಿಸ್ಮಯವಾಯಿತು. ಈ ನಾರೀಲೋಕ ಯಾವುದು? ಕೇಳಿಕೊಳ್ಳುತ್ತಿರುವ ಪರಿಜನರು ಯಾರು? ಎಂದು ಕುರುಬನು ರಾಜನಾದಂತೆ ಚೋದ್ಯಪಟ್ಟ. ಅಷ್ಟರಲ್ಲಿ ಅವನಿಗೆ ಭವಪ್ರತ್ಯಯಜ್ಞಾನ ಹುಟ್ಟಿತು. ಅದರಿಂದ ತನ್ನ ಹಿಂದಿನ ಜನ್ಮದ ಅರಿವು ಅವನಿಗುಂಟಾಗಿ ಆಶ್ಚರ್ಯಪಟ್ಟು, "ನಾನೆಲ್ಲಿ, ದೇವಲೋಕದ ಅನೂನ ಸುಖಗಳೆಲ್ಲಿ! ಯೋಚಿಸಿದರೆ, ಇದೆಲ್ಲವೂ ಆ ಮಾನ್ಯ ದರ್ಶನದಿಂದ ಉಂಟಾಯಿತು ಎಂಬುದು ವಿದಿತವಾಗುತ್ತದೆ. ಭಾಪು, ಆ ದರ್ಶನವು ಎಷ್ಟು ಹಿರಿದು! ಹುಸಿಯಾಡಿ ವಂಚಿಸಿ ಆ ವೈಶ್ಯನು ಉಪಾಯದಿಂದ ನನಗೆ ದರ್ಶನದ ಬಗ್ಗೆ ಹೇಳಿದ. ಅದರಿಂದಾಗಿ ನಾನು ದೇವನಾದೆ. ಭೂಮಿಯಲ್ಲಿ ಯಾವನಿಗೆ ಸಮ್ಯಕ್‌ದರ್ಶನವುಂಟೋ ಅವನೇ ದೇವ. ಯಾವ ಯಾವುದೋ ಉಪಾಯದಿಂದ ಜೀವರಿಗೆ ಧರ್ಮವನ್ನು ಒಂದೇ ಸಮನೆ ಬೋಧಿಸಿ ಸುಖವುಂಟು ಮಾಡುವ ಶ್ರಾವಕರು ಮತ್ತು ಋಷಿಗಳಿಗಿಂತ ಕೃತಾರ್ಥರು ಬೇರೆ ಯಾರಿದ್ದಾರೆ?" ಎಂದು ಆಲೋಚಿಸಿದ ವಸುಭೂತಿದೇವನು ಬಂದು ದಯಾಮಿತ್ರಸೆಟ್ಟಿಗೆ ನಮಸ್ಕರಿಸಿ, "ನಿನ್ನ ಪ್ರಸಾದದಿಂದ ನಾನು ದೇವನಾದೆ" ಎಂದು ತನ್ನ ಮಹಿಮೆಯನ್ನು ತೋರಿಸಿ ದೇವಲೋಕಕ್ಕೆ ಹೋದ. ಹದಿನಾರು ಕಲ್ಪಗಳ ನಂದೀಶ್ವರ ದ್ವೀಪದ ಮೇರುಗಿರಿಯ ಜ್ಯೋತಿರ್ಲೋಕ ವ್ಯಂತರಲೋಕ ಭವನಲೋಕಗಳ ಮಣಿಕನಕಮಯವಾದ ಕೃತಕ ಚೈತ್ಯಾಲಯಗಳನ್ನು ದರ್ಶನವಿಶುದ್ಧಿಯಿಂದ ಇಂದ್ರಾದಿ ಪಂಚಕದಲ್ಲಿ ಹುಟ್ಟುವ ದೇವರುಗಳನ್ನು ಕಂಡು ಬಲವಾದುದನ್ನು ಕಬ್ಬಿಣದಲ್ಲಿ ಕಟ್ಟಿಸಿದ ಹಾಗೆ ಸಮ್ಯಕ್ತ್ವದಲ್ಲಿ ಮತ್ತಷ್ಟು ದೃಢತೆಯನ್ನು ಹೊಂದಿದ.

"ಎಲ್ಲಿ ಜಿನಭವನವಿದೆಯೋ ಅಲ್ಲಿಯೇ ಮನಸ್ಸಿಗೆ ಹಿತಕರವಾದ ಆನಂದ; ಅಲ್ಲಿಯೇ ಭೋಗದ ನೆಲೆ; ಅಲ್ಲಿಯೇ ಸುರಾಧಿಪನಿಗೆ ಸಂತೋಷ. ಈ ರೀತಿ ದೇವಲೋಕದ ಸುಖವನ್ನು ಒಂದು ಸಾಗರೋಪಮ ಕಾಲ ಅನುಭವಿಸಿ ಬಂದು, ಇಲ್ಲಿ ನಿನಗೂ ನಿನ್ನ ಅಗ್ರಮಹಿಷಿಯಾದ ನಂದಿಶ್ರೀಗೂ ಅಭಯಕುಮಾರನಾಗಿ ಹುಟ್ಟಿ, ಸಮುದ್ರದಂತೆ ಗಂಭೀರನೂ, ಸೂರ್ಯನಂತೆ ತೇಜಸ್ವಿಯೂ, ಚಂದ್ರನಂತೆ ಸೌಮ್ಯನೂ, ಕಾಮನಂತೆ ಸುಂದರನೂ, ಸಕಲಶಾಸ್ತ್ರ ಪ್ರವೀಣನೂ, ಜಾಣನೂ ಆಗಿ ನಿನ್ನ ಕಣ್ಣೆದುರಿಗಿದ್ದಾನೆ. ಮಹಾಮಾಂಡಲಿಕರು ತಪಸ್ಸಿಗೆ ತೊಡಗುವವರೆಂಬುದನ್ನು ಕೇಳಿ ತಾನೂ ತಪಸ್ಸು ಮಾಡಿ ಮರಣಾನಂತರ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟುವನು" ಎಂದು ಗಣಧರ ಸ್ವಾಮಿಗಳು ಕತೆಯನ್ನು ಮುಗಿಸಿದರು. ಅದನ್ನು ಕೇಳಿ ಶ್ರೇಣಿಕನಿಗೆ ಸಮ್ಯಕ್‌ದರ್ಶನದಿಂದಾದ ಪ್ರತ್ಯಕ್ಷಫಲವನ್ನು ಕಂಡು ಅದರಲ್ಲಿ ನಂಬಿಕೆ ಯುಂಟಾಯಿತು. ಕಾಮಾಂತಕನೂ ಶೀಲರತ್ನಾಭರಣನೂ ತ್ರೈವಿದ್ಯ ಚಕ್ರೇಶ್ವರನೂ ವಿಮಲಪದಾಂಭೋಜಭೃಂಗನೂ ಜಿನಶ್ರೀಚರಣಾಲಂಕಾರ ಶೀರ್ಷನೂ ಆದ ಆತನು ತುಂಬ ಸಂತೋಷದಿಂದ ತನಗೆ ಸಕಲ ಸಾಮ್ರಾಜ್ಯವೂ ದೊರಕಿದಂತೆ ನಲಿದನು. *

ನಿಶ್ಶಂಕೆ

ಲಕ್ಷ್ಮಿಗೆ ಕನ್ನಡಿ, ಮುಕ್ತಿಶ್ರೀಗೆ ಲಾವಣ್ಯ ಎನಿಸುವ ದರ್ಶನರತ್ನವು ಬೇಗ ದೊರಕಲು, ಸುಕವಿಸಮೂಹವೆಂಬ ಕೋಗಿಲೆಗೆ ಮಾವಿನಂತಿರುವ ಶ್ರೇಣಿಕ ಮಹಾರಾಜನು ಸಂತಸಗೊಂಡ. ಅನರ್ಘ್ಯವಾದ ದರ್ಶನರತ್ನವನ್ನು ಸಂಶಯವೆಂಬ ಕಳ್ಳರು ಪ್ರವೇಶಿಸದ ಹಾಗೆ ನಂಬಿಕೆಯೆಂಬ ಬಲವಾದ ಕಾವಲಿಟ್ಟು, ಮನಸ್ಸು ಎಂಬ ವಜ್ರದ ಕೋಣೆಯಲ್ಲಿರಿಸಿ ಆ ಮಗಧಾಧಿಪತಿಯು ಮುನೀಂದ್ರವಂದ್ಯರೂ ಜಗತೀಮಂಡನರೂ ಅಗಣಿತಗುಣಗಣರೂ ಆದ ಗೌತಮರಿಗೆ ನಮಸ್ಕರಿಸಿದ. ಆನಂತರ, ನಿಶ್ಶಂಕೆಯ ಕತೆಯನ್ನು ಹೇಳಬೇಕೆಂದು ಅವರನ್ನು ವಿನಯದಿಂದ ಪ್ರಾರ್ಥಿಸಿಕೊಂಡ; ಅವರು ಹೇಳಲು ತೊಡಗಿದರು.

ಅವಳಿಯನ್ನು ಹೆತ್ತವರ ಹಾಗೆ, ಬತ್ತ ಕುಟ್ಟುವವರ ಹಾಗೆ, ಉಳುವವರ ಹಾಗೆ, ಜವಳಿಕದವನ್ನು ಮಾಡುವವರ ಹಾಗೆ, ಅಡ್ಡೆಯನ್ನು ಹೊರುವವರ ಹಾಗೆ ದರ್ಶನ ಹಾಗೂ ನಿಶ್ಶಂಕೆ ಇವೆರಡನ್ನೂ ಚೆನ್ನಾಗಿ ಪಾಲಿಸಬೇಕು. ಶಂಕೆಯನ್ನು ಬಿಟ್ಟು ಮನಸ್ಸಿನಲ್ಲಿ ಕೊಂಕನ್ನು ಹೊಂದದೆ ಮಿಥ್ಯಾತ್ವವೆಂಬ ಹೆಬ್ಬುಲಿಯ ಹಿಂಡನ್ನು ಸೋಕದೆ ಜಿನೇಂದ್ರಪದಯುಗವನ್ನು ಯಾರು ಹಿಡಿಯುತ್ತಾರೆಯೋ ಅವರಿಗೆ ನಿರ್ವೃತಿ ಉಂಟಾಗುತ್ತದೆ. ಅದರ ಮಹಿಮೆ ಎಂತಹುದೆಂದರೆ, ಹೇಳುತ್ತೇನೆ ಕೇಳು.
ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಕಾಶ್ಮೀರವೆಂಬುದು ಒಂದು ದೇಶ. ಅದರಲ್ಲಿ ವಿಜಯಪುರ ಎಂಬುದು ಒಂದು ನಗರ. ಅದು ನಂದನವನಗಳಿಂದಲೂ ತಾವರೆಯ ಕೊಳಗಳಿಂದಲೂ ಉಜ್ವಲವಾದ ಜೈನದೇವಾಲಯಗಳಿಂದಲೂ ಶೋಭಿಸುತ್ತಿತ್ತು. ಅದರ ರಾಜ ಅರಿಮಥನ ಎನ್ನುವವನು. ಅವನಾದರೋ ವೈಭವದಲ್ಲಿ ಇಂದ್ರನಿಗೆ ಸಮನಾದವನು, ಕಾಮನಂತೆ ರೂಪವಂತ, ವೈರಿರಾಜರುಗಳಿಗೆ ಯಮಸದೃಶನಾದವನು; ಎಲ್ಲಕ್ಕಿಂತ ಹೆಚ್ಚಾಗಿ ಜಿನಪಾದಕಮಲಗಳನ್ನು ದುಂಬಿಯಂತೆ ಆಶ್ರಯಿಸಿದವನು. ಅವನ ಪಟ್ಟದರಸಿಯು ಕಮಲಾಕ್ಷಿಯೂ ಜಿನಪಾದಕಮಲದುಂಬಿಯೂ ಚೆಲುವೆಯೂ ಆದ ಸೌಂದರಿ ಎಂಬುವವಳು. ಅರಿಮಥನ–ಸೌಂದರಿಯರಿಗೆ ಒಬ್ಬನೇ ಮಗ ಲಲಿತಾಂಗ. ಆ ಮಗುವು ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಿರುವುದನ್ನು ಕಂಡು ತಾಯ್ತಂದೆಯರಿಗೆ ಅಮಿತಾನಂದ; ಅವನ ಬಗ್ಗೆ ವಿಪರೀತ ವ್ಯಾಮೋಹ. ಹೀಗಾಗಿ ಅವರು ಮಗನ ದುರ್ಜನಿಕೆಯನ್ನು ಕಂಡು ಶಿಕ್ಷಿಸಲಿಲ್ಲ, ದುರ್ಜನಸಂಗವನ್ನು ಬಿಡು ಎಂದು ಕೋಪದಿಂದ ಹೇಳಲಿಲ್ಲ, ಕೆಟ್ಟತನವನ್ನು ಕಂಡು ದಂಡಿಸಲಿಲ್ಲ. ಅದರ ಬದಲು ಮಗನ ಮುದ್ದು ವಿನೋದ ಆಟಗಳನ್ನೂ ಅವನ ಕೆಟ್ಟ ಮಾತುಗಳು ಮತ್ತು ಕೆಟ್ಟ ನಡತೆಯನ್ನೂ ದುಷ್ಟ ಕೆಲಸಗಳನ್ನೂ ಅವನ ವೀರವಿಲಾಸಗಳನ್ನೂ ತಾಯಿತಂದೆಯರು ಮುಗುಳ್ನಗೆಯಿಂದ ನೋಡುತ್ತಿದ್ದರು. ಅವನು ತನ್ನ ಗೆಳೆಯರೊಂದಿಗೆ ಸೇರಿ ಪುರಜನರನ್ನೂ ಪರಿಜನರನ್ನೂ ಅವಮಾನಿಸಿ ಹೊಡೆದಾಗ ಕೂಡ ಅವರು ಅದನ್ನೆಲ್ಲ ನಗುತ್ತಲೇ ಕಾಣುತ್ತಿದ್ದರು. ಬೇವನ್ನು ಹೊದ್ದಿದ ನೀರು ಹೇಗೆ ಕಹಿಯಾಗುವುದೋ ಹಾಗೆಯೇ ಲಲಿತಾಂಗನು ದುರ್ಜನಸಂಗದಿಂದ ಅಂಕುಶವಿರದ ಮದ್ದಾನೆಯಂತೆ ಚಪಲತೆ–ಸೊಕ್ಕುಗಳಿಂದ ಕೂಡಿ ಮೈಮೇಲೆ ಎಚ್ಚರವಿಲ್ಲದೆ ಬೆಳೆದ.

ಅಹಂಕಾರ ಶಕ್ತಿ ಯೌವನಗಳು ಹೆಚ್ಚಿ ಆ ಚಂಚಲಮತಿಯು ಒಂದು ಬಳ್ಳ ತೌಡಿನ ಬೆಲೆಯನ್ನೂ ಕೊಡದೆ ಎಲ್ಲರನ್ನೂ ಬೈಯುತ್ತಿದ್ದ, ಹೊಡೆಯುತ್ತಿದ್ದ. ಜನರ ಎದೆ ನಡುಗುವಂತೆ ಪುಂಡರ ಜೊತೆ ಸೇರಿ, ನಾಯಿ ಹಂದಿ ಮಿಂಡರು ಮತ್ತು ಹೆಂಡಿರು ಪರಸ್ಪರ ಕಚ್ಚಾಡುವಂತೆ ಮಾಡಿ ನಗುತ್ತಿದ್ದ. ಊರಿನ ಸೂಳೆಯರನ್ನೆಲ್ಲ ಹಿಡಿದು ತರಿಸಿ ಯಕ್ಷಿಯ ಮುಂದೆ ರಾತ್ರಿಯೆಲ್ಲ ಜಾಗರಣೆ ಮಾಡಿಸುತ್ತಿದ್ದ ಎಂದರೆ ಅವನ ಸೊಕ್ಕು ಎಂಥದೆಂಬುದನ್ನು ಊಹಿಸಿಕೊಳ್ಳಬಹುದು. ಪುಂಡ ಮಿತ್ರರ ಜೊತೆ ಸೇರಿ ತಿರುಕರನ್ನು ಹಿಡಿದು 'ಸುಂಕ ಕೊಡಿ' ಎಂದು ಸ್ವಲ್ಪವೂ ಹಿಂಜರಿಕೆಯಿಲ್ಲದೆ ಕಾಡುತ್ತಿದ್ದ. ಅವನು ಗಾಣಿಗರ ಕೇರಿಗೆ

ಹೋದರೆ ಗಾಣಿಗರು ಮಂತ್ರವಾದಿಯನ್ನು ಕಂಡ ಗ್ರಹಗಳಂತೆ ತಲ್ಲಣಿಸುತ್ತಿದ್ದರು, ಏಕೆಂದರೆ ಅವರು ಕೊಡಗಳಲ್ಲಿ ತುಂಬಿಟ್ಟಿದ್ದ ಎಣ್ಣೆಯೆಲ್ಲವನ್ನೂ ಸೂರೆಮಾಡಿ ತಂದು ಯಕ್ಷಿಯ ಆಲಯದಲ್ಲಿ ಬೆಳಗಿನವರೆಗೂ ದೀಪ ಉರಿಸಲು ಬಳಸುತ್ತಿದ್ದ. ಹಾಗೆಯೇ ಕಾಗೆಯನ್ನು ಕಂಡ ಕೋಗಿಲೆಗಳು ದೆಸೆಗೆಟ್ಟು ಹಾರುವ ಹಾಗೆ ಅವನನ್ನು ಕಂಡು ಮಾಲೆಗಾರರು ಬೆಚ್ಚುತ್ತಿದ್ದರು. ಅವನು ಹೂವಿನ ಸಂತೆಯನ್ನು ಹೊಕ್ಕು ಸುರಗಿ ಮಲ್ಲಿಗೆ ಜಾಜಿ ಸಂಪಗೆ ಮೊಲ್ಲೆ ಕೇದಗೆ ಪಾದರಿ ಮುಂತಾದ ಹೂಗಳನ್ನು ಸೂರೆ ಮಾಡಿ ತಾನೂ ಗೆಳೆಯರೂ ಮುಡಿದುಕೊಂಡು ತಮಾಷೆಯಿಂದ ಕರುಳು ಹರಿಯುವಂತೆ ನಗುತ್ತಿದ್ದರು. ಕಂಚುಗಾರರು ಇವನನ್ನು ಕಂಡು ಹುಲಿಯನ್ನು ಕಂಡ ಹುಲ್ಲೆಯ ಹಿಂಡಿನಂತೆ ಭಯದಿಂದ ತತ್ತರಿಸುತ್ತಿದ್ದರು. ತಟ್ಟೆ, ಕನ್ನಡಿ, ಬಟ್ಟಲು, ಕಂಚಿನ ಸೌಟು, ತೆರುವಟ್ಟಲು, ಕೈತಟ್ಟೆ, ಗಿಂಡಿ, ಒಳಲೆ ಮುಂತಾದವನ್ನು ಅವರಿಂದ ಕಸಿದುಕೊಂಡು ತನ್ನ ಜೊತೆಗಾರರಿಗೆ ರಾಜಕುಮಾರನು ಉಡುಗೊರೆಯಂತೆ ದಿನವೂ ಹಂಚುತ್ತಿದ್ದ. ಇವನನ್ನು ಕಂಡ ಜನರು ಹೆದರಿಕೆಯಿಂದ ನಿಂತ ಕಡೆಯಿಂದ ಓಡಿದರೆ ನಿಷ್ಕರುಣೆಯಿಂದ ಅವರನ್ನು ಬೆನ್ನು ಹತ್ತಿ, ಹೆಂಡವಿಳಿಸುವವರ ಕೇರಿಯಲ್ಲಿ ನುಗ್ಗಿ ಇದ್ದ ಕಳ್ಳೆಲ್ಲವನ್ನೂ ತರಿಸಿ, ಊರ ಹೊರಗಿನ ಉದ್ಯಾನವನಕ್ಕೆ ಹೊರಿಸಿಕೊಂಡು ಹೋಗಿ ಅಲ್ಲಿ ಕಳ್ಳರಿಗೂ ಧೂರ್ತರಿಗೂ ಬಿಲ್ಲರಿಗೂ ಸೂರೆಗೊಡುತ್ತಿದ್ದ. ಇದು ಅವನ ವಿನೋದದ ಪರಿ.

ತನ್ನ ಮನಸ್ಸಿಗೆ ಬಂದ ಗೊಡ್ಡಾಟವನ್ನು ಆಡುತ್ತಿದ್ದ ರೀತಿಯೆಂದರೆ, ದುರ್ಜನರಿಂದ ಸುತ್ತುವರಿದ ಲಲಿತಾಂಗನು ಶ್ರೇಷ್ಠ ಆಭರಣಗಳನ್ನು ದಾಸಿಯರಿಗೆ ತೊಡಿಸುತ್ತಿದ್ದ, ಕುಲೀನ ಮಹಿಳೆಯರನ್ನು ಹಿಡಿತರಿಸಿ ಅವರಿಂದ ನೀರು ಹೊರಿಸುತ್ತಿದ್ದ. ಸುಂದರವಾದ ಸರೋವರಗಳಲ್ಲಿಯೂ ಶೋಭಿಸುವ ಮಹೋದ್ಯಾನ ಗಳಲ್ಲಿಯೂ ರಮ್ಯವಾದ ವನಗಳಲ್ಲಿಯೂ ಊರ ಸೂಳೆಯರ ಜೊತೆಗೆ ಮನಸ್ಸಿಗೆ ಬಂದ ಹಾಗೆ ಕ್ರೀಡಿಸುತ್ತಿದ್ದ. ಅವನಿಗೆ ಧೂರ್ತವಿನೋದವೇ ವಿನೋದವಾದ್ದರಿಂದ ದುಷ್ಟರಿಂದ ಪರಿವೃತನಾಗಿ ಅಂಗಡಿಗೆ ಬಂದರೆ ವ್ಯಾಪಾರಿಗಳು ತೋಳವನ್ನು ಕಂಡ ಕುರಿಯ ಹಿಂಡಿನಂತೆ ಬೆದರುತ್ತಿದ್ದರು. ಅವರೆಲ್ಲ ಒಟ್ಟಾಗಿ ಸೇರಿ ಜೋರಾಗಿ ಕೂಗುತ್ತ ಜನರು ಧರಿಸಿದ್ದ ಒಳ್ಳೆಯ ಬಟ್ಟೆಗಳನ್ನು ಸೆಳೆದುಕೊಂಡು ಯಾರಿಗೋ ಕೊಟ್ಟುಬಿಡುತ್ತಿದ್ದ. ತಾನೂ ಉಣ್ಣ ಪರರಿಗೂ ಕೊಡ ಎಂಬ ಹೇನಿನ ಹೊದಿಕೆಯಂತಹ ಜಿಪುಣರ ಹಣವನ್ನು ಕಿತ್ತುಕೊಂಡು ಯಾರು ಯಾರಿಗೋ ತ್ಯಾಗ ಹಾಕಿಬಿಡುತ್ತಿದ್ದ. ಮಣಿಗಾರರ ಅಂಗಡಿಯನ್ನು ಹೊಕ್ಕು, ಓಡಲಾರದೆ ಕೈಮುಗಿದು ನಿಂತ ಜನರನ್ನೂ ಲೆಕ್ಕಿಸದೆ, ಸ್ವಲ್ಪವಾದರೂ ಕರುಣೆ-ಹೇವರಿಕೆಗಳಿಲ್ಲದೆ, ಬರಬಹುದಾದ ಕೆಟ್ಟ ಹೆಸರಿಗೆ ಅಂಜದೆ ತಕ್ಕಿನ ಹವಳ, ಶಂಖು, ಟಕ್ಕೆಯ ಮಣಿಗಳನ್ನು ಕಿತ್ತುಕೊಳ್ಳುತ್ತಿದ್ದ. ತನ್ನ ಪುಂಡಪಾಳೆಯದೊಂದಿಗೆ ಭಯಂಕರವಾಗಿ ಗಲಾಟೆ ಮಾಡುತ್ತ ಅಗಸರ ಹೊಳೆಯನ್ನು ಹೊಕ್ಕು, ಅವರು 'ಓ ಓ' ಎಂದು ಕೂಗಿಡುತ್ತಿದ್ದರೂ ಗಮನಿಸದೆ, ಬಟ್ಟೆಯ ರಾಶಿಯನ್ನೆಲ್ಲ ತೆಗೆದುಕೊಂಡು ಕೊಂಚವೂ ಹಿಂಜರಿಕೆಯಿಲ್ಲದೆ ಅವನ್ನು ತೊಟ್ಟುಕೊಳ್ಳುತ್ತಿದ್ದ. ತಮ್ಮ ಕಾಮವನ್ನು ತೀರಿಸಿಕೊಳ್ಳಲು ಸೂಳೆಯರ ಸಂಗದಲ್ಲಿದ್ದ ಗಂಡಸರನ್ನು ಅಟ್ಟಿಸಿಕೊಂಡು ಹೋಗಿ ಹೊಡೆದು, ಎದುರಾದವರನ್ನು ಹಿಮ್ಮೆಟ್ಟಿಸಿ, ಆ ಸೂಳೆಯರೊಡನೆ ಬಲವಂತವಾಗಿ ನೆರೆಯುತ್ತಿದ್ದ.

ಅಲ್ಲದೆ, ಕೆರಳಿದ ಸಿಂಹಗಳಂತೆ ರಾಜಕುಮಾರನ ತಂಡವು ಸುತ್ತಿಕೊಂಡು ಬರುವಾಗ ಊರಿನ ಜನ ನಿಂತಿದ್ದವರು ನಿಂತಲ್ಲಿಯೇ, ಕುಳಿತವರು ಕುಳಿತಲ್ಲಿಯೇ ನಡುಗುತ್ತ ಇರುವರು. ತಂಡವು ಸೂಳೆಗೇರಿಯನ್ನು ಹೊಕ್ಕು ಗದ್ದಲವೆಬ್ಬಿಸಿ ವಿಟರನ್ನು ಓಡಿಸುವರು. ಆ ಸುಂದರಿಯರು ಒಲ್ಲದ ವಿಟರನ್ನು ಕೂಡುವಂತೆ ಬಲವಂತ ಮಾಡುವನು. ಈ ಕೇರಿಯ ಬೆಲೆವೆಣ್ಣುಗಳನ್ನು ಆ ಕೇರಿಯವರೊಡನೆಯೂ, ಆ ಕೇರಿಯವರನ್ನು ಈ ಕೇರಿವರೊಡನೆಯೂ ಸೇರುವಂತೆ ನಿರ್ಬಂಧಿಸುವನು. ಆ ದುಷ್ಟನು ವಿಟಸಂಕುಲವನ್ನು ಒಬ್ಬರೊಬ್ಬರ ತಲೆಗೆ ಗಟ್ಟಿಸುವಂತೆ ಮಾಡುವನು; ಒಬ್ಬರು ಇನ್ನೊಬ್ಬರನ್ನು ಇರಿಯುವಂತೆ ಮಾಡುವನು; ತಾನೂ ಅವರನ್ನು ಅಟ್ಟಿಸಿಕೊಂಡು ಹೋಗಿ ನಗುವನು. ಹಾಗೆ ಉಕ್ಕಿ ಸೊಕ್ಕಿ ಧೂರ್ತತನದಿಂದ ಸೂಳೆಗೇರಿಯನ್ನು ಹೊಕ್ಕು ಮಾಡುವ ಅಬ್ಬರವು ಹೆಚ್ಚಾಗಲು ಕೊನೆಯ ಮನೆಯ ಕುಂಟಣಿಯೊಬ್ಬಳು ಮಲಗುವ

ಮನೆಯನ್ನು ಸೇರಿ, ಗಾಬರಿಯಾಗಿ ಆತುರದಿಂದ ಮಗಳೆಂದು ಅಳಿಯನನ್ನು ತಬ್ಬಿಕೊಂಡು ಹಿತ್ತಿಲ ಬಾಗಿಲಿಂದ ಜೋರಾಗಿ ಓಡಿ ಎಂಜಲ ಗುಂಡಿಯಲ್ಲಿ ಬಿದ್ದಳು. ಮತ್ತೊಂದು ಕಡೆ, ಒಬ್ಬ ಅಂಜುಬುರುಕ ವಿಟನು ದೂರದಿಂದಲೇ ಅಬ್ಬರವನ್ನು ಕೇಳಿ ಸೂಳೆಯ ಮಗ್ಗುಲಿನಿಂದ ಎದ್ದು ಓಡುವಾಗ ಸ್ಫಟಿಕದ ಕಂಬದಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಲಲಿತಾಂಗನೆಂದು ಗೊಂದಲಗೊಂಡು, "ರಾಜನೇ, ಮತ್ತೆ ಈ ಕಡೆ ಬಂದರೆ ನಿನ್ನಾಣೆ, ಮರೆತು ಬಂದರೂ ನನ್ನನ್ನು ಕೊಲ್ಲು. ಇದೊಂದು ಬಾರಿ ಕ್ಷಮಿಸು" ಎಂದು ನಮಸ್ಕರಿಸಿದ. ಮತ್ತೊಂದೆಡೆಯಲ್ಲಿ, ಒಬ್ಬನು ದೂರದಿಂದ ಪ್ರಯಾಣ ಬಂದು ತುಂಬ ಬಳಲಿಕೆಯಿಂದ ತನ್ನ ಹೆಂಡತಿಯ ಜೊತೆಯಲ್ಲಿ ನಿದ್ದೆ ಮಾಡುತ್ತಿದ್ದ. ನೆರೆಮನೆಯಲ್ಲಿ ಲಲಿತಾಂಗನು ಮಾಡಿದ ಸದ್ದಿನಿಂದ ಹೆಂಡತಿಯ ಎಚ್ಚರಗೊಂಡು, ಏನಾಗುತ್ತಿದೆಯೋ ನೋಡೋಣವೆಂದು ಹೊರಗೆ ಬಂದು ಮತ್ತೆ ಮಲಗುವ ಮನೆಗೆ ವಾಪಸಾಗಲು ನಿದ್ದೆಗಣ್ಣಿನಿಂದ ತಡವರಿಸುತ್ತಿರಲು ಗಂಡನೂ ಎಚ್ಚರಗೊಂಡು ಕಳ್ಳನೆಂದು ತಿಳಿದು ಹೆಂಡತಿಯ ಮುಂದಲೆಯನ್ನು ಹಿಡಿದುಕೊಂಡು, "ನಾನು ಇರುವ ಜಾಗವೆಂದರೆ ಹುಲಿಯಿರುವ ಮೆಳೆಯೇ ಸರಿ. ತಿಳಿಯದೆ ನೀನು ಇಲ್ಲಿಗೆ ಬಂದಿರುವೆ. ಇವತ್ತು ನಿನಗೆ ಸಾವೇ ಗತಿ" ಎಂದು ಅವಳ ಮುಖಕ್ಕೆ ಜೋರಾಗಿ ಹೊಡೆದ!

ಮತ್ತೂ ಒಂದೆಡೆಯಲ್ಲಿ ಒಬ್ಬರ ಮನೆಯ ದಾಸಿಯು, "ಲಲಿತಾಂಗನು ಬಂದಿದ್ದಾನೆ. ಅವನ ಕಾಟ ಹಿಂಗುವವರೆಗೂ ನೆರೆಮನೆಯಲ್ಲಿದ್ದು ಬರೋಣ, ಏಳಿ" ಎಂದು ತನ್ನ ಕಿವುಡು ಯಜಮಾನಿತಿಗೆ ಪಿಸುಮಾತಿನಿಂದ ಹೇಳಲು, ಅವಳು ಮುನಿಸಿಕೊಂಡು, "ತಪ್ಪನ್ನಾಗಲೀ ಕಳವನ್ನಾಗಲೀ ಮಾಡದಿದ್ದಾಗ ರಾಜನು ಸುಮ್ಮ ಸುಮ್ಮನೆ ನಮ್ಮನ್ನು ಏತಕ್ಕೆ ಸೆರೆ ಹಿಡಿಯುತ್ತಾನೆ? ನೀನು ತೆಪ್ಪಗಿರೇ" ಎಂದು ಬೈದಳು. ಇನ್ನೊಂದು ಕಡೆ, ಲಲಿತಾಂಗನು ಬರುತ್ತಿರುವುದನ್ನು ಕಂಡ ಒಬ್ಬಳು ಸೂಳೆಯರಾದ ತನ್ನ ಮಕ್ಕಳ ಬಳಿ ಓಡಿ ಬಂದು ಈ ವಿಷಯವನ್ನು ಹೇಳಿದಾಗ, ಅವಳು ಏನೋ ಬೈಯುತ್ತಿದ್ದಾಳೆಂದು ತಿಳಿದು ಕಿವುಡಿಯರಾದ ಅವರು ತಾಯಿಯನ್ನು ಕೋಪದಿಂದ ಹೊರಗೆ ದಬ್ಬಿದರು. ಮತ್ತೂ ಒಂದು ಕಡೆ ಒಬ್ಬ ಮುದಿಗುಂಟಣಿಯು ಹೊರಗೆ ನಿಂತಿದ್ದವಳು ದೂರದಿಂದಲೇ ಲಲಿತಾಂಗನ ಬರವನ್ನು ಕಂಡು ಸರಸರ ಒಳಗೆ ಬಂದು ಮಗಳಿಗೆ ಹೇಳಿದಾಗ, ಸರಿಯಾಗಿ ಕೇಳಿಸಿಕೊಳ್ಳದೆ ಅವಳು ಮುಂಚೆ ಹೇಳಿದ್ದ ಮುದಿವಿಟನನ್ನು ಕೂಡಲು ಮತ್ತೆ ಹೇಳುತ್ತಿದ್ದಾಳೆಂದು ಉರಿದು ಬಿದ್ದು, "ಗೊರಕೆ, ನಿಟ್ಟುಸಿರು, ಸೀನು ಇವುಗಳ ಶಬ್ದದಿಂದ ನಿದ್ದೆಯನ್ನು ಕೆಡಿಸುವ ಮುದಿಯನನ್ನು ಖಂಡಿತ ಒಲ್ಲೆ" ಎನ್ನಲು, ಕಡುಧೂರ್ತೆಯೆಂದು ಅವಳ ಮುಖಕ್ಕೆ ಹೊಡೆದಳು.

ಒಂದು ಅಗಸರ ಹೊಳೆಯಲ್ಲಿ ಕುರುಡ ಅಗಸನ ಹೆಂಡತಿಯು ಲಲಿತಾಂಗನು ಬಂದನೆಂದು ಹೇಳಲು, ಅವನು ಅಲ್ಲಿಗೇ ಬಂದನೆಂದು ಭಾವಿಸಿ ಗಾಬರಿಯಿಂದ ತಡವರಿಸುತ್ತ ನಿದ್ದೆ ಮಾಡುತ್ತಿದ್ದ ಒಂದು ನಾಯನ್ನು ತುಳಿದುಬಿಟ್ಟ. ಅದು ಅವನನ್ನು ಕಚ್ಚಿದಾಗ, ಲಲಿತಾಂಗನೇ ತನಗೆ ತಿವಿದನೆಂದು ಬಗೆದು ಕುರುಡನು ಓಡುವುದನ್ನು ಕಂಡು ಮತ್ತೊಬ್ಬನು ಅದನ್ನು ನಿಜವೆಂದು ತಿಳಿದು ಭಯದಿಂದ ಓಡುತ್ತಿದ್ದಾಗ ಕಾಡಿನ ಮರದ ಡೊಂಕಾದ ರೆಂಬೆಯೊಂದಕ್ಕೆ ಅವನ ಕೂದಲು ಸಿಕ್ಕಿಹಾಕಿಕೊಂಡಿತು. ಅವನು ಹಿಂದೆ ನೋಡಲೂ ಆರದೆ ಭಯದಿಂದ, "ನಿನ್ನ ದಮ್ಮಯ್ಯ, ನನ್ನನ್ನು ಬಿಟ್ಟುಬಿಡು. ಇನ್ನೊಂದು ಸಲ ಮಾತಾಡುವುದಿಲ್ಲ. ನನಗೆ ಎಂಟು ಮಂದಿ ಮಕ್ಕಳಿವೆ; ನಾನು ಸತ್ತರೆ ಅವರನ್ನು ಸಲಹುವವರಿಲ್ಲ; ನಾನು ಪರದೇಸಿ" ಎಂದು ಹಲುಬಿದ.

ಈ ರೀತಿ ಉರಿಯುತ್ತಿದ್ದ ಲಲಿತಾಂಗನ ಹೊಲ್ಲಮೆಯನ್ನು ಕಂಡು ಬುದ್ಧಿವಂತರು ಈ ಬಗೆಯಾಗಿ ಮಾತಾಡಿಕೊಳ್ಳುತ್ತಿದ್ದರು: "ರಾಜನ ಮಗನ ಸೊಕ್ಕಿನಿಂದಾಗಿ ರಾಜ್ಯವು ಉರಿದರೆ, ಆನೆಯು ಮದದಿಂದ ಕೊಲ್ಲಲು ಬಂದರೆ, ಬೆಂಕಿ ಸುಡತೊಡಗಿದರೆ ಅವನ್ನು ಎದುರಿಸಿ ನಿಲ್ಲಿಸುವವರಾರು?" ಕೆಲವರು ವಿವೇಕಿಗಳು ಹೀಗನ್ನುತ್ತಿದ್ದರು: "ರಾಜನು ಮಗನೆಂದು ಅವನ ತಪ್ಪುಗಳನ್ನು ಸಹಿಸಿಕೊಳ್ಳುತ್ತಿದ್ದಾನೆ. ಅವನೋ ತುಪ್ಪದ ಪಾತ್ರೆಯ ಮೇಲಿನ ಇಲಿ. ಅಂಥವನ ಕೊಬ್ಬಿನಿಂದ ಅಂಜದವರು ರಾಜ್ಯದಲ್ಲಿ ಯಾರಿದ್ದಾರೆ?"

ಹೀಗೆ ರಾಜ್ಯವೆಲ್ಲ ಅಲ್ಲೋಲಕಲ್ಲೋಲವಾಯಿತು; ಜನರಿಗೆ ಕನಸಿನಲ್ಲೂ ಲಲಿತಾಂಗನ ಭಯ ತೀವ್ರವಾಯಿತು. ಬೆಟ್ಟಗಳ ನಡುವೆ ಹರಿಯುವ ನದಿಯಂತೆ, ಮೂಗುಬಾಯಿಗಳನ್ನು ಹಿಡಿದೊತ್ತಿದಂತೆ ಜನರು ಆತಂಕಗೊಂಡರು. ಕೊನೆಗೆ ಅವರೆಲ್ಲ ಒಟ್ಟಾಗಿ ರಾಜಮಂದಿರದ ಬಳಿ ಬಂದು ಹುಯ್ಯಲಿಟ್ಟರು. ಓಲಗದಲ್ಲಿದ್ದ ಅರಿಮಥನ ಮಹಾರಾಜನಿಗೆ ಆ ಹುಯ್ಯಲು ಕೇಳಿಸಿತು; ಎಲ್ಲರನ್ನೂ ಒಳಗೆ ಬರಮಾಡಿಕೊಂಡು ವಿಷಯವೇನೆಂದು ವಿಚಾರಿಸಿದ. ರಾಜನಿಗೆ ಕೈಮುಗಿದು ಜನ ಹೀಗೆಂದರು: "ದೇವ, ತಮ್ಮ ಮಗ ತನ್ನ ಪುಂಡರ ಬಳಗದೊಂದಿಗೆ ಎಲ್ಲೆಂದರಲ್ಲಿ ನುಗ್ಗಿ, ಓ ಓ ಎಂದು ಕೂಗಿಕೊಂಡರೂ ಲೆಕ್ಕಿಸದೆ ಹಗಲಿರುಳು ನಮ್ಮನ್ನು ಕಾಡುಕಿಚ್ಚಿನ ಹಾಗೆ ಸುಡುತ್ತಿದ್ದಾನೆ. ತಮ್ಮ ಕುಮಾರನಿಂದ ಊರಿನಲ್ಲಾಗುತ್ತಿರುವ ಮಹಾ ದಾಂಧಲೆಯೆಂತಹುದೆಂದರೆ, ಲಲಿತಾಂಗ ಹೊರಟ ಎಂದು ಕೇಳಿದರೆ ಸಾಕು, ಜನ ದಿಕ್ಕುಗೆಟ್ಟು ಓಡುತ್ತಾರೆ; ಇಬ್ಬರು ಒಂದು ಜಾಗದಲ್ಲಿ ನಿಂತು ಮಾತಾಡಲೂ ಹೆದರುತ್ತಾರೆ; ವಿಟರು ತಮ್ಮ ನೆಚ್ಚಿನ ಬೆಲೆವೆಂಡಿರ ಜೊತೆ ನುಡಿಯಲೂ ಬೆಚ್ಚುತ್ತಾರೆ; ಜನ ವೀರಗಾಥೆಯನ್ನು ಹಾಡಿಸಲೂ ಹೆದರುತ್ತಾರೆ; ಭಟರು ತಮ್ಮ ಜಾಗವನ್ನು ಬಿಟ್ಟು ಹೋಗಲೂ ಆರರು. ಆತನು ಮಾಡುವ ಅನಾಚಾರಗಳನ್ನು ಏನೆಂದು ಹೇಳುವುದು? ಅಂಬಲಿಯನ್ನು ಮಟ್ಟೆಗಟ್ಟುವ ಹಾಗೆ ತಂಬುಲಿಗರನ್ನು ಕೋಡಗಗಟ್ಟಿ ಕಾಡುತ್ತಾನೆ; ಚೆನ್ನಿಗರನ್ನು ಹೊಡೆದು ಬಾಯಿ ಬಿಡಿಸಿ ಮಣ್ಣು ಹೊಯ್ಯಿಸುತ್ತಾನೆ; ಹೀಗಲ್ಲದೆ ಮದ ಇಳಿಯದೆಂದು ಕೊಬ್ಬಿದವರನ್ನು ಸಾಯ ಬಡಿಯುತ್ತಾನೆ; ಬಿರುದರಿಗೆ ಅಸಾಧ್ಯವೆನ್ನಿಸುವ ಬಾಧೆ ನೀಡುತ್ತಾನೆ; ವೀರರ ಹಣದ ಹಡಪವನ್ನು ಕಿತ್ತುಕೊಳ್ಳುತ್ತಾನೆ; ವಿಟರನ್ನು ಪೀಡಿಸುತ್ತಾನೆ; ಶೂರರನ್ನು ಕೊಂಡಾಡುವವರಿಗೆ ನೇಣಿಕ್ಕಿಸುತ್ತಾನೆ, ತಲೆ ಮಟ್ಟಿಸುತ್ತಾನೆ; ತಿಳಿದವರನ್ನು ಸಾವಲ್ಲದ ಕೊಲೆಯಿಂದ ಬಾಧಿಸುತ್ತಾನೆ. ಅಷ್ಟೂ ಅಲ್ಲದೆ ತನ್ನ ಮರುಳಂತಹ ಪುಂಡುಪಡೆಯೊಂದಿಗೆ ಕೇರಿಕೇರಿಗಳಲ್ಲಿ ಕೂಗಾಡುತ್ತ ಸೊಕ್ಕಿನಿಂದ ಹುಲ್ಲನ್ನು ಉರಿಸುತ್ತ ಬಡಿಸುತ್ತ ಇರುವುದೇ ಅವ£ ಸಂತೋಷದ ರೀತಿ. ಕುಮಾರನು ಉಂಟುಮಾಡುವ ಭಯದ ಸ್ವರೂಪವೆಂದರೆ, ಹಾರುವರು ಕಾಪಾಡುವವರಿಲ್ಲದಂತೆ ನಡುಗುತ್ತಾರೆ; ಹರದರು ದರಿಯ ಮೇಲಣ ಮರದಂತೆ ನಡುಗುತ್ತಾರೆ; ಬಟ್ಟೆ ವ್ಯಾಪಾರಿಗಳು ದೇಸಿಗರಂತೆ ಭಯಗೊಳ್ಳುತ್ತಾರೆ; ಬಳೆಗಾರರು ದಿಕ್ಕುಗೆಟ್ಟ ಕುದುರೆಯಂತೆ ನಿಲ್ಲುತ್ತಾರೆ; ರಾಜಕುಮಾರರು ಊಟಮಾಡದವರಂತೆ ಬಡಕಲಾಗುತ್ತಾರೆ; ಒಕ್ಕಲಿಗರು ಸಾಕ್ಷಿಯಿಲ್ಲದೆ ಸಾಲ ಕೊಟ್ಟವರಂತೆ ಬೆರಗಾಗುತ್ತಾರೆ; ಬಂಟರು ನಂಟರನ್ನು ಕಂಡ ಹಾಗೆ ಮನೆಯೊಳಗೆ ಸೇರಿಕೊಳ್ಳುತ್ತಾರೆ; ಬಿರುದರು ಆನೆಗಿಕ್ಕಿಸಿದ ಕಳ್ಳರಂತೆ ಎದೆಗೆಡುತ್ತಾರೆ; ಗಾಣಿಗರು ಬಿಲ್ಲು ಕಂಡ ಕಾಗೆಗಳಂತೆ ಓಡುತ್ತಾರೆ; ಸೂಳೆಯರು ಗಾಳಕ್ಕೆ ಸಿಕ್ಕಿದ ಮೀನುಗಳಂತೆ ಧೈರ್ಯಗೆಡುತ್ತಾರೆ; ಮಣಿಗಾರರು ಗುಣಗೆಟ್ಟ ಋಷಿಗಳಂತೆ ಚಿಂತೆಗೊಳಗಾಗುತ್ತಾರೆ; ಕುಂಬಾರರು ಸಂಬಳವಿಲ್ಲದ ಸೈನಿಕನಂತೆ ಬೆಚ್ಚುತ್ತಾರೆ; ಅಗಸರು ದೆಸೆಗೆಟ್ಟವರಂತೆ ಗೋಳಾಡುತ್ತಾರೆ; ಬೇಡರು ಬೀಡುಗಳನ್ನು ಬಿಟ್ಟು ಓಡುತ್ತಾರೆ; ಕೆಲಸಗಾರರು ಶಕ್ತಿಹೀನರಂತೆ ಇರುತ್ತಾರೆ; ಧೂರ್ತರು ಸೂರ್ಯನನ್ನು ಕಂಡ ಮಂಜಿನಂತೆ ಕಣ್ಮರೆಯಾಗುತ್ತಾರೆ; ಹುಡುಗರು ಬೆಂಕಿ ಮುಟ್ಟಿದ ತುಪ್ಪದ ಹಾಗೆ ಶಕ್ತಿಗುಂದುತ್ತಾರೆ; ದಂತಿಗರು ಸಂತತಿಗೆಟ್ಟವರಂತೆ ಅಳುತ್ತಾರೆ; ತಂಬುಲಿಗರು ನಂಬಿಕೆಗೆಟ್ಟವರಂತೆ ಪಕ್ಕಕ್ಕೆ ಸರಿಯುತ್ತಾರೆ; ಕಂಚುಕಿಯರು ಗಟ್ಟಿಯಾದ ಅಂಬಲಿಯಂತೆ ನೆಲ ಹತ್ತುತ್ತಾರೆ; ಹೀಗೆ ಅರಸು ಕುವರನು ಸರ್ವಾಂಗದ್ರೋಹರನ್ನು ದೋಚುವಂತೆ ಸರ್ವಸ್ವವನ್ನೂ ಅಪಹರಿಸಿ ತನ್ನ ಜೊತೆಗಿನ ನೀಚರಿಗೂ ಮೋಸಗಾರರಿಗೂ ಧೂರ್ತರಿಗೂ ಅತಿಚಪಲರಿಗೂ ಸುಳ್ಳುಗಾರರಿಗೂ ಕೊಟ್ಟುಬಿಡುತ್ತಾನೆ. ಮಹಾರಾಜರೇ, ರಾಜಕುಮಾರನು ಜನರನ್ನು ಕಂಡು ಸೂರೆಮಾಡೆಂದು ಹೇಳುತ್ತ, ಹಿಡಿಬಡಿ ಎನ್ನುತ್ತ, ಕಾಡಿ ಹೊಡೆಯುತ್ತ, ಕೊಲ್ಲು ಕಿತ್ತುಕೋ ಎಂದು ಹೇಳುತ್ತ ಗೋಳು ಹುಯ್ದುಕೊಳ್ಳುತ್ತಾನೆ. ಊರಿನ ಪ್ರಜೆಗಳೆಲ್ಲ ಕುಮಾರನ ಆಟಮಾಟಗಳನ್ನು ಎದುರಿಸಲಾಗಲೀ ನಿವಾರಿಸಲಾಗಲೀ ಸಾಧ್ಯವಿಲ್ಲವಾಗಿದೆ. ನಾವೇನು ಮಾಡಬೇಕೆಂಬುದನ್ನು ಬೆಸಸಬೇಕು, ಸ್ವಾಮಿ" ಎಂದು ಕೇಳಿಕೊಂಡರು. ಇದನ್ನೆಲ್ಲ ಕೇಳಿ ಮಹಾರಾಜನಿಗೆ ಮಗನ ಮೇಲೆ ವಿಪರೀತ ಕೋಪ ಬಂತು. ಅಲೆಗಳಿಂದ ಕೂಡಿದ ಕಡಲ ಮೊಳಗಿನಂತೆ ಅವನು ಹೀಗೆಂದನು: "ನೀವು ಇದನ್ನೆಲ್ಲ ಮುಂಚೆ ನನಗೆ ಏಕೆ ಹೇಳಲಿಲ್ಲ? ಈ ವಿಷಯ ನನಗೆ ತಿಳಿಯದು. ಈ ಬಗ್ಗೆ ನೀವು ಇನ್ನು ಮೇಲೆ ಸ್ವಲ್ಪವೂ ಯೋಚಿಸಬೇಡಿ;

ನೆಮ್ಮದಿಯಿಂದಿರಿ. ಇದನ್ನೆಲ್ಲ ನಾನು ಅತಿಶಯವೆಂದು ತಿಳಿಯುವುದಿಲ್ಲ." ಹೀಗೆಂದು ಅರಿಮಥನ ಮಹಾರಾಜನು ಹಿರಿಕಿರಿಯರೆಲ್ಲರಿಗೂ ಕರ್ಪುರವೀಳೆಯವನ್ನಿತ್ತು ಮನ್ನಣೆ ಮಾಡಿ ಕಳಿಸಿಕೊಟ್ಟ.

ಆನಂತರ ಪ್ರಧಾನರಿಗೂ ಸೌಂದರಿ ಮಹಾದೇವಿಗೂ ಹೇಳಿ ಕಳಿಸಿದ. "ದುಶ್ಶಾಸನ ಶಕುನಿ ಕರ್ಣರೊಡನೆ ಸೇರಿದುದರಿಂದ ಸುಯೋಧನನು ಅಳಿದ. ಅಂದ ಮೇಲೆ ದುರ್ಜನರೊಡನೆ ಸೇರಿ ಕೆಡದಿರುವವರು ಯಾರು?" ಎಂದ. ಹಂದಿಗಳ ಒಡನಾಟದಿಂದ ಕರುವೂ ಹೇಸಿಗೆಯನ್ನು ತಿನ್ನುತ್ತದೆ ಎಂಬ ಗಾದೆಯಂತೆ ಕೆಟ್ಟವರ ಸಹವಾಸದಿಂದ ಕೆಟ್ಟತನ ಬಾರದಿರುತ್ತದೆಯೇ? ನದಿಗಳ ನೀರು ಸಮುದ್ರದ ನೀರಿನೊಡನೆ ಸೇರಿ ಉಪ್ಪಾಗುವಂತೆ, ತಣ್ಣನೆಯ ನೀರು ಬೆಂಕಿಯ ಸಹವಾಸದಿಂದ ಕೈಸುಡುವಷ್ಟು ಬಿಸಿಯಾಗುವ ಹಾಗೆ ದುರ್ಜನರೊಂದಿಗೆ ಸೇರುವ ಜನರಿಗೆ ಸದ್ಗುಣವೆಲ್ಲಿ ಬಂದೀತು? ಎಂದು ವಿವರಿಸಿದ. "ಕುಮಾರನ ದೋಷ ನಮ್ಮಿಂದಾದುದೇ ಹೊರತು ಅದಕ್ಕೆ ಅವನೇ ಕಾರಣನಲ್ಲ. ಓದಿದರೆ, ಬಸದಿಯಲ್ಲಿದ್ದುಕೊಂಡು ಮುನಿಜನರೊಡನೆ ಆಡಿದರೆ ಆಯಾಸಗೊಳ್ಳುವನೆಂಬ ಸುತಮೋಹದಿಂದ ನಾನೇ ಅವನನ್ನು ಕೆಟ್ಟವರ ಸಂಗಕ್ಕೆ ದೂಡಿದಂತಾಯಿತು. ಇವನ ಮೇಲೆ ಇಷ್ಟು ಮೋಹವಿಟ್ಟುದುದರಿಂದ ಇವನು ಶಿಕ್ಷಣವಿಲ್ಲದೆ ಹೀಗೆ ನಿಯತಿಯನ್ನು ಕಲಿಯಲಿಲ್ಲ. ಕಸದಿಂದ ಕೂಡಿ ಬೆಳೆದ ಸಸಿಯೂ, ಶಿಕ್ಷಣವಿಲ್ಲದ ಮಕ್ಕಳೂ, ಆಲೋಚನೆಯಿಲ್ಲದ ಓದೂ, ಏನೇನೋ ಭಾವಿಸುವವನ ತಪಸ್ಸೂ ಕೊನೆಯಲ್ಲಿ ಹಾಳಾಗುವುದು" ಎಂದು ಹೇಳಿದ. 'ಪುತ್ರಂ ಚ ಶಿಷ್ಯಂ ಚ ತಾಡಯೇನ್ನತು ಲಾಲಯೇತ್' ಎಂಬ ಚಾತುರ್ಯೋಕ್ತಿಯನ್ನು ಪಾಲಿಸದೆ, ಮೋಹದಾಕೆ ಓತಿಯಾದಳು ಎಂಬಂತೆ, ಚಿಕ್ಕಂದಿನಿಂದಲೇ ಮಗನಿಗೆ ಬುದ್ಧಿ ಕಲಿಸದಿದ್ದುದರಿಂದ ಈ ರೀತಿಯಾಯಿತು ಎಂದು ತಲೆಯನ್ನು ತೂಗಿ ಬೆರಳನ್ನು ಮಿಡಿದು ರಾಜನು ಚಿಂತಾಮಗ್ನನಾದ.

ಆಮೇಲೆ ರಾಜನು ಲಲಿತಾಂಗನಿಗೆ ಹೇಳಿಕಳಿಸಿದ. ಅವನು ಬಂದಾಗ ತನ್ನ ಮುಂದೆ ಕುಳ್ಳಿರಿಸಿಕೊಂಡು, "ಧರೆಯನ್ನು ರಕ್ಷಿಸಿ, ದುಷ್ಟರನ್ನು ಸದೆಬಡಿದು, ಸದ್ಧರ್ಮಗಳನ್ನು ಕಾಪಾಡಿ, ಕಳ್ಳರನ್ನು ಅಡಗಿಸಿ, ಕಷ್ಟ ಕೊಡುವವರನ್ನು ಹಿಡಿದು ದಂಡ ಹಾಕಿ, ಮಿಂಡರುಗಳನ್ನು ಸೆರೆ ಹಿಡಿದು, ಶಿಷ್ಟರಿಗೆ ಸಂತೋಷ ವನ್ನುಂಟುಮಾಡಿ, ಧೂರ್ತರನ್ನು ಬುಡಸಮೇತ ಕಿತ್ತು ಪಾಲಿಸಬೇಕಾದುದು ಕ್ಷತ್ರಿಯನಾದವನ ಕರ್ತವ್ಯ. ಮಗುವನ್ನು ತಾಯಿ, ಸುರಸೌಖ್ಯವನ್ನು ಬಯಸುವವನು ಚಾರಿತ್ರಶೀಲಗಳನ್ನು, ಧನಲೋಭಿಯು ಸಿರಿಯನ್ನು, ಶೂದ್ರನು ಗಿಡಗಳನ್ನು, ತಳವಾರನು ಊರನ್ನು, ಮಹಾಪುರುಷರು ಸದ್ಗುಣಗಳನ್ನು, ಶೌಚಿಯು ಒಳಿತನ್ನು ಹೇಗೆ ರಕ್ಷಿಸಿಕೊಳ್ಳುತ್ತಾರೋ ಹಾಗೆಯೇ ಕ್ಷತ್ರಿಯನು ಭೂಮಿಯನ್ನು ರಕ್ಷಿಸಬೇಕು. ಚಂದ್ರನ ಕಿರಣಗಳು ಕುಮುದಗಳನ್ನು, ಸೂರ್ಯರಶ್ಮಿಗಳು ತಾವರೆಗಳನ್ನು ಸುಂದರವಾಗಿ ಅರಳಿಸಿ ಹೇಗೆ ಸಂತಸವನ್ನುಂಟು ಮಾಡುತ್ತವೆಯೋ ಹಾಗೆಯೇ ಧಾರಿಣೀಶ್ವರನು ಖಳರ ಮಾತನ್ನು ತಿರಸ್ಕರಿಸಿ ತನ್ನ ಮಾತುಗಳಿಂದ ರಾಜ್ಯಕ್ಕೆ ಮುದವನ್ನುಂಟು ಮಾಡಬೇಕು. ನಯವಾಗಿರುವ ಕಾರಣದಿಂದಾಗಿ ಚಂದ್ರೋದಯದಲ್ಲಿ ನಕ್ಷತ್ರಗಳು ಬೆಳಗುತ್ತವೆ; ಅದೇ ಸೂರ್ಯೋದಯದಲ್ಲಿ ಭಯದಿಂದ ಅದೃಶ್ಯವಾಗುತ್ತವೆ. ಇದು ನಿಯತಿ. ಆದ್ದರಿಂದ ಮಗನೇ ಕೇಳು, ದುಷ್ಟರ ಹುಯ್ಯಲನ್ನು ಕೇಳಿ ಅವರನ್ನು ತಿದ್ದಿ ಸಂತಸಗೊಳಿಸದೆ, ಬಲಿಷ್ಠರ ಕೊಬ್ಬನ್ನು ನಾಶ ಮಾಡದಿರುವವನು ರಾಜಪುತ್ರನೇನು? ಇಂತಹ ರಾಜನೀತಿಯನ್ನು ತಿಳಿಯದೆ, ಲೋಳಿಸರದ ಮೇಲೆ ಬಂಡಿ ಹರಿದ ಹಾಗೆ ಊರನ್ನೆಲ್ಲ ಹಾಳು ಮಾಡಿದರೆ ಏನು ಫಲ? ಆದದ್ದು ಆಯಿತು. ಹಿಂದಿನದನ್ನು ಗಣಿಸುವುದಿಲ್ಲ. ಆದರೆ ಈ ದಿನದಿಂದ ಮುಂದೆ ನೀನೇನಾದರೂ ಸೊಕ್ಕಿನಿಂದ ಜನರಿಗೆ ಬಾಧೆಯನ್ನುಂಟು ಮಾಡಿದೆಯಾದರೆ ನಾನು ಕೋಪಗೊಳ್ಳುತ್ತೇನೆ. ನೀನು ನನ್ನ ಮಗನೇ ಅಲ್ಲ. ಅಲ್ಲದೆ, ನಮ್ಮ ವಂಶಧರ್ಮವು ಶುದ್ಧಸ್ಫಟಿಕದ ದೋಣಿಯಲ್ಲಿರುವ ಹಾಲಿನಂತಹ ನಿರ್ಮಲವಾದ ಜೈನಧರ್ಮ. ಅದನ್ನು ಚೆನ್ನಾಗಿ ತಿಳಿದುಕೊಂಡು ಪಾಪಕಾರ್ಯದ ಮೋಹವನ್ನು ಹತ್ತಿಕ್ಕಿಕೊಂಡು, ದುರ್ಜನರ ಸಹವಾಸವನ್ನು ಬಿಡಬೇಕು, ನನ್ನಾಣೆ" ಎಂದು ಮಗನ ಕೈಯಿಂದ ತನ್ನ ತಲೆಯನ್ನು ಮುಟ್ಟಿಸಿಕೊಂಡು, ಕೆನ್ನೆಗೆ ಮುತ್ತಿಕ್ಕಿ, ಉಡುಗೊರೆಯನ್ನು ಕೊಟ್ಟು ಕಳಿಸಿದ.

ಕಂಬಿಯನ್ನು ಸೇರಿಸಿ ಹೊಸ ತೆಂಗಿನ ಹಗ್ಗದಿಂದ ಆರು ತಿಂಗಳ ಕಾಲ ಕಟ್ಟಿದರೂ ನಾಯಿಯ ಬಾಲದ ಡೊಂಕುತನ ಹೋಗದು. ಅದರಂತೆ ರಾಜಪುತ್ರನು ತಂದೆಯ ಮಾತಿಗೆ ಕಿವಿ ಕೊಡದೆ, ತನ್ನ ಧೂರ್ತಿನಿಂದ ಊರವರನ್ನು ಕಾಡುತ್ತ ಕೋಟಲೆಗೊಳಿಸುತ್ತ ಇರಲು, ಮಗನು ತನ್ನ ಆಣೆಯನ್ನು ಮೀರಿದುದಕ್ಕಾಗಿ ಕೋಪಗೊಂಡ ರಾಜನು ಲಲಿತಾಂಗನನ್ನು ಬರಿಸಿಕೊಂಡು, "ಮಗನೇ, ಹಲ್ಲಿಗೆ ಹಾಲನ್ನು ಹಾಕಿದರೆ ಒಸಡನ್ನೆಲ್ಲ ದೈವವು ತಿಂದಿತೆಂಬ ಹಾಗೆ, ಮಗನೆಂಬ ವ್ಯಾಮೋಹದಿಂದ ನೀನು ಮಾಡಿದ ಕೆಟ್ಟ ಕೆಲಸಗಳನ್ನೆಲ್ಲ ನಾನು ಸೈರಿಸಿಕೊಂಡರೂ, ನೀನು ಮಾತ್ರ ಗಾಳಿಯೊಡನೆ ಸೇರಿದ ಕಿಚ್ಚಿನ ಹಾಗೆ ಕೊಬ್ಬಿ ಕಾಡುಕಿಚ್ಚಿನಂತೆ ಊರನ್ನೆಲ್ಲ ಹಾಳು ಮಾಡಿದೆ. ಕೆಟ್ಟು ಹೋಗುವೆಯಲ್ಲ ಎಂದು ನಾನು ಯೋಚನೆ ಮಾಡಿದರೆ, ಕಳ್ಳನನ್ನು ಹಿಡಿದರೆ ಅವನು ಬಾಯನ್ನೇ ಸುಟ್ಟು ಓಡಿದ ಎಂಬ ಗಾದೆಯಂತೆ, ನೀನಾದರೋ ನನ್ನ ಆಣೆಯನ್ನೂ ಮೀರಿದೆ. ಮಕ್ಕಳನ್ನು ಪಡೆಯಬೇಕೆಂದು ಮದ್ದು ಕುಡಿದ ಮಾರನೆಯ ದಿನವೇ ಗಂಡನು ಸತ್ತನೆಂಬಂತೆ, ಉಳಿದ ಮಕ್ಕಳನ್ನು ಕಡೆಗಣಿಸಿ ನಿನಗೇ ರಾಜ್ಯವನ್ನು ಕೊಡಬೇಕೆಂದಿದ್ದ ನನ್ನ ಮನಸ್ಸಿಗೆ ನೋವನ್ನುಂಟುಮಾಡಿದೆ. ಇನ್ನು ನಾನು ಮಾಡುವುದಕ್ಕೆ ಕೆಟ್ಟ ಹೆಸರೂ ಬರುವುದಿಲ್ಲ, ಪಾಪವೂ ಅಂಟುವುದಿಲ್ಲ. ತುಂಬ ಚೆನ್ನಾಗಿದೆಯೆಂದು ಓಡನ್ನು ಹಿಡಿದುಕೊಂಡರೆ ಕೈ ಮಸಿಯಾಗುವ ಹಾಗೆ, ದುರ್ಜನರ ಜೊತೆಗೆ ಮೋಹದಿಂದ ಕೂಡಿದ್ದರೆ ಸ್ವಂತ ಗುಣಗಳೆಲ್ಲ ಕೆಟ್ಟುಹೋಗುವುವು. ಈ ಕಾರಣದಿಂದಾಗಿ, ದುರ್ಜನನಾದ ನಿನ್ನನ್ನು ಒಳಗೊಂಡಿರುವೆನಾಗಿ ನನಗೆ ಇಹದಲ್ಲಿನ ಕೀರ್ತಿಯೂ ಪರದಲ್ಲಿನ ಸದ್ಗತಿಯೂ ಕೆಡುತ್ತವೆ. ಆದ್ದರಿಂದ ನಾನು ಆಳುವ ಈ ದೇಶದಲ್ಲಿರದೆ ನೀನು ಎಲ್ಲಾದರೂ ಹೊರಟು ಹೋಗು" ಎಂದು ಜಡಿದು ನುಡಿದ.

ತಂದೆಯ ಮಾತನ್ನು ಕೇಳಿದ ಲಲಿತಾಂಗನು ತಾಯಿ ಸೌಂದರಿಯಲ್ಲಿಗೆ ಧಾವಿಸಿ, ತಂದೆಯು ತನಗೆ ದೇಶತ್ಯಾಗದ ಶಿಕ್ಷೆ ವಿಧಿಸಿರುವುದನ್ನು ಹೇಳಿದ. ಅದನ್ನು ಕೇಳಿದ ತಾಯಿಯು, "ಮಹಾರಾಜರು, 'ಮಗನೇ, ಧೂರ್ತತನವನ್ನು ಬಿಡು' ಎಂದು ಹೇಳಿದಾಗ ನೀನು ಕೇಳಿದೆಯಾ? ನಾನು ಕೂಡ ಕೈಮುಗಿದು, 'ಮಗನೇ, ಈ ಖೂಳರ ಗೆಳೆತನವನ್ನು ಬಿಡು' ಎಂದು ಕೇಳಿಕೊಂಡೆ. ನಾವು ಹೇಳಿದ ಹಾಗೆ ನಡೆದುಕೊಳ್ಳಲು ಮಂತ್ರಿವರ್ಗವೂ ನಿನ್ನನ್ನು ಕೇಳಿಕೊಂಡಿತಲ್ಲ. ಸೊಕ್ಕಿನಿಂದಾಗಿ ನೀನೇ ಹೀಗೆ ಮಾಡಿಕೊಂಡೆ. ಮಹಾರಾಜರ ಕೋಪವನ್ನು ನಾನು ಹೇಗೆ ಕಳೆಯಬಲ್ಲೆ? ನಿನ್ನ ದುಷ್ಟಕಾರ್ಯಗಳನ್ನೆಲ್ಲ ಕಂಡರೂ ಮಹೋನ್ನತಚಿತ್ತರಾದ ಮಹಾರಾಜರು ಮಗನ ಮೇಲಿನ ಮೋಹದಿಂದ ಹೀಗೆಲ್ಲ ಮಾಡಬೇಡವೆಂದು ತಮ್ಮ ಆಣೆಯನ್ನಿಟ್ಟು ಅನೇಕ ಬಾರಿ ಕೇಳಿಕೊಂಡರೂ ನೀನು ದುಷ್ಟತನವನ್ನು ಬಿಡದೆ, ರಾಜನೇನು ಮಾಡಿಯಾನು ಎಂದು ಒರಟುತನವನ್ನು ತೋರಿಸಿ ಹಾಳಾದೆ, ಹೆತ್ತ ನನಗೆ ಚಿನ್ನದ ಪಟ್ಟವನ್ನೇ ಕಟ್ಟಿದೆ! ನೀರು ಎಷ್ಟು ಬಿಸಿಯಾದರೂ ಮನೆಯನ್ನು ಸುಡಲಾರದು; ಹಾಗೆಯೇ ನಿಮ್ಮ ತಂದೆ ಕೋಪದಿಂದ ಹೇಳಿದಾಕ್ಷಣ ನಿನ್ನನ್ನು ಕಳಿಸಿಬಿಡುವರೆ? ಈಗಲಾದರೂ ನಿನ್ನ ದುರ್ಗುಣಗಳನ್ನು ಬಿಟ್ಟು ಒಳ್ಳೆಯವನಾಗು" ಎಂದು ಸೌಂದರಿ ಮಹಾದೇವಿಯು ಹೇಳಿದಳು. ಆದರೆ ಕೊಳಕಮಂಡಲವು ಗಾರುಡಮಂತ್ರವನ್ನು ಕೇಳಿಸಿಕೊಳ್ಳದ ಹಾಗೆ ಮಗನು ಅವಳ ಮಾತುಗಳಿಗೆ ಕಿವಿಗೊಡಲಿಲ್ಲ. ಅದರಿಂದ ಬೇಸತ್ತು, "'ನಂಬಿದ ಎಮ್ಮೆ ಕೋಣವನ್ನು ಈದಿತು' ಎಂಬ ಹಾಗೆ ನೀನು ತಂದೆತಾಯಿಗಳಿಗೆ ಹಿತವಾಗಿ ನಡೆಯದೆ ದುಷ್ಟರ ಸಂಗವನ್ನು ಮಾಡಿದೆ. ಕಾಗೆಯ ಮರಿಯೆಂದು ತಿಳಿಯದೆ ಕೋಗಿಲೆ ಅದನ್ನು ಪ್ರೀತಿಯಿಂದ ಸಾಕಿದರೂ ಅದು ಕಾ ಕಾ ಎಂದು ಕಾಗೆಗಳ ಸಂಗ ಸೇರಿತು ಎಂಬಂತೆ ನೀನು ಮಾಡಿದೆ. ಕಳ್ಳನ್ನು ಕುಡಿದವರಂತೆ ಸೊಕ್ಕಿ, ದಂಟಿನ ಹಾಗೆ ಉಬ್ಬಿ, ಅಶೋಕದ ಮರದಂತೆ ನಿಷ್ಫಲನಾಗಿ, ಚೇಳಿನಂತೆ ಎಲ್ಲ ದೂಷಣೆಗೂ ಪಕ್ಕಾದೆ. ಆದ್ದರಿಂದ ನಿನಗೆ ಒದಗಿರುವ ಕೇಡಿಗೆ ಅಳಬಾರದು" ಎಂದು ಕೊನೆಯ ಮಾತಾಡಿದಳು.

ಇದರಿಂದಾಗಿ ಲಲಿತಾಂಗನು ವಿಜಯಪುರವನ್ನು ಬಿಟ್ಟು ನೇಪಾಳಕ್ಕೆ ಹೋದ. ಅಲ್ಲಿ, ತೂಗಿ ನೋಡಿದರೆ ಹಾವಿನ ವಿಷಕ್ಕಿಂತಲೂ ಹೆಚ್ಚಿನ ದುಷ್ಟತನದಿಂದ ಕೂಡಿದ ಕಳ್ಳರ ಜೊತೆಗೂಡಿ, ತನ್ನ ನೃಪತನವನ್ನೆಲ್ಲ ಮರೆತು, ಅವರ ಜೊತೆಗೆ

ಉಂಡು ಆಡಿ ಧೂರ್ತತನದಲ್ಲಿ ಅವರಿಗಿಂತಲೂ ಮಿಗಿಲೆನಿಸಿದ. ಮೊದಲು ಬಂದ ಕಿವಿಗಿಂತಲೂ ಆಮೇಲೆ ಮೂಡಿದ ಕೋಡು ಮಿಗಿಲಾಯ್ತು ಎಂಬಂತೆ ಆ ಕಳ್ಳರಿಗಿಂತ ತಾನೆ ಹೆಚ್ಚು ಧೂರ್ತನಾಗಿ, ಕುಪ್ರಸಿದ್ಧ ಕಳ್ಳನಾದ. ಅವರು ಅನುನಯದಿಂದ ಹೇಳಿಕೊಟ್ಟ ಅಂಜನಘುಟಿಕೆಯನ್ನು ಸಾಧಿಸಿಕೊಂಡು, ಆ ಘುಟಿಕಾಪ್ರಯೋಗದಿಂದ ಅದೃಶ್ಯರೂಪವನ್ನು ಪಡೆದು ಜಗತ್ತಿನಲ್ಲೆಲ್ಲ ಅಂಜನಾಚೋರನೆಂಬ ಹೆಸರಿಗೆ ಪಾತ್ರನಾದ.

ಕಳವು, ಜೂಜು, ಮಾಂಸ ತಿನ್ನುವುದು, ಮಲಿನತೆಯನ್ನುಂಟು ಮಾಡುವ ಬೇಟೆ, ಪರಸ್ತ್ರೀ ವ್ಯಾಮೋಹ, ಯಾವ ವ್ರತವನ್ನೂ ಪಾಲಿಸದೆ ಬೆಲೆವೆಣ್ಣುಗಳೊಡನೆ ಸಹವಾಸ ಮಾಡುವುದು, ಕಳ್ಳನ್ನು ಕುಡಿಯುವುದು – ದುರ್ಗತಿಗೆಳೆಯುವ ವೇಗದ ಕುದುರೆಗಳೆನಿಸುವ ಈ ಸಪ್ತವ್ಯಸನಗಳನ್ನು ಬಿಡದೆ ಅವಕ್ಕೆ ಒಳಗಾಗಿ ಲಲಿತಾಂಗನು ಸದಾಚಾರವನ್ನೆಲ್ಲ ಪೂರ್ತಿಯಾಗಿ ಮರೆತುಬಿಟ್ಟ. ವಿನೋದ, ವಿಟರು, ಮನಸ್ಸನ್ನು ನಾಟುವ ದುಷ್ಟರು, ಕನಿಷ್ಠರು, ಗಣಿಕಾಜನ, ಬೇಡರ ಪಡೆ, ಜಡಾತ್ಮರು, ಚಪಲರು, ಕಳ್ಳರು ಎಲ್ಲಿರುವರೋ ಅಲ್ಲೆಲ್ಲ ಅವನಿಗೆ ಸಂತೋಷ, ಮಹೋತ್ಸವ; ಸದಾ ಅವನು ಅಲ್ಲಿಯೇ.

ಹೀಗೆ ತನ್ನ ಮನಸ್ಸಿಗೆ ಬಂದಂತೆ ನಡೆಯುತ್ತ, ಕರಟದಲ್ಲಿ ತಿರುಗುವ ಕದಿರಿನಂತೆ ತಿರ್ರನೆ ತಿರುಗುತ್ತ ಲಲಿತಾಂಗನು ಒಮ್ಮೆ ರಾಜಗೃಹವೆಂಬ ನಗರಕ್ಕೆ ಬಂದ. ಅಲ್ಲಿಯ ಸೂಳೆಗೇರಿಯನ್ನು ಹೊಕ್ಕ; ಆದರೆ ಅಲ್ಲಿ ಯಾರೂ ಅವನ ಮನಸ್ಸಿಗೆ ಬರಲಿಲ್ಲ. ಕೊನೆಗೆ ಕಾಮನ ಕೈಯಲ್ಲಿನ ಮಸೆದ ಬಾಣದಂತಿದ್ದ ಅನಂಗ ಸೌಂದರಿ ಎಂಬ ಸೂಳೆಯನ್ನು ಕಂಡು ಅವಳಿಂದ ಆಕರ್ಷಿತನಾದ. ಅವಳಿಗೆ ಒತ್ತೆ ಕೊಟ್ಟ; ಅವಳ ಮೇಲೆ ಮೋಹಸ್ನೇಹಗಳು ತೀವ್ರವಾದವು. ಅಬ್ಜದ್ವೀಪದ ಗುಳ್ಳೆಯಂತೆ ಆ ಪ್ರೇಯಸಿಯಲ್ಲಿ ಅನುರಕ್ತನಾಗಿ, ಬಚ್ಚಿಟ್ಟ ನಿಧಿಯನ್ನು ಸದಾ ನೋಡುವ ಹಾವಿನಂತೆ ಅವಳನ್ನು ಬಿಟ್ಟಿರಲಾರದೆ ಜೊತೆಯಲ್ಲೇ ಇರುತ್ತಿದ್ದ. ಅವಳು ಎಷ್ಟು ಕೇಳಿದರೂ ಹಿಡಿತ ಮಾಡದೆ, ಪ್ರಶ್ನೆ ಮಾಡದೆ ಹಣವನ್ನು ನೀಡುತ್ತಿರಲು, ಅವನ ಕೊಡುಗೈಗೆ ಅನಂಗ ಸೌಂದರಿಯು ಬೆರಗಾಗಿ ಹೀಗೆಂದುಕೊಂಡಳು: "ಐಶ್ವರ್ಯದಲ್ಲಿ ಸುರಪತಿಯೂ ಮಾತ್ಸರ್ಯಗೊಳ್ಳುವ ರಾಜರೂ, ಕುಬೇರನಿಗೆ ಸಮಾನರೆನಿಸುವ ವ್ಯಾಪಾರಿಗಳೂ, ಸೂರ್ಯನ ತೇಜಸ್ಸನ್ನುಳ್ಳ ಪರಾಕ್ರಮಿಗಳೂ ನನ್ನ ಬೋಜಗರು. ಆದರೆ ಇವನಿಗಿರುವ ಉದಾರತೆಯು ಅವರಾರಲ್ಲಿಯೂ ಕನಸಿನಲ್ಲೂ ಕಾಣದು. ಇವನಿಗಾದರೋ ಹೊರಗೆ ನಾಡಿಲ್ಲ, ಒಳಗೆ ಭಂಡಾರವಿಲ್ಲ. ಹಾಗಾದರೆ ಇವನಿಗೆ ಇಷ್ಟೊಂದು ಹಣ ಎಲ್ಲಿಂದ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು" ಎಂದು ನಿರ್ಧರಿಸಿದಳು. ಹುಸಿ ಪ್ರೇಮದಿಂದ ಅನೇಕ ಬಗೆಯ ಚಾಟೂಕ್ತಿಗಳಿಂದ ಅವನಿಗೆ ನಂಬಿಕೆ ಬರುವಂತೆ ಮಾಡಿ, ಮೆಲ್ಲನೆ ವಿಚಾರಿಸಿದಳು. ಅವನು ಮೈಮರೆತು ತನ್ನ ಕಳವಿನ ಮಾರ್ಗವನ್ನೆಲ್ಲ ಅವಳಿಗೆ ವಿವರವಾಗಿ ಹೇಳಿದ. ಇದರಿಂದ ಅನಂಗ ಸೌಂದರಿ ಬೆರಗುಗೊಂಡಳು.

ಮಾರನೆಯ ದಿನ, ತೂರ್ಯತ್ರಯವು ಮೊಳಗಲು ರಾಜನು ತನ್ನ ರಾಣಿಯರೊಡನೆ ಜಲಕ್ರೀಡೆಗೆ ಹೋಗುತ್ತಿದ್ದ. ಸೂರ್ಯಕಿರಣಾವಳಿಗಿಂತಲೂ ಚಂದ್ರಮಯೂಖತತಿಗಿಂತಲೂ ಹೆಚ್ಚು ಕಾಂತಿಯ ರತ್ನನಿಕರದಿಂದ ಮಹಾದೇವಿಯ ಎದೆಯಲ್ಲಿ ಶೋಭಿಸುತ್ತಿದ್ದ ಜ್ಯೋತಿಪ್ರಭ ಎಂಬ ಹೆಸರಿನ ಪದಕವನ್ನು ಅನಂಗ ಸೌಂದರಿಯು ಕಂಡು ಅದಕ್ಕಾಗಿ ಆಸೆಪಟ್ಟಳು. ಅಂಜನಚೋರನು ಘಟಿಕಾ ಪ್ರಯೋಗದಿಂದ ಅದೃಶ್ಯರೂಪವನ್ನು ಪಡೆದು ಹೋಗಿ ಆ ಪದಕವನ್ನು ತಂದುಕೊಡುವ ಸಾಮರ್ಥ್ಯವುಳ್ಳವನು ಎಂಬುದನ್ನು ಅವಳು ಬಲ್ಲಳು. ತನ್ನ ಮೇಲೆ ಪ್ರೀತಿಯಿರುವುದಾದರೆ ಅದನ್ನು ತನಗೆ ಬೇಗ ತಂದುಕೊಡುವಂತೆ ಲಲ್ಲೆಯಿಂದ ಕೇಳಿಕೊಂಡಳು. ಅದರ ಹೊರತಾಗಿ ಅವಳು ಏನನ್ನು ಕೇಳಿದರೂ ತಾನು ತಂದುಕೊಡುವುದಾಗಿಯೂ, ಆ ಪದಕಕ್ಕೆ ಆಸೆ ಪಡಬಾರದೆಂದೂ ಅಂಜನ ಚೋರನು ಸಮಾಧಾನ ಮಾಡಲು ಪ್ರಯತ್ನಿಸಿದ. "ಅದನ್ನು ಕದ್ದು ತಂದರೆ ನೀನು ಸದಾ ಧರಿಸಿರಬೇಕು. ಅದು ತಿಳಿದರೆ ರಾಜನು ಪದಕವನ್ನು ಕಿತ್ತುಕೊಳ್ಳುತ್ತಾನೆ; ನಿನ್ನನ್ನು ಕೊಲ್ಲಿಸುವನು ಕೂಡ. ಆದ್ದರಿಂದ ಅದರ ಹಂಬಲನ್ನು ಬಿಟ್ಟುಬಿಡು" ಎಂದು ಬುದ್ಧಿ ಹೇಳಿದ. ಅದರಿಂದ ಅವಳು ಕೋಪಗೊಂಡು ಹಾಸಿಗೆಯಿಂದ ಬೀಳುವಂತೆ ಅವನನ್ನು ಒದ್ದಳು; ಮೈಯೆಲ್ಲ ದದ್ದುಗಟ್ಟುವಂತೆ ಕಾಲುಕೈಗಳಿಂದ ಹೊಡೆದಳು;

ಪಕ್ಕದಲ್ಲಿದ್ದ ದಂತದ ಪಾದುಕೆಯಿಂದ ಹೇಗೆಂದರೆ ಹಾಗೆ ಬಾರಿಸಿದಳು. "ಲಕ್ಷಾಂತರ ಬಾಳುವ ಒಡವೆಗಳು ಬೇಕಾದಷ್ಟು ನನ್ನ ಬಳಿ ಇವೆ. ನಂಬಿಕೆ ಬಾರದಿದ್ದರೆ ಇಗೋ ನೋಡು. ನಿನ್ನ ಮೇಲೆ ಪ್ರೀತಿಯಿದೆಯೆಂದು ಹೇಳಿದರೆ ಏನೇನನ್ನೋ ಹೇಳುವೆಯಲ್ಲ. ಹೀಗೆ ಹೇಳುವುದು ಶೂರರಿಗೆ ತಕ್ಕುದೇ? ನಾನು ವೇಶ್ಯೆ; ನನ್ನ ತಾಯಿ ಮತ್ತು ಬಂಧುಗಳ ಮಾತನ್ನು ಮೀರಿ ನಿನ್ನನ್ನು ಬಹುವಾಗಿ ಮೆಚ್ಚಿದೆ. ನಾನು ಹೇಳಿದ ಮಾತಿಗೆ ಇಲ್ಲವೆನ್ನದೆ, ತಡ ಮಾಡದೆ ತಂದುಕೊಡುವುದು ನನ್ನನ್ನು ಪ್ರೀತಿಸುವ ರೀತಿ. ಹಾಗೆ ಮಾಡುವವರು ಶೂರರು, ನಿನ್ನಂತೆ ಬಂಜರಲ್ಲ. ಎಡೆಯ(ದನಕಾಯುವವ)ನು ಅರಸಾದರೆ ಕೊಡೆಯ ಕಾವು ಮೇಲಕ್ಕಾಯಿತು ಎಂಬ ಗಾದೆಯಂತೆ, ದೇಸಿಗನಾದ ನಿನ್ನ ಜೊತೆ ಎರಡಿಲ್ಲದ ಹಾಗೆ ಸ್ನೇಹ ಮಾಡಿ ಕೂಡಿದ್ದಕ್ಕೆ ನನಗೆ ಸರಿಯಾಗಿ ಸಂತೋಷವುಂಟು ಮಾಡಿದೆ" ಎಂದು, ಅವನು ತನ್ನನ್ನು ಎರಡಿಲ್ಲದೆ ಪ್ರೀತಿಸಿದ್ದನ್ನು ಬಲ್ಲ ಅವಳು ಕಡೆಗಣ್ಣ ನೋಟದಲ್ಲಿ ಶೃಂಗಾರರಸವನ್ನೂ ಮೆಲ್ನುಡಿಯಲ್ಲಿ ಕಾರುಣ್ಯರಸವನ್ನೂ ಬೆರೆಸಿ ಮಾತನಾಡಿದಳು. ಇನ್ನು ಮುನಿಯುತ್ತಾಳೆ ಎಂದು ಅಂಜನಚೋರನು ಭಯಗೊಂಡು, ನಲ್ಲಳ ಪಾದವನ್ನು ತಲೆಯಲ್ಲಿ ಹೊತ್ತು, "ನನ್ನ ಮುದ್ದೆ, ಮುನಿಯದಿರು. ಇದಾವ ಗಹನ ವಿಚಾರ. ತಂದು ಕೊಡುತ್ತೇನೆ, ಅಂಜಬೇಡ" ಎಂದು ಅವಳನ್ನು ಸಂತಸಗೊಳಿಸಿದ.

ಕಳ್ಳನಿಗೆ ಬೆಳುದಿಂಗಳು ಸೊಗಸದು ಎಂಬ ಗಾದೆ ಮಾತಿಗೆ ಅನುಗುಣವಾಗಿ, ಶುಕ್ಲಪಕ್ಷವು ಕಳೆಯುವವರೆಗೂ ಸುಮ್ಮನಿದ್ದು, ಕೃಷ್ಣಪಕ್ಷದ ಅಷ್ಟಮಿಯ ದಿನ ಆತುರದಿಂದ ಅಂಜನವನ್ನು ಕಣ್ಣುಗಳಲ್ಲಿ ಹಚ್ಚಿಕೊಂಡು ಭರದಿಂದ ಅದೃಶ್ಯರೂಪವನ್ನು ಪಡೆದು ಅರಮನೆಯನ್ನು ಹೊಕ್ಕು ಪದಕವನ್ನು ಕಳ್ಳತನ ಮಾಡಿದ. ಆಮೇಲೆ ಅಲ್ಲಿಂದ ಹೊರಟು ಉತ್ಸಾಹದಲ್ಲಿ ಮೈಮರೆತು ವಾಪಸಾಗುತ್ತಿರುವಾಗ, ರತ್ನದ ಕಾಂತಿಯು ಸೂರ್ಯನ ಕಿರಣಗಳಂತೆ ದೆಸೆದೆಸೆಗೆ ಹರಡಿತು. ಆಗ ಎಲ್ಲೆಡೆ ತಿರುಗುವ ದಂಡಕನೆಂಬ ತಳವಾರನು ಅದನ್ನು ಕಂಡು, ಅದರ ಮರ್ಮವನ್ನು ತಿಳಿದು ಅಂಜನವಿದ್ಯೆಯ ಪ್ರಭಾವವನ್ನು ಕೆಡಿಸಿ ಬೆನ್ನಟ್ಟಿ ಬಂದ. ಅಂಜನಚೋರನು ಭಯದಿಂದ ಪದಕವನ್ನು ಬಿಸಾಡಿ, ಆ ಪುರದ ಕೋಟೆಯನ್ನು ಹಾರಿ ದೆಸೆಗೆಟ್ಟು ಓಡಿದ. ಶ್ಮಶಾನದದಲ್ಲಿ ಒಂದು ಆಲದ ಮರದ ಕೆಳಗೆ ಉರಿಯುತ್ತಿದ್ದ ದೀಪವನ್ನು ಕಂಡು ಅಲ್ಲಿಗೆ ಬಂದು ನಿಂತ.

ನೋಡಿದರೆ, ಆಲದ ಮರದ ಕೊಂಬೆಯ ಕೆಳಗೆ ನೂರೊಂದು ಕಾಲುಗಳ ನೆಲುವನ್ನು ಕಟ್ಟಿ, ಅದರ ಅಡಿಯಲ್ಲಿ ಕೊಡಲಿ, ಬಿಲ್ಲು, ಕೊಂತ, ತೋಮರ, ಮುದ್ಗರ, ಭಿಂಡಿವಾಳ, ಚಕ್ರ, ಶೂಲ, ಸುರಗಿ ಮೊದಲಾದ ಮೂವತ್ತೆರಡು ಆಯುಧಗಳನ್ನು ನಿಲ್ಲಿಸಿ, ಅವಕ್ಕೆ ಉತ್ಸಾಹದಿಂದ ಪೂಜೆ ಮಾಡಿ ನೆಲುವಿನ ಕಾಲನ್ನು ಕತ್ತರಿಸಲು ಸಾಧ್ಯವಾಗದೆ ಏರುತ್ತ ಇಳಿಯುತ್ತ ಇದ್ದ ಒಬ್ಬನನ್ನು ಕಂಡ. "ನೀನು ಯಾರು? ನೀನು ಸಾಧಿಸುತ್ತಿರುವ ವಿದ್ಯೆಯ ಹೆಸರೇನು? ಇದನ್ನು ನಿನಗೆ ಉಪದೇಶ ಮಾಡಿದವರು ಯಾರು? ಹೇಳು. ಹೇಳದಿದ್ದರೆ ನಿನ್ನನ್ನು ಇಲ್ಲಿಯೇ ಕೊಲ್ಲುತ್ತೇನೆ" ಎಂದು ಅಂಜನಚೋರನು ತನ್ನ ಸುರಗಿಯನ್ನು ಸೆಳೆದು ಅವನ ಕೊರಳ ಮೇಲಿರಿಸಿದ. ಅವನು ಪ್ರಾಣಭಯದಿಂದ ಹೀಗೆ ಉತ್ತರಿಸಿದ: "ನನ್ನ ಹೆಸರು ವರಸೇನ; ಈ ಸನ್ನುತ ವಿದ್ಯೆಯ ಹೆಸರು ಗಗನಗಾಮಿನಿ; ನನಗೆ ಇದನ್ನು ಉಪದೇಶಿಸಿದವರು ನಿರ್ಮಲಚರಿತನಾದ ಜಿನದತ್ತಸೆಟ್ಟಿ ಎಂಬುವವರು." ಅವನ ಮಾತನ್ನು ಕೇಳಿ ಅಂಜನಚೋರನು ಮುಗುಳ್ನಕ್ಕು, "ಸಕಲ ಸದ್ಗುಣನಿಲಯನೂ, ಸದ್ಧರ್ಮಜಲನಿಧಿಚಂದ್ರನೂ, ಸತ್ಯನಿಧಿಯೂ, ದಯಾನಿಧಿಯೂ ಆಗಿರುವ ಜಿನದತ್ತಸೆಟ್ಟಿಯು ಮಂತ್ರೋಪದೇಶ ಮಾಡಿದನೆಂದ ಮೇಲೆ ನಿನಗೇಕೆ ಪುಕ್ಕಲುತನ? ನಾನೇ ಆಗಿದ್ದಿದ್ದರೆ ನೆಲುವಿನ ಕಾಲುಗಳನ್ನೆಲ್ಲ ಕೊಯ್ಯುತ್ತಿದ್ದೆ. ನೀನೇಕೆ ಹೀಗೆ ಏರುತ್ತ ಇಳಿಯುತ್ತ ಇದ್ದೀಯೆ? ಭಯ ಬೇಡ" ಎಂದು ಸಮಾಧಾನಪಡಿಸಿದ. ಆಗ ವರಸೇನನು, "ಮನುಷ್ಯಚಿತ್ತವನ್ನು ಯಾರು ಬಲ್ಲರು? ಇದನ್ನು ಕೊಯ್ದು ಎಗ್ಗಿನಿಂದ ನಾನು ಸತ್ತರೆ, ಕನಸಿನಲ್ಲಿ ಕಂಡ ಬತ್ತಕ್ಕೆ ಎಚ್ಚರಗೊಂಡ ಮೇಲೆ ಗೋಣಿಯನ್ನು ಹಿಡಿದ ಹಾಗಾಗುವುದು. ಸತ್ತ ಮೇಲೆ ಬರುವ ಸ್ವರ್ಗಕ್ಕಿಂತಲೂ ಬದುಕಿರುವಾಗ ಸಿಗುವ ನರಕವೇ ಮೇಲು

ಎಂಬುದು ನಾಣ್ಣುಡಿ. ಜೀವವಿದ್ದರೆ ಹಾಡಿಕೊಂಡು ಉಣ್ಣಬಹುದು. ಅದನ್ನು ಬಿಟ್ಟು ಮಾರಿ ಬಳಾರಿಗಳು ಸಾಯಲಿ, ನನಗೆ ಅದು ಬೇಡ" ಎಂದ.

ಇದನ್ನು ಕೇಳಿ ಲಲಿತಾಂಗನು ತನ್ನ ಮನಸ್ಸಿನಲ್ಲಿ, "ಮುಗಿಲನ್ನು ಮುಟ್ಟಿದ ವಸ್ತುವಿನ ಉದ್ದ, ಮಕ್ಕಳಾದವಳ ಮದುವೆ, ಪಟ್ಟಗಟ್ಟಿದವನ ರಾಜ್ಯ, ಅಂಕದ ಗೆಲವು, ಮೋಕ್ಷಸಂಪಾದನೆ, ಪರ್ವತವನ್ನೆತ್ತಿದವನ ಸಾಹಸ, ಸಮುದ್ರವನ್ನು ಹಾರಿದವನ ಪರಾಕ್ರಮ, ಇಂದ್ರತ್ವವನ್ನು ಪಡೆದವನ ಜಿನಭಕ್ತಿ, ಕಾಮನನ್ನೇ ಒಲಿಸಿದವಳ ಸೊಬಗು, ತ್ರಿಭುವನವಿಜಯಿಯ ವೀರತೆ, ಚಕ್ರವರ್ತಿತ್ವವನ್ನು ಹೊಂದಿದವನ ವಿದ್ಯೆ – ಇವುಗಳನ್ನು ಕೇಳುವುದು ಮಂಕುತನ. ಜಿನದತ್ತನು ಜಿನಪಾದಪದ್ಮಗಳಲ್ಲಿ ದುಂಬಿಯಂತಿರುವವನು; ಅವನು ದುಷ್ಕರ್ಮಗಳಿಗೆ ದಾವಾಗ್ನಿ, ಸಜ್ಜನಚೂಡಾಮಣಿ, ಸರ್ವಜೀವಹಿತ; ಕ್ಷಮಾಗುಣದಲ್ಲಿ ಮೇರುಪರ್ವತ; ನಿರ್ಮಲ, ವಿನಯಾಲಂಕೃತ; ಆಗಮಾನ್ವಿತ, ಉದಾರಿ, ಸತ್ಯವಾಕ್ಯ; ಸಜ್ಜನಸಂಸ್ತುತ, ಅಣುವ್ರತೈಕನಿಲಯ ಮತ್ತು ವಾತ್ಸಲ್ಯರತ್ನಾಕರನಾದವನು. ಅವನು ಒಂದು ಇರುವೆಯ ಪ್ರಾಣಕ್ಕೂ ತೊಂದರೆ ನೀಡದವನು. ಅಂತಹವನು ನಿನ್ನ ಪ್ರಾಣಕ್ಕೆ ಕುತ್ತು ತರುವನೇ? ಇಲ್ಲ. ನಾನು ಆ ತಳವಾರನ ಕೈಗೆ ಸಿಕ್ಕಿ ಸಾಯದೆ ಇಲ್ಲೇ ತೀರ್ಮಾನ ಮಾಡುತ್ತೇನೆ" ಎಂದುಕೊಂಡ. ಆಮೇಲೆ ವರಸೇನನನ್ನು ಕುರಿತು, "ನನಗೆ ಆ ಮಂತ್ರವನ್ನು ಬೇಗ ಹೇಳಿಕೊಡು. ಇಲ್ಲದಿದ್ದರೆ ನಿನ್ನನ್ನು ಇಲ್ಲಿಯೇ ದೆಸೆಗಳಿಗೆ ಬಲಿ ಕೊಡುತ್ತೇನೆ" ಎಂದ. ವರಸೇನನಿಗೆ ಹೇಡಿಯ ಮೇಲೆ ಹಾವು ಬಿದ್ದಂತಾಯಿತು. ಅವನು ತನಗೆ ಜಿನದತ್ತಸೆಟ್ಟಿ ಮುಂಚೆ ಹೇಗೆ ಹೇಳಿಕೊಟ್ಟಿದ್ದನೋ ಹಾಗೆಯೇ ಭಯದಿಂದಲೇ ಅಂಜನಚೋರನಿಗೆ ಮಂತ್ರವನ್ನು ಹೇಳಿಕೊಟ್ಟ.

ಪರಮ ಜಿನೇಂದ್ರನ ಪಾದಗಳನ್ನು ಸ್ಮರಿಸಿ, ಜಿನದತ್ತಸೆಟ್ಟಿಗೆ ಭಕ್ತಿಯಿಂದ ಕೈಮುಗಿದು, ಮನದಾಳದಿಂದ ಪಂಚಪದವನ್ನುಚ್ಚರಿಸುತ್ತ, ಲಲಿತಾಂಗನು ನೆಲುವನ್ನು ಏರಿ ಕಾಣುವ ನೂರೆಂಟು ಬಗೆಯ ನೆಲುವಿನ ಕಾಲುಗಳನ್ನು ಶಂಕೆಯಿಲ್ಲದೆ ಒಂದೇ ಮನಸ್ಸಿನಿಂದ ಅವನ್ನೆಲ್ಲ ಚಕ್ಕನೆ ಕೊಯ್ದ. ಆಗ ಅವು ಕೆಳಗಿಳಿದು ಬಂದು ಆಯುಧಾಗ್ರವನ್ನು ತಾಕದೆ ತೂಗುತ್ತಿರಲು, ಆ ವಿದ್ಯಾದೇವತೆಯು ಪ್ರತ್ಯಕ್ಷಳಾಗಿ ಕೈಮುಗಿದು, "ಬೆಸಸು, ಬೆಸಸು" ಎಂದು ಕೇಳಿತು. ಅದಕ್ಕೆ ಉತ್ತರವಾಗಿ ಲಲಿತಾಂಗನು ತನ್ನನ್ನು ಸುಕವಿನಿಕರಪಿಕಮಾಕಂದನಾದ ಜಿನದತ್ತಸೆಟ್ಟಿಯ ಬಳಿಗೆ ಕರೆದೊಯ್ಯುವಂತೆ ಕೇಳಿಕೊಂಡ. ಹಾಗೇ ಆಗಲೆಂದು ವಿದ್ಯಾದೇವತೆಯು ಅವನನ್ನು ಒಯ್ದು ಮೇರುಗಿರಿಯ ಭದ್ರಸಾಲ ನಂದನವನದಲ್ಲಿದ್ದ ಜಿನತ್ತನನ್ನು ತೋರಿಸಿ ನೆಲಕ್ಕಿಳಿಸಿ ಕಣ್ಮರೆಯಾಯಿತು.

ಅಂಜನಚೋರನು ಮೇರುಗಿರಿಯನ್ನು ನೋಡಿದ. ಬ್ರಹ್ಮನು ಭಕ್ತಿಯಿಂದ ಕಲ್ಪಿಸಿಕೊಂಡು ಮಾಡಬಯಸಿದ ಮಾನಸ್ತಂಭದಂತೆ ಈ ಸುರೇಶ್ವರಶೈಲವು ದೇದೀಪ್ಯಮಾನವಾಗಿ ಹೊಳೆಯುತ್ತಿದೆಯಲ್ಲ ಎಂದು ಅವನಿಗನ್ನಿಸಿತು. ಅಗಣಿತವಾದ ಕೆಂದಳಿರ ಗೊಂಚಲುಗಳಿಂದ ತುಂಬಿದ್ದ ಮಾವು; ಮನ್ಮಥನ ಮನೆಯ ಕೆಂಬಾವುಟಗಳಂತೆ ಚೆಲುವಾಗಿದ್ದ ಸಂಪಗೆ, ಸುರಹೊನ್ನೆಗಳು; ಸೊಗಸುವ ಚಿಗುರುಗಳಿಂದ ಕೂಡಿ ಶೋಭಿಸುವ ಅಶೋಕೆ, ನಾಗಸಂಪಗೆ, ಹರಿಚಂದನಗಳು ಅವನ ಮನಸ್ಸಿಗೆ ಮುದವನ್ನು ನೀಡಿದವು. ಮೇರುಪರ್ವತದ ಮೇಲುಗಡೆಯು ಹಾಡುವ ದುಂಬಿಗಳು ಹಾಗೂ ಕುಕಿಲುವ ಕೋಗಿಲೆಗಳಿಂದ ರಮ್ಯವಾಗಿ, ಬನದಲ್ಲಿ ತೀಡುವ ತೆಂಕಣಗಾಳಿಯಿಂದಾಗಿ ದೇವದಂಪತಿಗಳು ದೂರ ನಿಲ್ಲದೆ ಕೂಡುವಂತೆ ಮಾಡುತ್ತ, ವಿಹರಿಸುವ ಖೇಚರರಿಂದಲೂ ಕುಣಿವ ನವಿಲುಗಳಿಂದಲೂ ನೋಡಿದವರ ಮನಸ್ಸಿಗೆ ಉಲ್ಲಾಸವನ್ನೀಯುತ್ತಿತ್ತು.

ಅದನ್ನು ಕಂಡು ಲಲಿತಾಂಗನು ಮೆಚ್ಚಿಕೆಯಿಂದ ಹೊಗಳಿಕೊಂಡ. ಅಂತಹ ನಂದನವನದಲ್ಲಿ ಶುದ್ಧಸ್ಫಟಿಕದ ನೆಲಗಟ್ಟಿನಿಂದಲೂ, ಪಚ್ಚೆಯ ಕಂಬಗಳಿಂದಲೂ, ಚಂದ್ರಕಾಂತಶಿಲೆಯ ಬೋದಿಗೆಗಳಿಂದಲೂ, ಇಂದ್ರನೀಲದ ನಾಗವಟ್ಟಿಗೆಗಳಿಂದಲೂ, ವಜ್ರದ ಸೋಪಾನಗಳಿಂದಲೂ, ಹವಳದ ಕೀಲುಗಳಿಂದಲೂ, ಹೊನ್ನಿನ ಗೋಡೆಗಳಿಂದಲೂ, ವೈಡೂರ್ಯದ ಬಾಗಿಲುಗಳಿಂದಲೂ, ಸೂರ್ಯಕಾಂತದ ದ್ವಾರವಟ್ಟಗಳಿಂದಲೂ, ಪದ್ಮರಾಗದ ಕಲಶಗಳಿಂದಲೂ, ಪುಷ್ಯರಾಗದ ಮಕರತೋರಣಗಳಿಂದಲೂ, ಮುತ್ತಿನ ಸೂಸಕಗಳಿಂದಲೂ ಮಾಣಿಕ್ಯದ ಪ್ರತಿಮೆಗಳಿಂದಲೂ ಒಪ್ಪುವ

ಸುಂದರವಾದ ಚೈತ್ಯಾಲಯಗಳನ್ನು ಕಣ್ತಣಿಯುವ ಹಾಗೆ ನೋಡಿದ. ಭಕ್ತಿಯಿಂದಲೂ, ನಾನಾ ಬಗೆಯ ಅರ್ಚನಾದ್ರವ್ಯಗಳಿಂದಲೂ ಜಿನಪ್ರತಿಮೆಗಳಿಗೆ ಪೂಜೆಗೈದು ಪ್ರದಕ್ಷಿಣೆ ಮಾಡಿ ನಮಸ್ಕರಿಸುತ್ತಿದ್ದ ದೇವ ವಿದ್ಯಾಧರಸಮೂಹವನ್ನು ನೋಡುತ್ತ ಅವನಲ್ಲಿ ಉತ್ತಮ ವೈರಾಗ್ಯದ ಹೆಚ್ಚಿಗೆಯುಂಟಾಯಿತು. ಅದನ್ನು ತಡೆಯದೆ ಲಲಿತಾಂಗನು ಸೆಟ್ಟಿಯ ಬಳಿ ಬಂದು, ಅಶೋಕೆಯ ಚಿಗುರನ್ನು ಮುಸುಕುವ ದುಂಬಿಗಳ ಸಮೂಹದಂತೆ ತನ್ನ ತುಂಬು ತಲೆಗೂದಲು ಮಹೋಜ್ವಲ ತೇಜದಿಂದ ಕೂಡಿದ ವೈಶ್ಯಜನ ಅಂಘ್ರಿಪಲ್ಲವಗಳನ್ನು ಮುಸುಕುವಂತೆ ಪೊಡಮಟ್ಟ.

ತನಗೆ ನಮಸ್ಕರಿಸಿದ ಅಂಜನಚೋರನನ್ನು ನೋಡಿದ ಜಿನದತ್ತಸೆಟ್ಟಿಯು ಬೆರಗಾದ. ಸುಮ್ಮನೆ ಕುಣಿಯುವವನಿಗೆ ತಮ್ಮಟೆಯವನ ಜೊತೆ ಸೇರಿದ ಹಾಗೆ, ಧಾರಿಣಿಯನ್ನು ಕಾಡಿ ಕದಿಯುವ ಕಳ್ಳನಿಗೆ ಅರಿದಾದ ಸದ್ವಿದ್ಯೆ ಯಾರ ದೆಸೆಯಿಂದ ಲಭ್ಯವಾಯಿತೋ ಎಂದು ಅಚ್ಚರಿಯುಂಟಾಯಿತು. ಮೂಗಿನಿಂದ ಉಳುವವನಿಗೆ ನೇಗಿಲನ್ನು ಕೊಟ್ಟರು ಎಂಬ ಹಾಗೆ, ಗಾಳಿಯನ್ನು ತಿನ್ನುವವನ ಬಾಯಿಗೆ ಅವಲಕ್ಕಿಯನ್ನು ಹಾಕಿದರು ಎಂಬ ಹಾಗೆ, ಬಡಿದು ಕೊಲ್ಲುವವನಿಗೆ ಸಾಲವನ್ನು ಕೊಟ್ಟರು ಎಂಬಂತೆ, ಕೊಲ್ಲಲು ಬರುವವನ ಎದುರಿಗೆ ಹೋದ ಎಂಬ ಹಾಗೆ, ಲೂಟಿ ಮಾಡ ಬಂದವನಿಗೆ ನಿಧಿಯನ್ನು ತೋರಿಸಿದರು ಎಂಬ ಹಾಗೆ, ಹಿಡಿಯ ಬಂದವನಿಗೆ ಕೈನೀಡಿದರು ಎಂಬ ಹಾಗೆ ಇವನು ಮಾಯಾವಿದ್ಯೆಯಾದ ಅಂಜನಘುಟಿಕೆಯಿಂದ ಜನರ ಸರ್ವಸ್ವವನ್ನು ಕಿತ್ತುಕೊಳ್ಳುವವನು; ಇವನಿಗೆ ಗಗನಗಾಮಿನೀವಿದ್ಯೆ ಸಾಧ್ಯವಾಗಿದೆಯಲ್ಲ; ಇವನು ಇನ್ನು ದೇಶವೆಲ್ಲವನ್ನೂ ನಿವಾಳಿ ತೆಗೆದಂತೆ ಕದಿಯದೆ ಬಿಡುವವನಲ್ಲ ಎಂದು ಪಾಪಭೀರುತ್ವದಿಂದ ಬೆಚ್ಚಿದ. ಅವನು ಲಲಿತಾಂಗನ ಮುಖವನ್ನು ನೋಡಿ, "ಈ ಲೋಕಪೂಜಿತವಾದ ವಿದ್ಯೆ ನಿನಗೆ ಹೇಗೆ ಬಂತು?" ಎಂದು ಕೇಳಿದ.

ಅದರ ಕತೆಂiನ್ನೆಲ್ಲ ಅಂಜನಚೋರನು ವಿನಯದಿಂದ ನಿರೂಪಿಸಿ, "ಜಿನದತ್ತ, ನಿಮ್ಮ ನುಡಿಗಳು ಎಂದರೆ ಜಿನನುಡಿಗಳೆ ಎಂದು ಬಲವಾಗಿ ನಂಬಿದ್ದರಿಂದ ಅದರ ಫಲವನ್ನು ಮನವಾರೆ ಕಂಡೆ. ಅದರಿಂದಾಗಿ ನನಗೆ ಜಿನರ ಹಾಗೂ ನಿಮ್ಮ ಪಾದಗಳೇ ಶರಣು. ನನ್ನ ಕರ್ಮದಿಂದಾಗಿ ತಂದೆಯ ಪ್ರೀತಿ ಹಾಗೂ ತಾಯಿಯ ಮಾತುಗಳನ್ನು ಕೇಳದೆ, ಸದ್ಧರ್ಮವನ್ನು ತೊರೆದು, ಸೊಕ್ಕಿನಿಂದ ದುರ್ಮತಿಯಾದೆ; ದುಷ್ಟರ ಸಹವಾಸದಿಂದ ಕೆಟ್ಟೆ. ಪ್ರಾರ್ಥನೆ ಧರ್ಮಗಳೆಂದರೆ ನನಗೆ ಏನೆಂದು ತಿಳಿಯದು; ಮತಿಗೆಟ್ಟು ದುಷ್ಟರ ಸಹವಾಸದಿಂದ ಸದ್ಗುಣಗಳನ್ನೆಲ್ಲ ಮರೆತೆ; ಮೈಮರೆತು ಕೆಟ್ಟ ಕೆಲಸಗಳನ್ನು ಮಾಡಿದ ಪಾತಕಿ ನಾನು. ಅಮೃತವನ್ನು ಪಡೆದರೂ ಅದನ್ನು ಉಣ್ಣಲು ಪಡೆದು ಬರಲಿಲ್ಲವೆಂಬ ಗಾದೆಯು ನನ್ನ ಮಟ್ಟಿಗೆ ನಿಜವಾಯಿತು. ಸದ್ಧರ್ಮವನ್ನು ಹೊಂದಿಯೂ ಹುಚ್ಚನಾಗಿ ಕಾಲವನ್ನು ವೃಥಾ ಕಳೆದೆ. ಸೋಮಾರಿಯ ಅಂಗಡಿಯಲ್ಲಿ ಸರಕಿಲ್ಲದ ಹಾಗೆ, ಹುಳುಹಿಡಿದ ಸಸಿಯಂತೆ ನಯವಿಲ್ಲದೆ, ಬಿಲ್ಲನ್ನು ಬಿಟ್ಟವನ ಹಾಗೆ ಗುಣವಿಲ್ಲದೆ, ಮಾನಗೆಟ್ಟವನಂತೆ ಪೆಂಪಿಲ್ಲದೆ, ಹುಲ್ಲಿನಂತೆ ತೂಕವಿಲ್ಲದೆ, ನ್ಯಾಯವಿಲ್ಲದ ಅರಸನ ಊರಿನಂತೆ ಮರ್ಯಾದೆಯಿಲ್ಲದೆ, ಕಳ್ಳರ ಮನೆಯಂತೆ ಧರ್ಮವಿಲ್ಲದೆ, ಗುಹೆಯಂತೆ ಸನ್ಮಾರ್ಗವಿಲ್ಲದೆ, ಹುಟ್ಟು ಕುರುಡನಂತೆ ಏನನ್ನೂ ಕಾಣದೆ ಕೆಟ್ಟೆ" ಎಂದು ತನ್ನನ್ನು ತಾನೇ ನಿಂದಿಸಿಕೊಂಡ. ಜಿನವಚನದಿಂದಾದ ದೃಷ್ಟಾಂತವನ್ನೂ, ಸಮ್ಯಕ್ತ್ವಚೂಡಾಮಣಿಯ ಮಹಾಗುಣ ಗಳನ್ನೂ ಹೊಗಳಿದ. ಆನಂತರ, "ನಿಮಗೆ ಪಂಚನಮಸ್ಕಾರವಲ್ಲದೆ ಬೇರೆ ಮಂತ್ರವೂ, ಅರ್ಹತ್ಪರಮೇಶ್ವರರಲ್ಲದೆ ಇತರ ದೈವವೂ ತಿಳಿಯದು. ಸಮ್ಯಕ್ತ್ವಚೂಡಾಮಣಿಯೆಂದು ಪ್ರಸಿದ್ಧರಾದ ನಿಮಗೆ ಈ ವಿದ್ಯೆ ಹೇಗೆ ಪ್ರಾಪ್ತವಾಯಿತು" ಎಂದು ಪ್ರಶ್ನಿಸಿದ. ಅದಕ್ಕೆ ಜಿನದತ್ತನು, "ನೀನು ಹೇಳಿದ್ದು ನಿಜ. ಜಿನನಲ್ಲದೆ ಬೇರೆ ಇಷ್ಟದೈವ ನನಗಿಲ್ಲ; ಪಂಚನಮಸ್ಕಾರವಲ್ಲದೆ ಬೇರೆ ಮಂತ್ರ ಗೊತ್ತಿಲ್ಲ. ಈ ಗಗನಗಾಮಿ ವಿದ್ಯೆಯು ನನಗೆ ಕರಗತವಾದ ಬಗೆ ಹೇಗೆಂಬುದನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ ಕೇಳು" ಎಂದು ಅದರ ವೃತ್ತಾಂತವನ್ನು ಹೇಳತೊಡಗಿದ.

ಜಿನಪದ ಎಂಬ ಒಂದು ನಾಡು; ಅದರಲ್ಲಿ ಬೆಡಗಿನಿಂದಲೂ ಬಹುಜನಗಳಿಂದಲೂ ಕೂಡಿದ ಭೂಮಿತಿಲಕವೆಂಬ ಒಂದು ನಗರವಿತ್ತು. ಅದರ ರಾಜ ನರಪಾಲ ಎಂಬುವವನು. ಅವನ ರಾಜಶ್ರೇಷ್ಠಿ ಸೌಂದರನೆಂಬುವವನು; ಅವನ

ಹೆಂಡತಿಯ ಹೆಸರು ಸುನಂದೆ ಎಂದು. ಆ ದಂಪತಿಗಳಿಗೆ ಶ್ರೀವರ್ಮ, ಜಯವರ್ಮ, ಜಿನವರ್ಮ, ಜಿನದತ್ತ, ಜಿನಹಾಸ ಮತ್ತು ಧನ್ವಂತರಿ ಎಂಬ ಮಕ್ಕಳಿದ್ದರು. ಮಹಾರಾಜನ ಪುರೋಹಿತನಾದ ಸೋಮಶರ್ಮನೆಂಬ ಬ್ರಾಹ್ಮಣ ಮತ್ತು ಅವನ ಹೆಂಡತಿ ಅಗ್ಗಿಲೆಗೆ ವಿಶ್ವಾನುಲೋಮ ಎಂಬ ಮಗನಿದ್ದ. ಆ ಮಕ್ಕಳೆಲ್ಲ ಜೊತೆಯಾಗಿ ಬೆಳೆಯುತ್ತಿದ್ದರು. ಅವರಲ್ಲಿ ಧನ್ವಂತರಿಗೂ ವಿಶ್ವಾನುಲೋಮನಿಗೂ ಗಾಢವಾದ ಗೆಳೆತನ ಬೆಳೆಯಿತು; ಅವರಿಬ್ಬರೂ ಹಾಲುನೀರು ಬೆರೆತ ಹಾಗೆ ಅನ್ಯೋನ್ಯವಾಗಿದ್ದರು. ಆ ಇಬ್ಬರು ಉಗುರು–ಮಾಂಸಗಳಂತೆ ಸಂಪ್ರೀತಿಯಿಂದ ಕೂಡಿ, ಕಾಲಾನುಕಾಲಕ್ಕೆ ದುರ್ಜನಸಂಸರ್ಗದಿಂದ ಸಪ್ತವ್ಯಸನಿಗಳೂ ದುಶ್ಚರಿತರೂ ಆಗಿ ಬೆಳೆದರು. ಅವರ ತಂದೆಯರಾದ ಸೌಂದರಸೆಟ್ಟಿ ಮತ್ತು ಸೋಮಶರ್ಮರು ಏನು ಮಾಡಿದರೂ ಮಕ್ಕಳ ದುಷ್ಟತನವನ್ನು ನಿವಾರಿಸಲಾರದೆ ಹೋದರು. ಅವರಿಬ್ಬರೂ ತಮ್ಮ ಆ ಮಕ್ಕಳನ್ನು ರಾಜನ ಮುಂದೆ ತೊರೆಯುವುದಾಗಿ ಘೋಷಿಸಿದರು. ಇಬ್ಬರು ಗೆಳೆಯರೂ ತಾಯ್ತಂದೆಯರನ್ನು ಬಿಟ್ಟು ಅದೇ ಊರಲ್ಲಿಯೇ ಇದ್ದರು.

ಒಮ್ಮೆ ಅವರಿಬ್ಬರೂ ಅರಮನೆಯನ್ನು ಹೊಕ್ಕು ನಯವಾಗಿ ದಿವ್ಯರತ್ನಗಳನ್ನು ಕದ್ದು ಹೊರ ಬಂದರು. ಆದರೆ ಅವರನ್ನು ನಿಷ್ಠುರಕೋಪಿಯಾದ ತಳವಾರನು ಹಿಡಿದುಬಿಟ್ಟು ಅರಸನಿಗೆ ಒಪ್ಪಿಸಿದ. ಅವರ ಮೇಲೆ ಕಡು ಮುಳಿದ ರಾಜನು, "ಇದೊಂದು ಸಲ ನಿಮ್ಮನ್ನು ಕೊಲ್ಲದೆ ಬಿಡುತ್ತೇನೆ; ನೀವಿಬ್ಬರೂ ಈ ಊರಿನಿಂದ ತೊಲಗಿ ಹೋಗಿ; ಇಲ್ಲದಿದ್ದರೆ ಕೊಲ್ಲಿಸುತ್ತೇನೆ" ಎಂದು ಶಿಕ್ಷೆ ವಿಧಿಸಿದ. ಅವರು ತಮ್ಮ ತಂದೆಯರಿಗೂ ಬಂಧುಗಳಿಗೂ ತಿಳಿಯದಂತೆ ಮೋಹದಿಂದ ಹೆಂಡಿರು ಮತ್ತು ತಾಯಂದಿರ ಬಳಿ ಹೋಗಿ ತಮ್ಮ ದೇಶತ್ಯಾಗದ ವಿಷಯವನ್ನು ತಿಳಿಸಿದರು. ಮಕ್ಕಳನ್ನು ಬಿಟ್ಟಿರಲಾರದ ಕಡು ಮೋಹದಿಂದ ತಾಯಂದಿರು ತಮ್ಮ ನಂಟರು ಮತ್ತು ಗಂಡಂದಿರನ್ನು ಬಿಟ್ಟು ಅವರೊಡನೆಯೇ ಹೊರಟರು. ತಮ್ಮ ಗಂಡಂದಿರ ಮೇಲಣ ವ್ಯಾಮೋಹದಿಂದ ಹೆಂಡತಿಯರೂ ಬಂಧುಗಳು ಹಾಗೂ ತಂದೆತಾಯಿಯರ ಬಗ್ಗೆ ಯೋಚಿಸದೆ ಅವರೊಡನೆ ಬಂದರು. ಕಡು ಮೋಹದಿಂದ ಕೆಡದವರು ಯಾರು?

ಧನ್ವಂತರಿ ವಿಶ್ವಾನುಲೋಮರು ಹೀಗೆ ತಮ್ಮ ಹೆಂಡಂದಿರು ಹಾಗೂ ತಾಯಿಯರೊಡನೆ ಗಜಪುರಕ್ಕೆ ಹೋದರು. ಅಲ್ಲಿ ಯಮದಂಡನೆಂಬ ತಳವಾರನ ಬಳಿ ರಹಸ್ಯವಾಗಿ ಒಪ್ಪಂದ ಮಾಡಿಕೊಂಡರು. ಅದರಂತೆ ತಾವಿಬ್ಬರೂ ಐನೂರು ಐನೂರು ಮಂದಿ ಕಳ್ಳರಿಗೆ ನಾಯಕರಾಗಿ ಪರದೇಶಗಳಲ್ಲಿ ಕಳ್ಳತನ ಮಾಡಿ, ಅದರಲ್ಲಿ ತಳವಾರನಿಗೆ ಪಾಲಿತ್ತು, ತಾವು ವಿಷಯಸುಖಗಳಲ್ಲಿ ಲೋಲುಪರಾಗಿದ್ದರು. ಒಮ್ಮೆ ವಿಶ್ವಾನುಲೋಮನು ಧನ್ವಂತರಿಗೆ, "ನಾನು ನಿನ್ನನ್ನೊಂದು ಬೇಡುತ್ತೇನೆ; ದಯವಿಟ್ಟು ಮರುಮಾತಾಡದೆ, ಹೋಗು ಎನ್ನದೆ, ಕೋಪಗೊಳ್ಳದೆ, ಮೌನವಾಗಿರದೆ ಅದನ್ನು ನಡೆಸಿಕೊಡಬೇಕು. ಮುಂಚಿನಂತೆ ನೀನು ಬಸದಿಗೆ ಹೋಗುವುದಾಗಲೀ ಋಷಿಗಳೊಡನೆ ಮಾತಾಡುವುದಾಗಲೀ ಮಾಡಬಾರದು. ಏಕೆಂದರೆ ಅದರಿಂದ ನಮ್ಮ ಭೋಗಕ್ಕೆ ತೊಂದರೆಯಾಗುತ್ತದೆ. ಹೀಗಾಗಿ ಮೊದಲೇ ಹೇಳಿಬಿಟ್ಟಿದ್ದೇನೆ" ಎಂದು ಕೈಮುಗಿದು ಕೇಳಿಕೊಂಡ; ಹಾಗೇ ಮಾಡುವುದಾಗಿ ಅವನಿಂದ ಮಾತು ಪಡೆದ. ಇಬ್ಬರೂ ಸಂತೋಷದಿಂದ ಕಾಲ ಕಳೆಯುತ್ತಿದ್ದರು.

ಹೀಗೇ ಕೆಲವು ದಿನಗಳು ಕಳೆಯಿತು. ಒಂದು ದಿವಸ ಅವರಿಬ್ಬರೂ ಊರಿನ ಹೊರಗಿದ್ದ ಕೆರೆಗೆ ಹೋಗುತ್ತಿದ್ದರು. ಅದೇ ಸಮಯಕ್ಕೆ ಸೊಕ್ಕಿದ ಆನೆಯೊಂದು ನಿರಂಕುಶವಾಗಿ ಹಲವರನ್ನು ಕೊಲ್ಲುತ್ತ ಆ ದಾರಿಯಲ್ಲಿ ಬರುತ್ತಿತ್ತು. ಅದನ್ನು ಕಂಡ ಇವರಿಬ್ಬರೂ ಭಯಗೊಂಡು ಓಡಲು ತೊಡಗಿದರು. ಆದರೆ ಆನೆಯು ಅಟ್ಟಿಸಿಕೊಂಡು ಬಂತು. ತಪ್ಪಿಸಿಕೊಳ್ಳಲು ಎಡೆಯಿಲ್ಲದೆ ಮಹಾಪ್ರತಿಜ್ಞರಾದ ಅವರಿಬ್ಬರೂ ಪಕ್ಕದಲ್ಲಿದ್ದ ಸಹಸ್ರಕೂಟಮಂಡಿತವೆಂಬ ಹೆಸರಿನ ಜಿನಾಲಯವನ್ನು ಹೊಕ್ಕರು. ಆನೆಯ ಭಯ ಹಿಂಗುವವರೆಗೂ ಅಲ್ಲಿದ್ದು ಹೊರಡಲುದ್ಯುಕ್ತರಾದರು. ಅಷ್ಟು ಹೊತ್ತಿಗೆ ಜೋರಾಗಿ ಮಳೆ ಬರಲು ಶುರುವಾಯಿತು. ಕೆಲಕಾಲದ ಬಳಿಕ ಮಳೆ ನಿಂತಿತು; ಮತ್ತೊಮ್ಮೆ ಅವರು ಹೊರಟರು. ಆದರೆ ಆ ಸಮಯಕ್ಕೆ ಸೂರ್ಯಾಸ್ತವಾಗಿ ಊರಿನ ಅಗಸೆ ಬಾಗಿಲನ್ನು ಮುಚ್ಚಿದರು. ಹೀಗಾಗಿ ಅಲ್ಲಿಂದ ಹೊರಡಲಾಗದೆ ಧನ್ವಂತರಿಯು ವಿಶ್ವಾನುಲೋಮನಿಗೆ ಕೊಟ್ಟಿದ್ದ ಮಾತನ್ನು ನೆನೆದು, ಕಿವಿಯಲ್ಲಿ ಹತ್ತಿಯನ್ನು ತುರುಕಿಕೊಂಡು ಮಲಗಿದ.

ಆಗ ಪರ್ವೋಪವಾಸವಿದ್ದ ಭವ್ಯಜನಕ್ಕೆ ವರಧರ್ಮರೆಂಬ ದುರಿತಹರರಾದ ಮುನಿಗಳು ಮನಬಿಚ್ಚಿ ಧರ್ಮವನ್ನು ಉಪದೇಶಿಸುತ್ತಿದ್ದರು. ಅಷ್ಟರಲ್ಲಿ ಧನ್ವಂತರಿಯು ನಿದ್ದೆಯಿಂದ ನಿಧಾನವಾಗಿ ಎಚ್ಚರಗೊಂಡ. ನೆಲದ ಮೇಲೆ ಮಲಗಿದ್ದ ವಿಶ್ವಾನುಲೋಮನನ್ನು ತಡವರಿಸಿ ನೋಡಿ, ಮರವಟ್ಟ ಹಾಗೆ ನಿದ್ದೆ ಮಾಡುತ್ತಿದ್ದುದನ್ನು ತಿಳಿದು, ಕರ್ಮೋಪಶಮನಗೊಂಡಿದ್ದ ಅವನು ತನ್ನ ಕಿವಿಯಲ್ಲಿ ತುರುಕಿಕೊಂಡಿದ್ದ ಹತ್ತಿಯನ್ನು ತೆಗೆದು ಮೆಲ್ಲನೆ ಮೇಲೆದ್ದ; ಕುಳಿತು ಧರ್ಮವನ್ನು ಕೇಳತೊಡಗಿದ. ಮುನಿಗಳು, "ಶ್ರೇಷ್ಠವಾದ ಧರ್ಮವನ್ನು ಸ್ಥಿರವಾದ ಮನಸ್ಸಿನಿಂದಲೂ ಉತ್ಸಾಹದಿಂದಲೂ ಕೇಳಲೊಲ್ಲದವನು ಕಿರಿಯ; ಆ ಧರ್ಮವನ್ನು ತಿಳಿದೂ ಸ್ಥಿರಮನನಾಗಲರಿಯದವನು ಬರಿಯ" ಎಂದು ವಿವರಿಸುತ್ತಿದ್ದರು. ಆ ಮಾತುಗಳನ್ನು ಕೇಳಿ ಧನ್ವಂತರಿಯು ಅವರ ಬಳಿ ಬಂದು ತನಗೆ ವ್ರತವನ್ನು ದಯಪಾಲಿಸಬೇಕೆಂದು ನಮ್ರನಾಗಿ ಕೇಳಿಕೊಂಡ. ದಿವ್ಯಜ್ಞಾನಿಗಳಾದ ವರಧರ್ಮಭಟ್ಟಾರಕರು ಇವನು ಆಸನ್ನಭವ್ಯನೆಂಬುದನ್ನರಿತು ವಾತ್ಸಲ್ಯದಿಂದ, ಪ್ರತಿನಿತ್ಯ ತರಟುದಲೆಯವನನ್ನು ಕಂಡಲ್ಲದೆ ಊಟಮಾಡಬೇಡವೆಂದು ಬೋಧಿಸಿದರು. ಇವನು ಹಾಗೆಯೇ ಮಾಡುವೆನೆಂದು ವ್ರತ ತೊಟ್ಟು ಮನೆಗೆ ಹೋಗಿ ಕೆಲವು ದಿನಗಳ ಕಾಲ ಅದೇ ರೀತಿಯನ್ನು ಅನುಸರಿಸಿದ.

ಒಂದು ದಿನ ತುಂಬ ಹಸಿವೆಯಿಂದ ಊಟಕ್ಕೆಂದು ಮನೆಗೆ ಬಂದು, ತನ್ನ ವ್ರತವನ್ನು ನೆನೆಸಿಕೊಂಡ. ತಾನು ವ್ರತಕೆಟ್ಟೆನೆಂದು ತನ್ನ ಬಗ್ಗೆಯೇ ಅಸಹ್ಯ ಹುಟ್ಟಿ, ಮುನಿಗಳು ಹೇಳಿದ ಮಾತಿಗೆ ತಪ್ಪುವುದು ಹಿರಿದಾದ ದೋಷವೆಂದು ತಿಳಿದು, ಪಕ್ಕದ ಮನೆಯಲ್ಲಿದ್ದ ಕುಂಬಾರನು ತರಟುದಲೆಯವನಾದುದರಿಂದ ಅವನನ್ನು ಕಾಣಲು ಹೋದ. ಆದರೆ ಅವನು ಮನೆಯಲ್ಲಿ ಕಾಣಲಿಲ್ಲ. ಅಲ್ಲಿಂದ ಮಣ್ಣ ಕುಳಿಗೆ ಹೋಗಿ, ದೂರದಿಂದಲೇ ಅವನ ಬೋಳಾದ ತಲೆಯನ್ನು ಕಂಡು, 'ಕಂಡೆ' ಎಂದು ಸಂತೋಷದಿಂದ ಕೂಗಿ ವಾಪಸಾದ. ಅದೊಂದು ಕಾಕತಾಳೀಯ; ತಾನು ಕಂಡಿದ್ದ ನಿಕ್ಷೇಪವನ್ನು ಅವನೂ ಕಂಡನೆಂದು ಭಾವಿಸಿ, ಅವನು ಮಧ್ಯರಾತ್ರಿ ಕಂಡಿದ್ದ ಹೊನ್ನನ್ನು ತಂದೊಪ್ಪಿಸಿದ. "ನಾನು ಈ ಹೊನ್ನನ್ನು ಕಂಡದ್ದನ್ನು ನೀನು ಹಿಂದೆ ಬಂದು ಕಂಡೆ ಎಂದುದರಿಂದ ಭಯಪಟ್ಟು ಇದನ್ನು ತಂದು ಒಪ್ಪಿಸುತ್ತಿದ್ದೇನೆ. ನನ್ನನ್ನು ಕೊಲ್ಲುವುದಾಗಲೀ ರಕ್ಷಿಸುವುದಾಗಲೀ ನಿನಗೆ ಸೇರಿದ್ದು" ಎಂದು ನುಡಿದ. ಧನ್ವಂತರಿಗೆ ಆಗ ಮುನಿಯು ನೆನಪಿಗೆ ಬಂದ; ಮಹಾ ಹರ್ಷಚಿತ್ತದಿಂದ ತನ್ನ ವ್ರತವನ್ನು ಜ್ಞಾಪಿಸಿಕೊಂಡ. ಮುನಿಪತಿಯ ಮಾತಿನಿಂದಾಗಿ ನನಗೆ ಇಂತಹ ಲಾಭವಾಯಿತು; ಸುವ್ರತವು ಸಾಮಾನ್ಯವಾದುದಲ್ಲ ಎನ್ನಿಸಿತು. ಅವನಿಗೆ ಬೇಕಾದಷ್ಟು ಹಣವನ್ನು ಕೊಟ್ಟು ಕಳಿಸಿದ.

ಮಾರನೆಯ ದಿವಸ ಬಸದಿಗೆ ಬಂದು ವರಧರ್ಮಭಟ್ಟಾರಕರಿಗೆ ನಮಿಸಿ, ತನಗೆ ಲಾಭವಾದ ವಿಷಯವನ್ನು ತಿಳಿಸಿದ. ತನಗೆ ಮತ್ತೊಂದು ವ್ರತವನ್ನು ದಯಗೆಯ್ಯಬೇಕೆಂದು ಕೈಮುಗಿದು ಬೇಡಿಕೊಂಡ. ಆಗ ಮುನಿಶ್ರೇಷ್ಠರು, "ಮಗನೆ, ಹೆಸರು ತಿಳಿಯದ ಮರಗಳ ಹಣ್ಣುಗಳನ್ನು ಎಷ್ಟೇ ಹಸಿವಾಗಿದ್ದರೂ ತಿನ್ನಬೇಡ" ಎಂದು ಹೇಳಿದರು. ಧನ್ವಂತರಿಯು ಮಹಾಪ್ರಸಾದವೆಂದು ಅವರಿಗೆ ಪೊಡಮಟ್ಟು ಮನೆಗೆ ಮರಳಿದ. ಕೆಲವು ದಿನಗಳು ಕಳೆದವು. ಅವನೂ ವಿಶ್ವಾನುಲೋಮನೂ ತಮ್ಮ ತಮ್ಮ ಪಡೆಗಳ ಸಮೇತ ಕಳ್ಳತನಕ್ಕೆಂದು ಪರದೇಶಕ್ಕೆ ಹೋದರು; ಬಹುದ್ರವ್ಯವು ಅವರ ಕೈವಶವಾಯಿತು. ಹರ್ಷದಿಂದ ಊರಿಗೆ ವಾಪಸ್ಸು ಬರುವಾಗ ಒಂದೆಡೆ ಅಡವಿಯಲ್ಲಿ ಬೀಡುಬಿಟ್ಟರು. ಆದರೆ ಅವರ ಬಳಿ ಊಟದ ಬುತ್ತಿಯಿರಲಿಲ್ಲ. ಹಾಗಾಗಿ ತುಂಬ ಹಸಿದಿದ್ದ ಅವರು ಅಡವಿಯಲ್ಲಿದ್ದ ಮರಗಳಲ್ಲಿನ ಹಣ್ಣುಗಳನ್ನು ಕಿತ್ತು ತರಲು ತಮ್ಮ ಭೃತ್ಯರಿಗೆ ಆಜ್ಞಾಪಿಸಿದರು. ಅವರೆಲ್ಲ ಹೋದರು.

ಅವರು ಅಲ್ಲಿ ಸಾರವತ್ತಾದ, ಕಂಪಿನಲ್ಲಿ ಕರ್ಪುರವನ್ನು ಹೋಲುವ, ಕೆಂಪಗೆ ಹೊಳೆಯುತ್ತಿದ್ದ ಕಾಂಚೀರ ಮರಗಳ ಹಣ್ಣುಗಳನ್ನು ಕಂಡು, ಸಂತೋಷದಿಂದ ಅವುಗಳನ್ನು ಕಿತ್ತು ತಂದು ಧನ್ವಂತರಿ–ವಿಶ್ವಾನುಲೋಮರ ಮುಂದೆ ರಾಸಿ ಹಾಕಿದರು. ಆದರೆ ಧನ್ವಂತರಿಗೆ ಮರದ ಹೆಸರು ತಿಳಿದಿರಲಿಲ್ಲ, ಹಾಗಾಗಿ ಅವುಗಳನ್ನು ತಿನ್ನಲೊಲ್ಲದೆ ಮೌನದಿಂದಿದ್ದ. ಆಗ ವಿಶ್ವಾನುಲೋಮನು, "ಯಾವುದೋ ಉಪಾಯಗಳಿಂದ ತಾನೂ ತಿನ್ನದಿರುವುದಲ್ಲದೆ, ಇತರರನ್ನೂ ನಾನಾ ಕಲ್ಪನೆಗಳಿಂದ

ಹೀಗೆ ದುಃಖಿತರನ್ನಾಗಿಸುವುದೇ? ಸವಣರಂತಹ ಧೂರ್ತರನ್ನು ನಾನಂತೂ ಈ ಲೋಕದಲ್ಲಿಯೇ ಕಾಣೆ. ಅಂತಹವರ ಮಾತುಗಳನ್ನು ನಿಶ್ಚಯವೆಂದು ಹೇಗೆ ನಂಬುವುದು?" ಎಂದ. ಆದರೂ ಅವನು ಹಣ್ಣನ್ನು ತಿನ್ನದಿರಲು ವಿಶ್ವಾನುಲೋಮನೂ ತಿನ್ನಲಿಲ್ಲ. ಆಗ ಹಸಿವನ್ನು ತಡೆಯಲಾರದ ಭೃತ್ಯರೆಲ್ಲರು "ನೀವಿಬ್ಬರೂ ಸವಣಮರುಳಿನಿಂದ ಸಾಯಿರಿ" ಎಂದು ಶಾಪ ಹಾಕಿ ಹಣ್ಣುಗಳನ್ನು ತಿಂದರು; ಸ್ವಲ್ಪ ಹೊತ್ತಿನಲ್ಲಿ ಸತ್ತರು. ತಾವು ಶಂಕಿಸಿ ಬದುಕಿದೆವು ಎಂದು ಸಂತಸಗೊಂಡು ಅವರಿಬ್ಬರೂ ಭೃತ್ಯರ ಹೊನ್ನನ್ನೂ ತಮ್ಮಲ್ಲಿ ಹಂಚಿಕೊಂಡರು.

ಊರಿಗೆ ವಾಪಸ್ಸು ಬಂದ ಮೇಲೆ, ಧನ್ವಂತರಿಯು ಹೆಚ್ಚಿದ ಲಾಭದಿಂದ ಹಿಗ್ಗಿ ಬಸದಿಗೆ ಬಂದು ವರಧರ್ಮಭಟ್ಟಾರಕರನ್ನು ಕಂಡು ತನಗಾದ ಲಾಭವನ್ನೂ, ಸುವ್ರತದ ಫಲದಿಂದಾಗಿ ತಾನು ಬದುಕಿದುದನ್ನೂ ಹೇಳಿದ; ಆಮೇಲೆ ತನಗೆ ಇನ್ನೊಂದು ವ್ರತವನ್ನು ದಯಪಾಲಿಸಬೇಕೆಂದು ಬೇಡಿಕೊಂಡ. ಮುನಿಗಳು ಹಿಟ್ಟಿನ ಎತ್ತನ್ನೂ ಬಂಡಿಯನ್ನೂ ತಿನ್ನಬೇಡವೆಂಬ ವ್ರತವನ್ನು ನೀಡಿದರು. ಧನ್ವಂತರಿಯು ಅದನ್ನು ಸ್ವೀಕರಿಸಿ ಮನೆಗೆ ಹೋದ. ಮುಂದೆ ತಾನೂ ಗೆಳೆಯನೂ ಭೃತ್ಯಾನೀಕದೊಡನೆ ಹೋಗಿ ಚೆನ್ನಾಗಿ ಕಳ್ಳತನ ಮಾಡಿ, ಅಧಿಕ ಲಾಭದಿಂದ ಊರಿಗೆ ಮರಳುವಾಗ ಒಂದೆಡೆ ಅಡವಿಯ ನಡುವೆ ವಿಪರೀತ ಹಸಿವು ನೀರಡಿಕೆಗಳಿಂದ ಬಳಲಿ ಹತ್ತಿರವಿದ್ದ ನಾಗಾಲಯದ ಮುಂದಣ ತಾವರೆಗೊಳಕ್ಕೆ ನೀರನ್ನು ಕುಡಿಯಲು ಹೋದರು. ಅಲ್ಲಿ ಹಿಂದಿನ ದಿನ ನಾಡವರು ಪೂಜಿಸಿ ಹೋಗಿದ್ದ ಹಿಟ್ಟಿನ ಎತ್ತು ಮತ್ತು ಬಂಡಿಗಳು ಕಾಣಿಸಿದವು. ಅವುಗಳನ್ನು ತಂದು ತೋರಿಸಿದಾಗ ಧನ್ವಂತರಿಯು ಅದನ್ನು ತಿನ್ನಲು ಒಪ್ಪಲಿಲ್ಲ; ವಿಶ್ವಾನುಲೋಮನೂ ತಿನ್ನಲಿಲ್ಲ. ಭೃತ್ಯರು ತಾಳ್ಮೆಗೆಟ್ಟು ಅವನ್ನು ತಿಂದರು. ಹಿಂದಿನ ರಾತ್ರಿ ಹುತ್ತದಿಂದ ಹೊರ ಬಂದ ಹಾವು ವಿಷವನ್ನು ಕಾರಿ ಹಿಟ್ಟನ್ನು ಎಂಜಲು ಮಾಡಿದ್ದರಿಂದಾಗಿ ಅದು ವಿಷಪೂರಿತವಾಗಿತ್ತು. ಹಾಗಾಗಿ ಅದನ್ನು ತಿಂದವರು ಗತಪ್ರಾಣರಾದರು. ಅದನ್ನು ಕಂಡು ಗೆಳೆಯರಿಗೆ ಅಚ್ಚರಿಯಾಯಿತು. ಎದೆಯನ್ನು ನೀವಿಕೊಂಡು ತಂತಮ್ಮ ಭಟರ ಹಣವೆಲ್ಲವನ್ನೂ ತಾವೇ ಕಟ್ಟಿಕೊಂಡು ಊರಿಗೆ ಬಂದರು. ತಮಗೆ ಅನಿರೀಕ್ಷಿತವಾಗಿ ಆದ ಅಧಿಕ ಲಾಭಕ್ಕೆ ಅವರಿಗೆ ಆಶ್ಚರ್ಯವೆನಿಸಿತ್ತು.

ಧನ್ವಂತರಿಯು ಬಸದಿಗೆ ಹೋಗಿ ವರಧರ್ಮಭಟ್ಟಾರಕರನ್ನು ಕಂಡು ವಂದಿಸಿ, ತನಗಾದುದೆಲ್ಲವನ್ನೂ ವಿವರಿಸಿದ. "ನಿಮ್ಮ ದಯೆಯಿಂದ ನನಗೆ ಅನೂನ ಲಾಭವಾಯಿತು. ಇನ್ನೊಂದು ವ್ರತವನ್ನು ದಯೆಗೈಯಿರಿ" ಎಂದು ಕೇಳಿಕೊಂಡ. "ಎರಡು ಪರ್ವಗಳಂದೂ, ಅಷ್ಟಮಿ ದಶಮಿಗಳಂದೂ, ಚತುರ್ದಶಿಯಂದೂ ಆಸೆಗೆ ಒಳಗಾಗದೆ ಕಳ್ಳು-ಮಾಂಸಗಳನ್ನು ಸೇವಿಸಬೇಡ" ಎಂದು ಅವರು ಉಪದೇಶಿಸಿದರು. ಮುನಿವಚನದ ಬಗ್ಗೆ ನಂಬಿಕೆ ಬಂದದ್ದರಿಂದ ಬೇರೇನನ್ನೂ ಆಲೋಚಿಸದೆ ಧನ್ವಂತರಿಯು ಅವರು ಕೊಟ್ಟ ವ್ರತವನ್ನು ಸ್ವೀಕರಿಸಿ ಮನೆಗೆ ಬಂದು ಸುಖವಾಗಿ ಬದುಕುತ್ತಿದ್ದ.

ಒಂದು ದಿವಸ ವಿಶ್ವಾನುಲೋಮನನ್ನು ಬರಹೇಳಿ, ಅವನಿಗೆ ತನ್ನ ಕಾರ್ಯಭರವನ್ನು ವಿಸ್ತಾರವಾಗಿ, ಒಂದೂ ಬಿಡದೆ ಎಲ್ಲವನ್ನೂ ನಿಧಾನವಾಗಿ ವಿವರಿಸಿದ. ತನ್ನ ಸೈನ್ಯವನ್ನು ಕನಕ, ತಾಂಬೂಲ ಹಾಗೂ ವಸ್ತ್ರಗಳಿಂದ ಸನ್ಮಾನಿಸಿ ಪರದೇಶಕ್ಕೆ ಕಳ್ಳತನಕ್ಕೆ ಹೋಗುವ ತನ್ನ ತಂತ್ರವನ್ನು ತಿಳಿಸಿದ. ಹಾಗೆ ಹೋಗಿ ಕಳವಿನಿಂದ ಅಧಿಕ ಲಾಭವನ್ನು ಹೊತ್ತು ಮರಳಿ ಬರುತ್ತಿರುವಾಗ ಮಾರ್ಗಮಧ್ಯದಲ್ಲಿ ಒಂದು ಗಿರಿತಟದಲ್ಲಿ ಅವರೆಲ್ಲ ಬೀಡುಬಿಟ್ಟಿದ್ದರು. ಪ್ರಯಾಣದ ಕಾರಣದಿಂದಾಗಿ ಹಲವು ದಿನಗಳಿಂದ ಕಳ್ಳು-ಮಾಂಸಗಳನ್ನು ಸೇವಿಸಲಾಗಿರಲಿಲ್ಲ; ಅವುಗಳನ್ನು ಬಿಟ್ಟು ಸಂಸಾರದಿಂದ ಪಡೆಯುವ ಫಲವಾದರೂ ಇನ್ನೇನು ಎಂದು ವಿಶ್ವಾನುಲೋಮನು ಆಲೋಚಿಸಿದ. ಅವನು ತನ್ನ ಐನೂರು ಮಂದಿ ಭಟರಲ್ಲಿ ನಾಲ್ವರನ್ನು ಕರೆದು, ಆ ಗಿರಿತಟದಲ್ಲಿದ್ದ ಬೇಡವಳ್ಳಿಯಿಂದ ಕಳ್ಳನ್ನು ಕೊಂಡು ತರಲು ಹೇಳಿದ. ಅಂತೆಯೇ ಧನ್ವಂತರಿಯೂ ತನ್ನ ನಾಲ್ವರು ಭಟರನ್ನು ಕರೆದು, ಅದೇ ಬೇಡರಹಳ್ಳಿಯಿಂದ ಮಾಂಸವನ್ನು ತರಲು ಹೇಳಿ ಕಳಿಸಿದ.

ವಿಶ್ವಾನುಲೋಮನ ಭಟರು ಹೋಗಿ ಕಳ್ಳನ್ನು ತೆಗೆದುಕೊಂಡು ಬರುವಾಗ ತಮ್ಮಲ್ಲಿ ಮಾತಾಡಿಕೊಂಡು, ಕಳ್ಳಿನಲ್ಲಿ ವಿಷವನ್ನು ಬೆರೆಸಿ ಪ್ರೀತಿಯಿಂದ ಎಂಬಂತೆ ಎಲ್ಲರಿಗೆ ಎರೆದು ಅವರನ್ನು ಕೊಂದು, ಆಮೇಲೆ ಅವರೆಲ್ಲರ ಹಣವನ್ನು ತಾವು

ಹಂಚಿಕೊಳ್ಳುವ ಸಂಚನ್ನು ಹೂಡಿದರು. ಅದೇ ರೀತಿ ಕಳ್ಳಿನಲ್ಲಿ ವಿಷವನ್ನು ಬೆರೆಸಿಕೊಂಡು ಬಂದರು. ಅಷ್ಟರಲ್ಲಿ ಆ ಕಡೆ, 'ಪರಚಿಂತಾಗರೀಯಸೀ' ಎಂಬ ನಾಣ್ಣುಡಿಯಂತೆ, ಹಳ್ಳಿಗೆ ಹೋಗಿದ್ದ ಧನ್ವಂತರಿಯ ಭಟರು ಮಾಂಸವನ್ನು ತೆಗೆದುಕೊಂಡು ಬರುವಾಗ, ಅದರಲ್ಲಿ ವಿಷವನ್ನು ಬೆರೆಸಿ ನಾಯಕರನ್ನೊಳ ಗೊಂಡಂತೆ ಎಲ್ಲರಿಗೂ ಉಣಲಿಕ್ಕಿ ಅವರೆಲ್ಲರನ್ನೂ ಕೊಂದು ಎಲ್ಲರ ಒಡವೆಗಳನ್ನು ತಾವೇ ಹಂಚಿಕೊಳ್ಳುವ ಹೂಟವನ್ನು ಹೂಡಿದರು. ಅದರಂತೆ ಅಡಗಿನಲ್ಲಿ ವಿಷದಲ್ಲಿ ಬೆರೆಸಿ ತಂದರು.

ಅಂದು ಚತುರ್ದಶಿಯಾದ್ದರಿಂದ ಧನ್ವಂತರಿಯು ಕಳ್ಳು–ಮಾಂಸಗಳನ್ನು ಸೇವಿಸಲಿಲ್ಲ; ಅವನ್ನು ಅನುಸರಿಸಿ ವಿಶ್ವಾನುಲೋಮನೂ ಅವುಗಳನ್ನು ಒಲ್ಲೆನೆಂದ. ಭಟರುಗಳಲ್ಲಿ ಅವರು ಇವರಿಗೆ ಕಪಟ ಪ್ರೀತಿಯಿಂದ ಕಳ್ಳನ್ನು ಎರೆದರು; ಇವರು ಅವರಿಗೆ ಅದೇ ರೀತಿ ಮಾಂಸವನ್ನು ಬಡಿಸಿದರು. ಎಲ್ಲರೂ ತಿಂದು ಕುಡಿದು ಸತ್ತು ಬಿದ್ದರು. ಅವರ ಹೆಣಗಳನ್ನು ನೋಡಿ ಅದ್ಭುತವೆಂದು ಉದ್ಗರಿಸಿ, ವ್ರತದ ಮಹಿಮೆಯನ್ನು ಕಂಡು ಸಂತೋಷಿಸಿ ಧನ್ವಂತರಿಯು ಗೆಳೆಯನಿಗೆ ಹೀಗೆಂದ: "ಮುನಿಸೇವೆಗಿಂತಲೂ ಬೇರೆಯಾದ ಲಾಭವೆಲ್ಲಿದೆ!" ಅವರು ಸತ್ತವರ ದ್ರವ್ಯವನ್ನೆಲ್ಲ ತೆಗೆದುಕೊಂಡು ಮನೆಗೆ ಹಿಂದಿರುಗಿದರು.

ಧನ್ವಂತರಿಯು ಮಾರನೆಯ ದಿನ ಚೈತ್ಯಾಲಯಕ್ಕೆ ಬಂದು ವರಧರ್ಮ ಭಟ್ಟಾರಕರಿಗೆ ಭಕ್ತಿಯಿಂದ ನಮಸ್ಕರಿಸಿ, ಎಲ್ಲ ವೃತ್ತಾಂತವನ್ನೂ ವಿವರವಾಗಿ ತಿಳಿಸಿದ. ಆಮೇಲೆ ತನಗೆ ಇನ್ನೊಂದು ವ್ರತವನ್ನು ದಯಪಾಲಿಸಬೇಕೆಂದು ಕೇಳಿಕೊಂಡ. ಆಗ ಅವರಿತ್ತ ವ್ರತವೆಂದರೆ, ಯಾವ ಪ್ರಾಣಿಯ ಮೇಲಾದರೂ ಕೋಪ ಬಂದಾಗ ಹಿಂದಕ್ಕೆ ಏಳು ಹೆಜ್ಜೆಗಳನ್ನಿಟ್ಟು ಆನಂತರ ಅನ್ನಿಸಿದ್ದನ್ನು ಮಾಡಬೇಕು ಎಂಬುದು. ಹಾಗೆಯೇ ಮಾಡುವೆನೆಂದು ಮಾತು ಕೊಟ್ಟು ಧನ್ವಂತರಿಯು ಮನೆಗೆ ಮರಳಿದ. ಸ್ವಲ್ಪ ದಿನಗಳಲ್ಲಿ ಕಳಿಂಗ ದೇಶಕ್ಕೆ ಕಳವಿಗೆಂದು ಹೋಗಿ ಆರು ತಿಂಗಳಿದ್ದು ಬರುವಾಗ, ಇತರರ ಹೆಂಡಿರು ಮತ್ತು ಹಣಗಳಿಗಾಗಿ ಆಸೆ ಪಡುವುದರಲ್ಲಿಯೇ ತನ್ನ ಕಾಲವೆಲ್ಲ ವ್ಯರ್ಥವಾಗಿ ಹೋಯಿತು, ನನ್ನ ಹೆಂಡಿರು–ಅರ್ಥಗಳಿಗೆ ಆಸೆಪಡುವವರು ಇರುವರೋ ಇಲ್ಲವೋ ಎಂಬ ಆಲೋಚನೆ ಅವನಿಗೆ ಬಂತು. ಈ ಚೋದ್ಯವನ್ನು ಪರೀಕ್ಷಿಸೋಣ ಎಂದು ನಾಲ್ಕೆಂಟು ದಿನಗಳು ತಡೆದು ಗಜಪುರಕ್ಕೆ ವಾಪಸಾಗಿ ಸುಖವಾಗಿ ಕಾಲ ಕಳೆದ.

ಕೆಲವು ದಿನಗಳಾದ ಮೇಲೆ, ತಾನು ಎಲ್ಲಗೋ ಹೋಗಬೇಕೆಂದು ಹೊರಟು, ಊರ ಹೊರಗಿನ ಜಿನಮಂದಿರದಲ್ಲಿ ಪೂಜಾವೈಭವವನ್ನು ನೋಡುತ್ತ ಮಧ್ಯ ರಾತ್ರಿಯವರೆಗೂ ಕಾಲಹರಣ ಮಾಡಿದ. ಆಮೇಲೆ ತನ್ನ ಮನೆಗೆ ವಾಪಸಾಗಿ, ಕವಾಟೋದ್ಘಾಟನವಿದ್ಯೆಯ ಬಲದಿಂದ ಬಾಗಿಲನ್ನು ತೆಗೆದು ಮೆಲ್ಲನೆ ಮನೆಯ ಒಳಗೆ ಬಂದ. ಹಾಸಿಗೆಯ ಮೇಲೆ ಒಟ್ಟಿಗೇ ಮಲಗಿದ್ದ ತಾಯಿ ಮತ್ತು ಹೆಂಡತಿಯರನ್ನು ಕಂಡು, ಹೆಂಡತಿಯ ಜೊತೆ ಜಾರನಿರುವನೆಂದು ಭಾವಿಸಿ ಅವಳನ್ನು ಇರಿದು ಕೊಲ್ಲಬೇಕೆಂದುಕೊಂಡ. ಆದರೆ ಅವನಿಗೆ ಗುರುಗಳಿತ್ತಿದ್ದ ವ್ರತ ನೆನಪಿಗೆ ಬಂತು; ಅದರಿಂದಾಗಿ ಅವನು ಏಳಡಿ ಹಿಂದಕ್ಕೆ ಬಂದ. ಅಷ್ಟರಲ್ಲಿ ಎಚ್ಚರಗೊಂಡು, "ಅತ್ತೆ, ಉಬ್ಬಸವಾಗುತ್ತಿದೆ, ಅತ್ತ ಸರಿಯಿರಿ" ಎಂದು ಗರ್ಭಿಣಿಯಾಗಿದ್ದ ಹೆಂಡತಿಯು ತನ್ನ ಹೊದಿಕೆಯನ್ನು ತೆಗೆದಳು. ಅವರಿಬ್ಬರನ್ನೂ ಕಂಡು, ಯತಿಶ್ರೇಷ್ಠರು ಕೊಟ್ಟ ಐದೂ ವ್ರತಗಳು ಉನ್ನತಿಯನ್ನು ತಂದು ನನಗೆ ಉಪಕಾರ ಮಾಡಿದವು ಎಂದು ಉಬ್ಬಿನಿಂದ ಧನ್ವಂತರಿಯು ಮುನಿಯನ್ನು ಹೊಗಳಿಕೊಂಡ. ಕಡುಗೋಪದಿಂದ ವ್ರತವನ್ನು ಮರೆತು ತಾನೇನಾದರೂ ತಿವಿದಿದ್ದರೆ ಗರ್ಭಿಣಿ ಹೆಂಡತಿ ಹಾಗೂ ತಾಯಿ ಇಬ್ಬರನ್ನೂ ಕೊಂದ ಮಹಾಪಾತಕಕ್ಕೆ ಪಕ್ಕಾಗುತ್ತಿದ್ದೆನಲ್ಲ ಎಂದು ದಿಗ್ಭ್ರಮೆಗೊಂಡ.

ಮುಂಚಿನ ನಾಲ್ಕು ವ್ರತಗಳಿಗಿಂತಲೂ ಇದು ಹೆಚ್ಚಿನ ವ್ರತ; ಏಕೆಂದರೆ ಮುಂದೆ ಒದಗುವ ಸದ್ಗತಿಯೂ ಈಗ ದೊರಕಿರುವ ಯಶಸ್ಸೂ ಈ ವ್ರತದ ಕಾರಣದಿಂದಲೇ ಉಳಿಯುವಂತಾಯಿತು; ತಾನೇನಾದರೂ ವಧೆ ಮಾಡಿದ್ದರೆ ಇಹಪರವೆರಡೂ ತನಗೆ ತಪ್ಪಿ ಹೋಗುತ್ತಿದ್ದವು ಎಂದು ಅವನಿಗನ್ನಿಸಿತು. ತನ್ನ ಬಗ್ಗೆಯೇ ಅವನಿಗೆ ಹೇವವುಂಟಾಯಿತು; ನಿಶ್ಚಲಗತಿಯನ್ನು ಪಡೆಯಬೇಕೆಂದೆನಿಸಿತು; ಅಂತೆಯೇ ನಿರ್ಧರಿಸಿದ. ತನ್ನ ಆಸ್ತಿಯಲ್ಲಿ ತಕ್ಕಷ್ಟನ್ನು ಹೆಂಡತಿ ಹಾಗೂ ತಾಯಿಗೆ ಕೊಟ್ಟು ಉಳಿದದ್ದನ್ನು ಬಡ ಶ್ರಾವಕರಿಗೂ ಜಿನಪೂಜೆಗೂ ದಾನ ಮಾಡಿ, ವರಧರ್ಮಭಟ್ಟಾರಕರ ಬಳಿಗೆ ಬಂದು ನಮಸ್ಕರಿಸಿ,

"ನಿಮ್ಮ ಪ್ರಸಾದದಿಂದ ನನಗೆ ಮಹಾಪಾತಕವುಂಟಾಗುತ್ತಿದ್ದುದು ತಪ್ಪಿತು" ಎಂದು ನಡೆದುದೆಲ್ಲವನ್ನೂ ವಿಸ್ತಾರವಾಗಿ ಹೇಳಿದ. ಕೊನೆಗೆ ತನಗೆ ದೀಕ್ಷೆಯನ್ನು ಕರುಣಿಸಬೇಕೆಂದು ಬೇಡಿಕೊಂಡ. ಆಗ ಮುನೀಂದ್ರೋತ್ತಮರು, "ಮಗನೆ, 'ಕೆಟ್ಟ ನೂರುಂ ತಪಂಬಟ್ಟು ನೂರು' ಎಂಬ ಗಾದೆ ಮಾತಿದೆ. 'ಹುಟ್ಟಿದೆಡೆಯ ಹೊನ್ನು ಮಿಗಿಲು, ಹೋದೆಡೆಯ ತಪ ಮಿಗಿಲು' ಎಂಬ ಕಾರಣದಿಂದ ನೀನು ಇಲ್ಲಿ ತಪಸ್ಸಿಗೆ ನಿಲ್ಲಬೇಡ. ಏಕಾಂತವಿಷಯದ ಧರಣೀಭೂಷಣಪರ್ವತದಲ್ಲಿ ನನ್ನ ಸಧರ್ಮಿಗಳಾದ ಶ್ರೀವರ್ಮಭಟಾರಕರಿದ್ದಾರೆ; ಅವರಲ್ಲಿಗೆ ಹೋಗಿ ದೀಕ್ಷೆಯನ್ನು ತೆಗೆದುಕೋ" ಎಂದು ಹೇಳಿದರು. ಹಾಗೆಯೇ ಮಾಡಲು ನಿರ್ಧರಿಸಿ, ವಿಶ್ವಾನುಲೋಮನನ್ನು ತನ್ನ ಬಳಿ ಕಳಿಸಲು ತಾಯಿಗೆ ಹೇಳಿ ಹೊರಟ. ಆ ಗಿರಿಯನ್ನು ಸೇರಿ ಯೋಗೀಂದ್ರರಿಗೆ ಎರಗಿ ತಾನು ಬಂದ ಕಾರ್ಯವನ್ನು ತಿಳಿಸಿದ. ಅವರು ತಕ್ಷಣವೇ ಅವನಿಗೆ ಜಿನದೀಕ್ಷೆಯನ್ನು ನೀಡಿದರು. ಧನ್ವಂತರಿಯು ತಪಸ್ಸು ಮಾಡಲು ತೊಡಗಿದ.

ಇತ್ತ, ಧನ್ವಂತರಿಯು ದೀಕ್ಷೆ ತೆಗೆದುಕೊಳ್ಳಲು ಹೋದುದನ್ನು ತಿಳಿದು ವಿಶ್ವಾನುಲೋಮನು ದುಃಖಿತನಾದ. ಗೆಳೆಯನ ಗತಿಯೇ ತನಗೂ ಎಂದು ತಿಳಿದು ಬಂದಾಗ ಅವನಿಗೆ ಸಹಸ್ರಜಟಿ ಎಂಬ ತಾಪಸನು ಧನ್ವಂತರಿಯಿದ್ದ ಜಾಗವನ್ನು ತೋರಿಸಿದ. ಅಲ್ಲಿಗೆ ಬಂದ ವಿಶ್ವಾನುಲೋಮನು ಸೂರ್ಯಪ್ರತಿಮೆಯಲ್ಲಿ ನಿಂತಿದ್ದ ಧನ್ವಂತರಿಮುನಿಯನ್ನು ಮಾರ್ಗ ತಿಳಿಯದೆ ಮಾತನಾಡಿಸಿದಾಗ, ಅವನು ಮಾರ್ನುಡಿಯಲಿಲ್ಲ. ತನ್ನ ಜೊತೆ ಮಾತನಾಡಲಿಲ್ಲವೆಂದು ಗೆಳೆಯನ ಬಗ್ಗೆ ಅವನಿಗೆ ಮುಳಿಸುಂಟಾಯಿತು. ವಾಪಸು ಬಂದು ಆ ತಾಪಸನಿಗೆ ಶಿಷ್ಯನಾದ. ಮಾರನೆಯ ದಿನ ಧನ್ವಂತರಿಮುನಿಯೇ ವಿಶ್ವಾನುಲೋಮನಲ್ಲಿಗೆ ಬಂದು ಸಂಭಾಷಣೆಯನ್ನು ಮಾಡಲು, ಮಿಥ್ಯಾತ್ವಕರ್ಮದ ಉದಯದ ಕಾರಣದಿಂದಾಗಿ ತನ್ನನ್ನು ಹಿಂದಿನ ದಿನ ಮಾತನಾಡಿಸದಿದ್ದ ಮುನಿಸಿನಿಂದ ಅವನು ಮೌನದಿಂದಿದ್ದ. ಆಗ ವಾತ್ಸಲ್ಯ ರತ್ನಾಕರನು, "ಎಲೆ ಸಖನೇ, ಇಡೀ ಜಗತ್ತು ಹೊಗಳುವಂತೆ, ನಿನ್ನ ತಪಸ್ಸಿನ ಫಲವನ್ನೂ ನನ್ನ ತಪಸ್ಸಿನ ಫಲವನ್ನೂ ಕೊನೆಯಲ್ಲಿ ಫಲದಲ್ಲಿಯೇ ಕಾಣಬೇಕು" ಎಂದು ಹೇಳಿ ಅಲ್ಲಿಂದ ಹೊರಟ.

ಬಂದವನೇ ಉಗ್ರೋಗ್ರ ತಪಗೈದು ಸಮಾಧಿಮರಣದಿಂದ ಸತ್ತು ಧನ್ವಂತರಿ ಮುನಿನಾಥನು ಅಚ್ಯುತಕಲ್ಪದಲ್ಲಿ ಅಮಿತಪ್ರಭನೆಂಬ ಅಹಮಿಂದ್ರನಾಗಿ ಹುಟ್ಟಿದ. ವಿಶ್ವಾನುಲೋಮನೂ ಸತ್ತು ವ್ಯಂತರಲೋಕದಲ್ಲಿ ವಿದ್ಯುತ್‌ಪ್ರಭನೆಂಬ ವಾಹನದೇವ ನಾಗಿದ್ದ. ಒಮ್ಮೆ ನಂದೀಶ್ವರದ್ವೀಪದಲ್ಲಿ ಅಚ್ಯುತೇಂದ್ರನು ವಿಶ್ವಾನುಲೋಮಚರನಾದ ವಿದ್ಯುತ್‌ಪ್ರಭವಾಹನದೇವನನ್ನು ಕಂಡು ಅವನನ್ನು ತನ್ನ ಬಳಿ ಕರೆದ. ಅವನು ಭಯದಿಂದ ಬಂದು ಭಕ್ತಿಯಿಂದ ಮೈಯಿಕ್ಕಿದ. ದೇವರಾಜನು ನಕ್ಕು ಅವನನ್ನು ತನ್ನ ಚರಣತಳದಿಂದ ಮೇಲೆತ್ತಿ, ವಿಶ್ವಾನುಲೋಮನಾಗಿದ್ದ ಅವನಿಗೆ ತನ್ನ ಪರಿಚಯವಿಲ್ಲವೇ ಎಂದು ಕೇಳಿದ. ಅವನು ಯಾರೆಂಬುದು ಆಗ ವಾಹನದೇವನಿಗೆ ತಿಳಿದು ಬೆರಗುಗೊಂಡ. ಇಂದ್ರನು, "ನಮ್ಮಿಬ್ಬರ ಕಾರ್ಯದ ಫಲವನ್ನು ಅವಧಾರಿಸಿ" ಎಂದು ಏಳಿಸಿ ನುಡಿಯಲು, "ನಿನ್ನಲ್ಲಿ ಮಾತ್ರ ಒಳ್ಳೆಯವರಿರುವುದಲ್ಲ, ನನ್ನಲ್ಲಿಯೂ ಒಳ್ಳೆಯವರಿರುವರು; ನನ್ನ ಕಡೆ ನೋಡಬೇಡ" ಎಂದ. "ನಿನ್ನಲ್ಲಿ ಒಳ್ಳೆಯವರಿದ್ದರೆ ನನಗೆ ತೋರಿಸು" ಎನ್ನಲು, ಕರಹಾಟದೇಶದ ಪಶ್ಚಿಮಭಾಗದ ಚಂದ್ರಿಕಾರಣ್ಯದಲ್ಲಿದ್ದ ಜಮದಗ್ನಿಯೆಂಬ ಜಟಾಧಾರಿಯನ್ನು ತೋರಿಸಿದ. "ಏನು ಹೇಳುವುದು, ಆಪಾದಮಸ್ತಕವಾಗಿ ಬಳ್ಳಿಗಳೂ ಹುತ್ತಗಳೂ ಹಬ್ಬುವ ಹಾಗೆ ಈ ರೀತಿಯಲ್ಲಿ ತಪಸ್ಸು ಮಾಡುವವರು ಲೋಕದಲ್ಲಿ ಬೇರೆ ಯಾರಿದ್ದಾರೆ?" ಎಂದು ಹೇಳಿದ. ಕಡು ಹೆಮ್ಮೆಯಿಂದ ಇಂದ್ರನು, "ಬಡವನ ಸುಖವನ್ನೂ, ಹೇಡಿಯ ಬಿರುನುಡಿಗಳನ್ನೂ, ಮೋಡದ ನೆರಳನ್ನೂ, ಓಪರ ಮುನಿಸನ್ನೂ, ಕಡುಮೂರ್ಖರ ತಪವನ್ನೂ ಶಾಶ್ವತವೆಂದು ಹೇಳಬಹುದೇ?" ಎಂದು ನುಡಿದು ನಕ್ಕ.

ಆಮೇಲೆ ತನ್ನ ವಿದ್ಯೆಗಳಿಂದ ಎರಡು ಗೀಜಗ ಹಕ್ಕಿಗಳನ್ನು ಮಾಯಾಸೃಷ್ಟಿ ಮಾಡಿ, "ನಿನ್ನ ತಪಸ್ವಿಯ ನಚ್ಚಿನ ತಪಸ್ಸನ್ನು ನೋಡು" ಎಂದು ತೋರಿಸಿದ. ಆ ಹಕ್ಕಿಗಳು ತಪಸ್ವಿಯ ಗಡ್ಡದಲ್ಲಿ ಗೂಡನ್ನು ಕಟ್ಟಿರುವುದು ಕಾಣಿಸಿತು. ಆಗ

ಮತ್ತೊಂದು ಗೀಜಗವಕ್ಕಿಯು ಅಲ್ಲಿಗೆ ಬಂದು, "ಮೇರುಗಿರಿಯಲ್ಲಿ ನಡೆಯುವ ವೈನತೇಯನ ಮದುವೆಗೆ ಬನ್ನಿ" ಎಂದು ಆಹ್ವಾನಿಸಿತು. ಅದಕ್ಕೆ ಗರ್ಭಿಣಿಯಾಗಿದ್ದ ಗೀಜಗ ಹಕ್ಕಿಯು, "ನಾನು ಬರುತ್ತೇನೆ" ಎಂದು ಹೇಳಿತು. "ನೀನು ಗರ್ಭಿಣಿಯಾದ್ದರಿಂದ ಬರಬೇಡ" ಎಂದಾಗ ಹೆಣ್ಣು ಗೀಜಗವಕ್ಕಿಯು, "ನನ್ನನ್ನುಇಲ್ಲಿ ಬಿಟ್ಟು ಹೋಗಿ ಮತ್ತೊಂದು ದ್ವಿಜಾಂಗನೆಯನ್ನು ಮದುವೆಯಾಗಿ ಸುಖವಾಗಿರಬೇಕೆಂಬ ಆಲೋಚನೆಯೇ? ನಮ್ಮಲ್ಲಿ ಕೆಟ್ಟತನ ಬೇಡ" ಎಂದಿತು. ಆಗ ಗಂಡು, "ನಾನು ಪ್ರತಿಜ್ಞೆ ಮಾಡುತ್ತೇನೆ" ಎನ್ನಲು ಹೆಣ್ಣು ಗೀಜಗವು ಹೀಗೆಂದಿತು: "ನೀನೇನಾದರೂ ಮದನತಾಪದಿಂದ ಆಸೆಪಟ್ಟು ನನ್ನನ್ನಲ್ಲದೆ ಬೇರೊಂದು ಹಕ್ಕಿಯನ್ನು ಕೂಡಿದರೆ ನೀನು ಈ ತಾಪಸನ ಗತಿಯನ್ನು ಹೊಂದುತ್ತೀಯೆ. ನನಗೆ ಇನ್ನಾವ ಪ್ರತಿಜ್ಞೆಯೂ ಬೇಡ." ಆಗ ಮಾಯಾ ಗೀಜಗನು ತನ್ನ ಎರಡು ರೆಕ್ಕೆಗಳಿಂದ ತನ್ನೆರಡೂ ಕಿವಿಗಳನ್ನು ಮುಚ್ಚಿಕೊಂಡು, "ಕೆಟ್ಟುದನ್ನು ನುಡಿಯುತ್ತಿದ್ದೀಯೆ, ಈ ತಪಸ್ವಿಯ ಗತಿಗೆ ನೀನೂ ನಿನ್ನಂತಹವರೂ ಹೋಗಿ" ಎಂದಿತು. ಅದನ್ನು ಕೇಳಿ ಜಮದಗ್ನಿ ಮುನಿಯು ಕೋಪಗೊಂಡು ಆ ಹಕ್ಕಿಗಳನ್ನು ತನ್ನ ಅಂಗೈಯಲ್ಲಿ ಇರಿಸಿಕೊಂಡು ಹೊಸೆದು ಕೊಂದುಬಿಡಲು ಪ್ರಯತ್ನಿಸಿದ. ಆಗ ಆ ಹಕ್ಕಿಗಳು ಅದೃಶ್ಯರೂಪದಿಂದ ನೆಲಕ್ಕೆ ಬಿದ್ದವು. "ಇವು ಹಕ್ಕಿಗಳಲ್ಲ; ನಿಜವಾಗಿ ದೇವತೆಗಳು. ನಾನು ತಪ್ಪು ನುಡಿದ ಪಾತಕಿ, ಇವುಗಳನ್ನು ಕೊಲ್ಲಬಯಸಿದೆ; ಆದರೆ ಕ್ಷಮೆಯಿಂದ ಉಳಿದೆ" ಎಂದು ಭಕ್ತಿಪೂರ್ವಕವಾಗಿ ಅವುಗಳ ಪಾದಗಳಿಗೆ ಬಿದ್ದ. ಮುಂದುವರಿದು, "ಕೇಳಿ, ಹಿಂದೆ ನಾನು ರಾಜರ್ಷಿ; ಈಗ ಮಹಾತಪಸ್ವಿ. ನಾನು ಹೋಗುವ ಗತಿಗೆ ನೀವೇತಕ್ಕೆ ಹೋಗಲಿಷ್ಟಪಡುವುದಿಲ್ಲ?" ಎಂದು ಕೇಳಿದ. ಆಗ ಆ ಮಾಯಾಪಕ್ಷಿಗಳು ಹೀಗೆಂದವು: "ನೀನು ಮಗನ ಮುಖವನ್ನು ಕಾಣದೆಯೇ ತಪಸ್ಸಿಗೆ ತೊಡಗಿದೆ. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಕಾರಣದಿಂದ ನೀನು ಹೋಗುವ ಗತಿ ನಮಗೆ ಖಂಡಿತವಾಗಿ ಬೇಡ." ಆಗ ಜಮದಗ್ನಿಯು ತನ್ನನ್ನು ತಾನೇ ಬೈದುಕೊಂಡು, ಆ ಹಕ್ಕಿಗಳನ್ನು ಪ್ರದಕ್ಷಿಣೆ ಮಾಡಿ, "ನಿಮ್ಮ ಕರುಣೆಯಿಂದ ನಾನು ಗತಿಯನ್ನು ಕಂಡೆ" ಎಂದು ತನ್ನ ಮಾವನಾದ ಪೂತಿ ಮಹಾರಾಜನ ಬಳಿ ಬಂದು ಹೆಣ್ಣನ್ನು ಬೇಡಿ ಮದುವೆ ನಿಂದ.

ಅತ್ತ ಅಚ್ಯುತೇಂದ್ರನು ವಾಹನದೇವನ ಮುಖವನ್ನು ನೋಡಿ ಮುಗುಳ್ನಗೆಯಿಂದ ಹೀಗೆಂದ: "ಚಲದಿಂದ ಹಲವು ಕಾಲ ತಪಸ್ಸು ಮಾಡುತ್ತಿದ್ದ ನಿನ್ನ ಮುನಿಯನ್ನು ಒಂದು ನುಡಿಯಿಂದಲೇ ತೊಲಗಿಸಿದೆ. ಹಾಗಾಗಿ ಮಿಥ್ಯಾತ್ವದಲ್ಲಿ ಏನಾದರೂ ಹುರುಳಿದೆಯೇ? ನೊಣವು ಹೇಲಿನ ಮೇಲೆ ಎರಗುತ್ತದೆ; ಕರ್ಪುರವಿದೆಯೆಂದು ತಿಳಿದರೂ ಅದು ಮತ್ತೆ ಮೇಲೆ ಬರುವುದಿಲ್ಲ. ತಿಳಿವಳಿಕೆಯಿಲ್ಲದ ಜನರೂ ಹಾಗೆಯೇ. ಅದರಿಂದ ಅಜ್ಞಾನಿಗಳು ಮಾಡುವ ತಪಸ್ಸಿನಲ್ಲಿ ಏನೂ ಹುರುಳಿರುವುದಿಲ್ಲ" ಎಂದು ಹೊಟ್ಟೆ ಹೊಡೆದುಕೊಂಡು ನಕ್ಕಿತು. "ಆಗಮಾಭ್ಯಾಸಿಗರಾದ ಮಹರ್ಷಿಗಳ ಮಾತು ಹಾಗಿರಲಿ; ನಮ್ಮಲ್ಲಿ ಗೃಹಸ್ಥನಾದವನನ್ನು ಕೆಡಿಸಿದೆಯಾದರೆ, ನಮ್ಮನ್ನು ಬಿಟ್ಟು ಬೇರೆ ಅಜ್ಞಾನಿಗಳೇ ಇಲ್ಲ. ರಾತ್ರಿ ಪ್ರತಿಮಾಯೋಗದಲ್ಲಿ ನಿಂತ, ನಾನು ತೋರಿಸುವ, ಈ ಗೃಹಸ್ಥನನ್ನು ಕೆಡಿಸಿದೆಯಾದರೆ ನೀನು ದೊಡ್ಡವನು" ಎಂದು ಹೇಳಿದ. ಆ ಮಾತುಗಳಿಂದ ವಾಹನದೇವನು ಮುನಿದು, ಹೊಡೆಯುವ ಸಿಡಿಲುಮಿಂಚುಗಳು, ಭೋರೆಂದು ಬೀಸುವ ಗಾಳಿಯಿಂದ ಬೀಳುವ ಮರಗಳು, ಹಾವು ಚೇಳು ಇರುವೆಗಳು; ಧೈರ್ಯಗೆಡಿಸುವ ಹುಲಿ, ತಮ್ಮ ರೌದ್ರಾಕಾರದಿಂದ ಹಾಯ್ದು ಬರುವ ಪಿಶಾಚಿಗಳು, ಕಿಚ್ಚು, ಕಾಡಾನೆಗಳು, ದುಂಬಿವಿಂಡುಗಳು; ಬೈಯುತ್ತ 'ಹೋಗು ಹೋಗು' ಎಂದು ಕೈಯಿಂದ ನೂಕುವ ಬೇಡರು, ಬಡಿಯಲು ಇರಿಯಲು ಹೊಡೆಯಲು ಮೇಲೆ ಬೀಳುವ ರಾಕ್ಷಸತಂಡಗಳು; ಮೈಮೇಲೆ ಹತ್ತಿ ಕಚ್ಚುವ ಕಣಜಗಳು; ಬೀಳುವ ಮರಗಳು; ಒತ್ತಿಕೊಂಡು ಬರುವ ಹೊನಲುಗಳು; ಮತ್ತೂ ಇತರ ಅನೇಕ ಬಗೆಯ ಉಪಸರ್ಗಗಳನ್ನು ಸೃಷ್ಟಿಸಿದ. ಆದರೆ ಅವನನ್ನು ಹೊರಡಿಸಲಾಗಲಿಲ್ಲ. ಧರ್ಮದೇವರುಗಳನ್ನು ತಿರಸ್ಕರಿಸಿ, ಬಂಧುಗಳ ರೂಪವನ್ನು ಕೈಕೊಂಡು ಬಂದು; 'ಮನೆಯನ್ನು ಅರಸನು ಮುಟ್ಟುಗೋಲು ಹಾಕಿಕೊಂಡ', 'ನಿನ್ನ ಹಿರಿಯ ಮಗ ಸತ್ತ' ಎಂದು ಮುಂತಾಗಿ ಹೇಳಿದರೂ ಅವನನ್ನು ತೊಲಗಿಸಲಾಗಲಿಲ್ಲ. ಆದ್ದರಿಂದ ಶ್ರಾವಕರ ಗುಣವೇ ಇಂಥದ್ದಿರಬೇಕಾದರೆ, ಇನ್ನು ಜ್ಞಾನಿಗಳು ಮಹರ್ಷಿಗಳು ಇವರ ಗುಣವು

ಎಂಥದೆಂದು ಬಣ್ಣಿಸಲಾಗದು ಎಂದು ಮೆಚ್ಚಿ, ಮಿಥ್ಯಾತ್ವವನ್ನು ಬಿಟ್ಟು ಸದ್ದೃಷ್ಟಿಯವನಾದ. ಆಗ ಅಚ್ಯುತೇಂದ್ರನು, "ಮಂಗಳಕರವೂ, ಶಾಶ್ವತಸೌಖ್ಯ ಕರವೂ ಆದ ಜಿನೇಶ್ವರರ ಪಾದದಲ್ಲಿಯಲ್ಲದೆ, ಐಹಿಕಸೌಖ್ಯಕಾರಣವಾದ ಮಂತ್ರಗಳು ಮತ್ತು ಕುವಿದ್ಯೆಗಳಲ್ಲಿ ನಿನಗೆ ಯಾವ ಮೋಹವೂ ಇಲ್ಲವೆಂಬುದನ್ನು ನಾನು ಬಲ್ಲೆ. ಆದರೂ ಪರ್ವದಿನಗಳಂದು ಅಕೃತ್ರಿಮ ಚೈತ್ಯಾಲಯಗಳಿಗೆ ಹೋಗಿ ನಮಸ್ಕರಿಸಬೇಕು" ಎಂದು ಪೊಡಮಟ್ಟು ಈ ಗಗನಗಾಮಿನೀ ವಿದ್ಯೆಯನ್ನು ಸಂತಸದಿಂದ ಪ್ರಾರ್ಥಿಸಿ ನನಗೆ ನೀಡಿದ. ಆಮೇಲೆ ತಾನು ಬಂದಿದ್ದ ವೃತ್ತಾಂತವನ್ನು ತಿಳಿಸಿ ದೇವಲೋಕಕ್ಕೆ ಹೋದ. ಗಗನಗಾಮಿನೀ ವಿದ್ಯೆಯು ನನಗೆ ಈ ಬಗೆಯಲ್ಲಿ ಲಭ್ಯವಾಯಿತು. ಇದನ್ನು ನಮ್ಮ ದೇವಸ್ಥಾನದ ಮಾಣಿ ವರಸೇನನಿಗೆ ವಾತ್ಸಲ್ಯದಿಂದ ಕೊಟ್ಟೆ ಎಂದು ವಿವರಿಸಿದ.

ಅದನ್ನು ಕೇಳಿ ಲಲಿತಾಂಗನು, "ಆತನು ದೇವಾಧೀಶ್ವರ; ಇವನು ಸಾಮಾನ್ಯ ಮನುಷ್ಯ. ಇವನಿಗೆ ಆತನು ಪ್ರೀತಿಯಿಂದ ನಮಸ್ಕರಿಸಿದನೆಂದ ಮೇಲೆ ಭೂಮಿಯಲ್ಲಿ ಧರ್ಮಕ್ಕಿಂತಲೂ ಮಿಗಿಲಾದುದು ಬೇರೆ ಯಾವುದಾದರೂ ಇದೆಯೇ? ಜಿನದತ್ತನು ಧರ್ಮವಾರಿಧಿ; ಆತನು ಜೀವಾದಿಗಳಿಗೆ ತಪ್ಪು ಮಾಡಲಾರ ಎಂಬ ಭಾವನೆಯಿಂದಲೇ ನಾನು ಇಷ್ಟೊಂದು ಪೆಂಪುವಡೆದೆ. ಇನ್ನು ದೇವಾಧಿದೇವನೂ ಜಗಜ್ಜನಪೂಜ್ಯನೂ ಆದ ಜಿನನನ್ನು ಮತ್ತು ಜಿನಾಗಮವನ್ನು ನಿಶ್ಶಂಕೆಯಿಂದ ನಂಬುವಾತನ ಸೌಖ್ಯೋನ್ನತಿಯನ್ನೂ ಮಹಾಮಹಿಮೆಯನ್ನೂ ವರ್ಣಿಸಲು ಶಕ್ಯವೇ?" ಎಂದು ದರ್ಶನದಲ್ಲಿ ನಿಶ್ಶಂಕನಾದ. ಕಡುಧೂರ್ತನಿಂದ ಈ ಮುಂಚೆ ದುಷ್ಟ ಸಹವಾಸವನ್ನು ಮಾಡಿ ಕೆಟ್ಟುದೇ ಸಾಕು; ಇನ್ನು ಖಳಸಂಸ್ಕೃತಿಯನ್ನು ಹಿಡಿಯುವುದಿಲ್ಲ, ಅದನ್ನು ಬಿಟ್ಟು ಜಿನೇಂದ್ರನ ಪಾದಕಮಲಗಳನ್ನು ಹಿಡಿಯುತ್ತೇನೆ ಎಂಬುದಾಗಿ ನಿರ್ಧರಿಸಿದ. ಅವನ ವೈರಾಗ್ಯವು ಧನ್ವಂತರಿಯ ಕತೆಯಿಂದ ಇಮ್ಮಡಿಗೊಂಡಿತು. ಸಂಸಾರಭೋಗಕ್ಕೆ ಹೇಸಿ ದೇವರ್ಷಿಯೆಂಬ ಚಾರಣರ್ಷಿಯಲ್ಲಿ ಜಿನದೀಕ್ಷೆಯನ್ನು ಕೈಗೊಂಡು ತಕ್ಷಣದಲ್ಲಿಯೇ ಚಾರಣರ್ಧಿಯನ್ನು ಸೇರಿ, ಉತ್ತರೋತ್ತರ ಹನ್ನೆರಡು ಬಗೆಯ ತಪಸ್ಸುಗಳನ್ನು ಮಾಡಿ, ಅಷ್ಟಾಪದಗಿರಿಯಲ್ಲಿ ಅಷ್ಟವಿಧ ಕರ್ಮಗಳನ್ನು ನಿರ್ಮೂಲನ ಗೊಳಿಸಿಕೊಂಡು ತ್ರಿಲೋಕಶಿಖರಿಶೇಖರನಾದ. ಕೇಡಿಲ್ಲದ ಸುಖವನ್ನು ಅರ್ಹಂತನ ಪಾದಾಂಬುಜಗಳು ಮಾತ್ರ ನೀಡಬಲ್ಲವು, ಇತರವಲ್ಲ ಎಂಬ ನಂಬಿಕೆಯಿರುವಾತನೇ ಕೃತಾರ್ಥ, ಆತನೇ ಧನ್ಯ. ಎಂದು ಗೌತಮಸ್ವಾಮಿಗಳು ನಿಶ್ಶಂಕೆಯ ಕತೆಯನ್ನು ಹೇಳಿದರು. ಅದನ್ನು ಕೇಳಿ ಉತ್ಸಾಹದಿಂದ ಶ್ರೇಣಿಕನ ಮನಸ್ಸಿನಲ್ಲಿ ನಂಬಿಕೆಯು ಮತ್ತಷ್ಟು ಬಲವಾಯಿತು. ಮಿಥ್ಯಾತ್ವವು ಸಡಲಿ ಒಮ್ಮೆಗೇ ಹರಿದುಹೋಗಲು, ಆಗಲೇ ನಿರ್ವಾಣಸಾಮ್ರಾಜ್ಯವು ದೊರಕಿದಂತಾಗಿ ತ್ರೈವಿದ್ಯಲಕ್ಷ್ಮೀಶ್ವರ ಪಾದಾಂಭೋಜ ಭೃಂಗನೂ ಸುಕವಿಜನಮನಃಪದ್ಮಿನೀ ರಾಜಹಂಸನೂ ಆದ ಶ್ರೇಣಿಕ ಮಹಾರಾಜನು ನಲಿದ.

ನಿಷ್ಕಾಂಕ್ಷೆ

ಸುಕವಿನಿಕರಪಿಕಮಾಕಂದನಾದ ಶ್ರೇಣಿಕ ಮಹಾರಾಜನು ಶ್ರೀಕಾಂತೆಯನ್ನು ಒಲಿಸುವ ಗುಣಕ್ಕೆ ನಿಶ್ಶಂಕೆಯು ಕಮನೀಯವಾದ ಪ್ರಾಕಾರವೆಂದು ಅದನ್ನು ಉತ್ಸಾಹದಿಂದ ಕೈಗೊಂಡ. ಹೀಗೆ ಆಪ್ತಧರ್ಮದ ತತ್ವಗಳಲ್ಲಿ ನಿಶ್ಶಂಕಮನನಾಗಿ ಮುಂದಿನ ತತ್ವವಾದ ನಿಷ್ಕಾಂಕ್ಷೆಯ ಕತೆಯನ್ನು ಹೇಳಿರೆಂದು ಭಕ್ತಿಯಿಂದ ಕೈಮುಗಿದು ಗೌತಮಗಣಧರರನ್ನು ಕೇಳಿಕೊಂಡ. ಆಗ ಆ ಸ್ವಾಮಿಗಳು ಹೀಗೆಂದು ಹೇಳಲು ತೊಡಗಿದರು: ತಾಂಬೂಲದಂತೆ, ಸಂಗೀತದಂತೆ, ದಿವಸದಂತೆ, ಮುತ್ತುಗದಂತೆ, ವಜ್ರದಂತೆ, ಲೋಕದಂತೆ, ವೀಣೆಯಂತೆ, ಗಾಳಿಯಂತೆ, ವಿಪ್ರರಂತೆ. ಸಿದ್ಧರಂತೆ, ತ್ರಿಸರದಂತೆ ದರ್ಶನ ನಿಶ್ಶಂಕೆ ಹಾಗೂ ನಿಷ್ಕಾಂಕ್ಷೆಗಳನ್ನು ಕೂಡಿ ಮಹೋತ್ಸಾಹದಿಂದ ಬಾಳಬೇಕು. ಇನ್ನು ನಿಷ್ಕಾಂಕ್ಷೆಯ ಕತೆಯ ಮಹಿಮೆಯನ್ನು ಹೇಳುತ್ತೇನೆ ಕೇಳು.

ಅಂಗರಾಜ್ಯವು ಅಗಣಿತವಾದ ದೊಡ್ಡ ಕೆರೆಗಳಿಂದಲೂ, ತಾವರೆಗೊಳಗಳ ಸಮೂಹದಿಂದಲೂ, ಸುಂದರವಾದ ಹೊಲಗದ್ದೆಗಳಿಂದಲೂ, ಓಡಾಡುವ ಗೋಸಂಕುಲದಿಂದಲೂ, ಕುಬೇರನಿಗಿಂತ ಹೆಚ್ಚೆನಿಸುವ ಒಕ್ಕಲುಗಳಿಂದಲೂ, ಪಂಡಿತವರ್ಗದಿಂದಲೂ, ಎಲ್ಲೆಡೆಯಿದ್ದ ನಂದನೋದ್ಯಾನ ಗಳಿಂದಲೂ ಕೂಡಿ ಜಗತ್ತಿನಲ್ಲಿಯೇ ಉನ್ನತಿಯನ್ನು ಪಡೆದಿತ್ತು. ಅದರಲ್ಲಿ ಭೂದೇವಿಯ ಕೈಯಲ್ಲಿನ ಮಣಿಖಚಿತ ಕನ್ನಡಿಯ ಹಾಗೆ ಸುತ್ತಿದ ನಂದನಗಳು, ಮುತ್ತಿದ ಹೊಲಗದ್ದೆಗಳು, ಶೋಭಿಸುವ ಕೊಳಗಳು, ಉತ್ತುಂಗವಾದ ಜಿನಾಲಯಗಳು – ಇವುಗಳನ್ನು ಹೊಂದಿ ಚಂಪಾಪುರವು ಉತ್ತಮ ನಗರವೆನಿಸಿಕೊಂಡಿತ್ತು. ಆ ಊರಿನಲ್ಲಿ ಜಿನಸಮಯವೆಂಬ ಸಮುದ್ರಕ್ಕೆ ಚಂದ್ರನಂತಿದ್ದ ಪ್ರಿಯದತ್ತನೆಂಬುವವನು ವಣಿಗ್ವಂಶಕುಲತಿಲಕನೆನಿಸಿ ಬಾಳುತ್ತಿದ್ದ. ಅವನ ಹೆಂಡತಿಯು ಸುಂದರಿಯಾದ ಅಂಗಮತಿ ಎಂಬುವವಳು. ಅವರಿಬ್ಬರ ಪ್ರೀತಿಯ ಮಗಳು ಗುಣಗಣಾಭರಣೆಯಂತಿದ್ದ ಅನಂತಮತಿ. ಅವಳಾದರೋ ಅಪ್ರತಿಮ ಚೆಲುವೆ. ಇತರ ಅನೇಕ ಮಕ್ಕಳ ಜೊತೆಗೆ ಅವಳು ಸಂತೋಷದಿಂದ ಮನಸ್ಸಿಗೆ ಪ್ರಿಯವಾದ ರೀತಿಯಲ್ಲಿ ಆಟವಾಡಿಕೊಂಡು ಕಾಲ ಕಳೆಯುತ್ತಿದ್ದಳು. ಹೀಗೇ ಅನೇಕ ವರ್ಷಗಳು ಕಳೆದವು.

ಒಂದು ದಿವಸ ಅನಂತಮತಿಯ ಜೊತೆ ಆಟವಾಡುವ ಮಕ್ಕಳೆಲ್ಲರೂ ಅವಳಿಗೆ ಮದುವೆ ಮಾಡುವ ಆಟವನ್ನು ಆಡುತ್ತಿದ್ದರು. ಒಂದು ಬೊಂಬೆಗೆ ದಿವ್ಯವಸ್ತ್ರಗಳನ್ನುಡಿಸಿ, ಕಸ್ತೂರಿಯ ತಿಲಕವಿಟ್ಟು, ಹೊನ್ನಿನ ಓಲೆಯನ್ನು ತೊಡಿಸಿ, ಚೆಲುವಾದ ಹೂವಿನ ಮಾಲೆಯೊಂದನ್ನು ಹಾಕಿ ಸುಂದರವಾಗಿ ಅಲಂಕಾರ ಮಾಡಿದರು. ಅದನ್ನು ಮದುಮಗನೆಂದು ಕರೆದು ಅನಂತಮತಿಯ ಪಕ್ಕ ಕುಳ್ಳಿರಿಸಿ ನಲವಿನಿಂದ ಚಪ್ಪಾಳೆಯಿಕ್ಕುತ್ತ ಆಟವಾಡುತ್ತಿದ್ದರು. ಅಷ್ಟರಲ್ಲಿ ಪ್ರಿಯದತ್ತಸೆಟ್ಟಿಯು ದೇವದರ್ಶನಕ್ಕಾಗಿ ಬಸದಿಗೆಂದು ಹೋಗುತ್ತ ಮಕ್ಕಳ ಆಟವನ್ನು ಕಂಡು ಹತ್ತಿರ ಬಂದ. ಬೊಂಬೆಯ ಪಕ್ಕದಲ್ಲಿದ್ದ ಮಗಳನ್ನು ಎತ್ತಿಕೊಂಡು ಕೆನ್ನೆಗೆ ಮುತ್ತಿಕ್ಕಿ, "ತೋರಣವನ್ನು ಕಟ್ಟದೆ, ಮಂಗಳವಾದ್ಯಗಳ ಮೊಳಗಿಲ್ಲದೆ, ನಂಟರುಗಳು ಯಾರೂ ಬಾರದೆ, ಪಾವನರತ್ನಸಂದೋಹದ ಬಳುವಳಿಯನ್ನು ಕೊಟ್ಟು ಅದ್ದೂರಿಯಿಂದ ಮದುವೆಯನ್ನು ಮಾಡದೆ, ಅದನ್ನೆಲ್ಲ ನಾನು ಆನಂದದಿಂದ ನೋಡದೆ ನೀನು ನಿನಗೆ ಇಷ್ಟ ಬಂದವನ್ನು ಈ ರೀತಿ ಕದ್ದು ಮದುವೆಯಾಗುವುದು ತರವಲ್ಲ" ಎಂದು ತಮಾಷೆ ಮಾಡಿದ. ಆನಂತರ ಮತ್ತಷ್ಟು ಮುದ್ದು ಮಾಡಿ ಅವಳನ್ನು ಕರೆದುಕೊಂಡು ಜಿನಾಲಯಕ್ಕೆ ಬಂದ.

ಅಲ್ಲಿ ಜಿನಸ್ವಾಮಿಯ ದರ್ಶನ ಮಾಡಿ, ಭಟ್ಟಾರಕರಿಗೆ ವಂದಿಸಿ, ನಿತ್ಯವ್ರತವನ್ನು ನೆರವೇರಿಸಿ, ಸ್ವಲ್ಪ ಹೊತ್ತು ಧರ್ಮಶ್ರವಣ ಮಾಡಿದ ಬಳಿಕ ಅವರಿಗೆ ಹೀಗೆಂದ: "ಮಗಳು ಮಾಡಿದ ತಮಾಷೆಯನ್ನು ನೋಡಿದಿರಾ? ನಂಟರಾಗಲೀ ನಾನಾಗಲೀ ತಿಳಿಯದಂತೆ, ಮೊದಲು ಜಿನಪೂಜೆಯನ್ನು ಗೈಯದೆ ತನ್ನ ಜೊತೆಯ ಆಟದ ಮಕ್ಕಳೊಂದಿಗೆ ಸೇರಿ

ಕಳ್ಳತನದಿಂದ ಮದುವೆಯಾಗಿಬಿಟ್ಟಳು! ನಿಮ್ಮ ಶಿಷ್ಯೆಗೆ ಬ್ರಹ್ಮಚರ್ಯವ್ರತವನ್ನು ಕೊಟ್ಟುಬಿಡಿ" ಎಂದು ಹೇಳಿದ. ಆ ಮಾತಿಗೆ ನಕ್ಕು ಭಟ್ಟಾರಕರು, "ಇವತ್ತಿನಿಂದ ಮೊದಲಾಗುವಂತೆ ನಾನು ನಿನಗೆ ಬ್ರಹ್ಮಚರ್ಯ ವ್ರತವನ್ನು ಕೊಟ್ಟಿದ್ದೇನೆ" ಎಂದು ಅನಂತಮತಿಗೆ ನುಡಿದರು. ಅದನ್ನು ಕೇಳಿ ಅನಂತಮತಿಯು ಮಹಾಪ್ರಸಾದವೆಂದು ಸ್ವೀಕರಿಸಿದಳು.

ಆಮೇಲೆ ಅವಳ ಮನಸ್ಸಿನಲ್ಲಿ ಆಲೋಚನಾಪರಂಪರೆಯೇ ಉಂಟಾಯಿತು. ಬಡವನಿಗೆ ರಾಜ್ಯಲಕ್ಷ್ಮಿ, ಕುರುಡನಿಗೆ ಎರಡು ಕಣ್ಣುಗಳು, ಹೊಂಡದಲ್ಲಿ ಬೀಳುವವನಿಗೆ ಅಡ್ಡಲಾಗುವ ರೆಂಬೆ, ರೋಗದಿಂದ ನರಳುವವನಿಗೆ ದಿವ್ಯೌಷಧ, ಈ ಸಂಸಾರದಲ್ಲಿನ ಪಾಪಗಳಿಂದ ಬೇಯುವವರಿಗೆ ಒಳ್ಳೆಯ ವ್ರತಗಳು ಕೈಸಾರಿದರೆ ಅಂಥವನು ನಿಜವಾಗಿ ಧನ್ಯನೆನಿಸುವನು ಎಂದು ಯೋಚಿಸಿದಳು. ಮರಗಳ ಸಮೂಹದಲ್ಲಿ ಮಲಯ ಮಾರುತ, ನಕ್ಷತ್ರಸಮೂಹದಲ್ಲಿ ಚಂದ್ರ, ಬೆಟ್ಟಗಳ ನಡುವೆ ಮೇರುಪರ್ವತ, ಕಲ್ಲುಗಳಲ್ಲಿ ಸುರತ್ನ, ರಾಜರುಗಳಲ್ಲಿ ಚಕ್ರವರ್ತಿ, ದೇವತೆಗಳಲ್ಲಿ ಇಂದ್ರ – ಇವರು ಶ್ರೇಷ್ಠರು; ಅಂತೆಯೇ ಲೋಕದ ದೇವರುಗಳಲ್ಲಿ ಜಿನೇಶ್ವರ ಎಂದುಕೊಂಡಳು. ಇಂತಹ ಅಪೂರ್ವನಾದ ಜಿನೇಶ್ವರನು ನನ್ನ ಹಿಂದಿನ ಜನ್ಮಗಳ ಪುಣ್ಯಕಾರಣದಿಂದ ನಮ್ಮ ಕುಲದೇವರಾಗಿದ್ದಾನೆ. ರೂಪ ಮತ್ತು ಪ್ರೀತಿಗಳುಳ್ಳ ಹೆಂಗಸು, ಕರುಣೆ ಮತ್ತು ದಾನಗುಣಗಳಿರುವ ರಾಜ, ಉತ್ತಮ ಬೆಳೆ ಮತ್ತು ಆಜ್ಞಾಪಾಲನೆಯುಳ್ಳ ದೇಶ, ಸಮೃದ್ಧವಾದ ಹಾಲು ಮತ್ತು ತೋಡಲ್ಲದ ಹಸು, ವೈರಾಗ್ಯ ಮತ್ತು ವ್ರತಗಳುಳ್ಳ ತಪಸ್ಸು, ಐಶ್ವರ್ಯ ಮತ್ತು ಆಯುಸ್ಸುಗಳುಳ್ಳವನ ಬಾಳು, ಶಕ್ತಿ ಮತ್ತು ಭಕ್ತಿಗಳಿರುವ ದಾನ, ಚುನ್ನು ಮತ್ತು ಹೊನ್ನುಗಳಿರುವ ಸೌಂದರ್ಯ, ವಿಜಯ ಮತ್ತು ಪರಾಕ್ರಮವಿರುವ ತೇಜಸ್ಸು, ತೀರಿಸುವ ಬುದ್ಧಿ ಸತ್ವ ಸಮ್ಯಕ್‌ದರ್ಶನ ಮತ್ತು ವ್ರತವುಳ್ಳ ಪುಣ್ಯವನ್ನು ಪಡೆಯುವುದು ಕಷ್ಟ. ಆ ಕಾರಣದಿಂದ ಬಾಲ್ಯದಲ್ಲಿಯೇ ಸಮ್ಯಕ್‌ದರ್ಶನವೂ, ಶ್ರೇಷ್ಠವಾದ ವ್ರತವೂ ಜೊತೆಗೇ ಬಂದಿವೆ. ನಾನೇನಾದರೂ ಆಲಸ್ಯದಿಂದ ಅವುಗಳನ್ನು ತೊರೆದರೆ ಮತ್ತೆಂದೂ ನನಗೆ ಇಂತಹ ಪುಣ್ಯದ ಒದವುಂಟಾಗುವುದಿಲ್ಲ. ನಾನೇನಾದರೂ ಈ ದರ್ಶನ ಹಾಗೂ ವ್ರತಗಳನ್ನು ಬಿಟ್ಟೆನಾದರೆ, ಕೆರೆಯನ್ನೊಡೆದು ತೊರೆಯನ್ನು ತುಂಬುವ, ಮನೆಯನ್ನು ಒಡೆದು ಬೇಲಿಯನ್ನಿಡುವ, ಹಾಸಿಗೆಯನ್ನು ಬಿಟ್ಟು ಕವುದಿಯನ್ನು ಹೊಲಿಸುವ, ಮೆದೆಯನ್ನು ಸುಟ್ಟು ಅರಳನ್ನು ಹುರಿಯುವ, ತುಪ್ಪವನ್ನು ಬಿಸುಡಿ ಸಗಣಿಯನ್ನು ಬಾಚುವ, ಕಸ್ತೂರಿಯನ್ನು ಬಿಸುಟು ಕೆಸರನ್ನು ತೆಗೆದುಕೊಳ್ಳುವ, ಪೈರನ್ನು ಬಿಟ್ಟು ಹುಲ್ಲನ್ನು ಕೊಯ್ದುಕೊಳ್ಳುವ, ಹೊನ್ನನ್ನು ಬಿಟ್ಟು ಮಸಿಯನ್ನು ಕಟ್ಟುವ ದಡ್ಡನ ಹಾಗೆ ಆಗುತ್ತೇನೆ ಎಂದು ಅವಳು ನಿರ್ಧರಿಸಿದಳು. ಮನಸ್ಸಿನಲ್ಲಿ ಉತ್ಸಾಹದಿಂದ ಮುನಿಪತಿಗೆ ಭಕ್ತಿಯಿಂದ ನಮಸ್ಕರಿಸಿ ಮನೆಗೆ ಬಂದು ಸಂತೋಷದಿಂದಿದ್ದಳು.

ಮನೆಯವರು ಹಾಸ್ಯ ಮಾಡಿ ಕರೆಯುತ್ತಿದ್ದ 'ಬ್ರಹ್ಮಚಾರಿ' ಎಂಬ ಅಡ್ಡ ಹೆಸರು ಅವಳಿಗೆ ಮುಂದೆಯೂ ಉಳಿದು ಬಂತು. ಮಗುವನ್ನು ತಾಯಿ, ಸಸಿಯನ್ನು ಒಕ್ಕಲಿಗ, ನೆಲವನ್ನು ರಾಜ, ಹಣವನ್ನು ಕಡು ಲೋಭಿ, ಭೀತನಾದವನು ತನ್ನ ಪ್ರಾಣ, ಪತಿವ್ರತೆಯು ತನ್ನ ಶೀಲ ಇವುಗಳನ್ನು ಕಾಪಾಡಿಕೊಳ್ಳುವ ಹಾಗೆ, ಆ ಗುಣಗಣನಿಲಯೆಯೂ ಮಹೋನ್ನತೆಯೂ ಆದ ಅನಂತಮತಿಯು ಐದನೆಯ ವಯಸ್ಸಿನಿಂದ ಹನ್ನೆರಡನೆಯ ವಯಸ್ಸಿನವರೆಗೂ ತನ್ನ ವ್ರತವನ್ನು ಕಾಪಾಡಿಕೊಂಡು ಬಂದಳು.

ಹಾಗಿರಲು ಒಂದು ದಿನ ಕಾಲ ಕಳೆಯಲೆಂದು ತನ್ನ ಸೇವಕಿಯರು ಮತ್ತು ಜೊತೆಗಾತಿಯರಾದ ಹುಡುಗಿಯರನ್ನು ಕೂಡಿಕೊಂಡು ನಂದನವನಕ್ಕೆ ಹೋದಳು. ಅಲ್ಲಿ ತನಗೆ ಇಷ್ಟ ಬಂದ ಹೂವಿನ ಆಭರಣಗಳನ್ನು ತೊಟ್ಟು ಮಾವಿನ ಮರವೊಂದರ ಕೆಳಗೆ ಉಯ್ಯಾಲೆಯನ್ನಾಡುತ್ತಿದ್ದಳು. ದುಂಬಿಗಳ ಝೇಂಕಾರ ಹಾಗೂ ಉಯ್ಯಾಲೆಯ ಧ್ವನಿಗಳೊಡನೆ ಹುಡುಗಿಯರೆಲ್ಲ ನಿಧಾನವಾಗಿ ತೂಗಿಕೊಳ್ಳುತ್ತ, ಒಟ್ಟಾಗಿ ಆದಿದೇವನ ವಸ್ತು–ರೂಪ–ಗುಣಗಳನ್ನು ಹೊಗಳುವ ಹಾಡನ್ನು ಕಿವಿಗೆ ಇಂಪಾಗುವಂತೆ ಹಾಡಿಕೊಂಡರು. ಅಷ್ಟು ಹೊತ್ತಿಗೆ, ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ಕಿನ್ನರಗೀತವೆಂಬ ನಗರವನ್ನು ಆಳುತ್ತಿದ್ದ ಕುಂಡಲಮಂಡಿತನೆಂಬ ವಿದ್ಯಾಧರನು ತನ್ನ ಅಗ್ರಮಹಿಷಿಯಾದ ಸುಕೇಶಿನಿಯ ಜೊತೆ

ಆಕಾಶಮಾರ್ಗದಲ್ಲಿ ಕಾಮವಿಹಾರಾರ್ಥವಾಗಿ ಅಲ್ಲಿಗೆ ಬಂದವನು ಉಯ್ಯಾಲೆಯಾಡುತ್ತಿದ್ದ ಅನಂತಮತಿಕುಮಾರಿಯನ್ನು ತಟ್ಟನೆ ಕಂಡ.

ಆ ಕ್ಷಣವೇ ಅವಳಲ್ಲಿ ಪ್ರೇಮವುಕ್ಕಿ ವಿಯಚ್ಚರರಾಜನನ್ನು ವಿರಹಾನಲವು ಆವರಿಸಿತು; ದೇಹವನ್ನೆಲ್ಲ ದಾಹಜ್ವರವು ವ್ಯಾಪಿಸಿದಂತೆ ಅವನು ಉರಿಯುವ ಬೆಟ್ಟದಂತಾದ. ಕಾಮನಿಗಿರುವುದು ಐದು ಹೂಬಾಣಗಳು ಎಂದು ಲೋಕದ ಜನ ಹೇಳುತ್ತಾರೆ; ಆದರೆ ತನ್ನ ಮೇಲೆ ಅವನು ಶತಕೋಟಿಗಿಂತಲೂ ಹೆಚ್ಚು ಬಾಣಗಳನ್ನು ಬಿಡುತ್ತಿರುವನಲ್ಲ, ಇದು ಆಶ್ಚರ್ಯಕರ ಎಂದುಕೊಂಡ. ಇವಳ ಕುಡಿನೋಟವೆಂಬ ಚೂಪಾದ ಬಾಣದಿಂದ, ಇವಳ ಮುಖವೆಂಬ ಚಕ್ರದಿಂದ, ಇವಳ ನಳಿತೋಳೆಂಬ ಹರಿತವಾದ ಕತ್ತಿಯಿಂದ ನನ್ನನ್ನು ಮನ್ಮಥನು ಅಂಜಿಸುತ್ತಿದ್ದಾನೆ; ಆದರೆ ಆ ಕುವಿಟನು ತಾನೊಬ್ಬನೇ ನನ್ನನ್ನು ಅಂಜಿಸಲಾರ – ಎಂದು ಕಾಮಸಂತಾಪದಿಂದ ಹಲುಬಿದ. ಆದರೆ ತನ್ನ ಹೆಂಡತಿಯಾದ ಸುಕೇಶಿನಿಯು ಜೊತೆಯಲ್ಲಿಯೇ ಇದ್ದುದರಿಂದ ಕೆಳಗಿಳಿದು ಕುಮಾರಿಯಲ್ಲಿಗೆ ಹೋಗಲಾರದೆ, ಕುದಿಯುವ ಅನ್ನದಂತೆ ಬೆಂದ; ದಗೆಯೇರಿದ ಕೋತಿಯಂತೆ ದಿಗ್ಭ್ರಮೆಗೊಂಡ; ತಳವಾರನನ್ನು ನೋಡಿದ ಕಳ್ಳನಂತೆ ಹುಸಿದ; ಹೇಳಿಗೆಯಲ್ಲಿರುವ ಹಾವಿನಂತೆ ಉಮ್ಮಳಿಸಿದ. ನೀರು ಸಿಕ್ಕದ ಗಿಡುಗದ ಹಾಗೆ ಅವನ ಮುಖ ಬಾಡಿತು; ಎಣ್ಣೆ ಮುಟ್ಟಿದ ಕುಂಬಳಕಾಯಿಯಂತೆ ಒಳಗೊಳಗೆ ಕೊಳೆತುಹೋದ; ಕುದಿಯುವ ನೀರಿನಂತೆ ಮರುಗಿದ; ದರಿಯ ಮೇಲಿನ ಮರದಂತೆ ಅಲ್ಲಾಡಿದ; ಕಳಕ್ಕೆ ಬಂದ ಯೋಧನಂತೆ ಬೆರಗಾದ. ತನ್ನ ಒಡಲ ಬೇಯುವಿಕೆಯನ್ನು ತಾಳಲಾರದೆ ಬಕವೇಷ ಹೊತ್ತು ಹುಸಿ ಪ್ರೀತಿಯಿಂದ ತನ್ನ ಹೆಂಡತಿಯನ್ನು ಅಪ್ಪಿಕೊಂಡು ಮೆಲ್ಲನೆ, "ಈ ಭಾಗದಲ್ಲಿ ನಾವು ಕಾಣದಿರುವ ನಾಡುಗಳು ಬಹಳವೇನಿಲ್ಲ; ಇಲ್ಲಿ ಹೋಗಿ ನಾವೇನು ಮಾಡುವುದು? ನಾಳೆ ವಿನೋದದಿಂದ ಇಬ್ಬರೂ ಮುತ್ತಿನಾಭರಣಗಳನ್ನು ತೊಟ್ಟು, ಚೀನಾಂಬರವುಟ್ಟು, ಜೊತೆಯಲ್ಲಿ ಉತ್ತರ ದಿಕ್ಕಿನ ಸುರೇಂದ್ರಗಿರಿಗೆ ಹೋಗಿ ಭೋಗಿಸೋಣ" ಎಂದು ನಂಬಿಕೆಯುಂಟಾಗುವಂತೆ ನುಡಿದ.

ಅವರು ಊರಿಗೆ ಮರಳಿದರು; ಮನೆಯಲ್ಲಿದ್ದಾಗ ಅವನು ಹೆಂಡತಿಯನ್ನು ವಂಚಿಸಿ ಹೋಗಲು ಏನು ಮಾಡಬೇಕೆಂದು ಆಲೋಚಿಸಿದ. ಅವನಿಗೆ ಹೊಸ ಉಪಾಯ ಹೊಳೆಯಿತು. ಹೆಂಡತಿ ಸುಕೇಶಿನಿಗೆ, "ನೀನು ಇಲ್ಲೇ ಇರು; ಮೇರುಗಿರಿಗೆ ನಾನೊಬ್ಬನೇ ಹೋಗಿ ಅಲ್ಲಿನ ರಮಣೀಯ ಸ್ಥಳಗಳಾವುವು ಎಂಬುದನ್ನು ತಿಳಿದು ಬರುತ್ತೇನೆ" ಎಂದು ಕುಂಡಲಮಂಡಿತನು ಅನುನಯದಿಂದ ಸೂಚಿಸಿದ. ಆಮೇಲೆ ಆ ಖಚರನು ವಿಮಾನವನ್ನೇರಿ ಊರಿನಿಂದ ಹೊರಟು ಉತ್ತರ ದಿಕ್ಕಿಗೆ ಪಯಣ ಬೆಳೆಸಿದ. ಕೊಂಚ ದೂರ ಹೋದ ಮೇಲೆ ದಕ್ಷಿಣ ದಿಕ್ಕಿಗೆ ತಿರುಗಿದ. ಗಾಳಿಯ ವೇಗದಿಂದ ಚಂಪಾಪುರಕ್ಕೆ ಬಂದು ಉಯ್ಯಾಲೆಯಾಡುತ್ತಿದ್ದ ಅನಂತಮತಿಯನ್ನು ತನ್ನ ವಿಮಾನದಲ್ಲಿ ಕೂರಿಸಿಕೊಂಡು ಆಕಾಶಕ್ಕೆ ನೆಗೆದ. ಅವಳ ರೂಪವನ್ನು ಕಂಡಾಗ, ಲೋಕವನ್ನೆಲ್ಲ ಅಳಲಿಸಬೇಕೆಂಬ ಉದ್ದೇಶದಿಂದಲೇ ವಿಧಿಯು ಎಳ ಲತೆಯನ್ನು ಹೆಣ್ಣ ರೂಪದಲ್ಲಿ ಸೃಷ್ಟಿ ಮಾಡಿದನೇನೋ, ಇಲ್ಲದಿದ್ದರೆ ಬೇರೆಯ ಹೆಣ್ಣುಗಳು ಯಾಕೆ ಇವಳಂತೆ ಚೆಲುವೆಯರಲ್ಲ ಎಂದು ಅವನಿಗೆ ಅಚ್ಚರಿಯೆನ್ನಿಸಿತು. ಇವಳು ಕಾಮನ ಆರಾಧ್ಯದೈವವಾಗಿರಬೇಕು; ಮನ್ಮಥನು ತೊಡುವ ಹೂಬಾಣದಂತಿರುವ ಈ ಕಾಂತೆಯು ಅದೃಷ್ಟವಶಾತ್ ನನಗೆ ಸಿಕ್ಕಿದಳು; ಖೇಚರರಲ್ಲಿ ಸ್ತ್ರೀವ್ರತವನ್ನು ಹಿಡಿದವರು ತನ್ನ ಹೊರತು ಬೇರೆ ಯಾರಿದ್ದಾರೆ ಎಂದುಕೊಂಡು ಬೀಗಿದ. ಆಡುಮುಟ್ಟದ ಗಿಡವಿಲ್ಲ ಎಂಬಂತೆ ತಾನು ಲೋಕದಲ್ಲಿ ನೋಡದ ಹೆಣ್ಣಿಲ್ಲ; ಆದರೆ ಇವಳಂತಹ ಚೆಲುವೆಯನ್ನು ಕನಸಿನಲ್ಲೂ ತಾನು ಕಾಣಲಿಲ್ಲ ಎಂದು ಚೋದ್ಯಪಟ್ಟ. ಲಕ್ಷ್ಮಿಯ ರೂಪು, ಶಚಿಯ ಚೆಲುವು, ತಾವರೆಯಂತಹ ಮುಖಬಿಂಬ, ಚಂದ್ರನಂತಹ ಹಣೆ, ಸಿಂಹದ ಸೊಂಟ, ಕಾಮಬಾಣದಂತಹ ಬೆರಳುಗಳನ್ನು ಪಡೆದ ಈ ಮನೋಹರಿಯು ನನ್ನ ಮನಸೂರೆಗೊಂಡಿರುವಳೋ ಅಥವಾ ಸೆರೆಹಿಡಿದಿರುವಳೋ ಎಂದು ಅವಳ ಹಾವಭಾವ ವಿಲಾಸವಿಭ್ರಮಗಳನ್ನು ನೋಡಿ ತನ್ನಲ್ಲಿಯೇ ವಿಸ್ಮಯಗೊಂಡ. ಮನಸ್ಸಿನಲ್ಲಿ ಸಂತಸವನ್ನು ತುಂಬಿಕೊಂಡು ಅವಳನ್ನೇ ದಿಟ್ಟಿಸುತ್ತಿದ್ದ.

ಅನಂತಮತಿಕುಮಾರಿಯು ತನ್ನ ಮನಸ್ಸಿನಲ್ಲಿ ಜಿನೇಂದ್ರಚರಣ ಯುಗವನ್ನು ನಿಲ್ಲಿಸಿಕೊಂಡು "ನನಗೆ ಈಗ ಶೌಚಕ್ಕೆ ವೇಳೆಯಾಯಿತು" ಎಂದುಕೊಂಡಳು. ಅವಳಿಗೆ ವಿಪರೀತ ಭಯವುಂಟಾಗಿ ನಡುಗತೊಡಗಿದಳು. ರೌದ್ರನನ್ನು ಕಂಡ ಸಾಧುವಿನಂತೆ ನಿಶ್ಚಲಳಾಗಿ ನೆಲವನ್ನು ನೋಡುತ್ತ, ಕಠಿಣನಾದ ರಾಜನ ನಾಡಿನಲ್ಲಿರುವಂತೆ ಬೆಬ್ಬಳಿಸುತ್ತ, ಎರೆನೆಲದ ಕೆರೆಯಂತೆ ಮುಖದಲ್ಲಿ ನೀರು ಸುರಿಸುತ್ತ, ಮಕ್ಕಳಂತೆ ವಿಮಾನವನ್ನು ಆತುಕೊಂಡು, ಮಹಾಮಂತ್ರಿಯಂತೆ ವ್ರತರಕ್ಷಣೋಪಾಯವನ್ನು ಚಿಂತಿಸುತ್ತ, ವಿಮಾನದ ಒಂದು ಕಡೆಗೆ ಒರಗಿಕೊಂಡು, ಮುಳ್ಳುಮರದ ಕೆಳಗಿರುವ ಬಳ್ಳಿಯಂತೆ ಓಸರಿಸುತ್ತ, ಆಜ್ಞಾಪರನಾದ ರಾಜನಂತೆ ಮನಸ್ಸನ್ನು ಸಂತೈಸಿಕೊಳ್ಳುತ್ತ, ಪ್ರೀತಿಸಿದವರನ್ನು ನೆನೆಯುವಂತೆ ಜಿನಾಗಮವನ್ನು ನೆನೆಸಿಕೊಳ್ಳುತ್ತ, ಇಕ್ಕೆಲಗಳನ್ನು ನೋಡುತ್ತ, ಕ್ಷಮಾನ್ವಿತೆಯೂ ಸಾಗರಗಂಭೀರೆಯೂ ಆದಳು.

ಆ ಕಡೆ, ಗಂಡನಲ್ಲಿ ಪ್ರೀತಿಯುಳ್ಳ ಖೇಚರನ ಹೆಂಡತಿ ಸುಕೇಶಿನಿಯು ಅವನ ಕಪಟವರಿಯದೆ, ಯಾಕೋ ಬರುವುದು ತಡವಾಯಿತಲ್ಲ ಎಂದು ಕಳವಳಗೊಂಡಳು. ಅವನಿಗೆ ಏನಾಗಿದೆಯೋ ಎಂಬುದನ್ನು ವಿಚಾರಿಸಿ ನೊಡುತ್ತೇನೆ ಎಂದು ಭಕ್ತಿಯಿಂದ ಅವಲೋಕಿನೀ ವಿದ್ಯಾಧಿದೇವತೆಯನ್ನು ನೆನೆಸಿಕೊಂಡಳು. ದೇವತೆಯು ಪ್ರತ್ಯಕ್ಷಳಾದಾಗ, ತನ್ನ ಗಂಡನು ವಾಪಸಾಗಲು ತಡವಾಗುತ್ತಿರುವ ಕಾರಣವೇನೆಂದು ತಿಳಿದು ಬರಲು ಕೇಳಿಕೊಂಡಳು. ಆಕೆ ಖೇಚರನಿದ್ದ ಜಾಗವು ಯಾವುದೆಂದು ತಿಳಿದು, ಅಲ್ಲಿಗೆ ಧಾವಿಸಿದಳು. ಸುಕೇಶಿನಿಯಲ್ಲಿ ಗೆ ಬಂದು ತಾನು ಕಂಡದ್ದನ್ನೆಲ್ಲ ವಿವರವಾಗಿ ನಿರೂಪಿಸಿದಳು. ಅದನ್ನು ಕೇಳಿ ಖೇಚರಸತಿಯು ತುಂಬುರುಗೊಳ್ಳಿಯನ್ನು ಕಂಬಕ್ಕೆ ಹೊಡೆದಂತೆ ಕೋಪದಿಂದ ಸಿಡಿದಳು.

ತನ್ನನ್ನು ಕಡೆಗಣಿಸಿ ಹೋದ ಅಂಬರಚರನನ್ನೂ, ಅವನ ಪ್ರೀತಿಯ ವನಿತೆಯನ್ನೂ ತಕ್ಷಣವೇ ಕೊಲ್ಲದೆ ಹೋದರೆ ನಾನು ಖೇಚರಿಯಲ್ಲ, ಗೀಚರಿ ಎಂದು ಪ್ರತಿಜ್ಞೆ ಮಾಡಿದಳು. ರೌದ್ರರೂಪಿಯೂ ಪಾಪಿಯೂ ಆದ ಅವಳು ವಜ್ರದಂಡವನ್ನು ಎದೆಯಲ್ಲಿ ಅಮರಿಕೊಂಡು, ಬಿಚ್ಚುಗತ್ತಿಯನ್ನು ಹಿಡಿದು ಗಂಡನಿದ್ದ ಜಾಗಕ್ಕೆ ವೇಗವಾಗಿ ಬಂದಳು. ಅವಳನ್ನು ದೂರದಿಂದಲೇ ನೋಡಿ ಬೆಗಡುಗೊಂಡ ಕುಂಡಲಮಂಡಿತನು ಬೇಗ ಪರ್ಣಲಘುವಿದ್ಯೆಯನ್ನು ಬರಮಾಡಿಕೊಂಡ. ಎದುರಾದ ಆಕೆಗೆ, ಅನಂತಮತಿಯನ್ನು ಕೆಳಕ್ಕಿಳಿಸಿ ಬರುವಂತೆ ವಿಜ್ಞಾಪಿಸಿಕೊಂಡ. ಆಗ ಆ ವಿದ್ಯಾದೇವತೆಯು ಕುಮಾರಿಯನ್ನು ಕರೆದೊಯ್ದು ಕೆಳಗಿಳಿದು ಭೀಮವನವೆಂಬ ಮಹಾರಣ್ಯದಲ್ಲಿ, ಸುಂದರವಾದ ಮಾವಿನ ತೋಪಿನಲ್ಲಿರಿಸಿ ಮರಳಿದಳು.

ಅನಂತಮತಿಯು ತನ್ನ ಸುತ್ತ ಪಾಪಿಯ ಮುಖದಂತೆ ಕಪ್ಪಾದ ಕೊಳಗಳಿಂದಲೂ, ಕೋಪಿಯ ಹೃದಯದಂತೆ ಉರಿಯುವ ಕಾಳ್ಗಿಚ್ಚಿನಿಂದಲೂ, ಕೊಂಡೆಯನಂತೆ ಮೈಮೇಲೆ ಹತ್ತುವ ರೆಕ್ಕೆಹುಳುಗಳಿಂದಲೂ, ಕಡುಘಾತಕನಂತೆ ನೋಯಿಸುವ ಭಾರಿ ನೊಣಗಳಿಂದಲೂ, ಲಜ್ಜೆಗೆಟ್ಟ ಹೆಣ್ಣುಗಳಂತೆ ಮೇಲೆ ಹಾಯುವ ಹೆಬ್ಬುಲಿವಿಂಡಿನಿಂದಲೂ, ಧೀರನ ಹೆಂಡಿರಂತೆ ಬಾಯ್ಬಿಡುವ ಸೀರ್ನಾಯಿಗಳಿಂದಲೂ, ಬಡಸೂಳೆಯಂತೆ ಬಿಳಿಯ ದಂತಗಳಿಂದ ಕೂಡಿದ ಆನೆಗಳಿಂದಲೂ, ಮಹಾದಾನಿಯ ಕೊಡುಗೆಯಂತೆ ಒಪ್ಪುವ ಕೋಡುಗಳ ಸಾರಂಗದ ಹಿಂಡಿನಿಂದಲೂ, ಬಲ್ಲಿದರ ಗುಂಪಿನಂತೆ ಮಲೆತ ಕಾಡೆಮ್ಮೆಗಳಿಂದಲೂ, ಜಿನದ್ರೋಹಿಗಳು ನರಕಕ್ಕೆ ಹೋಗುವುದನ್ನು ತೋರಿಸುವಂತೆ ಗಿರಿಶಿಖರದಿಂದ ಇಳಿಯುವ ನೀರ ಧಾರೆಗಳಿಂದಲೂ, ಕ್ರೂರನ ಮನಸ್ಸಿನಂತೆ ಹೊಗೆಯಾಡುವ ದಿಕ್ಕುಗಳಿಂದಲೂ ಕೂಡಿ ಬಿಮ್ಮೆನ್ನುವ ಹೇರಡವಿಯನ್ನು ಕಂಡಳು. ಆ ಜಲಜಮುಖಿಯು ತುಂಬ ತಲ್ಲಣಗೊಂಡು ದೊಡ್ಡ ನಿಟ್ಟುಸಿರನ್ನು ಬಿಟ್ಟು, ದುಃಖವೆಂಬ ಬೆಂಕಿಯು ತನ್ನನ್ನು ಸುಡುತ್ತಿರಲು, ಇದು ತಾನು ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮದ ಫಲವಿರಬೇಕೆಂದುಕೊಂಡಳು. ನಡೆದರೆ ತನ್ನ ಕಾಲುಗಳು ನೋಯುತ್ತವೆಂದು ಅಡಿಗಡಿಗೆ ವಿಚಾರಿಸಿ, ಜೊತೆಗಾತಿಯರನ್ನು ತಡೆಯಿರೆಂದು ಹೇಳುತ್ತಿದ್ದ ತನ್ನ ಬಗ್ಗೆ ಕಡು ಮೋಹದಿಂದ ಕೂಡಿದ ತಾಯಿತಂದೆಯರು ಈಗ ಎಲ್ಲರುವರೋ! ತಮ್ಮ ಅಕ್ಕನ ಮನಸ್ಸಿಗೆ ಅನುಗುಣವಾದುದನ್ನು ಮಾಡಿರೆಂದು ಪರಿಚಾರಕಿಯರಿಗೆ ಹೇಳುತ್ತಿದ್ದ ತನ್ನ ತಮ್ಮಂದಿರು ತಾನಿಲ್ಲಿರುವಾಗ ಆಲ್ಲಿ ಯಾರಿಗೆ ಏನು ಹೇಳುತ್ತಿರುವರೋ ಏನೋ! ಮಕ್ಕಳು, ತಾಯಿತಂದೆಯರು, ಮಿತ್ರರು, ಇಷ್ಟಬಂಧುವರ್ಗದವರು, ಅಜ್ಜಪಜ್ಜರು, ತಮ್ಮಂದಿರು, ಹೆಂಡಿರು, ಒಡಹುಟ್ಟಿದವರು

– ಎಲ್ಲರೂ ಬೇರೆಯೇ ಎಂದು ಜಿನಮತವು ಹೇಳುವುದು ಸುಳ್ಳಾಗುವುದೇ? ತಂತ್ರವು ಬಹುವಿಧವಾದ ಕೀಳುಮಂತ್ರ, ನಾನಾ ಪ್ರಕಾರದಿಂದಿರುವ ಮಹಾಯಂತ್ರ; ಕೇಡು ಅಡಸಿದಾಗ ಅದು ಯಂತ್ರದ ಕೀಲು ಕಳಚಿದಂತೆ ಕಳಕುಳವಾಗುತ್ತವೆ. ಆನೆಯ ಸಂದೋಹವಾಗಲೀ, ಅಶ್ವತತಿಗಳಾಗಲೀ, ಅದಟಿನ ಭಟರಾಗಲೀ, ಬೆಟ್ಟಗಳ ಮೇಲೆ ಕಟ್ಟಿಕೊಂಡ ಬಲವಾದ ಕೋಟೆಗಳಾಗಲೀ ನಮ್ಮನ್ನು ರಕ್ಷಿಸಬಲ್ಲವೇ? ನಿಷ್ಠುರಕೋಪದಿಂದ ಯಮರಾಜನು ಕೊಲ್ಲುವಾಗ ಶರಣುಹೊಗಬೇಕಾದುದು ನಿಜವಾಗಿ ಧರ್ಮಕ್ಕಲ್ಲದೆ ಬೇರಲ್ಲ ಎಂಬ ಜಿನಚಂದ್ರೋದಿತ ವಚನವು ಸತ್ಯವೆಂಬುದನ್ನು ನಾನೀಗ ಕಂಡುಕಂಡೆ. ತುಂಬ ಪ್ರೀತಿಯ ಅಮ್ಮನೀಗ ಎಲ್ಲಿರುವಳೋ; ಅಧಿಕವಾದ ಮೋಹದಿಂದ ಕೂಡಿ ಮುದ್ದಿನಿಂದ ಕಾಣುವ ಅಪ್ಪನೆಲ್ಲಿರುವನೋ; ಅನುನಯದಿಂದ ಜೊತೆಯಾಗಿರುವ ನಂಟರು ಹಾಗೂ ಸಂತೋಷದಿಂದ ಆಡುವ ಪರಿಜನರು ಎಲ್ಲಿರುವರೋ! ಯೋಚಿಸಿದರೆ, ಅವರಾರೂ ನನ್ನ ಜೊತೆ ಬಾರರು; ನನ್ನ ಪಾಪದ ಆಟೋಪದಿಂದ ಈ ಹೇರಡವಿಗೆ ನಾನೇ ಬಂದೆ. ಸ್ವರ್ಗದಲ್ಲಿ ಸುಖವನ್ನು ಅನುಭವಿಸುವುದಾಗಲೀ, ಮಹಾನರಕದಲ್ಲಿ ದುಃಖಾಗ್ನಿಯಲ್ಲಿ ಬೆಂದು ನವೆಯುವುದಾಗಲೀ ಪ್ರಾಣಿಜನ್ಮಗಳಲ್ಲಿ ಹುಟ್ಟುವುದಾಗಲೀ, ಮನುಷ್ಯರೊಡನೆ ಜನ್ಮ ತಳೆಯುವುದಾಗಲೀ ಜೀವನು ಒಬ್ಬನೇ ಅನುಭವಿಸಬೇಕು ಎಂಬ ಜಿನನ ಶ್ರೀವಾಕ್ಯವನ್ನು ನಂಬಿರುವೆ. ಭೂಮಿ, ರಾಜ್ಯ, ರೂಪು, ವೀರ, ಮಹಿಮೆ, ದೇಹದ ಚೆಲುವು, ಬಲ, ಜೀವಿತತ್ವ, ಸಿರಿ, ಸೌಭಾಗ್ಯ, ಯೌವನ, ಪರಾಕ್ರಮ, ಸೌಖ್ಯ ಎಂಬಿವೆಲ್ಲವೂ ಮಳೆಬಿಲ್ಲಿನಂತೆ, ದರಿಯ ಮೇಲಣ ಮರದಂತೆ, ಕಡು ಕಷ್ಟಕರವಾದುದು, ಅಸ್ಥಿರವಾದವು ಎಂಬ ಜೈನೋಕ್ತಿಯ ಮಹಿಮೆಯನ್ನು ನಾನು ಕಣ್ಣಾರೆ ಕಾಣುವಂತಾಯಿತು ಎಂದು ಆಕೆಯು ಧ್ರುವವಾದುದನ್ನು ಕುರಿತು ಆಲೋಚಿಸಿದಳು.

ಸಿರಿವಂತನಾಗಿದ್ದರೂ ಸಿರಿಯು ಒಮ್ಮೆಯೇ ಕಳೆದುಹೋದರೆ ಅವನು ಬಡವನಾಗುತ್ತಾನೆ, ಹುಡುಗನಾಗಿರುವವನು ವೃದ್ಧನಾಗಿ ತಿರುಗಬೇಕಾಗುತ್ತದೆ; ಕಡು ಸುಖಿಯಾದ್ದವನು ಒಮ್ಮೆಗೇ ಕಡು ದುಃಖಿಯಾಗುತ್ತಾನೆ; ವೀರನಾಗಿರುವವನು ಕಡು ಹೇಡಿಯಾಗಿ ಬಿಡಬಹುದು; ತನ್ನನ್ನು ಬಿಡದ ಪಾಪಗಳಿಗೆ ವಶನಾಗಿ ಜೀವನು ಈ ಬಗೆಯಲ್ಲಿ ಸುಳಿದಾಡುತ್ತಾನೆ ಎಂದು ಅವಳು ಮನಸ್ಸಿನಲ್ಲಿ ಸಂಸಾರದಲ್ಲಿನ ನಾನಾ ಬಗೆಯ ದುಃಖಗಳನ್ನು ಕುರಿತು ಆಲೋಚಿಸಿದಳು. ಈ ದೇಹದ ಸ್ವರೂಪವನ್ನು ಕುರಿತು ಆಲೋಚಿಸಿದರೆ, ಇದು ಹೇಸಿಗೆಯ ಬಣಬೆ, ಅಪಾಯ ತುಂಬಿದ ಜಾಗ, ನರಗಳ ಮನೆ, ಮಿದುಳಿರುವ ಹುತ್ತ, ಕಷಾಯಗಳ ರಾಶಿ, ಮೂಳೆಯ ಹಂದರ, ಚರ್ಮ–ರಕ್ತಗಳಿಂದ ಮಾಡಿದ ದೊಡ್ಡ ಮನೆ; ಇದನ್ನು ಕಾಪಾಡುವ ಬಗೆ ಯಾವುದೋ ಎಂದು ದೇಹದ ಮೇಲೆ ಉಂಟಾದ ಅರುಚಿಯನ್ನು ನೆನೆದು, ಅದರ ಸ್ವರೂಪಕ್ಕೆ ತೀವ್ರವಾಗಿ ಹೇಸಿ, ನರಕದಲ್ಲಿ ಜೀವರುಗಳು ಅನುಭವಿಸಬೇಕಾದ ದುಃಖಗಳ ಬಗ್ಗೆ ಹೀಗೆಂದು ಆಲೋಚಿಸಿದಳು: ಮೈಯ್ಯನ್ನು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ, ಸುಟ್ಟು, ಕೆನ್ನೆಯನ್ನು ಕೈಯಿಂದ ತಿವಿದು, ಕಠಿಣರಾದವರ ಮೈಗೂ ನೋವುಂಟಾಗುವಂತೆ ಹೊಡೆದು ಬಡಿದು ಬೆಂಕಿಯಲ್ಲಿಡುತ್ತಾರೆ. ಕರುಣೆಯೇ ಇಲ್ಲದೆ ನೆತ್ತಿಯಿಂದ ಪಾದಗಳವರೆಗೂ ಗರಗಸದಿಂದ ಸೀಳಿ, ಅವುಗಳನ್ನು ಕುದಿಯುವ ಎಣ್ಣೆಯಲ್ಲಿಕ್ಕಿ ಮೈಯೆಲ್ಲ ಸುಟ್ಟ ಮೇಲೆ ತೆಗೆಸುತ್ತಾರೆ. ಉಪ್ಪು, ಇಂಗು, ಸಾಸವೆ, ಮೆಣಸು, ಶುಂಠಿ, ಹೊಸ ಸುಣ್ಣ – ಇವುಗಳನ್ನು ಚೆನ್ನಾಗಿ ಕುಟ್ಟಿ ಮೈಗೆಲ್ಲ ಪೂಸಿ ನಿರ್ದಯೆಯಿಂದ ನಾರೆತ್ತುತ್ತಾರೆ. ಕಿರಿಚಿದರೂ ಅತ್ತರೂ ಬಿಡದೆ ಹೊಡೆದು ಕ್ರೂರತನದಿಂದ ಮೈಯ ಚರ್ಮವನ್ನು ಸುಲಿಯುವರು. ಹೀಗೆ ನಾನಾ ಬಗೆಯ ಶಿಕ್ಷೆಗಳಿಂದ ಗಾಸಿಗೊಳಿಸುತ್ತಾರೆ. ಹೀಗಾಗಿ ನರಕದಲ್ಲಿ ಎಲ್ಲಿ ನೋಡಿದರೂ ಹುಯ್ಯಲಿಡುವವರು, ಗೋಳಿಡುವವರು, ಬೀಳುವವರು, ಹೊರಳುವವರು, ನಡುಗುವವರು, ಗಾಯಗೊಂಡವರು – ಇಂತಹವರೇ ತುಂಬಿರುತ್ತಾರೆ.

ಶಿಕ್ಷೆಯ ಅವಧಿ ಮುಗಿಯುವವರೆಗೂ ಜೀವರು ನಾರಕಿಗಳನ್ನು ಪಾಪಿಗಳು ಒಂದೇ ಹಗಲಿರುಳು ಬಾಧಿಸುತ್ತಾರೆ. ನದಿ ಎಂದು ಹತ್ತಿರ ಹೋದರೆ ಮಾಯಾ ನದಿಗಳು ಕಾದ ಎಣ್ಣೆಯಾಗಿ ಮೈಯನ್ನು ಸುಡಲು ಪ್ರಜ್ಞೆ ತಪ್ಪಿ ಕಬ್ಬಿಣದ ಹಾಗೆ ಬೇಯುತ್ತ ಹಲವು ದಿನಗಳ ಕಾಲ ನರಳಬೇಕು; ವನವೆಂದು ಹೋದರೆ ಮಾಯಾ ವನವು ಹೋಗಲು ಬಿಡದೆ ಬಾಣಗಳ

ಮಳೆಯನ್ನು ಒಂದೇ ಸಮನೆ ಸುರಿಸಲು ಎಷ್ಟೋ ಕಾಲದವರೆಗೆ ಓ ಎಂದು ಗೋಳಾಡುತ್ತ ಇರಬೇಕು; ಮರವೆಂದು ಹತ್ತಿರ ಹೋದರೆ ಮರದ ಎಲೆಗಳೆಲ್ಲ ಉರಿಯ ನಾಲಗೆಗಳಂತೆ ಚೇಳುಗಳಾಗಿ ಅಟ್ಟಿಸಿಕೊಂಡು ಬಂದು ಕೋಪದಿಂದ ಕಚ್ಚುತ್ತವೆ. ಅಲ್ಲದೆ, ಇಲಿ–ಬೆಕ್ಕು, ಹುಲಿ–ಹುಲ್ಲೆ, ತಳವಾರ–ಕಳ್ಳ, ನವಿಲು–ಹಾವು, ಸಿಂಹ–ಆನೆ, ನಾಯಿ–ಮೊಲ, ಕುದುರೆ–ಕೋಣಗಳಂತೆ ನಾಯಿಗಳು, ಕೋಣಗಳು, ಕೋಳಿಗಳು, ಆನೆಗಳು, ಟಗರುಗಳು, ತಮ್ಮಲ್ಲಿಯೇ ಜಿದ್ದಿನಿಂದ ಸೆಣಸುತ್ತ ಜೀವರು ನರಕದಲ್ಲಿ ದುಃಖಪಡುವರು.

ಇದನ್ನೆಲ್ಲ ಯೋಚಿಸಿದಾಗ, ತನಗೆ ಒದಗಿರುವ ಈಗಿನ ದುಃಖ ದೊಡ್ಡದೇನಲ್ಲ; ಕರ್ಮವಶದಿಂದ ನನಗೆ ಈ ರೀತಿಯಾಗಿದೆ. ನನಗೆ ಇನ್ನು ಜಿನಪಾದವೇ ಗತಿ ಎಂದು ಕನ್ಯೆಯು ನಿಶ್ಚೈಸಿದಳು. ಆನೆಯು ವನವನ್ನೂ, ಮದಾಳಿಯು ತಾವರೆಗೊಳವನ್ನೂ, ಮಗುವು ತಾಯನ್ನೂ, ಹೆಣ್ಣುಮಕ್ಕಳು ಒಲಿದ ಗಂಡಂದಿರನ್ನೂ ನೆನೆಯುವ ಬಗೆಯಲ್ಲಿ, ಇಂದ್ರ ನರೇಂದ್ರವಂದ್ಯನಾದ ಪರಮ ಜಿನೇಂದ್ರನನ್ನು ನೆನೆಯುತ್ತ, ಸದಾ ಜಿನಪೂಜೆಯಲ್ಲಿ ತೊಡಗಿ ಅವನನ್ನೇ ಭಾವಿಸುತ್ತ ಜೈನಗುಣಸ್ತವಗಳನ್ನು ಮಾಡುತ್ತಿದ್ದಳು. ಅನಂತಮತಿಯಿದ್ದ ವನಾಂತರಾಳದಲ್ಲಿದ್ದ ಆನೆಯ ಹಿಂಡು, ಸಿಂಹಗಳ ಗುಂಪು, ಹುಲಿವಿಂಡು, ಜಿಂಕೆಗಳು, ಶರಭ ಸಮೂಹ, ಹಾವುಗಳು, ನವಿಲುಗಳು, ಮೇಲಾಡುತ್ತಿದ್ದ ಕಾಗೆಗಳು, ನಲಿವ ಕೋಗಿಲೆಗಳು, ತಮ್ಮ ನಡುವಣ ವೈರವನ್ನು ತೊರೆದು ಜೊತೆಗೂಡಿ ಇದ್ದವು. ಆ ರೀತಿಯಲ್ಲಿ ಹಗೆಯಾಗಲೀ ಕೆಳೆಯಾಗಲೀ ಇಲ್ಲದೆ ಎಲ್ಲ ಮೃಗಗಳು ಮಿತ್ರತ್ವದಲ್ಲಿರಬೇಕಾದರೆ, ಆ ವನಪ್ರದೇಶದಲ್ಲಿ ಶಾಂತಿರಸದಿಂದ ಕೂಡಿ ಕುಮಾರಿಯಿದ್ದಳು.

ಇತ್ತ, ಶಂಖಪುರದಲ್ಲಿ ಒಬ್ಬ ಬೇಡನೂ ಬೇಡಿತಿಯೂ ತಮ್ಮ ಹೊಲದ ಕಡೆ ಬರುವಾಗ ಲಲಿತಾಂಗಿಯಾದ ಅನಂತಮತಿಯನ್ನು ಕಂಡರು. ಹಾಗೆಯೇ ಹೋದರೆ ದೇವತೆಯು ನಮ್ಮನ್ನು ಹಿಡಿದು ಕೊಲ್ಲಬಹುದೆಂದು ಹೆದರಿ, ರೆಪ್ಪೆ ಮಿಟುಕಿಸದೆ ಬಂದು ಆದರದಿಂದ ಅವಳ ಮುಂದೆ ಇಪ್ಪೆಯ ಹೂವುಗಳನ್ನೂ ಬೇಲದ ಹಣ್ಣುಗಳನ್ನೂ ರಾಸಿ ಹಾಕಿ ನಮಸ್ಕರಿಸಿದರು. ಆಮೇಲೆ ತಮ್ಮ ಒಡೆಯನಾದ ಬೇಡರ ಅರಸನಿಗೆ, "ಓರ್ವ ದೇವತೆಯು ಬಂದು ಭೀಮವನದಲ್ಲಿ ನೆಲೆಸಿದ್ದಾಳೆ; ಅವಳ ಬಳಿ ಹೋಗಿ ನಿಮಗೆ ಬೇಕಾದ ವರವನ್ನು ಬೇಡಿಕೊಳ್ಳಿ" ಎಂದು ಬಿನ್ನಹ ಮಾಡಿದರು. ಅದನ್ನು ಕೇಳಿದ ಬೇಡರರಸನು ತಡಮಾಡದೆ ಆ ವನಕ್ಕೆ ಬಂದು, ಅನಂತಮತಿಯನ್ನು ನೋಡಿ, ರೆಪ್ಪೆ ಮಿಟುಕಿಸುವುದರಿಂದ ಇವಳು ದೇವಕನ್ನಿಕೆಯಲ್ಲವೆಂದು ನಿರ್ಧರಿಸಿದ. ಆಕೆಯನ್ನು ಮೇಲೆ ಕೆಳಗೆ ಪರಿಕಿಸಿ, ಅವಳಲ್ಲಿ ಆಸಕ್ತನಾಗಿ ಅವಳನ್ನು ತನ್ನ ಅರಮನೆಗೆ ಕರೆದುಕೊಂಡು ಹೋದ.

ಅಲ್ಲಿ ತನ್ನ ಮೇಲ್ಮೆಯನ್ನೂ ಐಶ್ವರ್ಯiವನ್ನೂ ವಿವರಿಸಿ ತೋರಿಸಿ ಮೆಲ್ಲನೆ, "ನಿನ್ನ ಹಾಗೆ ಪುಣ್ಯವಂತರು ಯಾರಿದ್ದಾರೆ; ನಿನ್ನ ರೂಪೋನ್ನತಿಯಿಂದ ನನ್ನಂತಹ ಪ್ರತಾಪಿಯನ್ನು ಹೊಂದಿದೆ!" ಎಂದು ಅವಳನ್ನು ತನ್ನೆಡೆಗೆ ಕರೆದ. ಇದರಿಂದ ಅನಂತಮತಿಯು ಮನಸ್ಸಿನಲ್ಲಿ ಬೆರಗುಗೊಂಡಳು; ಅವಳ ಬಾಯಿ ಬತ್ತಿಹೋಯಿತು. ತಾನು ಪಡೆದಿರುವ ವ್ರತವನ್ನು ಬಿಟ್ಟು ಬದುಕಿರುವುದಕ್ಕಿಂತಲೂ ಸಾಯುವುದೇ ಮೇಲೆಂದು ತೀರ್ಮಾನಿಸಿದಳು; ನಿಶ್ಚಲಮತಿಯಿಂದ ಮೌನವಹಿಸಿದಳು; ಮನದಲ್ಲಿಯೇ ಪಂಚನಮಸ್ಕಾರಗಳನ್ನು ಜಪಿಸುತ್ತ ಮಾತನಾಡದೆ ಇದ್ದಳು. ಯಾವ ರೀತಿಯಲ್ಲಿ ಪ್ರಯತ್ನಿಸಿದರೂ ಅವಳನ್ನು ಒಡಂಬಡಿಸಲಾರದೆ ಕಿರಾತರಾಜನು ಮುನಿದು ಕಿಡಿಕಿಡಿಯಾದ. ತನ್ನ ಮೀಸೆಯನ್ನು ಕಡಿಯುತ್ತ, "ನೀನಿನ್ನೂ ಕೂಸು. ನಿನ್ನ ಆಸೆಯಿಂದ ನಾನು ಸಕಲರಾಜ್ಯಶ್ರೀಯನ್ನು ಪ್ರೀತಿಯಿಂದ ಕೊಟ್ಟುಬಿಡುತ್ತೇನೆ. ನೀನಾದರೋ ದೇಸಿಗತನದಲ್ಲಿಯೇ ನಮೆಯುವ ಯೋಚನೆ ಮಾಡುತ್ತಿರುವೆಯಲ್ಲ!" ಎಂದು ಕೋಪದಿಂದ ಹೊಡೆದ. "ಒಮ್ಮೆಗೇ ನಿನ್ನ ಮೇಲೆ ನಾನು ಕೋಪಗೊಳ್ಳುವುದಿಲ್ಲ. ಇಂದಿನ ರಾತ್ರಿಯೊಳಗೆ ನಿನ್ನ ಮನಸ್ಸನ್ನು ನೇರ್ಪಡಿಸಿಕೋ. ಹಾಗೆ ಮಾಡದೆ ಒರಟುತನವನ್ನು ತೋರಿದರೆ, ನಾಳೆ ನಿನಗೆ ತಕ್ಕ ಶಾಸ್ತಿಯನ್ನು ಮಾಡುತ್ತೇನೆ" ಎಂದು ಬಲವಾದ ಕಾವಲಿಟ್ಟು ಹೋದ.

ಅಷ್ಟರಲ್ಲಿ ಈ ಕಡೆ ಕುವರಿಯು, "ಈ ವ್ರತವನ್ನು ಹಿಡಿದು ಆವಶ್ಯಕವಾದರೆ ನಾನು ಸಾಯುತ್ತೇನೆ; ವ್ರತವನ್ನು ಬಿಡದಿದ್ದರೆ ಆ ಮೂರ್ಖನು ನನ್ನನ್ನು ಕೊಲ್ಲದೆ ಬಿಡುವುದಿಲ್ಲ. ಜಿನಪಾದಗಳನ್ನು ಬಲವಾಗಿ ಹಿಡಿಯುತ್ತೇನೆ; ಇದಕ್ಕಿಂತ ಬೇರೆ ಕರ್ತವ್ಯವು ನನಗೆ ಉಳಿದಿಲ್ಲ" ಎಂದು ಆಲೋಚಿಸಿದಳು. ಕಳೆಯಲಾಗದ ಉಪಸರ್ಗವಾದ ಇದು ಹಿಂಗುವವರೆಗೂ ಆಹಾರವನ್ನು ತೊರೆಯುತ್ತೇನೆಂದು ನಿಶ್ಚೈಸಿದಳು. ಇದರಿಂದ ಯಕ್ಷಿಗೆ ಆಸನಕಂಪವಾಯಿತು. ಅನಂತಮತಿಯನ್ನು ಪರೀಕ್ಷಿಸಲೆಂದು ಅವಳು ಕಿರಾತರಾಜನ ರೂಪವನ್ನು ಧರಿಸಿ ಅವಳ ಬಳಿ ಬಂದಳು. ಆ ಕಪಟ ಕಿರಾತನ ಜೊತೆಗಾರರು ಅವನನ್ನು ಹೊಗಳುತ್ತ ಇದ್ದರು. ಬಂದವನೇ ಆ ಕಿರಾತನು, "ರತಿ, ರಂಭೆ, ತಿಲೋತ್ತಮೆ, ಭಾರತಿಯರಿಗಿಂತಲೂ ಹೆಚ್ಚು ಸುಂದರಿಯರಾದ ಹೆಂಡತಿಯರು ನನಗಿದ್ದಾರೆ. ನನ್ನ ಮೇಲೆ ನಂಬಿಕೆ ಬಾರದಿದ್ದರೆ ನೋಡು" ಎಂದು ತನ್ನ ಮಾಯೆಯಿಂದ ಸುಂದರಿಯರನ್ನು ತೋರಿಸಿದ. ಆನಂತರ, "ನನಗೆ ರೂಪಿಲ್ಲವೇ? ನಾನು ಪ್ರತ್ಯಕ್ಷ ಕಾಮದೇವ. ಎಲೈ ಚಪಲನಯನೆಯೇ, ಮನೋಹರರೂಪಿಯೇ, ಮನೋಮುದದಿಂದ ನನ್ನ ರೂಪನ್ನು ನೋಡು" ಎಂದು ತನ್ನ ಮಾಯಾರೂಪವನ್ನು ತೋರಿಸಿದನು. 'ಸಿರಿ ಬರಲು ಮೊಳಕಾಲನ್ನೊಡ್ಡಿದರು' ಎಂಬಂತೆ, "ಎಲೈ ಮರುಳೆ, ನನಗೆ ಯಾವ ಕೊರತೆಯಿದೆ? ಸುಮ್ಮನೆ ನನ್ನನ್ನು ಒಪ್ಪಿಕೋ" ಎಂದು ಪೀಡಿಸಿದ. ಆಗ ಅನಂತಮತಿಯು, ತನಗೆ ಜಿನಪಾದ ಭಕ್ತಿಯಿಂದಾಗಿ ನೇರವಾಗಿ ಮೋಕ್ಷಲಕ್ಷ್ಮಿಯೇ ದೊರೆಯವಳೆಂದಿರುವಾಗ, ಉಳಿದ ಸಿರಿಗಿರಿಗಳು ಸುಖಗಿಖಗಳು ಯಾವ ಮಹಾ ಎಂದುಕೊಂಡಳು. ಈ ಶುಭಭಾವನೆಯಿಂದ ಅವುಗಳ ಮೇಲೆ ಎಳ್ಳನಿತೂ ಮನಸ್ಸಿಲ್ಲದೆ, ಪಂಚಪದಗಳನ್ನು ನೆನೆಯುತ್ತ ಮೌನವಹಿಸಿದಳು. ಇದನ್ನು ಕಂಡು ಯಕ್ಷಿ ಮೆಚ್ಚಿ ತನ್ನ ದಿವ್ಯಸ್ವರೂಪವನ್ನು ತೋರಿಸಿದಳು. "ನನಗೆ ಹೇಗೋ ಹಾಗೆಯೇ ನಿನಗೂ ಜಿನನಾಥನೇ ಇಷ್ಟದೈವ; ಆದ್ದರಿಂದಲೇ ಈ ವನಚರನಿಂದ ನಿನಗೆ ಈ ಕಷ್ಟವುಂಟಾದುದನ್ನು ತಿಳಿದು, ಅದನ್ನು ಹೋಗಲಾಡಿಸಲೆಂದು ನಾನು ತ್ವರಿತವಾಗಿ ಬಂದೆ; ಅಂಜಬೇಡ" ಎಂದು ಯಕ್ಷಿ ಸಮಾಧಾನ ಹೇಳಿ, ಮೈಮರೆತು ಮಲಗಿದ್ದ ಕಿರಾತರಾಜನ ತಲೆಯನ್ನೊದ್ದಳು. ಅವನಿಗೆ ಹೆದರಿಕೆಯುಂಟುಮಾಡಲೆಂದು ತನ್ನ ರೌದ್ರರೂಪವನ್ನು ತೋರಿಸಿದಳು. "ನಾನು ಒಬ್ಬ ದೇವತೆ; ನೀನಾದರೋ ಕೊಬ್ಬಿ ಚಪಲತನದಿಂದ ನನ್ನನ್ನು ಮಾನವಳೆಂದು ತಿಳಿದು ಏನೇನೋ ಮಾತನಾಡಿದೆ. ಆದರೇನಾಯಿತು? ಇನ್ನು ನಿನ್ನ ಪೊಲ್ಲಮೆಯನ್ನು ಸಹಿಸುವುದಿಲ್ಲ. ನೀನೂ ಪರಿಜನವೂ ನಾಳೆ ಬಂದು ನನ್ನನ್ನು ಈ ಕಾಡಿನಿಂದ ಒಯ್ದು ಬೇಗ ಅಯೋಧ್ಯಾಪುರದ ದಾರಿಯಲ್ಲಿ ಬಿಟ್ಟು ಬರಬೇಕು; ಇಲ್ಲದಿದ್ದರೆ ಏನಾಗುವುದೋ ನಿನಗೇ ತಿಳಿಯುತ್ತದೆ" ಎಂದು ಹೇಳಿ ದೇವಿಯು ಅದೃಶ್ಯಳಾದಳು.

ಕಿರಾತನು ಬೆಚ್ಚಿ ಎಚ್ಚರಗೊಂಡ; ಇದು ಕನಸಲ್ಲ, ನಿಜವಾದುದು ಎಂದು ಭಯದಿಂದ ತನ್ನನ್ನೂ ಮನೆಯನ್ನೂ ನೋಡಿಕೊಂಡ; ಶಂಕೆಯಿಂದ ಪರಿಜನರನ್ನೆಲ್ಲ ಬರ ಹೇಳಿದ. ಬೆಳಗಾದಾಗ ಅವರೆಲ್ಲರ ಜೊತೆ ಆ ಕಿರಾತರಾಜನು ಅನಂತಮತಿಯ ಬಳಿ ಬಂದು ಅವಳ ಕಾಲುಗಳನ್ನು ನಾನಾ ಬಗೆಯಲ್ಲಿ ಅರ್ಚಿಸಿದ. ಕೈಮುಗಿದು ಅವಳನ್ನು ಕರೆತಂದು ಕಿರುದಾರಿಯ ಮೂಲಕ ಕಾಡನ್ನು ದಾಟಿಸಿ, ಅಲ್ಲಿಂದ ಕಾಣುತ್ತಿದ್ದ ಅಯೋಧ್ಯೆಯ ದಾರಿಯನ್ನು ತೋರಿಸಿ ವಾಪಸಾದ.

ಹಾಗೆ ಬಂದ ಅನಂತಮತಿಯು ಒಂದು ಬಸದಿಯನ್ನು ಸೇರಿ ದೇವರನ್ನು ಪೂಜಿಸುತ್ತಿದ್ದಳು. ಅಷ್ಟರಲ್ಲಿ ಅಯೋಧ್ಯೆಯಿಂದ ಪುಷ್ಪಕನೆಂಬೊಬ್ಬ ವೈಶ್ಯನಂದನನು ಭಾರೀ ವ್ಯಾಪಾರದ ಉದ್ದೇಶದಿಂದ ದೊಡ್ಡ ಪರಿವಾರದೊಡನೆ ಹತ್ತಿರದಲ್ಲಿ ಬೀಡುಬಿಟ್ಟಿದ್ದವನು ದೇವರನ್ನು ಪೂಜಿಸುತ್ತಿದ್ದ ಅನಂತಮತಿಯನ್ನು ನೋಡಿದ. ಧರ್ಮವಾತ್ಸಲ್ಯದಿಂದ ಅವಳನ್ನು ತನ್ನ ಬೀಡಿಗೆ ಕರೆದೊಯ್ದು ತಕ್ಕ ರೀತಿಯಲ್ಲಿ ಉಪಚರಿಸಿದ. ಆನಂತರ ಅವಳ ದೇಶ, ಊರು, ತಂದೆ ಮುಂತಾದುದರ ಬಗ್ಗೆ ವಿಚಾರಿಸಿದ. ಅದಕ್ಕೆ ಅನಂತಮತಿಯು, ಕ್ಷಮೆಯೇ ಗೆಳೆಯ, ಶೀಲವೇ ಮಗ, ಸದಾಚಾರವೇ ಧನ, ನಿರ್ಮಲ ದಯೆಯೇ ತಾಯಿ, ಸತ್ಯವೇ ತಾತ, ಗುಣಗಳೇ ಸೋದರರು, ತತ್ತ್ವವೇ ಮಗಳು, ಸಮ್ಯಕ್ತ್ವವೇ ತಂದೆ, ಸಂಯಮವೇ ಮನೆ, ಮೋಕ್ಷವೇ ದೇಶ, ಜಿನೋಕ್ತಿಯೇ ತನ್ನ ಊರು ಎಂದು ಉತ್ತರಿಸಿದಳು. ಇದರಿಂದ ಆಕೆಯು ದರ್ಶನವಿಶುದ್ಧೆಯೆಂದು ತಿಳಿದು

ಮೆಚ್ಚಿಕೆಯಿಂದ ತನ್ನ ಮನೆಗೆ ಕರೆತಂದು ತನ್ನ ಹೆಂಡತಿಯಾದ ಗುಣವತಿಗೆ ತೋರಿಸಿ, ಅವಳನ್ನು ಸ್ವಂತ ಮಗಳಂತೆ ತಿಳಿದು ತಾನು ವಾಪಸ್ಸಾಗುವವರೆಗೂ ಚೆನ್ನಾಗಿ ನೋಡಿಕೊಳ್ಳಲು ಹೇಳಿ ತನ್ನ ಕೆಲಸದ ಮೇಲೆ ಹೋದ.

ಗುಣವತಿಯು ಈ ಕನ್ಯೆಯನ್ನು ನೋಡಿ ಇವಳು ದೇವತಾಸ್ತ್ರೀಯೋ ವಿದ್ಯಾಧರೆಯೋ ಇರಬೇಕು; ವೇಷ ಧರಿಸಿ ಈ ರೂಪದಲ್ಲಿ ಕಾಣಿಸಿಕೊಂಡಿರಬೇಕು; ಇಲ್ಲದಿದ್ದರೆ, ನರವನಿತೆಯರಿಗೆ ಈ ಲಾವಣ್ಯವೆಲ್ಲಿಂದ ಬರಬೇಕು ಎಂದುಕೊಂಡಳು. ದುರ್ಬಲದೃಷ್ಟಿಯವರು ಸೂರ್ಯನನ್ನು ನೋಡುವ ಹಾಗೆ ಅನಂತಮತಿಯ ಚೆಲುವನ್ನು ನೋಡಿ ಅಂಜಿದಳು. ತನಗೆ ಮೊದಲಿನ ಯೌವನ ಲಾವಣ್ಯ ವಿಲಾಸಗಳು ಉಳಿದಿಲ್ಲ; ಆದ್ದರಿಂದ ಇಲ್ಲೇನಾದರೂ ಈ ಹೆಣ್ಣು ಉಳಿದುಕೊಂಡರೆ ಮನೆಯಲ್ಲಿ ಹೆಗ್ಗಣವನ್ನು ಸೇರಿಸಿಕೊಂಡ ಹಾಗಾಗುತ್ತದೆ ಎಂದುಕೊಂಡಳು. ತನ್ನ ಹುಳುಕು ಮನಸ್ಸಿನಿಂದ ಜೊತೆಯಲ್ಲಿರಿಸಿಕೊಳ್ಳಲು ಹಿಂಜರಿದು, ವ್ಯಾಳಿ ಎಂಬ ಕುಂಟಣಿಗೆ ಅವಳನ್ನು ಸಾವಿರ ಹೊನ್ನುಗಳಿಗೆ ಮಾರಿಬಿಟ್ಟಳು. ಅವಳು ತನ್ನ ಮನೆಗೆ ಕರೆದುಕೊಂಡು ಹೋದಾಗ, "ಕೆಟ್ಟ ಕರ್ಮದ ಕಾರಣದಿಂದ ಉಂಟಾಗುವ ಈ ದುಃಖವು ನನಗೆಷ್ಟು ಒದಗಿದರೂ ನಾನು ವಿಚಲಿತಳಾಗುವುದಿಲ್ಲ; ನಾನು ತೊಟ್ಟ ಸುವ್ರತಕ್ಕೆ ಭಂಗವನ್ನು ಮಾಡುವುದಿಲ್ಲ" ಎಂದು ನಿರ್ಧರಿಸಿ ಅವಳು ದೃಢವ್ರತೆಯಾದಳು.

ಹತ್ತೆಂಟು ದಿನಗಳಾದ ಮೇಲೆ ವ್ಯಾಳಿ ಮೆಲ್ಲನೆ, "ಮರುಳೆ, ಹುಚ್ಚಿಯ ಹಾಗೆ ತಲೆಯನ್ನು ಕೆದರಿಕೊಂಡಿರದೆ ಸಂತೋಷವಾಗಿ ಜಡೆ ಹಾಕಿಕೋ; ದೆವ್ವ ಬಡಿದವರ ಹಾಗಿರದೆ ಇತರರರೊಂದಿಗೆ ಗೆಲವಿನಿಂದ ಮಾತಾಡು. ಒಲ್ಲದಿದ್ದರೂ ಕಂಡವರನ್ನು ಒಲಿದವಳಂತೆ ತೋರಿಸಿಕೋ; ಬೇರೆಯವರ ಮನಸ್ಸನ್ನು ಮೃದುವಾದ ನೋಟಗಳಿಂದಲೂ, ನಗೆಯಿಂದಲೂ ನೀನು ಸೆರೆಹಿಡಿಯಬೇಕು. ಅಲ್ಲಿಲ್ಲಿ ಏನನ್ನೋ ತರುವ ನೆಪ ಮಾಡಿಕೊಂಡು, ಈ ಕನ್ಯೆಯು ಯಾರ ಜೊತೆಯಾದರೂ ಪ್ರೀತಿಯಿಂದ ಇರಬಲ್ಲಳೆಂಬ ಹಾಗೆ ಮೆಲುವಚನಗಳಿಂದ ಚಲ್ಲವಾಡಬೇಕು. ತರಳಲೋಚನೆಯೇ, ಕುಚಗಳ ಚೆಲುವನ್ನೂ, ಮುಖಕಮಲದ ವಿಲಾಸವನ್ನೂ, ನಳಿತೋಳುಗಳ ಭಂಗಿಯನ್ನೂ, ಪಾದಕಮಲಗಳ ಚಿಗುರನ್ನೂ, ಕೂದಲಿನ ಬೆಡಗನ್ನೂ ವಿಟರಿಗೆ ಅನುರಾಗವುಂಟಾಗುವ ಹಾಗೆ ನೀನು ತೋರಿಸಬೇಕು. ಮುಂಗುರುಳನ್ನು ಮನವೊಪ್ಪುವಂತೆ ತಿದ್ದಿಕೋ; ಮೈಗೆಲ್ಲ ಚಂದನಪಂಕವನ್ನು ಲೇಪಿಸಿಕೋ; ಮೆಚ್ಚಿಕೆಯಾದ ಮುತ್ತಿನ ಏಕಾವಳಿಯನ್ನು ಹಾಕಿಕೋ; ದಿವ್ಯವಸ್ತ್ರವನ್ನು ತೊಟ್ಟುಕೋ; ಸಂತಸದಿಂದ ಸುರಗಿಯನ್ನು ಮುಡಿದುಕೋ; ನಿನ್ನ ರೂಪವನ್ನು ಏಕೆ ಸುಮ್ಮನೆ ಹುಚ್ಚಳಂತೆ ಕುಂದಿಸಿಕೊಳ್ಳುವೆ? ಕೆಲವರು ರೂಪಿಲ್ಲದಿದ್ದರೂ ಸುಮ್ಮನೆ ತೊನೆದು ವಿಟಸಂದೋಹವನ್ನು ಒಲಿಸಿಕೊಳ್ಳುವರು; ಅಂದ ಮೇಲೆ ರೂಪವನ್ನು ಪಡೆದ ನೀನು ಅದನ್ನೇಕೆ ವ್ಯರ್ಥವಾಗಿ ಕಳೆಯುತ್ತೀ? ಕೆಲವರನ್ನು ಕರೆದು ನೆರೆಯಬೇಕು; ನರರಲ್ಲಿ ಅದೊಂದೇ ಭಾಗ್ಯ; ಮರುಳೆ, ನೀನು ಸುರಸೂಳೆ, ಈ ಭೂಮಿಯಲ್ಲಿ ಮನಸ್ಸಿಗೆ ಬಂದ ಭೋಗವು ಬೇರೆಯವರಿಗಿದೆಯೇ? ನಿತ್ಯವೂ ಹೊಸ ಬಟ್ಟೆಗಳು, ಆಭರಣಗಳು, ಚೆಲುವರಾದ ಹೊಸ ಗಂಡಸರು, ಇಂತಹ ಸುಖವು ಬೆಲೆವೆಣ್ಣುಗಳಿಗಲ್ಲದೆ ಗರತಿಯರಿಗಿದೆಯೇ? ಆದ್ದರಿಂದ ಸ್ನಾನ ಮಾಡಿ, ಊಟ ಮಾಡಿ, ಉಟ್ಟುತೊಟ್ಟು ಮಾಡು; ಸುಮ್ಮನೆ ಮೌನದಿಂದಿರಬೇಡ" ಎಂದು ಬುದ್ಧಿವಾದ ಹೇಳಿದಳು.

ಇದನ್ನೆಲ್ಲ ಕೇಳಿದ ಅನಂತಮತಿಯು ತನ್ನಲ್ಲಿಯೇ ನಕ್ಕು, "ಜೋಡೆಯರು ಭೂಮಿಯನ್ನೂ ಆಕಾಶವನ್ನೂ ಸೇರಿಸಿ ಗಂಟು ಹಾಕುವರು, ಅಚ್ಚರಿಯೆನಿಸುವಂತೆ ಮಿಂಚುಗಳನ್ನು ಒಟ್ಟಾಗಿ ಸೇರಿಸಿ ಕಟ್ಟುವರು, ಕಲ್ಲಿನಿಂದ ನಾರು ತೆಗೆಯುವರು, ತಮ್ಮ ಬಿನ್ನಾಣದಿಂದ ಬಿಸಿಲುಗುದುರೆಯನ್ನು ಹತ್ತಿ ಬೇಗ ಹೋಗುವರು, ಮೇರುವನ್ನೇ ಹಿಂದುಮುಂದು ನೋಡದೆ ಎತ್ತಿಬಿಡುವರು, ಮರಳನ್ನು ಹಿಂಡಿ ನೀರು ಸುರಿಸುವರು. ಈ ಕುಂಟಣಿಯು ಸಾಮಾನ್ಯಳಲ್ಲ, ಹೀಗಾಗಿ ಅವಳೇನೆಂದರೂ ನಾನು ಮೌನದಿಂದಿರುವುದೇ ಬುದ್ಧಿವಂತಿಕೆ" ಎಂದು ತೀರ್ಮಾನಿಸಿದಳು. ಹಲವಾರು ದಿನ ಕಳೆದರೂ ಇವಳ ಬಾಯಿ ಬಿಡಿಸಲಾರದೆ ಆ ಕುಂಟಣಿಯು, "ಹೇಗೂ ಈ ಸುಂದರಿಯು ಮಾತನಾಡಳು, ಆದ್ದರಿಂದ ಇವಳನ್ನು ರಾಜನಿಗೆ

ಒಪ್ಪಿಸಿಬಿಡುತ್ತೇನೆ, ಅವನು ಇವಳಿಗೆ ಮರುಳಾಗದಿರ; ಅದರಿಂದ ನನಗೆ ಹೆಚ್ಚಿನ ಹಣ ದೊರೆಯುತ್ತದೆ" ಎಂದು ಯೋಚಿಸಿ, ಆ ಪುರವನ್ನಾಳುವ ಸಿಂಹರಥನೆಂಬ ರಾಜನ ಬಳಿ ಕರೆದೊಯ್ದಳು.

ತಾನು ದೇವರಿಗೆ ಸ್ತ್ರೀರತ್ನವನ್ನು ಕಾಣಿಕೆಯಾಗಿ ತಂದಿದ್ದೇನೆಂದು ಕುಂಟಣಿಯು ರಾಜನಿಗೆ ಅನಂತಮತಿಯನ್ನು ಒಪ್ಪಿಸಲು ಅವನು ಅವಳಿಗೆ ಬೇಕಾದಷ್ಟು ಹೊನ್ನನ್ನು ಕೊಟ್ಟು ಕಳಿಸಿದ. ಅನಂತಮತಿಯ ರೂಪವನ್ನು ಅವನು ನೋಡಿದಾಗ, ಆ ಕಮಲಮುಖಿಯ ಹಿಂದೆ ನಿಂತುಕೊಂಡು ಕಾಮನು ಕೋಪದಿಂದ ಅವನ ಮೇಲೆ ಹೂಬಾಣಗಳನ್ನು ಸತತವಾಗಿ ಬೀರಿದ; ಅದರಿಂದ ನೊಂದವನಾದ ರಾಜನು ಮತಿಗೆಟ್ಟವನಂತಾದ. ಕಾಮತಾಪವನ್ನು ಸೈರಿಸಲಾರದೆ ಅವಳನ್ನು ಕುರಿತು, "ನನ್ನ ರಾಜ್ಯಕ್ಕೂ ಭಂಡಾರಕ್ಕೂ ಪರಿಜನರಿಗೂ ಭೃತ್ಯರಿಗೂ, ಅಷ್ಟೇಕೆ, ನನ್ನ ಅರಸಿಯರಿಗೂ ನೀನು ಒಡತಿಯಾಗಿ ಸುಖದಿಂದಿರು. ಪಲ್ಲಕ್ಕಿಯೇರಿ ಸಾಗುವಾಗ ಲಲನೆಯರು ಚಾಮರವಿಕ್ಕುತ್ತಿರಲು, ಪರಿಚಾರಕರು ಹಾಡುವ ಗೇಯದ ಮೆಲ್ಲುಲಿ ಕಿವಿಯನ್ನು ಸೇರುತ್ತಿರಲು, ಮಂತ್ರಿಗಳೂ ನೃಪರೂ ರಾಜಕುಮಾರರೂ ನಿನ್ನ ಆಜ್ಞೆಗಾಗಿ ಕಾಯುತ್ತಿರಲು, ನೀನು ನನಗೆ ರಾಜ್ಯಲಕ್ಷ್ಮಿಯಂತೆ ವಲ್ಲಭೆಯಾಗಿರು" ಎಂದು ಕೇಳಿಕೊಂಡ; ಅವಳ ಕೈಹಿಡಿದುಕೊಂಡು ತನ್ನ ತಲೆಯ ಮೇಲಿಟ್ಟುಕೊಂಡ. "ದಯವಿಟ್ಟು ಮಾತಾಡದಿರಬೇಡ; ಕಾಮನು ನನ್ನ ಮೇಲೆ ಕೋಪಗೊಂಡು ಹೂಬಾಣಗಳಿಂದ ಸಹಿಸಲಾರದ ರೀತಿಯಲ್ಲಿ ಚುಚ್ಚುತ್ತಿದ್ದಾನೆ; ಏನಾದರೂ ಮಾತಾಡಿ ಅವನ ಹೊಡೆತವನ್ನು ತಪ್ಪಿಸು. ಆಯ ತಪ್ಪಿದರೆ, ಕಾಮನು ಒಂದೇ ಸಮನೆ ಆರ್ಭಟದಿಂದ ನನ್ನ ಮೇಲೆ ದಾಳಿ ಮಾಡಿ ಕೊಲ್ಲುತ್ತಾನೆ. ನೀನು ಇಂಥ ಸಮಯದಲ್ಲಿ ನನ್ನನ್ನು ಕಾಪಾಡಿ ಬಾಯಲ್ಲಿ ತಾಂಬೂಲವನ್ನಿಡು, ಎಲೈ ಮದಗಜಗಮನೇ" ಎಂದು ನಾನಾ ಬಗೆಯ ಮೆಲ್ನುಡಿಗಳಿಂದ ಅವಳನ್ನು ಒಡಂಬಡಿಸಲು ಪ್ರಯತ್ನಿಸಿ ವಿಫಲನಾದ.

"ನಿನ್ನ ದೇಹವು ಎಳೆಯ ಬಿದಿರಿನಂತೆ, ಮುಖ ಸರೋರುಹದಂತೆ, ಮಹೋಜ್ವಲವಾದ ಬಳ್ಳಿಯಂತೆ ನಿಮಿರಿದ ತೋಳುಗಳು, ಆಲದ ಹಣ್ಣಿನಂತೆ ತುಟಿಗಳು ಸುಂದರವಾಗಿವೆ; ಆದ್ದರಿಂದ ಅರವಿಂದನೇತ್ರೆಯೇ, ಕೋಮಲೆಯೇ, ಕಡುಗಾಡಿಕಾರ್ತಿಯೇ, ನೀನು ಮರವಾನಿಸಳಂತೆ ಕಾಣುತ್ತಿರುವೆ" ಎಂದು ಉಕ್ಕುವ ಮೋಹದಿಂದ ಅವಳಿಗೆ ನೋವುಂಟುಮಾಡಲಾರದೆ ಸರಸದಿಂದ ನುಡಿದ. ಆಗ ಅನಂತಮತಿಯು, ಶ್ರೀಗಂಧದ ಸೌದೆಯಿಂದ ಜೋಳದ ಕೂಳನ್ನು ಬೇಯಿಸುವ ಹಾಗೆ, ಕಲ್ಪವೃಕ್ಷಗಳನ್ನು ತಂದು ಸುಟ್ಟು ಸಾವೆಯನ್ನು ಬಿತ್ತುವ ಹಾಗೆ, ತಪ್ಪದೆ ಮೋಕ್ಷದ ಸೌಖ್ಯವನ್ನು ನೀಡುವ ಮಹಾವ್ರತಗಳನ್ನು ನಾನು ಬಿಡಲು ಸಾಧ್ಯವೇ? ಹಾಲನ್ನು ಒಲ್ಲದೆ ನಾಯಿಗಳ್ಳಿಯ ಹಾಲನ್ನು ಆದರದಿಂದ ಕುಡಿಯುವವನೂ, ರಾಜವರ್ಗವನ್ನೊಲ್ಲದೆ ಉದ್ಧತವೃತ್ತಿಯಿಂದ ಕೀಳಾದವನ್ನು ಓಲಗಿಸುವವನೂ, ಜಿನಧರ್ಮವನ್ನು ಬಿಟ್ಟು ಅರ್ತಿಯಿಂದ ಇಂದ್ರಿಯಭೋಗಗಳನ್ನು ಅನುಭವಿಸುವವನೂ ಮರುಳನಲ್ಲವೇ? ಸಿರಿಯ ಮಹಿಮೆಗೆ, ರೂಪಿನ ಏಳ್ಗೆಗೆ ಮನಸೋತು ಕುಬುದ್ಧಿಯಿಂದ ಮನುಷ್ಯಜನ್ಮವೇ ಸ್ಥಿರವೆಂದು ನಂಬಿದ ಜಡರು ಪರಮಧರ್ಮವನ್ನೂ ಉತ್ತಮವ್ರತ ಸಂಕುಲವನ್ನೂ ತಿರಸ್ಕರಿಸಿ ಇದ್ದಕ್ಕಿದ್ದ ಹಾಗೆ ಸತ್ತು ನರಕದುಃಖವನ್ನು ಹೊಂದುತ್ತಾರೆ. ಧರ್ಮವನ್ನೂ ಶ್ರೇಷ್ಠವಾದ ಸುವ್ರತಗಳನ್ನೂ ಒಲ್ಲದೆ ಬಿಸುಟು, ಮನಸ್ಸು ಕುಗ್ಗಲು, ಜೈನರ ಮಾತಿಗೆ ಅಂಜಿ, ವಿಶೇಷ ಸಚ್ಚಾರಿತ್ರ್ಯವನ್ನೂ ಜಿನೋಕ್ತಿಯನ್ನೂ ಶಂಕೆಯಿಂದ ನೋಡಿ, ಕಾಮಿಗಳಾದವರು ಇಂದ್ರಿಯಗಳನ್ನು ಹೆಚ್ಚಿಸಿಕೊಂಡು ವಿನೋದಪಟ್ಟು ಕಡೆಯಲ್ಲಿ ನರಕಕ್ಕೆ ಸೇರುತ್ತಾರೆ. ಮುಗಿಲಿನಂತೆ ಅಸ್ಥಿರವಾದ, ಗಾಳಿಯಂತೆ ಚಂಚಲವಾದ, ಮರಳ ದಿಬ್ಬದಂತೆ ನಾಶವಾಗುವ, ಕಬ್ಬಿಣದ ಕಡಲೆಯಂತೆ ಕಠಿಣವಾದ, ಸುಣ್ಣದಂತೆ ಸುಡುವ, ಕತ್ತರಿ ಬಾಳೆಯಂತೆ ಹತ್ತಿರ ಸುಳಿಯಲಸಾಧ್ಯವಾದ, ಮುಳ್ಳಿನ ದಾರಿಯಂತೆ ನಡೆಯಲಸಾಧ್ಯವಾದ, ಕಾಮನ ಬಿಲ್ಲಿನಂತೆ ಕ್ಷಣಿಕವಾದ, ಬಯಲ ನದಿಯಂತೆ ಕೆಡುವ, ಬಿದಿರಡವಿಯಂತೆ ಹೊಗಲರಿದಾದ, ಸಮುದ್ರದಂತೆ ದಾಟಲು ಸಾಧ್ಯವಿಲ್ಲದ, ಬೆಂಕಿಯಂತೆ ನುಗ್ಗಲು ಆಗದ, ಸೂಜಿಯ ಮೊನೆಯಂತೆ ಚೂಪಾದ, ಬಿಸಿಲುಗುದುರೆಯಂತೆ ಮಾಯವಾಗುವ, ನೀರಿಂತೆ ಕಟ್ಟಿಹಾಕಲು ಸಾಧ್ಯವಾಗದ ಸಂಸಾರವನ್ನು ನಂಬಿ ದರ್ಶನ ಮತ್ತು ವ್ರತಗಳನ್ನು ಕೆಡಿಸಿಕೊಳ್ಳುವುದು ಎಗ್ಗತನವೆಂದು ಅವಳು ತನ್ನ ವ್ರತರಕ್ಷಣೋಪಾಯವನ್ನು ಕುರಿತು ಆಲೋಚಿಸುತ್ತಿದ್ದಳು.

ಅವಳ ಮೌನವನ್ನು ಕಂಡು ರಾಜನು, "ಕಡುಚಪಲತೆಯನ್ನು ಬಿಟ್ಟು ಬೇಗ ನನ್ನನ್ನು ಒಡಗೂಡು; ಇಲ್ಲದಿದ್ದರೆ ನಿನ್ನನ್ನು ದೆಸೆಗಳಿಗೆ ಬಲಿ ಕೊಡುತ್ತೇನೆ" ಎಂದಾಗ ಕನ್ಯೆಯು ನಡುಗುತ್ತ ಜಿನಪಾದಗಳನ್ನು ಬಿಗಿಯಾಗಿ ಆಶ್ರಯಿಸಿದಳು. "ಅರಸನ ಕೋಪವು ತೀವ್ರವಾದುದು; ನಿಧಾನ ಮಾಡದೆ, ಎದುರುತ್ತರ ನೀಡದೆ, ಆಗದು ಎಂದು ಹೇಳದೆ, ಬೇರೇನನ್ನೂ ಯೋಚಿಸದೆ ಕೂಡು; ಕೂಡದಿದ್ದರೆ ಹಿಂದುಮುಂದು ನೋಡದೆ ಅವನು ನಿನ್ನನ್ನು ಕೊಲ್ಲದೆ ಬಿಡುವುದಿಲ್ಲ. ನೀನು ಯಾರ ಮಗಳೆಂದೂ ವಿಚಾರಿಸದೆ ರಾಜನು ನಿನ್ನನ್ನು ಅರಸಿಯಾಗಿ ಮಾಡಿಕೊಳ್ಳುತ್ತೇನೆಂದು ಹೇಳುವ ಈ ಕರುಣೆಯು ಸಾಮಾನ್ಯವಾದುದಲ್ಲ; ಧಾರಿಣಿಯೇ ನಿನ್ನ ಆಪ್ಪಣೆ ಪಾಲಿಸುತ್ತಿರಲು ಬದುಕುವುದು ಬೇವಸವೇ?" ಎಂದು ಕಂಡಕಂಡವರೆಲ್ಲ ಗಲ್ಲ ತಿವಿದು ಬುದ್ಧಿ ಹೇಳಿದರು. ಆದರೆ ಅವಳು ಮಾತ್ರ ನವಿಲು ಮಳೆಗಾಲವನ್ನೂ, ಹಂಸವು ಸರೋವರವನ್ನೂ, ಮದ್ದಾನೆಯು ವನವನ್ನೂ, ಹಸುಗೂಸು ತಾಯಮೊಲೆಯನ್ನೂ, ಹೆಂಗಸು ತವರು ಮನೆಯನ್ನೂ, ದುಂಬಿಯು ತಾವರೆಯನ್ನೂ, ಕರು ಕೆಚ್ಚಲನ್ನೂ, ಬೀಜ ಬಿತ್ತಿದವನು ಮಳೆಯನ್ನೂ ನೆನೆಯುವ ಹಾಗೆ ಜಿನಪಾದಾಂಭೋಜಗಳನ್ನು ಧ್ಯಾನಿಸುತ್ತ ದೃಢವಾಗಿದ್ದಳು. ಇದರಿಂದ ಸಿಂಹರಥನಿಗೆ ಕೋಪವುಂಟಾಯಿತು; ನಂಬಿಕೆಯ ಭಟರನ್ನು ಬರಹೇಳಿ "ಇವಳನ್ನು ಬಡಿದು ಸಾಯಿಸಿರಿ" ಎಂದು ಆಜ್ಞೆ ಮಾಡಿದ.

ದುರಾತ್ಮರಾದ ಕರ್ರನೆ ಕರಿಯವರು ಗರ್ರನೆ ಬಂದು ಬಾರು ಕೋಲಿನಿಂದ ತಿರ್ರನೆ ತಿರುಗಿಸುತ್ತ ಚರ್ರನೆ ಕೆಂಪು ನೆತ್ತರು ಚಿಮ್ಮುವಂತೆ ಒಂದೇ ಸಮನೆ ಅನಂತಮತಿಗೆ ಬಡಿದರು; ಮುಳಿಸಿನಿಂದ ಮತ್ತೆ ಮತ್ತೆ ಛಳಿಲ್ ಛಳಿಲ್ ಎಂದು ಅಟ್ಟಿ ಹೊಡೆದರು; ಆದರೆ ಅವಳು ಕಳವಳವಿಲ್ಲದೆ, ಬೇಡಿಕೊಳ್ಳದೆ, ಮುಳಿಸಿಲ್ಲದೆ ಮಂದರಪರ್ವತದಂತೆ ದೃಢವಾಗಿದ್ದಳು. ರಾಜನ ಆಜ್ಞೆ ಪಾಲಿಸಲು ಭಟರು ಹೊಡೆಯುತ್ತಿರಲು ಆ ಜಾಣೆಯು ಜಿನೇಂದ್ರಪಾದಗಳನ್ನು ಬಿಡದೆ ನೆನೆಯುತ್ತಿದ್ದಳು. ತನಗೆ ಇಂಥ ಹೊತ್ತಿನಲ್ಲಿ ಪರಮಜಿನೇಶ್ವರನ ಪಾದಗಳೇ ಶರಣಲ್ಲದೆ ಬೇರೆಯಲ್ಲ ಎಂದು ಅವಳು ಜಿನಪಾದಗಳನ್ನು ಬಂದಿವಿಡಿಯುವಂತೆ ಹಿಡಿದಳು. ಈ ರೀತಿಯಲ್ಲಿ ಅವಳಿಗೆ ತನಗಾಗುತ್ತಿದ್ದ ನೋವಿಗಿಂತಲೂ ತನ್ನ ವ್ರತವೆಲ್ಲಿ ಕೆಡುವುದೋ ಎಂಬ ಆತಂಕವೇ ಹೆಚ್ಚಾಗಲು, ವ್ರತವನ್ನು ಕಾಪಾಡಿಕೊಳ್ಳಬೇಕಾದರೆ ಸಾವು ಅನಿವಾರ್ಯ ಎಂದು ನಿಶ್ಚೈಸಿ, ದೇಹಾಭಿಲಾಷೆಯನ್ನು ಬಿಟ್ಟು, ಪಂಚನಮಸ್ಕಾರಗಳನ್ನು ಜಪಿಸುತ್ತಿದ್ದಳು.

ಅಷ್ಟರಲ್ಲಿ ಆ ಪುರದ ನಗರದೇವತೆಗಳಿಗೆ ಆಸನಕಂಪವುಂಟಾಯಿತು. ವಿಷಯವನ್ನು ತಿಳಿದು ಬೇಗನೆ ಬಂದು ಅವಳು ದೃಢವ್ರತೆ ಎಂಬುದನ್ನು ಅರಿದು, ಕೈಮುಗಿದು ನಾನಾ ಪ್ರಕಾರದಿಂದ ಅವಳನ್ನು ಸ್ತುತಿಗೈದು ಹೀಗೆಂದರು: "ಈ ಕುಮಾರಿಯು ತಲ್ಲಣವಿಲ್ಲದೆ, ಮುಳಿಸಿಲ್ಲದೆ, ನೋವಿಲ್ಲದೆ ಒಂದೇ ಮನಸ್ಸಿನಿಂದ ತದೇಕವಾಗಿ ತ್ರಿಭುವನವಲ್ಲಭನಾದ ಜಿನನನ್ನು ನೆನೆಯುವುದೆಂದರೆ ಅವಳ ಮಹಿಮೆಯು ಸಾಮಾನ್ಯವಾದುದಲ್ಲ. ಧನವುಳ್ಳವನನ್ನು ಬಿಡದೆ, ತಕ್ಷಣ ಸಾಯದೆ, 'ಬಂದಿವಿಡಿದವನು ಬಾಳಲಿ' ಎಂದು ಅನವರತವೂ ಜಿನನಿಗೆ ಶರಣಾದವನಿಗೆ ಈ ಜಗತ್ತಿನಲ್ಲಿ ಎರಡಿದೆಯೇ? ವಯಸಾದಷ್ಟರಿಂದಲೇ ನರರು ಹಿರಿಯರಾಗುವರೇ? ಜಿನನಾಥಸೇವೆಯನ್ನು ಮಾಡುವವರು ಕೂಸಾದರೂ ಖಂಡಿತವಾಗಿ ಹಿರಿಯರೆನಿಸಿಕೊಳ್ಳುತ್ತಾರೆ; ಅಂಥವರೇ ಧನ್ಯರು, ಮಾನ್ಯರು. ಕಿವಿ ದೊಡ್ಡದಾಗಿದ್ದಾಕ್ಷಣ ಬಲದಲ್ಲಿ ಅದು ಕೋಡಿಗೆ ಸಮನಾಗುವುದೇ; ಜಿನಸೇವೆ ಮಾಡುವವರು ಕಿರಿಯರಾದರೂ ಹಿರಿಯರಾಗುತ್ತಾರೆ; ಅದನ್ನು ಒಲ್ಲದವರು ಕಿರಿಯರಾಗುತ್ತಾರೆ. ಹಾಲಿಗಿಂತ ತುಪ್ಪವು ಹಿರಿದಾಗುವುದೇ, ಮೇಲಾಗುವುದೇ? ಧರ್ಮವನ್ನು ಒಪ್ಪಿದವನು ಕೀಳಾದರೂ ಮೇಲು; ಅದನ್ನು ಒಲ್ಲದವನು ಮೇಲಾದರೂ ಕೀಳು; ಇದರಲ್ಲಿ ಸಂದೇಹವಿಲ್ಲ. ಇದು ಬರಿಯ ಜಿನಭಕ್ತಿಯಲ್ಲ; ಇದರಲ್ಲಿ ಪೆಂಪು, ಸಾಮರ್ಥ್ಯ, ಮನದ ಅರಿವು, ವ್ರತದ ಔನ್ನತ್ಯ – ಎಲ್ಲ ಸೇರಿವೆ. ಇದರಿಂದಾಗಿ ಈ ಕನ್ಯೆಯು ಅಧಿಕಗುಣಯುತೆಯಾಗಿದ್ದಾಳೆ" ಎಂದು ಹೊಗಳಿದರು.

ಆಮೇಲೆ ಅನಂತಮತಿಯ ನೋವನ್ನೆಲ್ಲ ರಾಜ, ಅರಸಿಯರ, ಪರಿಜನರ, ಕುಮಾರರ, ಪ್ರಧಾನರಲ್ಲಿ ಹಂಚಿಬಿಟ್ಟರು! ಅವರೆಲ್ಲರ ಮೈಮೇಲೆ ತಕ್ಷಣವೇ ಬಾಸುಂಡೆಗಳು ಮೂಡಿದವು. ಅವರು ಕಡು ನೋವಿನಿಂದ ಹಲ್ಲು ಕಚ್ಚಿ ಅಳುತ್ತ ನೆತ್ತರು ಕಾರಿಕೊಂಡು ನೆಲದ ಮೇಲೆ ಬಿದ್ದರು. ನೋವನ್ನು ಸಹಿಸಲಾರದೆ ಸಾವು ಬಂತೆಂದು ಹೆದರಿ, ಗೋಳಾಡುತ್ತ, ಧೈರ್ಯಹೀನರಾಗಿ ರಾಜನ ಮುಂದೆ ಹೊರಳಾಡಿದರು. ರಾಜನೂ ಸಹಿಸಲಾರದ ನೋವಿನಿಂದ ಕೂಡಿ, ತಲ್ಲಣದಿಂದ ನಡುಗುತ್ತ ಸೋರೆಬುರುಡೆಯಲ್ಲಿ ಇಲಿ ಹೊಕ್ಕ ಹಾಗೆ ನೆಲದ ಮೇಲೆಲ್ಲ ಉರುಳಾಡಿದ. ಹಾಗೆ ರಾಜನು ಜ್ವರ ಬಂದವನಂತೆ ಉರುಳಾಡಿದರೆ, ಅರಸಿಯರು ಮಕ್ಕಳಂತೆ ಹೊರಳಾಡಿದರು. ಪರಿಜನವೆಲ್ಲ ಜಡ್ಡಾದ ಎತ್ತುಗಳಂತೆ ನಾಲಗೆ ಚಾಚಿದರೆ, ಪುರಜನರು ನರಳುವ ಹಸುವಿನಂತೆ ಕಾಲು ಬಡಿಯುತ್ತಿದ್ದರು; ಬಾರುಕೋಲು ಹಿಡಿದ ಭಟರು ಮೈಲಾರದ ಗೊರವರಂತೆ ಮೈಮೇಲೆ ಹೊಡೆದುಕೊಂಡರೆ, ವಿಲಾಸಿನಿಯರು ಕೊರಳು ಬಿಗಿದ ಕರುಗಳಂತೆ ಗೋಳಿಟ್ಟರು; ಕುಮಾರರು ಕರು ಸತ್ತ ಎಮ್ಮೆಗಳಂತೆ ಒರಲಿದರು. ಆದರೆ ಕುಮಾರಿಯು ಮಾತ್ರ ಜನ್ಮಾಭಿಷೇಕದಂದಿನ ಮಂದರದಂತೆ ನಿಶ್ಚಲಳಾಗಿದ್ದಳು. ನಗರದೇವತೆಗಳು ಇದನ್ನೆಲ್ಲ ಕಂಡು ಚಪ್ಪಾಳೆಯಿಕ್ಕುತ್ತ ಕಳಕಳಿಸಿ ನಕ್ಕರು.

ಎಂಥದೇ ನೋವು ಬಂದರೂ, ಯಾವುದೇ ಪರೀಷಹಗಳುಂಟಾದರೂ, 'ಆ ಊ' ಎನ್ನದೆ ಜಿನಪದಭಾವನೆಯಿಂದಿರುವ ಜೈನರಿಗಿಂತ ಮಿಗಿಲಾದವರು ಯಾರಿದ್ದಾರೆ? ಕೇಡಾಯಿತು ಎಂದು ಬೆಚ್ಚದೆ, ಬಾಡದೆ, ಹಿಂಜರಿಯದೆ, ಚಿಂತಿಸದೆ, ಎರಡನೆಯದನ್ನು ಆಲೋಚಿಸದೆ, ಮನಸ್ಸನ್ನು ಶುಭದಲ್ಲಿ ಸೇರಿಸಿರುವ ಜಿನಾಗಮಜ್ಞರಿಗಿಂತ ಮಿಗಿಲಾದವರು ಯಾರು? ಏನು ಮಾಡಲೆಂದು ಚಿಂತಿಸದೆ, ಆಸೆಪಡುವ ಬುದ್ಧಿಯಿಲ್ಲದೆ, ಪಾಪಕಾರ್ಯವನ್ನು ಬಿಟ್ಟು ಧರ್ಮೋದ್ಯೋಗದಲ್ಲಿ ತೊಡಗಿರುವ ಜಿನರು ನಿಜವಾಗಿಯೂ ವಿದಗ್ಧರು. ನಶ್ವರವಾದ ದೇಹ-ಧನಗಳನ್ನು ನಿರಾಕರಿಸಿ ಸದ್ಧರ್ಮವನ್ನೂ, ಮಹಾ ದುಷ್ಕೃತವನ್ನು ತೊಲಗಿಸಿ ನಿರಂತರ ಸುಖವನ್ನೂ ಪಡೆಯಬೇಕಾದರೆ ಜಿನರಲ್ಲದೆ ಬೇರೆಯವರಿಗೆ ಸಾಧ್ಯವಾಗುತ್ತದೆಯೇ? ಸುರಗತಿಯೂ ನಿರ್ವೃತಿಯೂ ಧರ್ಮದಿಂದ ಮಾತ್ರವೇ ದೊರಕುವುದು ಎಂಬ ನಂಬಿಕೆಯಿಂದ ಧರ್ಮದಲ್ಲಿ ನಿರತರಾಗುವ ಮನಸ್ಸು ಜೈನರಲ್ಲಿ ಮಾತ್ರವೇ ನೆಲಸಿರುತ್ತದೆ. ಸಿರಿಯ ಒದವು, ಯೌವನದ ಭರ – ಇವುಗಳನ್ನು ನೆಚ್ಚಿ ಕೆಡುವವರು ಈ ಕನ್ಯೆಯ ಹಾಗೆ ಸುರಗತಿ-ನಿರ್ವೃತಿಗಳನ್ನು ಹಾಗೂ ಪರಮಾರ್ಥವನ್ನೂ ಪಡೆಯಲು ಸಾಧ್ಯವೇ? ದೇವ ದುಂದುಭಿಗಳು ಮೊಳಗಿದವು; ಜಯನಿನಾದ ಹೊಮ್ಮಿತು; ಪುಷ್ಪವೃಷ್ಟಿ ಸುರಿಯಿತು. ಜನರೆಲ್ಲ ಆಶ್ಚರ್ಯಪಡುತ್ತಿರಲು, ನಗರದೇವತೆಗಳು ತಮ್ಮ ನಿಜ ರೂಪವನ್ನು ತೋರಿಸಿ ಕುಮಾರಿಗೆ ನಮಸ್ಕರಿಸಿ, ಅವಳ ಉಪಸರ್ಗವನ್ನು ಹಿಂಗಿಸಿ ಹೋದರು.

ಇತ್ತ ಸಿಂಹರಥ ಮಹಾರಾಜನೂ ಪುರಜನರೂ ಜಿನಭಕ್ತಿಯ ಮಹಿಮೆಯನ್ನು ಕಂಡು, ಅನಂತಮತಿ ಕುಮಾರಿಯನ್ನು ಪೂಜಿಸಿ ಪೊಡಮಟ್ಟು ಶ್ರಾವಕವ್ರತವನ್ನು ಕೈಗೊಂಡು ಸಮ್ಯಕ್ತ್ವಸಮನ್ವಿತರಾದರು. ರಾಜಶ್ರೇಷ್ಠಿಯಾದ ಜಿನೇಂದ್ರದತ್ತನು ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಬೇಕೆಂದು ನಿರ್ಧರಿಸಿದ. ಅಷ್ಟರಲ್ಲಿ, ರಾಜನೂ ಸಕಲ ಪರಿವಾರದವರೂ ಆ ನಾರಿಯ ಪಾದಪದ್ಮಗಳನ್ನು ನಾನಾ ವಿಧದಿಂದ ಪೂಜಿಸಿ, "ನೀನು ಆನಂದಮೂರ್ತಿ, ದಿವಿಜಾಂಗನೆ; ದಯವಿಟ್ಟು ನಮ್ಮನ್ನು ರಕ್ಷಿಸು" ಎಂದು ಭಂಡಾರದ ಹೊನ್ನೆಲ್ಲವನ್ನೂ ಅವಳ ಮುಂದೆ ಸುರಿದ. ಆದರೆ ಅನಂತಮತಿಯು ಒಂದನ್ನೂ ಸ್ವೀಕರಿಸದೆ ಮನಸ್ಸಿನಲ್ಲಿಯೇ ನಕ್ಕಳು. ಅವರಿಗೆ ಧರ್ಮದೃಢರಾಗುವಂತೆ ಹೇಳಿ ಅವಳು ಅರಮನೆಯಿಂದ ಹೊರಟು ಧರ್ಮವಾತ್ಸಲ್ಯಪರನಾದ ಜಿನೇಂದ್ರದತ್ತನ ಮನೆಗೆ ಬಂದಳು. ತನ್ನ ತಾಯಿಯ ಹಾಗೆ ಅಲ್ಲಿಯೇ ಸುಖದಿಂದಿರಬೇಕೆಂದು ಅವನು ಪ್ರಾರ್ಥಿಸಲು, ಅದಕ್ಕೆ ಒಪ್ಪಿದರೂ ಅವನ ಮನೆಯಲ್ಲಿರದೆ ಸೆಟ್ಟಿಯ ದೇವಾಲಯದಲ್ಲಿದ್ದ ಕಮಲಶ್ರೀ ಕಂತಿಯ ಜೊತೆಯಿದ್ದಳು. ಅಲ್ಲಿ ಪರತತ್ವವಿಚಾರದಲ್ಲಿ ತತ್ಪರಳಾಗಿ, ಭಕ್ತಿಯಿಂದ ಅನೇಕ ಮಹಾಪುರುಷರ ಕತೆಗಳನ್ನು ಕೇಳುತ್ತ, ನಾನಾ ನೋಂಪಿಗಳನ್ನು ಆಚರಿಸುತ್ತ, ತನ್ನ ಮನಸ್ಸಿನಲ್ಲಿ ಯಾವುದೇ ಚಿಂತೆ-ಹಂಬಲಿಕೆಗೆ

ಆಸ್ಪದವೀಯದೆ, ಸ್ವಲ್ಪವಾದರೂ ದುಃಖಪಡದೆ, ಭೋಗಗಳಿಗೆ ಹಂಬಲಿಸದೆ ಜಿನಧ್ಯಾನದಲ್ಲಿದ್ದಳು. ಜಿನೇಂದ್ರದತ್ತನೂ, ಅವನ ಹೆಂಡತಿ ವಸುದೇವಿಯೂ, ರಾಜರಾಣಿಯರೂ ಅವಳನ್ನು ತಮ್ಮ ಗುರುವೆಂದು ಕೊಂಡಾಡಿದರು.

ಹೀಗೇ ಕಾಲ ಕಳೆಯಿತು. ಅತ್ತ ಚಂಪಾಪುರದಲ್ಲಿ ಪ್ರಿಯದತ್ತಸೆಟ್ಟಿ–ಅಂಗಮತಿ ಹಾಗೂ ಅವರ ಬಂಧುವರ್ಗದವರು ಅನಂತಮತಿಯು ಹೋದುದಕ್ಕೆ ಅಚ್ಚರಿಗೊಂಡರು. ಇಡೀ ಭೂಮಿಯಲ್ಲಿ ಅವಳಂತಹ ಸುಂದರಿಯು ಬೇರಾರೂ ಇಲ್ಲ; ಹಾಗಾಗಿ ಅವಳನ್ನು ವಿದ್ಯಾಧರನೊಬ್ಬನು ಕರೆದೊಯ್ದಿರಬೇಕು; ಇಲ್ಲದಿದ್ದರೆ ನೋಡನೋಡುತ್ತಿರುವಂತೆಯೇ ಅವಳು ಅದೃಶ್ಯಳಾಗಲು ಹೇಗೆ ಸಾಧ್ಯ ಎಂದು ಯೋಚಿಸಿದರು. ಆದರೆ ಪ್ರಿಯದತ್ತಸೆಟ್ಟಿಗೆ ಮಗಳನ್ನು ಬಿಟ್ಟಿರುವುದು ಅಸಾಧ್ಯವಾಯಿತು. ಅವಳ ರೂಪ, ಪ್ರೀತಿ, ಮೆಲುಮಾತುಗಳು – ಎಲ್ಲ ನೆನಪಿಗೆ ಬಂದು ಅವನು ಗೋಳಾಡಿದ. ಅವಳು ಉಡುತ್ತಿದ್ದ ಬಟ್ಟೆಗಳನ್ನು ನೋಡಿದಾಗ, ಅವಳ ಆಭರಣಗಳನ್ನು ಕಂಡಾಗ, ಅವಳು ಆಟವಾಡುತ್ತಿದ್ದ ಜಾಗಗಳು ಕಣ್ಣಿಗೆ ಬಿದ್ದಾಗ ಅವಳ ನೆನಪು ಬಂದು ಅವನ ದುಃಖ ಉಮ್ಮಳಿಸುತ್ತಿತ್ತು. ಊಟ ಮಾಡುವಾಗ ಯಾರನ್ನು ಕರೆದು ತೊಡೆಯ ಮೇಲೆ ಕೂರಿಸಿಕೊಂಡು ಊಟ ಮಾಡಿಸಲಿ ಎಂದು, ಯಾರನ್ನು ಮೆಲ್ನುಡಿಗಳಿಂದ ಮುದ್ದಾಡಲಿ ಎಂದು ಅವನು ಹಲುಬುತ್ತಿದ್ದ. ಜಿನಪೂಜೆ ಮಾಡದೆ, ಜಿನಮುನಿಗಳಿಗೆ ಆಹಾರದಾನ ಮಾಡದೆ, ಹೆತ್ತವರು ಮರುಗುವಂತೆ ತಟ್ಟನೆ ಹೊರಟು ಹೋಗಬೇಡ ಎಂದು ಕನವರಿಸುವನು. ನನಗೆ ಚಿನ್ನದಂತಹ ಮಗಳಾಗಿ ಹುಟ್ಟಿದರೂ ಸಂತೋಷದಿಂದ ಜಿನಪೂಜೆ ಮಾಡದೆ ಹೋಗುವೆಯಾ ಎಂದು ಪ್ರಶ್ನಿಸುವನು. ಪೊಳ್ಳಾದ ಮರಕ್ಕೆ ಕಿಚ್ಚು ಹಬ್ಬುವಂತೆ ದುಃಖವು ತನ್ನನ್ನು ಸುಡಲು ಪ್ರಿಯದತ್ತಸೆಟ್ಟಿಯು ಪ್ರಲಾಪಿಸುತ್ತಿದ್ದ. ಅಂಗಮತಿಯು, ಜಿನೇಂದ್ರಪೂಜೆಯನ್ನು ಮಾಡಿ, ಬಂಧುಗಳೆಲ್ಲರ ಮುಂದೆ, ಭೋರೆಂದು ಹರೆ ಸದ್ದು ಮಾಡಲು, ಹೊನ್ನ ತೋರಣಗಳಿಂದಲೂ ಕಿರುಧ್ವಜಗಳಿಂದಲೂ ಅಲಂಕೃತವಾದ ಮಂಟಪದಲ್ಲಿ ಸಂಭ್ರಮದಿಂದ ಮದುವೆ ಮಾಡುವ ಅದೃಷ್ಟವನ್ನು ತಾನು ಪಡೆದು ಬರಲಿಲ್ಲವೆಂದು ಕೊರಗುತ್ತಿದ್ದಳು. ಬಸದಿಗೆ ಹೋಗಿ ಮುನಿಪುಂಗವರಿಗೆ ಭಕ್ತಿಯಿಂದ ವಂದಿಸಿ, ಜಿನನಾಥನನ್ನು ನಾನಾ ಬಗೆಯಲ್ಲಿ ಸ್ತುತಿಸಿ, ಮನೆಗೆ ಬಂದು ತನ್ನ ಕೊರಳನ್ನು ತಬ್ಬಿಕೊಂಡು ನಡೆದುದನ್ನೆಲ್ಲ ವರ್ಣಿಸುತ್ತಿದ್ದ ಆ ವಿಮಲಾಂಗಿಯನ್ನು ಇನ್ನೆಲ್ಲಿ ಕಾಣಲಿ ಎಂದು ಗೋಳಿಡುತ್ತಿದ್ದಳು. ಬಳ್ಳಿಯನ್ನು ಅವಳೆಂದೇ ಭಾವಿಸಿ, ಕಮಲದ ದಳಗಳನ್ನು ಅವಳ ಕಣ್ಣುಗಳೆಂದು ತಿಳಿದು, ದುಂಬಿವಿಂಡನ್ನು ಕಂಡು ಅವಳ ಕುಂತಲವೆಂದು ಭ್ರಮಿಸಿ ಅವಳು ತನ್ನ ಮಗಳನ್ನು ವನದಲ್ಲೆಲ್ಲ ಹುಡುಕಾಡುವಳು.

ಹೀಗೆ ಮಗಳಿಗಾಗಿ ಬೆಂದು ಹೋಗುತ್ತಿದ್ದ ಆ ದಂಪತಿಗಳಿಗೆ ವರದತ್ತ ಭಟ್ಟಾರಕರು ಬಂದು ಸಂತೈಸುತ್ತ ಧರ್ಮಬೋಧೆಯನ್ನು ಮಾಡುತ್ತಿದ್ದರು. ಐರಾವತವನ್ನೇ ತನ್ನ ಆನೆಯನ್ನಾಗಿ ಪಡೆದ, ವಜ್ರಾಯುಧವನ್ನೇ ಹಿಡಿದ, ಸುರಸಮೂಹವನ್ನೇ ತನ್ನ ಪರಿಚಾರಕರನ್ನಾಗಿ ಹೊಂದಿದ, ಸ್ವರ್ಗವೇ ತನ್ನ ಮನೆಯನ್ನಾಗುಳ್ಳ ಇಂದ್ರನಿಗೂ ಮರಣವು ಬಾರದೆ ಹೋಗದು ಎಂದ ಮೇಲೆ ಮೃತ್ಯುವನ್ನು ಗೆಲಬಲ್ಲವರು ಯಾರು? ನರರು, ಖೇಚರರು, ಸುರಪ್ರತತಿಯಿಂದ ಸೇವೆ ಮಾಡಿಸಿಕೊಳ್ಳುವ, ಷಟ್ಖಂಡ ಭೂಮಂಡಲಕ್ಕೆಲ್ಲ ಒಡೆಯನಾದ, ಸಂಖ್ಯಾಮಿತಿಯೇ ಇಲ್ಲದ ಆನೆ–ಕುದುರೆಗಳಿಗೂ ಸ್ತ್ರೀಸಮೂಹಕ್ಕೂ ಒಡೆಯನಾದ ಲಕ್ಷ್ಮೀವಲ್ಲಭನಾದ ವಿಷ್ಣುವಿಗೂ ಮರಣವು ಬಾರದಿರದು ಎನ್ನುವಾಗ ಮೃತ್ಯುವನ್ನು ಗೆಲ್ಲಬಲ್ಲವರಾರು?" ಇಂತಹ ಅವರ ಮಾತುಗಳೆಂಬ ಅಮೃತದಿಂದ ದಂಪತಿಗಳ ದುಃಖಾಗ್ನಿಯು ಕಡಿಮೆಯಾಯಿತು.

ಹೀಗೇ ಕೆಲವು ದಿನಗಳು ಸಂದವು. ಮಗಳು ಸುಳಿದಾಡುತ್ತಿದ್ದ ಸ್ಥಳಗಳನ್ನು ನೋಡಿ ಉಕ್ಕುವ ದುಃಖವನ್ನು ಸಹಿಸಿಕೊಳ್ಳಲಾರದೆ, ನಂಟರಿಗೆ ಈ ವಿಷಯವನ್ನು ಹೇಳಲಾರದೆ ಪ್ರಿಯದತ್ತಸೆಟ್ಟಿಯು ಆ ಊರಿನಿಂದಲೇ ಹೋಗಿ, ಕೆಲವು ದಿನಗಳ ಪ್ರಯಾಣದ ನಂತರ ಅಯೋಧ್ಯೆಗೆ ಬಂದು ಸೇರಿದ. ಜಿನೇಂದ್ರದತ್ತಸೆಟ್ಟಿಯ ಹೆಂಡತಿಯಾದ ವಸುದೇವಿ ತನ್ನ ತಂಗಿಯಾದ್ದರಿಂದ ಅವರ ಮನೆಯನ್ನು ಹುಡುಕಿಕೊಂಡು ಬಂದ. ತನ್ನ ಮಗಳ ವೃತ್ತಾಂತವನ್ನೆಲ್ಲ ಅವರಿಗೆ ಹೇಳಿಕೊಂಡ. ಇದನ್ನು ಕೇಳಿ ತಂಗಿಯು ದುಃಖ ತಡೆಯಲಾರದೆ ಸೈರಣೆಗೆಟ್ಟು, ಹುಡುಗಿಯ ಗುಣಗಳನ್ನು ನೆನೆಸಿಕೊಂಡು ಗೊಳೋ ಎಂದು

ಅತ್ತಳು. ಅವಳ ದುಃಖವನ್ನು ತನ್ನ ಮಾತುಗಳಿಂದ ಸಮಾಧಾನ ಮಾಡಿದ ಪ್ರಿಯದತ್ತನು ದೇವರ ದರ್ಶನಕ್ಕೆಂದು ದೇವಾಲಯಕ್ಕೆ ತಂಗಿಯೊಡನೆ ಬಂದ.

ಗುಡಿಯ ಮುಂದೆ ದೊಡ್ಡ ರಂಗೋಲಿಯಿತ್ತು. ಅದರಲ್ಲಿ ಕಲ್ಪವೃಕ್ಷಗಳೂ ಮಾವಿನ ಮರಗಳು ದಟ್ಟವಾಗಿದ್ದವು, ತಾವರೆ ತುಂಬಿದ ಕೊಳವಿತ್ತು, ಲತಾಭವನಗಳಿದ್ದವು, ಕಿರುಧ್ವಜ–ಇಂದ್ರವಿಮಾನ–ಹರಿಚಂದನಗಳ ಗೊಂಚಲುಗಳು ತುಂಬಿದ್ದವು, ಸುರಪರ್ವತಗಳ ಸಾಲಿನಿಂದ ಕೂಡಿದ ಹೂಮಾಲೆಯಿತ್ತು. ಸುಂದರವಾದ ಆ ರಂಗವಲ್ಲಿಯನ್ನು ಕಂಡು ಇಷ್ಟು ಚೆನ್ನಾದ ರಂಗೋಲಿ ಬಿಡಿಸುವ ಹಸ್ತಕೌಶಲವು ಅನಂತಮತಿಗಲ್ಲದೆ ಉಳಿದವರಿಗೆ ಇರಲು ಸಾಧ್ಯವಿಲ್ಲ; ಆದ್ದರಿಂದ ಅವಳು ಇಲ್ಲಿಯೇ ಇರುವುದು ಖಂಡಿತ ಎಂದು ಅವನಿಗನ್ನಿಸಿತು. ಜೋರಾಗಿ ನಿಟ್ಟುಸಿರು ಬಿಟ್ಟು, ಮನಸ್ಸಿನಲ್ಲೇ ದುಃಖಿಗೊಂಡು ಮುದ್ದಿನ ಮಗಳಾದ ಅನಂತಮತಿಯನ್ನು ನೆನೆದು ಅತ್ತ. ಅದನ್ನು ಕಂಡು ವಸುದೇವಿಯು ಅಳುವಿಗೇನು ಕಾರಣವೆಂದು ಕೇಳಿದಳು. ಅದಕ್ಕೆ ಪ್ರಿಯದತ್ತಸೆಟ್ಟಿಯು, "ಇವತ್ತು ನಿಮ್ಮ ಮನೆಯಲ್ಲಿ ಮಾಡಿದ ಊಟದ ರುಚಿಯೂ ದೇವಾಲಯದ ಮುಂದಿನ ರಂಗೋಲಿಯೂ ಅನಂತಮತಿಯ ಹಸ್ತಕುಶಲತೆಯನ್ನು ಹೋಲುತ್ತದೆ; ಅದರಿಂದ ಮಗಳ ನೆನಪು ಬಂದು ಅತ್ತೆ" ಎಂದ. ಆಗ ವಸುದೇವಿಯು ದೇವಸ್ಥಾನದಲ್ಲಿದ್ದ ಕುಮಾರಿಯನ್ನು ಜೊತೆಗೆ ಕರೆದುಕೊಂಡು ಬಂದು ತೋರಿಸಿದಳು. ಅವಳು ತನ್ನ ಮಗಳೇ ಎಂಬುದನ್ನು ಕಂಡು ಸಂತೋಷದಿಂದ ಅವನ ದುಃಖಾಗ್ನಿಯು ನಂದಿತು; ಮೂರು ಲೋಕಗಳೂ ತನ್ನ ಕೈವಶವಾದ ಹಾಗೆ ಸಂಭ್ರಮಪಟ್ಟು ಅವಳನ್ನು ಬರಸೆಳೆದು ಅಪ್ಪಿಕೊಂಡ. ಬಡವನಿಗೆ ನಿಧಿಯು ದೊರಕಿದಂತೆ, ಭಿಕ್ಷುಕನಿಗೆ ರಾಜ್ಯವೇ ಸಿಕ್ಕಿದಂತೆ ಆನಂದತುಂದಿಲನಾಗಿ ಅವನು ಮಗಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಅವಳ ಕೆನ್ನೆಗಳನ್ನು ನೇವರಿಸಿದ. "ಮಗಳೇ, ನಿನ್ನನ್ನು ನೋಡುವ ಮುಂಚೆ ಮನಸ್ಸು ಬೆಂದು ಹೋಗಿತ್ತು; ಈಗ ಮನಸ್ಸಿನ ನೋವೆಲ್ಲ ಮಾಯವಾಯಿತು. ನೀನಿಲ್ಲದ ಮನೆ ನನ್ನ ಪಾಲಿಗೆ ಕಾಡುವ ಕಾಡಿನಂತಾಗಿತ್ತು. ನೋವು ಅಸಾಧ್ಯವಾಗಿತ್ತು; ಆ ದುಃಖವನ್ನು ತಾಳಲಾರದೆ ಇಲ್ಲಿಗೆ ಬಂದೆ" ಎಂದು ಮನಬಿಚ್ಚಿ ಮಾತನಾಡಿದ. ಅದನ್ನು ಕೇಳಿದ ಅನಂತಮತಿಯ ಕಣ್ಣುಗಳಿಂದ ನೀರು ದಳದಳನೆ ಸುರಿಯಿತು. ಸಮಾಧಾನ ಮಾಡಿಕೊಂಡು ಕುಂಡಲಮಂಡಿತನೆಂಬ ಖೇಚರನು ತನ್ನನ್ನು ಒಯ್ದುದರಿಂದ ಹಿಡಿದು ಈಗ ಜಿನೇಂದ್ರದತ್ತನ ದೇವಾಲಯವನ್ನು ಸೇರುವವರೆಗೆ ನಡೆದ ವೃತ್ತಾಂತ ಹಾಗೂ ತನ್ನ ಅನುಭವವನ್ನೆಲ್ಲ ವಿಸ್ತಾರವಾಗಿ ನಿರೂಪಿಸಿದಳು. ಅದನ್ನು ಕೇಳಿದ ಸೆಟ್ಟಿ ಬೆರಗಾದ. ಹಿರಿದಾದ ಆಪತ್ತುಗಳೆಲ್ಲವನ್ನೂ ಬಿದಿರಗಂಟನ್ನು ಕತ್ತರಿಸುವಂತೆ ನೀಗಿಸಿಕೊಂಡು ಬದುಕಿ ಬಂದ ಮಗಳ ಪುಣ್ಯಕ್ಕೆ ಸಮಾನರು ಯಾರೂ ಇಲ್ಲವೆಂದು ನುಡಿದು ಅವಳಿಗೆ ಸಮಾಧಾನ ಹೇಳಿದ. ಹಿರಿದಾದ ಉತ್ಸಾಹದಿಂದ ಜಿನಾಭಿಷೇಕವನ್ನು ಮಾಡಿಸಿ ಆ ಊರಿನಲ್ಲಿ ಹತ್ತೆಂಟು ದಿನಗಳನ್ನು ಸಂತೋಷದಿಂದ ಕಳೆದ.

ಮುಂದೆ ಒಂದು ದಿವಸ ಮಗಳನ್ನು ನೊಡಿ, ತಾನಿನ್ನು ತಡಮಾಡಬಾರದು, ಅವಳಿಗೆ ಯೌವನವು ಪ್ರಾಪ್ತವಾಗಿದೆ. ಅವಳಿಗೆ ಬೇಗ ಮದುವೆಯನ್ನು ಮಾಡಬೇಕೆಂದು ತೀರ್ಮಾನಿಸಿದ. ತನ್ನ ಸೋದರಳಿಯನಾದ ಶ್ರುತಸಾಗರನಿಗೆ ಅವಳನ್ನು ಧಾರೆಯೆರೆದುಕೊಡಲು ಆಲೋಚಿಸಿ ಬಂಧುಗಳೆಲ್ಲರಿಗೂ ಹೇಳಿಕಳಿಸಿದ. ಮನೆಯ ಮುಂದೆ ವಿವಾಹಮಂಟಪವನ್ನು ಕಟ್ಟಿಸಿ ತಳಿರುತೋರಣ ಗಳಿಂದ ಅಲಂಕರಿಸಿದ. ಆನಂತರ ಜಿನಾಭಿಷೇಕಕ್ಕೆಂದು ಕಬ್ಬಿನ ರಸ, ಹಾಲು, ಮೊಸರು, ತುಪ್ಪಗಳಿಂದ ಕೂಡಿದ ಗಡಿಗೆಗಳನ್ನೂ; ಬಳಗಕ್ಕೆ ನೀಡುವ ಜವಳಿಯೆಂದು ಚೀನಾಂಬರ ದುಕೂಲ ಹಾರಾವಳಿಯ ದಿಂಡುಗಳನ್ನೂ ತರಿಸಿದ; ಯಾಚಕರಿಗೆ ನೀಡಲೆಂದು ಹೊನ್ನಿನ ರಾಶಿಯನ್ನು ಹಾಕಿಸಿದ. ಇವುಗಳನ್ನೆಲ್ಲ ಅನಂತಮತಿ ನೋಡಿ ಇವೆಲ್ಲ ಏಕೆ ಎಂದು ತಂದೆಯನ್ನು ಕೇಳಿದಳು. "ತಿಳಿದವರು ಮೆಚ್ಚಿಕೆಯನ್ನು ತೋರಿಸುವಂತೆ, ನಂಟರು ಹೊಗಳುವಂತೆ ನಿನ್ನ ಮದುವೆಯನ್ನು ವಿಜೃಂಭಣೆಯಿಂದ ಮಾಡುತ್ತೇನೆ" ಎಂದು ತಂದೆ ಹೇಳಿದ. ಆಗ ಅನಂತಮತಿಯು ಮುಗುಳ್ನಕ್ಕು, "ನಾನು ಕಿರಿಯವಳಾಗಿದ್ದಾಗ ನೀವು ಸಂಯಮದ ಸಾಗರದಂತಿದ್ದ ವರದತ್ತಮುನಿಗಳಿಂದ ವಿಮಲ ಜಿನೇಂದ್ರ ಸಾಕ್ಷಿಯಾಗಿ ನನಗೆ

ಬ್ರಹ್ಮಚರ್ಯವ್ರತವನ್ನು ಕೊಡಿಸಿದ್ದಿರಿ. ಅದನ್ನು ನೀವು ಮರೆಯಲಾಗದು, ಆಶ್ರಮದಲ್ಲಿ ನಾನೂ ಅದನ್ನು ವ್ರತವನ್ನು ಸಂತೋಷದಿಂದ ಸ್ವೀಕರಿಸಿದ್ದೆ. ಅದನ್ನು ಈಗ ಕೆಡಿಸುವುದು ತರವೇ?" ಎಂದು ತಂದೆಗೆಂದಳು. ಮಗಳಾಡಿದ ಮಾತನ್ನು ಕೇಳಿ ವೈಶ್ಯಕುಲಾಂಬರರವಿಯಾದ ಪ್ರಿಯದತ್ತನು ಬೆರಗಾದ; ಮನದ ನೋವಿನಿಂದ ವಿಧಿಯನ್ನು ಬೈದುಕೊಂಡ. "ಮರುಳು ಮಗಳೇ, ನಿನ್ನ ಮೇಲಿನ ಪ್ರೀತಿಯಿಂದ ಮುನಿಸನ್ನಿಧಿಯಲ್ಲಿ ಆಡಿದ ಮಾತನ್ನು ನೀನು ಛಾಂದಸಿಕೆಯಲ್ಲಿ ನಿಜ ಮಾಡುವುದು ಎಗ್ಗತನವಲ್ಲವೇ?" ಎಂದು ಕೇಳಿದ. ಆಗ ಅನಂತಮತಿಯು, "ತಿರಿದುಣ್ಣುವವನಿಗೆ ನಿಧಿಯು ದೊರಕಿದಾಗಲೂ, ಸಂಸಾರದಲ್ಲಿ ತಿರುಗುವ ನರನಿಗೆ ಧರ್ಮವು ದೊರಕಿದಾಗಲೂ ಕಡೆಗಣಿಸಿ ಹೋದರೆ ಸುಖವುಂಟಾಗುವುದೇ? ಕುರುಡನಿಗೆ ಪುಣ್ಯದಿಂದ ಕಣ್ಣು ಬರುವ ಹಾಗೆ ಈ ಮಹೋಗ್ರ ಸಂಸಾರದಲ್ಲಿ ವರಧರ್ಮವು ಹೇಗೋ ಸಿಕ್ಕಿರಲು ಅದನ್ನು ಅನುಸರಿಸದಿರುವವನೇ ಗಾಂಪ. ಶ್ರೇಷ್ಠವಾದ ಜಿನಧರ್ಮವು ತನಗೆ ತಾನೇ ಬಂದಿರಬೇಕಾದರೆ ಅದನ್ನು ತಿರಸ್ಕರಿಸುವವನು ಚಿನ್ನದ ಬಾಣವನ್ನು ನೀರಿನಲ್ಲಿ ಎಸೆಯುವವನಂತೆ ಮರುಳನಾಗನೇ, ಓಲಗದಲ್ಲಿ ಪಡೆದುದನ್ನು ಇಂಬಿಟ್ಟುಕೊಳ್ಳ ಲಾಗದೆ ಕೆಡಿಸುವ ಮರುಳನಂತಾಗನೆ? ಆ ಕಾರಣದಿಂದ ಧರ್ಮದಿಂದ ಅನಂತಸುಖವೂ, ಅಧರ್ಮದಿಂದ ಅನಂತ ದುಃಖವೂ ಉಂಟಾಗುವುದೆಂಬುದನ್ನೂ; ಸಂಸಾರಸುಖವು ಅಲ್ಪವಾದುದು ಎಂಬುದನ್ನು ನೀವೂ ಚೆನ್ನಾಗಿ ಬಲ್ಲಿರಿ. ಆದರೂ ನನ್ನ ಮೇಲಿನ ಮೋಹದಿಂದ ಹೀಗೆ ಹೇಳುತ್ತಿದ್ದೀರೆಂಬುದನ್ನು ಬಲ್ಲೆ; ಆದರೆ ಹೀಗೆ ನುಡಿಯಬಾರದಲ್ಲವೆ?" ಎಂದು ಕೇಳಿದಳು. ಮಗಳ ಮೇಲೆ ಸೆಟ್ಟಿಗೆ ಕಡು ಮೋಹ; ಅದರಿಂದ ಹೀಗೆಂದ: "ಮಗಳೆ, ಮಾಣಿಕ್ಯ ಮುತ್ತು ಹೊನ್ನು ಪದ್ಮರಾಗ ವೈಡೂರ್ಯ – ಇವುಗಳಿಂದ ಕೂಡಿದ ಹಲವು ಜಿನಾಲಯಗಳನ್ನು ನೀನು ಮಾಡಿಸು. ಬೆಡಗಿನ ಶಿಲ್ಪವುಳ್ಳ, ಹೊಂಗಳಸದಿಂದ ಕೂಡಿರುವ ಅನೇಕ ಜಿನಬಸದಿಗಳನ್ನು ನೀನು ಭಕ್ತಿಯಿಂದ ಕಟ್ಟಿಸು. ಹಾಲು ಮೊಸರು ತುಪ್ಪಗಳಿಂದ ಕೂಡಿದ ಅನುಪಮವಾದ ಅಡುಗೆಗಳನ್ನು ಸಿದ್ಧಪಡಿಸಿ ನಿನಗೆ ತೃಪ್ತಿಯಾಗುವವರೆಗೂ ಮುನಿಸಮೂಹಕ್ಕೆ ಉಣಬಡಿಸು. ಆದರೆ ನೀನು ಮದುವೆಯಾಗಲೇಬೇಕು" ಎಂದು ಸೆರಗೊಡ್ಡಿ ಬೇಡಿಕೊಂಡ. ಅದನ್ನು ಕೇಳಿ ಅನಂತಮತಿ ನಕ್ಕು. "ನೀವು ಹೇಳಿದುದೆಲ್ಲ ಪುಣ್ಯಕಾರಣವಾದರೂ, ನಾನು ಮಾತ್ರ ಕೈಗೊಂಡ ವ್ರತವನ್ನು ಯಾವ ಕಾರಣಕ್ಕೂ ಬಿಡುವುದಿಲ್ಲ" ಎಂದು ಮರುಮಾತಿಗೆ ಅವಕಾಶವಿಲ್ಲದಂತೆ ಖಂಡಿತವಾಗಿ ನುಡಿದಳು. ಮಗಳ ನಿರ್ಧಾರವನ್ನು ಕೇಳಿ ಸೆಟ್ಟಿಯು ಮುಂದೆ ನುಡಿಯದಾದ.

ಅಷ್ಟರಲ್ಲಿ ಮಾವನಾದ ಜಿನೇಂದ್ರಸೆಟ್ಟಿಯೂ, ಅತ್ತೆ ಸುದತ್ತೆಯೂ ಬಂದರು. ಅವರು, "ಬೇಡ, ಕಡುಮೂರ್ಖತನವನ್ನು ಮಾಡದೆ ಆಡಿದ ಮಾತಿಗೆ ಪಟ್ಟು ಹಿಡಿಯದೆ, ಹಿಂದಿನದನ್ನು ನೆನಯದೆ, ಹಟ ಮಾಡದೆ ನೀನು ಮದುವೆಯಾಗು" ಎಂದು ಬುದ್ಧಿ ಹೇಳಿದರು. ಅನಂತಮತಿಯು ಅವರಿಗೆ, "ಸಾರಾಸಾರವಿವೇಚನೆ ಯಿಂದ ಕೈಗೊಂಡ ವ್ರತವನ್ನು ಕೈಬಿಡಬಹುದೇ? ಬೇರೆಯವರು ಬೇಡವೆಂದರೆಂದು ನಿಷ್ಕಾರಣವಾಗಿ ನಿಲ್ಲಿಸಲು ಅದೇನು ಕಂಚಿನ ದನಿಯೇ? ಒಂದು ಬಾರಿ ಹಿಡಿದ ವ್ರತವನ್ನು ನಾನೆಂದೂ ಬಿಡೆ. ವ್ರತಕ್ಕೆ ಉಡದಂತೆ ಎರಡು ನಾಲಗೆಗಳಿಲ್ಲ!" ಎಂದಳು. ಆನಂತರ ತಂದೆತಾಯ್ಗಳು ಮೊದಲಾದ ಬಂಧುಗಳೆಲ್ಲರನ್ನೂ ಒಪ್ಪಿಸಿ, ಜಿನಪೂಜೆಯನ್ನು ಮಾಡಿ, ವರದತ್ತಭಟ್ಟಾರಕರೆ ಗುರುಗಳಾಗಿರಲು ಅನಂತಮತಿಯು ಕಮಲಶ್ರೀ ಕಂತಿಯರಲ್ಲಿ ಜಿನದೀಕ್ಷೆಯನ್ನು ಕೈಗೊಂಡಳು. ತನ್ನ ಮನಸ್ಸಿನಲ್ಲಿ ಐಹಿಕಸುಖವನ್ನು ನೆನೆಯದೆ, ಜಿನಚರಣಕಮಲಗಳನ್ನು ಅನವರತವೂ ನಂಬಿ, ಹಿಂಜರಿಯದೆ, ಅಳಿಸುಖದ ಬಗ್ಗೆ ಮರೆತೂ ಚಿಂತಿಸದೆ, ಶಂಕೆಯಿಂದ ಮಿಥ್ಯಾತ್ವಕ್ಕೆ ಒಳಗಾಗದೆ, ಮುನಿಸು–ಒಸಗೆಗಳನ್ನು ಬಿಟ್ಟು, ಮನಃಕಷಾಯಗಳನ್ನು ತೊರೆದು; ಪರಮಾಗಮ, ಕರ್ಮದ ನಿಷ್ಠುರತೆ, ಹಿಂದಿನ ಮಹಾಪುರುಷರ ಕತೆ – ಇವುಗಳನ್ನು ಸ್ಮರಿಸಿಕೊಳ್ಳುತ್ತ ಅವಳು ಕಾಲವನ್ನು ಕಳೆಯುತ್ತಿದ್ದಳು.

ತಾನು ಬೇರೆ, ದೇಹ ಬೇರೆಯೆಂಬ ತಿಳಿವಿನಿಂದ ಮೋಹಾಡಂಬರವನ್ನು ಬಿಟ್ಟು, ದೇಹಕ್ಕಾಗಿ ಹಂಬಲಿಸದೆ ಮೋಕ್ಷಸುಖಾಪೇಕ್ಷಿಯಾಗಿ ಅನಂತಮತಿಯು ಬದುಕಿದಳು. ನಶ್ವರವಾದ ಒಡಲನ್ನು ನಂಬಿಕೊಳ್ಳದೆ, ಅಳಿಸುಖವನ್ನು ಹಗೆಯ ಹಾಗೆ ಕಾಣುತ್ತ, ಹಲವು ಉಪವಾಸಗಳನ್ನು ನಿಷ್ಠುರತೆಯಿಂದ ಕೈಗೊಂಡು ದೇಹವನ್ನು ದಂಡಿಸಿ, ಉತ್ತರೋತ್ತರ ತಪಸ್ಸನ್ನು

ಮಾಡಿದಳು. ಕಡೆಯಲ್ಲಿ ಸಮಾಧಿವಿಧಿಯಿಂದ ಶರೀರವನ್ನು ಬಿಸುಟು ಹನ್ನೆರಡನೆಯ ಸಹಸ್ರಾರಕಲ್ಪದಲ್ಲಿ ಹದಿನೆಂಟು ಸಾಗರದಷ್ಟು ಆಯುಷ್ಯವನ್ನು ಪಡೆದು ಸುಕಾಂತನೆಂಬ ಮಹತ್ತರದೇವನಾಗಿ ಹುಟ್ಟಿದಳು. ಪಾಪಗಳೆಂಬ ಶತ್ರುಸೈನ್ಯವನ್ನು ಎದುರಿಸಿ ಶ್ರೇಷ್ಠವಾದ ಮೋಕ್ಷಲಕ್ಷ್ಮಿಯನ್ನು ಸೇರುವೆನೆಂಬ ಆದರ್ಶವುಳ್ಳ ಮನುಷ್ಯನು ತನ್ನ ಮನಸ್ಸಿನಲ್ಲಿ ಸದಾ ಜಿನಪಾದಗಳಲ್ಲಿ ಕಾಂಕ್ಷಿತನಾಗಿ, ಪರಮವ್ರತಗಳನ್ನು ಆಚರಿಸುತ್ತ, ತತ್ವವನ್ನೇ ಆಲೋಚಿಸುತ್ತ, ಚತುರ್ಗತಿಗಳ ಸುಖಗಳನ್ನೆಲ್ಲ ಬಿಟ್ಟು ಮೋಕ್ಷಸುಖವನ್ನೇ ಬಯಸುತ್ತಾನೆ ಎಂದು ಗೌತಮ ಗಣಧರರು ನಿಷ್ಕಾಂಕ್ಷೆಯ ಕತೆಯನ್ನು ಹೇಳಿ ಮುಗಿಸಿದರು. ಅದನ್ನು ಕೇಳಿ ಮದನಶರಭಭೇರುಂಡನೂ, ಉನ್ನತಗುಣಗಳುಳ್ಳವನೂ, ಮಂದರ ಧೈರ್ಯನೂ, ವಾಗ್ವಧೂವಲ್ಲಭನೂ, ಅಮಲಯಶೋರಾಶಿಯೂ, ಸಮ್ಯಕ್ತ್ವ ರತ್ನಾಭರಣನೂ, ತ್ರೈವಿದ್ಯಚಕ್ರೇಶ್ವರನ ವಿಮಲಪಾದಾಂಬುಜಗಳಲ್ಲಿ ಸುಳಿದಾಡುವ ದುಂಬಿಯೂ, ಜಿನಚರಣಗಳಲ್ಲಿ ತನ್ನ ಶಿರವನ್ನಿಟ್ಟು ಅಲಂಕರಿಸಿದವನೂ, ಸುಕವಿಜನಮನಃಪದ್ಮಿನೀ ರಾಜಹಂಸನೂ ಆದ ಶ್ರೇಣಿಕ ಮಹಾರಾಜನು ತುಂಬ ಸಂತಸಗೊಂಡ.

ನಿರ್ವಿಚಿಕಿತ್ಸೆ

ನಿಷ್ಕಾಂಕ್ಷೆಯ ಕತೆಯನ್ನು ಕೇಳಿದ ಶ್ರೇಣಿಕನು ಗಣಧರ ಸ್ವಾಮಿಗಳಿಗೆ ನಮಸ್ಕರಿಸಿ, ನಿರ್ವಿಚಿಕಿತ್ಸೆಯ ಕತೆಯನ್ನು ಅರುಹಲು ಬೇಡಿಕೊಂಡ. ಆಗ ಅವರು ಮೋಕ್ಷಲಕ್ಷ್ಮಿಯ ಲಾವಣ್ಯಯೋತ್ಕರ್ಷವೆನಿಸುವ ನಿರ್ವಿಚಿಕಿತ್ಸೆಯ ಕತೆಯನ್ನು ಹೇಳಲು ತೊಡಗಿದರು: ಪದ್ಯದಂತೆ, ಮಂಟಪದಂತೆ, ದ್ವಾರಬಂಧದಂತೆ, ಶ್ರುತಯಂತ್ರದಂತೆ, ವಸ್ತ್ರದಂತೆ, ಮಂದರದಂತೆ, ಶ್ರೀಮಂಚದಂತೆ, ರಾಜನೀತಿಯಂತೆ, ಧರ್ಮದಂತೆ, ದಾನದಂತೆ, ದರ್ಶನ–ನಿಶ್ಶಂಕೆ–ನಿಷ್ಕಾಂಕ್ಷೆ–ನಿರ್ವಿಚಿಕಿತ್ಸೆಗಳೆಂಬ ನಾಲ್ಕು ಗುಣಗಳಿಂದ ಕೂಡಿ ಶುದ್ಧಚಿತ್ತದಿಂದ ನಡೆಯಬೇಕು. ನಿರ್ವಿಚಿಕಿತ್ಸೆಯನ್ನು ತಿಳಿದುಕೊಂಡು ಅದನ್ನು ಕೈಗೊಂಡು ನಡೆದುಕೊಳ್ಳುವ ನರನು ನಿರ್ವಾಣಪದವಿಯಲ್ಲಿ ನಿಲ್ಲಿಸುವ ಸರ್ವಜ್ಞಶ್ರೀಗೆ ಮೊದಲಿಗನಾಗುತ್ತಾನೆ. ಇನ್ನು ಅದರ ಮಹಿಮೆಯನ್ನು ಹೇಳಬೇಕೆಂದರೆ, ಇಂದ್ರಕಚ್ಛೆಯೆಂಬ ನಾಡು ಭರತಭೂಮಿಯೆಂಬ ವನಿತೆಗೆ ಬ್ರಹ್ಮನು ನಚ್ಚಿ ಮೆಚ್ಚಿ ಮಾಡಿದ ಮಣಿನೂಪುರವೆನಿಸಿ ಶೋಭಿಸುವುದು. ಅದರಲ್ಲಿ ಹೊರಗಣ ಶೋಭೆ, ಇಡಿಕಿರಿದ ಜಿನೇಂದ್ರಭವನಗಳು, ದೊಡ್ಡ ಕೆರೆಗಳು, ಹಣ್ಣು ಬಿಟ್ಟು ತೊನೆಯುವ ಮರಗಳ ಸಮೂಹದಿಂದ ಕೂಡಿದ ಉದ್ಯಾನ – ಇವುಗಳನ್ನು ಹೊಂದಿದ ರೌರವಪುರವು ಆ ನಾಡಿನ ರಾಜಧಾನಿ. ಅದನ್ನು ಆಳುವವನು ಒದ್ದಾಯನ ಎಂಬ ಹೆಸರಿನ ಮಹಾಮಾಂಡಲಿಕ.

ಅವನು ಶರಣಾದವನಿಗೆ ಸಮುದ್ರದಂತೆಯೂ, ಅದಟಿನಿಂದ ತನ್ನನ್ನು ಎದುರಿಸಿದ ರಾಜರಿಗೆ ಸಿಂಹದಂತೆಯೂ, ಬೇಡಿ ಕೈಯೊಡ್ಡುವವರಿಗೆ ಕಲ್ಪವೃಕ್ಷದಂತೆಯೂ ಇದ್ದ; ಊರ್ಜಿತಯಶನೂ, ಮಂದರದಂತೆ ಉನ್ನತ ಧೈರ್ಯಶಾಲಿಯೂ, ಉದ್ಯತ್ ಗುಣವಂತನೂ, ಮನ್ಮಥನಂತಹ ರೂಪವಂತನೂ, ವಿಸ್ತಾರವಾದ ಭೂಮಿಗೆ ಒಡೆಯನೂ ಆದವನಾಗಿದ್ದ. ತುಂಬಿದ ಭಕ್ತಿಯಿಂದ ಪರಮನಾದ ಜಿನಪೂಜೆಯನ್ನು ಮಾಡುವುದರಲ್ಲಿ ಅವನು ಭರತೇಶ್ವರನಿಗಿಂತ ಮಿಗಿಲು ಎಂದು ಲೋಕವು ಹೊಗಳುತ್ತಿತ್ತು. ದರ್ಶನದಲ್ಲಿ ಸನತ್ಕುಮಾರ ಹಾಗೂ ಸಗರ ಚಕ್ರವರ್ತಿಗಳಿಗಿಂತ ಇವನು ಹೆಚ್ಚು ಎಂದು ಭುವನವೆಲ್ಲ ಕೀರ್ತಿಸುತ್ತಿತ್ತು. ಪ್ರಸಿದ್ಧವಾದ ಚತುರ್ವಿಧ ದಾನಕ್ಕೆ ಅಗಣಿತಗುಣನಾದ ಇವನಿಗಿಂತಲೂ ಶ್ರೇಯೋವಂತನಾದವನು ಬೇರೆ ಯಾರೂ ಇಲ್ಲವೆಂದು ಭೂಮಿಯೆಲ್ಲ ನಿರಂತರವಾಗಿ ಸ್ತುತಿಸುತ್ತಿತ್ತು. ಇಂತಹ ಒದ್ದಾಯನ ಮಹಾರಾಜನ ಪಟ್ಟದರಸಿಯು ಪ್ರಭಾವತಿ ಎನ್ನುವವಳು. ಗುಣದಲ್ಲಿ ಈಕೆಯು ಶಚೀದೇವಿಗೆ ಇಮ್ಮಡಿ; ಜೈನಭಕ್ತಿಯಲ್ಲಿ ರೋಹಿಣಿಗೆ ಮುಮ್ಮಡಿ; ರೂಪಿನಲ್ಲಿ ಲಕ್ಷ್ಮಿಗೆ ನಾಲ್ವಡಿ; ಶೀಲದಲ್ಲಿ ಸೀತೆಗೆ ಸಹಸ್ರಮಡಿ ಎನ್ನಿಸಿಕೊಂಡಿದ್ದಳು. ಅರಸನಿಗೆ ಇವಳೇ ಮೊದಲಾಗಿ ಎಂಟು ಸಾವಿರ ಮಂದಿ ರಾಣಿಯರಿದ್ದರು. ಇವರ ಜೊತೆ ಒದ್ದಾಯನ ಮಹೀವಲ್ಲಭನು ಸುಖಸಂಕಥಾವಿನೋದದಿಂದ ರಾಜ್ಯಭಾರ ಮಾಡುತ್ತಿದ್ದನು.

ಹೀಗಿರಲು ಒಂದು ದಿನ, ಅತ್ತ ಸೌಧರ್ಮಕಲ್ಪದಲ್ಲಿ ಸೌಧರ್ಮೇಂದ್ರನು ಸುಧರ್ಮೆಯೆಂಬ ತನ್ನ ಸಭೆಯಲ್ಲಿ ಕೂಳಿತಿದ್ದ. ಅವನಿಗೆ ಸುರವಿಲಾಸಿನಿಯರೂ, ಮನೋಹರರೂಪೆಯರೂ, ಗಜಗಮನೆಯರೂ, ತರಳಲೋಚನೆಯರೂ, ವಿದಗ್ಧೆಯರೂ ಆದ ಸೇವಕಿಯರು ಚಾಮರವಿಕ್ಕುತ್ತಿದ್ದರು. ಸುರುಚಿರ ಆಭರಣಗಳನ್ನು ಧರಿಸಿದ ಸುರರು ಸಭೆಯಲ್ಲಿ ಮನ್ಮಥನಂತಿದ್ದ ರಾಜನ ಸುತ್ತ ಕುಳಿತಿದ್ದರು. ಇಂಪಾದ ಸಂಗೀತ ಹೊಮ್ಮುತ್ತಿತ್ತು. ಅಂತಹ ಸುರರಾಜನಿಗೆ ಸಮಸ್ತ ದಿವಿಜರು ವಿನಯದಿಂದ ನಮಸ್ಕರಿಸಿ ಕೈಮುಗಿದು ಹೀಗೆ ಬಿನ್ನವಿಸಿಕೊಳ್ಳುತ್ತಿದ್ದರು: "ತಾವು ನಿರುಪಮ ಮುಕ್ತಿಶ್ರೀಗೆ ಆಭರಣವೆನಿಸಿದ ಹಾಗೂ ಜೀವರಿಗೆ ಹಿತವಾದ ಜಿನಾಗಮವನ್ನು ಚೆನ್ನಾಗಿ ತಿಳಿದಿರುವಿರಿ; ಬೇರೆಯವರಿಗೆ ಅದು ಹಾಗೆ ತಿಳಿದಿರಲು ಸಾಧ್ಯವಿಲ್ಲ. ಆ ಕಾರಣದಿಂದ ತಾವು ನಮಗೆಲ್ಲ ಸದ್ಧರ್ಮವು ತಿಳಿಯುವಂತೆ ತಿಳಿಯ ಹೇಳಬೇಕು." ಆಗ ಅಮರರಾಜನು ಸುಖನಿಧಾನ ದೀಪವರ್ತಿoiಂತಹ ಸದ್ಧರ್ಮವನ್ನು ವಿವರಿಸತೊಡಗಿದ.

ಜೀವೋತ್ಕರಕ್ಕೆ ಶರಣ್ಯವಾದದ್ದು ಶ್ರೇಷ್ಠವಾದ ಸದ್ಧರ್ಮವೇ ಹೊರತು ಅನ್ಯ ವಸ್ತುಗಳಲ್ಲ. ಇದನ್ನು ತಿಳಿದು ವಿವೇಕಿಗಳಾದವರು ಧರ್ಮವನ್ನು ಆಶ್ರಯಿಸಬೇಕು. ಸುಳ್ಳಾಡುವವರನ್ನೂ, ಕೊಲೆಗಾರರನ್ನೂ, ವ್ಯಸನಿಗಳನ್ನೂ, ಕಳ್ಳರನ್ನೂ ಕಂಡರೆ ಲೋಕದ ಜನರು ಸಂದೇಹಪಡುತ್ತಾರೆ; ಪಾಪವು ಭೂಮಿಯಲ್ಲಿ ಕಷ್ಟಕರ ಎಂಬುದನ್ನು ಇದು ಸಾರುತ್ತದೆ. ತಪಸ್ಸಿನಲ್ಲಿ ತಮ್ಮ ದೇಹವನ್ನೂ, ಧರ್ಮದಲ್ಲಿ ಸಂಪತ್ತನ್ನೂ ವ್ಯಯಿಸುವವರನ್ನು ಧರೆಯು ನಚ್ಚಿ ಮೆಚ್ಚಿ ಹೊಗಳುತ್ತದೆ; ಧರ್ಮವು ಒಳ್ಳೆಯದು ಎಂಬುದರಲ್ಲಿ ಎರಡಿಲ್ಲ ಎಂಬುದನ್ನಿದು ಸಾರುತ್ತದೆ. ಅದರಿಂದ ಸ್ವರ್ಗಾಪವರ್ಗಸುಖಕ್ಕೆ ಧರ್ಮವೇ ಕಾರಣ; ನರಕ ತಿರ್ಯಕ್ ಮುಂತಾದ ದುಃಖಗಳಿಗೆ ಪಾಪವೇ ಕಾರಣ ಎಂದು ಅರಿಯಬೇಕು. ಹೊಲೆಯರು ಕೀಳುಕುಲದವರೆಂಬುದು ಭಾವನೆ; ಆದರೆ ಅವರು ಶುದ್ಧವೃತ್ತಿಯಿಂದ ನಡೆದುಕೊಂಡರೆ ಭೂತಳವೆಲ್ಲ ಅವರನ್ನು ಹೊಗಳುತ್ತದೆ; ಹೀಗಾಗಿ ಧರ್ಮವೇ ಅಧಿಕವಾದುದೆಂದು ತಿಳಿಯಬೇಕು. ಅದೇ ಸತ್ಕುಲಜನು ಆಲಸ್ಯದಿಂದ ಮಹಾವ್ಯಸನಿಯಾದರೆ, ಧರಣಿಯೆಲ್ಲ ಅವನಿಗೆ ಮುನಿಯುತ್ತದೆ; ಆದ್ದರಿಂದ ಧರ್ಮವು ಕುಲಕ್ಕಿಂತ ಮಿಗಿಲಾದುದು. ಈ ರೀತಿ ಪೊಲ್ಲಮೆಯಲ್ಲಿ ಮನಸ್ಸನ್ನಿಡದೆ ಸಚ್ಚಾರಿತ್ರದಿಂದ ಕೂಡಿ ಅನುಸರಿಸುವ ಧರ್ಮವು ಸದ್ಧರ್ಮವೆನಿಸಿಕೊಳ್ಳುತ್ತದೆ; ಅದೇ ಪೊಲ್ಲಮೆಯಿಂದ ಕೂಡಿ ದುಶ್ಚಾರಿತ್ರದಲ್ಲಿ ಕೂಡಿದ ಧರ್ಮವು ಕುಧರ್ಮವೆನಿಸಿಕೊಳ್ಳುತ್ತದೆ. ಹೆಸರು, ರೂಪ, ನುಡಿ – ಇವೆಲ್ಲವೂ ಜಗತ್ತಿನಲ್ಲಿ ಎಲ್ಲರಿಗೂ ಸಮಾನವಾದವು; ಅಂದಾಕ್ಷಣ ಎಲ್ಲ ಮನುಷ್ಯರೂ ಎಲ್ಲದರಲ್ಲೂ ಸಮಾನರಾಗಿಬಿಡುವರೇ? ವಂಶಪಾರಂಪರ್ಯವಾಗಿ ಬರುವ ಶುದ್ಧ ಚಾರಿತ್ರದಿಂದಾಗಿ ವೀರ ಮುಂತಾದ ಮೇಲು ಜಾತಿಗಳಾಗುತ್ತವೆ; ದುರಾಚಾರದಿಂದಾಗಿ ಕಿರಾತ ಮುಂತಾದ ಕೀಳು ಜಾತಿಗಳಾಗುತ್ತವೆ. ಹಾಗೆಯೇ, ಸದಾಚಾರಿಗಳಾದ ಮಹಾ ತಪೋಧನರೂ, ಅವರ ಭಕ್ತರಾದ ಗೃಹಸ್ಥರ ನಡವಳಿಕೆಯನ್ನೂ, ದುರಾಚಾರಿಗಳಾದ ತಪೋವೇಷಧಾರಿಗಳಾದವರೂ ಅವರ ಭಕ್ತರಾದ ಗೃಹಸ್ಥರ ನಡವಳಿಕೆಯನ್ನೂ ಗುರುತಿಸಿ ಮೋಕ್ಷಕಾರಣವಾದ ಧರ್ಮದ ಸ್ವರೂಪವನ್ನು ತಿಳಿಯಬೇಕು. ಜನರ ಸಂತೋಷ–ಸಂಭ್ರಮಗಳಿಗೆ ಚಂದ್ರೋದಯವು ಕಾರಣವಾದರೂ, ಕಳ್ಳರಿಗೂ ದುರ್ವ್ಯಸನಿಗಳಿಗೂ ಅದು ರುಚಿಸುತ್ತದೆಯೇ? ಸಕಲಸುಖಕ್ಕೆ ನೆಲೆಯಾದ ಹಾಗೂ ಒಳ್ಳೆಯ ದೃಷ್ಟಿಗೆ ರಂಜಿಸುವ ಸದ್ಧರ್ಮವು ನಾನಾ ವಿಧವಾದ ಹಾಗೂ ನರಕದುಃಖಗಳಿಗೆ ಕಾರಣವಾಗುವ ಕುದೃಷ್ಟಿಗೆ ರಂಜಿಸಲಾರದು. ಸುಂದರ ಪುರುಷನಿಗೆ ಕನ್ನಡಿಯನ್ನು ತೋರಿಸಿದರೆ ಕೋಪವು ಬರುವುದಿಲ್ಲ; ಅದೇ ಮೂಕೊರೆಯನಿಗೆ ಕನ್ನಡಿಯನ್ನು ತೋರಿಸಿದರೆ ಹೊಡೆಯುತ್ತಾನೆ, ಇರಿಯುತ್ತಾನೆ, ಕೊಂದೇ ಬಿಡುತ್ತಾನೆ! ಅಂತೆಯೇ ನಿಷ್ಪಾಪಿಗೆ ಸದ್ಧರ್ಮವು ರುಚಿಸುತ್ತದೆ; ಮಹಾಪಾತಕಿಗೆ ಕಹಿಯಾಗಿರುತ್ತದೆ. ಜರಗನ್ನು ತೊಳೆದು ಮಣ್ಣಿನ ರಾಶಿಯಲ್ಲಿರುವ ಹೊನ್ನನ್ನು ಕಂಡಾಗ ಅಚ್ಚರಿಯೆನಿಸುತ್ತದೆ; ಹಾಗೆಯೇ ಮತಿವಂತನು ಮಾತ್ಸರ್ಯವಿಲ್ಲದೆ ಆಪ್ತವಾದ ತತ್ವವನ್ನೂ ಧರ್ಮವನ್ನೂ ವಿಚಾರ ಮಾಡಿ ನಂಬಿಕೆಯನ್ನು ಹೊಂದಬೇಕು. ದಯಾಮೂಲವಾದ ಸದ್ಧರ್ಮವನ್ನು ಅನುಸರಿಸದೆ ಅಲಸಿಗರು ಮೈಸುಖಕ್ಕಾಗಿ ಪಾಪಹೇತುಗಳಾದ ಕುಧರ್ಮವನ್ನು ಹೇಳಿ ಜನರನ್ನು ಮರುಳು ಮಾಡಿ ಅದೇ ಧರ್ಮವೆಂದು ಹೇಳುವರು. ಆದ್ದರಿಂದ ವಿವೇಚನೆಯನ್ನು ಹೊಂದಬೇಕಾದದ್ದು ಆವಶ್ಯಕ. ಹಿತ್ತಾಳೆಯ ಒಡವೆಯು ತಿಳಿಯದವರಿಗೆ ಹೊನ್ನ ಆಭರಣವೆನಿಸುವಂತೆ ಪಾಪವು ಕೆಟ್ಟವರಿಗೆ ಉತ್ಸಾಹದಾಯಕವಾಗಿರುತ್ತದೆ. ಆದ್ದರಿಂದ ಪಾಪಹೇತುವಾದ ದುರ್ಮಾರ್ಗವನ್ನು ಹಿಡಿಯದೆ, ವರ್ತಕರು ಹೇಗೆ ಮಿಶ್ರಲೋಹವನ್ನೂ ಕಳ್ಳನಾಣ್ಯವನ್ನೂ ಬಿಟ್ಟು ಒರೆ ಹಚ್ಚುವುದಕ್ಕೂ ತೂಕಕ್ಕೂ ಬೇಕಾದ ಚಿನ್ನವನ್ನು ಕೊಳ್ಳುತ್ತಾರೋ ಹಾಗೆ ಸುಖಹೇತುವಾದ ಸನ್ಮಾರ್ಗದಲ್ಲಿ ನಡೆಯಬೇಕು. ನಡೆಯುವಲ್ಲಿ ಮಲಗುವಲ್ಲಿ ಮಡಿ ಬಟ್ಟೆಗೆ ಹೇಗೆ ದಿನವೂ ಧೂಳು ಹತ್ತುವುದೋ ಹಾಗೆಯೇ ಚಪಲರ ನಡೆನುಡಿಯಲ್ಲಿ ಪಾಪಗಳು ಸೇರುತ್ತವೆ. ಉಟ್ಟ ಬಟ್ಟೆಯ ಧೂಳು ಉಟ್ಟವನಿಗೆ ತಿಳಿಯದಂತೆ ಅಗಸನ ಬಾರಿಯಲ್ಲಿ ಬಿದ್ದು ಹೇಗೆ ನಿಗ್ರಹಕ್ಕೊಳಗಾಗುವುದೋ ಹಾಗೆ ಚಪಲರು ಜಿನತಪಸ್ವಿಗಳನ್ನೂ ಜಿನತತ್ವಗಳನ್ನೂ ಬಾಯಿಗೆ ಬಂದಂತೆ ಅಣಕಚಣಕ ಮಾಡಿ ನಕ್ಕು ಪಾಪವನ್ನು ಹೊಂದಿ ನರಕಬಾಧೆಗೊಳಗಾಗಿ ದುಃಖಪಡುವರು. ತಾಮ್ರಕ್ಕೆ ಮೂಲಿಕೆಗಳನ್ನು ಸೇರಿಸಿದರೆ ಚಿನ್ನವಾಗುವಂತೆ ಶಂಕೆಯಿಲ್ಲದೆ ಶ್ರೇಷ್ಠವಾದ ಧರ್ಮದಲ್ಲಿ

ಭಕ್ತಿಯಿಂದ ನಡೆದುಕೊಳ್ಳುವ ನರನು ವಿಶೇಷಸುಖಿಯಾಗಿರುವನು. ಬಾಳೆಹಣ್ಣಿಗೆ ಮಾಧುರ್ಯ, ಸಕ್ಕರೆಗೆ ಸಿಹಿ, ಮಾವಿನಹಣ್ಣಿಗೆ ರುಚಿ ಹೇಗೆ ಸಹಜವೋ ಹಾಗೇ ಚಕ್ರವರ್ತಿ–ದೇವೇಂದ್ರ–ಸರ್ವಜ್ಞನ ಪದವಿಯನ್ನು ಪಡೆಯುವ ಪುರುಷನಿಗೆ ಸದ್ಧರ್ಮದಲ್ಲಿ ನಡೆಯುವ ನಿರ್ದೋಷಿಯಾದ ದೇವ ಹಾಗೂ ದಿವ್ಯಮುನಿಗಳ ಪ್ರೀತಿ–ಕೊಂಡಾಟಗಳು ಸಹಜ. ಬೇವಿಗೆ ಕಹಿ, ಅಳಲೆಗೆ ಒಗರು, ಶುಂಠಿಗೆ ಕಾರ ಹೇಗೆ ಸಹಜವೋ ಹಾಗೆಯೇ ನರಕದುಃಖದೆಡೆಗೆ ಸಾಗುವ ಪುರುಷನಿಗೆ ಬಡತನದ ಪೀಡೆ, ಸದ್ಧರ್ಮದ ಬಗ್ಗೆ ಮುನಿಸು–ದೂಷಣ–ಔದಾಸೀನ್ಯಗಳು ಹಾಗೆಯೇ ಸಹಜವಾದವು. ಬೋಳುತಲೆಯಲ್ಲಿ ಕೂದಲೂ, ಕತ್ತರಿಸಿದ ಉಗುರೂ ಬೆಳೆಯುವ ರೀತಿಯಲ್ಲಿ ಪಾಪವು ಸದ್ದುಗದ್ದಲವಿಲ್ಲದೆ ಬೆಳೆಯುತ್ತದೆ. ಅವುಗಳು ತುರುಬು ಸೆಳ್ಳುಗುರುಗಳಾಗುವ ಹಾಗೆ ದುರ್ಜನರೂ ಪಾಪಿಗಳೂ ಧರ್ಮದ್ರೋಹಿಗಳೂ ತಮ್ಮನ್ನು ತಿಳಿಯಲವಕಾಶವೀಯದೆ ದಿನ ಕಳೆದಂತೆ ಬೆಳೆದ ಪಾಪದಿಂದ ಮಹಾನರಕದಲ್ಲಿದ್ದು ಬಹುದುಃಖವನ್ನುಣ್ಣುವರು. ತೆಂಗುಕಂಗುಗಳ ಸಸಿಗಳು ಬೆಳೆದು ಮೇಲೆ ಫಲವನ್ನು ನೀಡುವಂತೆ ಧರ್ಮವು ಆನಂತರ ಸಂತಸವನ್ನುಂಟುಮಾಡುತ್ತದೆ. ಗೊತ್ತಾಗದಂತೆ ದಿನದಿನವೂ ಬೆಳೆದು ಫಲವನ್ನು ಕೊಡುವ ತೆಂಗುಕಂಗುಗಳ ತೋಟದಂತೆ ದಾನಪೂಜೆಗಳಿಂದ ಕೂಡಿದ ಸದ್ಧರ್ಮವು ಪ್ರತ್ಯಕ್ಷಫಲವನ್ನು ನೀಡದಿದ್ದರೂ ಕೊನೆಯಲ್ಲಿ ಫಲವನ್ನು ಕೊಡುವುದು. ಆಲಸ್ಯವಿಲ್ಲದೆ ಅನುಸರಿಸುವ ಧರ್ಮವಲ್ಲದೆ ಜೀವಕ್ಕೆ ಹಿತಕಾರಿಯಾದುದು ಬೇರೆ ಇಲ್ಲ ಎಂದು ತಿಳಿದು ಬುಧರು ಸದ್ಧರ್ಮವನ್ನು ಹಿಡಿಯಬೇಕು.

ಅಂತಹ ಧರ್ಮದಲ್ಲಿ ನಿರತನಾದ ಭವ್ಯನ ಸ್ವರೂಪ ಹೇಗಿರುವುದೆಂದರೆ, ಕುದುರೆಯಂತೆ ಕೀಳನ್ನು ಕೈಗೊಳ್ಳದೆ, ಗ್ರಹದಂತೆ ಮಂತ್ರಕ್ಕೆ ಎರಗದೆ, ಕಟ್ಟರಸನಂತೆ ತಂತ್ರಕ್ಕಾಸೆಪಡದೆ, ಮಾಸದ ಹಾಗೆ ಪಕ್ಷವಿಲ್ಲದೆ, ದೀಪದ ಕುಡಿಯಂತೆ ಚಿನ್ನಕ್ಕೆ ಬಾಗದೆ, ಕಪಟತ್ಯಾಗಿಯಂತೆ ಹೊಗಳಿಕೆಗೆ ಆಸೆಪಡದೆ, ಜರಡಿಯಂತೆ ಕೆಟ್ಟುದನ್ನು ಹಿಡಿಯದೆ, ತೊರೆಯ ಹಾಗೆ ಒಮ್ಮೆ ಹೆಚ್ಚಿ ಮತ್ತೊಮ್ಮೆ ಕುಂದದೆ, ಚಂದ್ರನಂತೆ ಕಳಂಕಿತನಾಗದೆ, ಮಕ್ಕಳಂತೆ ಕಂಡಕಂಡವರಿಗೆರಗದೆ, ಗಿಳಿಯಂತೆ ಇತರರು ಹೇಳಿಕೊಟ್ಟುದನ್ನು ಕಲಿಯದೆ, ಕೋಗಿಲೆಯಂತೆ ಒಮ್ಮೆ ನುಡಿದು ಮತ್ತೊಮ್ಮೆ ಮೌನದಿಂದಿರದೆ, ಬಹುರೂಪಿಯಂತೆ ಹೊತ್ತಿಗೊಂದು ವೇಷ ಧರಿಸದೆ, ಕಬ್ಬಿನ ತೋಟದಂತೆ ನಿಸ್ಸಾರನಾಗದೆ, ಹಾದರಿಗನಂತೆ ಜನರ ಮುಂದೆ ನಾಚದೆ, ಲೋಭಿಯಾದ ಅರಸಿನಂತೆ ಅವಿಚಾರಿಯಾಗದೆ; ದುಂಬಿಯಂತೆ ರಸಜ್ಞನೂ, ಭಂಡಾರದ ಹೊನ್ನಿನಂತೆ ಶುದ್ಧನೂ, ಬೆಟ್ಟದಂತೆ ಸ್ಥಿರನೂ, ಮದ್ದಾನೆಯಂತೆ ಮಹಾದಾನಿಯೂ, ಸ್ಫಟಿಕದಂತೆ ನಿರ್ಮಲನೂ, ಬಿಲ್ಲಿನಂತೆ ಗುಣಧರನೂ, ಸುಕವಿಯಂತೆ ಕುಮಾರ್ಗದೂರನೂ, ಮಾಣಿಕಭಟ್ಟನಂತೆ ಪರೀಕ್ಷಕನೂ, ಮಹಾಕ್ಷತ್ರಿಯನಂತೆ ವಿಚಾರಪರನೂ, ದೇವರಂತೆ ಸುಮನನೂ, ಪಾರ್ಥನಂತೆ ಧರ್ಮಪ್ರಿಯನೂ, ಸಂಯಮಿಯಂತೆ ದಯಾಪರನೂ, ಕವಿಯಂತೆ ಯತಿಪ್ರಿಯನೂ, ಸಾಗರದಂತೆ ನಿಸ್ಸಾರದೂರನೂ, ನಿತ್ಯಕಲಿಯಂತೆ ಧರ್ಮದಲ್ಲಿ ನಿಶ್ಶಂಕನಾಗಿರಬೇಕು. ಇವರಿಂದ ಸ್ತ್ರೀವಶ್ಯವಾಗುತ್ತದೆ, ಇವರಿಂದ ಮಂತ್ರೋಪದೇಶವಾಗುತ್ತದೆ, ಇವರಿಂದ ದಿವ್ಯಫಲಗಳನ್ನು ಕೋಡುವ ದಿವ್ಯೋಪದೇಶಗಳಾಗುತ್ತವೆ, ಇವರಿಂದ ಈ ಕಾರ್ಯವಾಗುತ್ತದೆ, ಅವರಿಂದ ಹೊನ್ನು ಸಿಕ್ಕುತ್ತದೆ ಎಂದು ಆಸೆಯಿಂದ ಮಾಡುವ ದಾನವು ದಾನವಲ್ಲ; ಬದಲಿಗೆ ಅವು ಬಂಧುಗಳಿಗೆ ನೀಡುವ ಮುಯ್ಯಿಗಳು. ಮಂತ್ರವೈದ್ಯದ ಆಸೆಯಿಂದ ಕೇಡನ್ನು ತಂದುಕೊಳ್ಳುವವನ ಧರ್ಮವು ಬೇಕಾದಷ್ಟು ಅನ್ನವಿದ್ದರೂ ಅರೆಗಂಜಿಯನ್ನು ಕುಡಿಯುವ, ಹೊನ್ನಿದ್ದರೂ ಆತುರದಿಂದ ಕಗ್ಗಲ್ಲನ್ನು ಕೊಳ್ಳುವ, ಧರಣೀಸಾಮ್ರಾಜ್ಯವಿದ್ದರೂ ಸೇವಕನಾಗಿರುವ, ವಿಭೂತಿಯನ್ನು ಬಿಟ್ಟು ಭಿಕ್ಷೆ ಎತ್ತಿ ತಿನ್ನುವ ವ್ಯಕ್ತಿಯನ್ನು ಹೋಲುವುದಿಲ್ಲವೇ? ಮಳೆ ಬಿದ್ದರೆ ಕೆರೆ ಕೊಳಗಳೆಲ್ಲ ತುಂಬಿ ಕೋಡಿವರಿದು ಸುಂದರವಾಗಿ ಕಾಣುತ್ತವೆ; ಹಾಗೆಯೇ ಈ ಭೂಮಿಯಲ್ಲಿ ಪುಣ್ಯ ಸಂಪಾದನೆ ಮಾಡಿದರೆ ಸಿರಿ ತನಗೆ ತಾನೇ ಬಾರದೇ? ಅಲ್ಲದೆ, ಕಾವಿಲ್ಲದೆ ಕೊಡೆ ಹಿಡಿಯುವೆನೆಂಬ, ಬಂದಿಗೆಯಿಲ್ಲದೆ ಸುರಗಿಯನ್ನು ಹಿಡಿಯುವೆನೆಂಬ, ನಾಡನ್ನು ಪಡೆಯದೆ ಅರಸುಗೈಯುತ್ತೇನೆ ಎಂಬ, ಮಾತೇ ಗೊತ್ತಿರದೆ ಬಿನ್ನಹ ಮಾಡುತ್ತೇನೆ ಎಂಬ, ಕತ್ತಿಯಿಲ್ಲದೆ ಯುದ್ಧ ಮಾಡುವೆನೆಂಬ, ಮಡಕೆಯಿಲ್ಲದೆ ಅಡುಗೆ ಮಾಡುವೆನೆಂಬ ಹಾಗೆ ಹಿಂದಿನ ಜನ್ಮದಲ್ಲಿ ಜಿನಪೂಜೆ,

ದಾನವ್ರತಗಳು, ತಪಸ್ಸುಗಳನ್ನು ಮಾಡಿ ಗಳಿಸಿದ ಪುಣ್ಯವಿಲ್ಲದೆ ಸಿರಿ–ಹೊನ್ನು–ಸುಖ–ಆಯುಸ್ಸುಗಳನ್ನು ಮಂತ್ರವಿದ್ಯೆಗಳಿಂದ ಪಡೆಯುವೆನೆಂದು ದಾರಿ ಕೆಡಬಾರದು; ಆಮೇಲೆ ಮರುಗಿದರೂ ಅದರಿಂದ ಫಲವಿಲ್ಲ. ತಮ್ಮ ಕರ್ಮಫಲದಿಂದ ಶ್ರೀರಾಮ ಮತ್ತು ಪಾಂಡವರು ಅರಣ್ಯವನ್ನು ಹೊಕ್ಕು ಕಾಂತಾಪರಿಭವದಿಂದ ತೊಳಲಿ ಬಳಲಿ ಬೆಂದು ಬೆಂಡಾದರು. ಅವರಿಗೆ ಮಂತ್ರವೈದ್ಯದ ವಿಷಯ ತಿಳಿದಿರಲಿಲ್ಲವೇ? ಆದ್ದರಿಂದ ಯಾಕೆ ತಾನೇ ಅದಕ್ಕೆ ಎರಗಬೇಕು? ಕರ್ಮಕ್ಕಿಂತಲೂ ಬಲವಾದದ್ದು ಇದೆಯೇ? ಸಗರ, ಭರತ, ದ್ರುಮಸೇನರು ಉದಾರವೀರದಿಂದ ಇಡೀ ಭೂಮಂಡಲವನ್ನು ವಶಪಡಿಸಿಕೊಂಡು ಚಕ್ರವರ್ತಿಗಳಾದರು; ಅವರಿಗೆ ಹಿಂದಿನ ಜನ್ಮಗಳ ಪುಣ್ಯಬಲದಿಂದ ಸುಖ ದೊರಕಿತು. ಹೀಗಾಗಿ ಪುಣ್ಯವನ್ನು ಮಾಡಿದರೆ ಸರ್ವಸುಖಗಳನ್ನೂ ತರುವುದಿಲ್ಲವೇ? ಆಯುಷ್ಯವಿಲ್ಲದವರಿಗೆ ಮಂತ್ರೌಷಧಗಳನ್ನು ಮಾಡಿದರೂ ಪ್ರಯೋಜನವಿಲ್ಲ; ಆದ್ದರಿಂದ ಮಂತ್ರದಿಂದ ಗ್ರಹವು ತೊಲಗುತ್ತದೆಂಬ ಮಾತನ್ನು ನಂಬದೆ, ಇದಕ್ಕೆ ಪುಣ್ಯವೇ ಕಾರಣ, ಅದನ್ನು ಹೊರತು ಬೇರಿಲ್ಲ ಎಂದು ಶಾಶ್ವತಸುಖವನ್ನೀಯುವ ಸದ್ಧರ್ಮದಲ್ಲಿ ಬುದ್ಧಿಯನ್ನಿಟ್ಟು ಮಂತ್ರೌಷಧಗಳಲ್ಲಿ ಆಸೆಯನ್ನು ಬಿಡಬೇಕು.

ಯಾವುದೇ ಉದ್ದೇಶವಿಲ್ಲದೆ ಸ್ವಸಂತೋಷದಿಂದ ಮಾಡಿದ ಭಕ್ತಿಪೂರ್ವಕವಾದ ದಾನವು ಮುಂದೆ ಅಕ್ಷಯಸುಖವನ್ನು ಕೊಡುವುದು. ರಾಜ್ಯಕ್ಕೆ ಚತುರಂಗಸೈನ್ಯ, ಮಂತ್ರಾಲೋಚನೆಗೆ ಚತುರ್ವಿಧೋಪಾಯಗಳು ಒಪ್ಪುವ ಹಾಗೆ ದಾನಕ್ಕೆ ಶಾಸ್ತ್ರ ಮುಂತಾದ ದಾನಚತುಷ್ಟಯವು ಒಪ್ಪವುದು. ಪರಮಾಗಮದಿಂದಲ್ಲದೆ ಪರವನ್ನು ಪಡೆಯುವ ಉಪಾಯವಿಲ್ಲ; ಆದ್ದರಿಂದ ಶಾಸ್ತ್ರವು ಮಿಗಿಲು ಎಂದು ತಿಳಿದು ಶಾಸ್ತ್ರದಾನವನ್ನು ಮಾಡಬೇಕು. ಶ್ರುತವನಿತೆಯು ಮುಕ್ತಿಶ್ರೀಯಲ್ಲಿಗೆ ಕರೆದೊಯ್ಯುವ ದೂತಿಯೆಂದು ತಿಳಿದು ಅತಿಶಯವಾದ ಶಾಸ್ತ್ರದಾನವನ್ನು ಮಾಡಬೇಕು. ಶ್ರುತಭಾವನೆಯಿಂದ ಮತಿಯು ಧೃತವಾಗುವುದು; ನಿರ್ಮಲ ಮನಸ್ಸಿನಿಂದ ಪಾಪಹರಣವಾಗುತ್ತದೆ; ದುರಿತಕ್ಷಯದಿಂದ ಕೈವಲ್ಯಸತಿಯು ಒಲಿಯುವಳು; ಹಾಗಾಗಿ ಶಾಸ್ತ್ರದಾನದ ಮಹಿಮೆಯು ಸಾಮಾನ್ಯವೇ? ಏನಾದೀತು ಎನ್ನದೆ, ಮನಸ್ಸಿನಲ್ಲಿ ತಿರಸ್ಕಾರವಿಲ್ಲದೆ, ನನ್ನ ಕೈಲಿ ಸಾಧ್ಯವಿಲ್ಲ ಎಂದು ಕೈ ಚೆಲ್ಲದೆ, ಚಿತ್ತದಲ್ಲಿ ನಿರ್ವೇಗವು ಸ್ವಲ್ಪವೂ ಇರದೆ ಅನ್ನದಾನವನ್ನು ಮಾಡಬೇಕು. ಶ್ರೇಷ್ಠ ಮುನಿಯೊಬ್ಬನಿಗೆ ಆದರದಿಂದ ಮಾಡಿದ ಅನ್ನದಾನದ ಫಲದಿಂದಾಗಿ ಶಿರಿಷೇಣ ರಾಜನು ಶಾಂತೀಶ್ವರನಾದ; ಆದ್ದರಿಂದ ಅನ್ನದಾನವು ಸಾಮಾನ್ಯವಾದುದಲ್ಲ. ತನ್ನವರು ಎನ್ನವರು ಎನ್ನದೆ ಸತ್ಪುರುಷನು ತನ್ನನ್ನು ರಕ್ಷಿಸುವಂತೆಯೇ ಸಕಲ ಜೀವಗಳನ್ನೂ ರಕ್ಷಿಸಬೇಕು. ಅಭಯದಾನದ ಫಲವಾಗಿ ಮೃಗನಯನೆಯೂ ವಿದಗ್ಧೆಯೂ ಆದ ರುಕ್ಮಿಣೀದೇವಿಯು ಲೋಕವೇ ಬೆರಗುಗೊಳ್ಳುವಂತೆ ಯಶಸ್ಸನ್ನು ಪಡೆದಳು, ಜಗತ್ತಿಗೇ ಸೌಖ್ಯಭಾಜನೆಯಾದಳು. ವಂಚನೆಯಿಲ್ಲದೆ, ಮನಸ್ಸಿನಲ್ಲಿ ಅಸಹ್ಯಪಡದೆ, ಕಂಡವರ ಮೇಲೆ ನೆವ ಹೇಳದೆ ಚತುರ್ವರ್ಣದವರಿಗೂ ತನ್ನ ಕೈಮೀರಿ ರೋಗಗಳಿಗೆ ಔಷಧವನ್ನು ನೀಡಬೇಕು. ಔಷಧದಾನದ ಫಲವೆಂದರೆ, ಅದರಿಂದಾಗಿ ವಿಷ್ಣುವಿಗೆ ಬೇಗ ತೀರ್ಥಂಕರನಾಗುವ ಪುಣ್ಯ ಲಭಿಸಿತು; ಹಾಗಾಗಿ ತಿಳಿದವನು ಭೈಷಜ್ಯದಾನವನ್ನು ಮಾಡಬೇಕು. ಪರಮ ಆಯುಸ್ಸೂ, ಐಶ್ವರ್ಯದ ವೈಭವವೂ, ವನಿತೆಯರ ಒಲವೂ, ಕೀರ್ತಿಯೂ, ಧೈರ್ಯವೂ, ಸುಂದರ ರೂಪವೂ, ವೀರವೂ, ಭೋಗವೂ, ಶೋಭಿಸುವ ಮಹಾವೀರ್ಯವೂ, ತ್ಯಾಗಗುಣವೂ, ವಿಸ್ತರ ಸಮೃದ್ಧಿಯೂ, ತೇಜಸ್ಸೂ, ಪರಾಕ್ರಮವೂ, ಮಹೈಶ್ವರ್ಯವೂ, ದಿವ್ಯಸೌಖ್ಯೋತ್ಕರವೂ ಸಂತತ ಉತ್ಸಾಹದಿಂದ ಮಾಡಿದ ಸದ್ದಾನದಿಂದ ದೊರಕುವುದು. ಇದಕ್ಕೆ ವ್ಯತಿರಿಕ್ತವಾಗಿ, ಹೀನ ಆಯುಸ್ಸೂ, ಕಷ್ಟರೂಪವೂ, ಬಡತನವೂ, ಆಪತ್ತುಗಳೂ, ಪೀಡೆಯೂ, ವಿಜ್ಞಾನವಿಹೀನತೆಯೂ, ಕೂಳಿಲ್ಲದೆ ಮರುಗುವುದೂ, ರೋಗಗಳಿಂದ ಸಂತೋಷಹೀನನಾಗಿ ಚಿಂತಿಸುವುದೂ, ಸದಾ ಹೆಂಡಿರುಮಕ್ಕಳಿಂದ ಅವಮಾನಗೊಳ್ಳುವುದೂ ಪೂರ್ವಾರ್ಜಿತ ಪಾಪಗಳಿಂದ ಉಂಟಾಗುತ್ತದೆ.

ಹೀಗೆ ಸಂಕ್ಷಿಪ್ತವಾಗಿ ಸದ್ಧರ್ಮದ ಸ್ವರೂಪವನ್ನು ತಿಳಿಯ ಹೇಳಿದ ಸೌಧರ್ಮೇಂದ್ರನಿಗೆ ದೇವಸಮೂಹವು ನಮಸ್ಕರಿಸಿ ಹೀಗೆಂದು ಬಿನ್ನಪಗೈದಿತು: ಅನುಸರಿಸಲು ಕಷ್ಟ, ಫಲದಲ್ಲಿ ಹಿರಿದು, ಅಕ್ಷಯಲಕ್ಷ್ಮಿಯಿರುವ ನೆಲೆ ಎನಿಸಿದ ನಿರುಪಮ ನಿರ್ವಿಚಿಕಿತ್ಸೆಯು ಜಗತ್ತಿನಲ್ಲಿ ತುಂಬ ಕಠಿಣವಾದದ್ದು. ಆ ಕಾರಣದಿಂದ, ಕಲಿಕಾಲವೆಂಬ ಮಹೋರಗದ

ವಿಷದಿಂದ ತುಂಬಿದುದೂ, ಸದ್ಧರ್ಮನಿವಾರಿತವಾದುದೂ ಆದ ಭರತಕ್ಷೇತ್ರದಲ್ಲಿ ಗುಣಹೀನರು ಮಾತ್ರವಲ್ಲದೆ ಗುಣವಂತರೂ ಪಾಪಹರರೂ ಪ್ರಸಿದ್ಧರಲ್ಲದಿದ್ದರೂ ನಿರ್ವಿಚಿಕಿತ್ಸೆಯನ್ನು ಅನುಸರಿಸಿದವರ ಕತೆಯನ್ನು ತಾವು ನಮಗೆ ಹೇಳಬೇಕೆಂದು ಕೇಳಲು ದಿವಿಜರಾಜನು ಹೇಳಲು ತೊಡಗಿದನು.

ರೌರವಪುರೇಶನಾದ ಒದ್ದಾಯನ ಮಹಾರಾಜನು ನಿರ್ಮಲ, ಉದಾರಿ, ಜಿನಪಾದಪದ್ಮಗಳಲ್ಲಿ ದುಂಬಿಯಂತೆ ನೆಲೆಸಿದವನು, ಸತ್ಯಾಧಾರ, ಧರಣೀಸ್ತುತ್ಯ, ಚಾರುಚರಿತ್ರ ಹಾಗೂ ರಾಜವಂಶದವರಲ್ಲಿಯೇ ಪವಿತ್ರನಾದವನು ಈಗ ಭರತಕ್ಷೇತ್ರದಲ್ಲಿ ಪ್ರಸಿದ್ಧನಾದವನು ಎಂದು ನುಡಿದ. ಅಮರರ ಸಮೂಹವು ಅವನನ್ನು ಮೆಚ್ಚಿ ನಾನಾ ಬಗೆಯಿಂದ ಹೊಗಳತೊಡಗಿತು. ಆದರೆ ವಾಸವನೆಂಬ ದೇವನು ಮಾತ್ರ ದೇವೇಂದ್ರನ ಮಾತಿಗೆ ಬೆರಗಾದ. ನಿಶ್ಚಯಗುಣಿಗಳು ಭರತಭೂಮಿಯಲ್ಲಿದ್ದಾರೆಂಬುದು ಅಚ್ಚರಿಯ ವಿಷಯ; ಆದರೆ ನಿಶ್ಚಲಗುಣಿಗಳನ್ನಲ್ಲದೆ ದುಶ್ಚರಿತ್ರರನ್ನು ಹೊಗಳುತ್ತಾರೆಯೇ? ಇಲ್ಲ. ಭರತಕ್ಷೇತ್ರದಲ್ಲಿ ಈಗ ಕುದೃಷ್ಟಿಗಳನ್ನಲ್ಲದೆ ಸದೃಷ್ಟಿಗಳನ್ನು ಕಾಣಲು ಅಸಾಧ್ಯ; ಚಂಚಲಚಿತ್ತರನ್ನಲ್ಲದೆ ದೃಢಚಿತ್ತರನ್ನು ನೋಡಲರಿದು; ಕುಮಾರ್ಗದಲ್ಲಿ ಆಸಕ್ತರಾದವರನ್ನಲ್ಲದೆ ಸನ್ಮಾರ್ಗಾವಲಂಬಿಗಳ ಬಗ್ಗೆ ಕೇಳಲಾರೆವು. ಇಂದ್ರನ ನುಡಿಗಳನ್ನು ಕೇಳಿ ನನಗೆ ಆಶ್ಚರ್ಯವುಂಟಾಗುತ್ತಿದೆ. ಇದರ ಸಾರಾಸಾರವನ್ನು ವಿಚಾರಿಸಿ ನೋಡಬೇಕೆಂದು ದೇವಲೋಕದಿಂದ ಇಳಿದು ರೌರವಪುರಕ್ಕೆ ಬಂದು ವಾಸವನು ಋಷಿಯ ರೂಪವನ್ನು ಕೈಗೊಂಡ.

ಅವನು ಹೀನರೂಪವನ್ನು ಧರಿಸಿದ: ಕೃಶವಾದ ದೇಹ, ಶಕ್ತಿಗುಂದಿದ ನಡು, ಭೋರೆಂದು ಸುರಿಯುವ ಕಣ್ಣೀರು, ಕೀವು–ಕೊಳೆಗಳಿಂದ ತುಂಬಿದ ಹುಣ್ಣುಗಳು, ಒಡೆದು ಒಂದೇ ಸಮನೆ ಸೋರುವ ರಕ್ತದಿಂದ ಕೂಡಿದ ಕುಂಟುಗಾಲು, ಕಂದಿದ ಮೈ, ತೊನ್ನಿನ ಕಾರಣದಿಂದ ಉಡುಗಿದ ಕೈಬೆರಳುಗಳು, ಕುಗ್ಗಿದ ಧ್ವನಿ ಅವನದಾಗಿತ್ತು. ಅಲ್ಲದೆ, ಚಿಲುಮೆಯಂತೆ ಮೈಯಿಂದ ಚಿಮ್ಮುವ ಲಸಿಗೆ, ದುರ್ಜನರ ರೀತಿಯಂತೆ ಡೊಂಕಾಗಿ ಇಳಿಬಿದ್ದ ಜಡೆಗಳು, ಕುಟಿಲನ ಚಿತ್ತದಂತೆ ಬಹು ಪ್ರಕಾರವಾದ ಮೈಬಣ್ಣ, ಒಂಟೆಯ ಕೊರಳಿನಂತೆ ನೀಳವಾದ ಕೊರಳು, ನೀತಿವಿದನಲ್ಲದ ರಾಜನ ನಾಡಿನಂತೆ ಸಣ್ಣ ಕಾಲುಗಳು, ತಿದಿಯ ಹಾಗೆ ಊದಿಕೊಂಡ ಹುಣ್ಣುಗಳು, ಮುಖರೋಗದವರಂತೆ ಒಂದೇ ಸಮನೆ ಸುರಿಯುವ ಶ್ಲೇಷ್ಮ, ಕಣ್ಣ ರೋಗಿಗಳ ಹಾಗೆ ಕೊಳೆಯಾದ ಕಣ್ಣುಗಳು, ಮಾಗಿಯ ದೇಸಿಗನ ಹಾಗಿರುವ ಬೂದಿ ಬಳಿದುಕೊಂಡ ದೇಹ, ಎರೆಮಣ್ಣಿನ ಕೆರೆಯಂತೆ ಬತ್ತಿದ ಗಲ್ಲ, ಆನೆ ತುಳಿದ ಸಂಬಳಿಗೆಯ ಹಾಗಿರುವ ಬತ್ತಿದ ಮೂಗು, ಹೂಲಿಯ ಹಣ್ಣುಗಳ ಹಾಗೆ ಸುರಿಯುವ ಕೀವು, ಮುದುಕರದಂತೆ ಜೊಲ್ಲು ಸುರಿಯುವ ಬಾಯಿ, ಕೀವು ಸುರಿಯುವ ಕಿವಿ, ಬೇತಾಳನ ಹಾಗೆ ಒಳ ಹೋಗಿರುವ ಹೊಟ್ಟೆ, ಹಡಿಕೆಯ ಹಾಗೆ ದುರ್ವಾಸನೆಯಿಂದ ಕೂಡಿದ ದೊಡ್ಡ ಹುಣ್ಣುಗಳು, ಕೆಮ್ಮುವವರ ಹಾಗೆ ಏರು ಶ್ವಾಸ, ಗುಡಿಸಿಲುನ ಹಾಗೆ ಬಾಗಿದ ಬೆನ್ನು, ಹುಟ್ಟಿನ ಹಾಗೆ ಬೆರಳುಗಳಿಲ್ಲದ ಕೈಗಳು – ಇವುಗಳಿಂದ ಕೂಡಿ, ಬ್ರಹ್ಮನೇ ಸೃಷ್ಟಿಸಿದನೋ ಎಂಬಂತಿದ್ದ, ಮೂರು ಲೋಕಗಳ ಬೀಭತ್ಸವೆಲ್ಲ ಕೂಡಿದ್ದ ಅದ್ಭುತವೇಷವನ್ನು ಅವನು ಧರಿಸಿದ್ದ. ಹುಣ್ಣುಗಳ ದುರ್ಗಂಧಕ್ಕೆ ಆಸೆಪಟ್ಟು ಅದರ ಸುತ್ತ ನೊಣಗಳು ಜುಮ್ಮೆಂದು ಸುಳಿದಾಡುತ್ತ ನೋಡಿದ ಜನಗಳಿಗೆ ಅಸಹ್ಯ ಹುಟ್ಟಿಸುತ್ತಿತ್ತು.

ಇಂತಹ ವಿಕಾರ ರೂಪಿನಿಂದ ಕೃತಕ ಋಷಿಯಾಗಿ ವಾಸವನು ರೌರವಪುರದಲ್ಲಿ ಚಂದ್ರಗತಿಯಿಂದ ಚರಿಗೆಗೆಂದು ಬಂದ. ಕಂಡವರೆಲ್ಲ ಜಂತುಹುಳು ಹೆಚ್ಚಾದವರಂತೆ ಓಕರಿಸುತ್ತಿದ್ದರು, ಬಯಕೆಯ ಹೆಂಗಸರಂತೆ ಉಗುಳುತ್ತಿದ್ದರು, ನೀರಲ್ಲಿ ಮುಳುಗುವವರಂತೆ ಮೂಗು ಮುಚ್ಚಿಕೊಳ್ಳುತ್ತಿದ್ದರು, ಬೆಳೆದ ಪೈರಿನಂತೆ ತಲೆದೂಗುತ್ತಿದ್ದರು, ಅಳಿಯನನ್ನು ಕಂಡ ಅತ್ತೆಯಂತೆ ದೂರ ಸರಿಯುತ್ತಿದ್ದರು, ಋಷಿಗಳಂತೆ ಕೊಕ್ಕರಿಸುತ್ತ, ಓಡಿ ಬಂದ ಬಂಟನನ್ನು ಕಂಡ ಒಡೆಯನಂತೆ ಛೀ ಎನ್ನುತ್ತ, ದಾಳಿಯನ್ನು ಕಂಡವರಂತೆ ಓಡುತ್ತ, ಶತ್ರುವನ್ನು ಕಂಡವರಂತೆ ಮುಖ ತಿರುಗಿಸುತ್ತ, ಮುದುಕ ವಿಟನನ್ನು ಕಂಡ ಸೂಳೆಯಂತೆ ಒಳನಡೆಯುತ್ತ, ಕೆಟ್ಟ ಜಾಗದಲ್ಲಿ ಸೆರೆ ಸಿಕ್ಕವರಂತೆ ಉಮ್ಮಳಿಸುತ್ತ, ಮುದುಕನ ರೋಗಶುಶ್ರೂಷೆ ಮಾಡುವ ಯುವತಿಯಂತೆ ಹೇಸುತ್ತ, ಬುಟ್ಟಿಯೊಳಗಿನ ಹಾವಿನಂತೆ ಮಿಡುಕುತ್ತ, ಹಗರಣವನ್ನು ನೋಡುವವರಂತೆ ನಗುತ್ತ

ಸಾಗುತ್ತಿದ್ದರು. "ಈ ತೊನ್ನನಿಗೆ, ಕಷ್ಟಜೀವಿಗೆ ಈ ವೇಷವೇಕೆ? ಅವನ ಮೈಯನ್ನು ಕಂಡವನಾವನು ಪ್ರೀತಿಯಿಂದ ಅನ್ನವನ್ನು ನೀಡಿಯಾನು" ಎಂದು ಜನ ತಮ್ಮಲ್ಲೇ ನಕ್ಕರು.

ಹೀಗೆ ಜನರನ್ನು ಹಾಯ್ದುಕೊಂಡು ಸ್ವಲ್ಪ ದೂರ ಬಂದಾಗ, ಅಲ್ಲಿದ್ದ ಒಬ್ಬ ಹುಟ್ಟು ಮೂರ್ಖನು, ಅವನನ್ನು ಕಂಡು "ದೇಹ ಕೆಟ್ಟಿದೆ, ಮೈ ಬಡಕಲಾಗಿದೆ, ಕಾಲುಕೈಗಳ ಬೆರಳುಗಳು ತಮ್ಮ ಜಾಗದಿಂದ ಸರಿದಿವೆ. ಸತ್ತರೆ ಮತ್ತೆ ಹುಟ್ಟುವುದಿಲ್ಲವೇ, ಬದುಕುವ ಮೋಹ ಇವನಿಗೇಕೇ?" ಎಂದುಕೊಳ್ಳುತ್ತ, "ದುರ್ಗತಿಯಿಂದ ಕೂಡಿದವನಿಗೆ ಈ ಮಾತು ತಕ್ಕನಾದುದು" ಎಂದು ನಗುತ್ತ ಮುನ್ನಡೆದ. ಹಚ್ಚ ಹಸಿ ಎಗ್ಗರು, "ಈ ದುಃಖ ನಿನಗೇಕೆ ಹೇಳು; ಮನಸ್ಸನ್ನು ಗಟ್ಟಿ ಮಾಡಿಕೊಂಡು, ಬಾಳುವ ಆಸೆಯೊಂದನ್ನು ಬಿಟ್ಟು, ವ್ಯಾಮೋಹವನ್ನು ತೊರೆದು, ಕಣ್ಣು ಮುಚ್ಚಿ, ವೀರರು ಹೊಗಳುವಂತೆ ಬೆಂಕಿಗೋ ನೀರಿಗೋ ಬಿದ್ದು ಸತ್ತು ಈ ದುಃಖಾಗ್ನಿಯನ್ನು ನೀಗಿಕೊಳ್ಳಬಾರದೆ? ಇದೇನು ಶಾಶ್ವತವಾದ ಬದುಕೇ?" ಎಂದರು. ಅವರ ಮಾತನ್ನು ಕೇಳಿ, "ಸಂಸಾರಸಮುದ್ರದಲ್ಲಿ ಓಲಾಡುತ್ತಿರುವವರಿಗೆ ಇಂಥ ಮಾತು ಯೋಗ್ಯವಾದುದೇ!" ಎಂದು ಋಷಿಯು ಮುಂದೆ ಸಾಗಿದ. ವಿಚಾರಪರರು ಇವನನ್ನು ನೋಡಿ, "ಹಸಿವು ನೀರಡಿಕೆ ದುರ್ವ್ಯಸನಗಳು ತೊನ್ನರಾದವರಿಗೆ ಹೆಚ್ಚು; ಈ ಜೈನಮಾರ್ಗವೋ ತುಂಬ ಕಷ್ಟಕರವಾದುದು; ಅದನ್ನು ತಾಳಿ, ಹಸಿವು ನೀರಡಿಕೆ ದುರ್ವ್ಯಸನಗಳನ್ನು ಧೈರ್ಯದಿಂದ ಸಹಿಸಿಕೊಂಡು ಶುದ್ಧಾಚಾರದಿಂದ ನಡೆಯುವ ಗುಣದಿಂದಾಗಿ ಈ ಯೋಗಿನಾಥನು ಕೃತಾರ್ಥನಾಗಿದ್ದಾನೆ" ಎಂದುಕೊಂಡರು. ಅದನ್ನು ಕೇಳಿ, "ಕರ್ಮೋಪಶಮನ ಉಳ್ಳವರಿಗೆ ಈ ಮಾತು ತಕ್ಕುದು" ಎಂದು ಮುಂದಕ್ಕೆ ಸಾಗಿದ. ಹುಟ್ಟು ಕರುಣೆಗಳಾದವರು ಅವನನ್ನು ಕಂಡು, "ಒಂದು ಕುರು ಎದ್ದರೇ ಸಹಿಸಲಾಗುವುದಿಲ್ಲ; ಆದರೆ ಈ ಮಹಾಪುರುಷನು ನಿಷ್ಠುರವಾದ ಈ ಕಷ್ಟಗಳನ್ನೆಲ್ಲ ಸಹಿಸಿಕೊಂಡು ಹೇಗಿದ್ದಾನೆಯೋ" ಎಂದುಕೊಂಡು ಕೈಮುಗಿದರು. "ದೇವಗತಿಗೆ ಸಲ್ಲುವ ಈ ಲಘುಕರ್ಮಿಗಳಿಗೆ ಇದು ತಕ್ಕ ಮಾತು" ಎಂದು ಮುಂದೆ ನಡೆದ.

ದಾರಿಯಲ್ಲಿ ಹೋಗುತ್ತಿದ್ದ ಶ್ರಾವಕರು, "ಈ ರೋಗದ ವೇದನೆಗೆ ಬೆಚ್ಚದೆ, ತನಗೆ ಇಷ್ಟವಾದ ಆಹಾರವನ್ನು ಹಾಕಿದರೆ ಹಲ್ಲು ಕಿರಿದು ಆತುರಪಡದೆ, ಕಂಡವರನ್ನೆಲ್ಲ ಸೈರಣೆಗೆಟ್ಟು ಬೈಯದೆ, ಜಿನಾಗಮದ ಕ್ರಮ ತಪ್ಪದೆ, ಹೀಗೆ ವೀರವ್ರತವನ್ನು ತೊಟ್ಟ ಇವನನ್ನು ಎಷ್ಟು ಹೊಗಳಿದರೂ ಸಾಲದು" ಎಂದು ಬಣ್ಣಿಸುವವರನ್ನು ನೋಡಿ, "ನೇರವಾದವರ ರೀತಿ ಸುರಲೋಕ ಎಂಬುದು ತಪ್ಪುವುದೇ!" ಎಂದುಕೊಂಡು ಮುಂದೆ ಹೋಗಲು ಕೆಲವು ದುರ್ಜನರೊಡನೆ ಒಬ್ಬ ಚಪಲನು ಹೀಗೆಂದ: "ಈ ಲೋಕದಲ್ಲಿ ಇಂಥ ಕುತ್ತು ಬಂದು ನಮೆಯುವವರನ್ನು ನಾನು ಕಂಡಿದ್ದೇನೆ; ಆದರೆ ಇವನ ಹಾಗೆ ಮೈಯೆಲ್ಲ ಆಕಾರಗೆಟ್ಟವನನ್ನು ಕಾಣೆ." ಅದನ್ನು ಕೇಳಿ, "ದುರ್ಜನರ ಸಂಗದ ಈತನಿಗೆ ಇದಲ್ಲದೆ ಬೇರೆ ಮಾತು ಬರುತ್ತದೆಯೇ?" ಎಂದುಕೊಂಡ. ಮುಂದೆ ಋಷಿಗಳ ಮಾರ್ಗವನ್ನು ಅರಿತ ಕೆಲವರು, "ಕರುಣೆಯಿಂದ ಕಂಡವರು ಈ ರೋಗಗಳಿಗೆ ಪ್ರೀತಿಯಿಂದ ಶುಶ್ರೂಷೆ ಮಾಡುವುದೂ ಕಷ್ಟವೇ. ಈ ಮುನಿಪುಂಗವರ ರೀತಿ ನಮಗೆ ಚೆನ್ನಾಗಿ ಗೊತ್ತು: ಭಕ್ತಿಯಿಂದ ನೂರು ಸಲ ಅನುಭವಿಸುತ್ತಾರೆ, ಹಾಗೆಯೇ ಆಸೆಪಡದೆ ಎಲ್ಲವನ್ನೂ ಬಿಟ್ಟುಬಿಡುತ್ತಾರೆ" ಎಂದರು. ಮತ್ತೊಂದೆಡೆಯಲ್ಲಿ ನೆರೆದಿದ್ದ ನೀತಿವಿದರು ಹೀಗೇಂದು ಮಾತಾಡಿಕೊಂಡರು: "ಅರಸರಿಂದಾಗುವ ಬಾಧೆಗಳಿಂದಲೂ, ಇಷ್ಟರಾದವರ ಅಗಲಿಕೆಯಿಂದಲೂ, ಒಲ್ಲೆನೆಂಬ ಹೆಂಡತಿಯ ನೆವದಿಂದಲೂ, ದರಿದ್ರತೆಯಿಂದಲೂ, ಹಿಂಡುವ ಕುತ್ತುಗಳಿಂದಲೂ ಮಹೋಗ್ರವಾದ ಕರ್ಮಫಲೋದಯದಿಂದ ದುಃಖತತಿಯುಂಟಾಗುವುದು ಆಶ್ಚರ್ಯಕರವೇನಲ್ಲ; ಇಂತಹ ರೋಗದ ನಡುವೆಯೂ ತಪಸ್ಸನ್ನು ಕೈಗೊಳ್ಳುವ ಈ ಮಹಾಪುರುಷನೆ ಧನ್ಯ."

ಹೀಗೆ ನಾನಾ ಬಗೆಯಿಂದ ಮಾತಾಡಿಕೊಳ್ಳುವ ಜನರ ಮಾತುಗಳನ್ನೂ, ಹಲವು ಬಗೆಯ ಪರಿಣಾಮಗಳನ್ನೂ ಕೇಳಿ ಕಂಡು ತನ್ನಲ್ಲಿ ಹೀಗೆಂದುಕೊಂಡ: "ಎಲ್ಲ ವೃಕ್ಷಗಳಿಗೂ ಮರ ಎಂಬ ಹೆಸರು ಸಮಾನ; ಆದರೆ ಎಲ್ಲ ಮರಗಳ ಹಣ್ಣುಗಳೂ ಸವಿಯಲ್ಲಿ ಒಂದೇ ಬಗೆಯವಾಗಿರಲು ಸಾಧ್ಯವೇ? ಹಾಗೆಯೇ ಮನುಷ್ಯರೆಲ್ಲರಿಗೂ ಮಾನವರು ಎಂಬ ಹೆಸರು

ಸಮಾನವಾದರೂ, ಅವರ ಮಾತುಗಳೂ ಪರಿಣಾಮಗಳೂ ಬೇರೆಯಾದವು. ಪಾದರಿ ಹೂವಿನ ಪರಿಮಳದಿಂದ ನೀರು ಸುಗಂಧವಾಗುತ್ತದೆ; ಬೇವಿನ ಹೂವಿನ ದೆಸೆಯಿಂದ ಕಹಿಯಾಗುತ್ತದೆ. ಅಂತೆಯೇ ಲೋಕದ ಮನುಷ್ಯರಿಗೆ ಶುಭಕರ್ಮದಿಂದ ಸುಬುದ್ಧಿಯೂ. ಅಶುಭ ಕರ್ಮದಿಂದ ದುರ್ಬುದ್ಧಿಯೂ ಉಂಟಾಗುತ್ತದೆ" ಎಂದು ಆಲೋಚಿಸುತ್ತ ಆ ಕೃತಕ ಮುನಿಯು ಪರಮ ಜಿನೇಂದ್ರಚರಣಕಮಲದಲ್ಲಿ ತುಂಬಿಯಂತಿದ್ದ ಒಡ್ಡಾಯನ ಭೂವರನ ಅರಮನೆಯ ಕಡೆಗೆ ನಿಧಾನವಾಗಿ ನಡೆದ.

ಆ ಸಮಯದಲ್ಲಿ, ವರರತ್ನದೀವಿಗೆಗಳು ಬೆಳಕು ಸುತ್ತಲೂ ಮಿಂಚನ್ನು ಉಂಟುಮಾಡಿದಂತಿರಲು, ಸುಂದರವಾದ ವಿರಚನೆಯ ಸಿಂಹಾಸನದಲ್ಲಿ ರಾಜನು ಮಂಡಿಸಿದ್ದನು. ಇದು ಪೂರ್ವ ದಿಕ್ಕಲ್ಲ, ಇಂದ್ರದಿಕ್ಕು; ಇದು ಮೂಡಲಲ್ಲ, ಇದರ ಮೇಲೆ ಅಂಬುಜಸಖನು ಮನೋನುರಾಗದಿಂದ ಏರಿದ್ದಾನೆ; ಇವನು ಚಂದ್ರನಾದರೂ ಸೂರ್ಯನ ಸೌಂದರ್ಯದಿಂದ ಏರಿದ್ದಾನೆ ಎನ್ನಿಸುವಂತೆ ರಾಜನು ವಿರಾಜಿಸಿದ. ತೊಳಗುವ ಚಂದ್ರಮಂಡಲವನ್ನು ನಕ್ಷತ್ರಗಣವು ಸುತ್ತುವರಿದಂತೆ, ರಾಜಕುಮಾರರೂ ಸಾಮಂತರೂ ಪಂಡಿತರೂ ರಾಜನನ್ನು ಸುತ್ತುವರಿದಿದ್ದರು. ಎದೆಗಳ ಮೇಲೆ ಮುತ್ತಿನ ಹಾರ, ಸೋರ್ಮುಡಿಯಲ್ಲಿ ಹೊಸ ಜಾಜಿಯ ಮಾಲೆ, ನೊಸಲಲ್ಲಿ ಚಂದದ ಬೊಟ್ಟು, ಮೈಮೇಲೆ ದುಕೂಲ – ಇವುಗಳಿಂದ ಕೂಡಿದ ಅಂತಃಪುರವಾಸಿನಿಯರು ಅಲ್ಲಿ ಶೋಭಿಸಿದರು.

ರಾಜನಿಗೆ ಸುಂದರಿಯರಾದ ಸೇವಕಿಯರು ಹೊನ್ನ ಚಾಮರದಿಂದ ಗಾಳಿ ಬೀಸುತ್ತಿದ್ದರು; ಹಾರವು ಪಡೆವಳ, ಪೆರ್ಮೊಲೆಯು ಸೈನ್ಯ, ಹೊನ್ನ ತೊಡುಗೆಯ ಝಣತ್ಕಾರ ದುಂದುಭಿಸ್ವನ, ಕುಡಿನೋಟಗಳು ಹರಿತವಾದ ಬಾಣಗಳು, ಹುಬ್ಬುಗಳು ಕಡುವಿಲ್ಲು, ಹೊದ್ದ ಬಟ್ಟೆಯ ಸೆರಗು ಧ್ವಜ – ಇವುಗಳಿಂದ ಕೂಡಿ ಆ ಸ್ತ್ರೀಯರು ಕಾಮನ ಪಡೆಯಂತಿದ್ದರು. ಬೆಟ್ಟದಾವರೆ ಹೂವಿನ ಕಾಂತಿಯ ಮೈ, ದುಂಬಿಗಳ ಹೊಳಪಿನ ಕೂದಲು, ಹೊಸ ಚಿಗುರಿನಂದದ ಕೈಬೆರಳುಗಳು, ಕೋಗಿಲೆಯ ಕುಕಿಲಿನಂತಹ ದನಿ, ಮೊಗ್ಗುಗಳ ಕಾಂತಿಯುಳ್ಳ ದಂತಪಂಕ್ತಿ, ಬಳ್ಳಿಗಳಂತಹ ನಳಿದೋಳುಗಳು – ಇವುಗಳಿಂದ ರಂಜಿಸುವ ವಿಲಾಸಿನೀನಿಕರದಿಂದ ಆ ಓಲಗವು ಸುಗ್ಗಿಯನ್ನು ಹೋಲುತ್ತಿತ್ತು. ಸುಂದರವಾದ ವಿಶಾಲ ನೇತ್ರಗಳು ಬಾಣಗಳನ್ನೂ, ಮೊಲೆಯು ಚಕ್ರವನ್ನೂ, ಮುಡಿಯು ಗುರಾಣಿಯನ್ನೂ, ನಳಿದೋಳು ಹರಿತವಾದ ಕತ್ತಿಯನ್ನೂ ಹೋಲುತ್ತಿದ್ದ ರಮಣೀಸಮೂಹದಿಂದ ಕೂಡಿದ ಓಲಗವು ಕಾಮನ ಶಸ್ತ್ರಭಂಡಾರದಂತೆ ಕಾಣುತ್ತಿತ್ತು. ಹೊಳೆಯುವ ವಿಶಾಲಲೋಚನದ ಕಾಂತಿಯ ಬೆಳ್ಪು, ನೀಳವಾದ ಕೂದಲಿನ ಕಪ್ಪು, ತುಟಿ ಮತ್ತು ಕೈಗಳ ಒಗ್ಗೂಡಿದ ಕೆಂಪು – ಈ ಬಣ್ಣಗಳು ಅನಂಗರಾಜನ ವಿನೋದದ ಚಿತ್ರಪಟದಂತೆ ಒಪ್ಪಿದವು. ತರಳಾಕ್ಷಿಯರಿಂದ ಕೂಡಿ ನೂರ್ಮಡಿ ಚೆಲುವನ್ನು ಪಡೆದು ಇದು ಆದಿಶೇಷನ ಓಲಗಕ್ಕೂ ಸುರಪತಿಯ ಓಲಗಕ್ಕೂ ಮಿಗಿಲಾದದ್ದು ಎನ್ನುವಂತೆ ಶೋಭಿಸಿತು. ರಸಾಯನದ ಕೂಪಕ್ಕೆ ರಸದ ಮಳೆ ಸುರಿಯುವ ಹಾಗೆ ಆ ಸುಂದರ ಆಸ್ಥಾನದಲ್ಲಿ ರಸಗೀತವು ಹೊಮ್ಮಿತು.

ಇವು ಮಾಳವನು ಭಯದಿಂದ ಕಳಿಸಿರುವ ಮತ್ತೇಭಗಳು; ಇವು ಪಲ್ಲವರಾಜನು ತನ್ನ ಅಹಂಕಾರವನ್ನು ಬಿಟ್ಟು ವಿನಯವನ್ನು ತೋರಿ ಕಳಿಸಿರುವ ಜಾತ್ಯಶ್ವಗಳು; ಈ ವಿವಿಧ ರತ್ನಗಳು ತನ್ನ ವೈಭವಗರ್ವವನ್ನು ತೊರೆದು ಚೋಳನು ಕಳಿಸಿಕೊಟ್ಟವು; ಇವಾದರೋ ಕಾಶ್ಮೀರೇಶ್ವರನು ಒಲಿದು ಕಳಿಸಿರುವ ದಿವ್ಯವಸ್ತ್ರಗಳು ಹಾಗೂ ವಸ್ತುಗಳು – ಎಂದು ಪರದೇಶಾಧಿಪತಿಗಳು ಕಳಿಸಿದ್ದ ಕಪ್ಪವನ್ನು ಅವುಗಳನ್ನು ತಂದ ದೂತರು ತೋರಿಸುತ್ತಿದ್ದರು. ಮನ್ಮಥರಾಜನು ನೋಟಕಜನಕ್ಕೆ ಚೆನ್ನಾಗಿ ಮರುಳು ಮಾಡುತ್ತಿರುವಂತೆ ನಾನಾ ಬಗೆಯ ನೃತ್ಯಗಳು ಆ ಓಲಗದಲ್ಲಿ ನಡೆಯುತ್ತಿದ್ದವು. ವಿಲಾಸಿನಿಯರ ಸಮೂಹ, ಸಾಮಂತರ ಗುಂಪು, ಭವ್ಯರ ಆನೀಕ, ರಾಜರುಗಳು, ವಿದ್ವಜ್ಜನರು, ಜಾಣರು, ಶೂರರು, ಉದಾರರು, ವೀರರುಗಳಿಂದ ಆ ಮಹಾರಾಜನ ಒಡ್ಡೋಲಗವು ಒಪ್ಪಿತು.

ಹೀಗೆ ಅಮರೇಂದ್ರಲೀಲೆಯಿಂದ ಓಲಗವಿತ್ತಿದ್ದ ಒಡ್ಡಾಯನ ಮಹಾರಾಜನು ತನಗೆ ಮುಕ್ತಿಲಕ್ಷ್ಮಿಯು ಕಳಿಸಿದ್ದ ದೂತನಂತೆ ಬರುತ್ತಿದ್ದ ಕೃತಕ ಋಷಿಯನ್ನು ಕಂಡಾಗ, ಅವನ ಬಗ್ಗೆ ತಕ್ಷಣವೇ ಗೌರವವು ಹುಟ್ಟಿತು. ತನ್ನ ಕೈಗಳನ್ನು ಮುಗಿದು

ಮುನೀಂದ್ರನನ್ನು ಎದುರುಗೊಳ್ಳಲೆಂದು ಭಕ್ತಿಪೂರ್ವಕವಾಗಿ ದುಕೂಲವನ್ನು ಹೊದಿಸಿದ್ದ ಉತ್ತಮಪೀಠದೊಂದಿಗೆ ಬಂದ. ಶ್ರೇಷ್ಠಳಾದ ಮುಕ್ತಿಶ್ರೀಯಲ್ಲಿಗೆ ಸರ್‍ರನೆ ಏರಿ ಹೋಗಲು ಏಣಿಯನ್ನು ಹಿಡಿಯುವಂತೆ ಮಹಾರಾಜನು ಮುನೀಂದ್ರನ ಕಾಲುಗಳನ್ನು ಹಿಡಿದ. ತಾನು ಗುಣವೆಂಬ ನಿಧಿಯನ್ನು ಗುರುತಿಸುವ ದೀಪದ ಕುಡಿಯಾಗಿದ್ದುದರಿಂದ ಆ ಗುಣನಿಲಯನ ಪಾದಗಳಿಗೆರಗಿ, ಅವನನ್ನು ಕರೆತಂದು ಉಚ್ಚಾಸನದಲ್ಲಿ ಕುಳ್ಳಿರಿಸಿದ. ಕೆಲವರು ಮುನಿಯಿಂದ ಹೊಮ್ಮುತ್ತಿದ್ದ ದುರ್ಗಂಧವನ್ನು ಸಹಿಸಲಾರದೆ ಅಲ್ಲಿಂದ ಜಾರಿಕೊಂಡರು; ಎದ್ದು ಹೋದರೆ ರಾಜನು ಕೋಪದಿಂದ ತಮ್ಮನ್ನು ಕೊಲ್ಲಬಹುದೆಂದು ಅಂಜಿ ಇತರರು ಇದ್ದಲ್ಲೇ ಉಳಿದುಕೊಂಡರು. ಮೂಗು ಒಡೆದುಹೋಗುವಂತಿದ್ದುದರಿಂದ ಕೆಲವರು ತಲೆ ಬಗ್ಗಿಸಿಕೊಂಡು ನೋಡಲಾರದೆ ಇದ್ದರು; ಮತ್ತೆ ಕೆಲವರು ಮನಸ್ಸಿನಲ್ಲೇ ಅಸಹ್ಯಪಟ್ಟುಕೊಂಡು ತಡೆದುಕೊಳ್ಳಲಾರದೆ ತಮ್ಮ ಮೂಗುಮುಚ್ಚಿಕೊಂಡರು. ದುರ್ಗಂಧವನ್ನು ಸಹಿಸಿಕೊಳ್ಳಲಾಗದೆ ಸೇವಕರು ಶಿಕ್ಷೆಗೊಳಗಾದವರಂತೆ ಹಿಂದೆ ಸರಿದರು; ಪರಿಚಾರಕಿಯರು ತಡೆಯಲಾರದೆ ನುಸುಳಿಕೊಂಡರು; "ಇದೇನು ನಾಚಿಕೆಯ ಹುತ್ತ" ಎಂದು ಬಾಣಸಿಗರು ಹೋದರು; 'ಅಸಾಧ್ಯ' ಎಂದು ಕರವಾಳಿಗರು ಹಿಂದೆ ಸರಿದರು; ಪೀಕದಾನಿ ಹಿಡಿದವರು ಕಷ್ಟಪಡುವ ಪಾತ್ರದವರಂತೆ ಉಮ್ಮಳಿಸಿದರು; ಚಾಮರ ಹಾಕುತ್ತಿದ್ದವರು ಕಣ್ಣಲ್ಲಿ ಹೊಗೆ ತುಂಬಿಕೊಂಡ ಹಾಗೆ ನೋಡಲಾರದಾದರು; ಅರಸಿಯರು ಪರವಶರಾದಂತೆ ಗೋಡೆಗೆ ಒರಗಿಕೊಂಡರು: ರಾಣಿಯರು ತಪ್ಪು ಮಾಡಿದವರಂತೆ ಮಾತಾಡದೆ ಕುಳಿತಿದ್ದರು. ವಿಲಾಸಿನಿಯರು ವಿಲಾಸಗೆಟ್ಟವರಂತೆ ಕಳೆಗುಂದಿದರು; ನಾರಿಯರು ತಡೆದುಕೊಳ್ಳಲಾರದೆ ಬೆಪ್ಪರಂತೆ ಕಣ್ಣು ಕಣ್ಣು ಬಿಟ್ಟರು; ಸಖಿಯರು ತೂತುಬಿದ್ದ ಮಡಕೆಯಂತೆ ಜಾರಿಕೊಂಡರು. ಪ್ರಭಾವತಿ ಮಹಾರಾಣಿಯು ತನ್ನಲ್ಲಿ, "ಶ್ರೇಷ್ಠವಾದ ರತ್ನವೊಂದು ಹೇಸಿಗೆಯಲ್ಲಿ ಬಿದ್ದಿರಲು ಕೀಳೆಂದು ಬಿಸುಡಬಹುದೇ? ತಪಸ್ಸಿನಲ್ಲಿ ಹಿರಿಯರಾದವರ ರೋಗಕ್ಕೆ ಜಿನೇಂದ್ರಮಾರ್ಗದ ಆಂತರ್ಯವನ್ನು ಬಲ್ಲವರು ಹೇಸಿಕೊಳ್ಳಬಹುದೇ?" ಎಂದುಕೊಂಡು ಅಸಹ್ಯಪಡದೆ, ದರಿದ್ರನು ನಿಧಿಯನ್ನು ಕಂಡಂತೆ ಒಬ್ಬಳೇ ಸಂತೋಷದಿಂದ ನಿಂತಳು. ಸಮ್ಯಕ್ತ್ವಚೂಡಾಮಣಿಯಾದ ಒಡ್ಡಾಯನನು ನವವಿಧಪುಣ್ಯಗಳಿಂದಲೂ, ಸಪ್ತಗುಣಗಳಿಂದಲೂ ಕೂಡಿ ಮುನಿಗೆ ಆಹಾರದಾನ ಮಾಡಿದ. ಮುನಿಯು ಕೊರಳವರೆಗೆ ಊಟ ಮಾಡಿದ. ಶರೀರವು ದಣಿದು, ಕಣ್ಣುಗಳು ಹೊಮ್ಮಿ, ಮೇಲುದವನ್ನು ತೆಗೆಯಲಾರದೆ ಆ ಮುನಿಪನು ಜೋಲಿ ಹೊಡೆಯುತ್ತ 'ಓ' ಎಂದು ಓಕರಿಸಿ, ಬೆಟ್ಟದಿಂದ ಝುರಿಯು ಇಳಿಯುವ ಹಾಗೆ ನೃಪೇಶ್ವರನ ಮೇಲೆ ಕಾರಿಕೊಂಡುಬಿಟ್ಟ,

ವಾಂತಿಯು ರಾಜನ ತಲೆಯ ಮೇಲಿನಿಂದ ಕೊರಳು, ಎದೆಗಳ ಮೂಲಕ ಪಾದಗಳವರೆಗೂ ಇಳಿದು ವ್ಯಾಪಿಸಿಕೊಂಡಿತು. ಕೊಳೆ, ಲೋಳೆಗಳು ವಜ್ರಲೇಪದ ಹಾಗೆ ಮಹಾರಾಜನ ಮೈಮೇಲೆಲ್ಲ ಮೆತ್ತಿಕೊಂಡಿತು. ಮೋಕ್ಷಲಕ್ಷ್ಮಿಯು ಸದ್ಗತಿಗೆ ಅಡ್ಡವಾದ ಕರ್ಮರಾಜನ ಸೇನೆಯನ್ನು ಮುರಿದು ಬಂದು ನನ್ನಲ್ಲಿ ಸೇರು ಎಂದು ಪ್ರೀತಿಯಿಂದ ಕಳಿಸಿದ ವಜ್ರಕವಚದಂತಿದ್ದ ಲೋಳೆಗೆ ಅಸಹ್ಯಪಡದೆ ರಾಜನು ಮುನಿಪತಿಗೆ ವಾಂತಿಯಾದುದಕ್ಕೆ ತುಂಬ ನೊಂದುಕೊಂಡ. ಮುನೀಂದ್ರನ ಇಚ್ಛೆಯನ್ನು ಸರಿಯಾಗಿ ಅರಿಯದ ಮಹಾಪಾತಕಿ ತಾನು, ತನಗೆ ಸರಿ ತೋರಿದಂತೆ ಬಡಿಸಿದುದರಿಂದ ಅದನ್ನು ತಿಂದು ಮುನಿಪತಿ ಸಂಕಟಪಡುವಂತಾಯಿತು ಎಂದು ನರೇಂದ್ರನು ಆತ್ಮಭತ್ರ್ಸನೆ ಮಾಡಿಕೊಂಡ. ತಡವರಿಸಿ ಜೋಲುವ ಮುನಿನಾಥನನ್ನು ಹಿಡಿದುಕೊಂಡು, ಕಣ್ಣುಗಳನ್ನು ತನ್ನ ಅಂಗೈಯಿಂದಲೇ ಒರಸಿ, ಮೈಯಲ್ಲಿನ ಲೋಳೆಯೆಲ್ಲವನ್ನೂ ತೊಳೆದ.

ತುಂಬ ಶ್ರಮದಿಂದಾಗಿ ತಲೆತಿರುಗಿ ಮೇಲುಸಿರುಬಿಟ್ಟು ಕೆಳಕ್ಕೆ ಬೀಳುವ ಮುನಿಪನನ್ನು ಅರಸನು ಒಂದು ಜಾವದ ಕಾಲ ಹಿಡಿದುಕೊಂಡಿದ್ದ. ಸ್ರಮ ಪರಿಹಾರವಾದ ಮೇಲೆ ಆ ಮಾಯಾ ಋಷಿಯನ್ನು ನಿಧಾನವಾಗಿ ತಾನೂ ಪ್ರಭಾವತಿ ಮಹಾದೇವಿಯೂ ಸ್ನಾನದ ಮನೆಗೆ ಕರೆದೊಯ್ದು ಬಿಸಿ ನೀರಿನಿಂದ ಮೈಯನ್ನೆಲ್ಲ ತೊಳೆದು ದುಕೂಲದಿಂದ ಒರೆಸಿದರು. ದೊಡ್ಡ ಮಣೆಯೊಂದರ ಮೇಲೆ ಋಷಿಯನ್ನು ಕುಳ್ಳಿರಿಸಿದ ರಾಜನು, "ನಿಮ್ಮ ಈ ಹಿರಿದಾದ ಕ್ಲೇಶವು ಪಾಪಿಯಾದ

ನನ್ನಿಂದಲೇ ಉಂಟಾಯಿತು" ಎಂದು ಹೇಳಿ ನಮಸ್ಕರಿಸಿದ. ಆನಂತರ ಪ್ರಭಾವತಿ ದೇವಿಯು ತಾನೂ ಸ್ನಾನ ಮಾಡಿ ದಿವ್ಯವಸ್ತ್ರವನ್ನುಟ್ಟು ಮತ್ತೆ ಬಂದು ಋಷಿಯ ಕಾಲುಗಳನ್ನೊತ್ತುತ್ತ ಕುಳಿತಳು. ದೇಹದ ಬಗ್ಗೆ ಯೋಚಿಸಿದರೆ, ಅದು ಎಳ್ಳನಿತೂ ಶುಚಿಯಲ್ಲ; ಈ ಅಶುಚಿದೇಹವನ್ನು ಅನುಪಮವೆಂದು ಕರೆಯಲಾಗದು. ಜಿನಮತದಲ್ಲಿ ನಂಬಿಕೆಯಿಟ್ಟು ತಿಳಿವಳಿಕೆ ಪಡೆದ ನರನಿಗೆ ಈ ವಿಷಯ ಗೊತ್ತು. ಈ ದೇಹವು ಹುತ್ತ ಕಟ್ಟುವ ಗೆದ್ದಲಿನಂತೆ ಪಾಪವನ್ನು ಕೂಡಿಸುವುದು, ಬಡತನದ ಹಾಗೆ ಬೇಡಿದ್ದನ್ನು ನೀಡಲಾರದು, ಹುಣ್ಣಿನಂತೆ ನೋವುಂಟುಮಾಡುವುದು, ಗ್ರಹದಂತೆ ಪೀಡೆಯನ್ನು ಮಾಡುವುದು, ಹೊಟ್ಟೆ ನೋವಿನಂತೆ ನವೆಸುವಂಥದು, ಕೃಷ್ಣಪಕ್ಷಂತೆ ಶುಭವನ್ನು ಒಲ್ಲದು, ಹಗೆಯಂತೆ ಭಯವನ್ನುಂಟು ಮಾಡುವುದು, ಕೂಸಿನಂತೆ ಕೊಡದ್ದನ್ನೇ ಬಯಸುವುದು, ಕಾಲದ ಹಾಗೆ ನಿಲ್ಲಿಲಾಗದ್ದು, ನದಿಯ ಹಾಗೆ ದಾಟಲಾರದ್ದು, ಗಾಳಿಯಂತೆ ಹಿಡಿಯಲಾರದ್ದು, ಹೊಲೆಗೇರಿಯಂತೆ ಮೂಳೆಯಿಂದ ಕೂಡಿದುದು, ಚಪ್ಪಲೆಯಂತೆ ಚರ್ಮವುಳ್ಳದ್ದು, ವೀಣೆಯಂತೆ ನರಗಳನ್ನೊಳ್ಳದ್ದು, ತಿಪ್ಪೆಯಂತೆ ಹೇಸಿಕೆಯನ್ನುಂಟು ಮಾಡುವುದು, ಅಮೇಧ್ಯದ ಗುಂಡಿಯಂತೆ ದುರ್ಗಂಧದಿಂದ ಕೂಡಿದುದು, ಕೋಳಿಯಂತೆ ಕ್ರಿಮಿಪ್ರಿಯವಾದದ್ದು, ಜಿಗಣೆಯಂತೆ ರಕ್ತಪ್ರಿಯವಾದದ್ದು, ನೊಣದಂತೆ ಶ್ಲೇಷ್ಮಪ್ರಿಯವಾದದ್ದು, ಹಸುವಿನಂತೆ ಮೂತ್ರಪ್ರಿಯವಾದದ್ದು, ತೊನ್ನನಂತೆ ಲಸಿಕೆಯುಳ್ಳದ್ದು, ಸೋಮಾರಿಯಂತೆ ಆಲಸ್ಯವುಳ್ಳದ್ದು, ಪಿಶಾಚಿಯಂತೆ ಒಳ್ಳೆಯದನ್ನು ಮಾಡದು, ಹೆಣದ ಹಾಗೆ ಉಪಯುಕ್ತವಾಗದ್ದು. ಇಂತಹ ದೇಹವು ಕಷ್ಟಮಯವಾದದ್ದು; ಇದನ್ನು ಬಿಟ್ಟು ರತ್ನತ್ರಯವನ್ನು ಸ್ವಸ್ವರೂಪದಲ್ಲಿ ಸೇರಬೇಕು ಎಂದು ಧರ್ಮದ ರೀತಿಯನ್ನು ಹೇಳಿದ ರಾಣಿಯ ಬಗ್ಗೆ ವಾಸವನಿಗೆ ಅಚ್ಚರಿಯುಂಟಾಗಿ, "ಈ ಮಹಾರಾಜನು ನಡತೆಯಲ್ಲಿ ಸುರಪತಿಯು ಹೊಗಳಿದ್ದಕ್ಕಿಂತಲೂ ನೂರು ಪಾಲು ಮಿಗಿಲಾದವನು; ಇವನ ಗುಣಗಳನ್ನು ಹೊಗಳಲು ಆದಿಶೇಷನಿಗೂ ಸಾಧ್ಯವಿಲ್ಲ" ಎಂದುಕೊಂಡ. ಪರಮಜಿನಚರಣಸೇವೆ ಮಾಡಿದವನು ಅಂತ್ಯಕಾಲದಲ್ಲಿ ಕಷ್ಟದೇಹವನ್ನು ಬಿಟ್ಟು ದಿವ್ಯಸ್ವರೂಪವನ್ನು ಪಡೆಯುವ ಹಾಗೆ ಆ ಕ್ಷಣದಲ್ಲಿಯೇ ತನ್ನ ಕೃತಕ ರೂಪವನ್ನು ಬಿಟ್ಟು, ಮಂದರದ ಚಿನ್ನದಂತೆ ಹೊಳೆಯುವ ದೇಹಕಾಂತಿ, ಸೂರ್ಯಕಿರಣಗಳಂತೆ ಹೊಳೆಯುವ ಆಭರಣಗಳು, ದೇಹವನ್ನಾವರಿಸಿದ್ದ ದಿವ್ಯವಸ್ತ್ರಗಳಿಂದ ಕೂಡಿ ನಿಂತ.

ಕಣ್ಣ ಮುಂದಿನ ಋಷಿರೂಪದ ಬದಲು ದಿವ್ಯಸ್ವರೂಪವನ್ನು ಕಂಡ ಒದ್ದಾಯನ ಮಹಾರಾಜನು ವಿಸ್ಮಯದಿಂದ ಕೂಡಲು, ಆ ದೇವನು ಹೀಗೆಂದ: "ದರ್ಶನದ ಮೂರನೆಯ ಅಂಗವಾದ ನಿರ್ವಿಚಿಕಿತ್ಸೆಯಲ್ಲಿ ಭರತಕ್ಷೇತ್ರದಲ್ಲಿ ಅನುಮಾನಕ್ಕೆಡೆಯಿಲ್ಲದಂತೆ ಶ್ರೇಷ್ಠರಾದವರು ಯಾರು ಎಂದು ಸುರರಾಜನ ಸಭೆಯಲ್ಲಿ ದೇವರ ತಂಡವು ಕೇಳಲು, ದೇವೇಂದ್ರನು ಒದ್ದಾಯನ ಮಹಾರಾಜನ ಹೆಸರನ್ನು ಹೇಳಿದ. ಇತರ ದೇವರು ಅದನ್ನು ಕೇಳಿ ಕೈಮುಗಿದರೂ, ನನಗೆ ಆ ಮಾತಿನಿಂದ ವಿಸ್ಮಯವಾಯಿತು. ಹಾಗಾಗಿ ನಿನ್ನನ್ನು ನೋಡಲೆಂದೇ ದೇವಲೋಕದಿಂದ ನಾನಿಲ್ಲಿಗೆ ಬಂದೆ. ನನ್ನ ಹೆಸರು ವಾಸವನೆಂದು. ಆ ಸೌಧರ್ಮೇಂದ್ರನ ಹೊಗಳಿಕೆಗಿಂತ ನೀನು ಸಾವಿರ ಮಡಿ ಮಿಗಿಲು. ನಿನ್ನ ಗುಣಗಳನ್ನು ಪರೀಕ್ಷಿಸಲು ಹೊರಡುವವನು ಚಾಮೀಕರಶೈಲವನ್ನು ಗುದ್ದಲಿಯಿಂದ ಅಗೆದು ಬೀಳಿಸುವವನಷ್ಟೇ ಎಗ್ಗ."

ಆನಂತರ ಪ್ರಭಾವತಿ ಮಹಾದೇವಿಯ ಮುಖವನ್ನು ನೋಡಿ, "ಎಷ್ಟೇ ಉಜ್ವಲವಾಗಿದ್ದರೂ ಚಂದ್ರನ ಕಾಂತಿಯು ಸೂರ್ಯನ ದೀಪ್ತಿಯನ್ನು ಹೋಲಲು ಸಾಧ್ಯವೇ? ಹಾಗೆಯೇ ಹೆಣ್ಣು ಎಷ್ಟೇ ಒಳ್ಳೆಯವಳಾದರೂ ಪುರುಷನ ಮಹಾಗುಣಗಳನ್ನು ಹೋಲುವಳೇ? ಆ ಕಾರಣದಿಂದ ಪ್ರಭಾವತಿ ದೇವಿಯ ಗುಣಗಳನ್ನು ಇತರ ಹೆಣ್ಣುಗಳ ಜೊತೆಗೆ ಹೋಲಿಸಲಾಗದು. ಎಲೈ ಮಹಾರಾಜನೇ, ಈ ವನಿತೆಯ ಪರಮಗುಣಗಳನ್ನು ವರ್ಣಿಸಲು ಆದಿಶೇಷನಿಗೂ ಅಸಾಧ್ಯವೆಂದ ಮೇಲೆ ನರರಿಂದ ಸಾಧ್ಯವೆಂದು ಹೇಳುವುದು ಮೂರ್ಖತನವಲ್ಲವೇ? ಈ ಪುಣ್ಯಮೂರ್ತಿಗೆ ಚೆನ್ನಾಗಿ ಒಪ್ಪುವ ಶೀಲವತಿ ಎಂಬ ಹೆಸರು ಬರಲು ಕಾರಣವಾದ ವೃತ್ತಾಂತವನ್ನು ಹೇಳುತ್ತೇನೆ" ಎಂದು ಅದನ್ನು ವಿವರಿಸಲು ತೊಡಗಿದ.

ಎಲೈ ರಾಜನೇ, ಪರರಾಜರನ್ನು ಯುದ್ಧದಲ್ಲಿ ಸೋಲಿಸಿ ಕಪ್ಪವನ್ನು ಪಡೆಯಲೆಂದು ವೀರಾವೇಶದಿಂದ ನೀನು ಹೋದೆ. ಇತ್ತ, ಪ್ರಭಾವತಿ ದೇವಿಯ ಬಾಲ್ಯಕಾಲದ ಗೆಳತಿಯಾದ ನಾರಾಯಣದತ್ತೆ ಎಂಬುವವಳು ಕಿರುಹರೆಯದಲ್ಲಿಯೇ ರಂಡೆಯಾಗಿದ್ದವಳು, ತರ್ಕಶಾಸ್ತ್ರಗಳನ್ನು ಓದಿ ಪಂಡಿತೆ ಎಂಬ ಹೆಸರನ್ನಿಟ್ಟುಕೊಂಡು ಬ್ರಹ್ಮಚಾರಿಣಿಯಾಗಿ, ತನ್ನನ್ನು ಬಿಟ್ಟರೆ ಲೋಕದಲ್ಲಿ ಶಾಪಾನುಗ್ರಹಸಮರ್ಥೆ ಯಾದವಳು ಬೇರೆ ಯಾರೂ ಇಲ್ಲ, ತಾನು ಅಪ್ರತಿಮಳು ಎಂದು ಬೀಗುತ್ತಿದ್ದಳು. ಅದನ್ನು ನಂಬಿದ ನಾಡವರೆಲ್ಲ ಭಕ್ತಿಪೂರ್ವಕವಾಗಿ ಅವಳಿಗೆ ಒಲಿದರು; ಇದರಿಂದ ಅವಳು ಗುರು ಎಂಬ ಕೀರ್ತಿಗೆ ಪ್ರಾಪ್ತಳಾದಳು.

ಹೀಗಿರಲು ಒಂದು ದಿನ, ಅವಳು ತನ್ನ ಬಾಲ್ಯದ ಗೆಳತಿ ಪ್ರಭಾವತಿದೇವಿಯನ್ನು ನೆನೆದು, "ವಿನಯದಿಂದಲೇ ಅವಳ ಶ್ರಾವಕತನವನ್ನು ಸಂಪೂರ್ಣವಾಗಿ ಕೆಡಿಸಿ, ಆನಂತರ ಅವಳನ್ನು ನಿಧಾನವಾಗಿ ತನ್ನ ಧರ್ಮಕ್ಕೆ ಬದಲಾಯಿಸುತ್ತೇನೆ" ಎಂದುಕೊಂಡಳು: ಈ ನಿರ್ಧಾರದಿಂದ ಅವಳು ರೌರವಪುರಕ್ಕೆ ಬಂದು ಅರಮನೆಯ ಬಾಗಿಲಲ್ಲಿ ನಿಂತು, ದ್ವಾರಪಾಲಕನನ್ನು ಕರೆದು ಪ್ರಭಾವತಿದೇವಿಯ ಬಾಲ್ಯ ಸ್ನೇಹಿತೆಯಾದ ನಾರಾಯಣದತ್ತೆಯು ಅವಳನ್ನು ಕಾಣಲು ಬಂದಿರುವಳೆಂದು ರಾಣಿಗೆ ತಿಳಿಸಲು ಹೇಳಿದಳು. ಅದರಂತೆ ಅವನು ಬಂದು ಹೇಳಿದಾಗ ರಾಣಿಯು ಅವಳು ಮೊದಲಿನಂತೆಯೇ ಶ್ರಾವಕಿ ಎಂದು ಬಗೆದು ಧರ್ಮವಾತ್ಸಲ್ಯದಿಂದ ಅವಳನ್ನು ತಕ್ಷಣವೇ ಕರೆತರಲು ಅಪ್ಪಣೆ ಮಾಡಿದಳು.

ಅವಳು ಒಳಗೆ ಬಂದಾಗ ನಾರಾಯಣದತ್ತೆಯ ಮಿಥ್ಯಾವೇಷವನ್ನು ಕಂಡು ಮನ್ನಿಸದೆ ಉದಾಸೀನ ಮಾಡಿದಳು. ಇದರಿಂದ ನಾರಾಯಣದತ್ತೆಗೆ ಕೋಪವುಂಟಾಯಿತು. ಹಾವಿನ ವಿಷ ಏರಿದವರೂ, ಸಿರಿಯಿರುವವರೂ, ಮದ್ದುಗುಣಿಕೆಯನ್ನು ತಿಂದವರೂ, ಪಿತ್ತಾಧಿಕರಾದವರೂ ಮೈತಿಳಿವನ್ನು ಪಡೆದಿರುವುದಿಲ್ಲ ಎಂಬ ಮಾತು ಸುಳ್ಳಾಗುವುದೇನು? "ಬಾಲ್ಯದಲ್ಲಿ ನನಗೆ ಹಿರಿದಾದ ಆದರವನ್ನು ತೋರಿಸುತ್ತಿದ್ದ ನೀನು ಈಗ ಸಿರಿಯ ಕಾರಣದಿಂದ ಉದಾಸೀನ ಮಾಡುತ್ತಿದ್ದೀ" ಎಂದು ಆಕ್ಷೇಪಿಸಿದಳು. ಆ ಮಾತಿಗೆ ಉತ್ತರ ನೀಡಲೂ ಬಯಸದ ರಾಣಿಯು ಮೌನದಿಂದಿದ್ದಳು. ಪಕ್ಕದಲ್ಲಿಯೇ ಇದ್ದ ವಿದಗ್ಧ ಸೌಂದರಿ ಎಂಬ ವಿಲಾಸಿನಿಯು ಅರಸಿಯ ಇಂಗಿತವನ್ನು ಅರಿತವಳಾಗಿ ತನ್ನದೇ ರೀತಿಯಲ್ಲಿ ಹೀಗೆಂದಳು: "ಕಳಹಂಸವು ತಾವರೆಗೊಳವನ್ನು ಪ್ರೀತಿಯಿಂದ ಸೇರುವ ಹಾಗೆ ತಿಪ್ಪೆಯ ಸಾರವನ್ನು ಸೇರುತ್ತದೆಯೇ? ನಕ್ಷತ್ರಗಳು ಚಂದ್ರನನ್ನು ಹೊಂದಿಕೆಯಿಂದ ಸೇರುವಂತೆ ಸೂರ್ಯನ ಬಳಿಗೆ ಆಸೆಯಿಂದ ಬರುವುವೇನು? ಸುಧರ್ಮದಲ್ಲಿ ಧೀರರೆನಿಸಿಕೊಂಡವರು ಜಡರೂ ದುರಾತ್ಮರೂ ಆದವರ ಸಹವಾಸವನ್ನು ಬಯಸುತ್ತಾರೆಯೇ?" ಅವಳ ಮಾತನ್ನು ಕೇಳಿ ನಾರಾಯಣದತ್ತೆಗೆ ತುಂಬ ಸಿಗ್ಗಾಗಿ ತಾನು ಉಳಿದುಕೊಂಡಿದ್ದ ಜಾಗಕ್ಕೆ ಮರಳಿದಳು.

ಬಂದ ಮೇಲೆ ಅವಳಿಗುಂಟಾದ ಯೋಚನೆಯೆಂದರೆ, ಪ್ರಭಾವತಿ ಮಹಾದೇವಿಯ ಶ್ರಾವಕತ್ವವನ್ನು ಹೇಗೆ ಕೆಡಿಸುವುದು ಎಂಬುದು. ಅವಳಿಗೊಂದು ಉಪಾಯ ಹೊಳೆಯಿತು: ಕೇರಳ ಮಂಡಲಾಧಿಪತಿಯು ಒಬ್ಬ ಜೈನ; ಉದಗ್ರನಾದ ಕಾಶ್ಮೀರ ರಾಜನಾದರೋ ಜಿನೇಶ್ವರಧರ್ಮದಲ್ಲಿ ಬಲ್ಲಿದ; ಗುಣಾಧಾರ; ಅಂಗ ಧರಣೇಶ್ವರನು ಜೈನಮಾರ್ಗದಲ್ಲಿ ಮಿಗಿಲು; ಪೂತಿಪಾಂಡ್ಯ ರಾಜನು ಧರ್ಮತತ್ಪರ. ಮಿಕ್ಕ ಧರಾಧೀಶ್ವರರೆಲ್ಲರೂ ಧರ್ಮಾನುರಾಗಿಗಳು ಮಾತ್ರವಲ್ಲ, ಪರಾಂಗನೆಯರನ್ನು ಅಪೇಕ್ಷೆ ಪಡುವಂತಹವರಲ್ಲ. ಅವರ ಬಳಿ ಹೋದರೆ ನನ್ನ ಕಾರ್ಯಸಾಧನೆ ಯಾಗದು; ಮಾಳವೇಶ್ವರನಾದ ಚಂಡಪ್ರದ್ಯೋತನಿಂದ ನನ್ನ ಕೆಲಸವಾಗುವುದು ಎನ್ನಿಸಿತು. ಏಕೆಂದರೆ ಅವನು ಹೆಣ್ಣು ಎಂಬ ಹೆಸರು ಕೇಳಿದರೆ ಸಾಕು, ಹೆಣ್ಣು ನಾಯನ್ನಾದರೂ ಹಿಂಬಾಲಿಸುತ್ತಾನೆ; ಇನ್ನು ದೇವತೆಯನ್ನು ಹೋಲುವ ಚೆಲುವೆಯಾದ ಈ ಯುವತಿಯ ಬಗ್ಗೆ ಕೇಳಿದರೆ ಸುಮ್ಮನಿರುತ್ತಾನೆಯೇ! ಎಂದು ಬಗೆದಳು.

ಸರಿ, ಅವಳು ಪ್ರಭಾವತಿಯ ರೂಪವನ್ನು ವಿವರವಾಗಿ ಚಿತ್ರಪಟದಲ್ಲಿ ಬರೆದುಕೊಂಡು ಉಜ್ಜಯಿನಿಗೆ ಹೋಗಿ ಅದನ್ನು ಚಂಡಪ್ರದ್ಯೋತನಿಗೆ ತೋರಿಸಿದಳು. ಅದನ್ನು ನೋಡಿದ ಕ್ಷಣವೇ, ಮನ್ಮಥನು ಅವನ ಮೇಲೆ ಮಸೆದ

ಹೂಬಾಣಗಳಿಂದ ಒಂದೇ ಸಮನೆ ಬಲವಾಗಿ ಹೊಡೆದ; ಇದರಿಂದ ಆ ವಸುಧೇಶನು ಗಂಡುಗೆಟ್ಟು ಬೆಂಡಾಗಿಬಿಟ್ಟ! "ಇದು ಯಾರ ಚಿತ್ರಪಟ; ನೀವು ಇದನ್ನು ಇಲ್ಲಿಗೆ ತೆಗೆದುಕೊಂಡು ಬರಲು ಕಾರಣವೇನು?" ಎಂದು ಕೇಳಿದ. ಅದಕ್ಕೆ ನಾರಾಯಣದತ್ತೆಯು ರಾಜನ ಮನಸ್ಸನ್ನು ಅರಿತು, "ಇದು ರೌರವಪುರಾಧಿನಾಥನ ಹೆಂಡತಿ. ಎದುರಿಗೆ ನೋಡಿದರೆ ಅವಳು ರತಿ–ಲಕ್ಷ್ಮಿ–ಶಚಿಯರನ್ನೂ ಮೀರಿಸಿದ ಸುಂದರಿ. ಇಂಥವಳು ನಿಮ್ಮ ಪ್ರೇಯಸಿಯಾಗಲೇಬೇಕು. ನಿಮಗೆ ಇವಳು ತಕ್ಕವಳು ಎಂಬುದನ್ನು ತಿಳಿಸಲೆಂದು ಬಂದೆ" ಎಂದಳು. ಇದನ್ನು ಕೇಳಿದ ರಾಜನು ನಾರಾಯಣದತ್ತೆಗೆ ಉಡುಗೊರೆಗಳನ್ನು ಕೊಡಿಸಿ ಸಂತಸಪಡಿಸಿದ. ಇನ್ನು ತನ್ನ ಕೆಲಸವಾಯಿತೆಂದು ಅಂದುಕೊಂಡ ಅವಳು ಸೆರಗು ಕಟ್ಟಿಕೊಂಡು ಮಾಳವೇಶ್ವರನನ್ನು ಕುರಿತು, "ಹೆಚ್ಚು ಮಾತೇನು, ಒದ್ದಾಯನ ಮಹಾರಾಜನೂ ಊರಿನಲ್ಲಿಲ್ಲ; ನೀವು ದೊಡ್ಡ ಸೈನ್ಯದೊಂದಿಗೆ ಅಲ್ಲಿಗೆ ಹೋದರೆ ಆ ಲಲಿತಾಂಗಿಯು ಸ್ವಇಚ್ಛೆಯಿಂದ ನಿಮ್ಮ ಕೈಸಾರುವಳು. ಇವತ್ತು ನಾಳೆ ಎಂದು ಎಣಿಸುತ್ತ ಕೂತರೆ ಒದ್ದಾಯನನು ವಾಪಸು ಬಂದುಬಿಡುವನು. ಅವನು ಬಂದರೆ ನಿಮಗೆ ಸ್ತ್ರೀರತ್ನವು ಸಿಗಲು ಸಾಧ್ಯವಿಲ್ಲ" ಎಂದು ನುಡಿದಳು.

ಇದನ್ನು ಕೇಳಿ ಇನ್ನು ತಡ ಮಾಡುವುದು ತರವಲ್ಲ ಎಂದು ಚಂಡಪ್ರದ್ಯೋತನು ಚತುರ್ಬಲಸಮೇತ ಹೊರಟ. ಕೆಲವು ದಿನಗಳ ಪಯಣದ ನಂತರ ರೌರವಪುರವನ್ನು ತಲುಪಿದ ಅವನು ಊರನ್ನು ಮೂರು ಸುತ್ತುಗಳಲ್ಲಿ ಮುತ್ತಿದ. ಆಮೇಲೆ ಸಾಲಂಕಾರನೆಂಬ ತನ್ನ ಹೆಗ್ಗಡೆಯನ್ನು ಕರೆಸಿ ಪ್ರಭಾವತಿಯಲ್ಲಿಗೆ ಕಳಿಸಿದ. ಅವನು ರಾಣಿಯ ಬಳಿ ಬಂದು, "ನಮ್ಮ ಅರಸ ಮಾಳವಪತಿಯನ್ನು ಒಲಿದು ಸುಖವುಂಟಾಗುವಂತೆ ಮಾಡಿರಿ ಎಂದು ಕೇಳಿಕೊಳ್ಳಲು ನನ್ನನ್ನು ನಿಮ್ಮ ಬಳಿ ಉತ್ಸಾಹದಿಂದ ಕಳಿಸಿದ್ದಾರೆ. ಅದು ಇದು ಎನ್ನದೆ, ಹೆಚ್ಚು ಯೋಚಿಸದೆ, ಅಹಂ ಅನ್ನು ಬಿಟ್ಟು ನಿಮಗೂ ಅವರಿಗೂ ಸುಖವುಂಟಾಗುವಂತೆ ನಾನು ಹೇಳಿದ ಹಾಗೆ ನಿರ್ಧಾರವನ್ನು ಕೈಗೊಳ್ಳಿರಿ" ಎಂದು ಒಮ್ಮೆಗೇ ಕಾರ್ಯವನ್ನು ಹೇಳದೆ ವಿನಯದಿಂದಲೂ ಉಚಿತವಾದ ಮಾತುಗಳಿಂದಲೂ ವಿನಂತಿಸಿಕೊಂಡ. ಆಮೇಲೆ ತನ್ನ ರಾಜನ ಮಹಿಮೆಯನ್ನು ಹೊಗಳಲು ತೊಡಗಿದ: "ನಮ್ಮ ರಾಜರು ಸಿರಿಯಲ್ಲಿ ಮಹೇಂದ್ರನನ್ನೂ ಭರತರಾಜನಂತಹವರನ್ನೂ ಖೇಚರಪತಿಯಂತಹವರನ್ನೂ ದೇವರಾಜನಂತಹವರನ್ನೂ ಮೀರಿಸಿದವರು; ಅನುಪಮ ಭರತ ಚಕ್ರವರ್ತಿಯ ತಮ್ಮನಾದ ಕಾಮದೇವನನ್ನೂ ಮೀರಿಸಿದ ಚೆಲುವರು. ಅವರು ಯಾರನ್ನೂ ಸುಲಭವಾಗಿ ಮೆಚ್ಚುವವರಲ್ಲ. ಕೊಡುಗೈದಾನಿಯಾದ ನಮ್ಮ ರಾಜರು ಕಲ್ಪವೃಕ್ಷ–ಕಾಮಧೇನುಗಳನ್ನು ಲೇವಡಿ ಮಾಡುತ್ತಾರೆ; ಅಂದ ಮೇಲೆ ಲೋಭಾತ್ಮರಾದ ರಾಜರುಗಳು ಅವರ ಹೋಲಿಕೆಗೆ ಬರುವರೇ? ನಮ್ಮ ಮಹಾರಾಜರ ಹೆಸರು ಕೇಳಿದರೆ ಸಾಕು, ಉಳಿದ ರಾಜರುಗಳು ಭಯಗೊಂಡ ಜಿಂಕೆಗಳಂತೆ ಓಡುತ್ತಾರೆ; ಅವರಿಗೆದುರಾಗಿ ನಿಲ್ಲುವ ಗಂಡರು ಭೂತಳದಲ್ಲಿಯೇ?" ಎಂದು ಹೊಗಳಿದ.

ಈ ಮಾತುಗಳನ್ನು ಕೇಳಿದ ಪ್ರಭಾವತಿ ಮಹಾದೇವಿಯು ನಕ್ಕು, "ಬಹುರತ್ನಾ ವಸುಂಧರಾ ಎಂಬಂತೆ, ಲೋಕದಲ್ಲಿ ಕವಿಗಳು ತ್ಯಾಗಿಗಳಲ್ಲಿಯೂ ಒಬ್ಬರನ್ನೊಬ್ಬರು ಮೀರಿಸಿದವರಿದ್ದಾರೆ. ಅದೇನೂ ಅಪರೂಪವಲ್ಲ. ನೀವು ಬಂದ ಕಾರ್ಯವೇನೆಂಬುದನ್ನು ಹೇಳಿ" ಎಂದಳು. ಆಗ ಹೆಗ್ಗಡೆಯು, "ನಿಮ್ಮ ರೂಪವನ್ನು ಪಟದಲ್ಲಿ ಚಿತ್ರಿಸಿ ಅದನ್ನು ನಮ್ಮ ರಾಜರಿಗೆ ತೋರಿಸಿದಾಗ, ಅವರು ವಿರಹಾನಲದಲ್ಲಿ ಬೇಯುತ್ತಿರುವರು. ನೊಂದು ಬೆಂದು ಪ್ರತಾಪಿಗಳಾದ ಅವರು ದಂಡೆತ್ತಿ ಬಂದಿದ್ದಾರೆ, ನಿಮ್ಮ ನೆರವು ಬೇಡಿ ಬಂದವರಲ್ಲ. ತಾವು ಮತ್ತೇನನ್ನೂ ಯೋಚಿಸದೆ ಬೇಗ ನಮ್ಮ ರಾಜರ ಮನೋವಲ್ಲಭೆಯಾಗಬೇಕು" ಎಂದು ಕೇಳಿಕೊಂಡ. ಅದಕ್ಕೆ ಪ್ರಭಾವತಿಯು, "ಪರಸತಿಗೆ ಒಲಿದವನ ಆಜ್ಞೆಯನ್ನು ಆಯುಧವೂ ನಿಷ್ಠುರತೆಯಿಂದ ಪಾಲಿಸದು. ಛೀ, ಸತ್ಪುರುಷರು ಪರಸತಿಗೆ ಆಸೆಪಟ್ಟರೆ ಪರವೆಂಬ ಸತಿ ದೂರಾಗುತ್ತಾಳೆ. ಆ ಕಾರಣದಿಂದ, ಮಹಾಪುರುಷರಾದ ನಿಮ್ಮ ರಾಜರು ಇಂತಹುದನ್ನು ಬಯಸಬಾರದು" ಎಂದು ಹೇಳಿದಳು. ಅದಕ್ಕೆ ಹೆಗ್ಗಡೆಯು, "ಸ್ವರ್ಗದಲ್ಲಿನ ಭೋಗಕ್ಕಾಗಿ ಇಹದ ಮಹಾಸೌಖ್ಯಗಳನ್ನು ಕಳೆದುಕೊಂಡು, ದೇಹವನ್ನು ದಂಡಿಸಿ ಮನಸ್ಸಿನಲ್ಲಿ ಕುದಿದು ಸುಮ್ಮನೆ ಸವಣಮರುಳನ್ನು ಹೊಂದದೆ ಸುಖವನ್ನು ಬಯಸಿರಿ" ಎಂದು ಅನುನಯದ ಮಾತಾಡಿದ. ಆಗ

ಪ್ರಭಾವತಿಯು, "ಖಳರನ್ನೂ ಹಾದರಿಗರನ್ನೂ ಕಂಡರೆ ಹಿಡಿದು, ಮುಂದೆ ಅವರು ನರಕದಲ್ಲಿ ಇಳಿಯುವುದನ್ನು ಮುಂಚೆಯೇ ತೋರಿಸುವಂತೆ, ಈಗಲೇ ಹೊಡೆದು ಬಡಿದು ಮಾಡುತ್ತಾರೆ; ಕೋಪದಿಂದ ಕೊಂದೇ ಬಿಡುತ್ತಾರೆ. ಆದ್ದರಿಂದ ಹಾದರವು ಸಲ್ಲದು" ಎಂದಳು. ಅದಕ್ಕೆ ಹೆಗ್ಗಡೆಯು, "ನಮ್ಮ ರಾಜರನ್ನು ಕೂಡಲು ಇಷ್ಟವಿಲ್ಲದೆ ನೀವು ಒಂದಕ್ಕೊಂದು ಮಾತು ಕೊಡುತ್ತಿರುವಿರಿ; ಇದರಿಂದ ಚಪಲಚಿತ್ತನ ಗೋಣಿ ಬರಿದು ಎಂಬಂತೆ ಆಗುತ್ತದೆ, ಅಷ್ಟೆ" ಎಂದ. ಅದಕ್ಕೆ ರಾಣಿಯ ಉತ್ತರ: "ಸಾವಿಗೆ ಅಂಜದೆ ತಮ್ಮ ಶೀಲರತ್ನವನ್ನು ರಕ್ಷಿಸಿಕೊಳ್ಳುವವರ ಮರಣ ಮರಣವಲ್ಲ; ಶೀಲವನ್ನು ಬಿಟ್ಟ ಖೂಳರ ಬಾಳೂ ಬಾಳಲ್ಲ." ಅದಕ್ಕೆ ಸಾಲಂಕಾರನು, "ಸಿಕ್ಕಿದಾಗ ದಿವ್ಯಾಂಬರವನ್ನು ಉಟ್ಟು, ವಿವಿಧ ಆಭರಣಗಳನ್ನು ತೊಟ್ಟು, ಒಳ್ಳೆಯ ಊಣಿಸನ್ನು ಉಂಡು ಸಂತೋಷಪಡುವುದನ್ನು ಬಿಡುವುದು ಎಂಥ ವಿವೇಕ? ಮುಂದಿನ ಲೋಕವನ್ನು ಕಂಡವರಾರು?" ಎಂದು ಮರುಪ್ರಶ್ನೆ ಮಾಡಿದ. ಅದಕ್ಕೆ ಸಮ್ಯಕ್ತ್ವರತ್ನಾಕರೆಯು ಹೇಳಿದ್ದೆಂದರೆ, "ಕುರುಡನು ಮುಂದಿರುವ ಆನೆಯನ್ನೇ ಕಾಣದಂತೆ, ಪಾಪದ ಕಾರಣದಿಂದ ನರಕದಲ್ಲಿದ್ದಂತಿರುವವರಿಗೆ ಪರಲೋಕವು ಕಾಣಿಸದಿರುವುದರಲ್ಲಿ ಆಶ್ಚರ್ಯವೇನು? ಆದ್ದರಿಂದ ಧರ್ಮ, ಜೀವ, ಪರಲೋಕ ಇವುಗಳು ಇಲ್ಲ ಎಂಬ ಜಡರ ಮತು ಪ್ರಮಾಣವಲ್ಲ" ಎಂದು.

ಹೆಗ್ಗಡೆ: "ಜಲಜಮುಖಿಯೇ, ಹಲವು ಮಾತನ್ನಾಡದೆ ನಮ್ಮ ಮಹಾಪ್ರಭುಗಳಿಗೆ ವಲ್ಲಭೆಯಾಗಿರಿ; ಇದರಿಂದ ನಾಡು ಕೆಡುವುದನ್ನೂ, ಪ್ರಜೆಗಳಿಗೆ ಕಿರುಕುಳವುಂಟಾಗುವುದನ್ನೂ ತಪ್ಪಿಸಿರಿ. ನಮ್ಮ ರಾಜರಿಗೆ ಎದುರಾಗಿ ಬದುಕುವವರಾರು? ಯುದ್ಧದಲ್ಲಿ ಅವರು ಇಲ್ಲಿ ಭೋರ್ಗರೆವ ನೆತ್ತರ ಪ್ರವಾಹವನ್ನೇ ಹರಿಸುತ್ತಾರೆ; ಕೋಪಶಿಖಿಯಿಂದ ಊರನ್ನೆಲ್ಲ ಧಗಧಗ ಉರಿಸಿಬಿಡುತ್ತಾರೆ; ಅನೇಕರನ್ನು ತುಂಡು ತುಂಡು ಮಾಡಿಬಿಡುತ್ತಾರೆ; ಆದ್ದರಿಂದ, ಮನೋಹರೆಯೇ, ನಿಮ್ಮ ದರ್ಪವನ್ನು ಬಿಡಿರಿ." ಈ ಬೆದರಿಕೆಯ ಮಾತುಗಳನ್ನು ಕೇಳಿದ ಆ ವನಿತಾರತ್ನೆಯ ಉತ್ತರ: "ಸೀತೆಯನ್ನು ಒಯ್ದ ಲಂಕಾಧೀಶನಂತಹ ವೀರರೂ ಸತ್ತರೆಂದ ಮೇಲೆ ಉಳಿದ ಪರವಧೂಪ್ರಿಯರಾದ ರಾಜರು ಯಾವ ಲೆಕ್ಕ?" ಇದನ್ನು ಕೇಳಿದ ಸಾಲಂಕಾರನಿಗೆ ಕೋಪ ಬಂತು. ನನ್ನ ಮಾತುಗಳನ್ನು ಕೇಳದ ಫಲವನ್ನು ಕಾಣುವೆಯೆಂದು ಭರ್ತ್ಸನೆ ಹೊರಹೊರಟ.

ಅಷ್ಟರಲ್ಲಿ, ಉಗ್ರಸೇನನೆಂಬ ದಂಡಾಧಿಪನು ಕೋಟೆಗೆ ಕಾವಲಿಟ್ಟು ಕಾದುವ ಸನ್ನಾಹದಲ್ಲಿದ್ದ. ಚಂಡಪ್ರದ್ಯೋತನು ದೊಡ್ಡ ಸೈನ್ಯವನ್ನು ಪಡೆದಿರುವವನು, ಅವನನ್ನು ಯುದ್ಧದಲ್ಲಿ ಎದುರಿಸುವವರಿಲ್ಲ; ತನ್ನ ಕಾಂತನಾದ ಒದ್ದಾಯನನು ಪರದೇಶಕ್ಕೆ ಹೋಗಿರುವನು; ಎಂಬ ಅಳುಕಿನಿಂದ ಪ್ರಭಾವತಿಯು ತಳವೆಳಗಾದಳು. ತಾನು ಈಗಲೇ ಜಿನಪೂಜೆಯನ್ನು ಮಾಡಿ. ಈ ಘೋರೋಪಸರ್ಗವು ತೀರುವವರೆಗೂ ಆಹಾರಶರೀರನಿವೃತ್ತಿಯನ್ನು ಮಾಡಲು ನಿರ್ಧರಿಸಿದಳು.

ಅದೇ ಹೊತ್ತಿಗೆ, ಹೊನ್ನ ವಿಮಾನವನ್ನೇರಿ ವೈಭವದಿಂದ ದೇವಲೋಕದಿಂದ ಮೇರುಪರ್ವತದೆಡೆಗೆ ಹೋಗುತ್ತಿರುವಾಗ ಆದ ತನ್ನ ಅನುಭವವನ್ನು ವಾಸವನು ಹೀಗೆ ಹೇಳಿದ: ಶ್ರೇಷ್ಠ ಜಿನಭವನಗಳನ್ನೆಲ್ಲ ಪೂಜಿಸಿದೆ; ನಂದೀಶ್ವರ ದ್ವೀಪವನ್ನು ಕಾಣಲು ಭಕ್ತಿಯಿಂದ ಹೋಗುತ್ತಿರುವಾಗ ತನ್ನ ವಿಮಾನವು ಈ ಊರಿನ ಮೇಲೆ ಹಾರಲಾರದೆ ನಿಂತುಬಿಟ್ಟಿತು; ಆಗ ಅವಧಿಲೋಚನದಿಂದ ಈ ಸತಿಗಾಗಿದ್ದ ಉಪಸರ್ಗವನ್ನು ಅರಿತ ಅವನಿಗೆ ಕೋಪದಿಂದ ಮಾಳವೇಶನ ಸೈನ್ಯವನ್ನೆಲ್ಲ ಹುಡುಕುನೀರದ್ದುವ ಆಲೋಚನೆ ಬಂತು. ಆದರೆ ಸದ್ದೃಷ್ಟಿಯಿದ್ದ ಅವನು ಹಾಗೆ ಮಾಡದೆ ಬಿರುಗಾಳಿಯು ತರಗೆಲೆಗಳನ್ನು ಹಾರಿಸಿಕೊಂಡು ಹೋಗುವಂತೆ ಚಂಡಪ್ರದ್ಯೋತನ ಮಹಾಸೈನ್ಯವನ್ನೆಲ್ಲ ಕೊಂಡೊಯ್ದು ಉಜ್ಜಯಿನಿಯ ಮಹಾಕಾಲದ ಬಳಿ ಇಳಿಸಿದ. ಆನಂತರ ಈ ರಮಣಿಯ ಮಹಾಶೀಲವನ್ನು ಪರೀಕ್ಷಿಸುವ ಉದ್ದೇಶದಿಂದ ಆ ರಾಜನ ರೂಪವನ್ನು ಧರಿಸಿ ಊರನ್ನೆಲ್ಲ ಸಮುದ್ರದಂತೆ ಉಗ್ರವಾಗಿ ಆವರಿಸಿಕೊಂಡು, ನಗರವನ್ನೆಲ್ಲ ಮಾಯಾನಿದ್ರೆಯಲ್ಲಿರಿಸಿ, ಚತುರಂಗಬಲವನ್ನು ಸೃಷ್ಟಿಸಿ ಕೋಟೆಯನ್ನು ವಶಪಡಿಸಿಕೊಂಡುಬಿಟ್ಟ. ಆನಂತರ ಮಾಯೆಯಿಂದ ಊರೆಲ್ಲ ಉರಿಯುವಂತೆಯೂ, ರಾಜ್ಯದ ಸೈನ್ಯವೆಲ್ಲ ಯುದ್ಧದಲ್ಲಿ ಸೋಲುವಂತೆಯೂ, ಬೀದಿಗಳ್ಲಿ ರಕ್ತದ ಹೊಳೆ ಹರಿಯುವಂತೆಯೂ, ಅರಮನೆಯನ್ನು ಸುಟ್ಟು ಸೂರೆಗೊಳ್ಳುವಂತೆಯೂ ಮಾಡಿದ. ಆನಂತರ ಪ್ರಭಾವತೀ ಮಹಾದೇವಿಯ ಮುಂದೆ ಬಂದು ನಿಂತ. "ನನಗೆ ಈ

ಭೂಮಿಯಲ್ಲಿ ಎದುರು ನಿಲ್ಲುವವನು ಯಾವನಿದ್ದಾನೆ? ನಾನೂ ಯಮನೂ ಕೋಪಗೊಂಡರೆ ನಮ್ಮೆದುರು ನಿಂತು ಸೆಣಸುವ ಎಂಟೆದೆಯ ರಾಜರು ಯಾರು? ಅಯ್ಯೋ ಹುಚ್ಚಿ, ನಿನಗಿದು ತಿಳಿಯದು. ಅಲ್ಲದೆ, ನಿನ್ನ ಗಂಡ ಒದ್ದಾಯನನ ಬಿಂಕವನ್ನು ಸುಂಕವಾಗಿ ತೆಗೆದುಕೊಂಡು, ಅವನ ವೀರವನ್ನು ದೂರ ಮಾಡಿ. ಹೆದರಿದ ಜಿಂಕೆಯನ್ನು ಬೆಂಬತ್ತುವಂತೆ ಅಟ್ಟಿ ಹಿಡಿದು, ಕೋಡಗಗಟ್ಟು ಕಟ್ಟಿ ತಂದೆ; ನಂಬಿಕೆ ಬರದಿದ್ದರೆ ಇವನನ್ನು ನೋಡು" ಎಂದನು. ಆಗ ಆ ಕಾಂತೆಯು, "ನನ್ನ ಆಣ್ಮನನ್ನು ಎದುರಿಸಿ ನಿಲ್ಲುವ ವೀರರು ಈ ಅವನಿಯಲ್ಲಿದ್ದಾರೆಯೇ? ಹಾವಿನ ಹಾಗಿರುವ ಈ ದುಷ್ಟನು ನನಗೆ ದುಃಖವುಂಟು ಮಾಡಲು ಹೀಗೆ ನುಡಿಯುತ್ತಿದ್ದಾನೆ, ಅಷ್ಟೆ. ಇವನ ಜೊತೆ ಮಾರಿ ಬಳಾರಿಯರು ಮಾತಾಡಿಕೊಳ್ಳಲಿ. ಏನು ಮಾಡಿದರೂ ನಾನು ನನ್ನ ಶೀಲವನ್ನು ಬಿಡುವವಳಲ್ಲ" ಎಂದು ಮನಸ್ಸಿನಲ್ಲಿ ಪರಮಜಿನನ ಚರಣಗಳನ್ನು ಹಿಡಿದುಕೊಂಡು, ಪಂಚನಮಸ್ಕಾರಗಳನ್ನು ಗೈದು, ಹಿಂದಿನ ಮಹಾಪುರುಷರ ಚರಿತ್ರೆಗಳನ್ನು ನೆನೆದಳು.

ಆಗ ಚಂಡಪ್ರದ್ಯೋತ ವೇಷಧಾರಿಯಾದ ವಾಸವನು ಪರಿಪರಿಯಾಗಿ ಅನುನಯದ ನುಡಿಗಳಿಂದ ಹೀಗೆಂದ: "ನಿನ್ನ ಉರಿತದಿಂದಾಗಿ ನಿನ್ನ ನಾಡು ಕೆಟ್ಟು ಮೊಟ್ಟವಾಯಿತು; ನಿನ್ನ ಆಣ್ಮನಿಗೆ ಈ ವಿಧಿಯಾಯಿತು. ಇನ್ನು ಸುಮ್ಮನಿರದೆ ನನ್ನ ಜೊತೆ ಸುಖವಾಗಿ ಬಾಳು. ನಾನು ಆಸೆಪಡುವವರು ಇದ್ದಾರೆಯೇ? ಮಾನಿನಿಯೇ, ನಿನ್ನ ಪುಣ್ಯದ ಕಾರಣ ನಾನು ನಿನಗೆ ದೊರಕಿದ್ದೇನೆ. ನಿನ್ನ ಹೀನತೆಯನ್ನು ಬಿಟ್ಟು ಮೋಹದಿಂದ ನನ್ನನ್ನು ಕೂಡು. ಪತಿಯು ಮರಳುವನೆಂಬ ಆಸೆಯಿಂದ ನೀನೇನಾದರೂ ಇರುವೆಯಾದರೆ, ಇಗೋ ನಿನ್ನ ಗಂಡನನ್ನು ಸೆರೆ ಹಿಡಿದಿದ್ದೇನೆ. ಮರುಳುತನವನ್ನು ಬಿಟ್ಟು ನನ್ನ ಜೊತೆ ಪ್ರೀತಿಯಿಂದ ಸೇರು. ತಾರುಣ್ಯದಲ್ಲಿ ಮೆಚ್ಚಿದ ಪುರುಷರ ಜೊತೆ ಕೂಡಿ ಕಾಲ ಕಳೆಯದೆ, ಶೀಲವನ್ನು ಹಿಡಿದು ಉರಿಯಿಂದ ಸುಖವನ್ನು ಕೆಡಿಸುವೆಯಾ?" ಅವಳು ಯಾವುದಕ್ಕೂ ಬಾಗದಿರುವುದನ್ನು ಕಂಡು ಮನಸ್ಸಿನಲ್ಲಿಯೇ ಮೆಚ್ಚಿ, ಮನಸ್ಸಿನಲ್ಲಿಯೇ ಅವಳಿಗೆ ಪೊಡಮಟ್ಟ. ಆನಂತರ ತನ್ನ ದಿವ್ಯಸ್ವರೂಪವನ್ನು ತೋರಿ ಅವಳ ಉಪಸರ್ಗವು ಕಳೆದುದನ್ನು ತಿಳಿಸಿ. ಊರಿಗೆ ಹಾಕಿದ್ದ ಮಾಯಾನಿದ್ರೆಯನ್ನು ತೆಗೆದ. ಅವಳನ್ನು ಸುರತರುವಿನ ಹೂಗಳಿಂದ ಪೂಜಿಸಿ ಅವಳಿಗೆ ಶೀಲವತಿ ಎಂಬ ಹೆಸರನ್ನು ಕೊಟ್ಟು ದೇವಲೋಕಕ್ಕೆ ಹೋದ.

ಹೀಗೆ ಹಿನ್ನೆಲೆಯನ್ನು ವಿವರಿಸಿ, ಈ ವನಿತಾರತ್ನವು ಸಾಮಾನ್ಯಳಲ್ಲ ಎಂದು ಹೊಗಳಿದ. ಆನಂತರ ನಾನಾ ರತ್ನಮಯವಾದ ಸಿಂಹಾಸನವನ್ನು ಆ ಕ್ಷಣ ಸೃಷ್ಟಿಸಿ, ಅದರ ಮೇಲೆ ರಾಜರಾಣಿಯರನ್ನು ಕುಳ್ಳಿರಿಸಿ ಸಡಗರದಿಂದ ಹೂಮಳೆ ಕರೆದು, ದೇವ ದುಂದುಭಿ ಮೊಳಗುತ್ತಿರಲು, ಹಾಯಾಗಿ ತೆಂಕಣ ಗಾಳಿ ಬೀಸಲು, ಮೃದುವಾಗಿ ನಿನಾದವೆಸೆಯಲು, ದೇವತಾಸ್ತ್ರೀಯರು ಮಂಗಳಗೀತೆಯನ್ನು ಹಾಡುತ್ತಿರಲು, ಅವರನ್ನು ಕೂರಿಸಿದ. ಸುರುಚಿರ ರತ್ನಗಳಿಂದ ಒಪ್ಪುವ ಸುರರ ವಿಮಾನಗಳ ಸಮೂಹವು ಮಹಾರಾಜನ ಕೀರ್ತಿಲತೆಯು ಬಿಟ್ಟ ಹೂಗಳಂತೆ ಆಕಾಶವನ್ನೆಲ್ಲ ತುಂಬಿಬಿಟ್ಟಿತು. ಜನರಿಗೆಲ್ಲ ಅಚ್ಚರಿಯೆನಿಸುವಂತೆ, ಜಿನಭಕ್ತಿಯ ಬೆಳಸಿನ ರಾಶಿಯನ್ನು ತೋರಿಸುವಂತೆ ಅವರ ಮೇಲೆ ಹಾಲುಗಡಲಿನ ನೀರಿನಿಂದ ಅಭಿಷೇಕ ಮಾಡಿ ಪೂಜಿಸಿದ. ಆನಂತರ ರಾಜನಿಗೆ ಸಮ್ಯಕ್ತ್ವಚೂಡಾಮಣಿ, ವಾತ್ಸಲ್ಯರತ್ನಾಕರ, ಸುಕವಿನಿಕರಪಿಕಮಾಕಂದ, ಸಹಜಕವಿಮನೋಹರ, ಉದ್ಯಾನ ಕಳಹಂಸಕಳಕಂಠ ಎನ್ನುವ ಪ್ರಶಸ್ತವಾದ ಹೆಸರುಗಳನ್ನು ನೀಡಿದ. ತೃಪ್ತಿಯಾಗುವಂತೆ ಉಂಡ ಭೂತದ ಹಾಗೆ ನಾನಾ ಬಗೆಯ ಹೊಗಳಿಕೆಯ ಮಾತುಗಳನ್ನಾಡಿ ವಾಸವನು ತನ್ನ ಸ್ವರ್ಗದ ನಿವಾಸಕ್ಕೆ ಮರಳಿದ.

ಈ ರೀತಿಯಾಗಿ, ಪುರುಷರತ್ನ, ಪುರಾತನಚರಿತ, ಜಿನಚರಣಕಮಲಭೃಂಗ, ಸತ್ಯಾಭರಣ, ದಯಾಂಬುನಿಧಿ, ಮಂದರಧೈರ್ಯ, ಅನ್ಯರಾಜರ ಕಿರೀಟಗಳಿಂದ ತಾಡಿತವಾದ ಪಾದಗಳನ್ನುಳ್ಳವನು ಎಂದು ಒದ್ದಾಯನನನ್ನು ಧರೆಯೆಲ್ಲವೂ ಬಣ್ಣಿಸುವುದೇನು ಅರಿದು? ಇವನಂತೆ ತನ್ನ ಗುಣೋನ್ನತಿಯಿಂದಾಗಿ ಸುರರೆಲ್ಲ ಭಕ್ತಿಯಿಂದ ಪೂಜಿಸುವಂತೆ ಮಾಡಿಕೊಂಡ ಮಹಾತ್ಮನು ಬೇರೆ ಇನ್ನಾರಿದ್ದಾರೆ? ಅಂತಹವನು ಹಲವು ಕಾಲ ಆನಂದದಿಂದ ರಾಜ್ಯಭಾರ ಮಾಡಿದ.

ಹೀಗಿರಲು ಒಂದು ದಿನ ಅವನಿಗನ್ನಿಸಿತು: "ಇಷ್ಟು ದಿನ ನಾನು ಮತಿಗೆಟ್ಟು ಸಂಸಾರದಲ್ಲಿ ಮುಟ್ಟುಗೆಟ್ಟಿದ್ದೆ. ಇನ್ನು ಈ ಸಂಸಾರವನ್ನು ತೊರೆದು ನಿರ್ವೃತಿಯನ್ನು ತಾಳುವ ಬಗೆಯನ್ನು ಆಲೋಚಿಸುತ್ತೇನೆ." ದೇಹ ಅಶಾಶ್ವತ; ಯೌವನವು ನೀರ ಮೇಲಿನ ಗುಳ್ಳೆ; ಕಡುಗೂರ್ಪ ಹೆಂಡತಿಯರು ನಂಟರು ಮಕ್ಕಳು ತಮ್ಮಂದಿರು ಇವರೆಲ್ಲ ಸಾಯುವ ಕಾಲದಲ್ಲಿ ಶರಣಾಗುವರೇ? ಎಂದು ಆಲೋಚಿಸಿ, ಸಂಸಾರಕ್ಕೆ ಹೇಸಿ, ವೈರಾಗ್ಯವು ಹುಟ್ಟಲು, ತನ್ನ ಹಿರಿಯ ಮಗನಾದ ಅರಿಂಜಯನಿಗೆ ರಾಜ್ಯಾಭಿಷೇಕವನ್ನು ಮಾಡಿ ರಾಜ್ಯದ ಹೊಣೆಯನ್ನು ಒಪ್ಪಿಸಿ, ಅವನಿಗೆ ಹೀಗೆ ಬುದ್ಧಿವಾದವನ್ನು ಹೇಳಿದ: "ಧರೆಯನ್ನು ನೋಯಿಸಬೇಡ; ಸದಾ ಜಿನನ ಪಾದಕಮಲಗಳನ್ನು ಧ್ಯಾನಿಸುತ್ತಿರು; ಜೈನಾಗಮದ ರೀತಿಯಲ್ಲಿ ನಡೆದುಕೋ; ಬುಧರಿಗೆ ಒಳಿತನ್ನು ಮಾಡು; ಧರ್ಮವನ್ನು ಬಿಟ್ಟಿರಬೇಡ; ಉಗ್ರತನವನ್ನೂ ಧೂರ್ತತನ ಮುಂತಾದ ದೋಷಗಳನ್ನೂ ಹೊಂದಬೇಡ; ಮುನಿಸಂದೋಹದ ಸೇವೆಯನ್ನು ಅರ್ತಿಯಿಂದ ಮಾಡು." ಹೀಗೆ ಮಗನಿಗೆ ರಾಜ್ಯವನ್ನು ಒಪ್ಪಿಸಿಕೊಟ್ಟು, ಅದನ್ನು ಕೊಳೆಯಾದ ದಕ್ಕನ್ನು ತೊರೆಯುವ ಹಾಗೆ ತೊರೆದು ವೀರಸ್ವಾಮಿಯ ಪಾದಮೂಲದಲ್ಲಿ ಜಿನದೀಕ್ಷೆಯನ್ನು ಕೈಗೊಂಡು, ಕಷ್ಟಕರವಾದ ತಪಸ್ಸುಗಳನ್ನು ಗೈದು, ಅಷ್ಟವಿಧ ಕರ್ಮಗಳನ್ನು ನಿರ್ಮೂಲನ ಮಾಡಿಕೊಂಡು, ನಿಃಶ್ರೇಯಸಶ್ರೀಯಲ್ಲಿ ನೆಲೆಸಿದ. ಶೀಲವತಿ ಮಹಾದೇವಿಯೂ ಸುವ್ರತಿ ಎಂಬ ಕಂತಿಯರಲ್ಲಿ ದೀಕ್ಷೆ ಪಡೆದು, ಅರಿದಾದ ತಪಸ್ಸುಗಳನ್ನು ಮಾಡಿ. ಸನ್ಯಸನವಿಧಿಯಿಂದ ಮುಡಿಪಿ ಬ್ರಹ್ಮಕಲ್ಪದಲ್ಲಿ ಹತ್ತು ಸಾಗರದಷ್ಟು ಕಾಲ ಆಯುಷ್ಯವನ್ನು ಪಡೆದು ಮಹರ್ಧಿಕದೇವನಾಗಿ ಹುಟ್ಟಿದಳು.

ಆದ್ದರಿಂದ ನಿರ್ವಿಚಿಕಿತ್ಸೆಯೇ ಕೈವಲ್ಯಸತಿಯ ತಿಲಕ; ಅದು ಸೌಖ್ಯಾಭ್ಯುದಯಕಾರಣ; ಸಮಸ್ತ ಪಾಪಗಳೆಂಬ ಮದಕರಿಗೆ ಅದು ಸಿಂಹಸ್ವರೂಪಿ; ಗುಣಗಳಲ್ಲಿ ರತ್ನದ ಕಲಶ. ಎಂದು ನಿರ್ವಿಚಿಕಿತ್ಸೆಯ ಫಲವನ್ನು ಗಣಧರಸ್ವಾಮಿಗಳು ವಿವರಿಸಿದರು. ಧರಣೀಸ್ತುತ್ಯನೂ, ಗುಣಗಳ ಸಮುದ್ರನೂ, ಜಿನಚರಣಕಮಲ ಭೃಂಗನೂ, ಮಂದರಧೈರ್ಯನೂ, ಸರಸ್ವತೀಪ್ರಿಯನೂ, ಕಷಾಯರಹಿತನೂ, ಭವ್ಯಜನರೆಂಬ ತಾವರೆಗಳಿಗೆ ಸೂರ್ಯಸಮಾನನೂ. ನಿರುಪಮನೂ, ತ್ರೈವಿದ್ಯ ಚಕ್ರೇಶ್ವರಪಾದಕಮಲಗಳಲ್ಲಿ ಭೃಂಗದಂತಿರುವವನೂ ಸುಕವಿಜನಮನಃಪದ್ಮಿನೀ ರಾಜಹಂಸನೂ ಆದ ಶ್ರೇಣಿಕನು ಭಕ್ತಿಯಿಂದ ಕೇಳಿ ಧನ್ಯತೆವಡೆದ.

ಅಮೂಢದೃಷ್ಟಿತ್ವ

ನಿರ್ವಿಚಿಕಿತ್ಸೆಯ ಫಲವನ್ನು ಲೇಸಾಗಿ ತಿಳಿದು ಮಗಧನಾಯಕನಾದ ಶ್ರೇಣಿಕ ಮಹಾರಾಜನು ಅಮೂಢದೃಷ್ಟಿಯ ಕತೆಯನ್ನು ಬೆಸಸಬೇಕೆಂದು ಗಣಧರಸ್ವಾಮಿಗಳನ್ನು ಬೇಡಿಕೊಂಡ. ಆಗ ಅವರು ನಿರ್ವಾಣಲಕ್ಷ್ಮಿಯ ಎದೆಯನ್ನಲಂಕರಿಸಿರುವ ಮುತ್ತಿನ ಹಾರದಂತಿರುವ ಅಮೂಢದೃಷ್ಟಿಯ ಬಗೆಗಿನ ಕತೆಯನ್ನು ಹೇಳಲು ತೊಡಗಿದರು. ಜಿನರಂತೆ, ಸಿಂಹದಂತೆ, ಗರುಡನಂತೆ, ಕಾಮನಂತೆ, ಭೋಜನಂತೆ, ಕರ್ಮಭೂಮಿಯಂತೆ, ಮನುಷ್ಯರಂತೆ, ಸಂಯತನಚಿತೆ, ಮಹಾವ್ರತಗಳಂತೆ, ಪಾಂಡವರಂತೆ, ಜ್ಯೋತಿರ್ಲೋಕದಂತೆ, ವ್ಯಾಕರಣದಂತೆ, ಜೋಯಿಸದಂತೆ, ಏಳನೆಯ ತೀರ್ಥಂಕರ ಧರಣೇಂದ್ರನಂತೆ, ದರ್ಶನ–ನಿಶ್ಶಂಕೆ–ನಿಷ್ಕಾಂಕ್ಷೆ–ನಿರ್ವಿಚಿಕಿತ್ಸೆ–ಅಮೂಢದೃಷ್ಟಿತ್ವಗಳಿಂದ ಕೂಡಿ ಶೋಭಿಸಬೇಕು. ಮೂಢತೆಯನ್ನು ಬಿಟ್ಟು ಬೇರೆಯವರು ಮಾಡುವ ದೊಂಬತನಕ್ಕೆ ಮರುಳಾಗದೆ, ಮೂರ್ಖರು ಮಾಡುವುದನ್ನು ಲೇಸೆಂದು ಹೇಳದೆ, ಅಮೂಢದೃಷ್ಟಿಯನ್ನು ಅರಿಯುವವನು ಆಲೋಚಿಸಿ ಸ್ವೀಕರಿಸಬೇಕು.

ಅದರ ಮಹಿಮೆಯು ಎಂಥದೆಂದರೆ, ಕೇಳು. ಭೂದೇವಿಯು ತೊಟ್ಟ ಆಭರಣವೆನಿಸುವ ಮಡಂಬ–ಖರ್ವಡ–ಪುರ–ಖೇಡಗಳಿಂದ ಶೂರಸೇನವೆಂಬ ನಾಡು ಶೋಭಿಸುವುದು. ಅದರಲ್ಲಿ ಅನುಪಮವಾದ ದೇವವಿಮಾನಗಳಂತೆ ಕಾಣುವ ಜಿನಭವನಗಳಿಂದಲೂ, ಸುತ್ತುವರಿದ ನಂದನವನಗಳಿಂದಲೂ, ಅಮರಾವತಿಯಂತೆ ಉತ್ತರ ಮಧುರೆಯೆಂಬ ಪುರವು ಕಂಗೊಳಿಸುವುದು. ಅದನ್ನಾಳುವವನು ವರುಣನೆಂಬ ಮಾಂಡಲಿಕ. ಅವನ ಪಟ್ಟದರಸಿಯು ರೇವತೀ ಎಂಬುವವಳು. ಅವಳು ಜಿನಭಕ್ತಿಯಲ್ಲಿ ಶಚೀದೇವಿಗೆ ಸಮಾನಳು; ಪಾತಿವ್ರತ್ಯದಲ್ಲಿ ಸೀತೆಗೆ ದೊರೆ; ಚೆಲುವಿನಲ್ಲಿ ರತಿಸಮಾನೆ. ಅಲ್ಲದೆ ಆಕೆ ಸದ್ಗುಣಾಭರಣೆ. ಅವಳ ಜೊತೆ ವರುಣನು ಸುಖಸಂಕಥಾವಿನೋದದಿಂದ ರಾಜ್ಯವಾಳುತ್ತಿದ್ದ.

ಅದಕ್ಕೆ ಸಮಾನಾಂತರವಾಗಿ ವಿಜಯಾರ್ಧಪರ್ವತದ ದಕ್ಷಿಣಶ್ರೇಢಿಯ ಮೇಘಕೂಟವೆಂಬ ಪುರವನ್ನು ಚಂದ್ರಾಭನೆಂಬುವವನು ಆಳುತ್ತಿದ್ದ. ಅವನಾದರೋ, ಧರಣಿಯಲ್ಲಿ ಸ್ತುತ್ಯನಾದವನು, ಖೇಚರಪೂಜಿತ, ಜಿನೇಂದ್ರಪದಸರಸಿಜದಲ್ಲಿನ ದುಂಬಿ, ದಯಾಳು, ಸದ್ಗುಣಾಭರಣನೆನಿಸಿದವನು. ಅವನ ಪಟ್ಟದರಸಿಯು ಸುಮತಿ ಮಹಾದೇವಿ. ಅವರಿಬ್ಬರಿಗೂ ಚಂದ್ರಶೇಖರನೆಂಬ ಮಗನು ಹುಟ್ಟಿದ. ಆ ಮಗುವಿನ ವಿನೋದಗಳನ್ನು ನೋಡಿಕೊಂಡು ಅವರು ಸುಖವಾಗಿ ರಾಜ್ಯವನ್ನಾಳಿ ಬಾಳುತ್ತಿದ್ದರು. ಹೀಗಿರುತ್ತಿರಲು ಒಂದು ದಿನ ಚಂದ್ರಾಭನು ಶೋಭಿಸುತ್ತಿದ್ದ ಮಾಡದಲ್ಲಿ ಕುಳಿತಿದ್ದ. ತುಂಬಿದ ಭಂಗಿ ತುಂಬಿತ್ತು, ಕುಳಿತಿದ್ದ ನಾಯಕರು ಹಾಗೂ ವೀರರ ರೂಪು ಮಹೋನ್ನತಿಕೆಗಳು ಮೆರೆದಿದ್ದವು, ಇಂಪಾದ ಗಾಯನ ನೃತ್ಯಗಳು ಸೊಗಸಿನಿಂದ ನಡೆಯುತ್ತಿದ್ದವು.

ಆಗ ಖೇಚರರಾಜನು ಸಂಭ್ರಮದಿಂದ ಅಂಬರಚರರನ್ನು ನೊಡುತ್ತ, ಸಂಗೀತವನ್ನಾಲಿಸುತ್ತ ತನ್ನ ರಾಜಸಭೆಯ ಚೆಲುವಿಗೆ ಮೂವಟ್ಟು ಆನಂದಿಸಿ, ತನ್ನನ್ನು ಬಿಟ್ಟರೆ ಇನ್ನು ಯಾರಿದ್ದಾರೆ ಎಂಬ ಭಾವನೆಯಿಂದ ಬೀಗಿ ಆಗಸವನ್ನು ನೋಡಿದ. ಅಲ್ಲಿ ಆನೆಗಳ ಹಿಂಡಿನಂತೆ, ಮೃಗಸಂಕುಲದಂತೆ, ಬಿಂದಿಗೆಗಳ ಸಮೂಹದಂತೆ, ಸಿಂಹಗಳ ಗುಂಪಿನಂತೆ, ಕಾಡಿನಂತೆ, ನವಿಲುಗಳ ತಂಡದಂತೆ, ಶರಭಾವಳಿಯಂತೆ, ಮನಷ್ಯರಂತೆ, ಕೋತಿಗಳ ಹಿಂಡಿನಂತೆ, ಹಸುಗಳಂತೆ ಮೋಡಗಳ ವ್ಯಾಪಾರ ನಡೆದಿತ್ತು. ಚಂದ್ರಾಭನಿಗೆ ತುಂಬ ವಿಸ್ಮಯವೆನಿಸಿತು. ಅದನ್ನೇ ರೆಪ್ಪೆ ಮಿಟುಕಿಸದೆ ನೋಡುತ್ತಿದ್ದ. ಇದ್ದಕ್ಕಿದ್ದಂತೆ, "ಅಂಬರಚರಪತಿಯೇ ಕೇಳು, ಈ ಸಂಸಾರದ ಸುಖವು ಸ್ಥಿರವಲ್ಲ" ಎಂದು ರಾಜನಿಗೆ ತಿಳಿಸುವಂತೆ ಮೋಡಗಳ ರಾಶಿಯು ಕರಗಿಹೋಯಿತು. ತಕ್ಷಣವೇ ವಿಯಚ್ಚರರಾಜನ ಮನಸ್ಸಿನಲ್ಲಿ ವೈರಾಗ್ಯವು ಉದಯಿಸಿತು. ಅವನಿಗನ್ನಿಸಿತು: "ಸಿರಿಯು ಕಾಮನ ಬಿಲ್ಲಿನ ಹಾಗೆ; ಹೊಸ ಜವ್ವನವು ಇದ್ದಿಲ ಬೂದಿಯ ಹಾಗೆ; ಹೆಣ್ಣಿನ ಸುಖವು ಬಯಲ ತೊರೆಯ ಹಾಗೆ; ವೈಭವವು

ಮಂಜಿನ ಹಾಗೆ; ರಾಜವೈಭವದ ಔನ್ನತ್ಯವು ಮಳಲ ದಿಬ್ಬದ ಹಾಗೆ; ದೇಹವು ದರಿಯ ಮರದ ಹಾಗೆ ಕೆಡುವುವೇ ಹೊರತು ಸ್ಥಿರವಾಗಿರಲು ಸಾಧ್ಯವೇ! ಹತ್ತಿಗೆ ಹತ್ತಿದ ಬೆಂಕಿಯಂತೆ ಹಣ, ವಸಂತದ ಶೋಭೆಯಂತೆ ಆಯುಸ್ಸು, ದೊಡ್ಡ ಅಲೆಗಳ ಪರಂಪರೆಯಂತೆ ಸೊಬಗು, ಒಗ್ಗೂಡಿದ ಮೋಡಗಳಂತೆ ನಂಟರ ಪ್ರೀತಿ, ಹಣ್ಣು ಬಿಟ್ಟ ಮರದಂತೆ ವಿಲಾಸ, ನೀರ ಬೊಬ್ಬುಳಿಕೆಯಂತೆ ಮಹಿಮೆಯ ಆಧಿಕ್ಯ; ಇವು ಶಾಶ್ವತವಲ್ಲ."

ಸಂಸಾರದ ಅನಿತ್ಯತೆಯು ಅವನಿಗೆ ಮನವರಿಕೆಯಾಯಿತು; ಅವನ ಮನಸ್ಸಿನಲ್ಲಿ ಒಲ್ಲದ ಹೆಂಡತಿಯ ಬಗ್ಗೆಯಂತೆ ಭೋಗೋಪಭೋಗಗಳ ಬಗ್ಗೆ ಹೇಸಿಕೆಯುಂಟಾಯಿತು. ಪರಮಾರ್ಥವನ್ನು ಕುರಿತು ಯೋಚಿಸಿದರೆ, ಸ್ಪರ್ಶನೇಂದ್ರಿಯದ ಉನ್ನತಿಯಿಂದ ಆನೆಗಳು ನರನ ಕಟ್ಟಿಗೆ ಒಳಗಾಗುತ್ತವೆ; ನಯನೇಂದ್ರಿಯದ ಉನ್ನತಿಯಿಂದ ಸೊಡರಲ್ಲಿ ಬಿದ್ದು ಸಾಯುವ ಪತಂಗಗಳಂತೆ ಕಣ್ಣ ನೋಟಕ್ಕೆ ಸೋಲುವವನು ಬುದ್ಧಿಗೆಟ್ಟು ಕುರಿಯಾಗುತ್ತಾನೆ; ಗೀತರವದಿಂದ ಆಕರ್ಷಿತವಾಗಿ ಮುಂದೆ ಕಾಣಿಸುವ ಮೃಗಕ್ಕೆಳಸಿ ಹೋಗಿ ಸಾಯುವ ಮೃಗದಂತೆ ಶ್ರೋತ್ರದ ಸುಖಕ್ಕೆ ಆಸೆಪಡುವವನು ಗಾಂಪನಾಗುತ್ತಾನೆ; ಮರವನ್ನು ಕೊರೆಯುವ ದುಂಬಿಯು ಗಂಧಕ್ಕೆ ಸೋತು ತಾವರೆಯ ದಳವನ್ನು ಭೇದಿಸಲಾರದೆ ಅತಿಮೋಹದಿಂದ ಸಾಯುತ್ತವೆ; ರಸನೇಂದ್ರಿಯದ ಆಕರ್ಷಣೆಗೊಳಗಾಗಿ ಗಾಳದೆಡೆಗೆ ಹೋಗಿ ಮೀನುಗಳು ಸಾಯುತ್ತವೆ ಎಂದ ಮೇಲೆ ನಾಲಗೆಯ ಚಾಪಲ್ಯವು ಯಾರನ್ನು ತಾನೇ ಹಾಳುಮಾಡುವುದಿಲ್ಲ! ಒಂದೊಂದು ಬಗೆಯ ಜೀವಿಯೂ ಒಂದೊಂದು ಇಂದ್ರಿಯದ ಆಸೆಯಿಂದಾಗಿ ಸಾಯುತ್ತವೆ; ಅಂದಾಗ, ಐದೂ ಇಂದ್ರಿಯಗಳಿಂದ ಕೂಡಿದ ನರನು ನಾಶವಾಗುವುದರಲ್ಲಿ ಸಂದೇಹವೆಲ್ಲಿಯದು? ಇವನ್ನೆಲ್ಲ ಯೋಚಿಸಿದ ಅವನಿಗೆ ಇಂದ್ರಿಯಗಳ ಬಗ್ಗೆ ತುಂಬ ಭಯವೆನಿಸಿತು. ಮೂಗು ಸಿಂಬಳ ಸುರಿಸುವ ನಾಳ; ಬಾಯಿ ಉಗುಳಿನ ಹೆದ್ದೊರೆ; ಹೊಟ್ಟೆಯು ಮಲದ ಆಗರ; ಕಣ್ಣು ಕಿಳ್ಳಿನ ಮಡು; ಕಿವಿ ಕೊಗ್ಗಿಯ ಹುತ್ತ; ಚರ್ಮವು ಸುತ್ತುವರಿದ ಕೋಟೆ; ದೇಹವು ಕೀವು ನೆತ್ತರುಗಳ ತಿಪ್ಪೆ ಮತ್ತು ನೆಣದಿಂದ ಬಿಗಿದಿರುವ ಮಾಂಸಖಂಡಗಳ ತಾಣವಲ್ಲವೇ? ಎಂದು ಅವನಿಗೆ ಶರೀರದ ಅಶುಚಿತ್ವದ ಬಗ್ಗೆ ಅನ್ನಿಸಿದಾಗ ತೀವ್ರ ವೈರಾಗ್ಯವುಂಟಾಯಿತು.

ಭಯಂಕರ ಕೋಪದಿಂದ ಅಟ್ಟಿಸಿಕೊಂಡು ಬಂದು ತಿನ್ನುವ ಹುಲಿಯನ್ನು ದಾರಿಯಲ್ಲಿ ಅಡ್ಡಲಾಗಿ ಕಂಡಂತೆ; ಭರದಿಂದ ಬೆನ್ನೇರಿ ಬಂದು ನುಂಗುವ ಆನೆಯನ್ನು ಕಂಡಂತೆ; ರಭಸದಿಂದ ಮೇಲೆ ಬೀಳುವ ಕರಡಿಯನ್ನು ಮನೆಯಲ್ಲೇ ಕಂಡ ಹಾಗೆ; ಸಿರಿವೈಭವಗಳಿಗೂ ಔನ್ನತ್ಯಭೋಗಗಳಿಗೂ ಆಸೆಪಡುವುದೇ! ಎಂದು ಸಂಸಾರಸುಖಕ್ಕೆ ಭಯಗೊಂಡು ಹಿರಿಯ ಮಗ ಚಂದ್ರಶೇಖರನನ್ನು ಮುಂದೆ ಕುಳ್ಳಿರಿಸಿಕೊಂಡು ಚಂದ್ರಾಭ ಮಹಾರಾಜನು ಹೀಗೆಂದು ನುಡಿದ: "ಸಿರಿಯಿಂದ ಮೈಮರೆತು ಪರವನ್ನು ಕುರಿತು ಆಲೋಚಿಸದೆ ರಾಜ್ಯಮೋಹದಿಂದ ಮರುಳಾಗಿ ಮಂದಬುದ್ಧಿಯಿಂದ ಇದುವರೆಗೂ ನಾನು ಕೆಟ್ಟೆ, ಮಗನೇ, ಮುಕ್ತಿಲಕ್ಷ್ಮಿಯನ್ನು ಒಲಿಸಿಕೊಳ್ಳಲು ಇನ್ನು ನಾನು ಜಿನರೂಪಕ್ಕೆ ಶರಣು ಹೊಗಬೇಕು. ಆದ್ದರಿಂದ ಈ ಖೇಚರರಾಜ್ಯಭಾರವನ್ನು ನೀನು ಕೈಗೊಳ್ಳಬೇಕು." ಅದಕ್ಕೆ ಕುಮಾರನು, "ಕೇಡಿರದ ವೈರಾಗ್ಯ ಹೊಂದುವುದನ್ನು ನೀವು ಆಯ್ದುಕೊಂಡು, ಕೆಟ್ಟದ್ದನ್ನು ಮಾಡುವ ಹಾಗೂ ದುರ್ಗತಿಯಲ್ಲಿ ದೂಡುವ ರಾಜ್ಯಭಾರವನ್ನು ನನಗೆ ದಯೆಗೆಯ್ಯುವಿರೇನು? ಪ್ರಪಂಚದಲ್ಲಿ ಮನುಷ್ಯರು ಆಲೋಚನೆ ಮಾಡಿ ಲೇಸಾದ ವಸ್ತುಗಳನ್ನೇ ತಮ್ಮ ಪ್ರೀತಿಪಾತ್ರರಿಗೆ ನೀಡುತ್ತಾರೆಯೇ ವಿನಾ ಹೊಲ್ಲದನ್ನು ಎಂದೂ ಕೊಡುವುದಿಲ್ಲ; ತಾವು ನಿರಂತರ ಸುಖವನ್ನು ಹೊಂದುವ ಕಾರ್ಯವನ್ನು ಕೈಗೊಂಡು ನನಗೆ ದುರ್ಗತಿಗೊಯ್ಯುವ ಮತ್ತು ದುಷ್ಕರ್ಮಹೇತುವಾದ ಈ ನಶ್ವರ ರಾಜ್ಯವನ್ನು ಕೊಡಬಹುದೇ? ಆ ಕಾರಣದಿಂದ, ನನ್ನ ಮೇಲೆ ತಮಗೆ ಮೋಹಸ್ನೇಹಗಳು ಇರುವುದಾದರೆ, ಶಾಶ್ವತಸುಖವನ್ನೀಯುವ ತಪಃಶ್ರೀಯನ್ನು ದಯೆಗೈಯಬೇಕು; ಅದು ಬಿಟ್ಟು ನರಕದ ದಾರಿಯಲ್ಲಿ ಕೊಂಡೊಯ್ಯುವ ರಾಜ್ಯಶ್ರೀಯನ್ನು ನೀಡಬೇಡಿ" ಎಂದು ಬೇಡಿಕೊಂಡ. ಅದಕ್ಕೆ ವಿಯಚ್ಚರರಾಜನು ಹೀಗೆಂದ: "ನೀನು ಹೇಳಿದುದೇನೋ ಸರಿ. ಆದರೆ ನೀನು ಕೈವಲ್ಯಲಕ್ಷ್ಮಿಯನ್ನು ಬಯಸುವುದಾದರೆ, ಉನ್ನತಿಯಿಂದ ನಾನು ಹೇಳುವುದನ್ನು ಅದು ಇದು ಎನ್ನದೆ ಕೇಳು" ಎಂದು ಮಗನಿಗೆ ಕೈಮುಗಿದು, "ಈ ವಿಯಚ್ಚರರಾಜ್ಯವನ್ನು ಪರಿಪಾಲಿಸಲೆಂದೇ

ಪಡೆದ ಭೂವಧೂಪ್ರಿಯನಾದ ಮನೋಹರ ರೂಪದ ಒಬ್ಬ ಮಗನನ್ನು ಪಡೆದ ಮೇಲೆ, ಅವನಿಗೆ ಇದರ ಹೊಣೆಯನ್ನು ಹೊರಿಸಿ ಆನಂತರ ಘೋರತಪಸ್ಸನ್ನು ಕೈಗೊಳ್ಳಬಹುದು" ಎಂದು ಪ್ರಧಾನರೊಡನೆ ಕೇಳಿಕೊಂಡ. ಮೃದುವಚನಗಳಿಂದ, ಲಲ್ಲೆಮಾತುಗಳಿಂದ ಮಗನನ್ನು ಒಪ್ಪಿಸಿ ಅವನಿಗೆ ಪಟ್ಟ ಕಟ್ಟಿದ.

"ಚಾರುಚರಿತ್ರನೂ, ಗುಣಾನ್ವಿತನೂ, ಧರ್ಮದಲ್ಲಿ ಸದಾಚಾರನೂ, ಉಜ್ವಲವಾದ ಜಿನೇಂದ್ರಪಾದಯುಗಳದಲ್ಲಿ ಭಕ್ತನೂ, ತನ್ನ ಸೊಕ್ಕಿನಿಂದ ಯಾರನ್ನೂ ನೋಯಿಸದಿರುವವನೂ, ಜೈನಯೋಗಿವೃಂದಾರಕರಲ್ಲಿ ಭಕ್ತಿಯನ್ನು ತೋರುವವನೂ ಆಗು. ಅಲ್ಲದೆ, 'ನೀನು ಕೊಟ್ಟ ಕುನ್ನಿ ಬೆಳೆದು ಎಳೆಯ ನಾಯಿಯಾಯಿತು' ಎಂಬ ಗಾದೆಯ ಮಾತನ್ನು ಸುಳ್ಳು ಮಾಡದೆ, ತಾವರೆ ಎಲೆಯ ಮೇಲಿನ ನೀರಿನಂತೆ ಸಂಸಾರದಲ್ಲಿನ ದುಃಖ–ಪಾಪಗಳನ್ನು ಹೊಂದದೆ, ಚಿಪ್ಪಿನಲ್ಲಿ ಹುಟ್ಟಿಯೂ ಅದರಿಂದ ಭಿನ್ನವೆಂಬ ರೀತಿಯಲ್ಲಿ ನೀನು ಸಕಲಗುಣಗಳಲ್ಲಿಯೂ ಧರ್ಮದಲ್ಲಿಯೂ ರಾಜನೀತಿಯಲ್ಲಿಯೂ ಜಿನಭಕ್ತಿಯಲ್ಲಿಯೂ ನನಗಿಂತಲೂ ಮಿಗಿಲೆನಿಸಿಕೋ" ಎಂದು ಬುದ್ಧಿ ಹೇಳಿ ಬೇಡಿಕೊಂಡ. ತನಗೆ ಮರ್ಯಾದೆ ಕೊಡದ ಒಡೆಯನನ್ನು ಯುದ್ಧವೀರ, ದುಷ್ಕರ್ಮಗಳನ್ನು ಸುಚರಿತ, ಹಳಿವನ್ನು ಸಜ್ಜನರು, ಜಾರೆಯನ್ನು ಆಯುಸ್ಸುಳ್ಳ ಪುರುಷ, ಖಳನನ್ನು ಧರ್ಮಪರರು, ಮಿಥ್ಯಾತ್ವವನ್ನು ವಿಶೇಷ ತಿಳಿವಳಿಕೆಯುಳ್ಳವನು ಬಿಡುವ ರೀತಿಯಲ್ಲಿ ಆ ಖೇಚರರಾಜನು ರಾಜ್ಯದ ಮೇಲಣ ಆಸೆಯನ್ನು ಬಿಟ್ಟ.

ಆ ರೀತಿ ಸಕಲ ರಾಜ್ಯವನ್ನು ತೊರೆದು ಊರಿಂದ ಹೊರಟು ವಿಮಾನವನ್ನೇರಿ ಪಾಂಡ್ಯದೇಶದ ದಕ್ಷಿಣದಲ್ಲಿರುವ ಮಧುರೆಗೆ ಬಂದು ಊರ ಹೊರಗೆ ನಿಂತ. ಅಲ್ಲಿ ಆಡುವ ಬಾವುಟಗಳಿಂದಲೂ ತಂಪಾದ ಉದ್ಯಾನಗಳಿಂದಲೂ ಸುಳಿದಾಡುವ ಹಂಸಗಳಿಂದಲೂ ಕೂಡಿ ಸುಂದರವಾದ, ರತ್ನದೀಪ್ತಿಯಿಂದ ಕೂಡಿ ಹೊಳೆವ ಬಳ್ಳಿವಾಡಗಳಿಂದಲೂ ಕಳಶಸಹಿತವಾದ ಮದ್ದಾನೆಗಳ ಶೋಭೆಯಿಂದಲೂ ಕಡುರಮ್ಯವಾದ ನಿರ್ಮಲ ಜಿನಮಂದಿರಗಳನ್ನು ಕಂಡು ಆಶ್ಚರ್ಯದಿಂದ ನೋಡಿದ. ಭಕ್ತಿಭರದಿಂದ ಕೈಮುಗಿದು ಊರೊಳಗೆ ಹೊಕ್ಕು ನಿಧಾನವಾಗಿ ಬಂದ. ಕಿವಿಯವರೆಗೂ ಬರುವ ನೀಳವಾದ ಕಣ್ಣುಗಳು, ಅಕ್ಕರಿನಿಂದ ಕೂಡಿದ ಉಬ್ಬಿದ ಹುಬ್ಬುಗಳು, ಸುಂದರವಾದ ಹಲ್ಲುಗಳು, ಇವುಗಳನ್ನು ಹೊಂದಿ ಸುವಿಟಜನರ ಮನಸೆರೆಹಿಡಿಯುವ ಮುಖಕಮಲಗಳನ್ನುಳ್ಳ ವಿಲಾಸಿನಿಯರು ಜಿನಾಲಯಕ್ಕೆ ಬರುವುದನ್ನು ಅವನು ಕಂಡ. ವಿಶಾಲನೇತ್ರಗಳು, ನೀಳವಾಧ ಕೂದಲ ಚೆಲುವು, ಆಭರಣಗಳ ಬೆಡಗು, ಬಡನಡುವಿನ ಭಂಗಿ, ಕುಚಗಳ ತೋರಿಕೆ – ಇವುಗಳು ಕಣ್ಣನ್ನು ಆಕರ್ಷಿಸಲು, ವಿಟರನ್ನು ಸೋಲಿಸಲು ಕಾಮನ ದಾಳಿ ಬರುವ ಹಾಗೆ ಪರಮಜಿನೇಂದ್ರನೋಲಗಕ್ಕೆ ಬರುವ ವಿದಗ್ಧೆಯರನ್ನು ನೋಡಿದ.

ಹೊನ್ನ ತೋರಣ, ಇಂದ್ರನೀಲದ ಜಗಲಿ, ನೀಲಮೇಘವರ್ಣದ ಮುತ್ತಿನ ಸರಗಳಿಂದ ನಕ್ಷತ್ರಗಳನ್ನು ಹೋಲುವ ಜೈನಗೃಹಗಳು ವೈಭವದಿಂದ ಶೋಭಿಸಿದವು. ಕನಕದ ತೋರಣ, ಮುತ್ತಿನ ರಂಗವಲ್ಲಿ, ಪಂಚಮಹಾಧ್ವನಿಗಳು ಬಸದಿಗಳಲ್ಲಿ ರಂಜಿಸುತ್ತಿದ್ದವು. ಆ ಊರನ್ನು ನೋಡಲು ದೇವತೆಗಳು ದೇವಲೋಕದಿಂದ ತಮ್ಮ ವಿಮಾನಗಳಲ್ಲಿ ಧರೆಗೆ ಅವತರಿಸಿ ಬಂದರೆಂಬಂತೆ ಕಾಣುತ್ತಿದ್ದ ಜಿನಾಲಯಗಳ ಸಾಲು, ಅವುಗಳ ಮುಂದಿನ ಬಾಗಿಲ್ವಾಡಗಳು, ಅವುಗಳ ಮುಂದೆ ಚಂದ್ರಸೂರ್ಯರನ್ನು ಮೀರಿಸಿ ಬೆಳಗುವ ಮಕರತೋರಣಗಳು, ಚೀನಾಂಬರದ ಮಹಾಧ್ವಜಗಳು, ಪಚ್ಚೆ–ಹವಳಗಳ ಸೋಪಾನಗಳು, ಮೋಕ್ಷಶ್ರೀಯ ಸಿಂಹಾಸನವೆನಿಸುವ ಪ್ರಾಕಾರಗಳು – ಇವನ್ನೆಲ್ಲ ನೋಡುತ್ತ ಬಂದ. ಆಗ, ಎರಡೂ ಕಡೆಗಳಲ್ಲಿ ಅಶ್ವದಳವಿರಲು, ಮುಂದೆ ಮಹಾವೈಭವದಿಂದ ಧ್ವಜಗಳು ಹಾರಾಡುತ್ತಿರಲು, ಸುತ್ತಲೂ ರಾಜಕುಮಾರರು ಠೀವಿಯಿಂದ ಬರುತ್ತಿರಲು, ಚಿಗುರಿದ ಮರಗಳ ನಂದನವನದಂತೆ ಕಾಣಿಸುತ್ತ, ತೂರ್ಯನಾದವಾಗುತ್ತಿರಲು, ಗಣಿಕೆಯರು ಚಾಮರವಿಕ್ಕುತ್ತಿರಲು, ದೇವೇಂದ್ರನ ವೈಭವದಿಂದ ಆ ಪುರದ ಅಧಿಪತಿ ಚಿತ್ರವಾಹನ ಮಹಾರಾಜನು ಆಗಮಿಸಿದ.

ಪ್ರತಿನಿತ್ಯವೂ ಜಿನಾಲಯವನ್ನು ಸಂದರ್ಶಿಸುವುದು ಅವನ ಪದ್ಧತಿ. ಒಂದೊಂದು ಜಿನಭವನದಲ್ಲೂ ಪೂಜೆ ಸಲ್ಲಿಸಿ, ಕೊನೆಗೆ ಮಹಾರಾಜನು ಭೂತಹಿತವೆಂಬ ತಮ್ಮ ವಂಶದ ಬಸದಿಗೆ ಬಂದ.

ಆದರದಿಂದ, ಬಡವನಿಗೆ ಹೊನ್ನ ರಾಶಿ ಸಿಕ್ಕಿದಂತೆ ಆದರದಿಂದ ಆ ಧರಣೀನಾಥನು ಭಕ್ತಿಯ ಭರದಿಂದ ಮೂರು ಬಾರಿ ಪ್ರದಕ್ಷಿಣೆ ಹಾಕಿ ಆ ಜಿನಗೃಹವನ್ನು ನಿಷಿದ್ಧಿಯ ಮೂಲಕ ಒಳಹೊಕ್ಕ. ಇರುವಂತಿ, ಪಾದರಿ, ಜಾಜಿ, ಮೊಲ್ಲೆ, ಹೊಸ ಸಂಪಗೆಯ ಹೂಗಳಿಂದ ಪರಮ ಜಿನೇಶ್ವರನಿಗೆ ಭಕ್ತಿಯಿಂದ ಪೂಜೆಯನ್ನು ಸಲ್ಲಿಸಿದ. ಆನಂತರ ಹಲವಾರು ರತ್ನಹಾರಗಳಿಂದಲೂ, ಪುಷ್ಪಮಾಲೆಗಳಿಂದಲೂ ಕೈಯಾರೆ ಪೂಜೆ ಮಾಡಿದ. ಪರಮ ಜಿನೇಶ್ವರನ ಓಲಗದಲ್ಲಿ ಭಕ್ತಿಯಿಂದ ದೇವೇಂದ್ರನು ಇರುವ ಹಾಗೆ ಆ ಪಾಂಡ್ಯಾನ್ವಯ ಕುವಲಯಶರನಿಧಿಯಿದ್ದ. ರಸದ ಮಳೆ ಸುರಿಯುತ್ತದೆ, ಭೋರ್ಗರೆಯುತ್ತ ರಸಾಯನದ ಹೆದ್ದೊರೆಯು ಹರಿಯುತ್ತದೆ, ಅಚ್ಚರಿಯಾಗುವಂತೆ ಅಮೃತದ ನದಿಯುಕ್ಕಿ ಹರಿಯುತ್ತದೆ ಎನ್ನುವ ಹಾಗೆ ಕೊಂಚ ಕಾಲ ಓಲಗವಿತ್ತು, ತ್ರಿಲೋಕಮಂಗಳಕರನನ್ನುಕಣ್ಣು ತುಂಬ ನೋಡಿ, ಮನದಲ್ಲಿ ಉಕ್ಕಿದ ಭಕ್ತಿಯಿಂದ ಕರಕಮಲಗಳನ್ನು ಮುಗಿದು ಜಿನಸ್ತುತಿಗೈದ. "ಶ್ರೀಯ ನಿಮಿರಿಕೆಗೆ, ಸುಖದ ಅಳುರ್ಕೆಗೆ, ಉನ್ನತ ಕೀರ್ತಿಗೆ, ಯಶಶ್ರೀಯ ಒದವಿಗೆ, ಒಪ್ಪುವ ಅಳವಿಗೆ, ವಚಃಶ್ರೀಯನ್ನು ಪಡೆಯಲು, ನಿರ್ವೃತಿಶ್ರೀಯುವತಿಯ ಒಡೆಯನೂ ದುರಿತಾರಿಯೂ ಆದ ಚತುರ್ಮುಖ ಶಾಂತಿನಾಥನನ್ನು ಪೂಜಿಸು. ಸುರಸುಂದರಿಯರನ್ನು ಸವಿಸ್ತಾರದಿಂದ ಭೋಗಿಸುವೆನೆಂದಿದ್ದರೆ ನಿರ್ವೃತಿಶ್ರೀಯುವತಿಯ ಒಡೆಯನೂ ದುರಿತಾರಿಯೂ ಆದ ಚತುರ್ಮುಖ ಶಾಂತಿನಾಥನನ್ನು ಪೂಜಿಸು. ಚೋಳನ ಮೇಲೆ ಕೈಗಳನ್ನಿಟ್ಟು, ಪಾದಗಳನ್ನು ಕಳಂಗಭೂಪಾಲನ ಮೇಲಿರಿಸಿ, ಮಗಧಾವನೀಪಾಲಕನ್ನು ಮಲಗಿಸುವ ಲೀಲೆಯನ್ನು ಮರೆಯುವೆನೆಂದಿರಲು ನಿರ್ವೃತಿಶ್ರೀಯುವತಿಯ ಒಡೆಯನೂ ದುರಿತಾರಿಯೂ ಆದ ಚತುರ್ಮುಖ ಶಾಂತಿನಾಥನನ್ನು ಪೂಜಿಸು. ಇತ್ತ ಇತ್ತ ಎಂದು ಪರಿಚಾರಕರು ದಾರಿ ತೋರಲು, ಹಾರ ದುಕೂಲ ವರಭೂಷಣ ನುತವಸ್ತ್ರ ಇವುಗಳನ್ನು ಧರಿಸಿ ಸುಖವಾಗಿರಬೇಕೆಂದರೆ ನಿರ್ವೃತಿಶ್ರೀಯುವತಿಯ ಒಡೆಯನೂ ದುರಿತಾರಿಯೂ ಆದ ಚತುರ್ಮುಖ ಶಾಂತಿನಾಥನನ್ನು ಪೂಜಿಸು. ಭೋಗ, ರೂಪಿನುನ್ನತಿಕೆ, ಇಂದ್ರನರೇಂದ್ರರ ವೈಭವ, ಚಾಗವೀರಗಳ ಏಳ್ಗೆ, ಅನಂತಸುಖ ಇವುಗಳಿಗೆ ಆಸೆಪಡುವುದಾದರೆ ನಿರ್ವೃತಿಶ್ರೀಯುವತಿಯ ಒಡೆಯನೂ ದುರಿತಾರಿಯೂ ಆದ ಚತುರ್ಮುಖ ಶಾಂತಿನಾಥನನ್ನು ಪೂಜಿಸು. ಭೂಮಿಯಲ್ಲಿ ಸಮಸ್ತ ತಿರಿಕಗಳಲ್ಲಿ ಹುಟ್ಟಿ ಸತ್ತು, ಸಂಸಾರಸಮುದ್ರದಲ್ಲಿ ತೊಳಗದೆ, ಇಂದ್ರವಿಭೂತಿಯಲ್ಲಿರಬೇಕೆಂದು ಬಯಸುವೆಯಾದರೆ ನಿರ್ವೃತಿಶ್ರೀಯುವತಿಯ ಒಡೆಯನೂ ದುರಿತಾರಿಯೂ ಆದ ಚತುರ್ಮುಖ ಶಾಂತಿನಾಥನನ್ನು ಪೂಜಿಸು. ನೋವು, ಸಂಕಟ, ಉರಿಯುವ ಬೆಂಕಿ, ಸೀಳಿ ಹೋಳುಮಾಡಿ, ಕೊಯ್ದು ಹೊಯ್ದು ಮಾಡುವ ನರಕದುಃಖವನ್ನು ಪಡೆಯದೆ ಸದಾ ದೇವತೆಗಳೊಡನೆ ಇರಬೇಕೆಂದು ಬಯಸುವೆಯಾದರೆ ನಿರ್ವೃತಿಶ್ರೀಯುವತಿಯ ಒಡೆಯನೂ ದುರಿತಾರಿಯೂ ಆದ ಚತುರ್ಮುಖ ಶಾಂತಿನಾಥನನ್ನು ಪೂಜಿಸು. ಬಹುದುಃಖಗಳನ್ನು ಊಡುವ ಕರ್ಮವೃಕ್ಷವನ್ನು ಕತ್ತರಿಸಿ, ವೈರಿಸಂದೋಹವನ್ನು ಬಲವಾಗಿ ತಿವಿದು, ಉನ್ನತಿವೆತ್ತ ಮೋಕ್ಷಲಕ್ಷ್ಮಿಯ ಒಡೆಯನಾಗಿ ಸುಖವಾಗಿರಲು ಬಯಸುವೆಯಾದರೆ ನಿರ್ವೃತಿಶ್ರೀಯುವತಿಯ ಒಡೆಯನೂ ದುರಿತಾರಿಯೂ ಆದ ಚತುರ್ಮುಖ ಶಾಂತಿನಾಥನನ್ನು ಪೂಜಿಸು." ಹೀಗೆ ನುತಿಗೈದು, ಸಮಸ್ತಗುಣಭಟ್ಟಾರಕರನ್ನು ವಂದಿಸಿ, ನಿತ್ಯವ್ರತಗಳನ್ನು ಪೂರೈಸಿ, ಮಂಗಳಾಕ್ಷತೆಗಳನ್ನು ಕೈಕೊಂಡು, ಸ್ವಲ್ಪ ಕಾಲ ಧರ್ಮಶ್ರವಣ ಮಾಡಿ ಚಿತ್ರವಾಹನ ಮಹಾರಾಜನು ತನ್ನ ಅರಮನೆಗೆ ಮರಳಿದ.

ಇತ್ತ, ಚಂದ್ರಾಭ ಮಹಾರಾಜನು ಪಾಂಡ್ಯಕುಲಚೂಡಾಮಣಿಯ ಸಮ್ಯಕ್ತ್ವಕ್ಕೆ ಮೆಚ್ಚಿ ಹೀಗೆಂದುಕೊಂಡ: "ರಾಜವಂಶಗಳಲ್ಲೆಲ್ಲ ಪಾಂಡ್ಯ ಭೂಪಾಲರೇ ಹಿರಿಯರಲ್ಲವೇ; ಚಿನ್ನಕ್ಕೆ ಕಂಪು ಬೆರೆತ ಹಾಗೆ ಆ ಕುಲದವರಿಗೆ ಜಿನಾಧೀಶ್ವರನೇ ಕುಲದೈವವಲ್ಲವೇ; ಅಂದ ಮೇಲೆ ಪಾಂಡ್ಯರಾಜರ ವೈಭವವನ್ನು ಹೊಗಳಲು ಸಾಧ್ಯವೇ; ಪಾಂಡ್ಯ ರಾಜ್ಯದ ಜನತೆಯು

ಧನ್ಯರೇ ಸರಿ. ಈ ರಾಜನ ಧರ್ಮಬುದ್ಧಿ, ವ್ರತಗಳ ಪೆಂಪು, ಹೀನಕಾರ್ಯದ ಬಗ್ಗೆ ಕೋಪ, ಔನ್ನತ್ಯದ ಆಳ ಇವುಗಳನ್ನು ಯಾರೂ ಕೇಳದಿದ್ದರೂ ಈ ಜಿನಬಿಂಬಗಳು ಹೇಳುತ್ತಿವೆಯಲ್ಲ!" ಆನಂತರ ಆ ಪುರದ ಮಹಿಮೆಗೆ ಅಚ್ಚರಿಯೆನಿಸಿತು. 'ಅನ್ಯಸ್ತ್ರೀಯರನ್ನು ನೋಡಬೇಡ, ಆಸೆಯಿಂದ ನುಡಿಸಬೇಡ, ಹುಸಿ–ದುರಿತಗಳನ್ನು ಹೊಂದಬೇಡ' ಎನ್ನುವ ಮಾತುಗಳಲ್ಲದೆ ಈ ಪುರದಲ್ಲಿ ಕೀಳುದೃಷ್ಟಿಯಿಂದ ನುಡಿಸಲಾಗದು ಎನ್ನಬೇಕಾದರೆ ಇದರ ಧರ್ಮವನ್ನು ಏನೆಂದು ಹೇಳಲಿ? ಜಿನಭಕ್ತಿಯಲ್ಲಿ ಇವನು ದೇವ ಎಂದು ಜಗತ್ತಿನ ಜನವೆಲ್ಲ ಹೊಗಳಲು ಈ ರಾಜನು ಪಾಂಡ್ಯಾಧಿಪತಿಯೆಂಬ ಹೆಸರನ್ನು ಪಡೆದ – ಎಂದು ಮನದ ಅಕ್ಕರೆಯಿಂದ ಚಿತ್ರವಾಹನ ಮಹಾರಾಜನನ್ನು ಹೊಗಳಿ, ಜಿನಭವನವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ ನಿಷಿದ್ಧಿಯೊಳಗೆ ಬಂದು ದರ್ಶನಸ್ತುತಿಯನ್ನು ಹೇಳಿ, ಮುನಿಗುಪ್ತ ಭಟ್ಟಾರಕರಿಗೆ ವಂದಿಸಿ, ಕ್ರಮವಾಗಿ ಉಳಿದ ಮುನಿಗಳಗೆ ನಮಸ್ಕಾರ ಮಾಡಿ ಕುಳಿತುಕೊಂಡ.

ಆನಂತರ, ಮುನಿಕುಲಸರೋಜತರಣಿ, ಜಿನಸಮಯಾಕಾಶಚಂದ್ರ, ಸಜ್ಜನವಂದಿತ, ದುರ್ಗುಣಸಮುದ್ರಬಡಬಾನಲ ಎನಿಸಿದ ಗುಪ್ತಭಟ್ಟಾರಕರಿಗೆ ಚಿತ್ರವಾಹನನು ಕೈಮುಗಿದು ತಾನು ಅಲ್ಲಿಗೆ ಬಂದ ಕಾರ್ಯವನ್ನು ನಿವೇದಿಸಿಕೊಂಡ. ಆಗ ಅವರೆಂದರು: "ಮಗನೆ, ತಪಸ್ಸು ಸುಲಭವಲ್ಲ; ಜಗತ್ತಿನಲ್ಲಿ ವೈರಾಗ್ಯವಿಲ್ಲದವನಿಗೆ ತಪಸ್ಸು ಉಬ್ಬೆಗವನ್ನುಂಟುಮಾಡುತ್ತದೆ; ಅಲ್ಲದೆ, ಖಗೇಶನೇ, ಅದರಿಂದ ಬೇರೊಂದು ಸೌಖ್ಯವು ಮೂಡುವುದೇ? ಹಿಂಡಿಯನ್ನು ಬಿಡಿಸಲು ಹೋದ ಮರುಳು ಖಂಡುಗ ಎಣ್ಣೆಯನ್ನು ಹೊತ್ತು ಬಂದಿತು ಎಂಬ ನಾಣ್ಣುಡಿಯಂತೆ, ಮರ್ಕಟವೈರಾಗ್ಯದಿಂದ ಶ್ರುತಿಹೀನರಾದವರು ಸ್ವರ್ಗಾಪವರ್ಗಸುಖವನ್ನು ಬಯಸಿ ಜಿನದೀಕ್ಷೆಯನ್ನು ಕೈಗೊಂಡು ತಪಸ್ಸಿನ ಬೇವಸವನ್ನು ತಡೆಯಲಾರದೆ ಒಳಗೇ ದೋಷಗಳನ್ನು ಮಾಡುತ್ತ ಮುಂದಿನ ಜನ್ಮದಲ್ಲಿ ಹೆಚ್ಚು ದುಃಖವನ್ನು ಹೊಂದುತ್ತಾರೆ, ಆದ್ದರಿಂದ ನೀರು, ಸೌದೆ, ಬೆಂಕಿ, ಅಡುಗೆ ಮಾಡುವ ಹೆಣ್ಣು, ಮಡಕೆ, ಒಲೆ – ಇವೆಲ್ಲ ಇದ್ದಾಗ ಅಡುಗೆ ಸಿದ್ಧಗೊಳ್ಳುವಂತೆ ಹದಿನೆಂಟು ಮೂಲಗುಣಗಳನ್ನೂ ಹದಿಮೂರು ಬಗೆಯ ನಡತೆಗಳೂ ದರ್ಶನವೂ ಸೇರಿದರೆ ಮೋಕ್ಷಸಾಧನೆಯಾಗುವುದು. ಇವುಗಳಲ್ಲಿ ಒಂದು ಇಲ್ಲದಿದ್ದರೂ ಕೈವಲ್ಯವಿಲ್ಲ. ಆದ್ದರಿಂದ, ಅಷ್ಟೂ ಗುಣಗಳನ್ನು ಹೊಂದಿದ ವಿವೇಕಿಯು ತಪಸ್ಸನ್ನು ಮಾಡಬಹುದು. ಅಡುಗೆಗೆ ಬೇಕಾದ ವಸ್ತುಗಳಲ್ಲಿ ಯಾವುದಿಲ್ಲದಿದ್ದರೂ ಅಡುಗೆಯಾಗದ ಹಾಗೆಯೇ ಮೂಲಗುಣಗಳಲ್ಲಿ ಒಂದು ಕೊರತೆಯಾದರೂ ಕೈವಲ್ಯಸುಖ ದೊರಕದು. ಮೂಲಗುಣಗಳಲ್ಲಿಯೂ ಇತರ ಗುಣಗಳಲ್ಲಿಯೂ ಕ್ರಮ ತಪ್ಪದಂತೆ ನಡೆದುಕೊಳ್ಳಬೇಕು; ಒಂದರಲ್ಲಿ ಕೆಟ್ಟರೆ ಏನಾದೀತೆಂದು ನಡೆದುಕೊಂಡರೆ ಪರಸುಖವು ಕೆಡುತ್ತದೆ. ತನಗೆ ಹಲವು ಶಾಸ್ತ್ರಗಳ ಜ್ಞಾನವಿದೆ ಎಂದು ಗರ್ವದಿಂದ ಧರ್ಮದ ಹಂಬಲನ್ನು ಬಿಟ್ಟು ಹಿರಿಯರ ನೆಲೆಯನ್ನು ಕೈಗೊಳ್ಳದವನು ಮುನಿಯಾಗಲಾರ. ತನಗೆ ಬೇಡವಾದ ವಸ್ತುಗಳನ್ನೆಲ್ಲ ಬಿಟ್ಟು, ಯಾರಾದರೂ ಇದು ಒಳ್ಳೆಯದಲ್ಲವೆಂದಾಗ ಹುರುಡಿನಿಂದ ಅದನ್ನು ಅಲಕ್ಷಿಸುವವನು ಮುನಿಯಾಗಲಾರ. ಮಕ್ಕಳನ್ನು ಮುದ್ದಾಡಿ, ಲಲ್ಲೆವಾತುಗಳಿಂದ ಬೇರೆಯವರನ್ನು ಆಶ್ರಯಿಸುವವನು ನಿರ್ವೃತಿಯನ್ನು ಪಡೆಯಲಾರ. ಜೊತೆಗಾರ ಋಷಿಯನ್ನು ತಿರಸ್ಕರಿಸದೆ, ಮನೆಯೊಡೆಯ ಹಾಗೂ ಅವನ ಹೆಂಡತಿಯರ ಬಳಿ ದೂತರನ್ನಟ್ಟಿ ದೂಷಿಸುವ ದಿಗಂಬರನು ಸುಖವನ್ನು ಪಡೆಯಲಾರ.

"ಜಿನಪೂಜೆಗಳನ್ನು ಕೆಡಿಸುತ್ತ ಏನೋ ಉಬ್ಬಿನಿಂದ ತನ್ನ ಕಡೆಯವರ ಮನೆಗಳಿಗೆ ಮತ್ತೆ ಮತ್ತೆ ಹೇಳಿಕಳಿಸುವ ಮುನಿಗೆ ಶ್ರೇಷ್ಠವಾದ ದೇವನಿಲಯದ ಸುಖವು ದೊರಕದು. 'ನೀನು ನನ್ನ ಶಿಷ್ಯನಾದ್ದರಿಂದ ಇತರರಿಗೆ ಭಕ್ತಿ ತೋರಿಸಬಾರದು' ಎಂದು ಜಡಿದು ನುಡಿಯುವ ಹೀನಗುಣವುಳ್ಳವನಿಗೆ ನರರು ಎರಗಬಾರದು. ಉಗುರು ಮಸೆದು ಗುರುವನ್ನು ಅಲಕ್ಷಿಸಿ, ಜಿನವಚನವನ್ನು ಮರೆಸಿ, ತನ್ನ ಇಚ್ಛೆಗೆ ತಕ್ಕಂತಹ ಕತೆಯನ್ನು ಹೇಳುವವನು ಮುನಿಯಾಗಲಾರ. ತನ್ನ ಸಮುದಾಯವನ್ನು ಹೊಗಳುತ್ತ, ಅನ್ಯ ಸಮುದಾಯವನ್ನು ಹಳಿಯುವವನು ನರಕಕ್ಕೆ ಇಳಿಯುತ್ತಾನೆ. ಒಳ್ಳೆಯವರಾದರೂ ಇತರ ತಪಸ್ವಿಗಳನ್ನು ಹಳಿದು ದುರ್ಜನರಾದ ತನ್ನ ಕಡೆಯವರನ್ನು ಹೊಗಳುವವನು ಮುನಿಯೆನಿಸಿಕೊಳ್ಳಲಾರ. 'ಇಂಥವರನ್ನಲ್ಲದೆ

ಬೇರೆಯವರನ್ನು ನೆಚ್ಚಬೇಡಿರಿ, ಇವರಿಗಿಂತ ಒಳ್ಳೆಯವರು ಭೂಮಿಯ ಮೇಲೇ ಇಲ್ಲ' ಎಂದು ನಂಬಿಕೆಯುಂಟು ಮಾಡುವವನು ಮುನಿಯಲ್ಲ. ಅಡುಗೆಯನ್ನು ಹೊಗಳುತ್ತ, ಅದನ್ನು ಮಾಡಿದವರನ್ನು ಉಬ್ಬಿಸಿ ಊಟ ಮಾಡುವವನು ಋಷಿಗಳಲ್ಲಿ ಕ್ಷುದ್ರನೆನಿಸಿಕೊಳ್ಳುವನು. ಇನ್ನು, ಋಷಿಗಳ ಗುಣಗಳನ್ನು ಹೇಳಬೇಕೆಂದರೆ, ಹಾದರಗಿತ್ತಿಯ ದೂತಿಯಂತೆ ಇತರರನ್ನು ಸಂಕೇತಕ್ಕೆ ಸಿಕ್ಕಿಸದೆ, ಮನ್ನೆಯರ ಆಳಿನ ಹಾಗೆ ಲೂಟಿ ಮಾಡಲು ಆಸೆಪಡದೆ, ಬಯಲ ನೀರಿನಂತೆ ಮಾರ್ಗ ಬಿಟ್ಟು ನಡೆಯದೆ, ಕೋಣನ ಹಾಗೆ ಸಮುದಾಯದ ಶಾಂತಿಯನ್ನು ಕದಡದೆ, ಕರಡಿಯಂತೆ ಹಿರಿಯರ ಮಾತಿಗೆ ಅಡ್ಡವಾಡದೆ, ಹುಲ್ಲೆಯಂತೆ ಗುಣವಂತರ ಗುಂಪಿಗೆ ಹೆದರದೆ, ಒಡೆದ ಹಾಲಿನಂತೆ ಮೂಲಗುಣವನ್ನು ಕೆಡಿಸಿಕೊಳ್ಳದೆ, ನೀರಿನಲ್ಲಿ ಬಿದ್ದ ಎಣ್ಣೆಯಂತೆ ಇತರರ ದೋಷಗಳನ್ನು ಹರಡದೆ, ಹುಲಿಯ ಬಾಲದಂತೆ ಗುರುವಚನವನ್ನು ಮೀರದೆ, ಮೋಡದಂತೆ ಹೊತ್ತಿಗೊಂದು ಬಣ್ಣವನ್ನು ತಾಳದೆ, ಕೋತಿಯಂತೆ ಕಂಡಕಂಡವರನ್ನು ಅಣಕಿಸದೆ, ದೇಸಿಗನಂತೆ ಏಕಾಕಿಯಾಗದೆ, ತೊರೆಯಲ್ಲಿ ಮಿಂದವನಂತೆ ಪರೀಷಹಗಳಿಗೆ ನಡುಗದೆ, ಕ್ಷುದ್ರನಂತೆ ಇತರರ ಅವಗುಣವನ್ನು ದೂರದೆ, ಇಳಿಜಾರು ನೆಲದಲ್ಲಿನ ನೀರಿನಂತೆ ಕುಮಾರ್ಗವನ್ನು ಹಿಡಿಯದೆ, ಉಕ್ಕಿನಂತೆ ಅತಿನಿಷ್ಠುರನಾಗದೆ, ಹಳೆಯ ಸೀರೆಯಂತೆ ಗುಣವನ್ನು ಕಳೆದುಕೊಳ್ಳದೆ, ತೊತ್ತಿನಂತೆ ಬೇರೆಯವರ ವಶವಾಗದೆ, ಹುಲಿಯಂತೆ ಬೇರೆಯವರಿಗೆ ಉಪದ್ರವವನ್ನು ಮಾಡದೆ, ಮರಕುಟಿಕದಂತೆ ಬಾಯಿ ಬಡಿಯದೆ, ತರಗೆಲೆಯಂತೆ ಎಲ್ಲೆಲ್ಲೋ ಹಾರದೆ, ಗಾಣದೆತ್ತಿನಂತೆ ನಿಯಮಗೆಟ್ಟು ತೊಳಲದೆ, ಹಂಸದಂತೆ ಸಾರಗ್ರಾಹಿಯೂ, ಶರತ್ಕಾಲದ ತೊರೆಯಂತೆ ನಿರ್ಮಲನೂ, ಸೂರ್ಯನಂತೆ ಎಲ್ಲರಿಗೆ ಏಕರೂಪಿಯೂ, ತಂಗಾಳಿಯಂತೆ ಮೃದುಗಮನನೂ, ಕೌಂಗಿನಂತೆ ವಕ್ರಗುಣಹೀನನೂ, ಬಲಿಷ್ಠವಾದ ಕೋಟೆಯಂತೆ ಮಿಥ್ಯಾತ್ವಕ್ಕೆ ಅಭೇದ್ಯನೂ, ಸಕ್ಕರೆಯಂತೆ ಕಹಿಯಿಲ್ಲದವನೂ, ಮಳೆಯಂತೆ ಸಕಲಜೀವನನೂ, ಯುದ್ಧಸನ್ನದ್ಧನಂತೆ ವೀರನೂ, ಮಂದರದಂತೆ ಕ್ಷಮಾನ್ವಿತನೂ, ಚಂದ್ರನಂತೆ ಶಾಂತರೂಪನೂ, ದಂಡನ್ನು ನಡೆಯಿಸುವನಂತೆ ದೇಶಜ್ಞನೂ, ಅವಧಿಜ್ಞಾನಿಯಂತೆ ಸಕಲಾಂತರಂಗಜ್ಞನೂ, ಬಾಣಸಿಗನಂತೆ ಇತರರ ಇಚ್ಛೆಯನ್ನು ಅರಿತವನೂ ಆಗಿರಬೇಕು.

"ಕೋಪ ಮಾಡಿಕೊಳ್ಳದೆ, ಧರ್ಮದಲ್ಲಿ ದೃಢನಾಗಿ, ಆಗಮವನ್ನು ನೆನೆಸಿಕೊಳ್ಳುತ್ತ, ಕೆಟ್ಟವರ ಸಹವಾಸ ಮಾಡದೆ, ಶಿಷ್ಯರಲ್ಲಿ ವಿನಯವನ್ನು ಹೊಂದಿ, ಜೀವರಕ್ಷಕನಾಗಿ, ಆಗಮವನ್ನು ಓದದೆ ಮೆಚ್ಚದಿರುವುದು ಇವುಗಳನ್ನು ಅನುಸರಿಸಬೇಕು. ಜಿನವಚನವನ್ನು ಯಥಾವತ್ತಾಗಿ ಹೇಳದೆ ತನಗೆ ಇಷ್ಟ ಬಂದ ರೀತಿಯಲ್ಲಿ ತಿರುಚಿ ಇತರರನ್ನು ತನ್ನ ವಶ ಮಾಡಿಕೊಳ್ಳುವವನು ದುರ್ಗತಿಯನ್ನು ಹೊಂದುತ್ತಾನೆ. ಬೇರೆಯವರ ದುರ್ಗುಣಗಳನ್ನು ದೂಷಿಸುತ್ತ ಕೂರದೆ, ತನ್ನ ಅರಿವಿಗೆ ತಕ್ಕುದನ್ನು ಮುನಿಯು ನೆರವೇರಿಸಬೇಕು. ಹೊಲೆಯನ ತಮ್ಮಟೆಯ ತಾಳಕ್ಕೆ ಅನುಗುಣವಾಗಿ ಕುಣಿಯುವ ಹಗರಣಿಗರನ್ನು ಕಂಡರೆ ಜನ ನಗುತ್ತಾರೆ; ಆದರೆ ಅವರ ಆಟಕ್ಕೆ ಲಕ್ಷಣವನ್ನು ನೋಡುವುದಿಲ್ಲ. ಮಿಥ್ಯಾಜ್ಞಾನಿಗಳ ಕುತರ್ಕಗಳಿಗೆ ಪಕ್ಕಾಗಿ ದುಶ್ಚಾರಿತ್ರದಲ್ಲಿ ನಡೆಯುವವರನ್ನು ಗಮನಿಸುವುದಕ್ಕಿಂತ ತತ್ವದಲ್ಲಿ ದೃಢರಾಗಿ ಸದಾಚಾರದಲ್ಲಿ ನಡೆಯುವವರ ಗುಣದೋಷಗಳನ್ನು ಜನ ಗಮನಿಸುತ್ತಾರೆ. ಯೋಚಿಸಿದರೆ, ಅಂತರಂಗವು ಸಾಮಾನ್ಯವಾದುದೇ? ಅದೊಂದೇ ಸಾಕು; ಬಹಿರಂಗವು ಏನು ಮಾಡಬಲ್ಲುದು ಎಂದು ಅದಕ್ಕೆ ಬೆಲೆ ಕೊಡದ ಗಾವಿಲನಿಗೆ ಪಾಪಗಳನ್ನು ಹೋಗಲಾಡಿಸಲು ಸಾಧ್ಯವೇ? ಬಹಿರಂಗವೇ ಸಾಕು ಎಂದು ಅಂತರಂಗದ ಬಗೆಯನ್ನು ಮರೆತು ಮತಿಗೆಟ್ಟು ಬಾಳುವ ಕುರಿಯು ಪಾಪಗಳನ್ನು ಹೋಗಲಾಡಿಸಲು ಸಾಧ್ಯವೇ? ಆದ್ದರಿಂದ ಅಂತರಂಗ-ಬಹಿರಂಗಗಳೆರಡರಲ್ಲಿಯೂ ಸಮತೋಲವನ್ನು ಕಾಪಾಡಿಕೊಳ್ಳುವ ಬುದ್ಧಿವಂತನು ಸಕಲ ಕರ್ಮಗಳನ್ನು ನಾಶ ಮಾಡಿ ಶಾಶ್ವತಸುಖವನ್ನು ಹೊಂದುವನು. ಎರಡರಲ್ಲೂ ಏಗಲಾರದೆ ನಿರಂತರಸುಖವನ್ನು ಪಡೆಯುವೆನೆಂಬ ನಿರ್ಬುದ್ಧಿಯು ಒಂದು ಗಾಲಿಯಿಲ್ಲದೆ ರಥವನ್ನು ನಡೆಯಿಸುವೆನೆಂಬ, ನೀರಿಲ್ಲದೆ ಅನ್ನವನ್ನು ಮಾಡುವೆನೆಂಬ, ಕಾವಿಲ್ಲದೆ ಕೊಡಲಿಯಲ್ಲಿ ಮರ ಕಡಿಯುವೆನೆಂಬ, ಹೆಂಡತಿಯಿಲ್ಲದೆ ಮಗನನ್ನು ಪಡೆಯುವೆನೆಂಬ, ಆಯುಧವಿಲ್ಲದೆ ಯುದ್ಧ ಮಾಡುವೆನೆಂಬ, ನಾರಿಲ್ಲದೆ ಹೂವನ್ನು ಕಟ್ಟುವೆನೆಂಬ ದೊಡ್ಡ ಗಾವಿಲನಂತೆಯೇ

ಸರಿ. ಎಷ್ಟೇ ಶಕ್ತಿಯಿದ್ದರೂ ಒಂದೇ ಕಾಲಿನಲ್ಲಿ ನಡೆಯಲು ಸಾಧ್ಯವಿಲ್ಲ, ಹಾಗೆಯೇ ಎಷ್ಟೇ ತಿಳಿವಳಿಕೆಯಿದ್ದರೂ ಒಂದು ಅಂಗದಿಂದಲೆ ಪುಣ್ಯಲಕ್ಷ್ಮಿಯನ್ನು ಹೊಂದಲು ಆಗದು. ಆದ್ದರಿಂದ ಒಂದರಿಂದಲೇ ಕರ್ಮವನ್ನು ಗೆಲ್ಲುವೆನೆಂಬ ಗಾಂಪತನ ಹೊಂದದೆ, ಬಹಿರಂಗ ಅಂತರಂಗಗಲ್ಲಿ ಸಮಾನವಾಗಿ ನೆಗಳಿ ದುರಿತಗಳನ್ನು ನಾಶಪಡಿಸಬೇಕು.

"ಏನನ್ನೂ ಅರಿಯದ ಮುನಿಪನಲ್ಲಿಗೆ ಹೀನಗುಣನೊಬ್ಬನು ಬಂದು ದೀಕ್ಷೆ ಬೇಡಿದರೆ ಅದನ್ನು ನೀಡದೆ ಬಿಡಬೇಕು. ತನ್ನ ಪೂರ್ವಾಶ್ರಮದ ಕುಲ, ಸಿರಿ, ಊರು, ಹೆಂಡಿರು ಮಕ್ಕಳು, ತನ್ನ ಮಹಿಮೆ ಇವುಗಳನ್ನು ನೆನೆಸಿಕೊಳ್ಳುತ್ತಿರುವವನು ದುರ್ಜನನೇ ಹೊರತು ಮುನಿಯಲ್ಲ. ತಾನು ಕೆಟ್ಟವನಲ್ಲದಿರುವುದರ ಜೊತೆಗೆ ಗಾಂಪರನ್ನೂ ಆಸೆಬುರುಕರನ್ನೂ ಕಂಡು ಸುಮ್ಮನಿರದೆ ಕ್ಷಮೆ ತೋರಿಸುವುದು ದೊಡ್ಡತನ. ನಮ್ಮ ಋಷಿ, ನಮ್ಮ ಜಿನಾಲಯಗಳು, ನಮ್ಮ ಶಿಷ್ಯರು, ನಮ್ಮ ಹಣ, ನಮ್ಮ ನೆಲ ಎಂದು ನುಡಿಯುವವನು ಮುನಿಯಲ್ಲ. ತನಗೆ ಮೊದಲು ವ್ರತವಿತ್ತವನನ್ನು ದೂಷಿಸಿ, ಪೂರ್ವವ್ರತಗಳನ್ನು ಕೆಡಿಸಿಕೊಂಡು ಇತರರಿಗೆ ವ್ರತವನ್ನು ನೀಡುವವನು ನರಕಕ್ಕಿಳಿಯುತ್ತಾನೆ. ಎಲ್ಲ ಜಿನಭವನಗಳನ್ನೂ, ಚೈತ್ಯಾಲಯಗಳನ್ನೂ, ದಿವ್ಯತಪೋಧನರನ್ನೂ ಒಂದೇ ಸಮನಾಗಿ ಕಾಣುವ ಮುನಿಯೇ ಶ್ರೇಷ್ಠ. ತನಗೆ ರಾಗದ್ವೇಷಗಳು ಉಂಟಾದಾಗ ತಪಸ್ಸಿನಿಂದ ಅದನ್ನು ಸ್ವಲ್ಪವಾದರೂ ಹೋಗಲಾಡಿಸಿಕೊಳ್ಳುತ್ತಾನೆ; ಅವು ತನ್ನಿಂದ ಹೋಗಲು ತಪಸ್ಸು ಅದಕ್ಕಾಗಿ ನವೆಯುವುದಿಲ್ಲ. ಪರಿಗ್ರಹವನ್ನು ತೊರೆಯದವನು ನಿರ್ಗ್ರಂಥನಾದರೂ ಸಗ್ರಂಥ; ಅದನ್ನು ಬಿಡಬಲ್ಲವನು ಸಗ್ರಂಥನಾದರೂ ನಿರ್ಗ್ರಂಥ. ಆದ್ದರಿಂದ ತಪಸ್ಸೆಂಬುದು ಸಾಮಾನ್ಯವಲ್ಲ. ನೀನೂ ಹಿಂದಿನ ವಿದ್ಯಾಧರರಾಜರೂ ತಪವನ್ನು ಕೈಗೊಂಡು ಸುಖದಿಂದಿರಿ" ಎಂದು ಚಂದ್ರಾಭ ಮಹಾರಾಜನಿಗೆ ಮುನಿಗುಪ್ತ ಭಟ್ಟಾರಕರು ಆಶೀರ್ವದಿಸಿದರು.

ಆಗ ರಾಜನು, "ಎಷ್ಟೇ ಹಸಿವಾದರೂ ವಾಂತಿ ಮಾಡಿಕೊಂಡ ಅಗುಳನ್ನು ತಿನ್ನುತ್ತಾರೆಯೇ? ಅಂತೆಯೇ ನಾನು ಸ್ವಇಚ್ಛೆಯಿಂದ ಬಿಟ್ಟ ರಾಜ್ಯವನಿತೆಯನ್ನು ಮುಂದೆ ಯಾವತ್ತೂ ಕೈಗೊಳ್ಳಲಾರೆ" ಎಂದ. ವಿಯಚ್ಚರರಾಜನ ನಿರ್ಧಾರವಾಕ್ಕುಗಳಿಗೂ ಅವನ ವೀರ ವೈರಾಗ್ಯಕ್ಕೂ ಮುನೀಂದ್ರನು ಮೆಚ್ಚಿ. 'ಎಲ್ಲ ಪರಿಗ್ರಹಗಳನ್ನೂ ನೀನು ಬೇಗ ತೊರೆಯುವಂತಾಗಲಿ' ಎಂದು ಮನಃಪೂರ್ವಕ ವಾಗಿ ಹಾರೈಸಿದರು. ರಾಜನು ಗುರುಸನ್ನಿಧಿಯಲ್ಲಿ ಅವನ್ನೆಲ್ಲ ಬಿಟ್ಟು, ಕೆಲವು ವಿದ್ಯೆಗಳನ್ನು ತೊರೆಯದಿರಲು, "ನಿನಗೇಕೆ ಇಂತಹ ಆಸೆ?" ಎಂದು ಕೇಳಿದರು. ಅದಕ್ಕೆ ಗಗನಚರನು, "ಮನಸ್ಸಿನ ಆಸೆಗಳು ಹೋದರೂ, ಮೇರುಗಿರಿಯ ಅಕೃತ್ರಿಮ ಜಿನಾಲಯಗಳನ್ನು ಸದಾ ನೋಡುತ್ತಿರಬೇಕೆಂಬ ಭಾವನೆ ಹೋಗದು; ಆ ಕಾರಣದಿಂದ ಕೆಲವು ವಿದ್ಯೆಗಳನ್ನು ಬಿಡಲಾರೆ" ಎಂದು ಹೇಳಿದ. ಅದನ್ನು ಕೇಳಿ ಮುನಿನಾಥನು ನಕ್ಕು, "ನಿನಗೆ ಈಗಲೇ ಮಹಾವ್ರತಗಳು ಬೇಡ; ಅಣುವ್ರತಗಳನ್ನಷ್ಟೇ ಪಡೆ" ಎಂದರು. ಆಗ ರಾಜನು ಅವುಗಳ ಸ್ವರೂಪವನ್ನು ತಿಳಿಯಬಯಸಿದ; ಮುನಿಪತಿಗಳು ಹೇಳತೊಡಗಿದರು.

"ಪರಮದರ್ಶನವಿಶುದ್ಧತೆ, ನಿರುಪಮವಾದ ಪಂಚಪರಮೇಷ್ಟಿಗಳ ಪಾದಭಕ್ತಿ, ಸಂಸಾರ ಮತ್ತು ದೇಹಭೋಗಗಳ ""ಗ್ಗೆ ವೈರಾಗ್ಯ. ಸಮುದ್ರದ ನೀರು, ಹಗಲಿನ ಸೂರ್ಯ, ನೀರುಹಾಲುಗಳು, ಹೂವುಕಂಪುಗಳು, ತಾಯಿಹಸು–ಎಳೆಗಂದಿಗಳು ಇರುವ ಹಾಗೆ ಮಹಾವ್ರತಗಳಲ್ಲಿ ಸಹಜಪ್ರೀತಿಯನ್ನು ಹೊಂದಿದವನಾಗಬೇಕು. ಹೇಡಿಯನ್ನು ಕಂಡ ವೀರ, ಹಾದರಗಿತ್ತಿಯನ್ನು ಕಂಡ ಗಂಡ, ಬೇಸಗೆಯಲ್ಲಿ ಪ್ರಯಾಣ, ಹೊರೆ ಹೊತ್ತು ದೂರಪ್ರಯಾಣ, ಪ್ರಭು ಕೆಟ್ಟ ನಾಡು ಇವುಗಳಂತೆ ಸಂಸಾರ ಮತ್ತು ಶರೀರಭೋಗಗಳ ಮೇಲೆ ಬೇಸರಗೊಂಡವನಾಗಬೇಕು. ಹಾವನ್ನು ಕಂಡ ಕಪ್ಪೆ, ತಳವಾರನನ್ನು ಕಂಡ ದ್ರೋಹಿ ಇವುಗಳ ಹಾಗೆ ಇಹಲೋಕ–ಪರಲೋಕ–ಮರಣ–ಕುತ್ತ–ಅನಾಥತೆ–ಶರೀರ ಅರಕ್ಷತೆ–ಅಕಸ್ಮಾತ್ ಭಯ ಈ ಸಪ್ತಭಯಗಳಿಗೆ ನಡುಗದಿರಬೇಕು. ಸಿಂಹವನ್ನು ಆನೆ, ಮರುಳನನ್ನು ಬುದ್ಧಿಶಾಲಿ, ಕಳ್ಳನನ್ನು ಸದ್ಧರ್ಮಿ ಇಷ್ಟಪಡದಂತೆ ಜೂಜು–ಬೇಟೆ–ಕಳ್ಳು–ಮಾಂಸ–ವೇಶ್ಯಾಸಹವಾಸ–ಪರನಾರೀವ್ಯಾಮೋಹ–ಕಳ್ಳತನ – ಈ ಸಪ್ತವ್ಯಸನಗಳನ್ನು ಹೊಂದದಿರಬೇಕು. ಸಿರಿವಂತನ ಕೈಹಿಡಿದ ಬಡವೆ, ನಾಡನ್ನು ಪಡೆದ ಸಾಮಾನ್ಯ, ಪೂಜೆ ಪಡೆದ ವ್ಯಂತರಿ, ಗೆಲವನ್ನು ಪಡೆದ ಹೇಡಿ ಇವರಂತೆ ನಿಶ್ಶಂಕೆ

ಮೊದಲಾದ ಅಷ್ಟಗುಣಗಳಲ್ಲಿನ ಅಧಿಕ ಪ್ರೀತಿ, ಮದ್ದುಗುಣಿಕೆಯನ್ನು ತಿಂದವರಂತೆ, ಪಿತ್ತ ನೆತ್ತಿಗೇರಿದಂತೆ, ಹೆಂಡ ಕುಡಿದವರಂತೆ ಜ್ಞಾನ–ಐಶ್ವರ್ಯ–ಪೂಜೆ–ಕುಲ–ಬಲ–ತಪ–ರೂಪ–ಜಾತಿಗಳೆಂಬ ಅಷ್ಟಮದಗಳನ್ನು ಹೊಂದದೇ ಬಾಳಬೇಕು. ಕಚ್ಚುವ ಹಾವು, ಕಳ್ಳಿಯಾದ ಹೆಂಡತಿ, ಪಿಸುಣನಾದ ಒಡಹುಟ್ಟಿದವನು, ಆಸೆಬುರುಕ ಬಂಟ ಇವರನ್ನು ದೂರ ಮಾಡುವ ಹಾಗೆ ಮಿಥ್ಯಾದೈವ, ಮಿಥ್ಯಾಲಯ, ಮಿಥ್ಯಾತಪ, ಮಿಥ್ಯಾತಪಸ್ವಿ, ಮಿಥ್ಯಾಜ್ಞಾನಿ, ಮಿಥ್ಯಾವ್ರತಗಳೆಂಬ ಆರನ್ನು ದೂರಮಾಡಬೇಕು. ಅಡವಿಯ ಕೊಳ, ಮೊಸಳೆ ಇರುವ ಬಾವಿ, ಬಡಬಾಗ್ನಿಗಳಂತಹ ಮಿಥ್ಯಾತ್ವವನ್ನೂ; ಜಾರೆಯ ಮಗ ಮತ್ತು ನಂಬಿಸಿ ಕೊಲ್ಲುವವರನ್ನು ಹೋಲುವ ಸಮ್ಯಙ್ಮಿಥ್ಯಾತ್ವವನ್ನೂ; ಪ್ರಜೆಗಳು ಮತ್ತು ಪರಿವಾರದವರನ್ನು ಸಲಹದ ರಾಜನಂತಹ ಸಮ್ಯಕ್ತ್ವಪ್ರಕೃತಿಯನ್ನು ಕಳೆದುಕೊಳ್ಳಬೇಕು. ಕೆಟ್ಟ ರಾಜ್ಯ ಸಿಕ್ಕಿದ ಹಾಗೆ ಸಂವೇಗದಲ್ಲಿಯೂ, ಸರಕು ಕೊಳ್ಳೆಹೋದವನಂತೆ ನಿರ್ವೇಗದಲ್ಲಿಯೂ, ಏಟು ತಿಂದ ಮಕ್ಕಳಂತೆ ಅಳುವಿನಲ್ಲಿಯೂ, ನೀರು ತಾಕಿದ ಕೆಂಡದಂತೆ ಉಪಶಮದಲ್ಲಿಯೂ, ಒಲುಮೆಯ ಹೆಂಡತಿಯನ್ನು ಸೇರಿದಂತೆ ಪಂಚಪರಮೇಷ್ಠಿಗಳ ಮೇಲಿನ ಭಕ್ತಿಯಿಂದಲೂ, ಅಳಿಯನನ್ನು ಕಂಡ ಮಾವನಂತೆ ವಾತ್ಸಲ್ಯದಿಂದಲೂ ಕೂಡಿರಬೇಕು. ದೇವರ ಬಗೆಗಿನ ಶಂಕೆ, ಭೋಗದಲ್ಲಿನ ಆಕಾಂಕ್ಷೆ, ಶರೀರದಲ್ಲಿನ ನಿರ್ವಿಚಿಕಿತ್ಸೆ, ನಿರ್ದೋಷಿಯಾದವನನ್ನು ಹೊಗಳುವಾಗಿನ ಅನ್ಯದೃಷ್ಟಿಪ್ರಶಂಸೆ, ದೋಷಿಯನ್ನು ಹೊಗಳುವಾಗಿನ ಅನ್ಯದೃಷ್ಟಿಸಂಸ್ತವನ ಎಂಬ ಪಂಚಾತಿಚಾರದಲ್ಲಿ ನಡೆಯಬಾರದು. ಇವೆಲ್ಲ ಒಂದನೆಯ ಶ್ರಾವಕನೆಂಬ ದಾರ್ಶನಿಕನಿಗೆ ಇರಬೇಕಾದ ಗುಣಗಳು.

"ಪರಮಜಿನನೇ ಆತ್ಮ, ಆ ಪರಮೇಶ್ವರನು ಹೇಳಿದುದೇ ಆಗಮ, ನಿರ್ಗ್ರಂಥವೇ ಪರಮತಪ, ದಯೆಯಿಂದ ಕೂಡಿದುದೇ ಧರ್ಮ ಎಂಬ ನಂಬಿಕೆಯೇ ಸಮ್ಯಕ್ತ್ವದ ಲಕ್ಷಣಗಳು. ಆ ಸಮ್ಯಕ್ತ್ವದೊಡನೆ ಸಪ್ತವ್ಯಸನಗಳನ್ನು ತೊರೆದು, ಮಾತ್ಸರ್ಯವಿಲ್ಲದೆ ಸದ್ಗುಣದ ಬಗ್ಗೆ ವಾತ್ಸಲ್ಯವನ್ನುಂಟುಮಾಡಬೇಕು. ಕ್ರೌರ್ಯದಿಂದ ಜಗತ್ತಿನ ಪ್ರಾಣಿಗಳನ್ನು ಕೊಲ್ಲದೆ, ಅರಿಯದೆ ಕೊಂದರೂ ಮನಸ್ಸಿನಲ್ಲಿ ವ್ಯಥೆಪಡುತ್ತಾನೆ. ವ್ರತವನ್ನು ಕೈಗೊಳ್ಳದಿದ್ದರೂ ಅವ್ರತಿಯಾಗುವುದಿಲ್ಲ; ಲೋಕದ ಕುಲಬಲಸಂಪತ್ತುಗಳಿದ್ದರೂ ಸಜ್ಜನಮತದಲ್ಲಿ ನಂಬಿಕೆಯಿರುವವನು ಈ ಒಂದನೆಯ ದಾರ್ಶನಿಕ. ಸಮ್ಯಕ್ತ್ವದಿಂದ ಕೂಡಿ, ಶಲ್ಯತ್ರಯಗಳನ್ನು ತೊರೆದು, ಪಂಚವಿಂಶತಿಮಲಗಳನ್ನು ದೂರ ಮಾಡಿ ಸಚ್ಚರಿತನೆನ್ನಿಸಿಕೊಳ್ಳುತ್ತಾನೆ. ಹೊಟ್ಟೆಯಲ್ಲಿ ನಾಟಿರುವ ಬಾಣದಂತೆ, ಮನೆಯಲ್ಲಿ ಅಡಗಿರುವ ಹಾವಿನಂತೆ, ಅನ್ನದಲ್ಲಿನ ವಿಷದಂತಿರುವ ಮಿಥ್ಯಾಶಲ್ಯ, ಮಾಯಾಶಲ್ಯ, ನಿಧಾನಶಲ್ಯಗಳೆಂಬ ಮೂರು ಬಗೆಯ ಶಲ್ಯಗಳನ್ನು ಇವನು ನಿವಾರಿಸಿಕೊಳ್ಳುತ್ತಾನೆ. ನಿಧಿಯಂತೆಯೂ, ಒಲುಮೆಯುಳ್ಳವರ ಸಹವಾಸದಂತೆಯೂ, ಯೌವನದ ಸೊಗಸಿನಂತೆಯೂ ಇರುವ ಕೊಲ್ಲದ, ಸುಳ್ಳು ಹೇಳದ, ಕಳವು ಮಾಡದ, ಪರಸ್ತ್ರೀಗೆ ಆಸೆಪಡದ ಹಾಗೂ ನಿಯಮಿತ ಪರಿಗ್ರಹ ಎಂಬ ಪಂಚಾಣುವ್ರತಗಳನ್ನು ಅನುಸರಿಸುತ್ತಾನೆ; ಹಾಗೂ ದುಃಖಭಾಜನವಲ್ಲದ ಶೀಲಸಪ್ತತೆಯನ್ನು ಹೊಂದಿರುತ್ತಾನೆ. ಬಂಧ, ವಧ, ಛೇದ, ಅತಿಭಾರಾರೋಪಣ, ಅನ್ನಪಾನನಿರೋಧಗಳೆಂಬ ಅಹಿಂಸಾವ್ರತದ ಐದು ಅತಿಚಾರದಲ್ಲಿಯೂ; ಮಿಥ್ಯೋಪದೇಶ, ಸ್ತ್ರೀಪುರುಷ ಏಕಾಂತಪ್ರಕಟಣ, ಮೋಸಪತ್ರ ಲೇಖನ, ಅಡವಿಟ್ಟಿದ್ದನ್ನು ಇಲ್ಲವೆನ್ನುವುದು, ಮಂತ್ರಭೇದ ಎಂಬ ಸತ್ಯದ ಐದು ಅತಿಚಾರದಲ್ಲಿಯೂ; ಕಳ್ಳತನಕ್ಕೆ ಪ್ರೇರಣೆ, ಕದ್ದದ್ದನ್ನು ಪಡೆಯುವುದು, ರಾಜ್ಯಾತಿಕ್ರಮ, ಹೀನಮಾನ ಪ್ರತಿರೂಪಕ ಹಾಗೂ ಅಧಿಕಮಾನಪ್ರತಿರೂಪಕ ಎಂಬ ಅಸ್ತೇಯವ್ರತದ ಐದು ಅತಿಚಾರದಲ್ಲಿಯೂ; ಪರವಿವಾಹಕಾರ್ಯ, ಇತ್ವರಿಕಾಪರಿಗ್ರಹ, ಅವಿವಾಹಿತಳ ಸಂಬಂಧ, ಕಾಮಕ್ರೀಡೆ, ತೀವ್ರಕಾಮ ಎಂಬ ಐದು ಬ್ರಹ್ಮಚರ್ಯವ್ರತದ ಅತಿಚಾರದಲ್ಲಿಯೂ; ಕ್ಷೇತ್ರ(ಹೊಲಮನೆ), ಚಿನ್ನ, ಧನಧಾನ್ಯ, ದಾಸದಾಸಿ, ಬಟ್ಟೆಬರೆಗಳ ಒಡೆತನದಲ್ಲಿ ಮಿತಿ ಮೀರುವುದು ಎಂಬ ಅಪರಿಗ್ರಹವ್ರತದ ಐದು ಅತಿಚಾರದಲ್ಲಿಯೂ ತೊಡಗಕೂಡದು. ಮೇಲೆ, ಕೆಳಗೆ, ಸುತ್ತಮುತ್ತ, ವ್ಯತಿಕ್ರಮಗಳಿಂದ ಕ್ಷೇತ್ರವೃದ್ಧಿಕಾರ್ಯಗಳು ಹಾಗೂ ಸ್ಮೃತಿ, ಅಂತರಾದಾನಗಳೆಂಬ ದಿಗ್ವಿರತಿವ್ರತದ ಐದು ಅತಿಚಾರದಲ್ಲಿಯೂ; ಅನಯನ, ಪ್ರೇಷ್ಯಪ್ರಯೋಗ, ಶಬ್ದಾನುಪಾತ, ರೂಪಾನುಪಾತ, ಪುದ್ಗಲಕ್ಷೇಪ ಎಂಬ ಐದು

ದೇಶವಿರತಿವ್ರತದ ಅತಿಚಾರದಲ್ಲಿಯೂ; ಕಂದರ್ಪಕೌತ್ಕುಚ್ಯ, ಮೌಖರ್ಯಾಸ, ಈಕ್ಷಾಧಿಕರಣ, ಉಪಭೋಗಾನರ್ಥತ್ವ, ಪರಿಭೋಗಾನರ್ಥತ್ವ ಎಂಬ ಅನರ್ಥದಂಡವಿರತಿವ್ರತದ ಐದು ಅತಿಚಾರದಲ್ಲಿಯೂ; ಕಾಯದುಷ್ಪ್ರಣಿಧಾನ, ವಾಗ್ದುಷ್ಪ್ರಣಿಧಾನ, ಮನೋದುಷ್ಪ್ರಣಿಧಾನ, ಅನಾದರ, ವಿಸ್ಮೃತಿ ಎಂಬ ಐದು ಸಾಮಯಿಕ ಶಿಕ್ಷಾವ್ರತದ ಅತಿಚಾರದಲ್ಲಿಯೂ; ಅಪ್ರವೇಕ್ಷಿತ, ಅಪ್ರಮಾರ್ಜಿತೋತ್ಸರ್ಗಾಪ್ರಮಾರ್ಜಿತ, ಆದಾನಾಪ್ರತ್ಯವೇಕ್ಷಿತಾಪ್ರಮಾರ್ಜಿತ, ಸಂಸ್ತರೋಪಕ್ರಮಣಾನಾದರ, ಸ್ಮೃತ್ಯನುಪಸ್ಥಾನ ಎಂಬ ಪ್ರೋಷಧೋಪವಾಸವೆಂಬ ಶಿಕ್ಷಾವ್ರತದ ಐದು ಅತಿಚಾರದಲ್ಲಿಯೂ; ಸಚ್ಚಿತ್ತಾಹಾರ, ಸಚ್ಚಿತ್ತ ಸಂಬಂಧಾಹಾರ, ಸಚ್ಚಿತ್ತ ಸಮ್ಮಿಶ್ರಾಹಾರ, ಅಭಿಷವಾಹಾರ, ದುಷ್ಪಕ್ವಾಹಾರ ಎಂಬ ಉಪಭೊಗ, ಪರಿಭೋಗಪ್ರಮಾಣ ಎಂಬ ಶಿಕ್ಷಾವ್ರತದ ಐದು ಅತಿಚಾರದಲ್ಲಿಯೂ; ಸಚ್ಚಿತ್ತ ನಿಕ್ಷೇಪ, ಸಚ್ಚಿತ್ತಾಭಿಧಾನ, ಪರವ್ಯಪದೇಶ, ಮಾತ್ಸರ್ಯ, ಕಾಲಾತಿಕ್ರಮ ಎಂಬ ತಿಥಿಸಂವಿಭಾಗ ಶಿಕ್ಷಾವ್ರತದ ಐದು ಅತಿಚಾರದಲ್ಲಿಯೂ; ಭಂಡಾರದ ಸೇನಬೋವನಂತೆಯೂ, ರಾಣಿವಾಸದ ಹೆಗ್ಗಡೆಯಂತೆಯೂ, ಹೊನ್ನಿನ ಅಧ್ಯಕ್ಷನಾದವನಂತೆಯೂ, ಬೆಳೆಯುವ ಹೊಲವನ್ನು ರಕ್ಷಿಸುವವನಂತೆಯೂ, ಮದಗಜವನ್ನು ಏರುವವನಂತೆಯೂ, ಬಿನ್ನಹವನ್ನು ಮಾಡುವವನಂತೆಯೂ, ನದಿಯನ್ನು ಈಜುವವನಂತೆಯೂ ಕೆಟ್ಟ ನಾಡನ್ನು ಸಮಾಧಾನಪಡಿಸುವವ ನಂತೆಯೂ, ಮೂರ್ಖರ ವೇಗವನ್ನು ನಿಯಂತ್ರಿಸುವವನಂತೆಯೂ, ರತ್ನಾಭರಣಗಳನ್ನು ಹಾಕಿಕೊಂಡು ಪ್ರಯಾಣ ಹೋಗುವವಂತೆಯೂ, ಚಕ್ರವರ್ತಿಯ ಬಾಗಿಲನ್ನು ಕಾಯುವವನಂತೆಯೂ ಅವನು ಬುದ್ಧಿ, ಎಚ್ಚರಗಳಿಂದ ನಡೆಯಬೇಕು.

"ಎಂಟುಮೂಲಗುಣಗಳಿಂದ ಕೂಡಿ, ಸಪ್ತಾಂತರಾಯಗಳನ್ನು ಕಳೆದುಕೊಂಡು, ಪಂಚಾಣುವ್ರತಗಳಲ್ಲಿ ಒಳ್ಳೆಯವನೆನಿಸಿ, ಗುಣವ್ರತತ್ರಯವನ್ನು ಸೇರಿ, ಶಿಕ್ಷಾವ್ರತ ಚತುಷ್ಟಯವನ್ನು ಪಾಲಿಸಿಕೊಂಡು, ಧರ್ಮಶಾಲ್ಯಂಕುರಕ್ಕೆ ಎಡೆಯೆನಿಸುವ ಅರವತ್ತು ಅತಿಚಾರಗಳನ್ನೂ ನಾಶಮಾಡಿ ಬಾಳುವವನು ಎರಡನೆಯ ವ್ರತಿಕನೆಂಬ ಶ್ರಾವಕನಾಗುತ್ತಾನೆ. ಶುದ್ಧ ಜೀವನದಲ್ಲಿ ಸ್ಥಿರನಾಗಿದ್ದುಕೊಂಡು, ಬೇಸರಪಟ್ಟುಕೊಳ್ಳದೆ, ಹಿಂದೆ ಹೇಳಿದ ಸುವ್ರತಗಳನ್ನೆಲ್ಲ ಆಚರಿಸುತ್ತ, ದಯೆ, ಪ್ರೀತಿಗಳಿಂದ ಕೂಡಿ ಸದಾಚಾರವುಳ್ಳವನಾಗಿ ನಿರ್ಮಲ ಮನಸ್ಸಿನಿಂದ ಬಾಳಬೇಕು. ಸಮತೆಯಿಂದ ಕೂಡಿ, ಕರ್ಮರಾಜನನ್ನು ಹೊಗಳಿ, ಮೋಹರಾಜನು ಕಳಿಸಿದ ಸೇನೆಯಾದ ಮೂವತ್ತೆರಡು ದೋಷಗಳನ್ನು ನಿವಾರಿಸಬೇಕು. ಜಡನಾಗಿ, ದೇವಗುರುಗಳನ್ನು ಸೇರದೆ, ಇತರರಿಗೆ ತೊಂದರೆ ನೀಡುತ್ತ, ದೇಹವನ್ನು ತೂಗಾಡಿಸುತ್ತ, ಉನ್ಮತ್ತ ಚೇಷ್ಟೆಯಿಂದ ಎರೆಯನ್ನು ತಂದ ಮೀನಿನಂತೆ ಹೊಳೆಯುತ್ತ, ಕೆಟ್ಟ ಮನಸ್ಸುಳ್ಳವನಾಗಿ ಕೈಮಾಡುತ್ತ, ಇತರರಿಗೆ ಹೆದರಿ, ಇತರರ ನೆವದಿಂದ ವೈಭವಕಾರಣವಾಗಿ ಗುರುಗಳನ್ನು ದೂರವಿಡುತ್ತ, ಅವರಿಗೆ ಪ್ರತಿಕೂಲನಾಗಿ, ಮನೆ ಮೊದಲಾದ ಶಲ್ಯದಿಂದ ಕೂಡಿ ಮಾತಾಡುತ್ತ, ಬೇರೆಯವರನ್ನು ಕಾಡಿಸುತ್ತ, ಹಣೆಯನ್ನು ಎತ್ತುತ್ತ, ನಡುಗುತ್ತ, ಋಷಿಗಳನ್ನು ಕಂಡೂ ಕಾಣದಂತೆ ಇದ್ದು, ಸಂಘನಿರೋಧದಿಂದ ಕೈಬಿಟ್ಟು, ಸಂಪಾದನೆಯ ಕಾರಣದಿಂದ ಮೇಲ್ಮೆ ಹೊಂದಿದೆನೆಂದು ಹೊಗಳಿ ತೆಗಳಿ ಸನ್ನೆ ಮಾಡುತ್ತ, ಸಲ್ಲದ ದನಿಯಲ್ಲಿ ಹಾಡು ಹಾಡುತ್ತ ಇರುವುದು ಎಂಬ ಮೂವತ್ತೆರಡು ದೋಷಗಳನ್ನು ನಿವಾರಿಸಿಕೊಂಡು, ಮೂವತ್ತೆರಡು ದೇವರನ್ನು ಪೂಜಿಸುತ್ತಾನೆ. ಅಲ್ಲದೆ, ಕುದುರೆಗಾಲಿಡುತ್ತ, ಬಳ್ಳಿಯಂತೆ ಬಳುಕುತ್ತ, ಗೋಡೆಯನ್ನು ಆಧರಿಸಿ ಮಲಗಿ, ಮಾಳಿಗೆಯನ್ನು ಹೊತ್ತು ಗುಹ್ಯನಿರೋಧದವನಾಗಿ, ಸಂಕೋಲೆಯಲ್ಲಿರುವವನಂತೆ ನೇತಾಡುತ್ತ, ಕೊರಳನ್ನೆತ್ತಿ ಮೊಲೆಯನ್ನು ನೋಡುತ್ತ, ಕಾಗೆಯಂತೆ ಕುಡಿಗಣ್ಣಿನಿಂದ ನೋಡುತ್ತ, ಘೀಳಿಡುವ ಕುದುರೆಯಂತೆ ಬಾಯನ್ನು ಅಗಿಯುತ್ತ, ಕೋರಳೂ ಚಾಚಿ ಕೈಹಿಡಿದು ತಲೆದೂಗುತ್ತ, ಸನ್ನೆದೋರುತ್ತ, ಬೆರಳನ್ನಾಡಿಸುತ್ತ, ಹುಬ್ಬು ಕುಣಿಸುತ್ತ, ಮದಿಸಿದವನಂತೆಯೂ ಹುಚ್ಚು ಹಿಡಿದವನಂತೆಯೂ ದೆಸೆಗಳನ್ನು ನೋಡುತ್ತ, ಕೊರಳನ್ನು ಕುಗ್ಗಿಸುತ್ತ, ಹಾರಲಾರದ ಕುದುರೆಯಂತೆ ಮೋರೆಯನ್ನು ಎತ್ತುತ್ತ, ಮೈಮುಟ್ಟುತ್ತ, ಕೊರಳನ್ನು ತಿರುವುತ್ತ, ಭೋಗಗಳ ಬಗ್ಗೆ ಚಿಂತಿಸುತ್ತ, ಕಣ್ಸನ್ನೆ ಮಾಡುತ್ತ, ಪರವಶವಾದವನಚಿತೆ ಜಡನಾಗುತ್ತ ಇರಬಾರದು ಎಂಬ ಮೂವತ್ತೆರಡು ದೋಷಗಳನ್ನು ಹೋಗಲಾಡಿಸಿಕೊಂಡು ಕಾರ್ಯೋತ್ಸರ್ಗ ಮಾಡುವ ಶುದ್ಧಬುದ್ಧಿಯಿಂದ ಮೂರೂ ಹೊತ್ತು ದೇವತಾಸ್ತುತಿಯನ್ನು ಮಾಡುವವನು ಮೂರನೆಯ ಶ್ರಾವಕನಾದ ಸಾಮಯಿಕ ಎನಿಸಿಕೊಳ್ಳುತ್ತಾನೆ.

"ನಾಲ್ಕು ತಿಂಗಳು ಮತ್ತು ಹಬ್ಬದ ದಿನಗಳಂದು ಇತರರಿಗೆ ಹೇಳಿದ ಅಷ್ಟೂ ಗುಣಗಳನ್ನು ಹೊಂದಿ, ಲೋಕವೆಲ್ಲ ಗೌರವಿಸುವಂತೆ ಉಪವಾಸ ಮಾಡುವವನು ಪ್ರೋಷಧೋಪವಾಸ ಎಂಬ ನಾಲ್ಕನೆಯ ಶ್ರಾವಕನಾಗುತ್ತಾನೆ. ಹಿಂದೆ ಹೇಳಿದ ಗುಣಗಳ ಸಮೇತ ಒಳಿತನ್ನು ಮರೆಯದೆ, ಮರೆತಾದರೂ ಹಸಿಯ ವಸ್ತುಗಳನ್ನು ಸ್ವೀಕರಿಸದವನು ಸಚ್ಚಿತ್ತ ಎಂಬ ಐದನೆಯ ಶ್ರಾವಕನಾಗುತ್ತಾನೆ. ರಾತ್ರಿಯಲ್ಲದೆ ಹಗಲು ಹೆಂಡಿರ ಸಹವಾಸವನ್ನು ಬಿಟ್ಟು, ಹಿಂದೆ ಹೇಳಿದ ಗುಣಗಳನ್ನು ಹೊಂದಿರುವವನು ರಾತ್ರಿಭಕ್ತ ಎಂಬ ಆರನೆಯ ಶ್ರಾವಕ. ಪಾಪದ ಕಟ್ಟೆ, ದುರ್ಗತಿಯ ದಾರಿ, ಕಳಂಕದ ಗಂಟು, ದುಃಖದ ಮನೆ ಎನಿಸಿದ ಕಾಮಿನಿಯರ ಭೋಗವನ್ನು ತ್ಯಜಿಸಿ, ಸಚ್ಚರಿತದಿಂದ ಕೂಡಿರುವ ಸದ್ಗುಣಿಯು ಬ್ರಹ್ಮಚಾರಿ ಎಂಬ ಶ್ರಾವಕ. ಆರಂಭದ ಸ್ಥಿತಿಯನ್ನು ಬಿಟ್ಟು ಒಂದೇ ಬಗೆಯಾಗಿ ಹಿಂದೆ ಹೇಳಿದ ಗುಣಗಳನ್ನು ತಪ್ಪದೆ ಅನುಸರಿಸುವವನು ಆರಂಭನಿವೃತ್ತ ಎಂಬ ಎಂಟನೆಯ ಶ್ರಾವಕ. ಹಿಂದೆ ಹೇಳಿದ ಗುಣಗಳ ಜೊತೆಗೆ ಪರಿಗ್ರಹದ ಚಿಂತೆಯನ್ನು ಬಿಟ್ಟು, ಸದಾಚಾರಚರಿತನೆನಿಸಿಕೊಳ್ಳುವವನು ಪಾಪಾದ್ರಿವಜ್ರನಾದ ಪರಿಗ್ರಹವಿರತ ಎಂಬ ಒಂಬತ್ತನೆಯ ಶ್ರಾವಕ. ತನಗೆ ಹೇಳಲಾದ ಮಾರ್ಗವನ್ನು ಚಾಚೂ ತಪ್ಪದೆ ಹಿಂದೆ ಹೇಳಿದ ಗುಣಗಳನ್ನು ಔನ್ನತ್ಯದಿಂದ ಅನುಸರಿಸುವವನು ಅನುಮತಿ ಎಂಬ ಹತ್ತನೆಯ ಶ್ರಾವಕ. ತನಗೆಂದು ಮಾಡಿದ ಅನ್ನವನ್ನು ಹೊರತು, ಔಷಧವನ್ನು ಸೇವಿಸದ ಹಾಗೂ ಹಿಂದೆ ಹೇಳಿದ ಗುಣಗಳನ್ನು ತಪ್ಪದೆ ಅನುಸರಿಸುವವನು ಉದ್ದಿಷ್ಟವಿರತ ಎಂಬ ಹನ್ನೊಂದನೆಯ ಶ್ರಾವಕ. ಹೀಗೆ ದಾರ್ಶನಿಕ, ವ್ರತಿಕ, ಸಾಮಯಿಕ, ಪ್ರೋಷಧೋಪವಾಸ, ಸಚ್ಚಿತ್ತವಿರತ, ರಾತ್ರಿಭಕ್ತ, ಬ್ರಹ್ಮಚಾರಿ, ಆರಂಭನಿವೃತ್ತ, ಪರಿಗ್ರಹವಿರತ, ಅನುಮತಿ, ಉದ್ದಿಷ್ಟವಿರತ ಎಂಬುದಾಗಿ ಶ್ರಾವಕಸ್ಥಾನಗಳು ಹನ್ನೊಂದು" ಎಂದು ಮುನೀಂದ್ರರು ವಿವರಿಸಿದರು.

ಎಲ್ಲವನ್ನೂ ಸಾವಧಾನದಿಂದ ಕೇಳಿದ ಮೇಲೆ ಖೇಚರರಾಜನು ಅನುಪಮವೆನಿಸಿದ ಹನ್ನೊಂದನೆಯ ಮಹಾಶ್ರಾವಕತ್ವವನ್ನು ದಯಪಾಲಿಸಬೇಕೆಂದು ಮುನಿಪತಿಗಳನ್ನು ಬೇಡಿಕೊಂಡ. ಅದನ್ನು ಕೇಳಿದ ಮುನಿಗಳಿಗೆ ಮೆಚ್ಚಿಕೆಯಾಯಿತು.; ಕರುಣೆಯಿಂದ ಅದನ್ನು ನೀಡಿದರು. ರಾಜನು ಮಹದಾನಂದದಿಂದ ಉಪಾಸಕರು ಅನುಸರಿಸಲು ಕಷ್ಟಕರವಾದ ಹನ್ನೊಂದನೆಯ ಸ್ಥಾನವನ್ನು ಪಡೆದು ಉತ್ತರೋತ್ತರವಾಗಿ ಅದನ್ನು ಅನುಸರಿಸುತ್ತ ಗುರುಸೇವೆಯಲ್ಲಿ ನಿರತನಾದ. ಹೀಗೆ ಹಲವು ಕಾಲ ಸಂದಿತು. ಒಂದು ದಿವಸ ಅವನಿಗೆ ಶೂರಸೇನ ನಾಡಿನ ಉತ್ತರ ಮಧುರೆಯ ಜಿನಾಲಯಗಳನ್ನು ಕಂಡು ಪೂಜಿಸಬೇಕೆಂಬ ಆಸೆ ಉದಿಸಿತು. ಗುರುವಚನವನ್ನು ಸ್ವಲ್ಪವೂ ಮೀರಬಾರದು. ಪರದಲ್ಲಿ ಹಿರಿಸುಖವನ್ನು ಪಡೆಯಬೇಕೆಂಬ ಶಿಷ್ಯನು ಹೀಗೆ ಮಾಡಲೇ ಕೂಡದು. ಆ ಕಾರಣದಿಂದ ಗುರುಗಳನ್ನು ಒಪ್ಪಿಸಿದಲ್ಲದೆ ಯಾವ ಕಾರ್ಯವನ್ನೂ ಮಾಡಬಾರದು ಎಂದು ತೀರ್ಮಾನಿಸಿದ. ಅಂತೆಯೇ ಮುನಿಗುಪ್ತಭಟ್ಟಾರಕರಲ್ಲಿಗೆ ಹೋಗಿ ವಿನಯದಿಂದ ವಂದಿಸಿ ನಿಧಾನವಾಗಿ ತನ್ನ ಮನದಿಂಗಿತವನ್ನು ನಿವೇದಿಸಿಕೊಂಡ. ಸ್ಥಿರಗುಣವುಳ್ಳವನೂ, ವೈರಾಗ್ಯಪರನೂ, ಲಜ್ಜಿತನೂ, ಹಿರಿಯ ಅರಿವನ್ನು ಪಡೆದವನೂ ಆದವನು ಸಂಚಾರ ಕೈಗೊಂಡರೂ ತಮ್ಮ ಉತ್ತಮಗುಣವನ್ನು ತೊರೆಯುವುದಿಲ್ಲ ಎಂದು ಅವರಿಗೆ ತಿಳಿದಿದ್ದಿತು. ಆದ್ದರಿಂದ ತೀರ್ಥವಂದನೆ ಮಾಡಿ ಬರಲು ಅನುಮತಿಯಿತ್ತರು. ಗುಣಿಗಳ ಸಹವಾಸವನ್ನು ಮಾತ್ರ ಮಾಡುವಂತೆಯೂ, ಜನರು ಏನಾದರೂ ಆಣಕದ ಮಾತನಾಡಿದರೆ ಸಿಟ್ಟುಗೊಳ್ಳದಿರುವಂತೆಯೂ ತಪಸ್ಸಿನಲ್ಲಿ ಆಸಕ್ತಿ ಕಳೆದುಕೊಳ್ಳದಿರುವಂತೆಯೂ ಅವನಿಗೆ ಉಪದೇಶ ಮಾಡಿದರು. ಅಲ್ಲದೆ, ವರುಣ ಮಹಾರಾಜನ ಅರಸಿಯಾದ ರೇವತೀ ಮಹಾದೇವಿಗೆ ತಮ್ಮ ಆಶೀರ್ವಾದಗಳನ್ನೂ, ಉಂಡುರುಳಿಭಟ್ಟಾರಕರಿಗೆ ತಮ್ಮ ಪ್ರತಿವಂದನೆಯನ್ನೂ ಮರೆಯದೆ ತಿಳಿಸಲು ಹೇಳಿದರು. ಆಗ ಬ್ರಹ್ಮಚಾರಿಯು ನಕ್ಕು, "ಆ ಊರಲ್ಲಿ ತಮಗೆ ಶ್ರಾವಕರು ಭವಸೇನಾಚಾರ್ಯರೇ ಮುಂತಾದ ಐನೂರು ಮಂದಿ ಮುನಿಗಳ ಪರಿಚಯವಿದ್ದರೂ, ಅವರಿಬ್ಬರ ಬಗ್ಗೆ ಮಾತ್ರ ವಿಶೇಷ ಮೋಹವೇಕೆ?" ಎಂದು ಕೇಳಿದ. ಅದಕ್ಕೆ ಆ ಸಂಬಂಧಗಳನ್ನೆಲ್ಲ ಹೇಳುವ ಆವಶ್ಯಕತೆಯಿಲ್ಲ ಎಂದರೂ ಕೇಳದೆ ಮತ್ತೆ ಪ್ರಶ್ನಿಸಿದಾಗ ಮುನೀಂದ್ರರು ಹೇಳಿದರು.

ಬೇವಿನ ಗಿಡವನ್ನು ನಟ್ಟು ಹಸುವಿನ ನೊರೆ ಹಾಲನ್ನು ಹಾಕಿದರೂ ಅದರ ಕಹಿಯು ಕಡಿಮೆಯಾಗುವುದಿಲ್ಲ ಎನ್ನುವಂತೆ ಆ ಊರಿನವರೂ; ಸತ್ಯವಾದ ಧರ್ಮವನ್ನು ಕೇಳಿದರೂ ಸಂಶಯವುಳ್ಳವರಾದ್ದರಿಂದ ಅವರಿಗೆ ಹಾರೈಕೆಯನ್ನಾಗಲೀ ವಂದನೆಯನ್ನಾಗಲೀ ಹೇಳಲಿಲ್ಲ ಎಂದು ವಿವರಿಸಿದರು. ಅದನ್ನು ಕೇಳಿ ಬ್ರಹ್ಮಚಾರಿಗೆ ಬೆರಗಾಯಿತು; ಅಲ್ಲದೆ ಮುನಿಗಳಿಗೆ ತಿಳಿಯದ ವಿಷಯವೇ ಇಲ್ಲವೆಂಬ ಭಾವನೆಯುಂಟಾಯಿತು. ಆದ್ದರಿಂದ ತಾನು ಅವರ ಮಾತನ್ನು ಯಾವುದೇ ಕಾರಣದಿಂದಲೂ ತಪ್ಪಬಾರದೆಂದು ನಿಶ್ಚಯ ಮಾಡಿದ. ಗುರುಗಳಿಗೆ ವಂದನೆಗಳನ್ನು ಹೇಳಿ ಅವರಿಂದ ಬೀಳ್ಕೊಂಡ.

ವಿದ್ಯೆಯಿಂದ ಸೃಷ್ಟಿ ಮಾಡಿದ ರತ್ನತ್ರಯವಿರಾಜಿತವಾದ ಹೊನ್ನ ವಿಮಾನವನ್ನೇರಿ ಗಗನಮಾರ್ಗದ ಮೂಲಕ ಉತ್ತರ ಮಧುರೆಗೆ ಬಂದು ಭೂಮಿಯ ಮೇಲೆ ಇಳಿದ. ಆನಂತರ ಬ್ರಹ್ಮಚಾರಿಯಂತೆ ಭವಸೇನಾಚಾರ್ಯರಲ್ಲಿಗೆ ಬಂದ. ಅವರಿಗೆ ನಮಸ್ಕರಿಸಿ, "ಹಿರಿದಾದ ಖ್ಯಾತಿಯನ್ನು ಪಡೆದವರು ಈ ಜಗತ್ತಿನಲ್ಲಿ ಬೇರೆ ಯಾರಿದ್ದಾರೆ? ಆದ್ದರಿಂದ ನಿಮ್ಮನ್ನು ಕಾಣುವ ಪರಮ ಹಂಬಲದಿಂದ ಪಾಂಡ್ಯದೇಶದಿಂದ ನಾನು ಬಂದಿದ್ದೇನೆ" ಎಂದು ನಿವೇದಿಸಿಕೊಂಡ. ಆ ಮಾತುಗಳನ್ನು ಕೇಳಿದ ಭವಸೇನಾಚಾರ್ಯರು ಸಂತೋಷ ಪಟ್ಟುಕೊಂಡರು. ಅವರ ಸಮ್ಯಕ್ತ್ವದ ಸ್ವರೂಪವನ್ನು ತಿಳಿಯಬೇಕೆಂಬುದು ಬ್ರಹ್ಮಚಾರಿಯ ಮನಸ್ಸು. ಅದರಿಂದ ಮೂರು ನಾಲ್ಕು ದಿನಗಳಾದ ಮೇಲೆ ಒಮ್ಮೆ ಅವರನ್ನು ಕುರಿತು, "ಮರುಳುಗಳಿಗೆಂದು ಮಾಡಿದ ಅಡುಗೆಯನ್ನು ಉಂಡರೋ ಅಥವಾ ತಾವೂ ಮರುಳೇ ಆದರೋ, ಅಂತೂ ಪರಲೋಕವಿದೆಯೆಂಬುದನ್ನು ಯಾರು ತಾನೇ ಬಲ್ಲರು? ಅದು ಇದೆಯೆಂಬ ತಿಳಿವಳಿಕೆಯಿಂದ ನಿಷ್ಕಾರಣವಾಗಿ ಶ್ರಾವಕರು ಹೊಟ್ಟೆ ಕಟ್ಟಿ ಕಷ್ಟಪಟ್ಟು ಹೆಚ್ಚು ಹಣವನ್ನು ಸಂಪಾದಿಸಿ ಅದನ್ನು ಚೆನ್ನಾಗಿ ಭೋಗಿಸಲೂ ಆರದೆ, ದುರ್ಬುದ್ಧಿಯಿಂದ ಧರ್ಮದಲ್ಲಿ ಏಕೆ ಕೆಡುತ್ತಾರೆ?" ಎಂದು ಪ್ರಶ್ನಿಸಿದ. ಆಗ ಅವರು ಮೆಲ್ಲನೆ ನಕ್ಕರು. "ಧರ್ಮದಿಂದ ಪರಲೋಕದಲ್ಲಿ ಸುಖವಿದೆಯೆಂಬುದಾಗಿ ಆಗಮಗಳಲ್ಲಿ ಹೇಳಿದೆ. ಅದು ಹೊರತು ನಮಗೆ ಬೇರೇನೂ ತಿಳಿಯದು" ಎಂದರು. ಇದನ್ನು ಕೇಳಿ ಬ್ರಹ್ಮಚಾರಿಯೂ ನಕ್ಕ. ಆನಂತರ ಮತ್ತೆ, "ಮಾಯೆಯಿಂದ ಜೀವಿಗಳನ್ನು ಕಟ್ಟಿಹಾಕಿ ಅವುಗಳನ್ನು ಮಿಸುಕಲು ಬಿಡದೆ ನಿಷ್ಕರುಣೆಯಿಂದ 'ಪ್ರಾಣಿಗಳಿಗೆ ಉಬ್ಬಸವನ್ನು ಮಾಡಬೇಡಿ' ಎಂದರೆ ಅವುಗಳಿಗೆ ನಿಜವಾಗಿಯೂ ಪ್ರಾಣವಿದೆಯೇ?" ಎಂದು ಕೇಳಿದ. ಅದಕ್ಕೆ ಅವರು "ನಮಗೆ ತಿಳಿಯದು" ಎಂದರು. ಆಮೇಲೆ ಗುಂಡಿಯೊಂದರಲ್ಲಿನ ಕುಡಿಯಬಾರದ ನೀರ(ವ)ನ್ನು ತಂದುಕೊಡಲು ಅವರು ಮಾತಾಡಲಿಲ್ಲ. ಅದನ್ನು ಕಂಡು ನಕ್ಕು, "ನೀರು ಗಾಳಿ ಬೆಂಕಿ ಭೂಮಿ ಜೀವವು ಇದೆಯೆನ್ನುವರು; ಆದರೆ ಅದನ್ನು ಯಾರೂ ಕಂಡವರಿಲ್ಲ. ಆದ್ದರಿಂದ ನಿಜವಾಗಿಯೂ ಅವುಗಳಲ್ಲಿ ಜೀವವು ಇದೆಯೇನು? ದಯವಿಟ್ಟು ಹೇಳಿರಿ" ಎಂದಾಗ ಅವರು "ತಿಳಿಯದು; ಓದಿನಲ್ಲಿ ಹಾಗೆ ಹೇಳಿದೆ" ಎಂದರು.

ಅವರ ಮಾತು ಮತ್ತು ಆಗಮಗಳಲ್ಲಿನ ಅವರ ವಿಶ್ವಾಸಗಳನ್ನು ಕಂಡು ಬ್ರಹ್ಮಚಾರಿ ತಲೆದೂಗಿದ. ಇಂಪಾದ ಗೀತವು ಚಿಮ್ಮುತ್ತಿರಲು, ತೂರ್ಯಧ್ವನಿಗಳು ಹೊಮ್ಮುತ್ತಿರಲು, ತುಪ್ಪ, ಮೊಸರು, ಹಾಲುಗಳಿಂದ ವೀತರಾಗನಿಗೆ ಭಕ್ತಿಯಿಂದ ಅಭಿಷೇಕವನ್ನು ಮಾಡುವರಲ್ಲ, ಅದರಿಂದ ಉಂಟಾಗುವ ಫಲವೇನು ಎಂದು ಆ ಸಾಧುಗಳನ್ನು ಕೇಳಲು ಅವರು, "ನಮಗೇನು ಗೊತ್ತು; ಮುನಿಗಳು ಪುಣ್ಯವುಂಟೆಂದು ಹೇಳುವರು" ಎಂದು ಉತ್ತರಿಸಿದರು. ತಾವರೆಯನ್ನು ನೀರು ತಾಕದಂತೆ, ಹುಬ್ಬು ಕಿವಿಯನ್ನು ಮುಟ್ಟದಂತೆ, ಮೋಡಗಳು ನೆಲವನ್ನು ತಾಕದಂತೆ, ನಕ್ಷತ್ರಗಳು ಮೇರುವನ್ನು ತಗುಲದಂತೆ, ಪತಂಗವು ಸೂರ್ಯನನ್ನು ಮುಟ್ಟದಂತೆ, ಅವರ ಮಾತು ಮತ್ತು ಆಪ್ತಾಗಮಗಳಲ್ಲಿ ಹೊಂದಿಕೆಯಿರಲಿಲ್ಲ. ಇದನ್ನು ಕಂಡು ಬ್ರಹ್ಮಚಾರಿಯು, ಗುಂಡಿಯಲ್ಲಿ ತಾವರೆ, ಬೇವಿನ ಬೀಜದಲ್ಲಿ ಸಿಹಿ, ಸೂರ್ಯನಲ್ಲಿ ತಂಪು, ಭೂಮಿಯ ಅಭವ್ಯರಲ್ಲಿ ಒಳಿತು, ಇವುಗಳನ್ನು ಹುಡುಕುವವನು ಗಾಂಪನೇ ಸರಿ; ತಾಮ್ರದಿಂದ ಜಿನಪ್ರತಿಮೆಯನ್ನು ಮಾಡಿಸಿದರೂ ಅದು ಕಿಲುಬು ಹಿಡಿಯುವುದು ತಪ್ಪದ ಹಾಗೆ, ಭೂಮಿಯ ಮೇಲಣ ಅಭವ್ಯರು ಜಿನರೂಪವನ್ನು ಪಡೆದರೂ ಕ್ಷುದ್ರರೇ ಆಗಿರುತ್ತಾರೆ;

ಆದ್ದರಿಂದ 'ಸಂಸ್ಕಾರಶತೇನಾಪಿ ನ ಗೂಥಃ ಕುಂಕುಮಾಯತೇ' ಎಂಬ ಮಾತಿನಂತೆ ಮಿಥ್ಯಾದೃಷ್ಟಿಗಳುಳ್ಳವರೂ ಅಭವ್ಯರೂ ಎಷ್ಟೇ ಸಾವರಣೆಯಿಂದ ನಡೆದುಕೊಂಡರೂ, ಪ್ರಸಿದ್ಧಿಯನ್ನು ಪಡೆದರೂ ನಿರಂತರ ಸುಖವನ್ನು ಪಡೆಯಲಾರರು ಎಂಬುದನ್ನು ಅರಿತುಕೊಂಡ.

ಅನಂತರ ಉಂಡುರುಳಿ ಭಟ್ಟಾರಕರ ಸಮ್ಯಕ್ತ್ವವನ್ನು ಅರಿತುಕೊಳ್ಳ ಬೇಕೆಂದು ಅವರ ಬಳಿ ಬಂದ. ಅವರು ನೋಡುತ್ತಿರುವಂತೆಯೇ ತಿಗಣೆ ಇರುವೆ ನೊಣ ಮತ್ತು ಹಸಿಯ ಹುಲ್ಲನ್ನು ತನ್ನ ವಿದ್ಯೆಯಿಂದ ಸೃಷ್ಟಿಸಿದ. ಇರುವೆಗಳನ್ನು ತುಳಿಯುತ್ತ, ಹುಲ್ಲನ್ನು ಕೀಳುತ್ತ, ತಿಗಣೆಗಳನ್ನು ಹೊಸಕುತ್ತ, ನೊಣಗಳನ್ನು ನಿರ್ದಯೆಯಿಂದ ಕೊಲ್ಲುತ್ತ ಇರುವುದನ್ನು ಉಂಡುರುಳಿ ಭಟ್ಟಾರಕರು ಕಂಡು ಹೀಗೆಂದುಕೊಂಡರು: "ಮಕ್ಕಳು ಹೇಸಿಗೆ ಯಾವುದು, ನೀರು ಯಾವುದು ಎಂದು ತಿಳಿಯದೆ ಮೈಗೆಲ್ಲ ಬಳಿದುಕೊಳ್ಳುತ್ತವೆ; ಹಾಗೆಯೇ ಮಿಥ್ಯಾತ್ವದ ಉರುಬಿನಿಂದ ಖಳರೂ ಅಶುಭರೂ ಅಶುಭಕರ್ಮಗಳನ್ನು ಶುಭಕರ್ಮಗಳಂತೆ ಆಚರಿಸುವುದರಲ್ಲಿ ಚೋದ್ಯವೇನು?" ಎಂದುಕೊಂಡರು. ಅವನ ನಿಷ್ಕಾರುಣ್ಯಕ್ಕೆ ತುಂಬ ಅಸಹ್ಯಪಟ್ಟು, ಬ್ರಹ್ಮಚಾರಿಯಲ್ಲಿಗೆ ನಿಧಾನವಾಗಿ ಹೋಗಿ, ಮೃದುವಚನಗಳಿಂದ ಹೀಗೆಂದರು: "ದಯೆಯಿಲ್ಲದ ಸದ್ಧರ್ಮವೂ, ನಯವಿಲ್ಲದ ಸತಿಯೂ, ಆತ್ಮನಿಲ್ಲದ ದೇಹವೂ, ಜಯವಿಲ್ಲದ ಕಾಳಗವೂ, ಪ್ರಿಯವಿಲ್ಲದ ಔತಣವೂ ಜಗತ್ತಿನಲ್ಲಿ ಒಪ್ಪಲಾರವು. ಜಿನಧರ್ಮವು ಜೀವಸಮೂಹಕ್ಕೆ ಆಶ್ರಯ, ಆತ್ಮಹಿತ; ಪಾಪರಾಶಿಯೆಂಬ ಸಮುದ್ರಕ್ಕೆ ಬಡಬಾನಲದಂತೆ; ಸಜ್ಜನವಂದ್ಯವಾದುದು; ಸುವ್ರತೈಕನಿಧಿ ಹಾಗೂ ಗುಣನಿಲಯ ಎನಿಸಿಕೊಂಡಿರುವಂಥದು. ತಾಯಿ, ತಂದೆ, ಸೋದರರು, ಇಷ್ಟರು, ಹೆಂಡತಿ, ಮಕ್ಕಳು, ಗೆಳೆಯರು ಎಂಬಿವರೆಲ್ಲರೂ ಇದ್ದೇನು ಪ್ರಯೋಜನ? ಮನಃಪೂರ್ವಕವಾಗಿ ಮಹಾಜಿನರೂಪವನ್ನೇ ಪಡೆದೆಯೆಂದ ಮೇಲೆ ಇನ್ನು ಇಡೀ ಭೂಮಂಡಲದಲ್ಲಿ ನಿನ್ನ ಹಾಗೆ ಧನ್ಯರೂ ಮಾನ್ಯರೂ ಇರಲಾರರು. ನೀನು ವೀರತ್ವದಿಂದ ಮಾತ್ರ ಜಿನರೂಪವನ್ನು ಹೊಂದಿರುವೆ, ಇನ್ನು ಆಲಸ್ಯ ಮಾಡದೆ ಗುಣವಂತರನ್ನು ಸೇರಿ ಪರಮಾಗಮವನ್ನು ಅಭ್ಯಾಸ ಮಾಡು. ಅದರಿಂದಲ್ಲದೆ ಸದ್ಧರ್ಮವನ್ನು ತಿಳಿಯಬರುವುದಿಲ್ಲ; ಧರ್ಮವು ದೊರೆತಲ್ಲದೆ ಅಕ್ಷಯಸಿರಿ ಕೈಸೇರದು. ಆ ಕಾರಣದಿಂದ ಆಗಮಗಳನ್ನು ಓದು; ಅದನ್ನು ಮಾಡದೆ ದಯಾಮೂಲವಾದ ಧರ್ಮವನ್ನು ತಿಳಿಯಲು ಸಾಧ್ಯವಿಲ್ಲ. ನೀನು ನಿರ್ದಯನ ಹಾಗೆ ಜೀವಗಳಿಗೆ ನೋವನ್ನುಂಟು ಮಾಡಬೇಡ" ಎಂದು ಹೇಳಿದರು.

ಅದಕ್ಕೆ ಬ್ರಹ್ಮಚಾರಿಯು, "ದೇಹವನ್ನು ತಪಸ್ಸಿನಲ್ಲಿ ಕುಂದಿಸಿ, ಸ್ತ್ರೀಸಹವಾಸವನ್ನು ಬಿಟ್ಟು, ಐಹಿಕಸುಖಗಳನ್ನು ಬರಿದೆ ಕೆಡಿಸಿಕೊಂಡು ಪರಲೋಕ ಸುಖವನ್ನು ಬಯಸುವವನಿಗಿಂತ ದೊಡ್ಡ ಗಾಂಪನು ಯಾರು? ಅದರ ಬಗ್ಗೆ ತಿಳಿದವನು ಯಾರು?" ಎಂದು ಕೇಳಿದ. ಅದಕ್ಕೆ ಉಂಡುರುಳಿ ಭಟ್ಟಾರಕರು: "ನಿನಗೆ ನಿನ್ನ ಬೆನ್ನು ಕಾಣಿಸದು. ಅಷ್ಟರಿಂದ ಬೆನ್ನೇ ಇಲ್ಲವೆಂದು ಹೇಳಿದಂತಾಯಿತು. ಹರಟುವವರ ಮಾತುಗಳನ್ನು ನಂಬುವೆಯಾ? ನಿನ್ನ ಕಣ್ಣಿನ ಪಾಪೆಯನ್ನು ಚೆನ್ನಾಗಿ ತಿಳಿಯದ ಕಾರಣದಿಂದ ಪಾಪೆಗಳೇ ಇಲ್ಲವೆನ್ನಲಾದೀತೇ? ಗುಣವಿಲ್ಲದವರು ನಂಬದಿರುವಷ್ಟರಿಂದಲೇ ಗುಣಗಳೇ ಇಲ್ಲವೆನ್ನುವೆಯಾ? ತಾಯಿಯ ಹೊಟ್ಟೆಯಲ್ಲಿದ್ದುದು ನಿನಗೆ ತಿಳಿಯದು; ಅದಕ್ಕೆ ಅದು ಸುಳ್ಳು ಎನ್ನುತ್ತೀಯಾ? ಹಾಗೆಯೇ ನೀನು ತಿಳಿಯದ ಕಾರಣದಿಂದ ಪರವೇ ಇಲ್ಲವೆನ್ನುವೆಯಾ?" ಎಂದು ವಾದಿಸಿದರು. ಬ್ರಹ್ಮಚಾರಿ ಅಲ್ಲಿಗೆ ಸುಮ್ಮನಾಗಲಿಲ್ಲ. "ಸುರಲೋಕಸುಖವು ತಪಸ್ಸಿನಿಂದ ದೊರೆಯುವುದೆಂದು ಆಗಮ ಹೇಳುತ್ತದೆ; ಆದರೆ ಸತ್ತವರು ಬಂದು ಸುರಗತಿ ಇದೆಯೆಂದು ನಿಮಗೆ ಹೇಳಿದರೆ? ನಿಮಗೇಕೆ ಅದರಲ್ಲಿ ನಂಬಿಕೆ ಬಂತು?" ಎಂದು ಪ್ರಶ್ನಿಸಿದ. ಅದಕ್ಕೆ ಮುನೀಂದ್ರರ ಉತ್ತರವಿದು: "ದೂರದ ಗ್ರಹಣವನ್ನು ಯಾರಾದರೂ ಕಂಡವರಿದ್ದಾರೆಯೇ? ಕೇಳಿ, ಓದಿ ತಿಳಿದವರು ಹಾಗೆನ್ನುವರು. ಓದಿನಲ್ಲಿ ಹುಸಿಯಿದೆಯೇ? ಅಮಾವಾಸ್ಯೆಯಂದು ಚಂದ್ರನು ಕಾಣಿಸುವುದಿಲ್ಲ. ಅಷ್ಟಕ್ಕೆ ಚಂದ್ರನೇ ಇಲ್ಲವೇ? ಭ್ರಮೆಯ ಕಾರಣದಿಂದ ನಿನಗೆ ಜಿನರ ಬಗ್ಗೆ ಗೊತ್ತಿಲ್ಲದಿದ್ದರೆ ಜಿನರೇ ಇಲ್ಲವೆಂದು ಅರ್ಥವೇ? ಕಲಿಗಾಲದ ಕಾರಣದಿಂದ ಅವರು ಕಾಣಿಸಿಕೊಳ್ಳುವುದಿಲ್ಲ, ಅಷ್ಟೆ." "ಹಾಗಾದರೆ, ನಿಮ್ಮ ಆಗಮದಲ್ಲಿ ಹೇಳಿದ ಮೂರು ಲೋಕಗಳನ್ನು ಯಾರು ಹೊತ್ತಿದ್ದಾರೆ,

ಹೇಳಿ" ಎಂದು ಬ್ರಹ್ಮಚಾರಿ ಕೇಳಿದ. ಅದಕ್ಕೆ ಭಟ್ಟಾರಕರು, "ಆಕಾಶದಲ್ಲಿರುವ ಚಂದ್ರಸೂರ್ಯರನ್ನು ಯಾರು ಹೊತ್ತಿದ್ದಾರೆ? ಹಾಗೆಯೇ ಲೋಕತ್ರಯಗಳು ಯಾವ ಆಧಾರವೂ ಇಲ್ಲದೆ ಸ್ವಭಾವತಃ ನಿಂತಿವೆ. ಇನ್ನು, ಪರಮಾಗಮ ಹುಸಿ ಎನ್ನುವೆಯಾದರೆ, ಈ ಸಿದ್ಧಾಂತದ ಮೂಲಕ ಸಾಧಿಸಲಾದ ಗಣಿತ, ಜ್ಯೋತಿಷ್ಯಗಳು ಯಾಕೆ ತಪ್ಪಾಗವು? ಆದ್ದರಿಂದ ಬಿಡಿಬಿಡಿಯಾಗಿ ಯಾವುದನ್ನೂ ಹುಸಿ ಎನ್ನಬಾರದು" ಎಂದು ವಿವರಿಸಿದರು.

ಹಾಗಾದರೆ, ಆಗಮಗಳಲ್ಲಿ ಹೇಳಲಾದ ಷಡ್ದ್ರವ್ಯ, ಸಪ್ತತತ್ವ, ನವಪದಾರ್ಥ, ಪಂಚಾಸ್ತಿಕಾಯಗಳೆಲ್ಲ ನಿಜವೇನು ಎಂಬುದು ಬ್ರಹ್ಮಚಾರಿ ಎತ್ತಿದ ಮುಂದಿನ ಸಂದೇಹ. ಸೂರ್ಯನು ತನ್ನ ಬಿಸುಪನ್ನು ಬಿಟ್ಟು ತಣ್ಣಗಾದರೂ, ಚಂದ್ರನು ಆಶ್ಚರ್ಯಕರವಾಗಿ ತನ್ನ ತಣ್ಪನ್ನು ಬಿಟ್ಟು ಬಿಸಿಯಾದರೂ, ಸಮುದ್ರಗಳಲ್ಲಿರುವ ನೀರೆಲ್ಲ ಬತ್ತಿ ಹೋದರೂ, ಮೇರುಪರ್ವತವು ತನ್ನ ಜಾಗವನ್ನು ಬಿಟ್ಟು ಕದಲಿದರೂ ಪರಮ ಜಿನಾಗಮವು ತಪ್ಪಾಗಲು ಎಂದಿಗೂ ಸಾಧ್ಯವಿಲ್ಲ ಎಂದು ಭಟ್ಟಾರಕರು ಖಂಡಿತವಾಗಿ ನುಡಿದರು. ಕಿವಿ–ಹಾಲೆ, ನದಿ–ಸಮುದ್ರ, ಗಜ–ದಂತ, ಮೇರು–ಪರ್ವತ, ಹಾಸು–ಹೊಕ್ಕು, ಮಾಣಿಕ್ಯ–ಕಾಂತಿ, ನಿಷಧ–ವಿದೇಹ, ಜಿತ್ತೆ,–ವಜ್ರೆ, ಮೊಲೆ–ಕೆಚ್ಚಲು, ಮರ–ಬೆಂಕಿ, ಬೆಲ್ಲ–ಸಿಹಿ, ಸಿಂಹ–ಕೇಸರ, ಅಂಗೈ–ರೇಖೆ, ಹುಬ್ಬು– ಹಣೆ, ಕಣ್ಣು–ಪಾಪೆ, ಸ್ತನ–ತೊಟ್ಟು ಇವುಗಳು ಕೂಡಿದ ಹಾಗೆ ಮಹಾಪುರುಷರು, ಸಮ್ಯಕ್ತ್ವಗಳ ಸೇರುವಿಕೆ ಎಂದು ಮತ್ತಷ್ಟು ಖಚಿತವಾಗಿ ನಿರೂಪಿಸಿದರು. ಅದನ್ನು ಕೇಳಿ ಉಂಡುರುಳಿ ಭಟ್ಟಾರಕರ ಸಮ್ಯಕ್ತ್ವಕ್ಕೆ ಮೆಚ್ಚಿ ಮನಸ್ಸಿನಲ್ಲಿಯೇ ವಂದಿಸಿದ. ಆದರೆ ಅವರ ಕ್ಷಮೆಯನ್ನು ಪರೀಕ್ಷಿಸಬೇಕೆಂದು ಬ್ರಹ್ಮಚಾರಿಯು, ಅವರಿಗೆ ತಿಳಿಯದಂತೆ ಮಲಗಿದ್ದವರನ್ನು ತುಳಿದ; ಅವನ ಕಾಲ ಕೆಸರು ಅವರ ಮೈಮೇಲೆಲ್ಲ ಮೆತ್ತಿಕೊಂಡಿತು. ಆದರೆ ಅವರು ಮಾತ್ರ ಗದರದೆ ಸಮಾಧಾನದಿಂದಿದ್ದರು. ಬೇರೆಯವರೂ ತಮ್ಮನ್ನು ಎಡವಿ ಬಿದ್ದಾರೆಂದು ತಮ್ಮನ್ನು ಬೈದುಕೊಂಡು ಎದ್ದು ಕೂತರು. ಪ್ರಾಣಿಹಿತರಾದ್ದರಿಂದ, "ನಿಧಾನವಾಗಿ ನೋಡಿಕೊಂಡು ಹೋಗಿ" ಎಂದು ಹೇಳಿದರು. ಅವರ ದಯಾಗುಣಕ್ಕೆ ಅವನು ಮನದಲ್ಲಿಯೇ ಮೆಚ್ಚಿದ.

ಮಾರನೆಯ ದಿನ ಅಲ್ಲಿಗೆ ಬಂದು ಬ್ರಹ್ಮಚಾರಿಯು, "ನಾನಿರುವ ಜಾಗದಲ್ಲಿ ನೀನು ಧೂರ್ತತನದಿಂದ ಕೂತಿದ್ದೀಯಾ. ಇಲ್ಲಿಂದ ಮೇಲೇಳು" ಎಂದು ಅವಮಾನವಾಗುವ ಹಾಗೆ ನುಡಿದು ಅವರನ್ನು ನೂಕಿಬಿಟ್ಟ. ಆದರೆ ಅವರು ಮಾತ್ರ ಮನಸ್ಸಿನಲ್ಲಿ ಕಿಂಚಿತ್ತಾದರೂ ಕೋಪವಿಲ್ಲದೆ, ತಾವು ಪಾಪಭೀರುಗಳಾದ್ದರಿಂದ ಬ್ರಹ್ಮಚಾರಿಗೆ ತಮ್ಮ ಜಾಗವನ್ನು ಬಿಟ್ಟುಕೊಟ್ಟು ಕ್ಷಮೆ ಕೇಳಿ ಬೇರೊಂದು ಜಾಗಕ್ಕೆ ಹೋದರು. ಇದರಿಂದ ಬ್ರಹ್ಮಚಾರಿಗೆ ಮಹಾ ಅಚ್ಚರಿಯುಂಟಾಯಿತು. ಆಗ ಅವನು ತನ್ನ ನಟನೆಯನ್ನೆಲ್ಲ ಅವರಿಗೆ ಹೇಳಿ, ಆದರ, ಭಕ್ತಿಗಳಿಂದ ಹೂವಿನಲ್ಲಿ ದುಂಬಿಯ ಹಾಗೆ ಅವರ ಪಾದಕಮಲಗಳಲ್ಲಿ ಮೈಯಿಕ್ಕಿದ.

ಅದರ ಮಾರನೆಯ ದಿನ ರೇವತೀ ಮಹಾದೇವಿಯ ಅಮೂಢದೃಷ್ಟಿತ್ವವನ್ನು ಪರೀಕ್ಷಿಸಲೆಂದು ಆ ಊರಿನ ಮೂಡಣ ದಿಕ್ಕಿಗೆ ಬಂದ. ವಿದ್ಯೆಗಳನ್ನು ನೆನೆದು, ಕೈಯಲ್ಲಿ ಕಮಂಡಲು, ಮೈಮೇಲೆ ಬೆಳ್ಳಿಯ ಜನಿವಾರಗಳು ಕಂಗೊಳಿಸಲು, ಬಾಲಸೂರ್ಯನ ಹಾಗೆ ದೇಹಕಾಂತಿ ಶೋಭಿಸಲು, ಪಕ್ಕದಲ್ಲಿ ಹಂಸ ರಂಜಿಸಲು, ನಾಲ್ಕು ಮುಖಗಳು ವಿರಾಜಿಸಲು ಬ್ರಹ್ಮನ ರೂಪವನ್ನು ಧರಿಸಿ ವೈಭವದಿಂದಿದ್ದ. ಆ ಊರಿನ ಕ್ಷುದ್ರ ಶ್ರಾವಕರು, ಸಂಶಯ ಶ್ರಾವಕರು, ವಿದ್ಯಾಹೀನ ಶ್ರಾವಕರು, ನಾಮ ಶ್ರಾವಕರು, ಚರ್ಚಾ ಶ್ರಾವಕರು, ಯಶೋರ್ಥಿ ಶ್ರಾವಕರು, ಕಾರ್ಯಾರ್ಥಿ ಶ್ರಾವಕರು ಮೊದಲಾದವರೆಲ್ಲ ಕಲ್ಲೆ ಕವಿಲೆಗಳಾದಂತೆ, ದೊಂಬರ ಬೀಡನ್ನು ತೂರೆ ಹಾಯ್ದಂತೆ, ಕಲಕಲರವವು ಹೆಚ್ಚಲಅವರೆಲ್ಲ ಸ್ಪರ್ಧೆಯಿಂದ ಬ್ರಹ್ಮನನ್ನು ಪೂಜಿಸಿ ನಮಸ್ಕರಿಸುತ್ತಿದ್ದರು.

ಊರಿನಲ್ಲಾದ ಜನರ ಮಾತನ್ನೂ ಹರೆಗಳ ಸದ್ದನ್ನೂ ಅರಮನೆಯ ಏಳನೆಯ ಮಹಡಿಯಲ್ಲಿ ರೇವತೀ ಮಹಾದೇವಿಯೊಡನೆ ನಾಲ್ಕು ಸಾವಿರ ಮಂದಿ ರಾಜರಿಂದ ಸುತ್ತುವರಿಯಲ್ಪಟ್ಟು ಓಲಗದಲ್ಲಿದ್ದ ವರುಣ ಮಹಾರಾಜನು ಕೇಳಿ ಆಶ್ಚರ್ಯ ಪಟ್ಟು, "ಇದೇನು?" ಎಂದು ವಿಚಾರಿಸಿದ. ಪಕ್ಕದಲ್ಲಿದ್ದವರು ಬಿನ್ನಹವೆಂದು ವಿಷಯವನ್ನು ನಿರೂಪಿಸಿದರು:

"ದೇವಾ, ಸರಸಿಜಾಸನನಾದ ಬ್ರಹ್ಮನು ಇವತ್ತು ನಮ್ಮ ಊರಿಗೆ ಮಹೋತ್ಸವದಿಂದ ತನ್ನ ಪರಿವಾರ ಸಮೇತನಾಗಿ ದಯಮಾಡಿಸಿದ್ದಾನೆ. ಅದಕ್ಕೇ ದುಂದುಭಿನಾದವಾಗುತ್ತಿದೆ, ಸುರರೆಲ್ಲ ಅವನ ಸಂಕೀರ್ತನೆ ಮಾಡುತ್ತಿದ್ದಾರೆ." ಇದನ್ನು ಕೇಳಿ ಅರಸನಿಗೆ ಅಚ್ಚರಿಯಾಯಿತು. ರೇವತೀ ಮಹಾದೇವಿಯ ಮುಖವನ್ನು ನೋಡಿ, "ಸರಸಿಜಗರ್ಭನು ನಮ್ಮ ನಗರಕ್ಕೆ ಬಂದಿರುವನೆಂದ ಮೇಲೆ ನಮಗಿಂತ ಹಿರಿಯರು ಬೇರಾರು? ಈ ಭೂಮಿಯಲ್ಲಿ ನಮ್ಮಷ್ಟು ಪುಣ್ಯವಂತರು ಬೇರೆ ಯಾರಿರುವರು? ನಾವು ಆ ಪರಮೇಶ್ವರನನ್ನು ಪೂಜಿಸಿ ಬರೋಣ" ಎಂದು ಹೇಳಿದ. ರೇವತೀ ಮಹಾದೇವಿಯು ಅರಸನ ದೇವತಾಮೂಢವನ್ನು ಕಂಡು ಕಿಲಕಿಲ ನಕ್ಕಳು. "ಈ ಜಗತ್ತಿನ ಜನರು ಮಾಡುವ ಕೀಳು ಪೂಜೆಗೆ ಆಸೆಪಟ್ಟು ಮಾಯಾವಿಯಾದ ಖೇಚರರಾಜನೋ ವ್ಯಂತರಾಧಿಪನೋ ಒಬ್ಬನು ಈ ರೀತಿ ಬಂದಿರಬೇಕು. ಇವನನ್ನು ತಾವು ಬ್ರಹ್ಮನೆಂದು ನಿಶ್ಚಿತವಾಗಿ ನಂಬಬಾರದು. ನಮ್ಮ ಆಗಮಗಳ ಪ್ರಕಾರ ಈಗ ನಡೆಯುತ್ತಿರುವುದು ಅವಸರ್ಪಿಣೀ ಕಾಲ. ಇದರ ಆರಂಭದಲ್ಲಿ ಆದಿಬ್ರಹ್ಮನೆಂಬ ಮೊದಲನೇ ತೀರ್ಥಂಕರನು ಆಗಿಹೋದನು. ಆ ಪರಮಾತ್ಮನು ಅವತ್ತೇ ಮೋಕ್ಷಲಕ್ಷ್ಮಿಯನ್ನು ಸೇರಿದನು ಎಂದು ಆಗಮದಲ್ಲಿ ಹೇಳಿದೆ" ಎಂದು ವಿವರಿಸಿದಳು. ಇದರಿಂದ ಅರಸನು ಬ್ರಹ್ಮನನ್ನು ನೋಡಲು ಹೋಗದೆ ಸುಮ್ಮನಾದ.

ಇತ್ತ ಕಪಟ ಬ್ರಹ್ಮನು, ಅವರಿವರೆನ್ನದೆ ಪಟ್ಟಣದವರೆಲ್ಲ ಬಂದು ಉತ್ಸಾಹದಿಂದ ನನಗೆ ಪೂಜೆ ಸಲ್ಲಿಸುತ್ತಿರಬೇಕಾದರೆ ವಿವಿಧ ಗುಣಾಭರಣೆಯಾದ ರೇವತೀ ದೇವಿಯು ಮಾತ್ರ ಬರಲಿಲ್ಲವಲ್ಲ ಎಂದು ವಿಸ್ಮಯಪಟ್ಟ. ಮಾರನೆಯ ದಿನ ತನ್ನ ವೇಷವನ್ನು ಕಳಚಿಕೊಂಡು ಊರ ದಕ್ಷಿಣ ಭಾಗಕ್ಕೆ ಬಂದ. ಕೊರಳಲ್ಲಿ ಕೌಸ್ತುಭಹಾರ ಧರಿಸಿ, ನಾಲ್ಕು ಕೈಗಳಲ್ಲಿ ಗದೆ ಕೋದಂಡ ಶಂಖ ಮತ್ತು ಚಕ್ರಗಳನ್ನು ಹಿಡಿದು ನಾರಾಯಣರೂಪವನ್ನು ಕೈಗೊಂಡ. ಅವನ ದೇಹವು ವಿಭೂಷಣ ತತಿಯಿಂದ ಕೂಡಿ ನೀಲಪರ್ವತದ ಹಾಗೆ ಹೊಳೆಯುತ್ತಿತ್ತು; ಗರುಡವಾಹನವು ಪಕ್ಕದಲ್ಲಿ ವಿರಾಜಿಸಲು, ಲಕ್ಷ್ಮೀದೇವಿಯೇ ಮೊದಲಾಗಿ ಎಲ್ಲ ಹದಿನಾರು ಸಾವಿರ ಮಂದಿ ಕಾಂತೆಯರೂ ಅಷ್ಟೇ ಮಂದಿ ಮಕುಟಬದ್ಧರೂ ಪಕ್ಕದಲ್ಲಿ ಶೋಭಿಸುತ್ತಿದ್ದರು. ಊರಿನ ಜನರೆಲ್ಲ ಹಿಂದಿನಂತೆಯೇ ವಿಷ್ಣುವು ಪ್ರತ್ಯಕ್ಷನಾಗಿರುವ ನೆಂದು ಸಂಭ್ರಮದಿಂದ ಬಂದು ಪೂಜಿಸಿದರು. ಅದನ್ನು ಅರಸನು ತಿಳಿದು ರೇವತೀ ಮಹಾದೇವಿಯ ಮುಖವನ್ನು ನೋಡಿ, "ನಿನ್ನೆ ಬ್ರಹ್ಮನು ಬಂದಿರುವನೆಂದರೆ ನಂಬಿಕೆಯಿಲ್ಲದೆ ಹೋಗಿ ಪೂಜಿಸಲು ಒಪ್ಪಲಿಲ್ಲ; ಆದರೆ ಇಂದು ಪನ್ನಗಶಯನನಾದ ವಿಷ್ಣುವು ಬಂದಿರುವನಂತೆ. ನಮ್ಮ ಪರಿಜನರೊಡನೆ ಹೋಗಿ ನಾರಾಯಣನನ್ನು ಅರ್ಚಿಸಿ ಬರೋಣ" ಎಂದ. ಆಗ ಆ ವನಿತಾರತ್ನವು, "ಇವನೂ ಮಾಯಾಪುಂಜನೇ, ಜಗತ್ತಿನ ಜನರಿಂದ ಕೀಳು ಪೂಜೆಗೆ ಆಸೆಪಡುವ ಖಳನೇ. ರಾಜನೇ, ಇವನು ಖಂಡಿತವಾಗಿಯೂ ಕೇಶವನಲ್ಲ. ನಮ್ಮ ಆಗಮದಲ್ಲಿ ನವಕೇಶವರ ಉಲ್ಲೇಖವಿದೆ, ಅವರು ಈ ಮೊದಲೇ ಆಗಿಹೋದರು. ಈಗ ಯಾವನೋ ಒಬ್ಬನು ವೇಷ ಹಾಕಿಕೊಂಡು ಬಂದರೆ ಭಕ್ತಿಯಿಂದ ಎರಗಬೇಕೆನ್ನುವಿರಲ್ಲ!" ಎಂದಳು. ಈ ಮಾತನ್ನು ಕೇಳಿ ಚೋದ್ಯಗೊಂಡ ರಾಜನು ಹೋಗದೆ ಇದ್ದ.

ಅಷ್ಟರಲ್ಲಿ ಈ ಕಡೆ ಮಾಯಾವಿಷ್ಣುವು ರೇವತೀದೇವಿ ಬರದೆ ಇದ್ದುದಕ್ಕೆ ವಿಸ್ಮಯಗೊಂಡು ತನ್ನ ವೇಷವನ್ನು ಕಳಚಿಕೊಂಡ. ಮಾರನೆಯ ದಿನ ಊರಿನ ಪಶ್ಚಿಮ ದಿಕ್ಕಿಗೆ ಬಂದವನೇ ಈಶ್ವರನ ರೂಪವನ್ನು ಕೈಗೊಂಡ. ತಲೆಯಲ್ಲಿ ಗಂಗೆ, ಜಡೆಯಲ್ಲಿ ಹೊಳೆಯುವ ಶಶಾಂಕ, ಹಣೆಯಲ್ಲಿ ಉರಿಗಣ್ಣು, ಎಡಭಾಗದಲ್ಲಿ ಗಿರಿಸುತೆ ರಾಜಿಸಿದರು. ಹಾಗೆಯೇ ಕೈಗಳಲ್ಲಿ ಹಾವಿನ ಕಂಕಣ, ತ್ರಿಶೂಲ, ಡಮರುಗ, ಕಪಾಲಗಳು ಒಪ್ಪಿದವು. ಶಲ್ಯಭೂಷೋತ್ಕರವು ದೇಹವನ್ನು ಶೋಭಿಸಿತು. ದೇಹಚ್ಛಾಯೆಯು ನಿರುಪಮ ತಾರಾಚಲದಂತೆ ಹೊಳೆಯುತ್ತಿತ್ತು; ವೃಷಭವಾಹನ, ಮರುಳಿನ ದೊಡ್ಡ ಪಡೆ ಅವನ ಪಕ್ಕದಲ್ಲಿ ಮೆರೆದವು. ಈಶ್ವರನ ರೂಪವು ಬಂದಿರುವುದನ್ನು ಕಂಡು ನಗರದ ಜನರೆಲ್ಲ ಅಚ್ಚರಿವಟ್ಟರು; "ಕಣ್ಣಾರೆ ಈಶ್ವರನನ್ನು ನೋಡಿದ ನಮಗಿಂತಲೂ ಪುಣ್ಯವಂತರು ಬೇರೆ ಯಾರಿದ್ದಾರೆ!" ಎಂದು ಜನರು ಸಂಭ್ರಮದಿಂದ ಪೂಜೆಪುನಸ್ಕಾರಗಳನ್ನು ಮಾಡಿದರು.

ಇತ್ತ ಈಶ್ವರನು ಪ್ರತ್ಯಕ್ಷನಾದ ವಿಷಯವು ವರುಣ ಮಹಾರಾಜನ ಕಿವಿಗೆ ಬಿತ್ತು. ಅವನು ತನ್ನ ಅಗ್ರಮಹಿಷಿಯ ಮುಖವನ್ನು ನೋಡಿ ನಗುತ್ತ, "ವನಜಮುಖಿ ಕೇಳು, ನೀನು ಮುಂಚಿನ ಶೂನ್ಯವಚನವನ್ನು ನುಡಿಯದೆ ಗೌರೀಶನ

ಪಾದದರ್ಶನಕ್ಕಾಗಿ ನೆಟ್ಟನೆ ಬಾ" ಎಂದು ನುಡಿದ. ಅದಕ್ಕೆ ಅವಳೆಂದಳು: "ದೇವ, ಬಿನ್ನಹ. ನಮ್ಮ ಆಗಮಗಳಲ್ಲಿ ಭೀಮಾವಳೀ ಮೊದಲಾದ ಏಕಾದಶ ರುದ್ರರು ಈ ಮುಂಚೆಯೇ ಆಗಿ ಹೋಗಿದ್ದಾರೆ. ಹಾಗಾಗಿ ಈಗ ಬಂದಿರುವವನು ರುದ್ರನಲ್ಲ." ಇದನ್ನು ಕೇಳಿದ ಭೂಮೀಶನು ಬೆರಗಾದ; ಹೆಂಡತಿಯು ಹೋಗದಿದ್ದುದರಿಂದ ತಾನೂ ಹೋಗಲಿಲ್ಲ. ಆ ಹೊತ್ತಿಗೆ ಆ ಮಾಯಾ ಹರನು ರೇವತೀ ದೇವಿಯು ತನ್ನ ದರ್ಶನಕ್ಕೆ ಬಾರದ್ದಕ್ಕೆ ವಿಸ್ಮಯಪಟ್ಟ. ಅವಳ ಸಮ್ಯಕ್ತ್ವವನ್ನು ಮತ್ತಷ್ಟು ಪರೀಕ್ಷಿಸಲೆಂದು ಅವನು ಮಾರನೆಯ ದಿನ ನಗರದ ಉತ್ತರ ದಿಕ್ಕಿಗೆ ಬಂದು ಶ್ರೀ ವರ್ಧಮಾನಸ್ವಾಮಿಯ ರೂಪವನ್ನು ಧರಿಸಿದ. ಅಲುಗಾಡುವ ಅಶೋಕವೃಕ್ಷ, ಸಿಂಹಾಸನ, ಸುರತೂರ್ಯ, ಹೊಳೆವ ಚಾಮರಗಳು, ದಿವ್ಯ ನಿಸ್ವನ. ಸುರರು ಸುರಿಸುವ ಪುಷ್ಪಸಮೂಹ, ಮುಕ್ಕೊಡೆ, ಪ್ರಭಾವಲಯ, ಇವುಗಳಿಂದ ರಮಣೀಯ ವಾಗಿರುವ ರೂಪವು ಧಾತ್ರಿಗೆ ಅಚ್ಚರಿಯುಂಟು ಮಾಡುವಂತಿತ್ತು. ಹಿಂದಿನಂತೆಯೇ ಜನರೆಲ್ಲ ಪೂಜಿತೊಡಗಿದರು: ಕೆಲವರು ತಾವರೆಗಳಿಂದ, ಕೆಲವರು ಸುರಗಿಯಿಂದ, ಕೆಲವರು ಚೆನ್ನೈದಿಲೆಗಳಿಂದ, ಕೆಲವರು ಉತ್ಪಲಗಳಿಂದ, ಕೆಲವರು ಬಕುಲ ಪುಷ್ಪಗಳಿಂದ. ಕೆಲವರು ತಾಂಬೂಲ, ಸುವರ್ಣಪುಷ್ಪಚಯ, ಕರ್ಪೂರದೀಪಗಳು ಇವುಗಳಿಂದ ಆನಂದದಿಂದ ಜಿನಾಂಘ್ರಿಕಮಲಗಳನ್ನು ಪೂಜಿಸಿ ಪೊಡಮಟ್ಟರು.

ವರ್ಧಮಾನ ಸ್ವಾಮಿಯು ಮಹಾಮಹಿಮೆಯಿಂದ ಬಂದಿರುವನೆಂಬ ಸಮಾಚಾರವು ವರುಣ ಮಹಾರಾಜನಿಗೆ ಗೊತ್ತಾಯಿತು. ತನ್ನ ಪಟ್ಟ ಮಹಿಷಿಗೆ ಅವನು ಹೀಗೆಂದ: "ವನಜಾತಾನನೆಯೇ, ನೀನಂತೂ ಈ ಹಿಂದೆ ಬಂದ ಬ್ರಹ್ಮ, ವಿಷ್ಣು, ಮಹೇಶ್ವರರ ಬಗ್ಗೆ ನಂಬಿಕೆ ತಾಳದೆ ಹೋಗಿ ಪೂಜಿಸಲಿಲ್ಲ. ಅದೇನೋ ಸರಿಯೆ. ಆದರೆ ಈಗ ನಿನ್ನ ಕುಲಸ್ವಾಮಿಯಾದ ಶ್ರೀ ವರ್ಧಮಾನಸ್ವಾಮಿಯೇ ಬಂದಿದ್ದಾನೆ. ನಾವು ಆ ಪರಮಾತ್ಮನನ್ನು ಅರ್ಚಿಸಿ ಬರೋಣ. ಪೂಜಾಸಾಮಗ್ರಿಗಳ ಸಮೇತ ಸಿದ್ಧಳಾಗು." ಅದಕ್ಕೆ ಆ ಸಮ್ಯಕ್ತ್ವರತ್ನಾಕರೆಯು, "ಇವನು ಸಹ ಕೈವಲ್ಯಶ್ರೀಧವನಾದ ಜಿನೇಂದ್ರನಲ್ಲ. ನಮ್ಮ ಆಗಮದ ಪ್ರಕಾರ ಅಮರಸ್ತುತ್ಯರೆನಿಸಿದ ಭುವನೇಶ್ವರರಾದ ಜಿನೇಶ್ವರರು ಇಪ್ಪತ್ತನಾಲ್ಕು ಮಂದಿ; ಅವರೆಲ್ಲ ಈಗ ಮೋಕ್ಷಶ್ರೀಯಲ್ಲಿ ಸೇರಿ ಪರಮೇಷ್ಠಿಗಳಾಗಿರುವರು. ಆದ್ದರಿಂದ ಇವನು ವರ್ಧಮಾನಸ್ವಾಮಿಯೆಂಬ ಮಾತು ನಿಜವಾಗಲು ಸಾಧ್ಯವಿಲ್ಲ" ಎಂದು ವಿವರಣೆ ನೀಡಿದಳು.

ರೇವತೀ ದೇವಿಯ ಮಾತಿನ ರೀತಿಯಿಂದ ವರುಣ ಮಹಾರಾಜನಿಗೆ ಮಹದಾಶ್ಚರ್ಯವಾಯಿತು. ಮೆಲ್ಲನೆ, "ಸರಸಿರುಹವದನೆಯೇ, ಭಕ್ತಿಯಿಂದ ಕೂಡಿ ಜಿನೇಶ್ವರನೆಂದು ಎರಗುವ ನಮ್ಮ ಊರಿನ ಜನಗಳೇನು ಹುಚ್ಚರೇ?" ಎಂದು ಕೇಳಿದ. ಅದಕ್ಕೆ ಅರಸಿಯ ಉತ್ತರ: "ದೇವಾ, ಹುಣಿಸೆಯ ಮರದಲ್ಲಿ ಬಿಟ್ಟ ಹೂವೆಲ್ಲ ಕಾಯಿಗಳಗುವವೇ? ನೆಲವನ್ನು ಅಗೆಯುವವರಿಗೆಲ್ಲ ನಿಧಿ ಸಿಕ್ಕುತ್ತದೆಯೇ? ಕೈಕಾಲುಗಳಿರುವವರೆಲ್ಲ ಚಕ್ರವರ್ತಿಗಳೇನು? ಮರಗಳೆಲ್ಲ ಶ್ರೀಗಂಧವೇ? ಮೊಲೆಮುಡಿಯಿರುವವರೆಲ್ಲ ಸ್ತ್ರೀಯರೇ? ಸುರಿದದ್ದೆಲ್ಲ ಕರ್ಪುರವೇ? ಕೊಂಬುಗಳಿರುವುವೆಲ್ಲ ಹಾಲು ಕರೆಯುತ್ತವೆಯೇ? ಗಿರಿಯಾದುದೆಲ್ಲ ಚಿನ್ನವೇ? ಶಿಲೆಯೆಲ್ಲ ವಜ್ರವೇ? ಸಮುದ್ರವೆನಿಸಿದುವೆಲ್ಲ ಹಾಲಿನವೇ? ಎಲ್ಲ ಧಾನ್ಯಗಳೂ ಬತ್ತವೇ? ಮಾತಾಡುವವರೆಲ್ಲ ಮಂತ್ರಿಗಳೇ? ಬಂಟರೆಲ್ಲ ನಾಯಕರೇ? ಕಾದುವವರೆಲ್ಲ ವೀರರೇ? ಹಾಡುವವರೆಲ್ಲ ಗಂಧರ್ವರೇ? ಮೊರೆವುದೆಲ್ಲ ದುಂಬಿಯೇ? ಹೂವಾದುವೆಲ್ಲ ಪರಿಮಳಭರಿತವೇ? ಶ್ರಾವಕರೆಲ್ಲ ಸಮ್ಯಗ್ದೃಷ್ಟಿ ಉಳ್ಳವರೇ? ಮೂಢತ್ರಯವಿಲ್ಲದವರೆಲ್ಲ ಜೈನರೇ?" ಎಂದು ಕೇಳಿದಳು. ಆಗ ರಾಜನು ಮೂಢತ್ರಯವಾವುದೆಂದು ಪ್ರಶ್ನಿಸಿದ. "ಬೆಂಕಿ, ಸೂರ್ಯ, ಚಂದ್ರರು, ಯಮ, ಮರಗಳು, ಸಮುದ್ರ, ಭೂಮಿ, ಮಡಕೆ, ನದಿ, ಕೆರೆಗಳು, ಮನೆ, ತಾಯಿ, ತಂದೆಯರು, ಹಸು, ಎತ್ತುಗಳು ಇವನ್ನೆಲ್ಲ ಕುಲದೈವಗಳೆಂದು ಪೂಜಿಸುವ ಗಾಂಪರು ದೈವಮೂಢರು; ಯುದ್ಧದಲ್ಲಿ, ಕಮ್ಮರಿಯಲ್ಲಿ, ಮತ್ತು ಬರಿಸುವ ಸಸ್ಯಗಳಲ್ಲಿ, ಸಪ್ತಾರ್ಚಿಯಲ್ಲಿ, ನೀರಿರುವ ಜಾಗಗಳಲ್ಲಿ ನಮಸ್ಕಾರ ಮಾಡಿ, ಮಿಥ್ಯಾತೀರ್ಥದಲ್ಲಿ ಮಿಂದು, ದುಷ್ಟರು ಹೇಳಿದಂತೆ ಮಾಡಿದರೆ ಸುರಲೋಕವನ್ನು ಸೇರುವೆನೆಂಬ ಗಾವಿಲರು ಲೋಕಮೂಢರು; ಧರ್ಮೋಪದೇಶವಿಲ್ಲದೆ, ಕರ್ಮವನ್ನು ಸವೆಸುವ ಕಾರ್ಯಗಳನ್ನು ಮಾಡದೆ, ದುಃಖದ ಆಗರವೆನಿಸಿದ ಲೌಕಿಕಧರ್ಮದಂತೆ ನಡೆದುಕೊಳ್ಳುವವರು

ಸಮಯಮೂಢರು. ವರ ಕೊಡುವುದೆಂದು ದೈವವನ್ನು ಪೂಜಿಸುವವರೂ, ಹುಸಿಯನ್ನೇ ಪರಮಾರ್ಥವೆಂದು ನಂಬುವವರೂ ಸಮಯಮೂಢರೇ. ಮಹೇಂದ್ರಜಾಲವನ್ನು ತೋರಿಸುವವರನ್ನೇ ದೇವರು ದಿಂಡಿರೆಂದು ತಿಳಿದು ಪೂಜೆಗೈಯುವವರೂ ಸಮಯಮೂಢರೇ. ವಿನೋದಕ್ಕಾಗಿ ಗಂಡಸನ್ನು ಹೆಂಗಸನ್ನಾಗಿಯೂ, ಹೆಂಗಸನ್ನು ಗಂಡಸನ್ನಾಗಿಯೂ, ಹಗಲನ್ನು ರಾತ್ರಿಯಾಗಿ ಮತ್ತು ರಾತ್ರಿಯನ್ನು ಹಗಲನ್ನಾಗಿ ಮಾಡುವ ದೇವರು ಇರುವುದೇ ಆದರೆ ನಮ್ಮ ಕಣ್ಣ ಮುಂದೆ ಯಾಕೆ ತೋರಿಸಬಾರದು?" ಎಂದು ಧರ್ಮಶ್ರವಣ ಮಾಡಿಸಿದಳು.

ಅತ್ತ ಕಪಟ ಜಿನನು ತನ್ನನ್ನು ನೋಡಿ ಪೂಜಿಸಲು ರೇವತೀ ದೇವಿಯು ಬರದಿರುವುದನ್ನು ಕಂಡು ಹೀಗೆಂದುಕೊಂಡ: "ಈ ಸರಸೀರುಹಾಕ್ಷಿಯಲ್ಲಿ ಇಂತಹ ಸ್ಥಿರ ಗುಣಗಳಿಲ್ಲದಿದ್ದರೆ ಈಕೆಗೆ ಮುನಿಗುಪ್ತೇಶ್ವರರು ಉತ್ಸಾಹದಿಂದ ಹರಕೆಗಳನ್ನು ಏಕೆ ಹೇಳಿಕಳಿಸುತ್ತಿದ್ದರು!" ಆನಂತರ ತನ್ನ ಕಪಟ ಜಿನರೂಪವನ್ನು ಉಡುಗಿಸಿಕೊಂಡ; ಜನರು ನೋಡನೋಡುತ್ತಿದ್ದಂತೆಯೇ ಅವನಿಗೆ ಸ್ವಸ್ವರೂಪವು ಪ್ರಾಪ್ತವಾಯಿತು. ಅಲ್ಲಿಂದ ನೇರವಾಗಿ ರೇವತೀ ದೇವಿಯ ಬಳಿ ಬಂದ. ಆಕೆಯನ್ನು ಹಲವು ಬಗೆಯಲ್ಲಿ ಹೊಗಳಿದ; ತನ್ನ ಹಿಂದಿನ ವಿಚಾರವನ್ನೆಲ್ಲ ನಿರೂಪಿಸಿದ. ಕೊನೆಗೆ ಮುನಿಗುಪ್ತ ಭಟ್ಟಾರಕರು ಹೇಳಿಕಳಿಸಿದ್ದ ಹರಕೆ ಹಾರೈಕೆಗಳನ್ನು ತಿಳಿಸಿ, ಆ ಊರಿನ ಜಿನಾಲಯಗಳಿಗೆ ಹೋಗಿ ಭಕ್ತಿನಿವೇದನೆ ಮಾಡಿದ. ಆಮೇಲೆ ಅವನು ದಕ್ಷಿಣ ಮಧುರೆಗೆ ಹೊರಟ.

ಇತ್ತ, "ಶ್ರಾವಕರೆಲ್ಲರೂ ಇರಬೇಕಾದರೆ ವರಮುನಿಗಳು ತಮ್ಮ ಹರಕೆಗಳನ್ನು ಆ ವನಿತಾರತ್ನಕ್ಕೆ ಹೀಗೆ ಹೇಳಿಕಳಿಸಬೇಕಾದರೆ ಅವಳಂತಹ ಪುಣ್ಯವಂತರು ಬೇರೆ ಯಾರಿದ್ದಾರು ಎಂದುಕೊಂಡರು. ಆಕೆಯು ಪರಮಗುಣನಿಕರೆ, ಜಿನಮತ ಸರೋಜಿನಿ, ರಾಜಹಂಸೆ, ಶೀಲಾಂಬುನಿಧಿ, ಸಚ್ಚರಿತವಿಭೂಷಣೆ, ಭವ್ಯೋತ್ಕರಪೂಜಿತೆ, ನಿಷ್ಕಳಂಕೆ, ನಿರ್ಮಲೆಯೇ ಸರಿ!" ಎಂದು ಪುರಜನರೂ ಪರಿಜನರೂ ಉಳಿದವರೂ ಆಕೆಯನ್ನು ಹೊಗಳುತ್ತ ಆಕೆಗೆ ಮಣಿದರು. ವರುಣ ಮಹಾರಾಜನು ಸದ್ಧರ್ಮವನ್ನು ದೃಢವಾಗಿ ನಂಬಿ, ಮೂಢತ್ರಯವನ್ನು ಕಳೆದುಕೊಂಡು, ತನ್ನ ಹಿರಿಯ ಮಗನಾದ ಶಿವಕೀರ್ತಿಗೆ ಪಟ್ಟವನ್ನು ಕಟ್ಟಿ ರಾಜ್ಯಾಡಳಿತವನ್ನು ವಹಿಸಿಕೊಟ್ಟು, ತಾನು ಅರಿಂಜಯ ಭಟ್ಟಾರಕರ ಪಾದಮೂಲದಲ್ಲಿ ದೀಕ್ಷೆಯನ್ನು ಕೈಗೊಂಡ. ರೇವತೀ ಮಹಾದೇವಿಯು ದಾನ ಪೂಜೆ ಶೀಲೋಪವಾಸಗಳಲ್ಲಿ ಶ್ರದ್ಧೆಯಿದ್ದುದರಿಂದ ಹಲವು ಕಾಲ ಕಣ್ಣಿಗೆ ತೃಪ್ತಿಯಾಗುವಂತೆ ಜಿನಪೂಜೆಗಳನ್ನು ಮಾಡಿದಳು, ಮನಸ್ಸಿಗೆ ತಣಿವಾಗುವಂತೆ ಮುನಿಗಳಿಗೆ ಅನ್ನದಾನವನ್ನು ಮಾಡಿದಳು. ಕೊನೆಗೆ ಸಕಲಸಾಮ್ರಾಜ್ಯವನ್ನೂ ತೊರೆದು ಮುನಿಗುಪ್ತ ಭಟ್ಟಾರಕರನ್ನೇ ಗುರುಗಳಾಗಿ ಪಡೆದು ಸುವ್ರತ ಕಂತಿಯರಲ್ಲಿ ದೀಕ್ಷೆಯನ್ನು ಕೈಗೊಂಡು ಏಕಾದಶಾಂಗಧಾರಿಯಾಗಿ ದೀರ್ಘ ಕಾಲ ತಪದಲ್ಲಿ ನಿಂದಳು.

ಆನಂತರ ಉತ್ತರ ಮಧುರೆಯಿಂದ ಹೊರಟು ದಕ್ಷಿಣ ಮಧುರೆಯ ಜಿನಾಲಯಗಳನ್ನು ಸಂದರ್ಶಿಸಿ ಪೂಜೆಗೈಯುವ ಉದ್ದೇಶದಿಂದ ಅಜ್ಜಿಕಾ ಸಮುದಾಯದೊಂದಿಗೆ ಸಂಚರಿಸಿದಳು. ಹಾಗೆ ಬರುತ್ತಿರುವಾಗ ಕರಹಾಟ ನಗರದಲ್ಲಿ ಆಕೆಗೆ ಇದ್ದಕ್ಕಿದ್ದಂತೆ ಆಲಸ್ಯ ತಲೆದೋರಿತು. ಮಹಾರುಜೆ ಅಡಸಿ ಶರೀರವು ವೇದನೆಗೊಳಗಾದರೂ ದುಃಖಗೊಳ್ಳದೆ, ಗೋಳಾಡದೆ, ಶರೀರಮೋಹವನ್ನು ತೊರೆದಳು. ಶುಭಭಾವನೆಯಿಂದ ಸನ್ಯಸನವನ್ನು ಕೈಗೊಂಡು ಸಮಾಧಿ ವಿಧಿಯಿಂದ ಮುಡಿಪಿ ಹದಿನಾರನೆಯ ಅಚ್ಯುತ ಕಲ್ಪದಲ್ಲಿ ಇಪ್ಪತ್ತೆರಡು ಸಾಗರದಷ್ಟು ಆಯುಸ್ಸನ್ನು ಪಡೆದು ಮಹರ್ಧಿಕದೇವನಾಗಿ ಹುಟ್ಟಿದಳು. ರೇವತೀ ಕಂತಿಯು ಉತ್ತಮ ಭಾವನೆಯಿಂದ ಮುಡಿಪಿದ ಜಾಗವು ಸದ್ಭಾವದ ನೆಲೆಯಾಗಿ ಮುಂದೆ ರೇವತೀ ಸತ್ತೀರ್ಥ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಆದ್ದರಿಂದ ಸೌಖ್ಯಾಭ್ಯುದಯಕ್ಕೆ ಆಸೆಪಡುವ ವ್ಯಕ್ತಿಯು ಮನಸ್ಸಿನಲ್ಲಿ ಬೆದಬೆದ ಬೇಯದೆ, ದುಷ್ಕೃತಕಾರಣವಾದ ಮೂಢತ್ರಯವನ್ನು ತೊರೆಯಬೇಕು ಎಂದು ಗಣಧರರು ರೇವತೀ ಮಹಾದೇವಿಯ ಕತೆಯನ್ನು ಮುಗಿಸಿದರು. ಅದನ್ನು ಶ್ರದ್ಧೆಯಿಂದ ಕೇಳಿ ನೃಪವಂದ್ಯನೂ, ವಾಗ್ವಧೂವಲ್ಲಭನೂ, ನಿರ್ಮಲನೂ, ಕಿಲ್ಬಿಷವೆಂಬ ಆನೆಗೆ ಸಿಂಹದಂತಿದ್ದವನೂ, ಕಾಮವೆಂಬ ಉತ್ಪಲಕ್ಕೆ ಸೂರ್ಯನಂತಿದ್ದವನೂ, ಸುಜನಸಾಗರಕ್ಕೆ

ಚಂದ್ರನಂತಿದ್ದ ವನೂ, ಸಾಗರದ ಕೊನೆಯವರೆಗೆ ತನ್ನ ಖ್ಯಾತಿಯನ್ನು ಪಡೆದವನೂ, ಉದ್ಯದ್ಗುಣಿಯೂ ತ್ರೈವಿದ್ಯಚಕ್ರಾಧಿಪ ಪಾದಾಂಭೋಜಭೃಂಗನೂ ಸುಕವಿಜನಮನಃ ಪದ್ಮಿನೀರಾಜಹಂಸನೂ ಆದ ಮಗಧದ ದೊರೆಯು ಕೃತಕೃತ್ಯನಾದನು.

ಉಪಗೂಹನ

ಅಮೂಢದೃಷ್ಟಿತ್ವದ ಕತೆಯನ್ನು ಕೇಳಿದ ಸುಕವಿನಿಕರಪಿಕಮಾಕಂದನು ಗಣಧರರ ಚರಣಾರವಿಂದಗಳಿಗೆ ಪೊಡಮಟ್ಟು ಮೋಕ್ಷಲಕ್ಷ್ಮಿಗೆ ತೊಡವೆನಿಸಿಕೊಂಡ ಉಪಗೂಹನದ ಮಹತ್ವವನ್ನು ತನಗೆ ತಿಳಿಯುವಂತೆ ಕರುಣೆಯಿಂದ ಬೆಸೆಸಬೇಕೆಂದು ಬೇಡಿಕೊಂಡ. ಆಗ ಮುನಿಶ್ರೇಷ್ಠರು ನಿರ್ವಾಣಲಕ್ಷ್ಮಿಯನ್ನು ಒಲಿಸಿಕೊಳ್ಳುವುದಕ್ಕೆ ಮೋಹಕವಾದ ಉಪಗೂಹನದ ಕತೆಯನ್ನು ಹೇಳಲು ತೊಡಗಿದರು. ಶ್ರದ್ಧಾಳುವು ಚಕ್ರವರ್ತಿ, ದುಂಬಿ, ವಶ್ಯಮಂತ್ರ, ಪರ್ಯಾಪ್ತಿಸಮೇತ, ಋತು, ಉತ್ಸರ್ಪಿಣಿ, ಸಿದ್ಧಾಂತ, ಸಂಜ್ಞಿಜೀವ, ಹೊತ್ತಗೆ, ಇವುಗಳಂತೆ ಆರರ ಗುಂಪಾದ ದರ್ಶನ, ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ ಹಾಗೂ ಉಪಗೂಹನಗಳೆಂಬ ಆರರಲ್ಲಿ ಸಂಪೂರ್ಣವಾಗಿ ಶೋಭಿಸಬೇಕು. ದುಷ್ಟವಾಕ್ಕುಗಳಿಗೆ ಮನಸೋಲದೆ ಸದ್ಗುಣವಂತನಾದ ನರನು ಸಮ್ಯಕ್ತ್ವ ಎನ್ನುವ ಕತ್ತಿಗೆ ಒರೆ ಎನ್ನಿಸಿಕೊಳ್ಳುವಂತೆ ಉಪಗೂಹನದಲ್ಲಿ ಮೆರೆಯಬೇಕು. ಇನ್ನು ಅದರ ಮಹಿಮೆ ಎಂತಹುದು ಎಂಬುದನ್ನು ಅರಿಯೋಣ.

ಭೂಮಂಡಲದಲ್ಲಿ ಅತಿಶಯ ಸೌಂದರ್ಯದಿಂದ ಗೊಲ್ಲ ವಿಷಯವು ಕಂಗೊಳಿಸುತ್ತಿದ್ದಿತು. ಅದರಲ್ಲಿ ಕಾಮಲಿಪ್ತಿ ಎಂಬುದು ನಗರ. ಅದನ್ನು ಆಳುವ ಮಹಾರಾಜನು ಮನೋಹರನೆಂಬುವವನು. ಅವನ ರಾಜಶ್ರೇಷ್ಠಿಯು ಜಿನಭಕ್ತ ಎನ್ನುವ ಹೆಸರಿನ ವೈಶ್ಯವಂಶಗಗನಾರ್ಕ. ಅವನ ರೂಪ ಆಕರ್ಷಕವಾದದ್ದು, ಅವನ ಕೀರ್ತಿ ಎಲ್ಲ ಕಡೆ ಹರಡಿದ್ದಂತಹುದು. ಅವನ ಸಿರಿಯ ಬಗ್ಗೆ ಹೇಳಬೇಕೆಂದರೆ, ಅವನು ರೂಢಿಗೊಂಡ ಕುಬೇರನಿಗಿಂತಲೂ, ಹಿರಿ ಮಾತಿನ ದೇವೇಂದ್ರನಿಗಿಂತಲೂ ನಾಲ್ಕು ಬೆರಳಿನಷ್ಟು ಹೆಚ್ಚು ಎತ್ತರದವನು. ಭೋಗದಲ್ಲಿ ಅವನು ಸುರರಾಜನಿಗೆ ದೊರೆ, ಜೈನಭಕ್ತಿಯಲ್ಲಿ ಶ್ರೇಯಾಂಸನಿಗೆ ಸಮಾನ; ಆದರೆ ಆ ವೈಶ್ಯೋತ್ತಮನಿಗೆ ದಾನಗುಣದಲ್ಲಿ ಜಗತ್ತಿನಲ್ಲಿ ಯಾರೂ ಸಮರಲ್ಲ. ಹೀಗೆ ಜಿನಭಕ್ತಸೆಟ್ಟಿಯು ಸುಖಸಂಕಥಾವಿನೋದದಲ್ಲಿ ಕಾಲ ಕಳೆಯುತ್ತಿದ್ದ.

ಮತ್ತೊಂದೆಡೆ, ಮಗಧ ನಾಡಿನ ಪಾಟಲೀಪುತ್ರವೆಂಬ ನಗರದ ಅರಸು ವೀರಧ್ವಜನೆಂಬುವವನು. ಅವನ ಮಹಾದೇವಿಯು ಸುಸೀಮೆ ಎಂಬ ಹೆಸರಿನ ಗುಣವಂತೆ. ಈ ದಂಪತಿಗಳಿಗೆ ಪ್ರಿಯನಾದ ಮಗನೊಬ್ಬನಿದ್ದ; ಹೆಸರು ವೀರಕುಮಾರ. ಅವನಾದರೋ ದುರ್ಜನಪ್ರಿಯ, ವಿಟಜನಾನಂದ, ತಸ್ಕರವಿನೋದ ಮತ್ತು ದುಷ್ಟಪ್ರಸಂಗಿ. ಅವನು ಸದಾಕಾಲ ದುರಾಚಾರಿಗಳಿಂದ ಕೂಡಿ ಊರ ಹೊರಗೆ ಕುಳಿತು ಕಳವಿಗೆ ಸಂಬಂಧಿಸಿದ ಮಾತುಗಳನ್ನು ಆಡಿಸಿ ಕೇಳಿ ಸಂತೋಷಿಸುತ್ತಿದ್ದ. ಅವನ ಗುಂಪಿನಲ್ಲಿ ಚೋರಪ್ರಧಾನ ಎಂಬೊಬ್ಬನಿದ್ದ. ಅವನು ಒಮ್ಮೆ ಹೀಗೆಂದ: "ಇವನು ಚಪಲ, ಮಹಾ ಹರಟೆಗಾರ, ನನ್ನ ಮುಂದೆ ಇಲ್ಲದ್ದನ್ನೆಲ್ಲ ಹೇಳುತ್ತಿರುವನೆಂದು ನನ್ನ ಮೇಲೆ ಕೋಪಗೊಳ್ಳಬೇಡ. ನನ್ನ ಬಿನ್ನಹವನ್ನು ಒಂದೇ ಮನಸ್ಸಿನಿಂದ ಕೇಳುವಂಥವನಾಗು" ಎಂದು ಬೇಡಿಕೊಂಡು ವೀರಕುಮಾರನಿಗೆ ಎದುರಾಗಿ ನಿಂತುಕೊಂಡು ಹೇಳಲು ಉಪಕ್ರಮಿಸಿದ. "ನಾನು ಹೋಗದ ದೇಶವಾಗಲೀ, ಕದಿಯದ ವಸ್ತುವಾಗಲೀ ಇಲ್ಲ. ಗೊಲ್ಲ ನಾಡಿನಲ್ಲಿ ಕಾಮಲಿಪಿ ಎಂಬ ನಗರದಲ್ಲಿ ಜಿನಭಕ್ತನೆಂಬ ಒಬ್ಬ ವ್ಯಾಪಾರಿಯಿದ್ದಾನೆ. ಅವನು ಪೂಜಿಸುವ ದೇವರ ಮನೆಯಲ್ಲಿ ದೇವರ ಮುಕ್ಕೊಡೆಯಲ್ಲಿ ಒಂದು

ವೈಡೂರ್ಯಮಾಣಿಕವು ಸೇರಿದೆ. ಅದು ಅನರ್ಘ್ಯರತ್ನವೇ ಸರಿ. ಅದಕ್ಕೆ ಮೂರು ಲೋಕಗಳೂ ಸಮನಾದ ಬೆಲೆಯಾಗದು. ಅದು ಈ ಲೋಕದ ಅಪೂರ್ವ ವಸ್ತು" ಎಂದು ವರ್ಣಿಸಿದ.

ಅದನ್ನು ಕೇಳಿದ ವೀರಕುಮಾರನು ವಿಸ್ಮಯಗೊಂಡ; ಅವನ ಮನಸ್ಸು ಆ ರತ್ನದ ಮೇಲೆ ನಾಟಿತು. ಅವನು ಚೋರಪ್ರಧಾನನಿಗೆ ಹೀಗೆ ಹೇಳಿದ: "ಇಡೀ ಲೋಕದಲ್ಲಿನ ಕಳ್ಳರಲ್ಲೆಲ್ಲ ನೀನೇ ಮಹಾ ವಿವೇಕಿ. ಭೂಮಂಡಲವನ್ನೂ ಧೂರ್ತರನ್ನೂ ಲೂಟಿ ಮಾಡುವಂತೆ ನೀನು ಎಲ್ಲ ವಸ್ತುಗಳನ್ನೂ ಈಗಾಗಲೇ ಸಾಧಿಸಿಕೊಂಡಿದ್ದೀಯೆ. ಇನ್ನು, ಆ ವರರತ್ನವನ್ನು ಪಡೆಯುವುದು ನಿನಗೆ ಅಸಾಧ್ಯವೇ?" ಹೀಗೆಂದು ಉಬ್ಬಿಸಿದ. ಆಗ ಚೋರಪ್ರಧಾನನು, "ಸ್ವಾಮಿ ಕನ್ನ ಹಾಕಬೇಕೆಂದರೆ ಸೆಟ್ಟಿಯ ಮನೆಯ ನೆಲಗಟ್ಟು ವಜ್ರಮಯವಾದದ್ದು; ಇನ್ನು ಅದನ್ನು ಹೊಗಬೇಕೆಂದರೆ, ಅದಕ್ಕೆ ಹನ್ನೆರಡು ಸುತ್ತು ಕಾವಲು. ಒಳಹೊಗಲು ಎಂಟೆದೆಯೇ ಬೇಕು! ಇನ್ನು, ಹೇಗೋ ಕೆಲವು ದಿನಗಳು ಆ ಊರಿನಲ್ಲಿದ್ದು ಕಾವಲುಗಾರರನ್ನು ವಂಚಿಸಿ ದೇವರ ಮನೆಯ ಒಳಗೆ ಹೋಗೋಣವೆಂದರೆ, ಅದೂ ಅಸಾಧ್ಯ. ಏಕೆಂದರೆ, ಆ ಜಿನೇಂದ್ರಸೆಟ್ಟಿಯು ಜಿನಾರ್ಚನವಿನೋದದಲ್ಲಿಯೂ, ಜಿನಸಮಯ ಮಹೋತ್ಸವದಲ್ಲಿಯೂ, ಜಿನಕಥಾಲಾಪದಲ್ಲಿಯೂ ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಅಲ್ಲಿಯೇ ಇರುವನು," ಎಂದು ಬಿನ್ನವಿಸಿದ. ಈ ವಿಷಯ ಕೇಳಿದ ವೀರಕುಮಾರನಿಗೆ ಎಲ್ಲಿಲ್ಲದ ಅಚ್ಚರಿ. ಇವನು ಸೂಜಿಯ ಕಣ್ಣಿನಲ್ಲಿಯೂ, ಮಣಿಯ ದ್ವಾರದಲ್ಲಿಯೂ ನುಸುಳಿ, ಇಬ್ಬರು ಇರುವೆಡೆಯಲ್ಲಿ ಒಬ್ಬನನ್ನೇ ಕದಿಯುವಂತಹ ಕಳ್ಳರ ಕಳ್ಳ. ಇವನೇ ಅಲ್ಲಿಗೆ ಹೋಗಲು ಅಸಾಧ್ಯ ಎನ್ನುತ್ತಿದ್ದಾನೆ. ಇನ್ನು ಆ ಮಹಾರತ್ನವನ್ನು ಕದಿಯುವ ಗಂಡನಾರು ಎಂದು ಚಿಂತಿಸಿದ. ಸ್ವಲ್ಪ ಕಾಲಾನಂತರ ಅಲ್ಲಿ ನೆರೆದಿದ್ದ ಕಳ್ಳರನ್ನು ಕುರಿತು ವೀರಕುಮಾರನು ಹೀಗೆಂದ: "ಯಾರು ಧೈರ್ಯದಿಂದ ಯಾವುದಾದರೂ ಉಪಾಯದಿಂದ ಹೋಗಿ ಆ ವಸ್ತುವನ್ನು ನನಗೆ ತಂದೀವನೋ ಅವನಿಗೆ ನನ್ನ ಅರ್ಧ ರಾಜ್ಯವನ್ನು ಬಹುಮಾನವಾಗಿ ಕೊಡುತ್ತೇನೆ."

ಈ ಮಾತನ್ನು ಕೇಳಿದ ಸೂರ್ಪನೆಂಬ ಕಳ್ಳನು ಮೇಲೆದ್ದ. ಕುಮಾರನಿಗೆ ಎದುರಾಗಿ ನಿಂತುಕೊಂಡು, "ದೇವಾ, ನಾನು ಆ ವಸ್ತುವನ್ನು ತಂದುಕೊಡುವೆ" ಎಂದ. ಕುಮಾರನಿಗೆ ಹರ್ಷವುಂಟಾಯಿತು; ಅವನಿಗೆ ಕರ್ಪೂರವೀಳೆಯವನ್ನು ಕೊಟ್ಟ. ಅವನು ಪ್ರತಿಜ್ಞೆ ಮಾಡಿ ರಾಜಕುಮಾರನಿಂದ ಬೀಳ್ಕೊಂಡು ತನ್ನ ಮನೆಗೆ ಬಂದ. ಆ ರತ್ನವನ್ನು ಕಳುವು ಮಾಡುವ ಉಪಾಯವನ್ನು ಕುರಿತು ಚಿಂತಿಸಿದ. ಚೋರಪ್ರಧಾನನಂತಹ ಕಲಿಯೇ ದೇವಾಲಯವನ್ನು ಭೇದಿಸಲಾರನೆಂದ ಮೇಲೆ ಅದನ್ನು ತರುವವರಾರು ಎಂಬ ಚಿಂತೆ ಅವನನ್ನು ಆವರಿಸಿತು. ಕೆಟ್ಟ ಧೈರ್ಯದಿಂದ ತಿಳಿಯದೆ ಮೈಮರೆತು ಹೋಗಿ ಆ ವ್ಯಾಪಾರಿಯ ಮನೆಯನ್ನು ಹೊಕ್ಕರೆ ಕುರಿಯ ಹಾಗೆ ಸಾಯಬೇಕಾದೀತು ಎಂಬ ಅಂಜಿಕೆಯುಂಟಾಯಿತು. ಭಾವಕನಿಧಿಯಾದ ಜಿನಭಕ್ತನು ಶ್ರಾವಕನಾದುದರಿಂದ ಕೊಲ್ಲುವವನಲ್ಲ, ಆದರೆ ಅವನ ಮನಸ್ಸನ್ನು ಅರಿಯಲಾರದ ಇತರರು ನಿರ್ದಯರಾಗಿ ಕೊಲ್ಲುವುದರಲ್ಲಿ ಸಂದೇಹವೇ ಇಲ್ಲ ಅನ್ನಿಸಿತು. ಭ್ರಾಂತಿಯಿಂದ ಕನ್ನವನ್ನಿಕ್ಕಿ ಕದಿಯುತ್ತೇನೆ ಎಂಬುವವನು ಕಳ್ಳನೇ? ಸ್ವಲ್ಪವಾದರೂ ಸಾವು ನೋವುಗಳನ್ನುಂಟುಮಾಡದೆ ಕಳ್ಳತನ ಮಾಡುವವನೇ ನಿಜವಾದ ಕಳ್ಳ. ಕೆಟ್ಟ ಶಿಷ್ಯನಿಂದ ತಲೆ ಬುಗುಟಾಯಿತು ಎಂಬ ಗಾದೆಯಂತೆ ಕೆಟ್ಟ ಧೈರ್ಯದಿಂದ ಹೋಗಿ ಸಿಕ್ಕಿ ಹಾಕಿಕೊಂಡರೆ ಕಾವಲುಗಾರರ ಕೈಲಿ ಸಾವು ನಿಶ್ಚಯ. ಉತ್ಸಾಹದಿಂದ ಮೂರ್ಖನಂತೆ ಹೋಗುವುದು ಬುದ್ಧಿವಂತನ ಲಕ್ಷಣವಲ್ಲ; ಆ ಕಾರಣದಿಂದ ಕೆಲವು ವರ್ಷ ತಡೆದರೆ ತಕ್ಕ ಉಪಾಯ ಹೊಳೆಯುತ್ತದೆ ಎಂದುಕೊಂಡ. ಆ ವ್ಯಾಪಾರಿಯು ಎರಡಿಲ್ಲದ ಶ್ರಾವಕ; ಜಿನಧರ್ಮದಲ್ಲಿ ಸ್ಥಿರಚಿತ್ತ ಉಳ್ಳವನು; ಅವನಿಗೆ ಋಷಿಗಳ ಮೇಲೆ ಮಹಾ ಗೌರವ. ಆದ್ದರಿಂದ ತಾನು ಮಾಯಾ ಋಷಿಯ ವೇಷವನ್ನು ಧರಿಸಿ, ಮೊದಲು ಉಗ್ರ ತಪಸ್ಸು ಮಾಡಿ ಲೋಕದಲ್ಲಿ ಹೆಸರನ್ನು ಮಾಡಿಕೊಂಡು ಕಾಮಲಿಪ್ತಿ ನಗರವನ್ನು ಸೇರಿ, ಜಿನಭಕ್ತಸೆಟ್ಟಿಯ ಮನೆಗೆ ಹೋಗಿ, ಮೆಲ್ಲನೆ ಉಪಾಯದಿಂದ ರತ್ನವನ್ನು ಕೈವಶ ಮಾಡಿಕೊಳ್ಳುತ್ತೇನೆ ಎಂದು ನಿರ್ಧರಿಸಿದ.

ಆನಂತರ ತನ್ನ ಹೆಂಡಿರುಮಕ್ಕಳು ಹಾಗೂ ಬಂಧುಗಳನ್ನು ಕರೆದು, ರಾಜನು ನನ್ನ ಮೇಲಿನ ಭರವಸೆಯಿಂದ ತನಗೆ ಒಂದು ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಲು ಆದೇಶಿಸಿದ್ದಾನೆ; ತಾನೂ ಉತ್ಸಾಹದಿಂದ ಅದನ್ನು ಮಾಡಲು ಒಪ್ಪಿದ್ದಾಗಿದೆ ಎಂದು ಪೀಠಿಕೆ ಹಾಕಿದ. ಅದು ಸಾಮಾನ್ಯವಾದ ಹೊಣೆಯಲ್ಲ; ತನ್ನ ಪುಣ್ಯೋದಯದಿಂದ ಅದನ್ನೇನಾದರೂ ಯಶಸ್ವಿಯಾಗಿ ಮಾಡಿ ಮುಗಿಸಿದರೆ ವೀರಕುಮಾರನು ಅರ್ಧ ರಾಜ್ಯವನ್ನೇ ನೀಡುತ್ತಾನೆ; ಆ ಕಾರಣದಿಂದ ತಾನು ಉಪಾಯದಿಂದ ಆ ಕಾರ್ಯವನ್ನು ಸಾಧಿಸಬೇಕಾಗಿದೆ ಎಂದ. ತಾನು ಹೋಗುತ್ತೇನೆಂದು ಯಾರೂ ಅಂಜಬಾರದು; ಅದನ್ನು ಸಾಧಿಸಿಯೇ ತೀರುತ್ತೇನೆ; ತಾನು ಬರುವವರೆಗೂ ಎಲ್ಲರೂ ಧೈರ್ಯದಿಂದಿರಲು ಹೇಳಿ ಊರಿನಿಂದ ಹೊರಟ.

ಮೊದಲು ಪೂರ್ವದೇಶವನ್ನು ಹೊಕ್ಕು ಒಂದು ಊರನ್ನು ತಲುಪಿದ. ಅಲ್ಲಿ ಒಂದು ಬಸದಿಯನ್ನು ಸೇರಿ ಋಷಿಗಳ ಮಾರ್ಗವನ್ನು ಕಲಿಯಲೆಂದು ವೈರಾಗ್ಯದಿಂದ ಸಂಸಾರಕ್ಕೆ ಹೇಸುವವನಂತೆ ಕಪಟತನದಿಂದ ಎಲ್ಲ ಋಷಿಗಳಿಗೆ ಅಡ್ಡ ಬಿದ್ದ. ಕೆಲವು ಮುನಿಗಳು ಅವನ ದೇಶ, ಊರು, ಮುಂಚೆ ಇದ್ದ ಸ್ಥಳ, ಮುಂದೆ ಹೋಗಬೇಕೆಂದಿರುವ ಜಾಗ ಮುಂತಾದ ವಿವರಗಳ ಬಗ್ಗೆ ಪ್ರಶ್ನಿಸಿದರು. ಆಗ ಆ ತಸ್ಕರನು ತಡಮಾಡದೆ ಹೀಗೆಂದು ಉತ್ತರವಿತ್ತ "ನಾನೊಬ್ಬ ಪರದೇಶಿ. ಮನಃಪೂರ್ವಕವಾಗಿ ನಮ್ಮವರನ್ನೆಲ್ಲ ತೊರೆದು ತಪಸ್ಸನ್ನು ಕೈಗೊಂಡು ಪಾಪಪರಿಹಾರ ಮಾಡಿಕೊಳ್ಳಲು ನಿರ್ಧರಿಸಿ ಇಲ್ಲಿಗೆ ಬರಂದಿದ್ದೇನೆ. ನಂಟರು ಪ್ರೀತಿಯ ಹೆಂಡತಿಮಕ್ಕಳು ತಾಯಿತಂದೆಯರು ತನ್ನ ನೆಚ್ಚಿನ ಬಂಟ ಎಂಬ ಮೋಹದಿಂದ ಜೀವ ಹಾಳಾಗುತ್ತದೆ. ಸಂಸಾರವು ಶಾಶ್ವತವಲ್ಲ; ದೃಢವಾದ ತಪಸ್ಸಿನಿಂದ ಪಾಪಸಂಕುಲವನ್ನೆಲ್ಲ ಪರಿಹರಿಸಿಕೊಂಡು ನಿಜವಾದ ಸುರಗತಿಯನ್ನು ಪಡೆದು ಫಲವನ್ನು ಭೋಗಿಸಬೇಕು" ಎಂದು ನಿಧಾನವಾಗಿ ನಂಬಿಕೆಯುಂಟಾಗುವ ಹಾಗೆ ನುಡಿದ.

ಕೆಲವು ದಿನಗಳ ಕಾಲ ಆ ಊರಲ್ಲಿಯೇ ಇದ್ದು ನಡೆ, ನುಡಿ, ಉಣ್ಣುವುದು, ವಂದಿಸುವುದು, ಮಲಗುವುದು, ಕುಳಿತುಕೊಳ್ಳುವುದು, ನಿಂತುಕೊಳ್ಳುವುದು, ಕಾರ್ಯ ನಿರ್ವಹಣೆ ಮುಂತಾದವುಗಳನ್ನು ಮಾಡುವ ರೀತಿಯನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಂಡ. ಲೋಚಿಗೆ ಹಿಂಜರಿದು, ತಪಸ್ಸನ್ನು ಕೈಗೊಳ್ಳಲಾರದೆ ಮೆಲ್ಲನೆ ಅಲ್ಲಿಂದ ಜಾರಿಕೊಂಡು ಹೋಗಿ ತಲೆ ಬೋಳಿಸಿಕೊಂಡು ಬ್ರಹ್ಮಚಾರಿಯ ವೇಷವನ್ನು ತಳೆದು ಬಂದ. ವೀರಧ್ವಜ ಕುಮಾರನ ಅರ್ಧರಾಜ್ಯದ ಮೇಲಿನ ಆಸೆಯಿಂದ ಸೂರ್ಪನು ಮೈಸುಖವನ್ನು ತೊರೆದು ದೇಹದ ಮೇಲಿನ ಅಧಿಕ ಮಲವನ್ನು ಸಹಿಸಿಕೊಂಡ. ಆ ರತ್ನದಿಂದಾಗಿ ರಾಜ್ಯಲಕ್ಷ್ಮಿಯು ದೊರೆಯುವಳೆಂಬ ಲೋಭದಿಂದ ಆ ಚೋರನು ಮಾಯಾತಪವನ್ನು ಕೈಗೊಂಡ. ಜಗತ್ತಿನಲ್ಲಿ ಮೋಹವುಳ್ಳವರು ಏನು ತಾನೇ ಮಾಡರು? ಧರೆ ಬೆರಗಾಗುವಂತೆ, ಅನೇಕರು ಕೈಮುಗಿಯುವಂತೆ, ಜಡರು ಚೋದ್ಯಪಡುವಂತೆ, ನಿಷ್ಠುರವಾದ ಬಾಹ್ಯ ತಪಸ್ಸನ್ನು ಕಾಪಟ್ಯದಿಂದ ಕೈಗೊಂಡ. ಕಾಲಾನುಕ್ರಮದಲ್ಲಿ ಅವನ ದೇಹ ಸೊರಗಿ ಗಿಡಿಗಿಡಿಜಂತ್ರವಾಗುವಂತೆ, ಕಣ್ಣುಗಳ ಸ್ವಸ್ವರೂಪ ಕಾಣಿಸದಂತೆ ಗುಳಿ ಬೀಳುವ ಹಾಗೆ ಅವನು ನಿತ್ಯೋಪವಾಸವನ್ನು ಮಾಡಿದ. ಆಮೇಲೆ ಏಕರಾತ್ರ, ತ್ರಿರಾತ್ರ, ಮಹಾರಾತ್ರೋಪವಾಸ, ಮಾಸೋಪವಾಸಗಳನ್ನು ಗೈದು ಕಬ್ಬಿಣವನ್ನು ತಿಂದವನಂತೆ ದೇಹ ಕುಂದಿತು, ಒಂದಗುಳು ತಿಂದವನಂತೆ ಮೈ ಸಣಕಲಾಯಿತು, ಬೇತಾಳದಂತೆ ಬಸಿರು ಬೆನ್ನು ಹತ್ತಿತು, ಹಳೆಬಾವಿಯ ನೀರಿನಂತೆ ಕಣ್ಣುಗಳು ಆಳಕ್ಕಿಳಿದವು, ಹಾಳುಮನೆಯ ಗಳುಗಳ ಹಾಗೆ ದೇಹದ ಮೂಳೆಗಳು ಕಾಣಿಸಿಕೊಂಡವು, ಅಲ್ಪಶ್ರೀಮಂತನಂತೆ ನಡಿಗೆಯು ನಿಧಾನವಾಯಿತು, ಕಾಗೆತೊಂಡೆಹಣ್ಣಿನಂತೆ ಒಳಗೆ ಅಶುಭ, ಹೊರಗೆ ಸುಂದರ ಎನ್ನುವಂತೆ ಆಯಿತು.

ಹೆಚ್ಚು ಮನ್ನಣೆ ದೊರಕಿತೆಂದು ಒಂದೇ ಕಡೆ ಉಳಿದರೆ ತನ್ನ ಕೀರ್ತಿಯು ಹರಡುವುದಿಲ್ಲ; ತನ್ನ ಮೇಲಿನ ಗೌರವವು ವ್ಯಾಪಿಸಿದಲ್ಲದೆ ತಾನು ಕಾಮಲಿಪ್ತಿಪುರವನ್ನು ಹೊಗಬಾರದು ಎಂದುಕೊಂಡ. ಉಪವಾಸ ಮಾಡಲು ಅಲಸಿ ತಪಸ್ಸು ಮಾಡುವುದನ್ನು ಬಿಡಲು ಬರುವುದಿಲ್ಲ; ಹಿಂದೆ ಮಾಡಿದ ತಪಸ್ಸಿನಿಂದಲ್ಲದೆ ಕೀರ್ತಿ ಬೇಗ ಹಬ್ಬುವುದಿಲ್ಲ ಅನ್ನಿಸಿತು. ಆಡಂಬರವಿಲ್ಲದಿದ್ದರೆ ನಾಡವರು ಅಕ್ಕರೆಯಿಂದ ಪೂಜಿಸರು; ಆದ್ದರಿಂದ ಇಳೆಯಲ್ಲಿ ಕಣ್ಣಿಗೆ ಬೀಳುವಂತೆ ಕಪಟ ತಪವನ್ನು

ಉಗ್ರೋಗ್ರ ರೀತಿಯಲ್ಲಿ ಮಾಡುತ್ತೇನೆ ಎಂದು ನಿರ್ಧರಿಸಿದ. ಹೀಗಾಗಿ ಅವನು ಒಂದೇ ಊರಲ್ಲಿ ನಿಲ್ಲದೆ ಗ್ರಾಮ ನಗರ ಖೇಡ ಖರ್ವಟ ಮಡಂಬ ಪಟ್ಟಣ ದ್ರೋಣಾಮುಖಗಳನ್ನೆಲ್ಲ ವಿಹರಿಸುತ್ತ ಬಂದು ಕೆಲವು ದಿನಗಳಲ್ಲಿ ಗೊಲ್ಲ ನಾಡನ್ನು ಸೇರಿದ. ಆದರೆ ತಕ್ಷಣವೇ ಕಾಮಲಿಪ್ತನಗರಕ್ಕೆ ಕಾಲಿಡದೆ, ಆ ಊರಿಗೆ ಎರಡು ಮೂರು ಗಾವುದ ದೂರದಲ್ಲಿ ಉಳಿದುಕೊಂಡ. ಸುತ್ತಲ ಗ್ರಾಮಗಳಲ್ಲಿ ತನ್ನ ಹೆಸರು ಪ್ರಸಿದ್ಧಿಗೆ ಬರಬೇಕೆಂದು ಭಿಕ್ಷೆಗಾಗಿ ಅಲ್ಲೆಲ್ಲ ಓಡಾಡುತ್ತಿದ್ದ.

ಹೀಗೇ ಕೆಲವು ಕಾಲ ಕಳೆಯಿತು. ಇವರಂತೆ ಉಗ್ರವಾದ ತಪಸ್ಸಿನಲ್ಲಿ ನಿರತರಾಗಿರುವವರು ಭೂಮಿಯ ಮೇಲೆ ಬೇರೆ ಯಾರಿದ್ದಾರೆ, ನಿಷ್ಠುರ ಉಪವಾಸಗಳಿಂದ ಇವರಂತೆ ದೇಹವನ್ನು ಸವೆಸುವವರು ಯಾರಿರುವರು, ಇದು ನನ್ನ ದೇಹವೇ ಅಲ್ಲ ಎನ್ನುವಂತೆ ಅನ್ನವನ್ನು ಪೂರ್ತಿ ತೊರೆದು ಸುಖವನ್ನು ಬಿಟ್ಟವರು ಈ ಧಾರಿಣಿಯಲ್ಲಿ ಬೇರೆ ಇದ್ದಾರೆಯೇ ಎಂದು ನಾಡೆಲ್ಲ ಒಂದೇ ಕಂಠದಲ್ಲಿ ಹೊಗಳಲು ತೊಡಗಿತು. ಆ ಮಾತು ಕಾಮಲಿಪ್ತಿನಗರವನ್ನು ಹೊಕ್ಕಿತು. ಜಿನಭಕ್ತಸೆಟ್ಟಿಯೇ ಮೊದಲಾದ ಆ ಊರಿನ ಶ್ರಾವಕರೆಲ್ಲ ಇದನ್ನು ಕೇಳಿ ಸಂತೋಷಪಟ್ಟರು; ದೂರದಿಂದ ಕೀರ್ತಿಯನ್ನು ಕೇಳಿ ಆ ಮಹಾಪುರುಷರನ್ನು ಕಣ್ಣಾರೆ ಕಾಣುವ ಪುಣ್ಯ ತಮ್ಮದಾಯಿತಲ್ಲ ಎಂದು ಹರ್ಷಿಸಿದರು. ಅವರ ದರ್ಶನಕ್ಕಾಗಿ ಬಂದ ಜಿನಭಕ್ತಸೆಟ್ಟಿ ಮುಂತಾದವರಿಗೆ ಬಹು ಬೇಗ ಆ ಬ್ರಹ್ಮಚಾರಿಯ ಸೊರಗಿದ ದೇಹ, ಗುಳಿಬಿದ್ದ ಕಣ್ಣುಗಳು, ಸಂಯಮ ಇವುಗಳು ಮೆಚ್ಚಿಕೆಯಾದವು. ತನಗೆ ನಿಜವಾದ ಮಹಾವೈರಾಗ್ಯವಿಲ್ಲದಿದ್ದರೆ ಈ ರೀತಿ ತಪಸ್ಸನ್ನು ಕೈಗೊಂಡು ದೇಹವನ್ನು ಕೃಶಗೊಳಿಸಿಕೊಳ್ಳುವ ನಿಸ್ಪೃಹತ್ವವನ್ನು ತಳೆಯಲು ಸಾಧ್ಯವಾಗುತ್ತಿತ್ತೇ ಎಂದು ಅವರೆಲ್ಲ ಕಪಟತನವನ್ನು ಅರಿಯದೆ ಭಕ್ತಿಭಾವವನ್ನು ತಾಳಿ ಅವನನ್ನು ತಮ್ಮ ದೇವಸ್ಥಾನಕ್ಕೆ ಕರೆತಂದರು. ತನ್ನ ಬಗ್ಗೆ ಜಿನಭಕ್ತನು ತಾಳಿದ ಭಕ್ತಿ, ಆದರಗಳನ್ನು ಕಂಡು ತನ್ನ ಬಯಕೆ ತೀರುವ ಕಾಲ ಬಂತೆಂದು ಆಗ ಆ ಮಾಯಾವಿಯು ಉಬ್ಬಿಹೋದ. ಅಲುಗಿಸಿ ನಡುವಂತೆ ಆ ವೈಶ್ಯೋತ್ತಮನ ಭಕ್ತಿಯನ್ನು ಮತ್ತಷ್ಟು ಸ್ಥಿರಗೊಳಿಸುವ ಉದ್ದೇಶದಿಂದ ಅವನನ್ನು ಕುರಿತು ಹೀಗೆಂದ: "ಹೊನ್ನ ತೋರಣ, ದುಕೂಲದ ಸೂಸಕಗಳು, ಉನ್ನತ ಧ್ವಜಗಳ ಸಾಲು, ಬಿಡಿಮುತ್ತುಗಳು, ರನ್ನಮಯವಾದ ಸುಂದರ ರಂಗವಲ್ಲಿ ಇವುಗಳಿಂದ ಕೂಡಿ ಈ ಜಿನಮಂದಿರವು ಉನ್ನತಿಕೆಯನ್ನು ಪಡೆದಿದೆ. ಪರತ್ರೆಯ ಮೇಲೆ ಮನದಾಳದ ಒಲವನ್ನು ಪಡೆದವನು ಹೊನ್ನು ಕನಸಿನಲ್ಲಿ ಕಾಣಿಸಿಕೊಂಡರೂ ಅದಕ್ಕೆ ಬೆಚ್ಚಿ ಬೆದರುತ್ತಾನೆ. ಆದರೆ ನಿನ್ನ ದೇಹಾರವು ರತ್ನಮಯವಾದುದು; ಅದರಲ್ಲಿರುವುದು ನಮಗೆ ಉಚಿತವಲ್ಲ. ನಿನಗೆ ನಮ್ಮನ್ನು ಉಳಿಸಿಕೊಳ್ಳಬೇಕೆಂಬ ಆಸೆಯಿದ್ದರೆ ಬೇರೆ ಯಾವುದಾದರೂ ಬರಿದಾದ ಜಿನಾಲಯದಲ್ಲಿ ಇರಿಸು." ಆದರೆ ಜಿನಭಕ್ತಸೆಟ್ಟಿ ತುಂಬ ಬೇಡಿಕೊಂಡು ಮುನಿಯನ್ನು ಅಲ್ಲಿಯೇ ಉಳಿಯುವಂತೆ ಒಪ್ಪಿಸಿದ.

ಜಿನೇಂದ್ರಭಕ್ತಸೆಟ್ಟಿಯ ಮನೆಯ ಕಾವಲನ್ನು ಕಂಡು ಸೂರ್ಪನು ಬೆಚ್ಚಿದ; ತಾನೇನಾದರೂ ಗಾವಿಲತನದಿಂದ ಈ ಮನೆಯನ್ನು ಹೊಕ್ಕಿದ್ದರೆ ಸಾವು ಬರುತ್ತಿದ್ದುದು ಖಂಡಿತ; ಈ ಪ್ರಭುವಿನ ಮನೆಯನ್ನು ಹೊಗಲು ಯಾವ ದೇವತೆಗೂ ಅಸಾಧ್ಯ ಅನ್ನಿಸಿತು. ಈ ವೈಶ್ಯನ ಮನೆಯನ್ನು ಬೇಕಾಬಿಟ್ಟಿಯಂತೂ ಹೊಗಬಾರದು; ತಾನಾದರೋ ಕಪಟತನದಿಂದ ಮಾಯಾತಪಸ್ವಿಯಾಗಿ ಇಲ್ಲಿಗೆ ಬಂದಿದ್ದಾಗಿದೆ. ಹೀಗೆ ಮಾತಾಡಿಕೊಂಡು ಒಳಬರುವವರೂ ಇದ್ದಾರೆಯೇ ಅಂದುಕೊಂಡ. ಇಷ್ಟೊಂದು ಬಲ್ಗಾವಲು ಇರುವ ಕಾರಣದಿಂದಲೇ ಕಳ್ಳರ ಕಳ್ಳನಾದ ಚೋರಪ್ರಧಾನನೇ ಮೊದಲಾಗಿ ಯಾರೂ ಇಲ್ಲಿಗೆ ಬರಲು ಒಪ್ಪಲಿಲ್ಲ. ಆದರೆ ತಾನು ಬುದ್ಧಿಬಲದಿಂದ ನಂಟರ ಮನೆಗೆ ಬರುವಂತೆ ಬಂದಿದ್ದೇನೆ, ನನ್ನಂತೆ ಮಾಡಿದ ಕಳ್ಳರು ಬೇರೆ ಯಾರೂ ಇಲ್ಲ ಎಂದು ಬೀಗಿದ. ಕೊಬ್ಬಿದ ಸೊಸೆಯು ಅತ್ಯುತ್ಸಾಹದಿಂದ ತನ್ನ ಮಾವನ ತಲೆಯನ್ನು ಬೋಳಿಸಿದಳು ಎಂಬ ಗಾದೆಮಾತಿನಂತೆ, ಈಗಲೇ ಈ ರತ್ನವನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ; ಉಪವಾಸ ಮುಂತಾದವುಗಳಿಂದ ಎಲ್ಲರಿಗೂ ನಂಬಿಕೆ ಬರುವಂತೆ ಮಾಡಿ ಮಹಾತಪಸ್ವಿಯೆನಿಸಿಕೊಂಡು ಉಪಾಯದಿಂದ ತನ್ನ ಕಾರ್ಯಸಾಧನೆ ಮಾಡಿಕೊಳ್ಳುವೆನೆಂದು ಆಲೋಚಿಸಿದ.

ಇವನು ಮಹಾ ನಿಸ್ಪ್ರಹನೆಂದು ಕಾವಲು ಭಟರು, ಶ್ರಾವಕರು ಹಾಗೂ ವೈಶ್ಯಾನ್ವಯಚಂದ್ರನಾದ ಜಿನಭಕ್ತಸೆಟ್ಟಿ ಎಲ್ಲರೂ ತನ್ನ ಬಗ್ಗೆ ಅನುಮಾನಪಡದ ಹಾಗೆ ಮಾಡಿಕೊಳ್ಳುತ್ತೇನೆಂದು ನಿಶ್ಚೈಸಿ ಸೂರ್ಪನು ಉಪವಾಸದ ಮೇಲೆ ಉಪವಾಸವನ್ನೂ, ಅಲಾಭದ ಮೇಲೆ ಅಲಾಭವನ್ನೂ ಮಾಡಲು ತೊಡಗಿದ. ತನಗೆ ಆಗಮಗಳ ತಿಳಿವಳಿಕೆ ಏನೇನೂ ಇಲ್ಲ; ಯಾರಾದರೂ ಏನಾದರೂ ಕೇಳಿದರೆ ಉತ್ತರ ಹೇಳದಿದ್ದರೆ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತೇನೆ, ಸೆಟ್ಟಿಯ ಭಕ್ತಿಯನ್ನು ಕಳೆದುಕೊಳ್ಳುತ್ತೇನೆ ಎಂಬ ಕಾರಣದಿಂದ ಅವನು ಮೌನವ್ರತಧಾರಣೆ ಮಾಡಿದ. ಅಲ್ಲದೆ, ತರುಣಿಯರ ಜೊತೆ ಮಾತಾಡುತ್ತಿರಲಿಲ್ಲ, ಅವರನ್ನು ನೋಡಿದರೆ ಊಟ ಮಾಡುತ್ತಿರಲಿಲ್ಲ, ಎದುರಿಗೆ ಬಂದರೆ ನೋಡಿದರೆ ಅವತ್ತು ಅಲಾಭ ಎಂಬ ನಿಯಮವನ್ನು ಅನುಸರಿಸಿದ. ಈ ಕಪಟಿಯು ಹೊನ್ನು ಎಂಬ ಶಬ್ದ ಕಿವಿಗೆ ಬಿದ್ದರೆ ಕಿವಿ ಮುಚ್ಚಿಕೊಳ್ಳುತ್ತಿದ್ದ; ಚಿನ್ನದ ಆಭರಣವನ್ನು ತೊಟ್ಟವರು ಯಾರಾದರೂ ತನ್ನನ್ನು ಮುಟ್ಟಿಸಿಕೊಂಡರೆ ಅಂದು ಉಪವಾಸವನ್ನು ಕೈಗೊಳ್ಳುತ್ತಿದ್ದ. ಹೀಗೆ ಅವನು ಬಕದ ಹಾಗೆ ನಿಸ್ಪೃಹತೆಯನ್ನು ನಟಿಸುತ್ತಿದ್ದ. ಭೋಗವನ್ನು ಆಸೆಯಿಂದ ನೋಡನು; ಊಟವೆಂದರೆ ಬೆಚ್ಚುವನು; ಯಾರೊಂದಿಗೂ ಪ್ರೀತಿಯಿಂದ ಮಾತನಾಡ; ಯಾರು ಏನೆಂದರೂ ಅದಕ್ಕೆ ತಕ್ಷಣ ಕೋಪಿಸಿಕೊಳ್ಳ; ಅಲ್ಪವನ್ನು ಕೊಟ್ಟರೂ ಸ್ವೀಕರಿಸ; ಹೀಗೆ ಅವನು ಠಕ್ಕವೃತ್ತಿಯಿಂದ ಎಲ್ಲರಲ್ಲಿಯೂ ನಂಬಿಕೆಯನ್ನುಂಟುಮಾಡಿದ. ಕುರಿಯಂತೆ ಮುಸುಕಿದ ತಲೆ, ಬೆಕ್ಕಿನಂತೆ ದುಷ್ಟಬುದ್ಧಿ, ಬೆಳ್ಳಕ್ಕಿಯಂತೆ ಕಪಟಮಾರ್ಗ, ಹುಲಿಯಂತೆ ನಿಯಮಬದ್ಧತೆ, ಅತ್ತಿಯ ಹಣ್ಣಿನಂತೆ ಒಳಗಿನ ಅಶುದ್ಧಿ, ಆಲದ ಹಣ್ಣಿನಂತೆ ಹೊರಗಿನ ಶುದ್ಧತೆ, ಹೊಸ ಪ್ರವಾಹದಂತೆ ಕದಡಿದ ಮನಸ್ಸು ಇವುಗಳಿಂದ ಕೂಡಿ, ಹೊರಗೆ ಶಾಂತನಾದರೂ ಒಳಗೆ ಕ್ರೌರ್ಯವನ್ನು ತುಂಬಿಕೊಂಡು ಕೆಲವು ದಿನಗಳನ್ನು ನೂಕಿದ.

ಕಾಲಾನುಕ್ರಮದಲ್ಲಿ ಜಿನಪಾದಾಂಬುಜಭೃಂಗನೂ, ಜಿನಸಮಯಸಮುದ್ರ ಚಂದ್ರನೂ, ಅನುಪಮ ಗುಣಿಯೂ, ಸಜ್ಜನವಂದ್ಯನೂ, ವಿನಯದ ಕಣಿಯೂ, ಜಿನತತ್ವಸರೋವರನೂ ಆದ ಜಿನಭಕ್ತಸೆಟ್ಟಿಯು ವ್ಯಾಪಾರಕ್ಕೆಂದು ಹೊರಡಲು ಸಿದ್ಧನಾದ. ಬೇಕಾದ ಸರಂಜಾಮನ್ನು ಒಗ್ಗೂಡಿಸಿಕೊಂಡ, ತನ್ನ ಜೊತೆ ಬರುವವರನ್ನೆಲ್ಲ ಸೇರಿಸಿಕೊಂಡ. ಒಂದು ಶುಭದಿನ ಸುಮುಹೂರ್ತದಲ್ಲಿ ಜಿನೇಂದ್ರಾಭಿಷೇಕವನ್ನು ಮಾಡಿಸಿ ಜಿನಪೂಜೆಗಳನ್ನು ಗೈದು ಹೊರಬೀಡಿನಿಂದ ಹೊರಟು, ತನ್ನ ದೇಹಾರದಲ್ಲಿದ್ದ ಬ್ರಹ್ಮಚಾರಿಯ ಕಾಪಟ್ಯವನ್ನು ಅರಿಯದೆ ಅವನು ಜಿನಮಾರ್ಗದೃಢನೆಂದು ಭಾವಿಸಿ, ಅತೀವ ಭಕ್ತಿಯಿಂದ ಕೈಮುಗಿದು, "ಯಾವ ಜಾಗದಲ್ಲಿಯೂ ಹೆಚ್ಚು ಕಾಲ ನಿಲ್ಲದೆ ಊರೂರು ಸುತ್ತುವ ತಾವು ನನ್ನ ಪುಣ್ಯದ ಕಾರಣದಿಂದ ನನ್ನ ಮನೆಯಲ್ಲಿ ಕೆಲವು ದಿವಸ ತಂಗಿದಿರಿ. ತಮ್ಮಂತಹ ಹಿರಿಮೆವಂತರು ಇಷ್ಟು ದಿನ ನನ್ನ ಮೇಲೆ ಕೃಪೆಯಿಟ್ಟಿರಿ ಎಂದ ಮೇಲೆ ನನಗಿಂತ ಪುಣ್ಯವಂತರು ಬೇರೆ ಯಾರಿದ್ದಾರೆ? ನಾನು ಧನ್ಯನಾದೆ, ಮಾನ್ಯನಾದೆ. ನಾನು ವ್ಯಾಪಾರಯಾತ್ರೆಗೆ ಹೋಗಿ ಬರುವವರೆಗೂ ತಾವು ಇಲ್ಲಿಯೇ ಇದ್ದು ನನ್ನನ್ನು ಆಶೀರ್ವದಿಸಬೇಕು" ಎಂದು ಬೇಡಿಕೊಂಡ. ತಾನು ಅಂದುಕೊಂಡದ್ದು ಆಗುತ್ತಿರುವುದಕ್ಕೆ ಆ ಮಾಯಾವಿಗೆ ಸಂತೋಷವಾಯಿತು. ಬಲವಂತವಾಗಿ ಕಿತ್ತುಕೊಳ್ಳುವವನಿಗೆ ಸಾಲ ಕೊಟ್ಟರು ಎಂಬ ಹಾಗೆ, ಪ್ರಾಣವನ್ನು ಒತ್ತೆಯಿಟ್ಟು ಸೆರಗುಬೆರಗನ್ನು ಬಗೆಯದೆ ಆ ಸದ್ರತ್ನವನ್ನು ಕದಿಯಬೇಕೆಂದುಕೊಂಡಿದ್ದವನಿಗೆ ಸೆಟ್ಟಿ ಊರಿಂದ ದೂರ ಹೋಗುತ್ತಿರುವುದು ಅನುಕೂಲವೇ ಆಯಿತು ಎಂದು ಉಬ್ಬಿದ. ತನ್ನ ಪುಣ್ಯಕ್ಕೆ ನಾದ ಮಾಡುವ ತಮಟೆಯಂತೆ, ಹಾಲೂ ಪ್ರೀತಿಯೂ ಕುದ್ದ ಹೊರತು ಶುದ್ಧವಾಗದು ಎಂಬಂತೆ, ತಾನು ಮತ್ತಷ್ಟು ಪ್ರಿಯನಾಗಬೇಕೆಂದು ಜಿನಭಕ್ತಸೆಟ್ಟಿಗೆ ಅವನು ಹೀಗೆ ಹೇಳಿದ: "ಸೆಟ್ಟಿಯೇ, ಹೆಂಡತಿ, ನಂಟರು, ತಾಯಿತಂದೆಯರು, ವೃತ್ತಿ ಇವರ ಬಗ್ಗೆ ಮನಸ್ಸು ಮುರಿದು ವೈರಾಗ್ಯಪರನಾದ ಮೇಲೆ ಒಂದು ಜಾಗದ ಮೇಲೆ ಮೋಹವುಂಟಾಗಿ ನಿಂತವನೂ, ಸುಖದ ಬೆನ್ನು ಹತ್ತಿದವನೂ ಸುರಲೋಕವನ್ನು ಸೇರಲಾರ. ಹಾಗಾಗಿ ನಮ್ಮಂತಹ ನಿಸ್ಪೃಹರು ಅನ್ನಕ್ಕೆ ಆಸೆಪಟ್ಟು, ಮೈಸುಖಕ್ಕೆ ಹಾತೊರೆದು, ಮನ್ನಣೆಗೆ ಮಾರುವೋಗಿ ಒಂದೇ ಕಡೆಯಲ್ಲಿ ಉಳಿಯಬಾರದು. ಮೋಹಗೊಂಡು ಇದ್ದರೆ ಮೇಲಿನ ಗತಿ ದೊರೆಯದು. ನೀನು ನನ್ನ ಭಕ್ತನಾದ್ದರಿಂದ ನಿನ್ನ ಪುಣ್ಯವೃದ್ಧಿಯ ಕಾರಣದಿಂದ ಇಲ್ಲಿಯವರೆಗೂ ಇಲ್ಲಿದ್ದೆ. ನಮ್ಮ ಹಿಂದಿನ ನಡವಳಿಕೆಯನ್ನು ನೀನು

ಬಲ್ಲೆ. ನಮಗೆ ಇಲ್ಲಿ ಮುಂದುವರೆಯುವುದು ಇಷ್ಟವಿಲ್ಲ; ದೇಶದೇಶಗಳನ್ನು ಸುತ್ತಿ ಕಾಲ ಕಳೆದು ತಪೋವೃದ್ಧಿಯನ್ನು ಮಾಡಿಕೊಳ್ಳುವುದೇ ನಮಗಿಷ್ಟವಾದ ಕಾರ್ಯ." "ಸ್ವಾಮಿ, ಹೆಣ್ಣಿನ ಜೊತೆಗಿದ್ದೂ ಅನಾಸಕ್ತರಾದವರು ಕಾಡಿನಲ್ಲಿದ್ದೂ ಹೆಣ್ಣಿನ ಬಗ್ಗೆ ಯೋಚಿಸುವವರಿಗಿಂತ ಉತ್ತಮರಲ್ಲವೇ? ನೀರಿನಲ್ಲಿದ್ದರೂ ತಾವರೆಯು ನೀರಿಗೆ ಅಂಟಿಕೊಂಡಿರುವುದೇ? ಸಚ್ಚಾರಿತ್ರವುಳ್ಳವರೂ, ಮಲರಹಿತರೂ, ನಿರ್ಮಲರೂ ಆದವರು ಎಲ್ಲಿ ಹೋದರೂ ಕೆಡಲಾರರು. ತಾವು ಎಂಥ ತಪಸ್ವಿಗಳು ಎಂಬುದನ್ನು ತಮ್ಮ ಈ ಕಾಯಕ್ಲೇಶವೇ ಸಾರಿ ಹೇಳುತ್ತಿದೆ. ಆದ್ದರಿಂದ ತಮ್ಮಂತಹ ಮಹಾಪುರುಷರು ಎಲ್ಲಿದ್ದರೂ ಪುಣ್ಯವನ್ನು ಸಂಪಾದಿಸುವಿರೇ ಹೊರತು ಪಾಪಕಾರ್ಯ ಮಾಡುವುದಿಲ್ಲ. ನನ್ನ ಮೇಲೆ ತಮಗೆ ಕರುಣೆಯಿರುವುದಾದರೆ ನನ್ನ ಮಾತನ್ನು ಸಲ್ಲಿಸಬೇಕು" ಎಂದು ಹಲವು ಬಾರಿ ಕೇಳಿಕೊಂಡ. ಇಷ್ಟಾದ ಮೇಲೆ ಮುನಿಯು ಅಲ್ಲಿಯೇ ಉಳಿಯಲು ಒಪ್ಪಿಕೊಂಡ. ಸೆಟ್ಟಿಯು ಸಂತೋಷಗೊಂಡು ಮನೆಗೆ ಮರಳಿದ. ತನ್ನ ಹೆಂಡತಿಗೂ ಸಂಬಂಧಿಗಳಿಗೂ ಧರ್ಮಕಾರ್ಯಗಳನ್ನೂ ದಾನವನ್ನೂ ಪ್ರಯತ್ನಪೂರ್ವಕವಾಗಿ ಮಾಡಬೇಕೆಂದು ತಿಳಿಸಿ ಮಾರನೆಯ ದಿನ ತಾನು ಬಿಟ್ಟಿದ್ದ ಬೀಡಿಗೆ ಹೋದ.

ಈ ಕಡೆ ಮಾಯಾ ಬ್ರಹ್ಮಚಾರಿಯು, ಆ ಶ್ರೇಷ್ಠ ರತ್ನದ ಮೇಲಿನ ಆಸೆಯಿಂದ ಹಿರಿದಾದ ಕಷ್ಟಕ್ಕೆ ಹಿಂಜರಿಯದೆ, ಹೆದರದೆ, ಮೈಸುಖವನ್ನು ಬಿಟ್ಟು ಇಲ್ಲಿಯವರೆಗೂ ತಪಸ್ಸಿನಲ್ಲಿ ನವೆದದ್ದಾಯಿತು, ಇನ್ನು ಸಾಕು; 'ಅಮ್ಮ, ಅವರೆಯ ಹಿಟ್ಟನ್ನು ಬೇಯಿಸು' ಎಂಬಂತೆ ನನ್ನ ಮನಸ್ಸಿಗೆ ಹಿತವಾಗುವಂತೆ ಜಿನಭಕ್ತಸೆಟ್ಟಿಯೂ ಹೋದ. ಈಗ ಒಳ್ಳೆಯ ಸಂದರ್ಭವೊದಗಿದೆ ಎಂದುಕೊಂಡ. ಅಂದು ಮಧ್ಯರಾತ್ರಿಯಾಯಿತು; ಕಾವಲುಭಟರು ಮೈಮರೆತು ನಿದ್ದೆ ಮಾಡುತ್ತಿದ್ದರು. ಸೂರ್ಪನು ಆಗ ಮೆಲ್ಲನೆ ಎದ್ದು ಗರ್ಭಗೃಹವನ್ನು ಹೊಕ್ಕ. ಮುಕ್ಕೊಡೆಯಲ್ಲಿರುವ ವೈಡೂರ್ಯಮಾಣಿಕ್ಯವನ್ನು ಕಂಡು, "ನಿನ್ನ ಕಾರಣದಿಂದ ನಾನು ನವೆದುಹೋದೆ, ನಿನ್ನನ್ನು ಕಂಡು ಸುಖವನ್ನು ಅನುಭವಿಸಿದೆ. ನಿನಗಿಂತ ಹಿರಿದಾದ ಪದವಿಯನ್ನು ಪಡೆಯುವುದಕ್ಕಾಗಿ ದುಃಖಪಟ್ಟೆ. ತೀವ್ರವಾದ ತಪಸ್ಸಿನಿಂದಾಗಿ ನನ್ನ ದೇಹ ಬಡವಾಯಿತು. ಅದಕ್ಕೆ ಕಾರಣ ನಿನ್ನಿಂದಾಗಿ ಅರ್ಧರಾಜ್ಯವನ್ನು ಪಡೆದು ರಾಜ್ಯಲಕ್ಷ್ಮಿಯೊಡನೆ ಸೇರುವೆನೆಂಬ ಸಂಭ್ರಮ" ಎಂದು ಉತ್ಸಾಹದಿಂದ ಮೈಮರೆತು ಆ ರತ್ನದೊಡನೆ ಮಾತಾಡಿದ. ಬೇರೆಯವರಿಗೆ ಕೇಳಿಸದ ಹಾಗೆ ಕೀಲನ್ನು ಕಳೆದು ನೆಲಕ್ಕೆ ಬೀಳದಂತೆ ರತ್ನವನ್ನು ಮಧ್ಯದಲ್ಲೇ ಹಿಡಿದುಕೊಂಡು ಅಂಗೈಯಲ್ಲಿ ಇರಿಸಿಕೊಂಡ. ಅದನ್ನು ಎದೆಗೆ ಅವಚಿಕೊಂಡ, ತಲೆಯಲ್ಲಿಟ್ಟುಕೊಂಡ, ಮೋಹದಿಂದ ಹಣೆಯ ಮೇಲೆ ಒತ್ತಿಕೊಂಡ, ತುಂಬ ಪ್ರೀತಿಯಿಂದ ತದೇಕವಾಗಿ ನೋಡಿದ, ತನಗೆ ಇಡೀ ಭೂಮಂಡಲವೇ ದೊರಕಿತೆಂಬಂತೆ ಸಂಭ್ರಮಪಟ್ಟ.

ಸಡಗರದಿಂದ ಉಬ್ಬಿ 'ತಡಮಾಡಿ ತಿಳಿನೀರನ್ನು ಕುಡಿದರು' ಎಂಬ ಗಾದೆ ಮಾತಿನಂತೆ ತಾನು ಕೈಗೊಂಡು ಅನುಭವಿಸಿದ ಕಡುದುಃಖವು ತೀರಿತು ಎಂದುಕೊಂಡ. ದೇವೇಂದ್ರನಿಗೂ ಭೇದಿಸಲಾರದ ದಿವ್ಯರತ್ನವು ನನಗೆ ಲಭಿಸಿದೆ; ವೀರಕುಮಾರನಲ್ಲಿಗೆ ಹೋಗಿ ತಾನು ಅರ್ಧರಾಜ್ಯವನ್ನು ಪಡೆಯುತ್ತೇನೆ ಎಂದು ಯೋಚಿಸಿದ. ಹೊಳೆಯುವ ಈ ರತ್ನವನ್ನು ಕಂಡು ರಾಜಕುಮಾರನು ಕೊಡುವ ಅರ್ಧರಾಜ್ಯವನ್ನು ಸುಖವಾಗಿ ಅನುಭವಿಸುತ್ತ ಇರುತ್ತೇನೆ ಎಂದು ಕನಸು ಕಂಡ. ನನಗೆ ಇಷ್ಟವಾದ ಕುದುರೆ ಆನೆಗಳನ್ನು ಏರುತ್ತೇನೆ; ಮನಸ್ಸಿಗೆ ಬಂದ ನವಾಂಬರಗಳನ್ನು ಉಡುತ್ತೇನೆ; ಉತ್ಕೃಷ್ಟವಾದ ಸುಗಂಧದ್ರವ್ಯಗಳನ್ನು ಮೈಗೆಲ್ಲ ಪೂಸಿಕೊಳ್ಳುತ್ತೇನೆ; ಮನಸ್ಸಿಗೆ ಬಂದ ಚೆಲುವೆಯರನ್ನು ನಿತ್ಯವೂ ಕೂಡುತ್ತೇನೆ ಎಂದು ಕನಸುಣಿಯಾದ. ನದಿ ಕಾಣುವ ಮುನ್ನವೇ ಪಾದರಕ್ಷೆಗಳನ್ನು ಕಳಚುವ ಎಗ್ಗನಂತೆ, ಸೂರ್ಪನು ಮುಂದೆ ತನಗೆ ಒದಗಲಿರುವ ರಾಜ್ಯಪ್ರಾಪ್ತಿಯ ಆಲೋಚನೆಯಲ್ಲಿ ದೀಪವನ್ನಾರಿಸಿ ಹೊರ ನಡೆದ.

ಆದರೆ ಅವನ ದುರದೃಷ್ಟ; ಓಡುತ್ತಿದ್ದ ಈ ಮಾಯಾವಿಯ ಕೈಯಲ್ಲಿ ಬಾಲಸೂರ್ಯನಂತೆ ಹೊಳೆಯುತ್ತಿದ್ದ ರತ್ನವು ಖಿಲ್ಲಬಿಲ್ಲಸಂಯೋಗದಂತೆ ನಗರ ಸಂಚಾರದಲ್ಲಿದ್ದ ತಳವಾರರಿಗೆ ಕಾಣಿಸಿತು. ಅವರು ಗದ್ದಲವೆಬ್ಬಿಸಿದರು. ಒಳಗಿದ್ದ ಬಂಟರು ಈ ಗದ್ದಲವನ್ನು ಕೇಳಿ ಭಯದಿಂದ ಎದ್ದರು. ಏನಾಯಿತೆಂದು ನೋಡಲು ಉಜ್ವಲವಾಗಿ ಉರಿಯುತ್ತಿದ್ದ ಸೊಡರು

ಆರಿಹೋಗಿದ್ದುದು ಅವರ ಗಮನಕ್ಕೆ ಬಂತು; ಗಾಬರಿಯಾಯಿತು; ದೇಹಾರದ ಗರ್ಭಗುಡಿಯನ್ನು ಹೊಕ್ಕು ತಡವರಿಸುತ್ತ ನೋಡಿದಾಗ ಮುನಿಯು ಮಲಗಿರುತ್ತಿದ್ದ ಜಾಗದಲ್ಲಿ ಅವನಿಲ್ಲದಿದ್ದುದು ಅರಿವಾಯಿತು. ಅವನು ಠಕ್ಕನೆಂಬ ಅರಿವುಂಟಾಗಿ, ದೀಪವನ್ನು ತರಿಸಿ ರತ್ನವಿದ್ದ ಕಡೆ ಭಯದಿಂದ ನೋಡಿದರು; ದೇವರ ಮುಕ್ಕೊಡೆಯಲ್ಲಿದ್ದ ವೈಡೂರ್ಯಮಾಣಿಕವು ನಾಪತ್ತೆಯಾಗಿತ್ತು! ಭಟರು ಹೊರಗೆ ಓಡಿ ಬಂದು ತಳವಾರರ ಜೊತೆಗೂಡಿ ಮಾಯಾವಿಯನ್ನು ಬಿನ್ನಟ್ಟಿ ಹೋಗಿ. 'ಇನ್ನೆಲ್ಲಿ ಹೋಗುವೆ' ಎಂದು ಅವನ ಸುತ್ತಲೂ ತಮ್ಮ ಬಡಿಗೆಗಳಿಂದ ಖಳಿಲ್ ಖಳಿಲ್ ಛಳಿಲ್ ಛಳಿಲ್ ತೊಪ್ಪು ತೊಪ್ಪು ಎಂದು ಬಡಿಯುವ ಸದ್ದಿಗೇ ಅವನು ನಡುಗಿಹೋದ. ತಪ್ಪಿಸಿಕೊಳ್ಳುವುದು ಅಸಾಧ್ಯ, ದಾರಿಯಲ್ಲಿದ್ದ ಕಿರುಗಲ್ಲುಗಳನ್ನು ಎಡವಿ ಕಾಲುಗಳು ನೊಂದವು. ಅತ್ತ ಇತ್ತ ಎತ್ತಲೂ ಸುತ್ತಲೂ ಅವನಿಗೆ ಬಾವಿ 'ಆ' ಎಂದು ಬಾಯಿ ತೆರೆದ ಹಾಗಾಯಿತು; ಹೆದರಿಕೆಯಿಂದ ಅತ್ತಿತ್ತ ಮಿಡುಕದ ಸ್ಥಿತಿಯುಂಟಾಯಿತು. ಇಲ್ಲಿಯೇ ಉಳಿದರೆ ಸಾವು ಖಂಡಿತ; ಬದುಕಬೇಕೆಂದರೆ ಮುಂದೆ ಒಂದು ಅಡಿಯಿಡಲೂ ಆಗದಂತೆ ಅವರು ಸುತ್ತುವರಿದಿದ್ದಾರೆ; ಈಗೇನು ಮಾಡುವುದು ಎಂದು ಆ ಮಾಯಾವಿಯು ಯೋಚಿಸಿದ. ಚಿಂತೆ ಅವನನ್ನು ಆಕ್ರಮಿಸಿ, ಮಹಾಪ್ರಳಯವು ತನ್ನನ್ನು ಸುತ್ತುವರಿದಂತೆ ದುಃಖಪಟ್ಟು, ಹಲವಾರು ನಾಯಿಗಳ ಮಧ್ಯೆ ಸಿಕ್ಕಿಕೊಂಡ ಜಿಂಕೆಯಂತೆ ನಡುಗಿಹೋದ.

'ಹೊಡೆದರೂ ಬೈದರೂ ಮೋಹದಿಂದ ಜೊತೆಯಲ್ಲಿ ಉಣ್ಣುವವನೇ ಲೇಸು' ಎಂಬ ನಾಣ್ಣುಡಿಯಂತೆ, ಈ ಜಗತ್ತಿನಲ್ಲಿ ಪ್ರಾಣಿಗಳನ್ನು ಕೊಲ್ಲದ ಉಪಾಸಕರೇ ಮೇಲು ಎಂದು ಅನಿಗನ್ನಿಸಿತು. ಸಮ್ಯಕ್ತ್ವಚೂಡಾಮಣಿಯೆನಿಸಿದ ಜಿನಭಕ್ತಸೆಟ್ಟಿಯು ಪರಮ ಶ್ರಾವಕ; ಒಂದು ಇರುವೆಯನ್ನೂ ಕೊಲ್ಲದವನು; ಅವನೇನಾದರೂ ಕಂಡರೆ ಏನು ಮಾಡಿದ್ದರೂ ನನ್ನನ್ನು ಕೊಲ್ಲುವುದಿಲ್ಲ. ಕಠಿಣರಾದ ತಳವಾರರ ಕೈಯಲ್ಲಿ ಸಿಕ್ಕಿಕೊಂಡು ತುಂಡುತುಂಡಾಗುವಂತೆ ಹೊಡೆಸಿಕೊಂಡು ಸಾಯುವುದಕ್ಕಿಂತ ಆ ವಾತ್ಸಲ್ಯರತ್ನಾಕರನನ್ನು ಮೊರೆಹೊಗುವುದು ಮೇಲು ಎಂದು ಭಾವಿಸಿ ಹೊರಬೀಡಿನಲ್ಲಿದ್ದ ಜಿನಭಕ್ತನ ಬೀಡನ್ನು ಹೊಕ್ಕು ಜಿನಧರ್ಮನಿರ್ಮಲನ ಮುಂದೆ ಶರಣಾದ. ಈ ಮಾಯಾವಿಯು ಹಿಂದೆ ತಳೆದಿದ್ದ ಸಾಧುತ್ವವನ್ನೂ ಈಗ ಹೊಂದಿರುವ ದುರ್ಜನತ್ವವನ್ನೂ ಕಂಡು ಜಿನಭಕ್ತಸೆಟ್ಟಿ ಬೆಳ್ಳಂಬೆರಗಾದ. ನಾಡಾಡಿಗಳ ಜೊತೆ ಸೇರಿದರೆ ಅದರಲ್ಲೇನೂ ದೋಷವಿಲ್ಲ; ಆದರೆ ಕಪಟತನದಿಂದ ಕೂಡಿರುವವರ ಜೊತೆ ಸೇರಿದರೆ ದೋಷವುಂಟಾಗುವುದು ಖಂಡಿತ ಎಂದು ಅವನಿಗನ್ನಿಸಿತು. ವಿವೇಕಿಯಾದವನು ಮೈಮರೆವಿನಿಂದ ಹೆಣ್ಣು ಮತ್ತು ಹಣಗಳ ವಿಷಯದಲ್ಲಿ ಯಾರನ್ನೂ ನಂಬಲಾಗದು ಎಂಬ ಮಾತು ಸುಳ್ಳಲ್ಲ. ವ್ಯಸನಿಯ ಸತ್ಯ, ಖಳನ ಧರ್ಮ, ಮೂರ್ಖನ ಸಚ್ಚಾರಿತ್ರ, ಹುಸಿಯುವವನ ಶೌಚ, ಬಡವನ ಭೋಗ, ಯುದ್ಧರಂಗದಲ್ಲಿ ಕುಸಿದು ಬೀಳುವವನ ಪರಾಕ್ರಮ, ಕಿವುಡನ ಕೇಳಿಸುವಿಕೆ, ಗೌರವವನ್ನು ಬಿಟ್ಟವನ ಕೀರ್ತಿ, ವಿಟನ ಶೀಲ ಇವುಗಳನ್ನು ಒಪ್ಪಲಾಗದು. ಕುರುಡನ ಕಾಣ್ಕೆ, ಸ್ತ್ರೀವ್ಯಾಮೋಹಿಯಾದವನ ರಾಜ್ಯ, ಮನಸ್ಸು ಮುರಿದವನ ಧೈರ್ಯ, ಒಡೆಯನಿಗೆ ಎದುರುಬಿದ್ದವನ ಸಜ್ಜನಿಕೆ, ಪರಮ ಜಿನಾಗಮೋಕ್ತಿಯನ್ನು ಕುರಿತು ಆಲೋಚಿಸದವನ ಮಹಾಗುಣ ಇವುಗಳೂ ಜಗತ್ತಿನಲ್ಲಿ ಒಪ್ಪತಕ್ಕವಲ್ಲ. ಚರಿತೆಪುರಾಣಗಳನ್ನು ತಿಳಿಯದೆ ತರಾತುರಿಯಲ್ಲಿ ಅಧ್ಯಾತ್ಮಕ್ಕೆಳಸುವವನ ತಪಸ್ಸು, ಹುಚ್ಚನ ಆಸ್ತಿ, ಹೇಡಿಯ ಬಿರುದು ಇವುಗಳಿಂದ ಕಡೆಯಲ್ಲಿ ಸುಖವುಂಟಾಗದು. ಸಿದ್ಧಾಂತಗಳನ್ನು ತಿಳಿಯದೆ, ಉದ್ಧಟನೂ ಸೋಮಾರಿಯೂ ಆದವನು ಬುದ್ಧಿಯಿಲ್ಲದೆ ಶ್ರದ್ಧೆಯಿಂದ ಓದುವ ಆಧ್ಯಾತ್ಮವೂ ಕೊನೆಯಲ್ಲಿ ಮಹಾಸುಖವನ್ನು ಉಂಟುಮಾಡಲಾರದು. ಪ್ರಥಮಾನುಯೋಗವನ್ನು ಆರಂಭದಲ್ಲಿ ಪ್ರೀತಿಯಿಂದ ಓದದೆ ತುದಿಯಲ್ಲಿ ಸೂಕ್ಷ್ಮವಾಗಿ ಓದುವವನೂ, ಆಯುಧವಿಲ್ಲದೆ ವಿನೋದದಿಂದ ಯುದ್ಧರಂಗವನ್ನು ಹೊಗುವವನೂ, ರಾಜನ ಹೆಂಡತಿಯನ್ನು ಕಾಮಿಸುವವನೂ ಗಾಂಪನಲ್ಲದೆ ಬೇರೇನು? ಆಗಮವನ್ನರಿಯದ ತಪಸ್ಸು, ಕಾಮಿಯಾದವನ ರಾಣಿವಾಸದ ಕಾಪು, ವೇಗಿಯ ಸ್ನೇಹ ಮತ್ತು ಬಡವನ ಭೋಗಗಳು ಕೊನೆಗೆ ದುಃಖವನ್ನೇ ಉಂಟುಮಾಡುತ್ತವೆ. ಲೋಭಿ ಕೊಡುವ ದಾನ, ಐಹಿಕಸೌಖ್ಯಕ್ಕೆ ಕುದಿಯುವವನ ತಪಸ್ಸು, ಲಾಭವಿಲ್ಲದ ವ್ಯಾಪಾರ ಇವುಗಳು ಶೋಭಿಸಲಾರವು – ಹೀಗೆಂದು ಸೆಟ್ಟಿಯ ಮನಸ್ಸಿನಲ್ಲಿ ಆಲೋಚನೆಗಳು ಮೂಡಿದವು.

ಅಷ್ಟರಲ್ಲಿ ಭಾರಿ ಗದ್ದಲವೆಬ್ಬಿಸುತ್ತ ಜನರ ಗುಂಪೊಂದು ಹೊರಗೆ ಸೇರಿತು. ತಳವಾರರೂ ದೇಹಾರದ ಕಾಪಿನ ಭಟರೂ ಇಲ್ಲಿಗೆ ಕಳ್ಳನು ಬಂದನೆಂದು ಬೀಡಿನೊಳಕ್ಕೆ ಬಂದರು. ಗುಡಿಗುಂಡಾರಗಳಲ್ಲಿಯೂ, ಎತ್ತರವಾಗಿ ಪೇರಿಸಿದ್ದ ಸರಕುಗಳಲ್ಲಿಯೂ, ಎತ್ತುಗಳನ್ನು ಕಟ್ಟಿದ್ದ ಕೊಟ್ಟಿಗೆಗಳಲ್ಲಿಯೂ, ಒಟ್ಟಿದ್ದ ಚೀನಾಂಬರದ ದಿಂಡುಗಳಲ್ಲಿಯೂ, ಹಾಸಿಗೆಗಳನ್ನು ಹಾಸಿದ್ದ ಜಾಗದಲ್ಲಿಯೂ ಕೈದೀವಿಗೆಯ ಬೆಳಕಿನಲ್ಲಿ ಹುಡುಕಾಡಿದರು. ಇದರಿಂದ ಕಲರವವುಂಟಾಯಿತು; ಬೀಡಿನ ಅತ್ತ ಇತ್ತ ತಿಗುರಿಬುಗುರಿಯಾಗಿ ಅವರು ತಿರುಗಾಡಿದರು. ಅಲ್ಲಿ ಭಯದ ವಾತಾವರಣ ಉಂಟಾಯಿತು. ಆಗ ಸೆಟ್ಟಿಯು ತನ್ನ ಮನಸ್ಸಿನಲ್ಲಿ ಹೀಗೆಂದುಕೊಂಡ: "ಈ ಪಾತಕಿಯು ತಪಸ್ಸಿನ ಕಾರಣದಿಂದ ಈ ಊರಿನಲ್ಲಿ ಹೆಚ್ಚಿನ ಕೀರ್ತಿಯನ್ನು ಸಂಪಾದಿಸಿದ; ಇವನು ಪಾಪ ಪರಿಹರಿಸುವವನೆಂದು ಬಗೆದು ಅನೇಕರು ಇವನಿಗೆ ನಮಸ್ಕರಿಸಿದರು. ಮೊದಲಲ್ಲಿ ಮುಳ್ಳಿನ ಮೊನೆಗಳು ಮೃದುವಾಗಿದ್ದು ಬರಬರುತ್ತ ಗಟ್ಟಿಯಾಗುತ್ತವೆ; ಹಾಗೆಯೇ ಖಳರೂ ಮೊದಮೊದಲಲ್ಲಿ ಗುಣಿಗಳೆನ್ನಿಸಿಕೊಂಡು ಕೊನೆಯಲ್ಲಿ ಕಪಟತನವನ್ನು ಪ್ರಕಟಿಸುತ್ತಾರೆ. ಜೊಳ್ಳು ಯಾವುದು ಬೀಜವಾವುದು ಎಂಬುದು ಫಲದಲ್ಲಿ ಗೋಚರಿಸುತ್ತದೆ; ಜೊಳ್ಳು ಜೊಳ್ಳಾಗುತ್ತದೆ, ಗಟ್ಟಿ ಬೀಜ ಧಾನ್ಯವಾಗುತ್ತದೆ. ಎಲ್ಲರಲ್ಲಿಯೂ ಹೊರಗಿನ ನಡವಳಿಕೆಯನ್ನು ಕಾಣಬಹುದೇ ಹೊರತು ಒಳಗಿನ ಮನಸ್ಸನ್ನು ಅರಿಯಲು ಸಾಧ್ಯವಾಗದು; ಮನುಷ್ಯರ ಎದೆಯನ್ನು ಸೀಳಿ ಪರೀಕ್ಷಿಸಲು ಅದೇನು ಮರವೇ, ಕಲ್ಲೇ, ಬಿದಿರೇ? ಇವನು ಒಂದು ಮರ, ತವುಡಿನ ಬೆಲೆಗೂ ಲಾಯಕ್ಕಾದವನಲ್ಲ; ಇವನಿಂದಾಗಿ ಮೂರುಲೋಕಗಳ ಬೆಲೆಬಾಳುವ ಧರ್ಮವನ್ನು ಕುರಿತು ಪಾಪಿಗಳು ಕೆಟ್ಟ ಮಾತುಗಳನ್ನಾಡುತ್ತಾರೆ. ಆದ್ದರಿಂದ ಇವನು ಸಾಗಿದ ಹಾದಿ ಹಾಳಾಗಲಿ, ಸದ್ಧರ್ಮಕ್ಕೆ ಕೆಟ್ಟ ಹೆಸರು ಬಾರದಂತೆ ನಾನು ನಡೆದುಕೊಳ್ಳುತ್ತೇನೆ."

ಆನಂತರ ಒಂದು ದೊಡ್ಡ ಮಣೆಯ ಮೇಲೆ ಅವನನ್ನಿರಿಸಿ, ಮಹಾಭಕ್ತಿಯಿಂದ ಆ ಮಾಯಾವಿಯ ಕಾಲುಗಳನ್ನೊತ್ತುತ್ತ ಕುಳಿತ. ಅಷ್ಟರಲ್ಲಿ ತಳವಾರರ ನಾಯಕನು ಅಲ್ಲಿಗೆ ಬಂದು, ಜಿನಭಕ್ತಸೆಟ್ಟಿಯಿದ್ದ ಸ್ಥಳಕ್ಕೆ ಹೋದ. ನೋಡಿದರೆ, ಸೆಟ್ಟಿಯ ಮೇಲೆ ತನ್ನ ಕಾಲನ್ನಿಟ್ಟುಕೊಂಡು ಆ ಕೃತಕ ವೇಷಧಾರಿಯು ಮಹಾಮಹಿಮೆಯಿಂದ ಒರಗಿ ಕುಳಿತಿದ್ದಾನೆ! ಸೆಟ್ಟಿಯನ್ನು ನೋಡಿ ತಳವಾರನಾಯಕನು, "ನೀವು ಈ ಕಳ್ಳನ ಕಾಲುಗಳನ್ನು ಸದ್ಭಾವದಿಂದ ಮೆಲ್ಲನೆ ಒತ್ತುತ್ತ ಇರುವಿರಲ್ಲ! ಈ ಕಪಟಿಯಾಡಿದ ಆಟ ನಿಮಗೆ ತಿಳಿಯದೇ?" ಎಂದ. "ಈ ಮೋಸಗಾರನು ತನ್ನ ಕೃತಕ ತಪವನ್ನು ಮುಂದುಮಾಡಿಕೊಂಡು ಬೇರೆಯವರ ಉನ್ನತರತ್ನವನ್ನು ಕದ್ದೊಯ್ಯುತ್ತಿದ್ದಾನೆ, ಇಂತಹ ದುರ್ಜನನ್ನು ನಾನಿದುವರೆಗೆ ಕಂಡೇ ಇಲ್ಲ. ಇವನು ಹೊರಗೆ ಸಿಕ್ಕಿದ್ದಿದ್ದರೆ ಕೀಲುಕೀಲನ್ನೂ ಕತ್ತರಿಸದೆ ಬಿಡುತ್ತಿರಲಿಲ್ಲ; ಅವನ ದೇಹವನ್ನು ಗರಗಸದಿಂದ ಕೊಯ್ಯದೆ ಬಿಡುತ್ತಿದ್ದೆನೆ? ಈ ಖೂಳನು ಇಲ್ಲಿ ಸೇರಿಕೊಂಡದ್ದರಿಂದ ಬದುಕಿದ. ಈ ಮಾತಿಲ್ಲದ ಅಜ್ಞಾನಿಯಾದ ಮಹಾಪಾತಕಿಯನ್ನು, ವಿಶ್ವಾಸಘಾತಕನನ್ನು, ಇಂದ್ರಸಮವೈಭವಿಯಾದ ಸೆಟ್ಟರೇ, ಬೇಗ ನಮಗೆ ಒಪ್ಪಿಸಿಬಿಡಿ. ಈ ಮಹಾಮಾಯಾವಿಯು ತುಡುಗು ತೊತ್ತಿನಂತೆ ಬಾಯಿ ತೆರೆದುಕೊಂಡು, ಬೆಣ್ಣೆ ತಿಂದ ಬೆಕ್ಕಿನಂತೆ, ನಿಮ್ಮ ಮರೆಹೊಕ್ಕು ತಣ್ಣಗೆ ಕೂತಿದ್ದಾನೆ" ಎಂದು ನಾನಾ ಪ್ರಕಾರವಾಗಿ ಚೋರನನ್ನು ತಿರಸ್ಕರಿಸಿ ಮಾತಾಡಿದ. ಸೆಟ್ಟಿಗೆ ಹೆದರಿಕೊಂಡು ಆ ಕಪಟಿಯನ್ನು ಮೇಲೆ ಬಿದ್ದು ತನ್ನ ವಶಕ್ಕೆ ತೆಗೆದುಕೊಳ್ಳಲಾರದೆ ಇದ್ದ.

ಜಿನಭಕ್ತಸೆಟ್ಟಿಯು ತಳವಾರನಾಯಕನನ್ನು ಕುರಿತು, ಸೇರಿದ್ದ ಜನರಿಗೆಲ್ಲ ಕೇಳಿಸುವಂತೆ, "ನಗರದಲ್ಲಿ ಕಣ್ಮರೆಯಾಗಿರುವುದೇನು? ಕಳ್ಳತನವಾದ ವಸ್ತುವಾವುದು? ಇಷ್ಟು ಕಠಿಣತೆಯಿಂದ ದೊಡ್ಡ ಪಡೆಯ ಸಮೇತ ರಭಸದಿಂದ ಬಂದು ನನ್ನ ಬೀಡನ್ನು ಹೊಕ್ಕು ಹುಡುಕಾಡಲು ಇದೇನು ಕೊಟ್ಟಿಗೆಯಲ್ಲ. ಕಳಲೆಯನ್ನು ತಿಂದ ಹಸುವಿನಂತೆ, ಮದ್ದುಗುಣಿಕೆಯನ್ನು ಮೆದ್ದವನಂತೆ ಮೈಮೇಲೆ ಜ್ಞಾನವಿಲ್ಲದೆ ನನ್ನ ಬಳಿ ಇರುವ ಬಡ ಸಾಧು ಋಷಿಯನ್ನು ಕಳ್ಳನೆಂದು ಭಾವಿಸಿ ಬೆನ್ನಟ್ಟಿ ಬಂದೆ. ಇವರು ಸಾಧು ತಪಸ್ವಿಗಳು. ನಿಜವಾಗಿಯೂ ಕಳ್ಳನೇ ಆಗಿದ್ದರೆ ಬೇರೆ ಕಡೆಗೆ ಹೋಗದೆ ನನ್ನ ಬೀಡನ್ನೇಕೆ ಹೊಗುತ್ತಿದ್ದರು? ಇದರಿಂದಲಾದರೂ ನಿನಗೆ ತಿಳಿಯಬೇಡವೇ? ದೀರ್ಘ ಕಾಲದಿಂದ ಇಲ್ಲಿಯವರೆಗೂ ನೀನು

ಈ ಊರನ್ನು ರಕ್ಷಿಸಿ ಮೆಚ್ಚಿಕೆ ಸಂಪಾದಿಸಿದ್ದೀಯ; ಹೆಸರು, ದಕ್ಷತೆಗಳನ್ನು ಪಡೆದಿದ್ದೀಯ. ಹಿಂದೆಂದೂ ನೀನು ಇಂತಹ ಬುದ್ಧಿಹೀನತೆಯನ್ನು ತೋರಿಸಿದವನಲ್ಲ. ನಿನ್ನಂತಹ ಬುದ್ಧಿವಂತನೂ ದೊಡ್ಡ ನಿಧಿಯಂತೆ ಬಡಸಾಧುವನ್ನು ಬೆನ್ನಟ್ಟಿ ಬಂದುದು ನನಗೆ ತುಂಬ ಆಶ್ಚರ್ಯವುಂಟುಮಾಡುತ್ತಿದೆ," ಎಂದು ಗಂಭೀರನಾಗಿ ನುಡಿದ. ಈ ಮಾತುಗಳನ್ನು ಕೇಳಿ ತಳವಾರನಾಯಕನಿಗೆ ಅಚ್ಚರಿಯಾಯಿತು. ಈ ವೈಶ್ಯೋತ್ತಮನು ಬುದ್ಧಿವಂತಿಕೆಯಲ್ಲಿ ಸಾಮಾನ್ಯನಲ್ಲ, ಇಂದ್ರನಿಗೂ ನೂರು ಮಡಿ ಹೆಚ್ಚು. ಇಂತಹ ಭೂವಿನುತನು ಕಳ್ಳನಿಗೆರಗುತ್ತಾನೆಯೇ! ಅನುಪಮಗುಣಿಯೆಂದು ನಮ್ಮ ಮಹಾರಾಜರ ಸಮೇತ ಎಲ್ಲರೂ ಇವನಿಗೆ ನಮಸ್ಕರಿಸುತ್ತಾರೆ; ಅಂಥವನು ಕಳ್ಳನಿಗೆ ಎರಗುವನೇ! ಅಲ್ಲದೆ, ಈ ಸಾಧು ಕಳ್ಳನಾಗಿದ್ದಿದ್ದರೆ ಭಯದಿಂದ ಬೇರೆಲ್ಲೋ ಓಡಿಹೋಗದೆ ಸೆಟ್ಟಿಯ ಬೀಡನ್ನು ಹೊಗುತ್ತಿದ್ದನೇ? ಪಾಪ, ಈ ಸಾಧು ಕಳ್ಳನಲ್ಲ, ಶುದ್ಧ ಎಂದು ಅವನು ತನ್ನ ಬುದ್ಧಿಹೀನತೆಗೆ ನಾಚಿಕೊಂಡ. ಮರುಮಾತಾಡದೆ ಬಂದ ದಾರಿಯಲ್ಲಿ ವಾಪಸಾದ. ಸೆಟ್ಟಿಯು ಹೇಳಿದ್ದನ್ನು ಕೇಳಿ ಸೇರಿದ್ದ ಜನರು, ವೈಡೂರ್ಯರತ್ನವನ್ನು ತಂದವನೆಂದು ಬರಿದೇ ಸಾಧುವನ್ನು ಬೆನ್ನಟ್ಟಿದ ನೀಚನೆಂದು ತಳವಾರನಾಯಕನನ್ನು ಜರೆದರು.

ಈ ಕಡೆ ವಣಿಗ್ವಂಶತಿಲಕನು ಮಾಯಾವಿಯನ್ನು ಏಕಾಂತ ಜಾಗವೊಂದಕ್ಕೆ ಕರೆದೊಯ್ದು ಮೆಲ್ಲನೆ ಹೀಗೆಂದ: "ನಿನ್ನನ್ನು ಊರವರೆಲ್ಲ ಹೊಗಳುತ್ತ ನಿಜವಾಗಿ ದೇವರೇ ಎಂದು ಬಣ್ಣಿಸುತ್ತಿರಬೇಕಾದರೆ ನೀನು ಗುಣವನ್ನು ಬಿಟ್ಟು ಹುರಿಯುವ ಓಡಿನಂತಾದೆಯಲ್ಲ! ಬೀಜವಲ್ಲದ್ದು ಫಲದಲ್ಲಿ ಕಾಣಿಸಿತೆಂಬ ನಾಣ್ಣುಡಿಯಂತೆ ತಪಸ್ಸು ಮತ್ತು ಗುಣಗಳಿಂದ ಹಲವು ಕಾಲ ಊರಿನಲ್ಲಿ ಮೆಚ್ಚಿಕೆಯನ್ನು ಪಡೆದಿದ್ದವನು ಬಂಡುವೋದೆ; ಆನೆಯನ್ನು ಏರಿ ಬೆರಣಿಯನ್ನಾಯ್ದೆ; ನಿನಗಿಂತ ದೊಡ್ಡ ಪಾಪಿಯೂ ವಿಶ್ವಾಸಘಾತಕನೂ ಮಾಯಾವಿಯೂ ಬೇರೆ ಇಲ್ಲ. ಬೆಕ್ಕಿಗೆ ಹಾಲು ಕಾಣಿಸುವುದೇ ಹೊರತು ಮೇಲಿನ ದೊಣ್ಣೆಯಲ್ಲ ಎಂಬಂತೆ ಇಹದ ಸುಖವನ್ನು ಬಯಸಿದೆಯೇ ವಿನಾ ಮುಂದಿನ ಜನ್ಮದಲ್ಲಿ ಉಂಟಾಗಬಹುದಾದ ಮಹಾದುಃಖದ ಬಗ್ಗೆ ನೀನು ಯೋಚಿಸಲಿಲ್ಲ. ಅನ್ಯಾಯವಾಗಿ ಪಡೆದ ಹಣವು ನಡುನೀರಲ್ಲಿಟ್ಟರೂ ಕಳೆದುಹೋಗುತ್ತದೆ. ಹಿಂದಿನ ಜನ್ಮದಲ್ಲಿ ಮಾಡಿದ ಸುಪಾತ್ರದಾನದ ಫಲದಿಂದ ಈ ಅನರ್ಘ್ಯವಾದ ಮಹಾರತ್ನವು ನನಗೆ ದೊರೆಯಿತು. ಕುತ್ಸಿತನಾದ ನಿನಗೆ ಎಷ್ಟು ಪ್ರಯಾಸಪಟ್ಟರೂ ದುಃಖವುಂಟಾಗುವುದೇ ಹೊರತು ಈ ರತ್ನವು ದೊರೆಯದು. ಎಲ್ಲ ಕಡೆಯಿಂದಲೂ ಬಂದು ಸೇರಿ ಮೋಡಗಳು ಮಳೆ ಸುರಿಸಿದರೂ ನೀರಿನ ಪುಣ್ಯವಿಲ್ಲದ ಜಾಗದಿಂದ ಹರಿದು ಮಳೆ ನೀರು ತೊರೆಕೆರೆಬಾವಿಗಳನ್ನು ಸೇರುವಂತೆ, ಸಕಲವಸ್ತುಗಳು ನಿರ್ಭಾಗ್ಯರನ್ನು ಬಿಟ್ಟು ಪುಣ್ಯವಂತರನ್ನೇ ಸೇರುತ್ತವೆ. ಹಾಗೆಯೇ ತೊರೆಕೆರೆಬಾವಿಗಳ ನೀರು ಕ್ರಮೇಣ ಸಮುದ್ರವನ್ನು ಸೇರುವಂತೆ ಅಲ್ಪಪುಣ್ಯರ ವಸ್ತುಗಳು ಮಹಾ ಪುಣ್ಯವಂತರನ್ನು ಸೇರುತ್ತವೆ. ಆದ್ದರಿಂದ ನೀನು ಸಾಯುವ ಮಾರ್ಗವನ್ನು ಹಿಡಿದೆ. ನಾನು ಶ್ರಾವಕನಾದ್ದರಿಂದ ನಿನಗೆ ಉಂಟಾದ ಕಂಟಕ ಈಗ ತೊಲಗಿತು. ನನ್ನ ಬಳಿಯಲ್ಲದೆ ನೀನೇನಾದರೂ ಆ ನಿಷ್ಕರುಣಿಯ ಕೈಯಲ್ಲಿ ಸಿಕ್ಕಿದ್ದರೆ ಮದ್ದಾನೆಯ ಕೈಗೆ ಬಿದ್ದ ನಾಯಿಯ ಪಾಡನ್ನು ಅನುಭವಿಸುತ್ತಿದ್ದೆ. ಈ ವೇಷವನ್ನು ಧರಿಸಿಯೂ ಸಂಸಾರವನ್ನು ತೊರೆದು ಮುಕ್ತಿ ಪಡೆಯದೆ ನೀನು ಕಪಟತನದಿಂದ ಗುಣಹೀನನಾಗಿ ರೌರವವಾರ್ಧಿಯಲ್ಲಿ ಬೀಳುವುದನ್ನೇ ಆರಿಸಿಕೊಂಡೆಯಲ್ಲ. ಈ ರತ್ನವೇನು ಮಹಾ. ವೀರಜಿನಸ್ಮರಣೆಯಿಂದ ಮುಕ್ತಿಸುಖವು ದೊರೆಯುತ್ತದೆ ಎಂದ ಮೇಲೆ ಜೀವನದಲ್ಲಿ ಗುಣಕ್ಕಿಂತ ಉನ್ನತವಾದ ಸಿರಿ ಬೇರೆ ಉಂಟೆ? ಕಳ್ಳನೊಕ್ಕಲಾದುದಿಲ್ಲ, ನಾಯಿ ಜಂಗುಳಿಯಾದುದಿಲ್ಲ ಎಂಬ ಗಾದೆ ನಿನಗೆ ಅರ್ಥವಾಗದೆ ಹೋಯಿತು. ಪುಣ್ಯವಿಲ್ಲದೆ ವ್ಯವಸಾಯದಿಂದ ಸಿರಿ ದೊರೆಯುತ್ತದೆ ಎನ್ನುವುದಾದರೆ, ನೆತ್ತಿ ತರಟಾಗುವಂತೆ ಸೌದೆಯನ್ನು ಹೊರುವ ಬಡವನಿಗೂ ದಾರಿಯಲ್ಲಿ ಅಡ್ಡಗಟ್ಟಿ ದೋಚುವ ಬೇಡನಿಗೂ ಸಿರಿ ಏಕೆ ದೊರೆಯದು? ನಡೆಯುವಾಗ ತಟ್ಟಾಡುವ, ಕುಳಿತಿರುವ, ಇತರರನ್ನು ಆಶ್ರಯಿಸುವ ಕಡು ಅಲಸಿಗರಾದ ಅರಸರಿಗೆ ರಾಜ್ಯಶ್ರೀ ದೊರಕುತ್ತದೆ. ಆದ್ದರಿಂದ ಸಿರಿ, ಸೌಭಾಗ್ಯ, ಶಾಶ್ವತಸುಖಗಳು ದೊರಕಲು ಜಿನಪೂಜೆ ಮತ್ತು ಸುಪಾತ್ರದಾನಗಳು ಹಾಗೂ ವಿಷಯಕಷಾಯನಿಗ್ರಹವೂ

ಮಿಥ್ಯಾತ್ವಭೀತಿಯೂ ಜೀವದಯೆಯೂ ಮುಖ್ಯ. ಸಮುದ್ರದ ನೀರನ್ನು ನದಿಗಳು ಹೊರಲಾಗುವುದೇ; ಹಾಗೆಯೇ ತೊರೆಯ ನೀರನ್ನು ಕೆರೆಗಳು ಮತ್ತು ಬಾವಿಗಳು ಹಿಡಿಯಲಾಗುವುದೇ? ಅಂತೆಯೇ ಮಹಾಪುಣ್ಯವಂತರು ಪಡೆಯುವ ಸಿರಿಯನ್ನು ಪುಣ್ಯಹೀನರು ಎಷ್ಟು ಮರುಗಿದರೂ ಕುದ್ದರೂ ಪಡೆಯಲಾಗದು. ಆದ್ದರಿಂದ ಧರ್ಮವನ್ನು ಅನುಸರಿಸಬೇಕು; ಎಲ್ಲ ಸುಖಗಳೂ ಆ ಧರ್ಮವನ್ನು ಅನುಸರಿಸುತ್ತವೆ. ಧರ್ಮವನ್ನು ಕಡೆಗಣಿಸಿದರೆ ಕರ್ಮದಿಂದ ಕಡುದುಃಖವು ಉಂಟಾಗುತ್ತದೆ.

"ಹೆಣ್ಣುಗಳು ತನ್ನನ್ನು ಒಲಿಯದಿದ್ದರೂ, ಸಿರಿಯು ತೊಲಗಿದರೂ, ರೋಗವು ನೆಲಸಿದರೂ ಅಟ್ಟಿದಾಕ್ಷಣ ಹೋಗವು. ಅಂತೆಯೇ ಹಿಂದಿನ ಕೊಲೆಯ ಬಾಧೆ. ಹೆಂಡತಿ, ಮಕ್ಕಳು, ಇಷ್ಟರು ಇವರುಗಳ ಬಗೆಗಿನ ಮೋಹದಿಂದ ಹಣವನ್ನು ಗಳಿಸಿದರೂ, ಕಳವಿನಿಂದ ಹಣ ಗಳಿಸಿದಾಗ, ತನಗೆ ಕಳ್ಳತನಕ್ಕಾಗಿ ಮರಣಶಿಕ್ಷೆ ಯಾದರೆ ಆ ಹೆಂಡತಿ, ಮಕ್ಕಳು, ಇಷ್ಟರು ಅದರಲ್ಲಿ ಪಾಲುದಾರರಾಗುತ್ತಾರೆಯೇ? ಆದ್ದರಿಂದ ಬೇರೆಯವರು ಬೇರೆಯೇ; ತಾನು ತಾನೇ ಎಂದು ನಡುಗಿ ಪಾಪಭೀರುವಾಗಬೇಕು. ಕೆಂಪಗೆ ಕಾದ ಹಾರೆಯೂ ಸತ್ಯವಂತನನ್ನು ಸುಡಲಾರದು; ಆದರೆ ಸುಳ್ಳನನ್ನು ಸುಡುತ್ತದೆ. ಆದ್ದರಿಂದ ಸತ್ಯವನ್ನು ನುಡಿಯುವವನೇ ಸುಖಿ, ಸುಳ್ಳಾಡುವವನು ಅಸುಖಿ. ಆದ್ದರಿಂದ ಅಸತ್ಯವೇ ದುಃಖಕ್ಕೆ ಕಾರಣ ಎಂಬ ನಂಬಿಕೆಯಿಂದ ಸುಳ್ಳಾಡುವುದನ್ನು ಬಿಡಬೇಕು. ಹಲವರು ಹಿಂದೆಮುಂದೆ ನೋಡದೆ 'ಹಾದರಿಗ, ಕಷ್ಟ ಎಂದು ಕುರಿಯನ್ನು ಕೊಲ್ಲುವಂತೆ ಕೊಂದು, ಹೊಲೆಯರಿಂದ ಎಳೆಸುತ್ತಾರೆ; ದೂರುತ್ತಾರೆ. ಆದ್ದರಿಂದ ಮಹಾದುಃಖಕ್ಕೆ ಹಾದರವೇ ಕಾರಣ ಎಂದು ನಂಬಿ ಪರಸ್ತ್ರೀಯರನ್ನು ತಾಯಿಯಂತೆ ಕಾಣಬೇಕು. ಜಿನಪತಿಯನ್ನು ಪೂಜಿಸದೆ, ಪಂಚಾಣುವ್ರತಗಳನ್ನು ತಾಳದೆ ಸುಮ್ಮನೆ ದೇವಲೋಕದ ಸುಖಕ್ಕಾಗಿ ಹಂಬಲಿಸಿದರೆ ಅದು ದೊರಕುತ್ತದೆಯೇ?

"ತನಗೆ ಅನವರತ ಸುಖವುಂಟಾಗಬೇಕೆಂದು ಬಯಸುವ ಮನುಜನು ಜಿನನಾಥನನ್ನು ಅರ್ಚಿಸಬೇಕು, ಹಗಲಿರುಳೂ ಮನಸ್ಸಿನಲ್ಲಿ ಜಿನಪದವನ್ನೇ ನೆನೆಸುತ್ತಿರಬೇಕು. ಜಿನರನ್ನು ಪೂಜಿಸದೆ ಅಮರೇಂದ್ರನ ಸುಖವನ್ನೂ, ಖೇಚರೇಂದ್ರನ ಅತ್ಯುನ್ನತಿಯನ್ನೂ, ಮನುಜೇಂದ್ರನ ವಿಭವವನ್ನೂ ಆಸೆಯಿಂದ ಮರುಗಿದರೆ ಬರುತ್ತದೆಯೇ? ತಾನು ಮಹಿಮೆಯಿಂದ ಬರುವಾಗ ದಿವ್ಯಾಂಗನೆಯರು ಮದ್ದಾನೆಯನ್ನೇರಿ ಬಂದು ಸಂತಸದಿಂದ ಚಾಮರವಿಕ್ಕುವಂತಾಗಬೇಕಾದರೆ ಮದನಾರಿಯ ಪಾದಪದ್ಮಗಳನ್ನು ಮನಸ್ಸಿನಲ್ಲಿ ನೆನೆಯುತ್ತಲಿರಬೇಕು. ಮನಃಪೂರ್ವಕವಾಗಿ ದಾನಚತುಷ್ಟಯವನ್ನು ಮಾಡದೆ, ಆಸೆಬುರುಕ ಹೀನರು ಸುಖವನ್ನು ಬಯಸಲು ಅದೇನು ಕೊಗ್ಗಿಯ ಜೇನೇನು? ಉತ್ತಮ ಆಹಾರವನ್ನು ಭಕ್ತಿಯಿಂದ ಜಿನಮುನಿಗೆ ನೀಡದೆ, ಜಿನೇಂದ್ರನ ಪೂಜೆಯನ್ನು ಮಾಡದೆ, ಮನಸ್ಸಿನಲ್ಲಿ ಸುಖವನ್ನು ಬಯಸಿದರೆ ಅದು ದೊರಕುತ್ತದೆಯೇ? ಶೀಲವ್ರತಗಳನ್ನು ಮಾಡದೆ, ಉತ್ಕøಷ್ಟವಾದವರಿಗೆ ದಾನವನ್ನು ಮಾಡದೆ, ಇಂದ್ರನ ಸಿರಿಯನ್ನು ಅನುಭವಿಸಬೇಕೆಂದು ಆಸೆಪಟ್ಟರೆ ಅದು ಸಲೀಸಾಗಿ ಬಂದುಬಿಡುವುದಿಲ್ಲ. ಸಪ್ತಸಮುದ್ರಗಳಿಂದ ಸುತ್ತುವರಿಯಲ್ಪಟ್ಟ ಭೂಮಂಡಲದಿಂದ ಪೂಜಿತನಾಗ ಬೇಕಾದರೆ, ಕರ್ಪೂರತಾಂಬೂಲವನ್ನು ಸದಾ ಮೆಲ್ಲುತ್ತಿರಬೇಕಾದರೆ, ಎಲೆ ಮರುಳೆ, ಆಸೆಯಿಲ್ಲದಂತೆ ಇಂದ್ರವಂದ್ಯನ ಪಾದಗಳನ್ನು ಪೂಜಿಸು. ಕಾಮೇಚ್ಛೆಯನ್ನು ಪೂರೈಸುವ ಸುಂದರಿಯರ ಸಖ್ಯವನ್ನು ಬಯಸುವೆಯಾದರೆ, ಖೇಚರರಾಜ್ಯಶ್ರೀ ಯನ್ನು ಆಳಬೇಕೆಂದರೆ ಅರ್ಹಂತನ ಪಾದಗಳನ್ನು ನಿರ್ಮಲಚಿತ್ತದಿಂದ ಅರ್ಚಿಸು. ಎಂದೂ ದುಃಖವನ್ನೇ ಅನುಭವಿಸದಂತೆ ಮಕ್ಕಳು, ಮಿತ್ರರು, ಬಾಂಧವರು ಹಾಗೂ ತಾಯ್ತಂದೆಯರೊಡನೆ ಪ್ರೀತಿಯಿಂದ ಕೂಡಿ ಬಾಳಬೇಕೆಂದರೆ ಜಿನಪಾದಗಳನ್ನು ಪೂಜಿಸು. ಶ್ರೀಗಂಧವನ್ನು ಪೂಸಿಕೊಂಡು, ಹೊಳೆಯುವ ಚಿನ್ನದ ಆಭರಣಗಳನ್ನು ತೊಟ್ಟು, ಸುಖವಾಗಿರಬೇಕೆಂದು ಬಯಸುವುದಾದರೆ ಅರ್ಹಂತನ ಪಾದಗಳನ್ನು ಸಂತೋಷದಿಂದ ಅರ್ಚಿಸು.

"ತನ್ನನ್ನು ತಪಸ್ಸಿನಿಂದ ದಂಡಿಸದೆ ಉನ್ನತಿಯನ್ನೂ ದಿವ್ಯಭೋಗವನ್ನೂ ಬಯಸುವ ಗಾಂಪನು ಸಾಲ ಕೊಡದೆಯೇ ಬಡ್ಡಿಗಾಗಿ ಹಂಬಲಿಸುವವನನ್ನು ಹೋಲುತ್ತಾನೆ. ಜಿನಮತವನ್ನು ತಳೆಯದೆ, ಜಿನಮುನಿಗಳಿಗೆ ಅನ್ನವನ್ನಿಕ್ಕದೆ, ಪರಿಶುದ್ಧವಾದ ಜೈನಾಗಮವನ್ನು ನಂಬದೆ ಇಂದ್ರನ ಐಶ್ವರ್ಯಕ್ಕಾಗಿ ಮರುಗಿದರೆ ಏನು ಫಲ? ಇಕ್ಕೆಲಗಳಲ್ಲಿ ಚಾಮರವಿಕ್ಕುತ್ತಿರಲು

ವೈಭವದಿಂದ ಕುಳಿತುಕೊಂಡು, ರಾಜರು ಸುಂದರಿಯರು ಪಂಡಿತರು ಭಟರು ಕುಮಾರರು ಬಿರುದರು ಇವರ ನಡುವೆ ದಂಡಧಾರಿಗಳು 'ಉಘೇ ಉಘೇ' ಎಂದು ಕೈವಾರಿಸುತ್ತಿರಲು ನೃಪಲೀಲೆಯನ್ನು ಮೆರೆಯಬೇಕೆಂದರೆ ಜಿನೇಂದ್ರಧರ್ಮವನ್ನು ಸೇರು. ಸುರುಚಿರ ರತ್ನಗಳಿಂದ ಕೂಡಿದ ದಿವ್ಯ ಸಿಂಹಾಸನದಲ್ಲಿ ಠೀವಿಯಿಂದ ಕುಳಿತು, ಎರಡೂ ಕೈಗಳನ್ನು ರಾಜಕುಮಾರರ ಮೇಲೆ ಚಾಚಿ, ಸುಂದರಿಯರ ಚೆಲುವನ್ನು ಮನವಾರೆ ನೋಡುವ ಮನಸ್ಸಿದ್ದರೆ ಜಿನೇಂದ್ರಧರ್ಮವನ್ನು ಸೇರು. ಆನೆಗಳ ಹಿಂಡು, ಕುದುರೆಗಳ ದಂಡು, ವೀರಭಟರ ಸಮೂಹ ಇವರು ನೆಲದಲ್ಲಿ ಕಿಕ್ಕಿರಿದಿರಲು, ನಂದನೋದ್ಯಾನದಂತೆ ಕೊಡೆಗಳು ಅರಳಿರಲು, ಸಮುದ್ರದಂತೆ ಪಡೆಯು ಘೋಷಿಸುತ್ತಿರಲು, ಇಂದ್ರನ ಹಾಗೆ ಸ್ಥಿರಸಂತೋಷದಿಂದ ಇರಬೇಕೆಂದರೆ ಜಿನೇಂದ್ರಧರ್ಮವನ್ನು ಸೇರು. ಕಾಮಕೇಳಿಗಾಗಿ ಇನಿಯಳ ಮೇಲೆ ಮಲಗಿ, ಅವಳ ಮುಖಕಮಲವನ್ನೂ, ಕೇಶರಾಶಿಯನ್ನೂ, ಹೊಳೆವ ಕಣ್ಣುಗಳನ್ನೂ, ತುಂಬಿದ ಮೊಲೆಗಳನ್ನೂ ನೋಡುತ್ತ ವಿನೋದದಿಂದ ಇರಬೇಕೆಂಬ ಮನಸ್ಸಿದ್ದರೆ ಜಿನೇಂದ್ರಧರ್ಮವನ್ನು ಸೇರು. ವೈಭವದಿಂದ ಐರಾವತವನ್ನು ಏರುತ್ತೇನೆ, ಅಮರರ ಪುರದಲ್ಲಿ ಸಕಲ ಸೌಖ್ಯಗಳಿಂದ ಕೂಡಿ ಅಮರರಿಂದಲೇ ಬೆಸಕೈಸಿಕೊಳ್ಳುತ್ತೇನೆ, ಊರ್ವಶಿಯನ್ನು ಭೋಗಿಸುತ್ತೇನೆ, ಸ್ವರ್ಗದಲ್ಲಿ ನಾನೇ ಮೊದಲಿಗನಾಗುತ್ತೇನೆ ಎಂಬ ಆಸೆಯಿದ್ದರೆ ಜಿನೇಂದ್ರಧರ್ಮವನ್ನು ಸೇರು. ದೇವತೆಗಳೆಲ್ಲ, 'ದೇವ, ಏನಪ್ಪಣೆ?', 'ಜೀಯ, ಮಹಾಪ್ರಸಾದ', 'ತಮ್ಮ ಪಾದ, ಅಪ್ಪಣೆ ಮಾಡಿ' ಎಂದು ಕೇಳುತ್ತಿರಲು; ಚಪಲಾಕ್ಷಿಯರಾದ ಸುರಾಂಗನೆಯರು ಮನಬಿಚ್ಚಿ ಮೃದು ನುಡಿಗಳನ್ನಾಡುತ್ತ ಮನ್ಮಥ ಸುಖವನ್ನು ನೀಡುತ್ತಿರಬೇಕು ಎಂಬ ಮನಸ್ಸಿದ್ದರೆ ಜಿನೇಂದ್ರಧರ್ಮವನ್ನು ಸೇರು. ಆಸೆಪಟ್ಟ ವಸ್ತುಗಳನ್ನು ಕಲ್ಪವೃಕ್ಷವು ನೀಡುತ್ತಿರಲು, ಮರುತ್ತರ ನಿಕಾಯವು ಶೋಭಿಸುತ್ತಿರಲು, ಸುತ್ತಲೂ ಮರುತ್ ಲಲಿತಾಂಗಿಯರು ನಲಿಯುತ್ತಿರಲು, ಮೆಚ್ಚುವ ಇಚ್ಚೆಗಳನ್ನು ಅಚ್ಚರಿಯಾಗುವಂತೆ, ಅವರನ್ನು ಕೂಡಿ ಭೋಗಿಸಬೇಕೆಂಬ ಮನಸ್ಸಿದ್ದರೆ ಜಿನೇಂದ್ರಧರ್ಮವನ್ನು ಸೇರು. ಮೈಯನ್ನು ಸೋಕಿ, ಸೋತ ಕಟಾಕ್ಷಗಳಿಂದ ನೋಡಿ, ಮನಸ್ಸಿನಲ್ಲಿ ಮೋಹವುಕ್ಕಲು ಕೈಹಿಡಿದು ಹಣೆಯ ಮೇಲಿರಿಸಿಕೊಂಡು ಪ್ರೀತಿಯಿಂದ ಜೊಮ್ಮೆಂದು ಜೋತುಬಿದ್ದು, ಕ್ರಮಾಣ ಸುರತದಲ್ಲಿ ಆಹ್ಲಾದವನ್ನುಂಟು ಮಾಡುವ ದೇವಾಂಗನೆಯರಿಗೆ ಆಸೆಪಡುವುದಾದರೆ, ಅಣ್ಣ, ನೀನು ಜಿನೇಂದ್ರಧರ್ಮವನ್ನು ಸೇರು.

"ಚಂದನ, ಕಾಶ್ಮೀರ ಕರ್ಪೂರ ಮುಂತಾದ ಸುಗಂಧದ್ರವ್ಯಗಳನ್ನು ಲೇಪಿಸಿಕೊಳ್ಳುವೆನೆಂಬ ಮನಸ್ಸಿದ್ದರೆ, ಚೀನ ಮಹಾಚೀನ ದುಕೂಲ ಮುಂತಾದ ವಸ್ತ್ರಗಳನ್ನುಡುವ ಮನಸ್ಸಿದ್ದರೆ, ಹಾರ ಕೇಯೂರ ಕಟಕ ಕಟಿಸೂತ್ರ ಕುಂಡಲ ರತ್ನಮುದ್ರಿಕಾ ಮಕುಟ ಮುಂತಾದ ಆಭರಣಗಳನ್ನು ತೊಡುವ ಬಯಕೆಯಿದ್ದರೆ, ಕಲ್ಯಾಣಕರವಾದ ಅಮೃತಾಹಾರಗಳನ್ನು ಆರೋಗಿಸುವ ಆಸೆಯಿದ್ದರೆ, ಮೃದುವಾದ ಹಾಸಿಗೆಯಲ್ಲಿ ಮಲಗಬೇಕೆಂಬ ಇಚ್ಛೆಯಿದ್ದರೆ, ಸದಾ ಭೋಗೋಪಭೋಗಗಳನ್ನು ಅನುಭವಿಸುತ್ತಿರಬೇಕೆಂಬ ಆಸೆಯಿದ್ದರೆ, ಅರ್ಹಂತನ ಚರಣಗಳನ್ನು ಮನಃಪೂರ್ವಕವಾಗಿ ಪೂಜಿಸಲು, ಸಕಲಶಾಸ್ತ್ರದಾನವನ್ನು ಉತ್ಸಾಹದಿಂದ ಮಾಡಲು, ಸತ್ಪಾತ್ರರಿಗೆ ಆಲಸ್ಯವಿಲ್ಲದೆ ಅನ್ನದಾನ ಮಾಡಲು, ಚಾತುರ್ವಣ್ಯಾದವರಿಗೆ ರೋಗಪರಿಹಾರಕವಾದ ಔಷಧಗಳನ್ನು ನೀಡಲು, ಸಮಸ್ತಜೀವರಾಶಿಗಳಿಗೆ ಅಭಯದಾನವನ್ನು ಮಾಡಲು, ಸುಖ ಪಡೆಯಲು ಸಾಧ್ಯವಾಗುತ್ತದೆ. ಅದು ಬಿಟ್ಟು ಎಷ್ಟು ಕುದ್ದರೂ, ಕಳ್ಳತನ ಮಾಡಿದರೂ, ಭೂಮಿಯನ್ನು ಹೊಕ್ಕರೂ, ಭೈರವನನ್ನು ಬೈದರೂ, ಬಾಯಿ ಬಡಿದುಕೊಂಡರೂ, ಹಣವಂತರನ್ನು ಸೇರಿದರೂ, ಕಮ್ಮರಿಯಲ್ಲಿ ದುಮುಕಿದರೂ, ಮೊರೆಯಿಟ್ಟರೂ ದೊರೆಯುವುದಿಲ್ಲ. ಆ ಕಾರಣದಿಂದ ಸುಖದಲ್ಲಿ ಹಾಯಾಗಿರುವೆನೆಂಬ ಮನಸ್ಸಿದ್ದರೆ, ತಿಳಿದವನು ಸ್ವಯಂ ಇಚ್ಚೆಯಿಂದ ಸದಾ ದಾನಪೂಜೆಗಳಲ್ಲಿ ತೊಡಗಿರಬೇಕು.

"ಬರಿದೇ ಪಾಪಹೇತುಗಳಲ್ಲಿ ಸಿಕ್ಕಿಕೊಂಡು ಪರಲೋಕಸುಖವನ್ನು ಬಯಸುವವನು ಜೋಳವನ್ನು ಬಿತ್ತಿ ಬತ್ತವನ್ನು ಬಯಸುವ ಎಗ್ಗನಾಗುತ್ತಾನೆ; ಬೇವಿನ ತೋಟ ಬೆಳೆಸಿ ಮಾವಿನ ಹಣ್ಣಿಗೆ ಹುಡುಕುವ ಗಾಂಪನಾಗುತ್ತಾನೆ; ಹೊಟ್ಟನ್ನು ಕುಟ್ಟಿ ಅಕ್ಕಿಗೆ ಆಸೆಪಡುವ ಬೆಪ್ಪನಾಗುತ್ತಾನೆ; ಮರಳನ್ನು ಹಿಂಡಿ ಎಣ್ಣೆಯನ್ನು ತೆಗೆಯುವ ಬುದ್ಧಿಹೀನನಾಗುತ್ತಾನೆ. ಆದ್ದರಿಂದ

ಮೋಕ್ಷವನ್ನು ಪಡೆಯುತ್ತೇನೆ ಎನ್ನುವುದಾದರೆ ಕಡೆಗಣಿಸದೆ ಧರ್ಮವನ್ನು ಮಾಡು; ಧೂರ್ತತನದಿಂದ ಹೊಡೆದು ಬೈದು ಕದ್ದು ಪಡೆಯಲು ಮುಕ್ತಿಯೆಂಬುದೇನು ಬಡವನ ಹಣವೇ? ಜಿನಪತಿಗೆರಗದೆ ಬಲವಂತದಿಂದ ಸುಖವನ್ನು ಪಡೆಯುತ್ತೇನೆ ಎಂದರೆ, ಅದೇನು ದೋಟಿಯಿಕ್ಕಿ ಕೀಳಬಹುದಾದ ಮಾವಿನ ಹಣ್ಣೇನು? ಅಲಸದೆ ಪ್ರೀತಿಯಿಂದ ಸತ್ಪಾತ್ರರಿಗೆ ಅನ್ನದಾನವನ್ನು ಮಾಡದೆ ಸುಖವನ್ನು ಪಡೆಯಲು ಅದೇನು ನುಚ್ಚು ಕೊಟ್ಟು ಪಡೆಯಬಹುದಾದ ತುಂಬೆಯ ತೋಟವೇ? ಜಿನಪತಿಗೆರಗದೆ, ಭಕ್ತಿಯಿಂದ ಮುನಿಗಳ ಸೇವೆ ಮಾಡದೆ, ಸುಮ್ಮನೆ ಓಡಾಡಿಕೊಂಡು ಸೇರುವುದಕ್ಕೆ ದೇವಲೋಕವು ಹಾಳು ಮನೆಯೇನು? ಎಷ್ಟು ತಾಳೆ ಮರಗಳನ್ನು ಹತ್ತಿದರೂ 'ತಲೆಗೆ ಕಾಲು ಕೆಳಗೆ' ಎಂಬಂತೆ ಎಷ್ಟು ಕುದ್ದರೂ ಧರ್ಮದರಿದ್ರನಿಗೆ ದುಃಖವುಂಟಾಗುವುದೇ ಹೊರತು ಸುಖವಾಗಲು ಸಾಧ್ಯವಿಲ್ಲ. ಪರಮ ಜಿನೇಶ್ವರನನ್ನೂ ಮುನಿಗಳನ್ನೂ ಪೂಜಿಸದೆ, ರಣರಂಗದಂತೆ ವೀರತನದಿಂದ ಹೊಗಲು ಸುರಲೋಕವನ್ನೇನು ರಂಡೆಯಾಳುತ್ತಾಳೆಯೇ?

"ಇನ್ನು ಕರ್ಮಫಲದ ಬಗ್ಗೆ ಹೇಳಬೇಕೆಂದರೆ, ಕರಟದ ಕದಿರಿನಂತೆ ತಿರ್ಯಗ್ಜಾತಿಯಲ್ಲಿ ತಿರ್ರನೆ ತಿರುಗಿಯೂ; ಕಡೆಗೋಲಿನಂತೆ ಸುಖಾಸುಖಗಳನ್ನು ಸರದಿಯ ಪ್ರಕಾರ ಮನುಷ್ಯಜನ್ಮದಲ್ಲಿ ಅನುಭವಿಸಿಯೂ; ಸೀಕಲನ್ನು ತುರಿಯುವಂತೆ ಒಮ್ಮೆ ರಾಜ್ಯಲೀಲೆಯಲ್ಲಿದ್ದೂ; ತಿರಿದು ಉಣ್ಣುವಂತೆ ಕೆಲವಾರು ಜನ್ಮಗಳಲ್ಲಿ ಒಮ್ಮೆ ಕರ್ಮೋಪಶಮನದಿಂದ ದೇವಲೋಕದ ಸುಖವನ್ನು ಅನುಭವಿಸಿಯೂ; ಗಾಣದಲ್ಲಿಟ್ಟ ಕಬ್ಬಿನಂತೆ ನರಕದಲ್ಲಿ ದುಃಖಪಟ್ಟೂ; ಬೇಸಗೆಯ ಬಿಸಿಲಿಗೆ ಹೆದರಿ ಉರಿಯುವ ಮರವನ್ನು ಹತ್ತುವಂತೆ, ಕರಡಿಗೆ ಹೆದರಿ ಹುಲಿಯ ಗುಹೆಯನ್ನು ಹೊಗುವಂತೆ, ಬೆಲ್ಲದ ಮೇಲಿನ ಆಸೆಗೆ ಕತ್ತಿಯ ಅಲಗನ್ನು ನೆಕ್ಕುವಂತೆ, ಕಳ್ಳನಿಗೆ ಅಂಜಿ ಬೇಡರ ಹಳ್ಳಿಯನ್ನು ಸೇರುವಂತೆ, ಚೇಳಿಗೆ ಹೆದರಿ ಕಟ್ಟಿರುವೆಯ ಗೂಡನ್ನು ಹೊಕ್ಕಂತೆ, ಹುಲಿಗೆ ಹೆದರಿ ಹುತ್ತವನ್ನೇರುವಂತೆ, ರಾಕ್ಷಸಿಗೆ ಭಯಗೊಂಡು ಮೊಸಳೆಯಿರುವ ಮಡುವಿಗೆ ಬಿದ್ದಂತೆ, ಸಂಸಾರದಲ್ಲಿನ ಬಡತ£, ರೋಗ, ರಾಜಬಾಧೆ, ನಂಟರ ಅಗಲಿಕೆ, ಸೀತವಾತಬಿಸಿಲು, ಕಳ್ಳರು ಬಂದಿಕಾರರು ಪಿಸುಣರು ಧೂರ್ತರುಗಳಿಂದಾಗುವ ಪೀಡೆ, ಸಾವುನೋವು, ಹಣದ ಕಳವು, ಹೆಣ್ಣಿನ ಒಲುಮೆಗಾಗಿ ಹುರುಡು, ಹಸಿವು ಮುಪ್ಪು ಅವಮಾನಗಳ ಮಹಾದುಃಖ, ಇವುಗಳನ್ನೆಲ್ಲ ನೋಡಿಯೂ; 'ಮುಡಿಗೆ ಜೋಳೆಯ ಉಡುಗೊರೆ' ಎಂಬ ನಾಣ್ಣುಡಿಯ ಹಾಗೆ ಪಾಪವನ್ನು ಹೆಚ್ಚಿಸಿ, ಸತ್ತು ನರಕದಲ್ಲಿನ ಮಹಾದುಃಖವೆಂಬ ಬೆಂಕಿಗೆ ತಮ್ಮ ಶರೀರವೆಂಬ ಪುಳ್ಳಿಗಳನ್ನಿಡುವವರೇನು ದುಸ್ಸಾಹಸಿಗಳೋ!

"ಜೈನಪೂಜೆಯನ್ನು ಕೆಡಿಸಿದವರು ನೆತ್ತಿಗೆ ಎಣ್ಣೆ ಕಾಣದೆ, ತುತ್ತು ಊಟವಿಲ್ಲದೆ, ಕಂಡಕಂಡವರೆಲ್ಲ ಹೊಡೆದು ಬಡಿದು ಮಾಡಲು, ಚಿತ್ತೋತ್ಸಾಹವನ್ನು ಕೆಡಿಸಿಕೊಳ್ಳುತ್ತಾರೆ. ಜಿನೇಂದ್ರಧರ್ಮವನ್ನು ಹಳಿದವರು ಕೈಕಾಲುಗಳು ಏಳದೆ, ಮೈಯಲೆಲ್ಲ ತೊನ್ನು ಮೂಡಿ, ದುಃಖದಿಂದ ಓ ಎಂದು ಅರಚುತ್ತಿರುತ್ತಾರೆ. ಅನ್ನದಾನವನ್ನು ಕೆಡಿಸಿದವರು ತಿನ್ನಲು ಏನೂ ಇಲ್ಲದೆ, ಬಹಳ ಹಸಿವಿನಿಂದ ಬಳಲಿ ಇತರರ ಮನೆಯಂಗಳದಲ್ಲಿ ಭಿಕ್ಷೆಗಾಗಿ ಕುಳಿತುಕೊಳ್ಳವಂತಾಗುತ್ತದೆ. ನಿರ್ಮಲ ಪೂಜೆಗೆ ಅಂತರಾಯ ಒಡ್ಡುವವರು ಒಕ್ಕಣ್ಣರಾಗಿ, ನಾನಾ ರೋಗಗಳಿಗೆ ಒಳಗಾಗಿ, ತೊನ್ನಿನಿಂದ ಆಕಾರಗೆಟ್ಟು, ಮಹಾ ಶೋಕಕ್ಕೆ ಒಳಗಾಗುತ್ತಾರೆ. ಮಹಾ ತಪಸ್ಸುಗಳನ್ನು ಕೆಡಿಸಿದವರು ಮೋಟುಗೈಗಳನ್ನು ಪಡೆದು, ಸಿರಿಯಲ್ಲದೆ ಕೈಕಾಲುಗಳಲ್ಲೂ ಕುಂಟಾಗಿ ನವೆಯುತ್ತಾರೆ. ದಾನಕ್ಕೆ ಅಡ್ಡಿ ಮಾಡಿದವರು ಎರಡೂ ಕಣ್ಣುಗಳನ್ನು ಕಳೆದುಕೊಂಡು, ಕಾಲುಗಳು ಹರಿದು ಹೋಗಿ, ತೊನ್ನಿನಿಂದಾಗಿ ಮೈ ಕರಗಿ ಕಡು ದುಃಖವನ್ನು ಅನುಭವಿಸುತ್ತ ತಿರಿಯುವ ಸ್ಥಿತಿಯುಂಟಾಗುತ್ತದೆ. ವಿದ್ಯೆಗೆ ಅಂತರಾಯ ಉಂಟು ಮಾಡುವವರು ನುಡಿಯಲು ನಾಲಗೆಯೇ ಹೊರಳದೆ, ಮೂಕರಾಗಿ ನವೆಯುತ್ತ, ನಯದ ಮಾತುಗಳನ್ನು ಕೇಳಿದರೂ ಅದು ಕೊಂಕಿನಂತೆ ಕೇಳಿಸಿ ಬೈದಾಡುತ್ತಿರುತ್ತಾರೆ. ಶಾಸ್ತ್ರಕ್ಕೆ ಅಡ್ಡಿ ಮಾಡಿದವರು ಏನು ಅಂದುಕೊಂಡರೂ ನೆರವೇರದು; ಕೈಗೂಡುವಂತಹುದೂ ನಡೆಯುವುದಿಲ್ಲ; ಕರ್ಮಫಲದಿಂದಾಗಿ ಹರಟೆಗಾರ ಎಂದು ಜನರು ತಿರಸ್ಕರಿಸುವಂತಾಗುತ್ತದೆ. ಪೂಜೆಗೆ ಅಂತರಾಯ ಒಡ್ಡಿದ ಫಲದಿಂದಾಗಿ ಸಿರಿಯೆಲ್ಲ ಮಂಜಿನಂತೆ ಕರಗಿ ಹೋಗುತ್ತದೆ; ಒಂದೊಂದು ಬಾರಿಗೂ ದುಃಖವು ಹೆಚ್ಚಾಗುತ್ತ ಹೋಗುತ್ತದೆ; ಭಿಕ್ಷೆ ಬೇಡಿದರೂ ಕೂಳು ಹುಟ್ಟುವುದಿಲ್ಲ. ದಾನದ ಹಣವನ್ನು

ಕದಿಯುವವರು ತಬ್ಬಲಿಗಳಾಗುತ್ತಾರೆ, ಕಡುತರವಾದ ದುಃಖವನ್ನು ಪಡೆಯುತ್ತಾರೆ; ಬಡತನದಿಂದ ತುಂಬ ನೋವನ್ನು ಅನುಭವಿಸುತ್ತಾರೆ. ಪೂಜೆಗಾಗಿ ಮೀಸಲಾದ ಹಣವನ್ನು ಕದಿಯುವವರು ಕಾಮಬಾಧೆಯಿಂದಿರುವಾಗ ಭೋಗಕ್ಕೆ ತೊಂದರೆಯಾಗುತ್ತದೆ; ಕಂಡವರೆಲ್ಲ ಕೋಪಗೊಳ್ಳುವರು; ಮುಂದಿನ ಜನ್ಮಗಳಲ್ಲಿ ತಿರಿದುಣ್ಣುವ ಸ್ಥಿತಿಯುಂಟಾಗುತ್ತದೆ.

"ಮಾಯಾವಿಯು ನಾಯಾಗಿ, ಮಹಾ ಮಾಯಾವಿಯು ಮೊಲವಾಗಿಯೂ; ಕೋಪಿಯು ಹುಲಿಯಾಗಿ, ಮಹಾಕೋಪಿಯು ಸಿಂಹವಾಗಿಯೂ; ಲೋಭಿಯು ಮುಳ್ಳುಹಂದಿಯಾಗಿ, ಮಹಾಲೋಭಿಯು ಚಮರೀಮೃಗವಾಗಿಯೂ; ಮನಸ್ಸಿನಲ್ಲಿ ಕಷಾಯ ಹೊಂದಿದವನು ಮೀನಾಗಿ, ಮಹಾಮನಃಕಷಾಯಿಯು ಹಾವಾಗಿಯೂ; ರೌದ್ರನು ಭೇರುಂಡವಾಗಿ, ಮಹಾರೌದ್ರನು ಶರಭನಾಗಿಯೂ; ಗುಣದೂಷಕನು ಹಂದಿಯಾಗಿ, ಕುಮಾರ್ಗವನ್ನು ಅನುಸರಿಸುವವನು ಕೋಳಿಯಾಗಿ, ಸದ್ಧರ್ಮದ್ವೇಷಿ ಜಿಂಕೆಯಾಗಿ, ಜಾತಿಮದ ವುಳ್ಳವನು ಬೆಕ್ಕಾಗಿ, ವಿದ್ಯಾಮದ ಉಳ್ಳವನು ಗೂಬೆಯಾಗಿ, ತಪೋಮದವುಳ್ಳವನು ನಾಯಾಗಿ, ಐಶ್ವರ್ಯದ ಮದವುಳ್ಳವನು ಮೊಸಳೆಯಾಗಿ, ರೂಪಮದವುಳ್ಳ ವ್ಯಕ್ತಿ ಕತ್ತೆಯಾಗಿ, ಆಜ್ಞಾಮದವುಳ್ಳವನು ತೇರಜೆಯಾಗಿ, ಸುಳ್ಳುಗಾರ ಕರಡಿಯಾಗಿ, ಹಿಂಸಾನಂದಿಯು ಕುರಿಯಾಗಿ, ಕಳ್ಳತನದ ವ್ಯಸನಿಯು ಎತ್ತಾಗಿ, ಪರವಧೂಪ್ರಿಯಚಿತ್ತನು ಕುದುರೆಯಾಗಿ, ಸಪ್ತವ್ಯಸನಗಳಿಗೊಳಗಾದವನು ಸೀಳುನಾಯಿಯಾಗಿ, ದುರ್ಗುಣಪಕ್ಷಪಾತಿಯು ಗಿಡುಗನಾಗಿ ಹುಟ್ಟಿ, 'ಹೇರಿನ ಮೇಲೆ ಕರಡೆ' ಎಂಬ ಹಾಗೆ ಪಾಪದ ಹೊರೆಯನ್ನು ಕಲೆಹಾಕಿಕೊಂಡು, ನಿಡುಗಾಲ ಸಹಿಸಲಾಗದ ಮಹಾದುಃಖಕ್ಕೆ ಒಳಗಾಗುತ್ತಾರೆ.

"ಭುರ್ರೆಂದು ಕುದಿಯುವ ಎಣ್ಣೆಯಲ್ಲಿ ಹಾಕಿ, ಗಿರ್ರೆಂದು ಅಬ್ಬರಿಸಿ ಎದುರಿಗೆ ಬಂದು ತಲೆ ಸೀಳುವಂತೆ ಬಲವಾಗಿ ಹೊಡೆದು, ಹರ್ರೆಂದು ಗೇಲಿಮಾಡುತ್ತ ರಕ್ತ ಕುಡಿದು ದೊಡ್ಡ ಕೆಂಡಗಳನ್ನು ಎಸೆಯುತ್ತ, ಗರ್ರೆಂದು ತೇಗಿ ಕುಂಟಾಗುವಂತೆ ಕಾಲುಗಳನ್ನು ಕತ್ತರಿಸಿ ಖಳರು ದೊಡ್ಡ ಬಂಡೆಯಿಂದ ಅದುಮುತ್ತ, ಕಗ್ಗಲ್ಲನ್ನು ಆರಿಸಿಕೊಂಡು ತಂದು ಮೂಳೆಯೆಲ್ಲ ಪುಡಿಪುಡಿಯಾಗುವಂತೆ ನೆಲದ ಮೇಲೆ ಒರೆಸಿ ಮೇಲಿನಿಂದ ಚುಚ್ಚುತ್ತ, ಚಿಕ್ಕಚಿಕ್ಕದಾಗಿ ಕೈರವನ್ನು ಕತ್ತರಿಸಿ, ಕೊಳ್ಳಿಯಿಂದ ಮುಖವನ್ನು ತಿವಿಯುತ್ತ, ಧರ್ಮದ್ರೋಹಿಗಳನ್ನು ಹೆಣೆಯುತ್ತಾರೆ. ಬಡಿ, ತಿವಿ, ಹೊಡೆ, ಕಡಿ, ತರಿ, ಹುಣ್ಣಿನಿಂದ ಕಡಂದುರನ್ನು ಬಿಡು, ತಲೆ ತೂತಾಗುವಂತೆ ಕೊಯ್, ಎದೆಯನ್ನು ಚೂರುಚೂರಾಗಿ ಸೀಳು, ಕತ್ತರಿಸು, ಆನೆಯಿಂದ ಮೆಟ್ಟಿಸು, ಎದೆಯನ್ನು ಸೀಳಿ ಕುದಿಯುವ ಎಣ್ಣೆಯನ್ನು ಸುರಿ, ತಲೆ ಕಡಿದು 'ಓ' ಎಂದು ಒರಲಿದರೆ ಉರಿಯಲ್ಲಿ ಬೀಳುವಂತೆ ನೂಕು, ಎಂದು ನಾನಾ ಪ್ರಕಾರದಿಂದ ನಾರಕರು ದಂಡಿಸುತ್ತಾರೆ." ಈ ಬಗೆಯಲ್ಲಿ ಜಿನೇಂದ್ರಸೆಟ್ಟಿಯು ಸೂರ್ಪನಿಗೆ ಸಂಕ್ಷೇಪವಾಗಿ ಧರ್ಮಾಧರ್ಮಗಳ ಫಲಗಳನ್ನು ತಿಳಿಸಿದ. ತಾನು ಹಿಂದೆ ಆಡಿದ ಆಟಗಳು, ಆನಂತರ ಸೆಟ್ಟಿ ಮಾಡಿದ ಪ್ರಭಾವ; ತಾನು ಹಿಂದೆ ಗೈದ ಕರ್ಮದ ತೀವ್ರತೆ, ಬಳಿಕ ತನ್ನ ಮನಸ್ಸಿನ ಉಪಶಮ; ಮೊದಲಿನ ತನ್ನ ಮನಸ್ಸಿನ ಆಸೆಗಳು, ಆಮೇಲಿನ ನಿಷ್ಕಾಂಕ್ಷೆ; ಮೊದಲಿನ ತನ್ನ ಸಂಸಾರದ ಮೋಹ, ಆನಂತರದ ಸಂಸಾರದ ಬಗೆಗಿನ ವಿರಕ್ತಿ – ಇವುಗಳಿಂದ ಮಾಯಾವಿಯಾದ ಸೂರ್ಪನು ಬೆರಗುಗೊಂಡ.

ಈ ರತ್ನವನ್ನು ದುರಾಸೆಯಿಂದ ತೆಗೆದುಕೊಂಡು ಹೋಗಿ ವೀರಕುಮಾರನಿಗೆ ಕೊಟ್ಟು, ಸತ್ತು, ನರಕವೆಂಬ ಸಮುದ್ರದಲ್ಲಿ ಮುಳುಗದೆ ಬದುಕಿದೆ. ನಾನು ಕಳ್ಳತನಕ್ಕೆ ಬಂದುದು ಪುಣ್ಯೋದಯದಿಂದ ಒಳ್ಳೆಯದಾಯಿತು. 'ವ್ರತಿಗಳು ಹುರಿದ ಕಾಳನ್ನು ಬಿತ್ತಿದರೂ ಬೆಳೆ ಬರುತ್ತದೆ' ಎಂಬ ಗಾದೆಯಂತೆ, ಲಘುಕರ್ಮಿಯಾದವನಿಗೆ ಬೇಗನೇ ಸುದರ್ಶನವು ದೊರೆಯುತ್ತದೆ. ನಾನೇಕೆ, ವೀರಕುಮಾರನು ಅಂದು ಕಳವಿನ ಮಾತಾಡಿದ್ದೇಕೆ, ಚೋರಪ್ರಧಾನನು ಈ ರತ್ನವನ್ನು ಹೊಗಳುವುದೇಕೆ, ಯುವರಾಜನು ಅದಕ್ಕೆ ಆಸೆಪಟ್ಟು ಆ ರತ್ನವನ್ನು ತಂದುಕೊಟ್ಟವನಿಗೆ ಅರ್ಧರಾಜ್ಯವನ್ನು ಕೊಡುತ್ತೇನೆ ಎಂದುದೇಕೆ, ಬೇರೆಯವರಿದ್ದರೂ ನೃಪಕುಮಾರನ ಮಾತನ್ನು ನೆರವೇರಿಸಲು ನಾನು ಮುಂದಾದುದೇಕೆ, ಕಪಟ ತಪಸ್ಸನ್ನು ಕೈಗೊಂಡುದೇಕೆ, ನಯವಾಗಿ ರತ್ನವನ್ನು ಕದ್ದುದೇಕೆ, ಈ ತಳವಾರ ಅದನ್ನು ಕಂಡುದೇಕೆ, ಭಯದಿಂದ ನಾನು ಬೇರೆಡೆ

ಓಡದೆ ಜಿನಭಕ್ತನ ಬೀಡನ್ನು ಹೊಕ್ಕುದೇಕೆ, ಈ ಮಹಾಪುರುಷನಿಂದ ಸದ್ಧರ್ಮವು ಸಿಕ್ಕಿದುದೇಕೆ! ಆಲೋಚಿಸಿದರೆ ಇವೆಲ್ಲ ನನಗೆ ಜಿನೇಂದ್ರಸೆಟ್ಟಿಯ ಪ್ರಸಾದದಿಂದಲೇ ದೊರೆತಿದೆ. ಉಪದೇಶವಿತ್ತವರು ಸಾಲವಿತ್ತವರು ಎಂಬ ನಾಣ್ಣುಡಿಯಿದೆಯಲ್ಲ. ಆದ್ದರಿಂದ ಈತನೇ ನನಗೆ ಮಿತ್ರ, ಸಹೋದರ, ಹೆತ್ತ ತಂದೆ, ಇವನೇ ನನ್ನ ಪಾಲಿನ ದೇವರು, ನಂಟ, ಪ್ರೀತಿಯ ಒಡೆಯ, ಅಜ್ಜ, ಮುತ್ತಜ್ಜ, ನನ್ನ ತಾಯಿ; ಹೆಚ್ಚು ಹೇಳುವುದೇನು, ಜಗತ್ತಿನಲ್ಲಿ ಈತನೇ ನನ್ನ ಏಕಮಾತ್ರ ಆಪ್ತ, ಗೆಳೆಯ. ನನಗೆ ಎಂದೂ ದೊರೆಯದಿದ್ದ ಜಿನಧರ್ಮವು ಈ ಮಹಾತ್ಮನ ಕಾರಣದಿಂದ ದೊರಕಿತು; ಹಾಗಾಗಿ ಈತನೇ ನನ್ನ ಜೀವ, ಈ ವೈಶ್ಯಶ್ರೇಷ್ಠನೇ ನನ್ನ ಕಣ್ಣು, ಬುದ್ಧಿ ಎಲ್ಲ. ಸೂರ್ಯನು ಹುಟ್ಟದಿದ್ದರೆ ತಾವರೆಗಳು ಅರಳಬಲ್ಲವೇ? ಹಾಗೆಯೇ ಜೀವೋತ್ಕರಕ್ಕೆ ಸದ್ಧರ್ಮದ ಉಪದೇಶವಿಲ್ಲದೆ ತನಗೆ ತಾನೇ ತಿಳಿಯಲು ಸಾಧ್ಯವೇ? ಚಂದ್ರನು ಉದಯಿಸದೆ ಕತ್ತಲು ತಾನೇ ಹೋಗುತ್ತದೆಯೇ? ಭ್ರಾಂತಿಗೊಂಡವರಿಗೆ ಜೈನಾಗಮವನ್ನು ತಿಳಿದವರು ಹೇಳದೆ ಪಾಪಸಂಕುಲವು ತಾನಾಗಿ ನಾಶಗೊಳ್ಳುವುದೇ? ಕೂರಿಸಿಕೊಂಡು ಧರ್ಮವನ್ನು ನಿರಂತರವಾಗಿ ಹೇಳುವವನೇ ನಂಟ; ಹಾಗೆಯೇ ನಿರಂತರವಾಗಿ ಪಾಪವನ್ನು ಬೋಧಿಸುವವನೇ ಹಗೆ.

ಈ ಬಗೆಯಲ್ಲಿ ಆಲೋಚಿಸಿ ತನಗೆ ಸದ್ಧರ್ಮವು ದೊರಕೊಂಡುದಕ್ಕೆ ಸಂತಸಗೊಂಡು ಆ ವಾತ್ಸಲ್ಯರತ್ನಾಕರನ ಪಾದಕಮಲಗಳಿಗೆ ನಮಸ್ಕರಿಸಿ ತನ್ನ ಹಿಂದಿನ ಮಾಯಾಪ್ರಪಂಚವನ್ನೆಲ್ಲ ಸೂರ್ಪನು ವಿವರಿಸಿದ. "ಸನ್ನುತಗುಣ ನಿಲಯನಾದ ವೈಶ್ಯಲಲಾಮನೇ, ನಿನ್ನಿಂದ ನನಗೆ ಸದ್ಧರ್ಮವು ಸುಲಭವಾಗಿ ಸಿಕ್ಕಿತು. ಆದ್ದರಿಂದ ನನಗೆ ಈ ಪ್ರಪಂಚದಲ್ಲಿ ನಿನ್ನಂತಹ ಮಿತ್ರರು ಬೇರೆ ಯಾರಿದ್ದಾರೆ? ನೀನೇ ನನಗೆ ಕಣ್ಣು, ಮತಿಗಳಾಗಿ ಶರಣು; ನನಗೆ ಬೇರಾರೂ ಇಲ್ಲ. ನನ್ನ ಹಿಂದಿನ ಕೆಟ್ಟ ಕೆಲಸಗಳನ್ನು ಗಮನಿಸದೆ ಕರುಣೆಯಿಂದ ಧರ್ಮಾಭಿಪ್ರಾಯಗಳನ್ನು ಮತ್ತಷ್ಟು ವಿವರವಾಗಿ ಹೇಳಿ ಶಾಶ್ವತಸುಖಕ್ಕೆ ಕಾರಣವಾದ ವ್ರತರತ್ನವನ್ನು ದಯಪಾಲಿಸು", ಎಂದು ಕೈಮುಗಿದು ವಿನಯದಿಂದ ಬೇಡಿಕೊಂಡ. ಆಗ ಸಮ್ಯಕ್ತ್ವಚೂಡಾಮಣಿಯು ಸೂರ್ಪನಿಗೆ, "ಮಿಥ್ಯಾತ್ವವನ್ನು ಆರಿಸಿಕೊಂಡು, ಸಂಸಾರಸಮುದ್ರದಲ್ಲಿ ಬಿದ್ದು ಕೆಡುವ ಮುಂಚೆಯೇ ಅರಿತುಕೊಂಡು ದರ್ಶನವನ್ನು ಹೊಂದುವವನು ಬುದ್ಧಿವಂತನೆನಿಸಿ ಕೊಳ್ಳುತ್ತಾನೆ. ಶುದ್ಧದರ್ಶನವನ್ನು ಪೂರ್ತಿ ನಂಬಿ ಆನಂತರ ಅತಿಶಯ ಸುಖನಿಲಯವಾದ ಮೋಕ್ಷಶ್ರೀಯೆಡೆಗೆ ಕರೆದೊಯ್ಯುವ ಶ್ರಾವಕಧರ್ಮದಲ್ಲಿ ಸೇರಬೇಕು. ಯತಿಧರ್ಮ ಎಂಬುದು ಮೋಕ್ಷಶ್ರೀಯು ತೊಟ್ಟ ಆಭರಣ, ಜಯಲಕ್ಷ್ಮಿಯ ಮನೋಹರವಾದ ಯೌವನ, ಸಂಸಾರವನಿತೆಯ ಚೆಲುವು, ಕೀರ್ತಿಲಕ್ಷ್ಮಿಯ ನಿಲಯ. ಇಂತಹ ಮಹಿಮೆಯುಳ್ಳ ಯತಿಧರ್ಮವನ್ನು ಪಾಲಿಸುವವನು ಮೂಲೋತ್ತರ ಗುಣಗಳನ್ನು ಕ್ರಮಬದ್ಧವಾಗಿ ಪಡೆದು, ಯಾವ ದೋಷವೂ ತನಗೆ ಅಂಟದ ಹಾಗೆ ನಡೆದುಕೊಳ್ಳಬೇಕು. ಹಾಲನ್ನು ಕಾಸುವ ಹಾಗೆ ಮನಸ್ಸನ್ನು ಬೆದರಗೊಡದೆ, ದುರ್ಭಾವವನ್ನು ಬಿಟ್ಟು, ದುರ್ಜನರ ಸಹವಾಸ ಮಾಡದೆ, ದುರಾಚಾರಗಳನ್ನು ದೂರವಿಟ್ಟು, ಆಗಮಗಳನ್ನು ಹೊಂದಿ ನಡುಗಡಲಲ್ಲಿ ಹರಿಗೋಲನ್ನು ನಡೆಸುವ ಅಂಬಿಗನಂತೆ ದುರ್ಮಾರ್ಗವೆಂಬ ಅಲೆಗಳನ್ನು ನಿವಾರಿಸಿಕೊಳ್ಳುತ್ತ, ಮಿಥ್ಯಾತ್ವವೆಂಬ ಸುಳಿಗಳನ್ನು ತಪ್ಪಿಸಿ, ವಿಷಯಗಳೆಂಬ ಹೊಡೆತಗಳನ್ನು ಸಾರಲೀಯದೆ, ಕ್ರಿಯೆಸಹಿತ ಶುಭಧ್ಯಾನದಿಂದ ಸಂಸಾರವೆಂಬ ಮಹಾನದಿಯನ್ನು ದಾಟಬೇಕು.

"ಶ್ರಾವಕಧರ್ಮವು ಕೀರ್ತಿಲಕ್ಷ್ಮಿಯ ಕುಚಯುಗಳ, ಭೂವನಿತೆಯ ಮಾತುಗಳು, ಲಕ್ಷ್ಮೀದೇವಿಯ ಲಾವಣ್ಯ, ಜಯಶ್ರೀ ಹಾಗೂ ಲಕ್ಷ್ಮೀದೇವಿಯರು ಉಡುವ ದುಕೂಲ. ಹೀಗೆ ಪೆಂಪುವಡೆದ ಶ್ರಾವಕಧರ್ಮದಲ್ಲಿ ನಡೆಯುವಾತನು ದಾನ ಪೂಜೆ ಶೀಲ ಉಪವಾಸಗಳನ್ನು ಕುಂದುಬಾರದ ರೀತಿಯಲ್ಲಿ ಸುವ್ರತವರ್ಧಮಾನನಾಗಿ ದೃಢಾಚಾರದಿಂದ, ಹಡಗನ್ನು ಹೇಗೆ ಸಮುದ್ರಮಧ್ಯದಲ್ಲಿ ನಡೆಸುವರೋ ಹಾಗೆ, ಅದರಲ್ಲಿ ದುಶ್ಶಂಕೆಯೆಂಬ ಕಳ್ಳರು ಹೊಗದ ಹಾಗೆ, ದುರಾಚಾರವೆಂಬ ತೆರೆಗಳನ್ನು ನಿವಾರಿಸಿಕೊಳ್ಳುತ್ತ, ಕೆಟ್ಟ ಕಾರ್ಯವೆಂಬ ಮೊಸಳೆಯನ್ನು ತೊಲಗಿಸಿ, ಸಂಶಯವೆಂಬ ಮಹಾ ಮೀನನ್ನು ದೂರ ತಳ್ಳಿ, ಮಿಥ್ಯಾತ್ವವೆಂಬ ನೆಗಳಿಗೆ ಸಿಕ್ಕದೆ, ತುಪ್ಪವನ್ನು ಕಾಸುವವಳಂತೆ ಚಿತ್ತಚಾಂಚಲ್ಯಕ್ಕೆ ಅವಕಾಶವೀಯದೆ, ಜಿನಾಗಮದ ರೀತಿಯಲ್ಲಿ ನಡೆದು, ಸಂಸಾರಸಮುದ್ರವನ್ನು ಉಪಾಯದಿಂದ ದಾಟಬೇಕು.

"ನಯವಾಗಿ ಸೇರಿಕೊಂಡು ಪಿಸುಗುಡುವ, ಲಲ್ಲೆ ಮಾತನ್ನಾಡುವ, ಬೇರೆಯವರನ್ನು ದೂರುವ, ನಾನಾ ಹೀನಕೆಲಸಗಳನ್ನು ಕಲಿಸುವ ಮುನಿಯ ಮಾತುಗಳನ್ನು ಜಾಣನಾದವನು ಕೇಳಬಾರದು. ಬೇರೆಯವರನ್ನು ದೂಷಿಸುವವರಲ್ಲಿ, ಸರಿಯಾದ ರೀತಿಯಲ್ಲಿ ಮಾತನಾಡದವರಲ್ಲಿ, ಆಗಮದ ಅರ್ಥವನ್ನು ತಿಳಿಯದವರಲ್ಲಿ, ಮೇಲಾಟ ನಡೆಸುವವರಲ್ಲಿ ಧರ್ಮವನ್ನು ಕೇಳಬಾರದು. ಆಗಾಗ್ಗೆ ಚಿಂತನೆ ನಡೆಸುತ್ತ, ತನ್ನ ತಪಸ್ಸಿನ ಬೆಲ್ಲವನ್ನು ಎಲ್ಲರಿಗೂ ಹಂಚುವ ರೀತಿಯಲ್ಲಿ ಮಾತನಾಡುವ ಒಳ್ಳೆಯವರಲ್ಲಿ ಮಾತ್ರ ಧರ್ಮಶ್ರವಣವನ್ನು ಮಾಡಬೇಕು. ಸತ್ವವಿಲ್ಲದೆ ಬರೀ ಮಾತಿನಲ್ಲಿ ಬಲ್ಲಿದರಾದವರಲ್ಲಿ, ಪಕ್ಷಪಾತವಿಲ್ಲದೆ ಗುಣದಲ್ಲಿ ಹಿರಿಯರೆನಿಸಿ ಕೊಂಡವರಲ್ಲಿ, ಪಾಪಸಂಕುಲವನ್ನು ನಿವಾರಿಸಿಕೊಂಡವರಲ್ಲಿ ಆಗಮದ ಬಗ್ಗೆ ಮಾತುಗಳನ್ನು ಕೇಳಬೇಕು. ಜಿನಾಲಯಗಳ್ಲಿ ಹಿರಿಯರೆನಿಸಿಕೊಂಡ, ಭವ್ಯರ ಸಮೂಹದಲ್ಲಿ ಆದರವನ್ನು ತಳೆದ ತತ್ವವಿದರಲ್ಲಿ ಸೌಖ್ಯವನ್ನು ಬಯಸುವವನು ಜಿನಮತದ ಬಗ್ಗೆ ಕೇಳಿ ತಿಳಿದುಕೊಳ್ಳಬೇಕು. ಜಿನಾಗಮಗಳ ಅರ್ಥಸಂಬಂಧವನ್ನು ತಿಳಿಯದೆ ತಾನೇ ದೇವರೆಂದು ದುರಾಗ್ರಹದಿಂದ ತನ್ನ ಡೊಳ್ಳು ಹಾಗೂ ಹೊರಗಿನ ದೇಹಕ್ಲೇಶವನ್ನು ತೋರಿಸಿಕೊಂಡು, 'ಹಾವನ್ನು ಹೆತ್ತವರು ಬೇಲಿಯನ್ನು ಹೊಕ್ಕರು' ಎಂಬಂತೆ, ತಾವು ಹೇಳಿದ್ದನ್ನೇ ಕೊನೆಯವರೆಗೂ ಸಾಧಿಸಿ ಬಾಯಿಬಡಿಯುತ್ತ, ಹಸುಕರುವನ್ನು ಎಮ್ಮೆಗೆ ಬಿಟ್ಟು, ಎಮ್ಮೆಯ ಕರುವನ್ನು ಹಸುವಿಗೆ ಬಿಡುವಂತೆ, ಏನಾದರೂ ಬಾಯಿಗೆ ಬಂದದ್ದನ್ನು ಹೇಳುವವರಲ್ಲಿ ಸೂಕ್ಷ್ಮಮತಿಯುಳ್ಳವನು ಜಿನತತ್ವವನ್ನು ಕೇಳಬಾರದು. ಇದು ಇಲ್ಲಿಗೆ ಸರಿ, ತಕ್ಕುದು, ಎಂದು ಸೂತ್ರಾರ್ಥವನ್ನು ವಿರೋಧವಿಲ್ಲದೆ ಹೇಳುವವರಲ್ಲಿ ಜಿನಾಗಮದ ವಿಶ್ಲೇಷಣೆಯನ್ನು ಕೇಳಬೇಕು. ಕೇಳುವವನೂ ಪರಿಣತನಾಗಿ ಆಲಿಸಬೇಕು. ಕುಣಿತವನ್ನು ನೋಡಲು ಹೋದವನು 'ಇವತ್ತು ಕುಣಿಯುವುದಿಲ್ಲ' ಎಂದು ಮುಂದಿನವನು ಹೇಳಿದರೆ ವಾಪಸಾಗುವವನಂತೆ ಮಾಡಬಾರದು. ತಲೆ ಎಂದರೆ ತಳೆ ಎಂದೂ, ಹುಲ್ಲೆ ಎಂದರೆ ಹುಲಿ ಎಂದೂ ಅಪಾರ್ಥ ಮಾಡಿಕೊಳ್ಳದೆ ಕೇಳಬೇಕು.

"ಶ್ರಾವಕನಾದವನು ನಾಲ್ಕು ಧರ್ಮಗಳನ್ನೂ ಸದ್ಭಾವದಿಂದ ಪಾಲಿಸಬೇಕು. ಭಾವಕನೆನ್ನಿಸಿಕೊಳ್ಳುವ ಮುನಿಯು ದಯೆಯಿಂದ ದೂರ ಸರಿಯದೆ ನಡೆದುಕೊಳ್ಳಬೇಕು. ಮುನಿಯಾದವನು ತನ್ನ ದುರ್ಧರ ತಪಸ್ಸು ಮತ್ತು ಮನಃಕಷಾಯವಿಲ್ಲದಿರುವುದರಿಂದ ಸಂಯಮಿಯಾಗಬೇಕು; ಪರಮಶ್ರಾವಕನೆನಿಸಿ ಕೊಳ್ಳುವವನು ದಾನಾದಿಗಳನ್ನು ಮಾಡಿ ಒಳ್ಳೆಯವನೆನಿಸಿಕೊಳ್ಳಬೇಕು. ಸೂರ್ಯನಿಗೆ ಹೇಗೆ ತೀವ್ರ ಶಾಖವು ಒಪ್ಪುವುದೋ ಹಾಗೆಯೇ ತಪಸ್ವಿಗಳಿಗೆ ನಿಸ್ಪೃಹತ್ವ ಮತ್ತು ಸಂಯಮಗಳು ಶೋಭಿಸುತ್ತವೆ. ಚಂದ್ರನಿಗೆ ಶೀತಲತೆಯು ಒಪ್ಪುವಂತೆಯೇ ಉಪಾಸಕನಿಗೆ ಮಹೋನ್ನತಿಕೆಯ ದಾನವು ಒಪ್ಪುವುದು. ದಾನ, ಪೂಜೆಗಳಿಂದ ಉಪಾಸಕನು ಒಳ್ಳೆಯವನೆನಿಸಿಕೊಳ್ಳುವಂತೆ ಮುನಿಪನು ಧ್ಯಾನ, ಸಂಯಮಗಳಿಂದ ಅಧಿಕನೆನಿಸಿಕೊಳ್ಳುತ್ತಾನೆ. ಎತ್ತಿಗೆ ಹಿಣಿಲು ಒಪ್ಪುವಂತೆ ಕೆಚ್ಚಲು ಒಪ್ಪದು; ಹಸುವಿಗೆ ಕೆಚ್ಚಲು ಒಪ್ಪುವಂತೆ ಹಿಣಿಲು ಒಪ್ಪದು. ಗಂಡಸಿಗೆ ಗಡ್ಡಮೀಸೆಗಳು ಒಪ್ಪುವಂತೆ ಮೊಲೆಗಳು ಒಪ್ಪುವುದಿಲ್ಲ; ಹೆಂಗಸರಿಗೆ ಮೊಲೆಗಳು ಒಪ್ಪುವಂತೆ ಗಡ್ಡಮೀಸೆಗಳು ಒಪ್ಪಲಾರದು. ಹಾಗೆಯೇ ಗೃಹಸ್ಥನಿಗೆ ದಾನಧರ್ಮಗಳು ಒಪ್ಪುತ್ತವೆಯೇ ಹೊರತು ತಪಾಚರಣೆ ಒಪ್ಪದು. ತಪಸ್ವಿಗಾದರೋ ದಾನ, ಅಧ್ಯಯನ, ಸಂಯಮ ಮುಂತಾದವು ಒಪ್ಪುತ್ತವೆಯೇ ವಿನಾ ಗೃಹಸ್ಥಾಚರಣೆ ಒಪ್ಪದು. ಆದ್ದರಿಂದ ತಮ್ಮ ತಮ್ಮ ಮೇರೆಯನ್ನು ಯಾರೂ ಮೀರಬಾರದು.

"ದೀಪವೂ ಬೆಂಕಿ, ಇನ್ನು ಬೆಂಕಿಯಂತೂ ಬೆಂಕಿಯೇ; ಈ ಎರಡಕ್ಕೂ ಗಾಳಿ ನಂಟನಾದರೂ ಗಾಳಿ ಕೆರಳಿದಾಗ ದೀಪ ಆರಿದ ಹಾಗೆ ಬೆಂಕಿಯೇಕೆ ಆರದು? ಹಾಗೆಯೇ ತಪಸ್ವಿಗಳ ಆಚಾರ ಅಣುವ್ರತಿಗಳಿಗೆ ಸರಿಹೊಂದದು; ಅಣುವ್ರತಿಗಳಿಗೆ ಅಳವಡುವ ಆಚಾರ ತಪಸ್ವಿಗಳಿಗೆ ಸರಿಹೊಂದದು. ಈ ಮುಂಚೆ ದಾನ, ಪೂಜೆ, ಶೀಲ, ಉಪವಾಸಗಳಿಂದ ಅನಂತಸುಖವನ್ನು ಪಡೆದ ಶ್ರೀಷೇಣ ಮಹಾರಾಜ, ಧನ್ಯಕುಮಾರ, ಕರಿಕಂಠ ಮಹಾರಾಜ, ಸೌಧರ್ಮೇಂದ್ರ, ಸೀತಾದೇವಿ, ಮಹಾದೇವಿ, ನಾಗಕುಮಾರ, ಯೋಧನಮುಂಡನ, ಇವರ ಕತೆಗಳನ್ನು ಕೇಳಿ ನಂಬಿಕೆಯಿಂದ ದಾನಾದಿ ಧರ್ಮದಲ್ಲಿ ನಡೆದುಕೊಳ್ಳಬೇಕು. ದಾನಾದಿಗಳನ್ನು ಮಾಡಲಾರದ ಜಿಪುಣನು ತಾನು ಮುನಿಯಾಗುತ್ತೇನೆಂದು ಬರೀ ಮೌನಧಾರಣೆ

ಮಾಡಿದರೆ ಅಕ್ಷಯಸೌಖ್ಯವು ಉಂಟಾಗದು. ಶಾಂತಿನಾಥ ತೀರ್ಥಂಕರನು ತಾನು ಸಿರಿಷೇಣ ಮಹಾರಾಜನಾಗಿದ್ದ ಭವದಲ್ಲಿ ಸಂತೋಷದಿಂದ ದಾನ ಮಾಡಿದ್ದರಿಂದ ಹಿರಿದುನ್ನತಿಯಾಗಿ ಅದರ ಫಲವಾಗಿ ನಿರ್ವಾಣಲಕ್ಷ್ಮಿಯ ಒಲವಿಗೆ ಪಾತ್ರನಾದ; ಆದ್ದರಿಂದ ಸುಜನರು ದೃಢಚಿತ್ತರಾಗಿ ಪ್ರೀತಿಯಿಂದ ದಾನಗೈಯಲಿ. ಹೀಗೆ ದಾನಚತುಷ್ಟಯದಿಂದ ಪುಣ್ಯಬಂಧವುಂಟಾಗುತ್ತದೆ, ಅದರಿಂದ ಕ್ರಮೇಣ ನಿರ್ವಾಣ ಸಾಮ್ರಾಜ್ಯವೂ ಲಭಿಸುತ್ತದೆ ಎಂಬುದನ್ನು ಶಾಂತಿನಾಥ ತೀರ್ಥಂಕರನ ಕತೆಯಿಂದ ತಿಳಿಯಬೇಕು, ಅವರಿವರ ಮಾತು ಕೇಳಿ ದಾನ ಮಾಡುವುದರಿಂದ ಆಗುವ ವ್ಯಯದ ಬಗ್ಗೆ ಮರುಗಬಾರದು.

"ತಪಸ್ಸು ಮಾಡುವುದಕ್ಕೆ ಬೇಸತ್ತು, ಉಪವಾಸಗೈಯಲು ಅಲಸಿ, ಕೇವಲ ಚಪಲತೆಯಿಂದ ಮನಸ್ಸಿನಲ್ಲಿ ಆಗಮವನ್ನು ಹಗಲುರಾತ್ರಿ ಜಪಿಸುವ ಮುನಿಗೆ ನಿರ್ವೃತಿಯು ದೂರವೇ ಉಳಿಯುವುದು. 'ನಮ್ಮ ಸೆಟ್ಟಿಯ ಮಾತು ಒಳ್ಳೆಯವು, ಆದರೆ ಬಳ್ಳ ಕಿರಿದು' ಎಂಬ ಹಾಗೆ ಮಾಡದೆ, ಮೊದಲ ತೀರ್ಥಂಕರನಂತೆ ಶರೀರವ್ಯಾಮೋಹವನ್ನು ಬಿಟ್ಟು, ಸನತ್ಕುಮಾರಮುನಿಯಂತೆ ಜಿಹ್ವಾಲಂಪಟತೆಯಿಲ್ಲದೆ, ಬಾಹುಬಲಿಯಂತೆ ನಿಂತ ಜಾಗವನ್ನು ಬಿಡದೆ, ಗುರುದತ್ತಮುನಿಯಂತೆ ಘೋರ ಉಪಸರ್ಗಗಳಿಗೆ ತಲ್ಲಣಿಸದೆ, ಕುಮಾರಸ್ವಾಮಿಯಂತೆ ಚಿತ್ತದಲ್ಲಿ ಅಳುಕಿಲ್ಲದೆ ಧೈರ್ಯದಿಂದ ಕೂಡಿದ್ದರೆ ಕೇವಲಧ್ಯಾನವು ಶೋಭಿಸುತ್ತದೆ. ಈ ಕಾಲದವರು ದರ್ಶನಶುದ್ಧರಾಗಿ ತಪಸ್ಸಿನಲ್ಲಿ ನಿರತರಾಗಬೇಕು.

"ದೇವದೇವನೂ ಪರಹಿತಚರಿತನೂ ವಿಶ್ವಲೋಕಕ್ಕೆ ಒಡೆಯನೂ ಆದ ಪುರುದೇವನು ಖೇಚರನಾಗಿದ್ದ ಕಾಲದಲ್ಲಿ ಮಾಡಿದ ತಪಸ್ಸಿನ ಪುಣ್ಯಬಲದಿಂದ ಸ್ವರ್ಗಸೌಖ್ಯವು ಕೈಸಾರಿತು, ದೀಪ್ತಿಯುಕ್ತವಾದ ಅಕ್ಷಯಲಕ್ಷ್ಮಿಯನ್ನು ಆತನು ಸೇರಿದ. ಮಾಯೆಯಿಂದ ಆಗದ ತಪಸ್ಸನ್ನು ನಿರ್ಮಾಯೆಯಿಂದ ಮಾಡಬೇಕು. ಇಂತಹ ತಪಸ್ಸಿನಿಂದ ಪುಣ್ಯಪ್ರಾಪ್ತಿಯುಂಟಾಗುತ್ತದೆ; ಆ ಪುಣ್ಯದಿಂದ ನಿಧಾನವಾಗಿ ಮೋಕ್ಷಲಕ್ಷ್ಮಿಯನ್ನು ಸೇರಬಹುದು, ಎಂಬ ಸಂದೇಶವನ್ನು ಆದಿ ತೀರ್ಥಂಕರನ ಕತೆಯಿಂದ ತಿಳಿಯಹುದು. ಸೋಮಾರಿಗಳ ಮಾತು ಕೇಳಿ ತಪಸ್ಸಿನ ಆಯಾಸಕ್ಕೆ ಹೆದರಬೇಡ. ರಾತ್ರಿಯಲ್ಲಿ ಚಂದ್ರನು ಉದಿಸುವುದೂ, ಹಗಲಿನಲ್ಲಿ ಸೂರ್ಯನು ಹುಟ್ಟುವುದೂ ಪವಾಡವಲ್ಲ; ರಾತ್ರಿಯಲ್ಲಿ ಸೂರ್ಯ ಹುಟ್ಟಿದರೆ, ಹಗಲಿನಲ್ಲಿ ಸೂರ್ಯೋದಯವಾದರೆ ಆಗ ಅದನ್ನು ಅದ್ಭುತವೆನ್ನಬಹುದು. ಆದ್ದರಿಂದ ಕೇವಲಧ್ಯಾನವೆಂಬುದು ಹಿಂದೆ ಆಗಿ ಹೋದ ಮಹಾಪುರುಷರಿಗೆ ಸಾಧ್ಯವಾಗುವಂಥದೇ ಹೊರತು ಈಗಿನ ಕಾಲದವರಿಗೆ ಸಾಧ್ಯವಲ್ಲ. ಜಿನವಚನಗಳಿಗೆ ಅನುಗುಣವಾಗಿ ಮನಸ್ಸನ್ನು ಸಂತವಿಟ್ಟು, ದುರ್ಮಾರ್ಗವನ್ನು ಬಿಟ್ಟು ಆದಷ್ಟೂ ಒಳ್ಳೆಯ ವ್ರತಗಳ ಮೂಲಕ ತಪಸ್ಸನ್ನೂ ದಾನವನ್ನೂ ಮಾಡಬೇಕು." ಯತಿಧರ್ಮ ಹಾಗೂ ಶ್ರಾವಕಧರ್ಮವನ್ನು ಜಿನೇಂದ್ರಸೆಟ್ಟಿಯು ಹೀಗೆ ಸಂಕ್ಷೇಪವಾಗಿ ಹೇಳಲು ಸೂರ್ಪನು ವಿನಯದಿಂದ ಕೇಳಿದ. ಅವನಿಗೆ ತಪಸ್ಸಿನಲ್ಲಿ ತೀವ್ರ ಸೆಳೆತವುಂಟಾಯಿತು, ಸಂಸಾರದ ಬಗ್ಗೆ ಹೇಸಿಕೆಯೆನಿಸಿತು. ಹೀಗಾಗಿ ಅವನು ಜಿನದೀಕ್ಷೆಯನ್ನು ಕೈಕೊಂಡು ಉಗ್ರ ತಪಸ್ಸಿನಲ್ಲಿ ತೊಡಗಿದ. ಕಡೆಯಲ್ಲಿ ಸಮಾಧಿಮರಣದಿಂದ ಸತ್ತು ದೇವಗತಿಯನ್ನು ಪಡೆದ. ಸಮ್ಯಕ್ತ್ವಚೂಡಾಮಣಿಯ ಉಪಗೂಹನದ ಫಲದಿಂದಾಗಿ ಅವನು ಇಹಲೋಕದ ಕೀರ್ತಿ ಹಾಗೂ ಪರಲೋಕದ ಸೌಖ್ಯಗಳಿಗೆ ಭಾಜನನಾದ.

ಹೀಗೆ ಪರಮಶ್ರಾವಕನೆನಿಸುವ ಪುರುಷನು ತನ್ನ ಕಣ್ಣಾರೆ ಮುನಿಯ ಕೆಟ್ಟ ಕೆಲಸಗಳನ್ನು ವಿವರವಾಗಿ ಕಂಡರೂ ಅದನ್ನು ನಯವಾಗಿ ದೂರಸರಿಸಬೇಕು. ಸಮುದ್ರದಲ್ಲಿ ಕಪ್ಪೆ ಸತ್ತರೆ ಕಡಲ ನೀರೆಲ್ಲ ದುರ್ಗಂಧಮಯವಾಗುವುದೇ? ಹಾಗೆಯೇ ಕೊಳಕನಾದ ಒಬ್ಬನಿಂದಾಗಿ ಸದ್ಧರ್ಮವು ಮಾಲಿನ್ಯವನ್ನು ಹೊಂದುವುದೇ? ಭವ್ಯನಾದವನು ಉಪಗೂಹನವನ್ನು ಕೈಗೊಂಡು, ವಿಪರೀತದ ಧರ್ಮವನ್ನು ಬಿಟ್ಟು, ಜಿನನ ಪಾದಾಂಬುಜಗಳನ್ನು ಅಪವರ್ಗದ ದಾರಿ ಎಂದು ಅವಲಂಬಿಸಬೇಕು. ಹೀಗೆ ಗೌತಮಸ್ವಾಮಿಗಳು ಉಪಗೂಹನಕ್ಕೆ ಸಂಬಂಧಿಸಿದ ಕತೆಯನ್ನು ಮುಗಿಸಿದರು. ಲೋಕಪ್ರಖ್ಯಾತ ಕೀರ್ತಿಧ್ವಜನೂ, ನಿರ್ಮಲ ಯಶೋವಂತನೂ, ಸತ್ಯಸಮುದ್ರನೂ, ಕಾಮವೆಂಬ ಮೋಡಸಂಕುಲಕ್ಕೆ ಬಿರುಗಾಳಿಯಂತಹವನೂ, ಪಾಪನಿವಾರಕನೂ ಆದ ಗೌತಮಸ್ವಾಮಿ ಪ್ರೀತಿಯಿಂದ ಹೇಳಿದ ಕತೆಯನ್ನು ತ್ರೈವಿದ್ಯಚಕ್ರೇಶ್ವರನ ಪರಿಶುದ್ಧ ಪಾದಕಮಲಗಳಲ್ಲಿ

ದುಂಬಿಯಂತೆ ವಿಹರಿಸುವವನೂ, ವಿನಯಶ್ರೇಷ್ಠನೂ, ಸುಕವಿಜನಮನಃಪದ್ಮಿನೀ ರಾಜಹಂಸನೂ ಆದ ಶ್ರೇಣಿಕ ಮಹಾರಾಜನು ಚಿತ್ತೋತ್ಸಾಹದಿಂದ ಕೇಳಿ ಸಂತೋಷಭರಿತನಾದ. *

ಸ್ಥಿತಿಕರಣ

ಉಪಗೂಹನವೆಂಬುದು ಮೋಕ್ಷಲಕ್ಷ್ಮಿಗೆ ಮಣಿಹಾರದಂತೆ ಎಂಬ ನಂಬಿಕೆಯು ಸುಕವಿನಿಕರಪಿಕಮಾಕಂದನಿಗುಂಟಾಯಿತು. ಅದರ ಕತೆಯನ್ನು ಕೇಳಿ ಸಂತಸಗೊಂಡ ಮಹಾರಾಜನು ಉತ್ಸಾಹದಿಂದ ಗಣಧರಸ್ವಾಮಿಗಳ ಅಡಿದಾವರೆಗಳಿಗೆ ಮರಿದುಂಬಿಯಂತೆ ಎರಗಿ, ಕೈಮುಗಿದು ತಲೆಬಾಗಿ, "ಸ್ಥಿತಿಕರಣದ ಕತೆಯನ್ನು ತಿಳಿಯುವಂತೆ ಕೃಪೆ ಮಾಡಿ ಬೆಸಸಬೇಕು" ಎಂದು ಕೇಳಿಕೊಂಡ. ಆಗ ಗಣಧರಸ್ವಾಮಿಗಳು ಕೈವಲ್ಯಲಕ್ಷ್ಮಿಯ ನಚ್ಚಿನ ಆಭರಣವಾದ ಸ್ಥಿತಿಕರಣದ ಕತೆಯನ್ನು ಹೇಳಲು ತೊಡಗಿದರು.

ಅಗ್ನಿಯಂತೆ, ಮದದಾನೆಯಂತೆ, ದಾರದಂತೆ, ಕುಲಶೈಲದಂತೆ, ಜಂಬೂದ್ವೀಪದಂತೆ, ಸಪ್ತಸ್ವರದಂತೆ, ಮಾಳವದಂತೆ, ದೇವೇಂದ್ರನ ಬರವಿನಂತೆ, ರಾಜ್ಯದಂತೆ, ಕಮಠೋಪಸರ್ಗಕ್ಕೆ ಬಂದ ಧರಣೇಂದ್ರನಂತೆ ದರ್ಶನ ನಿಶ್ಶಂಕೆ ನಿಷ್ಕಾಂಕ್ಷೆ ನಿರ್ವಿಚಿಕಿತ್ಸೆ ಅಮೂಢದೃಷ್ಟಿತ್ವ ಉಪಗೂಹನ ಸ್ಥಿತಿಕರಣ ಎಂಬ ಈ ಏಳೂ ಶೋಭಿಸುತ್ತವೆ. ಸ್ಥಿತಿಕರಣವೆಂಬುದು ಸರಸ್ವತಿಯ ಮತಿ, ಕೀರ್ತಿಲಕ್ಷ್ಮಿಯ ನಿಲಯ, ಮೋಕ್ಷಲಕ್ಷ್ಮಿಯ ಮಣಿಹಾರ ಎಂಬಂತೆ ಭವ್ಯನು ಮನಸ್ಸಿನಲ್ಲಿ ಭಾವಿಸಬೇಕು. ಅದರ ವೈಭವ ಎಂತಹುದೆಂದರೆ, ಕಮಲದಂತೆ ಕಣ್ಣುಳ್ಳವಳೂ, ಸುಂದರಶರೀರೆಯೂ, ಪವಿತ್ರ ಕುಲದವಳೂ, ಮದಗಜದಂತೆ ನಡಿಗೆಯುಳ್ಳವಳೂ, ಶೀಲಗುಣಗಳನ್ನು ಹೊಂದಿದವಳೂ, ಸಚ್ಚಾರಿತ್ರವೆಂಬ ನಿಧಿ ಪಡೆದವಳೂ, ಜಿನೇಶ್ವರನ ಭಕ್ತೆಯೂ, ಸರ್ವಗುಣಸಂಪನ್ನೆಯೂ, ಚಂದ್ರನಂತೆ ಮುಖವುಳ್ಳವಳೂ, ಮಾನವರಿಂದ ಸ್ತುತಿಸಲ್ಪಡುವವಳೂ ಆದ ಚೇಳಿನೀದೇವಿಯು ಭೂಮಂಡಲದಲ್ಲಿ ಸುಪ್ರಸಿದ್ಧಳು. ಅವಳು ರೂಪದಲ್ಲಿಯೂ, ಜಿನಭಕ್ತಿಯಲ್ಲಿಯೂ, ವಿನಯದಲ್ಲಿಯೂ ರತಿದೇವಿ, ಶಚೀದೇವಿ, ರೋಹಿಣಿಯರಿಗಿಂತ ನೂರ್ಮಡಿ ಎನಿಸಿದ್ದಳು. ಸತ್‌ಶೀಲಕ್ಕೂ, ಒಳ್ಳೆಯ ಬುದ್ಧಿಗೂ, ವಿಲಾಸಕ್ಕೂ ಅವಳು ಸೀತೆ, ಭಾರತಿ, ಮಹಾಲಕ್ಷ್ಮಿ, ತಿಲೋತ್ತಮೆಯರಿಗೆ ಸಾವಿರ ಪಟ್ಟು ಹೆಚ್ಚು ಎನಿಸಿದ್ದಳು. ಚೇಳಿನೀದೇವಿಯು ದಯೆಯ ತವರುಮನೆ, ಭವ್ಯಜನಗಳಿಗೆ ಬೇಕಾದವಳು, ಎಲ್ಲ ಜನರ ಪ್ರೀತಿಯನ್ನು ಗಳಿಸಿದವಳು, ಜಿನನ ಪಾದಯುಗ್ಮಗಳೆಂಬ ತಾವರೆಯಲ್ಲಿ ವಿಹರಿಸುವ ದುಂಬಿ, ನಯವಂತಳು, ಇಡೀ ಜಗತ್ತಿನ ಗೌರವಕ್ಕೆ ಭಾಜನಳಾದವಳು.

ಇಂತಹ ಚೇಳಿನೀದೇವಿಗೂ ಶ್ರೇಣಿಕ ಮಹಾರಾಜನಾದ ನಿನಗೂ ಮೂಡಲಗಿರಿಯಲ್ಲಿ ನೇಸರುದಯಿಸುವಂತೆ ಸಕಲಗುಣಗಳ ಆವಾಸಸ್ಥಾನವೂ, ಹಬ್ಬಿದ ಯಶಸ್ಸುಳ್ಳವನೂ ಆದ ವಾರಿಷೇಣನೆಂಬ ಒಬ್ಬ ಮಗನು ಹುಟ್ಟಿದನು. ಅವನು ಸದ್ಗುಣನಿಧಿಯಾಗಿ, ಪ್ರಖ್ಯಾತನಾಗಿ, ಜಗತ್ತಿನ ಗೌರವಕ್ಕೆ ಪಾತ್ರನಾಗಿ, ನೀತಿವಿದನಾಗಿ, ಭವ್ಯಜನರ ಪ್ರೀತಿಗೆ ಪಾತ್ರನಾಗಿ, ಜಿನಸಮಯವೆಂಬ ಸಮುದ್ರಕ್ಕೆ ಚಂದ್ರನಾಗಿ ಬೆಳೆದ. ದೃಢಚಿತ್ತನೂ ಗುಣನಿಲಯನೂ ಕಡುಗಲಿಯೂ ಆದ ಭವ್ಯಜನಸರೋವರದ ಕಲಹಂಸನಾದ ವಾರಿಷೇಣನು ಎಳೆಯ ವಯಸ್ಸಿನಲ್ಲಿ ದಿವ್ಯಮುನಿಗಳ ಅಡಿಗಳನ್ನು ಹಿಡಿದು ನಡೆಯುವುದನ್ನು ಕಲಿತ. ಹಿಂಜರಿಯದೆ ಮಿಥ್ಯಾತ್ವವನ್ನು ಬಿಡು, ಉದಾರಚಿತ್ತನಾಗಿ ಸಮ್ಯಕ್ತ್ವವನ್ನು ಹಿಡಿ ಎಂಬ ನುಡಿಗಳನ್ನು ಆಡುತ್ತ ಸುಕವಿನಿಕರಪಿಕಮಾಕಂದನು ಮಾತನ್ನು ಕಲಿತ. ಬಟ್ಟೆ ತೊಡುವುದನ್ನು ಕಲಿತ ಕಾಲದಿಂದಲೂ ಬಿಡದೆ ಜಿನಾಗಮವನ್ನು ಓದುವ ಕೇಳುವ ಜಿನಮುನಿಗಳ ಸಹವಾಸದಲ್ಲಿಯೇ ವಿವೇಕಿಯಾಗಿ ಹೊತ್ತು ಕಳೆಯುವನು. ವಾರಿಷೇಣನ

ವ್ಯಸನವೆಂದರೆ ಭವ್ಯರ ಗೋಷ್ಠಿಯ ತಪಸ್ಸು, ದಿವ್ಯರಾದವರ ಪಾದಸೇವೆ, ಜೈನ ಸತ್ಕಾವ್ಯಗಳ ಕುರಿತ ಚಿಂತನೆ – ಇವುಗಳೇ. ಹಾಗೆ ಗುಣಗಣನಿಲಯ, ವಿನಯನಿಧಿ, ಜಿನಪಾದಪದ್ಮಮಧುಪ, ಜಿನಾಗಮಘನಾಗಮಮಯೂರ, ಪಾಪಿಗಜಸಿಂಹ ಎನ್ನಿಸಿಕೊಂಡು ವಾರಿಷೇಣಕುಮಾರನು ಸುಖಸಂಕಥಾವಿನೋದದಿಂದ ಯುವರಾಜ್ಯ ಪದವಿಯನ್ನು ಅನುಭವಿಸುತ್ತಿದ್ದನು.

ಅಷ್ಟರಲ್ಲಿ, ವಿಮಲಗುಣಾಕ್ಷರರೂ, ಸಕಲಾಗಮಯುಕ್ತರೂ, ಮುನಿಜನ ಅನುರಾಗರೂ, ಪಾಪವೆಂಬ ಕತ್ತಲೆಗೆ ಸೂರ್ಯನಂತಹವರೂ, ಅಗಣಿತಚರಿತರೂ, ಜೀವೋಪಕಾರಿಗಳೂ, ದಯಾನಿಧಿಗಳೂ ಆದ ಮುಂಡಿಯ ಪುತ್ರಾಚಾರ್ಯರು 'ಗ್ರಾಮಯೇಕ ರಾತ್ರಂ, ನಗರೇ ಪಂಚರಾತ್ರಂ, ಅಟವ್ಯಾಂ ದಶರಾತ್ರಂ' ಎಂಬ ಪೂರ್ವವಾಕ್ಯಕ್ಕೆ ಅನುಗುಣವಾಗಿ ವಿಹರಿಸುತ್ತ ನಿನ್ನ ಊರಿಗೆ ಬಂದು, ಊರಿನ ಪೂರ್ವ ದಿಕ್ಕಿನ ಬಾಳಾಹಕವೆಂಬ ಪರ್ವತದಲ್ಲಿ ನಿಂತರು. ಆ ಮುನಿಗಳು ನಗರಕ್ಕೆ ಬಂದಿರುವುದನ್ನು ಋಷಿನಿವೇದಕನು ನಿನಗೆ ಅರುಹಿದ. ತಕ್ಷಣವೇ ನೀನು ಪ್ರೀತಿಯಿಂದ ಆ ಮುನಿಶ್ರೇಷ್ಠರಿದ್ದ ದಿಕ್ಕಿಗೆ ಏಳು ಅಡಿಗಳನ್ನಿಟ್ಟು, ಕೈಮುಗಿದು ಋಷಿನಿವೇದಕನಿಗೆ ತುಷ್ಟಿದಾನವನ್ನಿತ್ತೆ. ಆನಂತರ ಆನಂದಭೇರಿಯನ್ನು ಹೊಡೆಸಿ ಚೇಳಿನೀ ಮಹಾದೇವಿ ಮುಂತಾದ ಎಂಟು ಸಾವಿರ ಅರಸಿಯರು, ವಾರಿಷೇಣ ಮುಂತಾದ ಕುಮಾರರು, ಎಂಟು ಸಾವಿರ ಮಂದಿ ಮಕುಟವರ್ಧರು ಹಾಗೂ ನಗರದ ಶ್ರಾವಕರೊಡನೆ, ಕಮಲಗಳಿಗೆ ಆಶಿಸಿ ದುಂಬಿಗಳು ಹಾರಿ ಬರುವ ಹಾಗೆ ನೀನು ದಿವ್ಯರಾದ ಮುನಿಗಳ ಪಾದಕಮಲಗಳನ್ನು ಕಾಣುವ ಹಂಬಲದಿಂದ ಅರಮನೆಯಿಂದ ಹೊರಟೆ.

ಬಾಳಾಹಕಪರ್ವತದಲ್ಲಿ ಮುಂಡಿಯಪುತ್ರ ಮುನಿವರ್ಯರ ಪಾದಗಳನ್ನು ತಾವರೆ ಮುಂತಾದ ಹೂಗಳಿಂದ ಅರ್ಚಿಸಿ, ಭಕ್ತಿಯಿಂದ ಸ್ವಲ್ಪ ಹೊತ್ತು ಧರ್ಮಶ್ರವಣ ಮಾಡಿ, ಮತ್ತೆ ಮುನಿಪುಂಗವರಿಗೆ ನಮಸ್ಕರಿಸಿ ಅರಮನೆಗೆ ವಾಪಸಾದೆ. ನಿನ್ನ ಜೊತೆಗೆ ಬಂದಿದ್ದವರೂ ವಾಪಸಾದರು. ಆದರೆ ವಾರಿಷೇಣಕುಮಾರನೊಬ್ಬನು ಮಾತ್ರ ಮುನಿನಾಥರನ್ನು ಬಿಟ್ಟು ಬರಲಾರದೆ ಹಿಂದೆ ಉಳಿದ. ಕಡು ಜಿಪುಣನು ಕೊಪ್ಪರಿಗೆಯಲ್ಲಿನ ಹೊನ್ನನ್ನು ಕಂಡು ಅದನ್ನು ಒಂದೇ ಸಮನೆ ನೋಡುವ ಹಾಗೆ ವಾರಿಷೇಣನು ಮುನಿಗಳನ್ನು ಎವೆಯಿಕ್ಕದೆ ನೋಡುತ್ತ ಕುಳಿತ. ಪ್ರೀತಿಯಿಂದ ಮುನಿಗಳನ್ನು ನೋಡುತ್ತಿದ್ದ ಅವನಿಗೆ ತಂಗಾಳಿ ಬೀಸಿದಾಗ ಎಳೆಯ ಬಳ್ಳಿಗಾಗುವಂತೆ ಉತ್ಸಾಹ ಹೆಚ್ಚಿತು. 'ಉತ್ಸಾಹದಿಂದ ಸದಾ ಹಗಲಿರುಳು ನಿತ್ಯವೂ ಜಿನಪದ ಮತ್ತು ಜಿನಮತಗಳ ಬಗ್ಗೆ ಚಿಂತನೆ ಮಾಡುವವನೇ ಕೃತಾರ್ಥ' ಎಂಬ ಭಾವನೆ ಅವನ ಮನಸ್ಸಿನಲ್ಲಿ ಮೂಡಿತು. ಹೀಗೆ ವಾರಿಷೇಣನು ಮುಂಡಿಯಪುತ್ರ ದಿಗಂಬರನಾಥರ ಪದತಲದಲ್ಲಿ ಕೂತು ಅವುಗಳನ್ನು ಮೆಲ್ಲನೆ ಒತ್ತುತ್ತಿದ್ದ. ಜಿನಸಮಯಸಮುದ್ರಕ್ಕೆ ಚಂದ್ರನೋಪಾದಿಯಲ್ಲಿದ್ದ ಅವನನ್ನು ಮುನಿಶ್ರೇಷ್ಠರು ನೋಡಿ ಹೀಗೆಂದುಕೊಂಡರು: "ದೂರದಲ್ಲಿದ್ದರೂ ದುಂಬಿಗಳ ಸಮೂಹವು ತಾವರೆಗಳಿಗೆ ಆಸೆಪಟ್ಟು ಭೋರೆಂದು ಬಂದು ನೆಲೆಸುತ್ತವೆ. ಕಪ್ಪೆಗಳು ಕೊಳದಲ್ಲಿ ಹುಟ್ಟಿದ್ದರೂ ಕಮಲದ ಬಳಿ ಬಾರವು. ಹೀಗೆಯೇ ದೂರದಲ್ಲಿದ್ದರೂ ಒಳ್ಳೆಯವರನ್ನು ಒಳ್ಳೆಯವರು ಸೇರುತ್ತಾರೆ. ಆದರೆ ಉದ್ಧತರು ಪಕ್ಕದಲ್ಲಿದ್ದರೂ ಹತ್ತಿರ ಸುಳಿಯುವುದಿಲ್ಲ." ಹೀಗೆ ವಾರಿಷೇಣಕುಮಾರನ ಭಕ್ತಿಗೂ, ತನ್ನ ತಂದೆಯೊಡನೆ ಹೋಗದೆ ಧರ್ಮಾನುರಾಗದಿಂದ ಉಳಿದುಕೊಂಡಿರುವುದಕ್ಕೂ ಅವರಿಗೆ ಚೋದ್ಯವುಂಟಾಯಿತು.

ಆಗ ಚೇಳಿನೀಪ್ರಿಯತನೂಜನಾದ ಅವನು ಆ ಮುನಿಗೆ ಎದುರಾಗಿ ನಿಂತು ತಲೆ ಬಾಗಿ ಕೈಮುಗಿದು, "ದಾನಧರ್ಮಗಳನ್ನಾಗಲೀ, ನಾನಾ ಬಗೆಯ ಪೂಜೆಗಳನ್ನಾಗಲೀ ಪ್ರಪಂಚದಲ್ಲಿ ಜನರು ಮಾಡುವುದು ಮೋಕ್ಷಲಕ್ಷ್ಮಿಯನ್ನು ಸೇರುತ್ತೇವೆಂಬ ಆಸೆಯಿಂದ. ನಿರ್ವಾಣಲಕ್ಷ್ಮಿಯೊಡನೆ ಸೇರಿಸಬಲ್ಲ ದೇವನನ್ನು, ತಪಸ್ಸನ್ನೂ, ಧರ್ಮವನ್ನೂ, ಆಗಮವನ್ನೂ ದಾನಪೂಜೆಗಳನ್ನೂ ತಾವು ನನಗೆ ತಿಳಿಯುವಂತೆ ಬೆಸಸಬೇಕು" ಎಂದು ಕೇಳಿಕೊಂಡ. ಅದಕ್ಕೆ ಮುನಿವೃಂದಾರಕನು ಹೀಗೆಂದ: "ಹೆಂಗಸನ್ನು ಹೆಂಗಸರ ಜೊತೆಯಲ್ಲಿ, ಕನಕವನ್ನು ಕನಕದ ಜೊತೆಯಲ್ಲಿ, ರತ್ನವನ್ನು ರತ್ನಗಳ ಜೊತೆಯಲ್ಲಿ ಹೋಲಿಸಿ ಇದು ಮೇಲು ಇದು ಕೀಳು ಎಂದು ನಂಬುವ ಹಾಗೆ; ಆಪ್ತನನ್ನು ಆಪ್ತನಲ್ಲಿ, ತಪವನ್ನು ತಪದಲ್ಲಿ, ಧರ್ಮವನ್ನು ಧರ್ಮದಲ್ಲಿ, ಆಗಮವನ್ನು ಆಗಮದಲ್ಲಿ, ದಾನವನ್ನು ದಾನದಲ್ಲಿ, ಪೂಜೆಯನ್ನು ಪೂಜೆಯಲ್ಲಿ ಪರೀಕ್ಷೆ ಮಾಡಿ ಬೇಗನೇ

ಇವನು ಆಪ್ತ, ಅವನು ಅನಾಪ್ತ, ಇದು ಒಳ್ಳೆಯ ತಪಸ್ಸು, ಇದು ಕೆಟ್ಟದ್ದು, ಇದು ಸದ್ಧರ್ಮ ಇದು ಕುಧರ್ಮ, ಇದು ಆಗಮ ಇದು ಅನಾಗಮ, ಇದು ಸದ್ದಾನ ಇದು ಕುದಾನ, ಇದು ಪೂಜೆ ಇದು ಕುಪೂಜೆ, ಇದು ಸುಖಕ್ಕೆ ಕಾರಣ ಇದು ದುಃಖಕಾರಣ, ಇದು ಮೊದಲು ಇದು ಆನಂತರ ಎಂಬುದನ್ನು ಬುದ್ಧಿಯಿಂದ ನಿಶ್ಚಲಚಿತ್ತನಾಗಿ ಆಲೋಚನೆ ಮಾಡಿ, ನೀರು ಬೆರೆತ ಹಾಲನ್ನು ಮುಂದಿಟ್ಟಾಗ ಹಂಸವು ಹೇಗೆ ನೀರನ್ನು ಬಿಟ್ಟು ಹಾಲನ್ನು ಕುಡಿಯುವುದೋ ಹಾಗೆ ಕುಧರ್ಮವನ್ನು ಬಿಟ್ಟು ಸದ್ಧರ್ಮವನ್ನು ಕೈಗೊಳ್ಳಬೇಕು. ನಿರ್ದೋಷಿಯಲ್ಲದವನ ಆಪ್ತಸಹವಾಸ ಮಾಡಬಾರದು, ಅವನು ಮೇಲ್ಪಟ್ಟವನಾಗಲಾರ. ನಿರ್ದೋಷಿಯಾದ ಕಾಮಮರ್ದನನನ್ನು ದೇವನೆಂದು ಭವ್ಯನಾದವನು ಸೇರಬೇಕು. ಕುರುಡನಾದ ದಾರಿಹೋಕನನ್ನು ನಂಬಿ ದಟ್ಟವಾದ ಗಟ್ಟ ಪ್ರದೇಶದಲ್ಲಿ ದೂರ ಪ್ರಯಾಣ ಮಾಡುವೆನೆಂಬುವವನೂ, ದೋಷಿಯಾದ ಆಪ್ತನನ್ನು ನಂಬಿ ತಪಸ್ಸು ಮಾಡಿ ಮುಕ್ತಿಯನ್ನು ಪಡೆಯುವೆನೆಂಬುವವನೂ ಬುದ್ಧಿಹೀನರೇ ಹೊರತು ಬುದ್ಧಿವಂತರಾಗರು. ಇವನು ತಕ್ಕವನಲ್ಲ, ಇವನು ಆಸೆಬುರುಕ, ಠಕ್ಕ, ಖಳ ಎಂದು ಯಾರೂ ಧೂರ್ತನ ಹತ್ತಿರ ಸುಳಿಯುವುದಿಲ್ಲ; ಅಂಥದ್ದರಲ್ಲಿ, ಖಳರನ್ನೂ ಕ್ರೂರಿಗಳನ್ನೂ ಸಂಭ್ರಮದಿಂದ ದೇವರೆಂದು ಬಳಿ ಸಾರುವುದೇ? ಕಲ್ಲು ದೋಣಿಯನ್ನೇರಿ ಪ್ರವಾಹದಲ್ಲಿ ಹೋಗುವೆನೆಂಬುವವನು, ಕ್ರೂರಿಯಾದ ಆಪ್ತನನ್ನು ಹಿಡಿದು ಮೋಕ್ಷ ಸಂಪಾದಿಸುವೆನೆಂಬುವವನು ಎಗ್ಗರಲ್ಲಿ ಎಗ್ಗರೇ ಹೊರತು ಚತುರರಲ್ಲ. 'ಇವನು ಅತ್ತು ಕಾಡುತ್ತಾನೆ, ಎದ್ದು ಓಡುತ್ತಾನೆ, ಅಟ್ಟಿ ಬೇಡುತ್ತಾನೆ, ಸ್ವಲ್ಪವೂ ನಾಚಿಕೆಯಿಲ್ಲ' ಎಂದು ಮತ್ತ್ಯನಾದವನನ್ನು ಜನರು ದೂರುತ್ತಾರೆ; ಆದರೆ ವಿಟರನ್ನೂ ಚಪಲರನ್ನೂ ಧೂರ್ತರನ್ನೂ ದೇವರೆಂದು ನಂಬುವವನು ನಿಜವಾಗಿ ಎಗ್ಗ. ಬ್ರಹ್ಮಚರ್ಯ ಕೆಟ್ಟು ಮೊದಲೇ ತಪಸ್ಸನ್ನು ಕೈಗೊಳ್ಳುವುದಿಲ್ಲ; ಅಂದ ಮೇಲೆ, ಪರವಧೂಪ್ರಿಯರನ್ನು ಸರ್ವಜ್ಞರೆಂದು ಜನ ಹೇಗೆ ಕೊಂಡಾಡುವರಲ್ಲ! ಬೇರೆಯವರನ್ನು ಹುಸಿಕ, ಕಳ್ಳ, ಮಹಾವ್ಯಸನಿ, ಕಡುಧೂರ್ತ ಎಂದು ಶಂಕೆಯಿಂದ ಭಯದಿಂದ ಎಂಬಂತೆ ದೂಷಿಸುವ ಸುವಸ್ತ್ರಧಾರಿಗಳಾದ ಇಷ್ಟವಿಘಾತರನ್ನೂ, ನಷ್ಟಶೌಚರನ್ನೂ ಆಪ್ತರೆಂದು ಭಾವಿಸುವವರು ಗಾಂಪರೇ ಸರಿ.

"ಅರಸಿನ ಮೇಲೆ ಅರಸಾದರೆ ನಾಡೆಲ್ಲ ಹಾಳಾಗುವುದು ಅಂದ ಮೇಲೆ ಜಗತ್ತಿನಲ್ಲಿ ಅಡಕಿಲದೈವಗಳು, ಎಂದರೆ ರಾಶಿಯಾಗಿ ಪೇರಿಸಿದ ದೈವಗಳಾದರೆ ಹಾಳಾಗದಿರುವುದೇ? ವಿಟನಾದ ಒಡೆಯನನ್ನು ಗೌರವಿಸುವುದಿಲ್ಲ ಅಂದ ಮೇಲೆ ವಿಟನಾದ ದೈವವನ್ನು ಹೇಗೆ ಗೌರವಿಸುತ್ತಾರೆ? ಆದ್ದರಿಂದ ಹಲವು ದೇವರುಗಳಿಲ್ಲ; ಇರುವವನು ದೋಷರಹಿತನಾದ ಒಬ್ಬನೇ. ಪರಮಾತ್ಮನು ಶಾಂತರೂಪನೇ ಹೊರತು ಕ್ರೂರಿಯಲ್ಲ; ಕಾಮನಿವಾರಕನೇ ವಿನಾ ವಿಟನಲ್ಲ ಎಂದು ನಂಬಬೇಕು. ಅರಸನು ನಡೆದುಕೊಳ್ಳುವ ರೀತಿಯೇ ಪ್ರಜೆಗಳಿಗೆ ಮಾದರಿ. ತಮ್ಮ ಆಪ್ತರು ನಡೆಯುವ ರೀತಿಯಲ್ಲಿ ಇತರರು ಏಕೆ ನಡೆದುಕೊಳ್ಳುವುದಿಲ್ಲ? ಇದು ಜಗತ್ತಿನ ಆಭಾಸ. ಯಾರಾದರೂ ಸದಾಚಾರವ್ರತವನ್ನು ಕೈಗೊಳ್ಳುವಂತೆ ಜಗತ್ತಿನಲ್ಲಿ ದುರಾಚಾರವ್ರತ ವನ್ನೇಕೆ ಕೈಗೊಳ್ಳುವುದಿಲ್ಲ? ಪರಸ್ತ್ರೀಮೋಹಿಗಳನ್ನು ದೂರುವಂತೆ ಶುಚಿಯಾದವರ ನ್ನೇಕೆ ದೂಷಿಸುವುದಿಲ್ಲ? ಕಳ್ಳರನ್ನು ಕೊಲ್ಲುವಂತೆ ಇತರರನ್ನೇಕೆ ಕೊಲ್ಲುವುದಿಲ್ಲ? ಸುಳ್ಳು ಹೇಳುವವರನ್ನು ದುಷ್ಟರೆಂದು ಕರೆಯುವಂತೆ ಸತ್ಯವಂತರನ್ನೇಕೆ ದುಷ್ಟರೆಂದು ಕರೆಯುವುದಿಲ್ಲ? ಹೆಂಡ ಕುಡಿಯುವವರನ್ನು ಕೊಳಕರೆಂಬಂತೆ ಹಾಲು ಕುಡಿಯುವವರನ್ನೇಕೆ ಕರೆಯುವುದಿಲ್ಲ? ಮಾಂಸ ಬೇಯಿಸಿದ ಮಡಕೆಯನ್ನು ಹೊರಗಿಡುವ ರೀತಿಯಲ್ಲಿ ಅಡುಗೆ ಮಾಡಿದ ಮಡಕೆಯನ್ನೇಕೆ ಹೊರಗಿಡುವುದಿಲ್ಲ? ಕೊಲೆಗಾರರಿಗೆ ಮಾಡಿದಂತೆ ಕೊಲೆ ಮಾಡದವರಿಗೇಕೆ ಮರಣದಂಡನೆ ವಿಧಿಸುವುದಿಲ್ಲ? ದ್ರೋಹಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಒಳ್ಳೆಯವರ ಆಸ್ತಿಯನ್ನೇಕೆ ಹಾಗೆ ಮಾಡುವುದಿಲ್ಲ? ಸಾಧುಗಳಿಗೆ ಕೈಮುಗಿಯವಂತೆ ದುಷ್ಟರಿಗೇಕೆ ಮಾಡುವುದಿಲ್ಲ? ಬ್ರಹ್ಮಚಾರಿಗಳಿಗೆ ನಮಸ್ಕರಿಸುವಂತೆ ಮಿಂಡರಿಗೇಕೆ ಮಾಡುವುದಿಲ್ಲ? ನಿಸ್ಪೃಹರನ್ನು ಪ್ರೀತಿಸುವಂತೆ ಆಸೆಬುರುಕರನ್ನೇಕೆ ಪ್ರೀತಿಸುವುದಿಲ್ಲ? ತಪಸ್ವಿಗಳನ್ನು ಹೊಗಳುವಂತೆ ದುಷ್ಟರನ್ನೇಕೆ ಹೊಗಳುವುದಿಲ್ಲ? ಅನ್ಯಾಯ ಮಾಡಿದವರನ್ನು ದಂಡಿಸುವಂತೆ ನ್ಯಾಯಪರರನ್ನೇಕೆ ದಂಡಿಸುವುದಿಲ್ಲ? ಚರಿತ್ರಹೀನರನ್ನು ಗಡಿಪಾರು

ಮಾಡುವಂತೆ ಚರಿತ್ರವಂತರನ್ನೇಕೆ ಮಾಡುವುದಿಲ್ಲ? ಆದ್ದರಿಂದ ಕೊಂಚ ದೋಷವನ್ನೂ ಹೊಂದದವನೇ ದೇವ; ದೋಷಪೂರಿತ ನಾದವನು ದೇವನಲ್ಲ. ಇದನ್ನು ಲೋಕದ ನಡವಳಿಕೆಯಿಂದಲೇ ತಿಳಿಯಬೇಕು.

"ಇನ್ನು ತಪಸ್ಸಿನ ಸ್ವರೂಪವೆಂದರೆ, ಹೊನ್ನು ಹೆಣ್ಣು ಮಣ್ಣುಗಳಿಗೆ ಆಸೆಪಡದೆ, ಚಂಚಲಚಿತ್ತನಾಗದೆ, ನೇರ ನಡೆಯುಳ್ಳವನೇ ತಪೋಧನ ಎನ್ನಿಸಿಕೊಳ್ಳುತ್ತಾನೆ. ಕಗ್ಗಲ್ಲು ಎಷ್ಟು ಬೆಳ್ಳಗಿದ್ದರೂ ಬೆಲೆ ಬರುತ್ತದೆಯೇ; ರತ್ನವಾದರೆ ಬೆಲೆ ಬರುತ್ತದೆ. ಮಿಥ್ಯಾದೃಷ್ಟಿಯ ತಪಸ್ಸು ಎಷ್ಟೇ ಒಳಿತಾದರೂ ಶಾಶ್ವತಸುಖವನ್ನು ಕೊಡಬಲ್ಲುದೇ; ಅದೇ ಶುದ್ಧದರ್ಶನವಾದರೆ ನಿರಂತರಸುಖವನ್ನು ನೀಡಬಲ್ಲುದು. ಹಾಲಿಗೆ ಹೆಚ್ಚು ನೀರು ಹಾಕಿದರೆ ಬೆಳ್ಳಗಿರುವುದೇ ಹೊರತು ರುಚಿಯನ್ನು ಉಳಿಸಿಕೊಳ್ಳುವುದಿಲ್ಲ. ಹಾಗೆಯೇ ಮಿಥ್ಯಾದುಃಖಗಳಲ್ಲಿ ಕಾಲ ಕಳೆದು ಆನಂತರ ತಪಸ್ಸು ಮಾಡಿದರೂ ದುಷ್ಕರ್ಮಿಗಳು ಲೋಕಸ್ತುತರಾದ ಶ್ರೇಷ್ಠತಪಸ್ವಿಗಳ ಸಮಕ್ಕೆ ಬರುತ್ತಾರೆಯೇ? ಕಬ್ಬಿಣ ಕಾದು ಎಷ್ಟೇ ಮೃದುವಾದರೂ ಕಮ್ಮಾರನಿಲ್ಲದೆ ಕತ್ತಿ ಮುಂತಾದ ಆಯುಧಗಳಾಗವು. ಅಂತೆಯೇ ಕುಮಾರ್ಗಾವಲಂಬಿಗಳು ಎಷ್ಟು ತಪಸ್ಸು ಮಾಡಿದರೂ ದೋಷರಹಿತನಾದ ಪರಮಾತ್ಮನನ್ನು ಹೊಂದಿದಲ್ಲದೆ ಸಕಲ ಸುಖವನ್ನು ಪಡೆಯಲು ಸಾಧ್ಯವಿಲ್ಲ. ಹೀಗೆಯೇ ನೀರಿಲ್ಲದ ಜಾಗದ ಬೆಳೆ, ಕ್ರೂರಿಗಳ ಸಹವಾಸ, ಅವಿವೇಕಿಯ ಆಡಳಿತ, ಶುದ್ಧಗುಣವಿಲ್ಲದವನ ನಡವಳಿಕೆಗಳನ್ನು ಹೇಗೂ ಒಪ್ಪಲು ಸಾಧ್ಯವಿಲ್ಲ. ರಂಡೆ ಸಲಹಿದವನ ಗುಣವೂ, ಪರಾಕ್ರಮವಿಲ್ಲದವನ ಹೋರಾಟವೂ, ಕೈಗೊಂಡುದನ್ನು ಮುಂದುವರೆಸದ ತಪಸ್ಸೂ, ಜಾರನ ಯೋಗ್ಯತೆಯೂ ಜಗತ್ತಿನಲ್ಲಿ ಒಪ್ಪಲಾರವು. ಹಿರಿದಾದ ಶಕ್ತಿ ತನಗಿದ್ದರೂ ಕತ್ತಿಯಿಲ್ಲದೆ ಹಾವಿನ ಹೆದರಿಕೆ ಹೋಗದಂತೆ, ದೋಷವಿರಹಿತನಾದ ಪರಮಾತ್ಮನ ಮತವನ್ನು ಸೇರಿದಲ್ಲದೆ ಸಮಸ್ತ ಕರ್ಮಗಳು ನಿರ್ಮೂಲವಾಗವು.

"ಸುಜ್ಞಾನವಿಲ್ಲದವರಿಗೂ ಅಜ್ಞಾನವಿರುತ್ತದೆ. ಬುದ್ಧಿವಂತರು ನಯವಾಗಿ ಅಜ್ಞಾನವನ್ನು ನಾಶಮಾಡಬೇಕೆಂದರೆ, ಕೇಳು, ಜೈನಾಗಮದಲ್ಲಿ ಸುಜ್ಞಾನವನ್ನು ಪಡೆಯಬೇಕು. ಬಾಗಿಲು ಕಾಯುವವನು ಎಷ್ಟು ಬೇಕಾದವನಾದರೂ ಅರಮನೆಯನ್ನು ಅರಸನ ಅನುಮತಿಯಿಲ್ಲದೆ ಪ್ರವೇಶಿಸಲಾಗದಂತೆ, ಮಿಥ್ಯಾದೃಷ್ಟಿಗಳಿಂದ ಕೂಡಿದವರು ಎಷ್ಟು ಕಾಯಕ್ಲೇಶಪಟ್ಟರೂ, ದೇವರೆಂದೇ ಜನ ಭಾವಿಸಿದರೂ, ದರ್ಶನವಿಲ್ಲದೆ ಮೋಕ್ಷ ಸಂಪಾದನೆ ಅಸಾಧ್ಯ. ನಾಯಕನಿಲ್ಲದ ಯುದ್ಧ, ಮೋಸಗಾರನ ವ್ಯಾಪಾರ, ಆಸೆಬುರುಕನ ಹಣವೂ, ನ್ಯಾಯವಿಲ್ಲದವನ ಐಶ್ವರ್ಯವೂ, ದಯಾಹೀನನ ತಪಸ್ಸೂ ಶೋಭಿಸುವುದೇ? ದೇವತೆಗಳಂತಹ ಸೇವಕರು ಹಾಗೂ ದಿಗ್ಗಜಗಳಂತಹ ಆನೆಗಳಿದ್ದರೂ ಮುಖ್ಯ ಸೇನಾಪತಿಯಿಲ್ಲದೆ ಶತ್ರುಸೈನ್ಯವನ್ನು ಗೆಲ್ಲಲು ಸಾಧ್ಯವಿಲ್ಲದಂತೆ; ದಾನ, ಪೂಜೆ, ಶೀಲೋಪವಾಸಗಳನ್ನು ಮಾಡುವ ಉದಾರ ಗುಣಗಳಿದ್ದರೂ, ಕಷ್ಟಕರವಾದ ತಪಸ್ಸನ್ನು ಮಾಡುವ ದೇಹಶಕ್ತಿಯಿದ್ದರೂ, ಅಷ್ಟಾದಶ ದೋಷದೂರನಾದ ದೇವನನ್ನು ಒಲಿಸಿಕೊಳ್ಳದೆ ಕರ್ಮಗಳನ್ನು ಗೆದ್ದು ನಿರ್ವಾಣಸಾಮ್ರಾಜ್ಯವನ್ನು ಹೊಂದಲು ಸಾಧ್ಯವಿಲ್ಲ. ಸೂರ್ಯನಿಲ್ಲದ ಆಗಸ, ಔನ್ನತ್ಯವಿಲ್ಲದ ರಾಜ್ಯಾಡಳಿತ, ವನಿತೆಯರಿಲ್ಲದ ಆಸ್ಥಾನವೂ, ಮಕ್ಕಳಿಲ್ಲದ ಮನೆಯೂ, ಜಗನ್ನುತವೂ ಪಾಪಹರವೂ ಸದಾಶುಚಿಯೂ ಆದ ಶುದ್ಧ ದರ್ಶನವಿಲ್ಲದವನ ಉಗ್ರ ತಪಸ್ಸೂ ಒಪ್ಪಲಾರದು. ಆಯುಧ ಹಾಗೂ ಬಾಹುಬಲವಿದ್ದರೂ ಮನಸ್ಸಿಲ್ಲದಿದ್ದರೆ ಸಕಲ ಕರ್ಮಗಳನ್ನು ನಾಶಪಡಿಸಲು ಅಸಾಧ್ಯ; ಕರ್ಮಗಳು ನಾಶಗೊಂಡಲ್ಲದೆ ಮೋಕ್ಷಲಕ್ಷ್ಮಿಯನ್ನು ಪಡೆಯಲು ಅಸಾಧ್ಯ, ಆದ್ದರಿಂದ ಶುದ್ಧದರ್ಶನದಿಂದ ಮೊದಲು ದೃಢನಾಗಿ ಆನಂತರ ಒಳ್ಳೆಯ ತಪಸ್ಸನ್ನು ಕೈಗೊಳ್ಳಬೇಕು.

"ಧರ್ಮವು ಎಂತಹುದೆಂಬುದನ್ನು ಕುರಿತು ಹೇಳೋಣ. ಕೊಲೆ ಎಂಬ ಮಾತಿಗೆ ಮಹಾ ಕಲಿಯೂ ಮೊದಲು ಬೆಚ್ಚುತ್ತಾನೆ; ಎಂದ ಮೇಲೆ ಜಗತ್ತಿನಲ್ಲಿ ಕೊಲೆಗಿಂತ ದೊಡ್ಡ ಪಾತಕ ಬೇರೆ ಇದೆಯೇ? 'ತಕ್ಷಣ ಸಾವು ಬಂದಿತ್ತು, ಇವನ ಧರ್ಮದಿಂದಾಗಿ ನಾನು ಬದುಕಿದೆ' ಎಂಬ ಮಾತನ್ನು ಪ್ರೀತಿಯಿಂದ ಆಡಿದಂತೆ, 'ಈತನ ಧರ್ಮದಿಂದ ನಾನು ಹಾಳಾದೆ' ಎಂದು ನುಡಿಯುವವರಿದ್ದಾರೆಯೇ? ಬಲಿಷ್ಠ ರಾಜರು ಅನ್ಯಾಯದಿಂದ 'ಇಷ್ಟು ಹಣ ನೀಡಬೇಕು' ಎನ್ನುತ್ತಾರೆ; ಅದರ ಬದಲು 'ಪ್ರತಿ ಊರಿನವರೂ ತಪ್ಪದೆ ಒಬ್ಬನ ಜೀವವನ್ನು ಕೊಡಬೇಕು' ಎಂದರೆ ನಾಡೆಲ್ಲ ಅದಕ್ಕೆ ಪ್ರತಿಭಟನೆ ಮಾಡಿ

ಕಾದಾಡುವರಲ್ಲದೆ ಜೀವ ಕೊಡರು. ಆದ್ದರಿಂದ ಜೀವವಧೆ ಮಹಾ ಪಾಪ. ಮಕ್ಕಳು, ನೆಂಟರು, ತಂದೆ, ಗೆಳೆಯ, ಆಪ್ತಭಟರು ಕೊಂದ ಹಗೆಯನ್ನು ಅಟ್ಟಿಕೊಂಡು ಹೋಗಿ ಕೊಲ್ಲುತ್ತಾರೆ; ಭೂಮಿಯಲ್ಲಿ ಎಲ್ಲಿ ಅಡಗಿದ್ದರೂ ನೋಡುವವರಿಗೂ ಭಯ ಹುಟ್ಟುವಂತೆ ಹಿಡಿದು ಕೊಲ್ಲುತ್ತಾರೆ. ಇಂಥದನ್ನು ಕಣ್ಣಾರೆ ಕಂಡರೂ ಕೊಲೆಯನ್ನು ಧರ್ಮವೆಂದು ಅನುಸರಿಸುವವನು ದಡ್ಡನೇ ಹೊರತು ಬೇರೆಯಲ್ಲ. 'ಈ ದಾರಿಯಲ್ಲಿ ಸುಖ ಹೆಚ್ಚು ಎಂದರೆ', ಮೊದಲು 'ಆಗದು' ಎಂದರೂ, ಕೊನೆಗೆ 'ತಕ್ಕಷ್ಟು ಹಣ ಕೊಟ್ಟು ಹೋಗೋಣ' ಎನ್ನುತ್ತಾರೆ; ಆದರೆ ದಾರಿಯಲ್ಲಿ ಕೊಲ್ಲುತ್ತಾರೆ ಎಂದರೆ ಭಯದಿಂದ ಆ ಕಡೆ ಹೋಗುವುದಿಲ್ಲ. ಆದ್ದರಿಂದ ಕೊಲೆಗಿಂತ ಹಿರಿದಾದ ಪಾತಕವಿಲ್ಲ. ಏನೇ ಮಾಡಿದರೂ ಕೊಲೆಯಿಂದ ಸುಖವಾಗದು, ಕಡು ದುಃಖವೇ ಉಂಟಾಗುತ್ತದೆ. ಆದ್ದರಿಂದ ಭವ್ಯನಾದವನು ಕೊಲೆಯನ್ನು ಹೊಲ್ಲದೆಂದು ಬಿಡಬೇಕು.

"ದೂರದಲ್ಲಿ ಹೊಗೆಯನ್ನು ಕಂಡು ಅಲ್ಲಿ ಬೆಂಕಿಯಿದೆ ಎಂದು ಅರಿಯುವಂತೆ, ವೈಭವವನ್ನು ಬಿಟ್ಟು ಚಪ್ಪಲಿ ಮೆಟ್ಟಿ ಬಿಲ್ಲನ್ನು ಹಿಡಿದು, ಆನೆಕುದುರೆಗಳನ್ನು ಒಲ್ಲದೆ ನಾಯಿನರಿಗಳೊಂದಿಗೆ, ಪಲ್ಲಕ್ಕಿಯನ್ನು ತೊರೆದು ನಡೆಯುತ್ತ, ಗಣಿಕಾಜನ ಮಾಂಡಲಿಕರು ಸಾಮಂತರುಗಳಿಲ್ಲದೆ ಕ್ರೂರಿಗಳಾದ ಬೇಟೆಗಾರರೊಡನೆ, ಮಣಿಕಂಕಣವನ್ನು ಬಿಟ್ಟು ಕೈಗೆ ಚರ್ಮಪಟ್ಟಿಕೆಯನ್ನು ಕಟ್ಟಿಕೊಂಡು, ದಿವ್ಯಾಂಬರವನ್ನು ಎಸೆದು ಕರಿಯ ಕುಪ್ಪಸವನ್ನು ಧರಿಸಿ, ಹಾರವೇ ಮೊದಲಾದ ಆಭರಣಗಳನ್ನು ಕಳಚಿ ಚರ್ಮವನ್ನು ಕಟ್ಟಿಕೊಂಡು, ಪಂಚಮಹಾವಾದ್ಯಗಳನ್ನು ಒಲ್ಲದೆ ಬೇಟೆಯ ಹರೆಯನ್ನು ಹೊಯಿಸಿ, ಶಾಂತರೂಪವನ್ನು ಬಿಟ್ಟು ಕ್ರೂರರೂಪವನ್ನು ಕೈಗೊಂಡು, ನಗೆಯ ಬದಲು ಉರಿಮುಖ ಮಾಡಿಕೊಂಡು ಬೇಟೆಗೆ ಹೋಗುವವರ ರೀತಿಯು ನರಕಕ್ಕೆ ಹೋಗುವುದನ್ನು ಸೂಚಿಸುವುದು; ಆದ್ದರಿಂದ ಅದು ದುಃಖಹೇತುವೆಂದು ಕೊಲೆಯನ್ನು ತೊರೆಯಬೇಕು.

"ಸುಂದರವಾದ, ಸುಖವನ್ನುಂಟುಮಾಡುವ ಮನಸ್ಸಿದ್ದರೆ ಜೈನಮಾರ್ಗ ವನ್ನು ನಂಬಿಕೆಯಿಂದ ಸುಗಮವಾಗಿ ಹಿಡಿಯಬೇಕು; ಹಗೆಯಿಂದ ತುಂಬಿ ಹೆದರಿಕೆಯಿಂದ ಕೊಲೆಯಲ್ಲಿ ಕೂಡಿದ ಮತವನ್ನು ತೊರೆಯಬೇಕು. ಇನ್ನು ಆಗಮವು ಹೇಗಾಗುವುದೆಂದು ಅರಿಯೋಣ. ವಿಚಾರವನ್ನು ತಿದ್ದುವ ಧರ್ಮಾಧಿಕರಣರು ಹೇಗೆಂದರೆ, ಅವರು ನುಡಿಯುವ ಪದ್ಧತಿಯಿಂದ 'ಇವರು ಕಳ್ಳರು, ಇವರು ಶುದ್ಧರು' ಎಂದು ತಿಳಿಯುತ್ತಾರೆ. ಹಾಗೆಯೇ ಬುದ್ಧಿವಂತರು ಸಕಲ ಆಗಮಗಳಲ್ಲಿನ ನುಡಿಗಳನ್ನು ಪರೀಕ್ಷಿಸಿ ತಿಳಿದು, 'ನರಕಕ್ಕೆ ಕಾರಣವಾದ ಕುಮತ ಇದು, ಮೋಕ್ಷಕ್ಕೆ ಕಾರಣವಾದ ಸನ್ಮತವಿದು' ಎಂದು ವಿಚಾರಿಸಿ ಹಿಡಿಯಬೇಕು. ಮೇರುಪರ್ವತದ ಮುಂದೆ ನೂರು ಮಂದಿ ಕುರುಡರು ಸೇರಿದರೂ ಅದನ್ನು ಕಾಣಲಾರರು; ಹಾಗೆಯೇ ಮಿಥ್ಯಾಜ್ಞಾನಿಗಳಾz ಕಾಪುರುಷರು ನಿರ್ವೃತಿಸುಖಕ್ಕೆ ಕರೆದೊಯ್ಯುವ ಧರ್ಮವನ್ನು ಕಾಣಬಲ್ಲರೇ? ಎಷ್ಟೇ ಶಕ್ತಿಯಿರುವ ಔಷಧವಾದರೂ ತರಟು ತಲೆಯಲ್ಲಿ ಕೂದಲನ್ನು ಹುಟ್ಟಿಸಲಾರದು; ಎಷ್ಟೇ ಗಾರುಡಮಂತ್ರ ಬೀಜಾಕ್ಷರವಾದರೂ ಕೊಳಕು ಮಂಡಲವನ್ನು ನಿಯಂತ್ರಿಸಲಾರದು; ಎಷ್ಟೇ ಶೃಂಗಾರವತಿಯಾದರೂ ಸೂಳೆಯು ನಿಜವಾದ ವಿರಕ್ತನನ್ನು ಒಲಿಸಿಕೊಳ್ಳಲಾರಳು. ಹಾಗೆಯೇ ಬದ್ಧ ಮಿಥ್ಯಾದೃಷ್ಟಿಯುಳ್ಳ ಜೀವವನ್ನೂ, ನರಕಕ್ಕೆ ಹೋಗಬಯಸುವ ಜೀವವನ್ನೂ, ಅಭವ್ಯರಾದವರನ್ನೂ ಪರಮಾಗಮವು ಸೋಲಿಸಲಾರದು. ಅದು ಪ್ರಮಾಣವಲ್ಲ. ಬುದ್ಧಿವಂತರಾದವರು ಇದನ್ನೆಲ್ಲ ವಿಚಾರಿಸಿ ತಿಳಿಯಬೇಕು. ಹೇಸಿಗೆಯ ಮೇಲೆ ನೊಣಗಳು ಮುಗಿ ಬೀಳುತ್ತವೆ, ಆದರೆ ಏನು ಮಾಡಿದರೂ ಕರ್ಪೂರದಿಂದ ಆಕರ್ಷಿತವಾಗುವುದಿಲ್ಲವೆಂದರೆ ಹೇಸಿಗೆ ಹೆಚ್ಚು, ಕರ್ಪೂರ ಕೀಳು ಎನ್ನಲಾದೀತೇ? ಪಿತ್ತ ಕೆರಳಿದವರಿಗೆ ಹಾಲು ಕಹಿಯಾಗುತ್ತದೆಯೇ ವಿನಾ ಪಿತ್ತವಿಲ್ಲದವನಿಗೆ ಕಹಿಯಾಗದು. ಹಾಗೆಯೇ ಪರಮಾಗಮವು ತೀವ್ರಕರ್ಮಿಯನ್ನು ರಂಜಿಸಲಾರದೇ ಹೊರತು ಲಘುಕರ್ಮಿಯನ್ನು ರಂಜಿಸುವುದು. ಪೂರ್ವಾಪರ ವಿರುದ್ಧವಾದ ಆಗಮದಲ್ಲಿ ಮೊದಲಿನಿಂದ ಕೊನೆಯವರೆಗೂ ಹೇಳಬೇಕಾದದ್ದು ಏನೂ ಇಲ್ಲ; ಆದ್ದರಿಂದ ಮೋಕ್ಷವು ಸುದೂರವೆಂದು ಬುಧನು ತಿಳಿಯಬೇಕು. ಪೂರ್ವಾಪರವಿರೋಧವನ್ನು ಕಂಡರೆ ಲೋಕದ ಜನರು ಇವನರು ಕಳ್ಳರೆಂದು ನಂಬುವುದಿಲ್ಲ; ಅಂದ ಮೇಲೆ ಪೂರ್ವಾಪರವಿರುದ್ಧವಾದ ಆಗಮವನ್ನು ಹೇಗೆ ನಂಬುತ್ತಾರೆ? ಹೇಳುವವರು ತಮ್ಮ ಇಚ್ಛೆಗೆ ಅನುಗುಣವಾಗಿ ಹೇಳುತ್ತಾರೆ;

ಅದೇನು ದೋಷವೇ? ಆದರೆ ಕೇಳುವವರು ಬೆಪ್ಪುತನದಿಂದ ಕೋಲೆ ಬಸವರಾಗದೆ ತಮ್ಮ ಮನಸ್ಸಿನಲ್ಲಿ ಆಲೋಚಿಸಿ ಒಪ್ಪಬೇಕು. ಹಂದಿಯು ಹೊಲ ಮೆಯ್ದರೆ ಕತ್ತೆಯ ಕಿವಿಯನ್ನು ಕೊಯ್ದರು ಎಂಬ ಹಾಗೆ, ಸೂಳೆಯ ಬಂಟನನ್ನು ಏನೂ ಮಾಡಲಾಗದೆ ಗೊರವನನ್ನು ಬಡಿದರು ಎಂಬಂತೆ, ಹೆಂಡತಿ ಮಾಡಿದ ತಪ್ಪಿಗೆ ಮಕ್ಕಳ ಮೂಗನ್ನು ಕೊಯ್ದರು ಎಂಬ ರೀತಿಯಲ್ಲಿ, ಅವಿಚಾರದಿಂದ ಪಕ್ಷಪಾತಿಯಾಗದೆ, ಮಾಣಿಕಭಟ್ಟನು ಮಾಣಿಕ್ಯವನ್ನು ಪರೀಕ್ಷಿಸುಂತೆ, ಭಂಡಾರಿಗರು ಹೊನ್ನನ್ನು ಪರೀಕ್ಷಿಸುವಂತೆ, ಧರ್ಮಗಳನ್ನು ವಿಚಾರಪೂರ್ವಕವಾಗಿ ಪರೀಕ್ಷಿಸಿ, ಪರಮಾಗಮವನ್ನು ಒಂದೇ ಮನಸ್ಸಿನಿಂದ ನಂಬಿ, ಸಂಶಯಮತಿಯಾಗದೆ ಆಗಮಕ್ರಮದಲ್ಲಿ ನಡೆದುಕೊಳ್ಳಬೇಕು.

"ಇನ್ನು ದಾನ ಕ್ರಮದ ಬಗ್ಗೆ ತಿಳಿಯೋಣ. ಒಂದೇ ಬಾವಿಯ ನೀರನ್ನು ಹಾವುಗಳಿಗೂ ಹಸುಗಳಿಗೂ ಹಿತವಾಗಿ ಎರೆದರೂ, ಹಾವಿನಲ್ಲಿ ಅದು ನಂಜಾಗುತ್ತದೆ, ಹಸುವಿನಲ್ಲಿ ಹಾಲಾಗುತ್ತದೆ; ಹಾಗೆಯೇ ಪಾತ್ರ, ಅಪಾತ್ರರ ರೀತಿಯೂ. ಸವುಳು ಭೂಮಿಯನ್ನು ಉತ್ತು, ಬಿತ್ತಿ, ನೀರೆರೆದು, ಕಳೆ ಕಿತ್ತು, ಬೇಲಿಯನ್ನು ಹಾಕಿ ಭಾರಿ ಪ್ರಯತ್ನವನ್ನು ಮಾಡಿದರೂ ಕಪ್ಪು ಭೂಮಿಯಲ್ಲಿನ ಬೆಳೆಯಂತೆ ಆಗುತ್ತದೆಯೇ? ಅಂತೆಯೇ ಕುಪಾತ್ರನಿಗೆ ಎಷ್ಟೇ ಕುದಿದು ಭಕ್ತಿಯನ್ನು ತೋರಿಸಿದರೂ ಸತ್ಪಾತ್ರರಿಗೆ ಕೊಟ್ಟ ದಾನದ ಫಲದಂತಾಗದು. ಆದ್ದರಿಂದ ಸತ್ಪಾತ್ರದಾನವೇ ಮಿಗಿಲಾದದ್ದು.

"ಸತ್ಪೂಜೆಯ ಕ್ರಮದ ಬಗ್ಗೆ ಈಗ ಅರಿಯೋಣ. ಎಲವದ ಹೂವಿನ ಕಮನೀಯತೆಯನ್ನು ಒಂದು ಗಿಳಿಯು ಕಂಡು ಮನಸೋತು, 'ಇದು ಕೋಮಲವಾಗಿದೆ, ಇದರ ಹಣ್ಣು ದೊಡ್ಡದಾಗದೇ ಇರದು' ಎಂಬ ಭಾವನೆಯಿಂದ ಚಂಚಲಮತಿಯಾದ ಅದು ಕಾದುಕೊಂಡು ಕೂತಿದ್ದು, ಕೊನೆಗೆ ನಿರಾಸೆಯಿಂದ ಹೊರಟುಹೋಗುತ್ತದೆ. ಹಾಗೆಯೇ ಕುಪೂಜೆಯಲ್ಲಿ ಒಳ್ಳೆಯ ಫಲ ಉಂಟಾಗದು. ಬೊಬ್ಬುಳಿಯ ಕಾಡಿಗೆ ಎಷ್ಟು ಅಕ್ಕರೆಯಿಂದ ಬೇಲಿಯನ್ನು ಹಾಕಿ ನೀರನ್ನೆರೆದರೂ ಮಾವಿನ ತೋಪಿನಂತೆ ಫಲ ನೀಡುವುದೇ? ಹಾಗೆಯೇ ಕ್ಷುದ್ರದೈವಗಳಿಗೆ ಎಷ್ಟೇ ಭಕ್ತಿಯಿಂದ ಪೂಜಿಸಿದರೂ ಸುದೈವದ ಆರಾಧನೆಯಿಂದ ಸಿಕ್ಕುವ ಫಲವನ್ನು ಪಡೆಯಲು ಸಾಧ್ಯವಿಲ್ಲ. ಮಾಗಿಯ ಚಳಿಯಿಂದ ತಡೆಯಲಾರದೆ ಆಯಾಸಗೊಂಡು ಬುದ್ಧಿಗೆಟ್ಟ ಕೋತಿಗಳು ಗುಲಗಂಜಿಗಳನ್ನು ಒಟ್ಟಿ ಅವುಗಳ ಕೆಂಪನ್ನೇ ಬೆಂಕಿ ಎಂದು ಕಾಯಿಸಿಕೊಳ್ಳುವಂತೆ, ಅಲ್ಪಮತಿಗಳು ಕುದೈವಗಳನ್ನು ಪೂಜಿಸಿದರೆ ಫಲವುಂಟಾಗು ತ್ತದೆಯೇ? ಹೂ ಬಿಡುವುದೆಂಬ ಆಸೆಯಿಂದ ಕೊಳವಳ್ಳಿಯ ಗಿಡಗಳನ್ನು ನಟ್ಟು ನೀರೆರೆದು ಬೆಳೆಸಿದರೆ, ಅದರ ಹೂಗಳು ಮಲ್ಲಿಗೆಯಂತೆ ಸುವಾಸನೆ ಬೀರಲಾರದು. ಅಂತೆಯೇ ಹೆಸರಿಗೆ ದೈವಗಳೆನಿಸಿದ ಕುದೈವಗಳನ್ನು ಭಕ್ತಿಯಿಂದ ಆರಾಧಿಸಿದರೆ ಸುದೈವಪೂಜೆಯಿಂದ ಪಡೆಯುವ ಲಾಭವನ್ನು ಹೊಂದಲು ಸಾಧ್ಯವೇ?

"ಈ ವರಧರ್ಮದಿಂದ ಪಾಪಸಂಕುಲವು ನಾಶವಾಗುತ್ತದೆ, ಸುಖವುಂಟಾಗುತ್ತದೆ, ಅಕ್ಷಯ ಸಿರಿಯು ದೊರೆಯುತ್ತದೆ, ಔನ್ನತ್ಯವುಂಟಾಗುತ್ತದೆ; ಅದೇ ಕುಧರ್ಮದಿಂದ ದುಃಖವೊದಗುತ್ತದೆ, ನರಕಸಮುದ್ರದಲ್ಲಿ ಬೀಳಬೇಕಾಗುತ್ತದೆ, ಎಂಬುದನ್ನು ತನ್ನಲ್ಲಿಯೇ ಆಲೋಚನೆ ಮಾಡಿ ಧರ್ಮವನ್ನು ಆಯ್ದುಕೊಳ್ಳಬೇಕು. ಲೋಚು ಮಾಡಿಸಿಕೊಳ್ಳವುದು ಹೆಚ್ಚೋ, ಬೋಳು ಮಾಡಿಸಿಕೊಳ್ಳವುದು ಹೆಚ್ಚೋ; ಬೆತ್ತಲೆಯಿರುವುದು ಹೆಚ್ಚೋ, ಬಟ್ಟೆ ತೊಡುವುದು ಹೆಚ್ಚೋ; ಹೆಣ್ಣಿನ ಸಹವಾಸವನ್ನು ತೊರೆಯುವುದು ಹೆಚ್ಚೋ, ಹೆಣ್ಣಿನ ಸಹವಾಸ ಪಡೆದಿರುವುದು ಹೆಚ್ಚೋ; ಸ್ನಾನ ಮಾಡುವುದೋ, ಸ್ನಾನ ಮಾಡದಿರುವುದೋ; ಹಲಗೆಯ ಮೇಲೆ ಮಲಗುವುದು ಹೆಚ್ಚೋ, ಹಾಸಿಗೆಯಲ್ಲಿ ಮಲಗುವುದು ಹೆಚ್ಚೋ; ಕೈತುತ್ತು ತಿನ್ನುವುದು ಹೆಚ್ಚೋ, ತಟ್ಟೆಯಲ್ಲಿ ಊಟಮಾಡುವುದು ಹೆಚ್ಚೋ; ಕುಳಿತು ಊಟ ಮಾಡುವುದು ಹೆಚ್ಚೋ, ನಿಂತು ಊಟಮಾಡುವುದೋ; ನೀರನ್ನು ಕುಡಿಯುವುದು ಹೆಚ್ಚೋ, ನೀರನ್ನು ಕುಡಿಯದಿರುವುದೋ; ಏಕಭುಕ್ತವು ಮಿಗಿಲೋ, ಹಲವು ಬಾರಿ ಊಟ ಮಾಡುವುದೋ; ಒಂದೇ ಕಡೆಯಲ್ಲಿ ನೆಲಸುವುದು ಹೆಚ್ಚೋ, ಸುತ್ತುತ್ತಿರುವುದೋ; ಹಲುಜ್ಜುವುದು ಹೆಚ್ಚೋ, ಉಜ್ಜದಿರುವುದೋ; ಮುಟ್ಟುತಟ್ಟು ಆದರೆ ಊಟ ಬಿಡುವುದು ಹೆಚ್ಚೋ, ಅದನ್ನು ಲೆಕ್ಕಿಸದಿರುವುದೋ; ತನಗೆ ಭಿಕ್ಷೆ

ದೊರೆಯದಿದ್ದರೆ ಉಪವಾಸವಿರುವುದು ಹೆಚ್ಚೋ, ಸಿಕ್ಕಿದಾಗ ಮತ್ತೆ ತಿನ್ನುವುದೋ; ಪರಿಮಳಗಳನ್ನು ಪೂಸಿಕೊಳ್ಳುವುದು ಹೆಚ್ಚೋ, ಮಲಧಾರಣೆ ಮಾಡುವುದೋ; ಇತರರ ಬೈಗುಳನ್ನು ಸಹಿಸುವುದು ಹೆಚ್ಚೋ, ಇತರರ ಜೊತೆ ಜಗಳ ಕಾಯುವುದೋ; ಇಂದ್ರಿಯನಿಗ್ರಹ ಹೆಚ್ಚೋ, ವಿಷಯಸೇವೆಯೋ; ವ್ರತ ದೊಡ್ಡದೋ, ಸ್ವೇಚ್ಛೆಯಿಂದ ನಡೆಯುವುದೋ; ಗೋತ್ರದಲ್ಲಿ ಸೇರಿರುವುದು ಹೆಚ್ಚೋ, ಗೋತ್ರವನ್ನು ಬಿಟ್ಟಿರುವುದೋ; ಸಿರಿಯನ್ನು ಬಿಡುವುದು ಹೆಚ್ಚೋ, ಅದಕ್ಕೆ ದಾಸನಾಗಿರುವುದೋ; ಸಾಯುವ ಸ್ಥಿತಿಯಲ್ಲಿಯೂ ಔಷಧವನ್ನು ನಿರಾಕರಿಸುವುದು ಹೆಚ್ಚೋ, ಮನಸ್ಸಿಗೆ ಬಂದ ನಿಯಮಾಚರಣೆಯೋ; ಈ ಬಗ್ಗೆ ಆಲೋಚನೆ ಮಾಡಿ, ಯಾವುದನ್ನು ಮೊದಲು ಮಾಡಬೇಕು, ಆನಂತರ ಯಾವುದನ್ನು ಮಾಡಬೇಕು ಎಂಬುದನ್ನು ನಿರ್ಧರಿಸಬೇಕು. ಅದರಂತೆ ಯಾವುದು ಧರ್ಮ, ಯಾವುದರಿಂದ ಸುಖವುಂಟಾಗುತ್ತದೆ, ಯಾವುದರಿಂದ ದುಃಖ ವುಂಟಾಗುತ್ತದೆ ಎಂಬುದನ್ನು ತಿಳಿಯೋಣ" – ಹೀಗೆಂದು ಮುನಿಶ್ರೇಷ್ಠನು ಧರ್ಮದ ಸ್ವರೂಪವನ್ನು ಸಂಕ್ಷಿಪ್ತವಾಗಿ ತಿಳಿಸಿದ.

ಅದನ್ನು ಕೇಳಿ ವಾರಿಷೇಣನಿಗೆ ಸಂತೋಷವಾಯಿತು. ಆ ದಿನ ಚತುರ್ದಶಿಯಾದ್ದರಿಂದ ಉಪವಾಸವನ್ನು ಕೈಕೊಂಡು ಮುನಿವೃಷಭನಿಗೆ ನಮಸ್ಕಾರ ಮಾಡಿ ರಾಜಮಂದಿರಕ್ಕೆ ಬಂದ. ಸೂರ್ಯನು ಮುಳುಗುವವರೆಗೂ ಕಾವಲುಗಾರರ ಕಣ್ತಪ್ಪಿಸಿ, ಆನಂತರ ನಗರದಿಂದ ಹೊರಟು ಶ್ಮಶಾನಕ್ಕೆ ಬಂದು ರಾತ್ರಿಯಿಡೀ ಪ್ರತಿಮಾಯೋಗದಲ್ಲಿ ನಿಂತ.

ಅಷ್ಟರಲ್ಲಿ ಇತ್ತ ಕಡೆ ಮಗಧಸೌಂದರಿ ಎಂಬ ಸೂಳೆಯನ್ನು ಮೃಗವೇಗನೆಂಬ ಕಳ್ಳನು ಮೋಹಿಸಿ, ವಿವೇಚನೆಯಿಲ್ಲದೆ, ಅವಳ ಇಷ್ಟದ ಪ್ರಕಾರ, ಆ ಊರಿನ ರಾಜಶ್ರೇಷ್ಠಿಯ ಹೆಂಡತಿಯಾದ ಕೀರ್ತಿಮತಿಯ ಕೊರಳಹಾರವನ್ನು ಕಳ್ಳತನ ಮಾಡಿ ಹೋಗುತ್ತಿದ್ದ. ಅದನ್ನು ತಳವಾರರು ಕಂಡರು. ಕೋಲು, ಕಲ್ಲುಗುಂಡುಗಳಿಂದ ಹೊಡೆಯುತ್ತ ಅವನ ಬೆನ್ನಟ್ಟಿದರು. ಇದರಿಂದಾಗಿ ಹೆದರಿಕೆಯಿಂದ ಮತಿಗೆಟ್ಟು ಎಲ್ಲೆಂದರಲ್ಲಿ ಓಡುತ್ತಿದ್ದವನಿಗೆ ಇದ್ದಕ್ಕಿದ್ದಂತೆ ರಾಜಕುಮಾರನು ಕಾಣಿಸಿದ; ಅವನು ಬೆಚ್ಚಿದ. 'ಕಳ್ಳ ಸತ್ತರೂ ಸರಿ, ಬೆಕ್ಕು ಸತ್ತರೂ ಸರಿ' ಎಂಬ ಗಾದೆಯಂತೆ, 'ಇವನ ಕೈಯಲ್ಲಿ ತಳವಾರನು ಸತ್ತರೇನು, ಇವನೇ ತಳವಾರನಿಂದ ಸತ್ತರೇನು, ನಾನು ಪುಣ್ಯವಶದಿಂದ ಹುಲಿ ನೆಕ್ಕಿ ಬದುಕಿದೆನೆಂಬಂತೆ ಆದರೆ ಸಾಕು' ಎಂದು ಯೋಚಿಸಿದ ಕಳ್ಳನು ಹಾರವನ್ನು ವಾರಿಷೇಣಕುಮಾರನ ಮುಂದೆ ಎಸೆದು ಓಡಿದ. ತಳವಾರರು ಬಂದು ಪ್ರತಿಮೆಯಂತೆ ನಿಂತಿದ್ದ ವಾರಿಷೇಣನನ್ನು ನೋಡಿ, 'ತನ್ನನ್ನು ಖಂಡಿತ ಕೊಲ್ಲುತ್ತಾರೆ ಎಂದು ಅಂಜಿ ನಿಂತಿದ್ದಾನೆ, ಇವನೇ ಕಳ್ಳ, ಸಂದೇಹವಿಲ್ಲ' ಎಂದು ನಿರ್ಧರಿಸಿದರು, ಕತ್ತಲೆಯಲ್ಲಿ ಅವರಿವರೆಂದು ತಿಳಿಯದೆ ತಡವರಿಸಿ, ಮುಂದೆ ಬಿದ್ದಿದ್ದ ಹಾರವನ್ನು ನೋಡಿ ಅವನೇ ಕಳ್ಳನೆಂದು ನಿಶ್ಚಯಿಸಿ ದೀವಿಗೆ ಹಿಡಿದು ಅದರ ಬೆಳಕಿನಲ್ಲಿ ಮುಖವನ್ನು ನೋಡಿದರು. ಅವನು ವಾರಿಷೇಣನೆಂದು ಅರಿವಾಗಿ ಅವರಿಗೆ ಬೆರಗಾಯಿತು.

"ಕುದುರೆ, ಆನೆ, ರಥಗಳು, ಹಣ, ಇವೆಲ್ಲ ಮೇರೆಯಿಲ್ಲದೆ ಇವನಿಗೆ ಇವೆ. ಅರಸನಿಗೆ ಇವನು ಮುಖ್ಯ; ಅನೇಕ ಮಂದಿ ರಾಜರು ಅವನ ಬೆಂಬಲಿಗರು. ಆದರೂ ಈ ರಾಜಕುಮಾರನು ಕಳ್ಳತನಕ್ಕೆ ಏಕೆ ಕೈಹಾಕಿದನೋ, ಆಶ್ಚರ್ಯಕರವಾಗಿದೆಯಲ್ಲ!" ಎಂದು ತಳವಾರರು ಅಂಜುತ್ತ ಅವನನ್ನು ನೋಡಿದರು. "ಉಡುವುದಕ್ಕೆ ತೊಡುವುದಕ್ಕೆ ಇಲ್ಲದೆ ಈತನು ಕಳ್ಳತನ ಮಾಡಿದನೋ, ಅರಸನು ತನಗೆ ಬೇಕಾದ್ದನ್ನು ಕೊಡದಿದ್ದುದಕ್ಕೆ ಕದ್ದನೋ; ಈ ದೃಢಚಿತ್ತನು ಕಳ್ಳತನದ ಮಾರ್ಗವನ್ನೇಕೆ ಅನುಸರಿಸಿದನೋ!" ಎಂದು ಅವರಿಗೆ ಪರಮಾಶ್ಚರ್ಯವಾಯಿತು. ತಳವಾರರು ಯುವರಾಜನನ್ನು ನಿನ್ನ ಬಳಿ ಕರೆತಂದು, ಅವನ ಮುಂದೆ ಬಿದ್ದಿದ್ದ ಹಾರವನ್ನು ತೋರಿಸಿ, ಆ ಜಿನಸಮಯವೆಂಬ ಸಮುದ್ರವನ್ನು ಉಕ್ಕೇರಿಸುವ ಚಂದ್ರನಂತಿದ್ದ ಅವನೇ ಕಳ್ಳನೆಂದು ಬಿನ್ನವಿಸಿದರು. ಜಾತಿ ಕ್ಷತ್ರಿಯನಿಗೆ ದುಷ್ಟನಿಗ್ರಹ, ಶಿಷ್ಟಪರಿಪಾಲನೆಯು ಕರ್ತವ್ಯವಾದ್ದರಿಂದ, ನೀನು ಮಗನೆಂದು ಕರುಣೆಯನ್ನು ತೋರಿಸದೆ, ಅವನಿಗೆ ಮರಣ ದಂಡನೆಯನ್ನು ವಿಧಿಸಿಬಿಟ್ಟೆ.

ತಳವಾರರು ಕುಮಾರನಲ್ಲಿಗೆ ಬಂದು, "ದೇವ, ಚಾಡಿಕೋರರು, ಕಳ್ಳರು, ಜಾರರು, ಇವರ ಹೆಸರು ಕೇಳಿದರೂ ಅರಸನು ಸಹಿಸುವುದಿಲ್ಲ ಎಂದು ತಿಳಿದಿದ್ದರೂ ಒಡವೆಗೆ ನೀನೇಕೆ ಆಸೆಪಟ್ಟೆ? ನಿಮ್ಮ ತಂದೆಯ ಬೊಕ್ಕಸದ ಹಣವು ಎಲ್ಲರಿಗೂ ತಿಳಿದಂತೆ ತುಂಬ ಹಿರಿದು. ಅಷ್ಟು ಹಣವಿದ್ದರೂ ಬಡವನ ಹಾಗೆ ಕಳ್ಳತನ ಮಾಡಲು ಮನಸ್ಸೇಕೆ ಮಾಡಿದೆ? ಒಡೆದ ಕಲ್ಲು ಕೆರೆಯಲ್ಲ ಎಂಬ ನಾಣ್ಣುಡಿಯಂತೆ ನಾನು ಅರಸನ ಮಗ, ಕಳ್ಳತನ ಮಾಡಿದರೂ ರಾಜನು ನನ್ನನ್ನು ಕೊಲ್ಲುವುದಿಲ್ಲ ಎಂಬ ಸೊಕ್ಕಿನಿಂದ ಹೋಗಿ ಕೀರ್ತಿಮತಿಯ ಹಾರವನ್ನು ಕದ್ದು, ನಮ್ಮನ್ನು ಇತರರು ಏಡಿಸರು ಎಂದು ಹೋಗಿ ದಸಿಯ ಮೇಲೆ ಬಿದ್ದು ಸತ್ತ ಕೋತಿಯ ಹಾಗೆ ನಿನಗೆ ಕಷ್ಟಕರವಾದ ಸಾವನ್ನು ತಂದುಕೊಂಡೆ" ವಾರಿಷೇಣನನ್ನು ಮೂದಲಿಸಿದರು.

ಇದನ್ನೆಲ್ಲ ಕೇಳಿ ಆ ಸಮ್ಯಕ್ತ್ವಚೂಡಾಮಣಿಯು ಮನಸ್ಸಿನಲ್ಲಿ ಹೀಗೆ ಆಲೋಚಿಸಿದ: "ಭೂಮಿಯಲ್ಲಿ ಹೊಕ್ಕಿದ್ದರೂ, ಸಮುದ್ರದಲ್ಲಿ ಮುಳುಗಿದ್ದರೂ, ಮಂದರಪರ್ವತದ ತುದಿಯನ್ನು ಏರಿದ್ದರೂ, ಬೇಗ ಹೋಗಿ ಖೇಚರರ ಮೊರೆಹೊಕ್ಕರೂ, ಭಾರೀ ಹಣವನ್ನು ಕೊಟ್ಟರೂ, ನಡುಗುತ್ತ ಚಕ್ರವರ್ತಿಗೆ ಶರಣಾದರೂ, ಮರುಳೇ, ಆಯುಸ್ಸು ಮುಗಿದವನನ್ನು ಯಮನು ಕೊಲ್ಲದೆ ಬಿಡುವನೇ!" ಆ ಕಾಲನ ಪರಾಕ್ರಮವೆಂತಹುದೆಂದರೆ, ದೇವೇಂದ್ರರನ್ನು ತಾವರೆಗೊಳವನ್ನು ಹೊಕ್ಕ ಆನೆಯಂತೆ ಮಾಡಿ, ವ್ಯಂತರದೇವರನ್ನು ಸೌತೆಯ ಬಳ್ಳಿಯಲ್ಲಿ ಹೊಕ್ಕ ಎತ್ತಿನಂತೆ ಮಾಡಿ, ಜ್ಯೋತಿಷ್ಕದೇವರನ್ನು ನೆಗಡಿಯಾದ ವಾತಾಧಿಕರಂತೆ ಮಾಡಿ, ಭವನವಾಸಿಗರನ್ನು ದವನದ ಮಡಿಗೆ ದಾಳಿ ಮಾಡಿದವರಂತೆ ಮಾಡಿ, ಚಕ್ರವರ್ತಿಗಳನ್ನು ವಕ್ರವಾದ ಪುಳ್ಳೆಯನ್ನು ಮುರಿಯುವಂತೆ ಮುರಿದು, ಮಾಂಡಲಿಕರನ್ನು ರಾಹುವು ಸೂರ್ಯನನ್ನು ನುಂಗುವಂತೆ ನುಂಗಿ, ಬಲ್ಲಿದರನ್ನು ಕಲ್ಲು ಬಿದ್ದ ಪುರುಳೆಯಂತೆ ನುಚ್ಚುನುರಿಮಾಡಿ, ರಾವಣನನ್ನು ಕೋವಣದಂತೆ ಸೀಳಿ, ಕುಂಭಕರ್ಣನನ್ನು ಕಂಬ ಮುರಿದ ಮಾಳಿಗೆಯಂತೆ ಬೀಳಿಸಿ, ವಿಭೀಷಣನನ್ನು ಸಾಹಸವಿಲ್ಲದವರನ್ನು ನೂಕುವ ಹಾಗೆ ನೂಕಿ, ಇಂದ್ರಜಿತ್ತುವನ್ನು ಹೇಡಿಯನ್ನು ಕಾಡುವಂತೆ ಕಾಡಿ, ರಾಮನನ್ನು ಧೂಮವು ಆವರಿಸಿದಂತೆ ಜೀವಗೆಡಿಸಿ, ಲಕ್ಷ್ಮಣನನ್ನು ಮಕ್ಕಳನ್ನು ಕಳೆದುಕೊಂಡವರಂತೆ ಗೋಳು ಹುಟ್ಟಿಸಿ, ಸುಗ್ರೀವನನ್ನು ಉತ್‌ಗ್ರೀವನಿಗೆ ಬಾಣ ತಾಗಿದಂತೆ ಮಾಡಿ, ಜಾಂಬವನನ್ನು ಸಂಜೆಯ ಸೂರ್ಯನಂತೆ ತೇಜಗೆಡಿಸಿ, ಹನುಮಂತನನ್ನು ಅನುಮಾನವಿಲ್ಲದೆ ನೆಲಕ್ಕೆ ಬಡಿದು, ಪಾಂಡವರನ್ನು ದಂಡು ಹೊಕ್ಕ ನರಿಯಂತೆ ಧೃತಿಗೆಡಿಸಿ, ಕೌರವನನ್ನು ಭೈರವನು ಹಾಯ್ದ ಹಾಗೆ ತಲೆಕೆಳಗು ಮಾಡಿ, ಬಾಲಕರು ಎಂದು ಹಿಂದೆಗೆಯದೆ, ಮುದುಕರೆಂದು ಕರುಣಿಸದೆ, ವೀರರ ಬಗ್ಗೆ ಭಯಪಡದೆ, ಮೂರ್ಖರ ಬಗ್ಗೆ ಓಸರಿಸದೆ, ಸ್ತ್ರೀಯರೆಂದು ಕಾಪಾಡದೆ, ವಿಕಲೇಂದ್ರಿಯರ ಬಗ್ಗೆ ತಿರಸ್ಕಾರವಾಗಲೀ, ನಾರಕಿಗಳ ಬಗ್ಗೆ ಹೇಸಿಕೆಯಾಗಲೀ ಪಡದೆ, ಪಟ್ಟಕಟ್ಟಿಕೊಂಡವರು ಕಟ್ಟುಗ್ರರೆಂದು ಬಗೆಯದೆ, ಬಡವರನ್ನು ಉಳಿಸದೆ, ಮಾನ್ಯರನ್ನು ಗೌರವಿಸದೆ, ಕೋತಿಯು ಹಣ್ಣು ಬಿಟ್ಟ ಹುಣಿಸೆಯ ಮರವನ್ನು ಏರಿದಂತೆ, ಕೋಳಿ ತಿಪ್ಪೆಯನ್ನು ಸಾರಿದಂತೆ, ಹಸಿದ ಎಮ್ಮೆ ಬೆಳೆಯಿರುವ ಹೊಲವನ್ನು ಹೊಗುವಂತೆ, ಬಡವರು ಅನ್ನದ ರಾಶಿಯನ್ನು ಮುತ್ತಿದಂತೆ, ಮೆದ್ದು, ನುಂಗಿ, ಸವಿದು, ಕಚ್ಚಿ, ತೃಪ್ತಿ ಹೊಂದದೆ ನರಿಯಾಟವಾಡುತ್ತಾನೆ. ಅಂತಹವನು ನನಗೆ ಪೀಡೆಯನ್ನು ಮಾಡುವುದು ಯಾವ ವಿಸ್ಮಯ! ಉರಿಯುವ ಬೆಂಕಿಯಲ್ಲಿ ತುಪ್ಪ ಸುರಿದಷ್ಟೂ ಅದು ಹೆಚ್ಚುತ್ತದೆ; ಆದರೆ ಎಷ್ಟೆಷ್ಟು ನೀರು ಸುರಿದರೆ ಅಷ್ಟಷ್ಟು ಕುಂದುತ್ತದೆ. ಪೂರ್ವಜನ್ಮದ ಕರ್ಮೋದಯದಿಂದ ಬಂದು ಅಡಸುವ ಸಾವಿಗೂ ನೋವಿಗೂ ಮನುಷ್ಯನು ಎಷ್ಟೆಷ್ಟು ಅಂಜುತ್ತಾನೆಯೋ ಜನ್ಮಾಂತರಗಳಲ್ಲಿ ಅದು ಅಷ್ಟಷ್ಟು ಹೆಚ್ಚುವುದು; ಜಿನಪಾದಕಮಲಗಳನ್ನು ಎಷ್ಟೆಷ್ಟು ನೆನೆಸಿಕೊಳ್ಳುವನೋ ಅಷ್ಟಷ್ಟು ಕುಂದುತ್ತದೆ. ಪಾಪವು ನಶಿಸುವವರೆಗೂ, ಪರಮ ಜಿನಾಗಮವನ್ನು ಅರಿಯುವವರೆಗೂ. ನಿಷ್ಠುರವಾದ ದುಃಖಸಮೂಹವೂ ಮರಣವೂ ಯಾವ ಜನ್ಮದಲ್ಲಿಯೂ ಹಿಂಗುವುದಿಲ್ಲ.

ಜಿನಧರ್ಮವೆಂಬ ನೀರಿನಿಂದ ಕರ್ಮವೆಂಬ ಕಿಚ್ಚನ್ನು ಆರಿಸದೆ, ಜಿನಾಗಮವೆಂಬ ಮಂತ್ರವಾದಿಯಿಂದ ಪಾಪವೆಂಬ ಗ್ರಹವನ್ನು ಕಳೆಯದೆ, ಜಿನಸೇವನೆಯೆಂಬ ದಿವ್ಯೌಷಧದಿಂದ ಕಿಲ್ಬಿಷವೆಂಬ ರೋಗವನ್ನು ಹೋಗಲಾಡಿಸದೆ, ಜಿನಾರ್ಚನೆಯೆಂಬ ಕೊಡಲಿಯಿಂದ ಪಾತಕವೆಂಬ ದುರ್ಗವನ್ನು ಹಾಳುಗೆಡವದೆ, ಜಿನಸ್ಮರಣೆಯೆಂಬ ಹಡಗಿನಿಂದ

ದುರಿತವೆಂಬ ಸಮುದ್ರವನ್ನು ದಾಟದೆ, ಜಿನವ್ರತವೆಂಬ ಹರಿಗೋಲಿನಿಂದ ಅಶುಭವೆಂಬ ತೊರೆಯನ್ನು ಹಾಯದೆ, ಜಿನಪಕ್ಷಪಾತವೆಂಬ ಸಿಡಿಲಿನಿಂದ ಪುಣ್ಯವಿರೋಧಿಯೆಂಬ ಮರವನ್ನು ಮುರಿಯದೆ, ಜಿನಭಾವನೆಯೆಂಬ ಬಾಡಬಾಗ್ನಿಯಿಂದ ವಿಷಯಸಾಗರವನ್ನು ಹೀರದೆ, ಜಿನಾಭಿಷೇಕವೆಂಬ ಕೂರಲಗಿನಿಂದ ಕರ್ಮವೈರಿಯೆಂಬ ಜೊಂಡನ್ನು ಕತ್ತರಿಸದೆ, ಜಿನಕಥಾಪ್ರೀತಿಯೆಂಬ ಸಿಂಹದಿಂದ ದೋಷವೆಂಬ ಆನೆಯನ್ನು ಕೊಲ್ಲದೆ, ಜಿನಧರ್ಮಪ್ರೀತಿಯೆಂಬ ಬೇರುಂಡದಿಂದ ಮೋಹವೆಂಬ ಶರಭವನ್ನು ಸಾಯಿಸದೆ, ಜಿನಮುನಿದಾನವೆಂಬ ಗಾಳಿಯಿಂದ ಲೋಭವೆಂಬ ಮೋಡವನ್ನು ಚದುರಿಸದೆ, ಜಿನಶ್ರೀಮುಖದರ್ಶನವೆಂಬ ವಜ್ರಾಯುಧದಿಂದ ಮಾಯೆಯೆಂಬ ಬೆಟ್ಟವನ್ನು ಸೀಳದೆ, ಜಿನಪೂಜಾನಂದವೆಂಬ ಬೆಂಕಿಯಿಂದ ಸ್ವಾಭಿಮಾನವೆಂಬ ಹುಲ್ಲನ್ನು ಸುಡದೆ, ಜಿನರೂಪದರ್ಶನವೆಂ¨ ಬಿಸಿಲಿನಿಂದ ದೋಷವೆಂಬ ಕತ್ತಲೆಯನ್ನು ಹೋಗಲಾಡಿಸದೆ, ಜಿನಲಕ್ಷಣನಿರೀಕ್ಷಣವೆಂಬ ಚಂದ್ರನಿಂದ ಅಂತರಾಯವೆಂಬ ತಾವರೆಯನ್ನು ಮುದುಡುವಂತೆ ಮಾಡದೆ, ಜಿನಭಕ್ತಿಯೆಂಬ ಸೊಡರಿನಿಂದ ದರ್ಶನಾವರಣೀಯವೆಂಬ ಕತ್ತಲೆಯನ್ನು ಹಿಂಗಿಸದೆ, ಜಿನತತ್ವವಿಚಾರವೆಂಬ ರಾಜನಿಂದ ಜ್ಞಾನಾವರಣೀಯವೆಂಬ ಕಾಡುಮನುಷ್ಯರನ್ನು ಓಡಿಸದೆ, ಜಿನಪಾದಸ್ನೇಹವೆಂಬ ಸೈನ್ಯದಿಂದ ವೇದನೀಯವೆಂಬ ಗಡಿಯ ನಾಯಕರನ್ನು ಅಡಗಿಸದೆ, ಜಿನಚರಣಾಲಂಬವೆಂಬ ಬಲದಿಂದ ವಿಷಯವೆಂಬ ದರೋಡೆಕೋರರನ್ನು ಗೆಲ್ಲದೆ, ಜಿನಸ್ವನರುಚಿಯೆಂಬ ಗುಡುಗಿನಿಂದ ನರಕಗತಿಯೆಂಬ ಹಂಸವನ್ನು ಅಂಜಿಸದೆ, ಜಿನತತ್ವಾಕಾಂಕ್ಷೆಯೆಂಬ ಬಾಣದಿಂದ ತಿರಿಕಗತಿಯೆಂಬ ಗುರಿಯನ್ನು ತಲುಪದಂತೆ ಮಾಡದೆ, ಜಿನಾರಾಧನೆಯೆಂಬ ಹಿಮದಿಂದ ಮನುಷ್ಯಗತಿಯೆಂಬ ಎಳೆಯ ಮಾವಿನ ಸಸಿಯನ್ನು ನಾಶಪಡಿಸದೆ, ಜಿನರ ಸಮೂಹವೆಂಬ ಚಾಣದಿಂದ ದೇವಗತಿಯೆಂಬ ಸಂಕೋಲೆಯನ್ನು ಕತ್ತರಿಸದೆ, ಪಕ್ಕದ ಮನೆಯವರನ್ನು ಹಾವು ಹಿಡಿಯಿರಿ ಎಂದು ಹೇಳುವಂತೆ, ಪಕ್ಕದ ಹೊಲದವರನ್ನು ನಮ್ಮ ಹೊಲವನ್ನು ಬಿತ್ತಿ ಎಂದು ಹೇಳುವಂತೆ, ಸವತಿಯ ಮಗನನ್ನು ಬೇಡಿಕೊಳ್ಳುವಂತೆ, ದಾರಿಹೋಕರನ್ನು ಹುಲಿಯನ್ನು ಕೊಲ್ಲಿರಿ ಎಂದು ಕೇಳಿಕೊಳ್ಳುವಂತೆ, ಭಿಕ್ಷೆ ಬೇಡಬಂದವರನ್ನು ಅಡುಗೆ ಮಾಡಿ ಎಂದು ಕೇಳಿಕೊಳ್ಳುವಂತೆ, ಬದುಕಿ ಬಂದವಳನ್ನು ಹೆಂಡತಿಯಾಗಿರು ಎಂದು ಕೇಳುವಂತೆ, ಯಾರನ್ನೋ ಮನೆ ಕಾಯಿರಿ ಎಂದು ಕೇಳುವಂತೆ, ಬುದ್ಧಗೇಡಿತನದಿಂದ ಬೇರೆಯವರು ತನಗೆ ಆಗುತ್ತಾರೆ ಎಂದು ನಂಬಿದರೆ ಶಾಶ್ವತಸುಖವು ಸಿಗದು. ತನ್ನ ಹಿಂದಿನ ಕರ್ಮದಿಂದ ಉಂಟಾದ ಸಾವುನೋವುಗಳನ್ನು ಹಂಚಿಕೊಳ್ಳಿ ಎಂದು ಬೇರೆಯವರನ್ನು ಕೇಳಿದರೆ ಅವರು ಹಂಚಿಕೊಳ್ಳುತ್ತಾರೆಯೇ? ಸದ್ಧರ್ಮವನ್ನು ಹೊಂದಿ ಸುಖವಾಗಿರಲೂ, ಕುಧರ್ಮವನ್ನು ಅನುಸರಿಸಿ ದುಃಖಪಡಲೂ ತಾನೇ ಕಾರಣವೇ ಹೊರತು ಬೇರೆಯವರಲ್ಲ.

ರೋಗಗಳ ಉಂಟಾಗುವಿಕೆ, ದುಃಖವ್ರಾತ, ಇತರರ ಒತ್ತಡ, ಪ್ರಜೆಗಳ ಭಯ, ಹೊನ್ನು, ಶೀತೋಷ್ಣ, ನೆರೆಯವರ ಮೋಸ, ಕೆಟ್ಟವರ ಸಹವಾಸ, ಹೆಣ್ಣುಗಳ ಕಾರಣ, ಆಪ್ತಮಿತ್ರರ ಅಗಲಿಕೆ, ಗೆದ್ದವರ ಉಪಟಳ, ಸಾವುನೋವುಗಳು, ಅರಸರ ಕಾಟ, ಶತ್ರುಭಯ, ಮುಳ್ಳುಕಲ್ಲುಗಳು, ಪ್ರಯಾಣದಲ್ಲಿನ ತೊಂದರೆ, ವ್ಯಾಪಾರದ ಆಸೆ, ಈ ಮುಂಚೆ ಮಾಡಿದ ಸಾಲಬಾಧೆ, ತೆರಿಗೆಯ ಭಾರ, ಕೇಡು, ಬಡತನ, ಇತರರ ಅಭಿಮಾನ, ಪಾಪಕೃತ್ಯ, ಇವುಗಳಿಂದ ಮನುಷ್ಯರು ಎಲ್ಲಿದ್ದರೂ ದುಃಖವು ಉಂಟಾಗುತ್ತದೆ. ಭೂಮಿಯನ್ನು ಹೊಡೆದ ಕೈ ತಪ್ಪಿದರೂ ತಪ್ಪಬಹುದು, ಆದರೆ ಏನು ಮಾಡಿದರೂ ಕರ್ಮೋದಯದಿಂದ ಉಂಟಾಗುವ ಸಾವುನೋವುಗಳನ್ನು ತಪ್ಪಿಸಲು ಸಾಧ್ಯವಿಲ್ಲ. ಇದನ್ನು ಅರಿತ ಮಹಾನುಭಾವನಿಗೆ ಸಾವುನೋವುಗಳ ದುಃಖವಿರುವುದಿಲ್ಲ. ನನಗೆ ಇನ್ನು ಆ ಮಹಾವೀರಸ್ವಾಮಿಯ ಪಾದಕಮಲಗಳನ್ನು ನೆನೆಯುತ್ತಿರುವುದೇ ಕರ್ತವ್ಯ ಎಂದು ಭಟನು ಸೆರೆಯಾದವನನ್ನು ಬಿಗಿಯಾಗಿ ಹಿಡಿಯುವಂತೆ, ಕುಮಾರನು ಒಂದೇ ಮನಸ್ಸಿನಿಂದ ಮಹಾವೀರಸ್ವಾಮಿಯ ಪಾದಗಳನ್ನು ಬಿಗಿಯಾಗಿ ಅವಲಂಬಿಸಿದ. ಜಿನನ ಪಾದಗಳನ್ನೂ, ಜಿನಮತವನ್ನೂ, ಜಿನರ ಗುಣೋನ್ನತಿಯನ್ನೂ, ಜಿನಗೃಹವನ್ನೂ, ಜಿನಚೈತ್ಯವನ್ನೂ, ತನ್ನ ಮನದಲ್ಲಿ ಅವನು ಧ್ಯಾನಿಸುತ್ತಿದ್ದ.

ಅದರಿಂದಾಗಿ ಆ ಊರಿನ ದೇವತೆಗಳಿಗೆ ಆಸನಕಂಪವಾಯಿತು; ಸಮ್ಯಕ್ತ್ವ ಚೂಡಾಮಣಿಗೆ ತೊಂದರೆಯಾದುದು ಅವರ ಅರಿವಿಗೆ ಬಂತು. ಆ ಭೀಕರ ಉಪಸರ್ಗವನ್ನು ಹೋಗಲಾಡಿಸಲು ಅವರು ನಡೆತಂದರು. ಅಚಲಿತ ಮನಸ್ಸಿನವನಾಗಿ ನಿಂತಿದ್ದ ವಾತ್ಸಲ್ಯರತ್ನಾಕರನಾದ ಕುಮಾರನ ಧೈರ್ಯವನ್ನು ಕಂಡು ಅವರಿಗೆ ಅಚ್ಚರಿಯಾಯಿತು. ಪಾಪವೆಂಬ ಶತ್ರುವನ್ನು ಸದೆಬಡಿದು ನಾನು ನಿರ್ವೃತಿಗೆ ಸಲ್ಲುವೆನೆಂಬ ಮಹಾಪುರುಷನು ಮನಸ್ಸಿನಲ್ಲಿ ಕುಂದದೆ ಹೆದರಿಕೆಯಿಲ್ಲದೆ ಕಲಿಯಂತೆ ಇದೇ ರೀತಿ ಉಬ್ಬಿನಿಂದ ನಿಲ್ಲಬೇಡವೇ? ಎಂದು ಕುಮಾರನಿಗೆ ಕೈಮುಗಿದರು. ಅಷ್ಟರಲ್ಲಿ, ಸ್ವಲ್ಪವೂ ಕರುಣೆಯಿಲ್ಲದ ನಿಷ್ಠುರರಾದ ತಳವಾರರು ಕುಮಾರನನ್ನು ಕೆಳಕ್ಕೆ ಕೆಡವಿ, ಗದರಿಸಿ, ಚೂಪಾದ ಆಯುಧಗಳನ್ನು ಒರೆಯಿಂದ ಕಳಚಿ, ತಲೆಯನ್ನು ದಡಿಯಿಂದ ಹೊಡೆದು, ಕಿವಿಗೆ ಕತ್ತಿಯಿಂದ ಚುಚ್ಚಿ, ಕತ್ತನ್ನು ಸುರಗಿಯಿಂದ ಇರಿದು, ದೇಹವನ್ನು ಕೊಳ್ಳಿಯಿಂದ ಸುಟ್ಟು, ಸೊಂಟವನ್ನು ಕೊಡಲಿಯಿಂದ ಕಡಿದು, ತೋಳನ್ನು ಗದೆಯಿಂದ ಬಡಿದು, ಬೆರಳುಗಳನ್ನು ಉಳಿಯಿಂದ ಕತ್ತರಿಸಿ, ಹಣೆಯನ್ನು ಬಾಣದಿಂದ ತಿವಿದು, ನಾಲಗೆಯನ್ನು ಬಾಚಿಯಿಂದ ಕೆತ್ತಿ, ಮೊಳಕೈಯನ್ನು ಕೊಂತದಿಂದ ಕುತ್ತಿ ಕಿರಿಚಾಡುತ್ತ ನಾನಾ ವಿಧವಾದ ಹಿಂಸೆಯನ್ನು ಉಂಟುಮಾಡುತ್ತಿದ್ದರು. ಆದರೆ ಕುಮಾರನು ಇತರ ಕಳ್ಳರಂತೆ ಅಳುಕದೆ, ಕಣ್ಣಲ್ಲಿನ ಕಸದಂತೆ ಚಡಪಡಿಸದೆ, ನಡುವಿನ ಹಾಗೆ ಬಳುಕಾಡದೆ, ಹುಬ್ಬಿನಂತೆ ಕೊಂಕದೆ, ಅಲೆಯ ಹಾಗೆ ಮುಂದೆ ಸರಿಯದೆ, ಬೆಂಡಿನಂತೆ ತೇಲದೆ, ಸೆರೆಯಾದವರಂತೆ ದುಃಖಪಡದೆ, ಭಯಗೊಂಡವರಂತೆ ಬೆಚ್ಚದೆ, ತರಗೆಲೆಯಂತೆ ಕಂಪಿಸದೆ, ಜಿಂಕೆಯಂತೆ ಬೆಚ್ಚದೆ, ದುಷ್ಟರಂತೆ ಪೆಚ್ಚಾಗದೆ, ಶುಭವನ್ನು ಧ್ಯಾನಿಸುತ್ತ ಇದ್ದ. ಆ ಸಮ್ಯಕ್ತ್ವಚೂಡಾಮಣಿಯ ದರ್ಶನಶುದ್ಧಿಗೂ, ಸುಕವಿನಿಕರ ಪಿಕಮಾಕಂದನ ಜಿನಾಗಮದ ಪರಿಣತಿಗೂ, ವಾತ್ಸಲ್ಯರತ್ನಾಕರನ ಶುದ್ಧಭಾವನೆಗೂ, ಸಹಜಕವಿಜನ ಪಯಃಪಯೋಧಿಹಿಮಕರನ ಮನಸ್ಸಿನ ಸ್ಥಿರತೆಗೂ, ಸುಕವಿಮನಃಪದ್ಮಿನೀ ರಾಜಹಂಸನ ಸಂಸಾರಭೀತಿಗೂ, ಜಿನಶ್ರೀಚರಣಾಲಂಕಾರಶೀರ್ಷನ ಶುದ್ಧಭಾವನೆಗೂ, ಭಾವಯುತ ದಿಗಂಬರದಾಸನ ಪಂಚಪರಮೇಷ್ಠಿಗಳಲ್ಲಿ ಉಂಟಾದ ಭಕ್ತಿಗೂ ನಗರ ದೇವತೆಗಳು ಮೆಚ್ಚಿ ತಲೆದೂಗಿದರು. ಜಿನೇಶ್ವರನೆಂಬ ವಜ್ರರಕ್ಷೆಯನ್ನು ಹೊಕ್ಕವನಿಗೆ, ಜಿನನಾಥನೆಂಬ ಬಲುಗೋಟೆಯ ಒಳಸೇರಿದವನಿಗೆ, ಜಿನನಾಥನೆಂಬ ವಜ್ರಕವಚವನ್ನು ತೊಟ್ಟವನಿಗೆ, ಜಿನಾಧಿಪನೆಂಬ ಮಹಾ ಪರ್ವತವನ್ನು ಹತ್ತಿದವನಿಗೆ, ಜಿನಸ್ವಾಮಿಯೆಂಬ ಚಕ್ರವರ್ತಿಯನ್ನು ನಂಬಿದವನಿಗೆ, ಜಿನವಲ್ಲಭನೆಂಬ ದುರ್ಗವನ್ನು ಗೆದ್ದವನಿಗೆ, ಜಿನಪರಿವೃಢನೆಂಬ ಜಲದುರ್ಗವನ್ನು ಆಶ್ರಯಿಸಿದವನಿಗೆ, ಜಿನದೇವನೆಂಬ ಚಂದ್ರಬಲವನ್ನು ಪಡೆದವನಿಗೆ, ಜಿನಪ್ರಭಾವನೆಯೆಂಬ ಭೂಬಲವನ್ನು ಪಡೆದವನಿಗೆ, ಜಿನಕುಂಜರವೆಂಬ ರಸಾಯನವನ್ನು ಸಾಧಿಸಿದವನಿಗೆ, ಜಿನಾಗಮವೆಂಬ ಅಮೃತವನ್ನು ಸೇವಿಸಿದವನಿಗೆ, ಜಿನಧರ್ಮನಿಧಿಯನ್ನು ಪಡೆದವನಿಗೆ, ಜಿನಸೇವನೆಯೆಂಬ ನಿಧಿಯನ್ನು ಕಂಡವನಿಗೆ, ಜಿನವ್ರತವೆಂಬ ಆಯುಧದಲ್ಲಿ ಪರಿಣತನಾದವನಿಗೆ ಜವಗಿವನಾಗಲೀ, ಕರ್ಮಗಿರ್ಮವಾಗಲೀ, ವಿಧಿಗಿದಿಯಾಗಲೀ, ವಿಧಾತ್ರಗಿದಾತ್ರರಾಗಲೀ, ದೈವಗಿಯ್ವವಾಗಲೀ, ಪಾಪಗೀಪವಾಗಲೀ, ಮುಪ್ಪುಗಿಪ್ಪಾಗಲೀ, ಕುತ್ತಗಿತ್ತವಾಗಲೀ, ಸಾವುಗೀವಾಗಲೀ ಪೀಡೆಗೀಡೆಯಾಗಲೀ, ನೋವುಗೀವಾಗಲೀ ಹುಟ್ಟುಗಿಟ್ಟಾಗಲೀ ಏನನ್ನೂ ಮಾಡಲಾರವು; ಇವು ಏನನ್ನು ಮಾಡಬಲ್ಲವು ಎಂದು ಅಪಹಾಸ್ಯಗೈಯುವಂತೆ ತಳವಾರರು ಇರಿದು ಮಾಡಿದ ಗಾಯಗಳೆಲ್ಲವನ್ನೂ ದೇವತೆಗಳು ಕಿರೀಟ, ಮಣಿಕುಂಡಲ, ಹಾರ, ಕೇಯೂರಕ, ತೋಳಮಣಿ, ಕಂಕಣ, ಮುದ್ರಿಕೆ, ಬ್ರಹ್ಮಸೂತ್ರ, ದೇವಾಂಗವಸ್ತ್ರಗಳನ್ನಾಗಿ ಮಾಡಿಬಿಟ್ಟರು.

ಮತ್ತೆ, ಅವನ ತಲೆಗೆ ತಳವಾರರು ಬಲವಾಗಿ ಹೊಡೆಯಲು ನಗರ ದೇವತೆಗಳು ಉಂಟಾದ ಗಾಯಗಳನ್ನು ಫಳಫಳ ಹೊಳೆಯುವ ರತ್ನಹಾರವನ್ನಾಗಿ ಮಾಡಿದರು. ಅವನ ಎರಡೂ ಕೈಗಳನ್ನು ನಿಷ್ಕರುಣಿಗಳಾದ ತಳವಾರರು ಗುರಿಯಿಟ್ಟು ಕಡಿಯಲು, ಜಗತ್ತೇ ಅಚ್ಚರಿ ಪಡುವಂತೆ ದೇವತೆಗಳು ಅವುಗಳನ್ನು ಕಂಕಣವಾಗಿ ಪರಿವರ್ತಿಸಿದರು. ತಲೆಯನ್ನು ಎರಡು ಹೋಳಾಗುವಂತೆ ಕಬ್ಬಿಣದ ಸಲಾಕೆಯಿಂದ ಹೊಡೆದಾಗ, ಆ ಕೋಪದ ಏಟನ್ನು ದೇವತೆಗಳು ಕಿರೀಟವನ್ನಾಗಿ ಮಾಡಿದರು. ನಿಷ್ಠುರ ಕೋಪಿಗಳಾದ ತಳವಾರರು ಕುಮಾರನ ನಡುವನ್ನು ಕೊಡಲಿಯಿಂದ ಹೊಡೆಯಲು ನಗರ

ದೇವತೆಗಳು ಆ ಗಾಯವನ್ನು ದಿವ್ಯಾಂಬರವಾಗಿ ಮಾಡಿದರು. ಅವನ ಎರಡೂ ಕಿವಿಗಳನ್ನು ಕತ್ತರಿಸಲು ನಗರದೇವತೆಗಳು ಆ ಹೊಡೆತಗಳನ್ನು ಹೊಳೆಯುವ ಕುಂಡಲಗಳಾಗಿ ಪರಿವರ್ತಿಸಿ ನೋವೇ ಇಲ್ಲದಂತೆ ಮಾಡಿದರು.

ಹೀಗೆ ಮಾಡಿದ ಗಾಯಗಳನ್ನೆಲ್ಲ ಹಾರವೇ ಮುಂತಾದ ಆಭರಣಗಳನ್ನಾಗಿ ಮಾಡಿ ಸುಕವಿನಿಕರಪಿಕಮಾಕಂದನಿಗೆ ಅದಾವುದೂ ತಾಕದಂತೆ ನಗರ ದೇವತೆಗಳು ನೋಡಿಕೊಂಡರು. ತಾವು ಮಾಡಿದ ಗಾಯಗಳೆಲ್ಲ ವಾರಿಷೇಣಕುಮಾರನಿಗೆ ಆಭರಣಗಳಾಗುತ್ತಿರುವುದನ್ನು ನೋಡಿ ತಳವಾರರು ಅಲ್ಲಿ ನಿಲ್ಲಲಾರದೆ ನಿನ್ನ ಬಳಿಗೆ ಓಡಿ ಬಂದು ಆದ ಮಹಾವಿಸ್ಮಯವನ್ನು ವಿವರಿಸಿದರು. ಅಷ್ಟರಲ್ಲಿ ದೇವತೆಗಳೂ ನಗರದೇವತೆಗಳೂ ಸೇರಿ ಆಳವಾದ ಜಿನಸಮಯವೆಂಬ ಸಮುದ್ರಕ್ಕೆ ಚಂದ್ರನಂತೆ ಇದ್ದವನೂ, ಅಭಿಮಾನಧವಳನೂ, ಧೈರ್ಯದಲ್ಲಿ ಮಂದರಪರ್ವತದಂತಿದ್ದವನೂ, ವೈಭವದಲ್ಲಿ ದೇವೇಂದ್ರಸಮಾನನೂ, ಪಾಪವೆಂಬ ಕತ್ತಲೆಗೆ ಸೂರ್ಯನಂತಿದ್ದವನೂ ಆದ ಕುಮಾರನನ್ನು ನಾನಾ ರತ್ನಗಳಿಂದ ಕೂಡಿದ ಸಿಂಹಾಸನದ ಮೇಲೆ ಕುಳ್ಳಿರಿಸಿ ಕಲ್ಪವೃಕ್ಷದ ಹೂಗಳಿಂದ ಅವನನ್ನು ಗೌರವದಿಂದ ಪೂಜಿಸಿ ಹೊಗಳಿದರು. ದೇವದುಂದುಭಿಗಳು ಭೋರ್ಗರೆದವು. ಆಕಾಶದಲ್ಲಿ ನೆರೆದಿದ್ದ ದೇವತೆಗಳ ತಂಡವು ರಾಜಕುಮಾರನ ಮೇಲೆ ಮೈಮರೆತು ಹೂವಿನ ಮಳೆಯನ್ನೇ ಸುರಿಸಿತು. ಇದರಿಂದ ಊರಿನಲ್ಲಿ ಕ್ಷೋಭೆಯುಂಟಾಯಿತು. ಆಗ ನೀನು ಸಕಲ ಜನರಿಂದ ಆವೃತನಾಗಿ ಬಂದು ಕುಮಾರನನ್ನು ಪೂಜಿಸುವ ನಗರದೇವತೆಗಳನ್ನೂ, ಆಕಾಶದಿಂದ ಮೈಮರೆತು ಜಯಜಯಕಾರ ಮಾಡುವ ದಿವಿಜಸಮೂಹವನ್ನೂ ನೋಡಿ ಹರ್ಷಚಿತ್ತನಾದೆ. ನೀನೂ ಆ ಸಮ್ಯಕ್ತ್ವಚೂಡಾಮಣಿಯನ್ನು ಸಂಪಿಗೆ ಮುಂತಾದ ಹೂಗಳಿಂದ ಪೂಜಿಸಿ, ಸುಕವಿಜನ ಮನೋಹರೋದ್ಯಾನವನಕಲಕಂಠನ ಧೈರ್ಯವನ್ನು ಬಣ್ಣಿಸಿದೆ.

ಅಷ್ಟು ಹೊತ್ತಿಗೆ, ಸುರಕೋಟಿಯು ಬಣ್ಣಿಸುತ್ತಿರುವ, ಮಂದರಪರ್ವತದಂತೆ ಕ್ಷಮಾಗುಣವುಳ್ಳ ದೃಢವ್ರತನಾದ ವಾರಿಷೇಣಕುಮಾರನನ್ನು ನಾನು ಈಗಲೇ ಹೋಗಿ ನೋಡಬೇಕು ಎಂಬ ಆಸೆಯಿಂದ ಬಂದ ಹಾಗೆ ಉದಯಾದ್ರಿಯಲ್ಲಿ ಸೂರ್ಯನು ಬಂದು ನಿಂತ. ಆ ಸಮಯಕ್ಕೆ ತನ್ನ ಪ್ರತಿಜ್ಞೆ ಪೂರೈಸಿದ್ದರಿಂದ ಕುಮಾರನು ತನ್ನ ಕೈಗಳನ್ನು ಮೇಲೆತ್ತಿದ. ಆಗ ನೀನು ಭಯಗೊಂಡು ನಿನ್ನ ಕರಕಮಲಗಳನ್ನು ಮುಗಿದುಕೊಂಡು, "ತಿಳಿಯದೆ ನಾನು ನಿನಗೆ ದೊಡ್ಡ ಅವಮಾನವನ್ನು ಮಾಡಿಬಿಟ್ಟೆ; ಅದನ್ನು ಅಮಲಗುಣನಿಲಯನಾದ ನೀನು ಮನಸ್ಸಿನಲ್ಲಿರಿಸಿಕೊಳ್ಳದೆ ಕ್ಷಮಿಸಿಬಿಡು" ಎಂದು ಬೇಡಿಕೊಂಡೆ. ಅದನ್ನು ಕೇಳಿ ವಾರಿಷೇಣಕುಮಾರನು ಕಲಕಲ ನಕ್ಕು ಹೇಳಿದ: "ನಾನು ಈ ಮುಂಚೆ ಮಾಡಿದ ಪಾಪದ ಫಲವು ಈ ಬಗೆಯಲ್ಲಿ ಫಲವಿತ್ತಿತು; ಅದಕ್ಕೆ ನೀವೇನು ಮಾಡೀರಿ? ಬಿಟ್ಟವನನ್ನು ಬಿಟ್ಟು ಬಾಣದ ಮೇಲೆ, ಹೊಡೆದವನನ್ನು ಬಿಟ್ಟು ಗುಂಡಿನ ಮೇಲೆ, ಹೆಂಡತಿಯನ್ನೆದುರಿಸಲಾರದೆ ತೊತ್ತಿನ ಮೇಲೆ, ಗೌಡನಿಗೆ ಎದುರಾಗದೆ ತಳವಾರನ ಮೇಲೆ, ನೆರೆಯವನನ್ನೆದುರಿಸಲಾರದೆ ಮಗನ ಮೇಲೆ ಕೋಪಗೊಂಡರೆಂಬ ನಾಣ್ಣುಡಿಯಂತೆ ನನ್ನ ಕರ್ಮವೇ ಹೀಗಿರಬೇಕಾದರೆ ನಿಮ್ಮ ಮೇಲೇಕೆ ಕೋಪಗೊಳ್ಳಲಿ? ಮುನಿಸಿಕೊಳ್ಳಬೇಕಾದರೆ ದುಷ್ಕರ್ಮಕ್ಕೆ ಕೋಪಿಸಿಕೊಳ್ಳುತ್ತೇನೆ. ನೀವು ನನ್ನ ಏಳಿಗೆಯನ್ನು ಬಯಸುವವರೇ ಹೊರತು ಕೇಡು ಬಯಸುವವರಲ್ಲ; ಇದೆಲ್ಲ ಕರ್ಮರಾಜನ ಪೌರುಷ" ಎಂದು ಹೇಳಿ ನಿಮ್ಮ ಕಟ್ಟುಕಡಹಗಳನ್ನು ತೆಗೆಯುವಾಗ ಮಹಾ ಗಾಂಭೀರ್ಯದಿಂದ ಅರಮನೆಗೆ ಬಂದು ಕೆಲವು ದಿವಸಗಳಿದ್ದ.

ಆಮೇಲೆ ಅವನಿಗೆ ಹೀಗನ್ನಿಸಿತು: "ಹಿಂದೆ ಅನೇಕ ಜನ್ಮಗಳಲ್ಲಿ ಗತಿಯಿಲ್ಲದೆ, ಪಾಪದ ಭಾರದಿಂದ ನನ್ನ ಮಕ್ಕಳು, ನನ್ನ ಹೆಂಡತಿ, ನನ್ನ ನಂಟರು, ನನ್ನ ಮೈಯಿ, ನನ್ನ ಬಾಹುಬಲ ಎಂದು ಧರ್ಮದ ದಾರಿಯರಿಯದೆ ಮೋಹದಿಂದ ಇಲ್ಲಿಯವರೆಗೂ ಮನಸ್ಸು ಮುರಿಯುವವರೆಗೂ ಸಂಸಾರಸಾಗರದಲ್ಲಿ ಅಲೆದಾಡಿದೆ. ಜಿನಧರ್ಮ, ಜಿನವಾಕ್ಯ, ಜಿನತತ್ವಗಳನ್ನು ಕಲಿಯಲೊಲ್ಲದೆ, ಅವುಗಳನ್ನು ಸೇರದೆ, ತಿರಸ್ಕಾರದಿಂದ ಬೈದು, ಅಪಹಾಸ್ಯಗೈದು, ಪಾಪದಿಂದಾಗಿ ನರಕಾದಿ ದುಃಖಗಳನ್ನು ಅನುಭವಿಸುತ್ತ ಅಲೆದಾಡಿ ಬಂದು ಇಲ್ಲಿ ಇದ್ದಕ್ಕಿದ್ದಂತೆ ಜಿನಧರ್ಮವನ್ನು ಹೊಂದಿದೆ. ಇದನ್ನು ಬಿಟ್ಟು ರಾಜ್ಯದ ಆಸೆಯಿಂದ ಕೂಡಿದರೆ ಮದುವೆಯ ರಾಗದಂತೆ, ಸುಗ್ಗಿಯ ಉಯ್ಯಾಲೆಯಂತೆ, ಕಬ್ಬಿನ ಗಾಣದಂತೆ, ಹಾಡುವ ರಾಗದಂತೆ, ಬೇಳುಂಬದ

ಹಬ್ಬದಂತೆ, ಯುವತಿಯ ಮೊಲೆಯಂತೆ, ಪ್ರಣಯದ ಹೊಗಳಿಕೆಯಂತೆ, ಮಧ್ಯಾಹ್ನದ ಸೂರ್ಯನಂತೆ, ಮದುವಣಗಿತ್ತಿಯ ಚೆಲುವಿನಂತೆ, ವಸಂತಕಾಲದ ಮರದಂತೆ, ಬೆಳೆ ತುಂಬಿದ ಹೊಲದ ಸೌಂದರ್ಯದಂತೆ, ತಾಂಬೂಲದ ರುಚಿಯಂತೆ, ತಲೆಯ ಕಪ್ಪುಬಣ್ಣದಂತೆ, ಗೋಡೆಯ ಚಿತ್ರದಂತೆ, ಹೂವಿನ ಬಣ್ಣದಂತೆ, ಬಳಿದ ಬಣ್ಣದ ಸೌಂದರ್ಯದಂತೆ, ಹುಚ್ಚನ ಗೌರವದಂತೆ, ಹೊರಗಿನ ಡೊಳ್ಳಿನಂತೆ, ಸೂಳೆಯ ಆಹ್ವಾನದಂತೆ, ಕುಂಟಣಿಯ ಪ್ರೀತಿಯಂತೆ, ಹಸು ಹಾಲು ಕರೆಯುವಂತೆ, ದೀಪಾವಳಿಯ ಆಟದಂತೆ, ಮೋಸಗಾರನ ಹೊಗಳಿಕೆಯಂತೆ, ಬೆಳುದಿಂಗಳ ಒಪ್ಪದಂತೆ, ತವರುಮನೆಯ ವಾಸದಂತೆ, ಸೌತೆಯ ತೋಟದಂತೆ, ಕೊನೆಯಲ್ಲಿ ಅಸಹ್ಯದ ದಾರಿಯೂ ಅಶೋಭೆಯೂ ಆಗದೆ ಇರದು. ಆ ಕಾರಣದಿಂದ ರಾಜ್ಯವೆಂಬ ಹೆಣ್ಣಿನ ಮೋಹದಿಂದ ಉದಾಸೀನ ಮಾಡಿದರೆ ನಾಯಿಯ ಬಾಲವನ್ನು ಹಿಡಿದು ನದಿ ಹಾಯುವ ದಡ್ಡನನ್ನು ಹೋಲುತ್ತೇನೆ. ಆದ್ದರಿಂದ ಶಾಶ್ವತಸುಖವನ್ನು ನೀಡುವ ಜಿನಪಾದವನ್ನೇ ಬಲವಾಗಿ ಹಿಡಿಯುತ್ತೇನೆ" ಎಂದು ದೃಢವಾದ ನಿರ್ಧಾರ ಮಾಡಿದ. ಆನಂತರ ಚೇಳಿನೀ ಮಹಾದೇವಿಯನ್ನು ಒಪ್ಪಿಸಿ, ಪುಷ್ಪಗಿರಿಯೆಂಬ ಪರ್ವತದಲ್ಲಿದ್ದ ಸುರದೇವರು ಎಂಬ ಆಚಾರ್ಯರಲ್ಲಿ ದೀಕ್ಷೆಯನ್ನು ಕೈಕೊಂಡು ಉಗ್ರವಾದ ತಪಸ್ಸಿನಲ್ಲಿ ತೊಡಗಿದ.

ಕಾಲಕ್ರಮದಲ್ಲಿ ಆ ವಾರಿಷೇಣಮುನಿಗೆ ಮಹಾ ವೈಭವದಿಂದ ಕೂಡಿದ ಜಂಘಚಾರಣತ್ವವು ಹುಟ್ಟಿತು. ಜಗತ್ತಿನಲ್ಲಿ ಜಿನಸೇವೆ ಮಾಡುವವನಿಗೆ ಇದಾವ ದೊಡ್ಡದು? ಹಾಗೆ ಜಂಘಚಾರಣತ್ವವನ್ನು ಹೊಂದಿ ಹನ್ನೆರಡು ಬಗೆಯ ತಪಸ್ಸಿನಲ್ಲಿ ನಿರತನಾಗಿ, ತ್ರಿದಂಡರಹಿತನಾಗಿ, ತ್ರಿಶಲ್ಯದೂರನಾಗಿ, ಹದಿಮೂರು ಬಗೆಯ ಚಾರಿತ್ರಸಂಪನ್ನನಾಗಿ, ಇಪ್ಪತ್ತೆಂಟು ಬಗೆಯ ಮೂಲಗುಣಗಳಿಂದ ಕೂಡಿ, ದಶವರ್ಮಗಳಿಂದ ಕೂಡಿ, ನಾಲ್ಕು ಬಗೆಯ ಕಷಾಯಗಳನ್ನು ದೂರೀಕರಿಸಿ, ರಾಗದ್ವೇಷಮೋಹಗಳನ್ನು ವರ್ಜಿಸಿ, ಒಂದೇ ಮನಸ್ಸಿನಿಂದ ತಪಸ್ಸನ್ನು ಮಾಡುತ್ತಿದ್ದನು.

ಒಂದು ದಿನ ಭಾಂಡಿಲನೆಂಬ ಪುರೋಹಿತ ಮತ್ತವನ ಹೆಂಡತಿ ಪುಷ್ಪವತಿಯರ ಮಗನಾದ, ವ್ಯಾಕರಣವೇ ಮುಂತಾದ ಶಾಸ್ತ್ರಗಳಲ್ಲಿ ಕುಶಲನಾದ, ಪುಷ್ಪದಾಡನೆಂಬ ತನ್ನ ಬಾಲ್ಯದ ಗೆಳೆಯನು ಸುದಂತಿ ಎಂಬ ಬ್ರಾಹಣ ಕನ್ಯೆಯನ್ನು ಮದುವೆಯಾದನೆಂಬ ಸುದ್ದಿ ಅವನ ಕಿವಿಗೆ ಬಿತ್ತು. ಇದನ್ನು ಕೇಳಿ, ಕುರುಡರು ಗುಂಡಿಯಲ್ಲಿ ಬಿದ್ದರೆ ಯಾರು ಅವನನ್ನು ಹೊರತೆಗೆಯುತ್ತಾನೋ ಅವನೇ ನಂಟ; ಅಂತೆಯೇ ಪಾಪವಶದಿಂದ ನರಕಕ್ಕೆ ಇಳಿವ ಜೀವಸಮೂಹವನ್ನು ಒಳ್ಳೆಯ ದಾರಿಗೆ ತರುವವನೇ ಗೆಳೆಯ; ಪ್ರಬಲವಾದ ಪಾಪವಶವಾಗಿ ಅಲೆದಾಡುವವರನ್ನು ಉಪಾಯದಿಂದ ಸದ್ಧರ್ಮದ ದಾರಿಗೆ ಬರುವಂತೆ ಮಾಡುವ ಮಹಾಪುರುಷನೇ ಈ ಬದುಕಿನಲ್ಲಿ ಕಲ್ಯಾಣಮಿತ್ರನಾಗುತ್ತಾನೆ ಎಂದು ಅವನಲ್ಲಿ ಆಲೋಚನೆ ಮೂಡಿತು. ಹೀಗಾಗಿ ಪುಷ್ಪದಾಡನನ್ನು ಚತುರ್ಗತಿಯ ಈ ಸಂಸಾರದಿಂದ ಪಾರು ಮಾಡಿ ಪಂಚಮಗತಿಯನ್ನು ಸೇರುವಂತೆ ಮಾಡಬೇಕಾದ್ದು ತನ್ನ ಕರ್ತವ್ಯ ಎಂದು ನಿರ್ಧರಿಸಿದ.

ಅದರಂತೆಯೇ ಅವನು ತನ್ನ ಗೆಳೆಯನ ಮನೆಗೆ ಬಂದು ಹೊಸ ಹೆಂಡತಿಯ ಜೊತೆಯಲ್ಲಿದ್ದ ಪುಷ್ಪದಾಡನನ್ನು ನೋಡಿದ. ಅವನ ಬಳಿ ಹೋಗಿ ಕೈಹಿಡಿದುಕೊಂಡು ಬಂದು ತಮ್ಮ ಗುರುಗಳ ಬಳಿ ಕರೆತಂದು ಅವರ ಪಾದಕ್ಕೆ ಬೀಳಿಸಿದ. "ತಮ್ಮ ಪಾದ, ದಯವಿಟ್ಟು ಚಿತ್ತಸಿ ಕೇಳಿ: ಇವನು ಸಂಸಾರಕ್ಕೆ ಹೆದರಿ ಜಿನದೀಕ್ಷೆಯನ್ನು ಕೈಗೊಳ್ಳಲು ಬಂದಿದ್ದಾನೆ; ದಯವಿಟ್ಟು ದೀಕ್ಷೆಯನ್ನು ನೀಡಿರಿ" ಎಂದು ಬಿನ್ನೈಸಿಕೊಂಡ. ಅದರಂತೆ ಗುರುಗಳು ಪುಷ್ಪದಾಡನಿಗೆ ದೀಕ್ಷೆಯನ್ನು ಕರುಣಿಸಿದರು; ವಾರಿಷೇಣಮುನಿ ಎಲ್ಲಿ ಕೋಪಗೊಳ್ಳುವನೋ ಎಂದು ಪುಷ್ಪದಾಡನು ಮನಸ್ಸಿಲ್ಲದ ಮನಸ್ಸಿನಿಂದ ದೀಕ್ಷೆ ಸ್ವೀಕರಿಸಿದ. ಆದರೆ ಜಿನರೂಪಧಾರಿಯಾದರೂ ಅವನ ಮನಸ್ಸಿನಲ್ಲಿ ತನ್ನ ಮದುವಳಿಗೆಯೇ ತುಂಬಿಕೊಂಡಿದ್ದಳು. ಕಾಡನ್ನು ಬಿಟ್ಟು ಬಂದ ಆನೆಯಂತೆ ಅವನು ದುಃಖಿತನಾದ. ಗೆಳೆಯನ ಮನಸ್ಸನ್ನು ತಿಳಿದ ವಾರಿಷೇಣಮುನಿಯು, "ಹಾಲನ್ನು ಕುಡಿಯಲು ಹಟಮಾಡುವ ಮಗುವನ್ನು ಕೋಪಗೊಂಡು ತಾಯಿ ಹಾಗೆಯೇ ಬಿಟ್ಟುಬಿಡುತ್ತಾಳೆಯೇ? ಹಾಗೆಯೇ ವಿವೇಕಿಯಾದವನು ಜಡರನ್ನೂ ಪಾಪಿಗಳನ್ನೂ ಅವರಿಗೆ ಧರ್ಮವು ತಿಳಿಯುವವರೆಗೂ ಒಳ್ಳೆಯ ಮಾತುಗಳಿಂದ ತಿದ್ದಬೇಕು. ಆದ್ದರಿಂದ

ಪಾಪವಿಕಾರದಿಂದ ಬುದ್ಧಿಹೀನನಾದ ಇವನನ್ನು ಸುಮ್ಮನೆ ಬಿಟ್ಟುಬಿಡದೆ ಸದ್ಧರ್ಮದಲ್ಲಿ ದೃಢವಾಗಿ ನೆಲೆಸುವಮತೆ ಜಿನಾಗಮವನ್ನು ಅರ್ಥವಾಗುವಂತೆ ತಿಳಿಯ ಹೇಳಿ ನಿರಂತರಸುಖವನ್ನೀಯುವ ತಪಸ್ಸಿನಲ್ಲಿ ತೊಡಗುವಂತೆ ಮಾಡುತ್ತೇನೆ" ಎಂದು ನಿರ್ಧಾರ ಮಾಡಿಕೊಂಡ.

ಆನಂತರ ಪುಷ್ಪದಾಡನಿಗೆ ವಾರಿಷೇಣಮುನಿ ಹೀಗೆಂದು ಹೇಳಿದ: "ಐಶ್ವರ್ಯವಿರಲಿಲ್ಲವೇ, ಆಳುವ ನಾಡು ಚಿಕ್ಕದೇ, ತಮಗಿಂತ ದೊಡ್ಡವರಾದ ರಾಜರುಗಳು ಇದ್ದರೇ, ತಮಗಿಂತಲೂ ಹೆಚ್ಚಿನ ಬಲಿಷ್ಠರೂ ಭೋಗಾನ್ವಿತರೂ ಆದವರು ಯಾರಿದ್ದರು? ಆದರೂ ಕೆಲವು ಚಕ್ರವರ್ತಿಗಳು ಸಾಮ್ರಾಜ್ಯಗಳನ್ನು ತೊರೆದು ಉಗ್ರತಪಕ್ಕೆ ತಮ್ಮನ್ನು ತಾವು ಒಡ್ಡಿಕೊಂಡರು. ಅಂದಮೇಲೆ ತಪಸ್ಸು ಎಂಬುದು ಸಾಮಾನ್ಯವೇನು? ಭರತ ಚಕ್ರವರ್ತಿಯೇ ಷಟ್ಖಂಡಸಮವಾದ ರಾಜ್ಯವನ್ನು ಬಿಟ್ಟು ಜಿನರೂಪವನ್ನು ಧರಿಸಿದನೆಂದ ಮೇಲೆ ಮಿಕ್ಕವರ ಸಿರಿಯಾಗಲೀ ಸಂಪತ್ತಾಗಲೀ ಪರಾಕ್ರಮವಾಗಲೀ ಯಾವ ಮಹಾ? ಮನ್ಮಥನ ರೂಪವುಳ್ಳವನೂ, ಸಕಲ ರಾಜವಂದಿತನೂ, ಷಟ್ಖಂಡವನ್ನೊಳಕೊಂಡ ಭೂಮಿಗೆ ಒಡೆಯನೂ, ಸ್ಥಿರಚಿತ್ತನೂ, ಚಕ್ರವರ್ತಿತಿಲಕನೂ ಆದ ಶಾಂತೀಶನಂತಹ ಪರಾಕ್ರಮಿಯೂ ಕೂಡ ಸಂಸಾರಕ್ಕೆ ಹೆದರಿ ಮುಕ್ತಿಕಾಂತೆಯನ್ನು ಕೂಡಬೇಕೆಂದು ಆಸೆಪಟ್ಟು ಕಠಿಣವಾದ ತಪಸ್ಸಿಗೆ ತನ್ನ ದೇಹವನ್ನು ಒಪ್ಪಸಿಕೊಂಡರೆಂದ ಮೇಲೆ ತಪಸ್ಸು ಎಂಬುದು ಸಾಮಾನ್ಯವಾದುದೇನು? ಬೇಸರ, ಆಲಸ್ಯ, ಕೊರಗು ಇವುಗಳಿಲ್ಲದೆ, ಸಾಸಿವೆಯನ್ನು ಕುಡಿದವರ ಹಾಗೆ ದುಃಖಗೊಳ್ಳದೆ, ತಪಸ್ಸಿನಲ್ಲಿ ಸಾಹಸಿಗನಾಗಿ ಗುಣಾಭ್ಯಾಸವನ್ನು ಮಾಡುವವನಿಗೆ ಮೋಕ್ಷ ಸಿಕ್ಕುವುದು ತಡವಾಗದು. ಹರಿಗೋಲಿನ ಹನ್ನೆರಡು ಕೋಲುಗಳಿಗಿಂತಲೂ ದೋಣಿಯ ಒಂದು ಕೋಲೇ ಲೇಸು ಎಂಬುವಂತೆ, ಮನುಷ್ಯಲೋಕದಲ್ಲಿ ಆಗುವ ಶತಸಹಸ್ರ ಲಕ್ಷ ವರುಷಗಳ ಕಾಲ ಸಿಕ್ಕುವ ಭವಸುಖವೆಲ್ಲವೂ ಸ್ವರ್ಗದಲ್ಲಿ ದೊರೆಯುವ ವಾಹನದೇವನ ಒಂದು ಗಳಿಗೆಯ ಸುಖಕ್ಕೆ ಸಮಾನವಾಗಲಾರದು ಅಂದ ಮೇಲೆ ಉತ್ತಮವಾದ ಜಿನರೂಪಿನಿಂದ ದೊರೆಯುವುದು ಸಂತತವಾದ ಸುಖ. ಅದಕ್ಕೆ ಎರವಾಗುವವನು ನಿಜವಾಗಿ ಗಾವಿಲನೇ ಸರಿ. ಹೆದರದೆ ತಪಸ್ಸನ್ನು ಕೈಗೊಳ್ಳಬೇಕು; ಅದರಿಂದ ಸಕಲ ರಾಜ್ಯವೂ ದೊರೆಯುತ್ತದೆ. ತಪದಿಂದ ನಿರ್ವೃತಿಯುಂಟಾಗುತ್ತದೆ; ತಪವು ಸಮಸ್ತ ಪಾಪಗಳನ್ನೂ ಪರಿಹರಿಸುತ್ತದೆ. ದಿವ್ಯವಾದ ಆಹಾರ, ಪ್ರೀತಿಸುವ ಹೆಂಡತಿ, ಸುಗಂಧದ್ರವ್ಯಗಳು ಇವುಗಳನ್ನೆಲ್ಲ ಇತರರಿಗೆ ಬಿಟ್ಟುಕೊಟ್ಟು ನನಗಾಗಿ ನೀವು ಉಣ್ಣಿರಿ, ನೀವು ಅನುಭವಿಸಿರಿ, ನೀವು ಉಪಭೋಗಿಸಿರಿ ಎನ್ನುವವನೂ, ಅಲಸಿಕೊಂಡು ತನ್ನ ಪಾಲಿನ ಧರ್ಮದಾನಗಳನ್ನು, ಓದುತಪಸ್ಸುಗಳನ್ನು ಇತರರಿಂದ ಮಾಡಿಸುವವನೂ ಫಲವನ್ನು ಪಡೆಯಲಾರ. ದೇಹ ಇರುವವರೆಗೂ ಅಶುಚಿ ತಪ್ಪದು; ಅದು ಕೊಳಚೆಯ ಗುಂಡಿ, ಜಂತುಗಳ ಆಗರ, ಹೇಸಿಕೆ ಇರುವ ಜಾಗ, ಕ್ರಿಮಿಗಳ ರಾಸಿ, ಮೂತ್ರದ ಮಡಕೆ. ಅದನ್ನು ನಂಬಿ ಚಪಲರು ಕೆಡುತ್ತಾರೆ. ಹೆಚ್ಚೇನು, ಹೊರಗಿದ್ದಾಗ ಹಲವು ದಿನಗಳಾದರೂ ಕೆಡದ ಸಾಮಗ್ರಿಗಳು ದೇಹವನ್ನು ಸೇರಿ ಕೆಟ್ಟು ಮಲವೆಂಬ ಹೆಸರನ್ನು ಪಡೆಯುತ್ತವೆ. ಅನ್ನವು ಎಷ್ಟು ಕಾಲ ಮಡಕೆಯಲ್ಲಿದ್ದರೂ ಅದನ್ನು ಎಂಜಲು ಎನ್ನುವುದಿಲ್ಲ; ಹೇಸಿಕೆ ಪಡದೆ ಅದನ್ನು ಉಣ್ಣುತ್ತಾರೆ, ಹೆದರದೆ ಮುಟ್ಟುತ್ತಾರೆ. ಅದೇ ಅನ್ನವನ್ನು ಮನುಷ್ಯರು ಮುಟ್ಟಿದ ಕ್ಷಣವೇ ತನ್ನ ಗುಣವನ್ನು ಕಳೆದುಕೊಂಡು ಎಂಜಲೆನಿಸುತ್ತದೆ, ಇತರರು ಅದನ್ನು ಮುಟ್ಟಲೂ ಅಂಜುತ್ತಾರೆ. ಆದ್ದರಿಂದ ಶರೀರವು ಹೊಲಸಾದದ್ದೇ ಹೊರತು ಶುಚಿಯಾದದ್ದಲ್ಲ. ಸದಾ ಎರಡೂ ಕೈಗಳಿಂದ ಒರೆಸುತ್ತ ಉಜ್ಜುತ್ತ ಇರದೆ ಒಳ್ಳೆಯದಲ್ಲದ ಈ ನಾಯಿಯಂತಹ ದೇಹವನ್ನು ಅಧಿಕವಾಗಿ ಪ್ರೀತಿಸುವ ಮರುಳರು ಯಾರಾದರೂ ಇದ್ದಾರೆಯೇ? ಎಲೆಯಿಂದ ಬಾಯಿ, ಮುಡಿಯಿಂದ ತಲೆ, ವಸ್ತ್ರದಿಂದ ದೇಹ ಶೋಭಿಸುತ್ತವೆ; ಇವುಗಳು ಇಲ್ಲದಾಗ ಕೊಳೆಯಾದ ದೇಹವು ಕ್ರಿಮಿರಾಶಿಯ ನೆಲೆಯಾಗುತ್ತದೆ. ಇಂಥದನ್ನು ಆಸೆಪಟ್ಟು ಹೊಂದುವವರು ಇದ್ದಾರೆಯೇ? ಉಗುಳು, ಹೇಸಿಕೆ, ಸಿಂಬಳವುಳ್ಳವನನ್ನು ನೋಡಿದರೆ ಇತರರು ಅಸಹ್ಯಪಟ್ಟುಕೊಳ್ಳುತ್ತಾರೆ; ಅಂದ ಮೇಲೆ ಆ ಉಗುಳು, ಹೇಸಿಕೆ, ಸಿಂಬಳಗಳನ್ನು ಸದಾ ಹೊತ್ತ ದೇಹಕ್ಕೆ ಹೇಸದವರಿದ್ದಾರೆಯೇ? ತನುವು ಹೇಸಿಕೆಯದು, ಯೌವನವು ಹೆಚ್ಚು ಕಾಲ ಇರದು, ಹಣ ದಾಯಾದಿಗಳಿಂದಲೂ ಕಳ್ಳರಿಂದಲೂ ಬೇಗ ಹೋಗಿಬಿಡುತ್ತದೆ,

ಹೆಂಡತಿ ತಾಯಿ ಬಂಧುಗಳು ಮಕ್ಕಳು ಇವರೆಲ್ಲ ತಮ್ಮ ಯೋಗಕ್ಷೇಮವನ್ನು ಯೋಚಿಸುವವರೇ ಹೊರತು ತಾನು ನರಕಕ್ಕೆ ಹೋಗುವಾಗ ನೆರವಿಗೆ ಬಾರರು. ಸುತ್ತಲೂ ಇರುವ ನಂಟರಾಗಲೀ ಹೆಂಡಿರಾಗಲೀ ತಂದೆಯಾಗಲೀ ತನ್ನ ನೋವನ್ನಾಗಲೀ ಸಾವನ್ನಾಗಲೀ ರೋಗವನ್ನಾಗಲೀ ಹಂಚಿಕೊಳ್ಳುವರೇನು? ಆದರೂ ಕೆಲವರು ಇತರರಿಗಾಗಿ ಕಷ್ಟವನ್ನೇಕೆ ಪಡುತ್ತಾರೋ! ಮೂರೂವರೆ ಕೋಟಿ ನಂಟರಿದ್ದರೂ ಚಕ್ರೇಶ್ವರನನ್ನು ಕಾಪಾಡಲು ಸಾಧ್ಯವಾಯಿತೇ? ಕೆಲವರು ಪರಮಾರ್ಥವನ್ನು ಕಂಡಿದ್ದರೂ ನಂಟರನ್ನು ನಂಬುತ್ತಾರೆ! ಲಂಕೆಯ ದೊರೆಯಾದ ಹಾಗೂ ಸಮಸ್ತ ವಿದ್ಯೆಗೆ ಅಧಿಪತಿಯಾದ ರಾವಣನಿಗೆ ಅವನ ಕೋಟೆಯಾಗಲೀ ಪರಾಕ್ರಮವಾಗಲೀ ರಾಮನನ್ನು ಗೆಲ್ಲಲು ಸಹಾಯ ಮಾಡಿದವೇ? ತುಪ್ಪದ ಮೇಲಿನ ಮೋಹದಿಂದ ಅಮೇಧ್ಯವನ್ನು ತಿಂದಂತೆ, ಹೊನ್ನ ಮೇಲಿನ ಮೋಹದಿಂದ ಬಾವಿಯಲ್ಲಿ ಕೈನೀಡುವಂತೆ, ಹೆಂಡತಿಯ ಮೇಲಿನ ಮೋಹದಿಂದ ಕಮರಿಗೆ ಬೀಳುವಂತೆ, ಮಕ್ಕಳ ಮೇಲಿನ ಮೋಹದಿಂದ ಬೆಂಕಿಯನ್ನು ಹಾಯುವಂತೆ, ನಂಟರ ಮೇಲಿನ ಮೋಹದಿಂದ ಹುಲಿಯನ್ನು ಹಿಡಿಯುವಂತೆ, ಸಂಸಾರದ ಮೇಲಿನ ಮೋಹದಿಂದ ಹಿರಿದಾದ ಸುಖವನ್ನು ನೀಡುವ ತಪಸ್ಸನ್ನು ಬಿಟ್ಟು ನರಕದ ಮಹಾ ದುಃಖವನ್ನು ಹೊಂದಬೇಡ. ಈ ಸಿರಿ, ಈ ದೇಹ, ಈ ಧನ, ಈ ಸತಿ, ಈ ವಿಲಾಸ, ಈ ವೈಭವ, ಈ ಸುಖ, ಈ ಭೂಮಿ, ಈ ಮನೆ, ಈ ಮಕ್ಕಳು ಶಾಶ್ವತವೆಂದು ಭಾವಿಸುವವನು ಗಾಂಪನೇ ಸರಿ. ಕೈಯಲ್ಲಿ ಬರಿ ಮರಳನ್ನು ಹಿಡಿದುಕೊಂಡರೆ ಅದು ನಿಲ್ಲುತ್ತದೆಯೇ? ಅಂತೆಯೇ ವಿವೇಕಿಯಲ್ಲದ ಮಾನವನು ದುಃಖಪಟ್ಟರೆ ಉಳಿಯುವುದು ದುಃಖವೇ ಹೊರತು ಸಂಸಾರದ ಅಲ್ಪ ಸುಖವಲ್ಲ. ಒಂದು ವರುಷದ ಬೇಸಾಯವನ್ನು ಮಾಡಲಾರದೆ ಸಾಯುವವರೆಗೂ ಎಂಜಲು ಅಗುಳನ್ನು ಆಯ್ದುಕೊಂಡು ಉಣ್ಣುವ ಒಕ್ಕಲ ಮಗನೂ, ಒಂದು ಜನ್ಮದ ತಪಸ್ಸನ್ನು ಮಾಡಲಾರದೆ ಹಲವು ಜನ್ಮಗಳ ಕಾಲ ಜೀವಿಗಳ ವೇದನೆಯನ್ನು ಅನುಭವಿಸುವ ಮಾನವನೂ ಬುದ್ಧಿವಂತರಲ್ಲ. ತರುಣಿಯರೆಂಬ ಹೆಬ್ಬುಲಿಯನ್ನೂ, ಹರಿಣಾಕ್ಷಿಯರೆಂಬ ಕ್ರೂರ ಕರಡಿಗಳನ್ನೂ, ಬಳ್ಳಿಯಂತೆ ತೆಳು ದೇಹವುಳ್ಳ ಸುಂದರಿಯರೆಂಬ ಮಹಾ ಉರಗಗಳನ್ನೂ, ಕಾಮನ ಬಾಣಗಳಿಂದ ಮೈಮರೆತು ನಿಧಾನವಾಗಿ ಸೇರಿದನಾದರೆ ಅವರು ಬೆನ್ನಟ್ಟಿ ಒತ್ತಿ ಮೆಟ್ಟಿ ತಿನ್ನದೆ ಬಿಡುವರೇ? ಅದೂ ಅಲ್ಲದೆ, ಹೆಣ್ಣುಗಳ ತೋಳನ್ನು ಕಾಮನ ಹರಿತವಾದ ಬಾಣವೆನ್ನದೆ ಬಳ್ಳಿ ಎಂದು ಕರೆದರೂ, ಲಲನೆಯರ ಕುಡಿನೋಟವನ್ನು ಕಾಮನ ಕೈಯ ಪಾಶವೆನ್ನದೆ ನಗೆಗಣ್ಣು ಎಂದರೂ, ಕಾಂತೆಯರ ಮೆಲುಮಾತುಗಳನ್ನು ನಂಜಿನ ಉಂಡೆ ಎಂದು ಕರೆಯದೆ ಮುದ್ದು ನುಡಿ ಎಂದರೂ, ತರುಣಿಯರ ಕುಚಯುಗಳವನ್ನು ಮೋಹರಾಜನ ಚಕ್ರವೆಂದು ಕರೆಯದೆ ಚಕ್ರವಾಕವೆಂದರೂ, ಲತಾಂಗಿಯರ ದುಕೂಲದ ಮೇಲುದವನ್ನು ಮೋಹರಾಜನೆಂಬ ಬೇಟೆಗಾರನ ಬಲೆ ಎನ್ನದೆ ಕಾಮಧ್ವಜವೆಂದರೂ, ಕಾಮಿನಿಯರ ಕಿವಿಗಳನ್ನು ಕಾಮರಾಜನ ಗುರಾಣಿಗಳೆನ್ನದೆ ಕಮಲಯೂಥವೆಂದು ಕರೆದರೂ, ಬಾಲೆಯರ ಬೆರಳ ಉಗುರುಗಳನ್ನು ಮಾಯಾಕಿರಾತನ ಚೂಪಾದ ಬಾಣಗಳೆಂದು ಕರೆಯದೆ ಕಾಮನ ಪಂಚಬಾಣಗಳೆಂದರೂ, ರಮಣಿಯರ ಹುಬ್ಬುಗಳನ್ನು ಯಮನ ಬಿಲ್ಲು ಎನ್ನದೆ ಕಬ್ಬಿನ ಬಿಲ್ಲು ಎಂದರೂ, ನಿತಂಬಿನಿಯರ ಬಾಸೆಗಳನ್ನು ಯಮರಾಜನ ಭಟರೆನ್ನದೆ ಶೋಭಾಕರವೆಂದರೂ, ನಾರಿಯರ ಮೂಗನ್ನು ಕಾಮದೇವನೆಂಬ ಬೇಟೆಗಾರನು ಹೊಗೆಯಿಕ್ಕಿ ಕೊಲ್ಲುವ ತಿದಿ ಎನ್ನದೆ ಸಂಪಿಗೆಯ ಮೊಗ್ಗು ಎಂದು ಕರೆದರೂ, ಕನ್ಯೆಯರ ತುಟಿಗಳನ್ನು ನರಕದ ಬಿಲವೆಂದು ಕರೆಯದೆ ಕಡುಚೆಲುವು ಎಂದರೂ, ದಯಿತೆಯರ ಕೂದಲನ್ನು ಕಣ್ಣಿಯ ಬಲೆ ಎನ್ನದೆ ಮರಿದುಂಬಿ ಎಂದು ಕರೆದರೂ, ಅಬಲೆಯರ ಕೊರಳ ಗೆರೆಗಳನ್ನು ಮೃತ್ಯುರಾಜನ ಹಗ್ಗವೆನ್ನದೆ ಕೋಮಲ ರೇಖೆಯೆಂದು ಕರೆದರೂ, ಗಣಿಕೆಯರ ಹಣೆಯನ್ನು ಮಾಯಾರಾಜನ ಕವಲು ಬಾಣವೆನ್ನದೆ ಬಾಲಶಶಿಯೆಂದರೂ, ಕಪಟನಾಟಕಸೂತ್ರಧಾರೆಯರ ಶೃಂಗಾರವನ್ನು ನರಕದ ದಾರಿ ಎನ್ನದೆ ಸುಂದರವಾದುದೆಂದರೂ, ಮಾಯಾಕಿರಾತೆಯರ ಬಿನ್ನಾಣವನ್ನು ಸಿಂಹವೆನ್ನದೆ ರಮಣೀಯವೆಂದರೂ, ಕುಟಿಲಚಿತ್ತೆಯರ ಕೂಟವನ್ನು ಕಾಲಕೂಟವೆನ್ನದೆ ಸಂತೋಷಪಟ್ಟರೂ, ಪಾಪಕೂಪೆಯರ ಸಹವಾಸವನ್ನು ಯಮನ ಗಾಳವೆನ್ನದೆ ಉಬ್ಬಿದರೂ ತನ್ನ ಕೇಡನ್ನು ಬಗೆದಂತೆಯೇ ಹೊರತು ಸುಖವನ್ನು ಬಗೆದಂತಲ್ಲ. ಸ್ತ್ರೀಯರು ಮಾಯೆ, ಮೋಸ, ಕಪಟ, ತಂತ್ರ, ಮರುಕದ

ತೋರಿಕೆ, ಕಪಟೋಪಾಯಗಳ ಗಣಿಗಳು, ಸರ್ವಜನವಂಚಕಿಯರು. ನರಕದ ದಾರಿಯನ್ನು ತಿಳಿಯದ ನರರಿಗೂ ಆ ದಾರಿಯನ್ನು ತೋರಿಸುವವರು; ಪಾಪವೆಂಬ ಕಳ್ಳನು ಹಿಡಿದ ಬಡಿಗೆಗಳು; ಅರವಿಂದಾಕ್ಷಿಯರು ಕಾಮನ ಓಜೆಯ ಹೆಣ್ಣಾನೆಗಳು. ಅವರು ಸುಗತಿಯ ದಾರಿಯಲ್ಲಿನ ಮುಳ್ಳುಗಳು, ಹುಲಿಗಳ ಹಿಂಡು, ಅದರ ಬಾಗಿಲ ಕದಗಳು. ಮೃಗಾಕ್ಷಿಯರೆಂದರೆ ಮೋಕ್ಷದ ದಾರಿಯ ಕಾವಲು ನಾಯಿಗಳು. ಸಿರಿಯೆಂಬುದು ಹುಲ್ಲಿಗೆ ಬಿದ್ದ ಬೆಂಕಿಯಂತೆ, ರಾಜ್ಯವೈಭವವು ಮೋಡದ ನೆರಳು, ಯೌವನವು ಇಂದ್ರಚಾಪದಂತೆ, ಆದರೂ ಮನುಷ್ಯರು ಏಕೆ ಇವಕ್ಕೆ ಆಸೆ ಪಡುವರೋ ಏನೋ! ಜೀವನವು ದರಿಯ ಮರದ ಹಾಗೆ, ಹೆಂಡಿರ ಉಪಭೋಗವು ಹತ್ತಿಯ ಮಸಿಯ ಹಾಗೆ, ಕಳೇವರವು ಬೆಟ್ಟದ ಮೇಲಣ ನದಿಯ ಹಾಗೆ, ಅದಟು ಪರಾಕ್ರಮಗಳು ಅರಿಸಿನದಂತೆ. ಬಲ, ವೈಭವ, ಪ್ರೀತಿ, ಕಲಿತನ, ದರ್ಪ, ಪ್ರತಾಪ, ಪರಾಕ್ರಮ, ಕುಲ, ದಳ ಇವುಗಳೆಲ್ಲ ನೀರಿನ ಗುಳ್ಳೆಗಳಂತೆ ನಶ್ವರವಾದವು. ಮೂರ್ಖ ಮನುಷ್ಯರು ಅವುಗಳಿಗೇಕೆ ಹಂಬಲಿಸುವರೋ! ದೇಹವು ಒಳ್ಳೆಯದಾದರೂ, ಸಿರಿಯು ಕೆಡದಿದ್ದರೂ, ಆಯುಷ್ಯವು ಬರಬರುತ್ತ ಹೆಚ್ಚಿದರೂ ಮನುಷ್ಯರನ್ನು ಸಂತವಿಡುವವರಾರು, ಅವರನ್ನು ತಡೆಯಬಲ್ಲವರಾರು? ಚಕ್ಕನೆ ಸಾಯುವುದನ್ನೂ ಸಿರಿಯು ಇದ್ದಕ್ಕಿದ್ದಂತೆ ಹೋಗುವುದನ್ನೂ ನೋಡಿಯೂ ಕೇಳಿಯೂ ಜನರು ಸೊಕ್ಕಿನಿಂದ ಕೂಡಿರುತ್ತಾರೆ, ಉಕ್ಕುತ್ತಾರೆ, ಉತ್ಸಾಹದಿಂದ ಮುನ್ನುಗ್ಗುತ್ತಾರೆ; ಇದು ಚೋದ್ಯ! ದೇಹವನ್ನು ತಪಸ್ಸಿಗಾಗಿಯೂ, ಧನವನ್ನು ಜನನುತ ಸದ್ಧರ್ಮಕ್ಕಾಗಿಯೂ ವ್ಯಯ ಮಾಡಿಯೂ ಕೆಲವರು ಮನಸ್ಸಿನಲ್ಲೇ ಪಾಪಕ್ಕೆ ಹೆದರುತ್ತಾರೆ, ಆದರೆ ದುಃಖಕ್ಕೆ ಹೆದರುವುದಿಲ್ಲ. ಇದು ನನಗೆ ಚೋದ್ಯಕರವಾಗಿ ಕಾಣುತ್ತದೆ.

ಹೀಗೆ ಶರೀರದಿಂದ ಉಂಟಾಗುವ ಕೆಟ್ಟುದನ್ನೂ, ಸಾಸಾರದಿಂದಾಗುವ ದುಃಖವನ್ನೂ, ಭೋಗಗಳು ಹಾಳಾಗುವುದನ್ನೂ, ಬದುಕಿನ ಅನಿತ್ಯತೆಯನ್ನೂ, ಹೆಂಗಸರ ಕಷ್ಟತೆಯನ್ನೂ, ಸ್ಥಿತಿಕರಣವು ಮಹಾಪುಣ್ಯಕರವೆಂಬುದನ್ನೂ ಹನ್ನೆರಡು ವರ್ಷಗಳ ಕಾಲ ತಿಳಿಹೇಳಿದರೂ, ಒಡೆದ ಕಲ್ಲದೋಣಿಯಲ್ಲಿ ಸುರಿದ ನೀರಿನ ಹಾಗೆ ಅದನ್ನು ಮನದಟ್ಟು ಮಾಡಿಕೊಳ್ಳದೆ, ಪುಷ್ಪದಾಡನು ಮನಸ್ಸಿನಲ್ಲಿ ಹೆಣ್ಣು ರೂಪವನ್ನೇ ಧ್ಯಾನಿಸುತ್ತಿದ್ದ. ಅದನ್ನು ಕಂಡು ವಾರಿಷೇಣ ಮುನಿನಾಥನು ತನ್ನಲ್ಲಿ ಹೀಗೆ ಆಲೋಚಿಸಿದ: ಹಾಲನ್ನು ಕುಡಿಯದಿದ್ದರೆ ತಾನು ಕೃಶವಾಗುತ್ತೇನೆ, ತಾಯಿಯ ಮನಸ್ಸು ನೋಯುತ್ತದೆ ಎಂದು ಹಸುಗೂಸುಗಳು ಹಾಲನ್ನು ಕುಡಿಯುತ್ತವೇನು? ಹೀನಾತ್ಮರೂ ಅಂತೆಯೇ. ಹಿತಕರವಾದುದನ್ನೂ ಸುಖೋಪಾಯವನ್ನೂ ಜ್ಞಾನಿಯಾದವನು ಹೇಳಿದರೂ ಅವರು ಅದನ್ನು ಕೈಗೊಳ್ಳುವುದಿಲ್ಲ. ನೆಲ್ಲಕ್ಕಿಯ ಅನ್ನ, ತೊವ್ವೆ, ತಿಳಿದುಪ್ಪಗಳನ್ನು ಹಾಕಿದರೂ ನಾಯಿಗಳು ಹೇಸಿಗೆಯನ್ನೇ ಕುರಿತು ಚಿಂತಿಸುತ್ತವೆ, ಅಂತೆಯೇ ಚಂಚಲಚಿತ್ತರು ಸದುಕ್ತಿಗಳನ್ನು ಒಲ್ಲದೆ ಕುಮಾರ್ಗದ ಬಗ್ಗೆಯೇ ಆಲೋಚಿಸುತ್ತಾರೆ. ಹೀಗನ್ನಿಸಿ ಅವನು ಮುಗುಳ್ನಕ್ಕ. ತಾನು ಅಲಸಿಕೆಯಿಂದ ಬಿಟ್ಟರೆ ಯಾವ ಪುರುಷಾರ್ಥವನ್ನೂ ಸಾಧಿಸಿದ ಹಾಗಾಗದು ಎಂದು, ಗಿಳಿಯನ್ನು ಪಂಜರದಲ್ಲಿರಿಸಿ ರಕ್ಷಿಸುವಂತೆ ಪುಷ್ಪದಾಡನನ್ನು ಎಲ್ಲಿಯೂ ಹೋಗಗೊಡದೆ ಧರ್ಮಶ್ರವಣ ಮಾಡುತ್ತಿದ್ದ.

ಹೀಗಿರಲು ಒಂದು ದಿನ ವಿಮಲಶೈಲದಲ್ಲಿದ್ದ ವರ್ಧಮಾನಸ್ವಾಮಿಗಳಿಗೆ ವಂದಿಸಿ ಬರಲೆಂದು ವಾರಿಷೇಣಮುನಿಯು ಹೋದ. ಆ ಕಡೆ ದ್ರವ್ಯಲಿಂಗಿಯಾಗಿದ್ದ ಪುಷ್ಪದಾಡನು ಇಷ್ಟಪಟ್ಟು ಬಲೆ ಹರಿದ ಕೊಂಕನ ಹಾಗೆ ಮನೆಯ ಕಡೆ ಹೊರಟ. ಆಗ ಉತ್ತಮಗುಣನಿಲಯನೂ, ಕಾಮವೆಂಬ ಮದಗಜಕ್ಕೆ ಸಿಂಹಸದೃಶನೂ ವಿಮಲಯಶೋದಾತ್ತನೂ, ಶ್ರುತಿಸಮುದ್ರನೂ, ಜಗದುತ್ತುಂಗನೂ, ಕಷಾಯ ರಹಿತನೂ, ಪಾಪದೂರನೂ ಆದ ವಾರಿಷೇಣಮುನಿವಲ್ಲಭನು ಭಕ್ತಿಯಿಂದ ಮಹಾವೀರಸ್ವಾಮಿಗಳಿಗೆ ವಂದಿಸಿ ವಾಪಸು ಬಂದ. ಆದರೆ ಪುಷ್ಪದಾಡನು ಅಲ್ಲಿ ಕಾಣಿಸಲಿಲ್ಲ; ತನ್ನ ಮನೆಗೆ ವಾಪಸ್ಸಾದನೆಂದು ತಿಳಿಯಿತು. ತನಗೆ ಜಂಘಚಾರಣಋದ್ಧಿ ಪ್ರಾಪ್ತವಾಗಿದ್ದುದರಿಂದ ಗಾಳಿಯ ವೇಗದಿಂದ ಹೋಗಿ ಪುಷ್ಪದಾಡನಿದ್ದ ಜಾಗವನ್ನು ತಲುಪಿದ. ಅವನಲ್ಲಿ ಮತ್ತೆ ವೈರಾಗ್ಯವುಂಟಾಗುವಂತೆ ಮಾಡಬೇಕೆಂದು ನಿನ್ನ ಅರಮನೆಗೆ ಬಂದ. ಮುನಿಪೋತ್ತಮನ ಬರವನ್ನು ಚೇಳಿನೀದೇವಿ ದೂರದಿಂದಲೇ ನೋಡಿ, ಈ ಹೊತ್ತಲ್ಲದ ಹೊತ್ತಿನಲ್ಲಿ ಅವನು ಬರಲು ಏನೋ

ಕಾರಣವಿರಬೇಕು ಎಂದು ವಿಸ್ಮಯಗೊಂಡಳು. ಆ ದಾರಿಯು ಸುಲಭವಾದುದೆಂದು ಈ ಎಗ್ಗನು ಮೊದಲು ಉತ್ಸಾಹದಿಂದ ಹೋಗಿ, ಅಲ್ಲಿ ನೀಸಲಾರದೆ ನಾಚಿಕೆಯಿಲ್ಲದೆ ವಾಪಸ್ಸಾದ. ಛೇ, ಗುಗ್ಗುರಿಯನ್ನು ತಿನ್ನುವ ರುಚಿ ಸುಣ್ಣವನ್ನು ತಿನ್ನವುದರಲ್ಲಿರುತ್ತದೆಯೇ? ಅಳಿಮನಸ್ಸಿನವನಿಗೂ, ಸುಖವನ್ನು ಬಯಸುವವನಿಗೂ, ಮನೆ, ವೈಭವ, ಕೀರ್ತಿ ಇವುಗಳಿಗೆ ಆಸೆಪಡುವವನಿಗೂ, ಖೂಳನಿಗೂ ಜೈನಮಾರ್ಗವು ಸರಿಹೋಗದು. ಇವನು ಸುಖಪುರುಷ. ಕೊರಳಲ್ಲಿ ಶಕ್ತಿಯಿಲ್ಲದವನು ಒರಳನ್ನು ನುಂಗಿದ ಎಂಬ ಗಾದೆಯಂತೆ ತನ್ನ ಸಾಮರ್ಥ್ಯ ತಿಳಿಯದೆ ಜಗನ್ಮಾಂಗಲ್ಯರೂಪನಾದ ಜಿನಸ್ವಾಮಿಯ ರೂಪವನ್ನು ತಾಳಿ, ತಪಸ್ಸಿನ ಕ್ಲೇಶವನ್ನು ತಾಳಲಾರದೆ ರಾಜ್ಯದ ಮೇಲಿನ ಆಸೆಯಿಂದ ಮರಳಿ ಬಂದಿರಬೇಕೆಂದು ಆಲೋಚಿಸಿದಳು. ಇವನು ಇಲ್ಲಗೆ ಬಂದ ಕಾರಣವನ್ನು ಪತ್ತೆ ಮಾಡಬೇಕೆಂದು ನಿರ್ಧರಿಸಿ, ಒಂದು ಸರಾಗಾಸನವನ್ನು ಮತ್ತೊಂದು ವಿರಾಗಾಸನವನ್ನೂ, ಹೀಗೆ ಎರಡು ಪೀಠಗಳನ್ನು ಹಾಕಿಸಿದಳು.

ಸುಕವಿಮನಃಪದ್ಮಿನೀರಾಜಹಂಸನು ಬಂದು ವಿರಾಗಾಸನದಲ್ಲಿ ಕುಳಿತ. ಜಿನಸಮಯ ಗಗನಚಂದ್ರಿಕೆಯಾದ ಚೇಳಿನೀದೇವಿಯು ಮುನಿಯ ಪಾದಪಲ್ಲವಗಳಿಗೆ ಹೂಗಳಿಂದ ಅರ್ಚಿಸಿ, ಭಕ್ತಿಭಾವದಿಂದ ವಂದಿಸಿ, ಕೈಗಳನ್ನು ಮುಗಿದುಕೊಂಡು, ತಲೆಬಾಗಿ ಮುಂದೆ ಕುಳಿತಳು. "ತಮ್ಮ ಪಾದ, ತಮ್ಮ ಪಾದಯುಗಳವನ್ನು ಪುಣ್ಯವಶದಿಂದ ಕಾಣುವ ಹಾಗಾಯಿತು. ನನಗಿಂತ ಪುಣ್ಯವಂತಳು ಬೇರಾರಿದ್ದಾರೆ? ನನಗೆ ತಮ್ಮ ಅಪ್ಪಣೆ ಏನು?" ಎಂದು ವಿನಯದಿಂದ ಕೇಳಿದಳು. ಅದಕ್ಕೆ ಉತ್ತರವಾಗಿ ಮುನಿಗಳು ಅವಳ ಐನೂರು ಮಂದಿ ಸೊಸೆಯಂದಿರನ್ನು ಅಲಂಕರಿಸಿ ಬೇಗನೆ ಕರೆತರಲು ಹೇಳಿದರು. ಮಹಾರಾಣಿಯು ತನ್ನ ಮಣಿಮಾಡಕ್ಕೆ ಹೋಗಿ "ಎಲ್ಲರೂ ಅಲಂಕಾರ ಮಾಡಿಕೊಂಡು ಬೇಗ ಬನ್ನಿ, ನಿಮ್ಮ ವಲ್ಲಭನು ಬಂದಿದ್ದಾನೆ" ಎಂದು ಪರಿಚಾರಕಿಯರ ಮೂಲಕ ಸೊಸೆಯರಿಗೆ ಹೇಳಿಕಳಿಸಿದಳು. ಅದನ್ನು ಕೇಳಿದ ಅವರು ತೆಂಕಣ ಗಾಳಿ ಬೀಸಲು ಪುಲಕಿತಗೊಳ್ಳುವ ಮಾಧವೀಲತೆಗಳಂತೆ ಶೃಂಗಾರವನ್ನು ಮಾಡಿಕೊಳ್ಳಲು ತೊಡಗಿದರು.

ಆಗ ಅದರಲ್ಲಿ ಒಬ್ಬಳು ಪ್ರೀತಿಯ ಭರದಲ್ಲಿ ಮೊಲೆಯ ಮೇಲೆ ಕುಂಕುಮದ ಬೊಟ್ಟನ್ನೂ, ಕಾಲುಗಳಲ್ಲಿ ಕಟಿಸೂತ್ರವನ್ನೂ, ಕೈಗಳಲ್ಲಿ ಹಾರವನ್ನೂ ಧರಿಸಿ ತರಾತುರಿಯಿಂದ ಬಂದಳು. ಮತ್ತೊಬ್ಬ ಬಾಲಿಕೆಯು ಮಹಾರಾಜನ ಪ್ರೀತಿಯನ್ನು ಸಂಪಾದಿಸಲು ಹೊಸ ಚೀನಾಂಬರವನ್ನುಟ್ಟು, ಪಚ್ಚೋಲೆಯನ್ನು ಇಟ್ಟುಕೊಂಡು, ತನ್ನ ರೂಪವು ಕಣ್ಣನ್ನು ಆಕರ್ಷಿಸುವಂತೆ ವಿಲಾಸವನ್ನು ಮೆರೆಯುತ್ತ ಉತ್ಸಾಹದಿಂದ ಬಂದಳು. ಮತ್ತೂ ಒಬ್ಬಳು ಹಾರವನ್ನು ಧರಿಸಿ, ಹೊಸ ಮಲ್ಲಿಗೆಯನ್ನು ಮುಡಿದು, ಚಂದನದ ಬೊಟ್ಟನ್ನು ಅಲಂಕಾರಕ್ಕಾಗಿ ಇಟ್ಟುಕೊಂಡು, ಉತ್ತಮ ದುಕೂಲವನ್ನುಟ್ಟು, ಸರಸ್ವತಿಯಂತೆ ಮನೋಹರವಾಗಿ ಬಂದಳು. ಕಣ್ಣಿನ ಬಳಿ ಸುಳಿಗುರುಳು ಓಲಾಡುತ್ತಿರಲು, ನೀಳವಾದ ಕಣ್ಣುಗಳು ರಮಣೀಯವಾಗಿರಲು, ಕೋಮಲ ದೇಹ ರಮ್ಯವಾಗಿ ಕಾಣಿಸಲು, ಹುಬ್ಬಿನ ಕಂಪು ಮನಸ್ಸನ್ನು ಸೋಲಿಸಲು, ಮಹಾರಾಜನ ಚಿತ್ತವನ್ನು ತಕ್ಷಣವೇ ಸೂರೆಗೊಳ್ಳುವೆನೆಂದು ಮತ್ತೊಬ್ಬಳು ಊರ್ವಶಿಯಂತೆ ಬೆಡಗಿನಿಂದ ನಡೆದು ಬಂದಳು. ಹೀಗೆಯೇ, ಕಾಮನ ಮದೇಭದಂತೆ, ಮನ್ಮಥನ ಬಾಣದಂತೆ. ರತಿಯ ಹಾಗೆ, ಕಳಹಂಸದ ನಡಿಗೆಯಿಂದ ನೋಡಿದವರ ಮನಸ್ಸನ್ನು ಅಲುಗಾಡಿಸುತ್ತ, ವಿಭ್ರಮದಿಂದ ಶೃಂಗಾರರಸವು ಮೇರೆದಪ್ಪಿದಂತೆ ಲಾವಣ್ಯಯುತೆಯರಾದ ಐನೂರು ಮಂದಿ ಸೊಸೆಯರೂ ಚೇಳಿನೀದೇವಿಯ ಬಳಿ ಬಂದರು.

ಅವರ ಜೊತೆಯಲ್ಲಿ ಮಹಾರಾಣಿಯು ಸಮ್ಯಕ್ತ್ವಚೂಡಾಮಣಿಯ ಬಳಿ ಧಾವಿಸಿ ಅವನಿಗೆ ನಮಸ್ಕರಿಸಿದಳು. ಮನ್ಮಥನ ವಿಜಯಗಜದಂತೆ, ಕಾಮನ ಗುರಾಣಿಯಂತೆ ಆ ಕಾಂತೆಯರು ತಮ್ಮ ಚೆಲುವು, ವಿಲಾಸಗಳಿಂದ ಅಲ್ಲಿ ನೆರೆದಿದ್ದರು. ಅವರೆಲ್ಲರಿಗೂ ತಮ್ಮ ನಲ್ಲನನ್ನು ಗೆಲ್ಲುವ ಆತುರ; ಹಾಗಾಗಿ ಒಬ್ಬೊಬ್ಬರೂ ಒಂದೊಂದು ಬಗೆಯಲ್ಲಿ ತಮ್ಮ ವಿಲಾಸವಿಭ್ರಮಗಳನ್ನು ಮೆರೆಯುತ್ತಿದ್ದರು. ಆಗ ವಾತ್ಸಲ್ಯರತ್ನಾಕರನು ಪುಷ್ಪದಾಡನ ಹೆಂಡತಿಯಾದ ಸುದಂತಿಯನ್ನೂ ಬರಮಾಡಿಸಲು ಚೇಳನೀದೇವಿಗೆ ಹೇಳದ. ಕೊಂಚ ಹೊತ್ತಿನಲ್ಲಿ ಅವಳು ಅಲ್ಲಿಗೆ ಬಂದು ಇತರ ಸುದತಿಯರ ಜೊತೆಯಲ್ಲಿ

ನಿಂತುಕೊಂಡಳು. ಹೆಣ್ಣು ಆನೆಗಳ ಹಿಂಡಿನಲ್ಲಿ ಒಂದು ಕುರಿ, ಕರ್ಪೂರದ ಮರಗಳ ಮಧ್ಯದಲ್ಲಿ ಒಂದು ಅತ್ತಿಗಿಡ, ತಾವರೆಗಳ ನಡುವೆ ಒಂದು ಎಕ್ಕೆಯ ಹೂ, ಗೋವುಗಳ ಹಿಂಡಿನಲ್ಲಿ ಒಂದು ಕಾಡುಬೆಕ್ಕು, ಸಿಂಹಗಳ ಸಮೂಹದಲ್ಲಿ ಒಂದು ಕೋಡಗ, ಮಾಧವೀಲತೆಗಳ ನಡುವೆ ಕರ್ಬಳ್ಳಿ, ತಾಮ್ರದ ನಡುವೆ ಕಬ್ಬಿಣ, ಜಗತ್ತಿನ ವಾರೀಶರ ನಡುವೆ ಕೀಲಿಯ ಹಾಗೆ ಸುದಂತಿ ಇತರ ಹೆಣ್ಣುಗಳ ಮಧ್ಯೆ ಇದ್ದಳು. ರೆಪ್ಪೆಯಿಲ್ಲದ ಕೊಳೆಯಾದ ಕಣ್ಣು, ವಿಭ್ರಮವಿಲ್ಲದ ರೂಪು, ಇಂಗಿಹೋದ ಮೊಲೆಗಳು, ಆಕರ್ಷಣೆಯಿಲ್ಲದ ಕಪ್ಪಾದ ದೇಹ, ಅರಳಿದ ಮೂಗು, ಅಡಗಿದ ಗಲ್ಲ, ಮುರುಟಿದ ಮುಖ, ತಗ್ಗಿದ ಬಾಯಿ, ಕುಳ್ಳುಗಾಲು, ಬೆಡಗಿಲ್ಲದ ಮೈ, ಕಜ್ಜಿಯಿಂದ ತುರಿಯುವ ಕೈಕಾಲುಗಳು, ಕೂದಲಿಲ್ಲದ ತಲೆ, ಕುಗ್ಗಿದ ದೇಹ, ಮೊಳದುದ್ದ ಕಿವಿ, ಉಬ್ಬು ಹಲ್ಲು, ಮೊರದಂತಹ ಕಾಲುಗುರು, ಒಳ ಸೇರಿದ ಹೊಟ್ಟೆ, ಒರಳಿನಂತಹ ಕಾಲು, ಬಾಗಿದ ಬೆನ್ನು, ಕೊರೆಗಣ್ಣು, ಬಿಟ್ಟ ಬಾಯಿ, ಕೂಡಿಕೊಂಡ ಹುಬ್ಬುಗಳು ಇವುಗಳಿಂದ ಕೂಡಿ, ಕಾಸಿಯನ್ನು ಉಟ್ಟು ಹಂಸಗಳ ನಡುವೆ ಪಾರಿವಾಳವು ಇದ್ದಂತೆ ಸುದಂತಿ ಕಾಣಿಸಿದಳು.

ಆಗ ವಾರಿಷೇಣಮುನಿಯು ಪುಷ್ಪಡಾಡನ ಮುಖವನ್ನು ನೊಡಿ ನಗುತ್ತ ಹೀಗೆಂದ: "ನರಲೋಕದ ಅಲ್ಪಸುಖವೂ ಶಾಶ್ವತವಲ್ಲ; ಆದರೆ ವೀರನಾಥನ ಪಾದಸೇವೆಯಿಂದ ಸ್ಥಿರವಾದ ಮೋಕ್ಷಸುಖವು ಸಿಕ್ಕಲಿ ಎಂಬ ಆಸೆಯಿಂದ ನಿನ್ನನ್ನು ತಪಸ್ಸಿನಲ್ಲಿ ನಿಲ್ಲಿಸಿ ಹನ್ನೆರಡು ವರ್ಷಗಳೇ ಆದವು. ಆದರೆ ನೀನು ಇಷ್ಟು ಕಾಲವೂ ಆತ್ಮಕಾರ್ಯವನ್ನು ಆಲೋಚಿಸದೆ, ಲೋಕೋತ್ತರವಾದ ಜಿನೋಕ್ತಿಯನ್ನು ಅನುಸರಿಸದೆ, ನಾಯಿಗೆ ಕಂಪಾದ ತುಪ್ಪವು ಇಷ್ಟವಾಗದು ಎಂಬ ಹಾಗೆ ನಾನು ಮಾಡಿದ ಧರ್ಮಶ್ರವಣವನ್ನು ಒಲ್ಲದೆ, ಸುದಂತಿಯನ್ನೇ ನಿನ್ನ ಮನಸ್ಸಿನಲ್ಲಿ ನೆನೆಯುತ್ತಿದ್ದೆ. ಆದರೆ ನಾನಾದರೋ ವಿಭ್ರಮದಲ್ಲಿ ರತಿ, ಲಾವಣ್ಯದಲ್ಲಿ ಶಚೀದೇವಿ, ವಿಲಾಸದಲ್ಲಿ ಭಾರತಿಯರನ್ನೂ ಹೀಗಳೆವ, ಶೃಂಗಾರದಲ್ಲಿ ರೂಪದಲ್ಲಿ ಉನ್ನತರಾದ ಅರಗುವರಿಯರನ್ನು ತೊರೆದು ಮೋಕ್ಷಸಾಧನೆಗಾಗಿ ಒಂದೇ ಮನಸ್ಸಿನಿಂದ ತಪಸ್ಸನ್ನು ಕೈಗೊಂಡೆ. ಅಳಿಲಿನ ಗಳಿಕೆ ಬಸುರಿ ಹಣ್ಣು ಎಂಬ ಹಾಗೆ ನೀನು ಮಾತ್ರ ಏನು ಮಾಡಿದರೂ ಸುದಂತಿಯನ್ನು ಮರೆಯಲಾರದೆ ಬೆಳಬೆಂಜನನಾಗಿ ಭೋಗಿಸುವೆನೆಂಬ ಆಸೆಯಿಂದ ಕುದಿಯುತ್ತಿದ್ದೀಯೆ. ಊಟ ಮಾಡಿ ತಿಳಿಯದವರಿಗೆ ಊಟವೆಲ್ಲ ಅಚ್ಚರಿಯೆಂಬಂತೆ, ಹಳ್ಳಿಗೆ ಮೆಣಸೇ ಬೆಲ್ಲ ಎಂಬ ಹಾಗೆ, ಬೇಡರ ಹಳ್ಳಿಗೆ ಹಂದಿ ಮದ್ದಾನೆ ಎಂಬಂತೆ, ನುಗ್ಗೆಯ ಬನದಲ್ಲಿ ಗುಬ್ಬಚ್ಚಿಯೇ ಕೋಗಿಲೆ ಎಂಬ ರೀತಿಯಲ್ಲಿ, ಅಗಸೆಯ ಮರಕ್ಕೆ ತೊಣಚಿಯೇ ಮರಿದುಂಬಿ ಎಂಬ ಹಾಗೆ ಸಂಸಾರದ ಅಲ್ಪಸುಖಕ್ಕೆ ಆಸೆಪಟ್ಟು ಶಾಶ್ವತಸುಖವನ್ನು ಉದಾಸೀನ ಮಾಡಿ, ಜಿನನ ರೂಪಕ್ಕೆ ಬೇಸರುಗೋಳ್ಳುವೆಯಲ್ಲ! ನಿನಗಿಂತ ದೊಡ್ಡ ಗಾವಿಲರೂ ಕುಮತಿಗಳೂ ಲೋಕದಲ್ಲಿಲ್ಲ" ಎಂದು ಮೂದಲಿಸಿದ. ಅವರೆಲ್ಲರನ್ನೂ ತೋರಿಸಿ ನಕ್ಕು ಹಾಸ್ಯ ಮಾಡಿದ.

ಆನಂತರ ಸುದಂತಿಯ ಮುಖವನ್ನು ನೋಡಿ ವಾತ್ಸಲ್ಯರತ್ನಾಕರನು ಹೀಗೆ ನುಡಿದ: "ಪರಮ ಜಿನೇಶ್ವರನ ರೂಪವನ್ನು ಧರಿಸಿದ್ದರೂ ಹೆಂಡತಿಯ ಮೇಲಿನ ಆಸೆಯಿಂದ ಅವಳನ್ನು ಸೇರಲು ಮತ್ತೆ ಬರುವವನು ಮನುಷ್ಯನೇ, ನೀನೇ ಹೇಳು ತಾಯಿ" ಎಂದು ಕೇಳಿದ. ಆಗ ಸುದಂತಿಯು, "ವಾಂತಿ ಮಾಡಿಕೊಂಡ ಕೂಳನ್ನು ನಾಯಿಯೂ ಮುಟ್ಟುವುದಿಲ್ಲ; ಅಂದ ಮೇಲೆ ಮೊದಲು ಬಿಟ್ಟು ಆ ಮೇಲೆ ಬಯಸುವವನು ಹೇಡಿಯೇ ಸರಿ. ಅವನು ನಾಯಿಗಿಂತಲೂ ಕೀಳು" ಎಂದು ಹೇಳಿದಳು. ಅದನ್ನು ಕೇಳಿ ಪುಷ್ಪಡಾಡನಿಗೆ ನಾಚಿಕೆಯಾಯಿತು. ವಾರಿಷೇಣನು ಈ ಎಲ್ಲ ಸುಂದರಿಯರನ್ನು ಬಿಟ್ಟು ಹೋಗಿದ್ದಾನೆಂದ ಮೇಲೆ ನನಗೇನಾಯಿತು? ನನ್ನ ಹೆಂಡತಿ ಅಷ್ಟು ಹೆಚ್ಚಿನವಳೇ? ವರತಪವನ್ನು ಕೈಗೊಂಡಾಕ್ಷಣ ಈ ವರಮುನಿಗೆ ಜಂಘಚಾರಣತ್ವವು ಲಭಿಸಿತು ಎಂದ ಮೇಲೆ ತಪಸ್ಸಿಗಿಂತಲೂ ಹಿರಿದಾದ ಸಿರಿಯು ಮತ್ತಾವುದಿದೆ ಎಂದು ಅವನಿಗನ್ನಿಸಿತು. ಹಿಂದೆ ವಾರಿಷೇಣಮುನಿ ಮಾಡಿದ ಧರ್ಮಶ್ರವಣದಲ್ಲಿ ಆಗ ಅವನಿಗೆ ನಂಬಿಕೆಯುಂಟಾಯಿತು. ಸಂಸಾರವೆಂಬ ಬಳ್ಳಿಯನ್ನು ಕಿತ್ತು ಬಿಸಾಡಲೂ, ಮೋಹವೆಂಬ ಮರವನ್ನು ಕಡಿದು ಹಾಕಲೂ, ಕರ್ಮವೆಂಬ ಇಂಧನಗಳನ್ನು ಸುಟ್ಟುಬಿಡಲೂ, ಜಿನಚರಣಗಳನ್ನು ಬಲವಾಗಿ ಹಿಡಿಯಲೂ, ಸನ್ಮಾರ್ಗವನ್ನು ಅನುಸರಿಸಲೂ ಅವನು ಮನಸ್ಸು ಮಾಡಿದ. ಆ

ಕ್ಷಣವೇ ಜಿನಸಮಯವಾರ್ಧಿವರ್ಧನಸುಧಾಕರನ ಪಾದಗಳಿಗೆರಗಿ ತನಗೆ ಮತ್ತೆ ದೀಕ್ಷೆಯನ್ನು ಕರುಣಿಸಲು ಬೇಡಿಕೊಂಡ. ಅದರಂತೆ ಅವನನ್ನು ವಾರಿಷೇಣನು ಗುರುಗಳ ಬಳಿ ಕರೆದೊಯ್ದು ಪುನಃ ದೀಕ್ಷೆಯನ್ನು ಕೊಡಿಸಿದ.

ಪುಷ್ಪದಾಡನು ಹೀಗೆ ಮತ್ತೆ ತಪಸ್ವಿಯಾದ. 'ಸಂಸಾರದ ಅಲ್ಪಸುಖವನ್ನೇ ಶಾಶ್ವತವೆಂದು ಭಾವಿಸಿ ನಾನು ಜೈನಧರ್ಮವನ್ನು ಕೈಗೊಳ್ಳದೆ ಹೆಂಡತಿಯ ಬಗ್ಗೆಯೇ ಯೋಚಿಸುತ್ತ ಕೆಟ್ಟೆ; ಆದರೆ ಶ್ರೀ ವಾರಿಷೇಣಮುನಿಗಳ ದಯದಿಂದ ಇಂದು ಈ ಶ್ರೇಷ್ಠಧರ್ಮವು ತನ್ನದಾಯಿತು; ಹೀಗಾಗಿ ವಾರಿಷೇಣಮುನಿಪನೇ ತನಗೆ ದೇವರು' ಎಂದು ಅವನಿಗನ್ನಿಸಿತು. ಹಿಂದಿನ ತನ್ನ ಬುದ್ಧಿಹೀನತೆ, ತನ್ನಲ್ಲಿದ್ದ ಮಿಥ್ಯಾತ್ವದ ತೀವ್ರತೆ, ವಾತ್ಸಲ್ಯರತ್ನಾಕರನು ಮಾಡಿದ ಉಪಕಾರ ಇವೆಲ್ಲದರ ನೆನಪಿನಿಂದ ಅವನ ಮನಸ್ಸಿನಲ್ಲಿ ವಿಸ್ಮಯಭಾವ ಮೂಡಿತು. ಆನಂತರ ಅವನು ಶುದ್ಧಹೃದಯದಿಂದ ಸಕಲ ಆಗಮಗಳನ್ನು ಅಭ್ಯಾಸ ಮಾಡಿ, ಉತ್ತರೋತ್ತರ ತಪಸ್ಸಿನಲ್ಲಿ ನಿರತನಾದ. ಕೊನೆಗೆ ಸಮಾಧಿವಿಧಿಯಿಂದ ಸತ್ತು ದೇವಗತಿಯನ್ನು ಪಡೆದ.

ಪುಷ್ಪದಾಡನ ಹಿಂದಿನ ಹೀನಬುದ್ಧಿಯನ್ನೂ ಆನಂತರ ಅವನು ಮಾರ್ಪಟ್ಟ ರೀತಿಯನ್ನೂ ಕಂಡು ವಾರಿಷೇಣಮುನೀಂದ್ರರಿಗೂ ಚೋದ್ಯವೆನಿಸಿತು. ದೊಡ್ಡ ಮೋಡದ ಮರೆಯಲ್ಲಿದ್ದರೆ ಸೂರ್ಯನೂ ಬೆಳಗಲಾರ; ಹಾಗೆಯೇ ಮಹಾಪಾಪದಿಂದ ಉಂಟಾಗುವ ಸದ್ಧರ್ಮವನ್ನು ಜಗತ್ತಿನಲ್ಲಿ ಮನುಷ್ಯರು ಅರಿಯಲಾರರು; ಮೆಕ್ಕೆಯ ಕಾಯಿಗಳು ಮೊದಲು ಕಹಿಯಾಗಿದ್ದುದು ಕೊನೆಯಲ್ಲಿ ರುಚಿಯನ್ನು ಪಡೆಯುವಂತೆ, ಕೆಲವರು ಮೊದಮೊದಲು ಕೆಟ್ಟವರಾಗಿದ್ದರೂ ಕಡೆಯಲ್ಲಿ ಒಳ್ಳೆಯವರಾಗುತ್ತಾರೆ; ಕಬ್ಬು ಮೊದಲಿನಿಂದ ಕಡೆಯವರೆಗೂ ಸಿಹಿಯಾಗಿರುವಂತೆ ಕೆಲವರು ಮಾತ್ರ ಆದ್ಯಂತವಾಗಿ ಒಳ್ಳೆಯವರಾಗಿರುತ್ತಾರೆ; ಅಶೋಕ ಮುಂತಾದ ಮರದ ಎಲೆಗಳು ಮೊದಮೊದಲು ಮೃದುವಾಗಿದ್ದರೂ ಕಡೆಯಲ್ಲಿ ತರಗೆಲೆಗಳಾಗುವ ರೀತಿಯಲ್ಲಿ ಕೆಲವರು ಮೊದಲು ಒಳ್ಳೆಯವರಾಗಿದ್ದು ಕಡೆಯಲ್ಲಿ ಕೆಟ್ಟವರಾಗುತ್ತಾರೆ – ಈ ರೀತಿಯಲ್ಲಿ ಮನುಷ್ಯರ ಸ್ವಭಾವದ ಬಗ್ಗೆ ಅವರ ಮನಸ್ಸಿನಲ್ಲಿ ಆಲೋಚನೆಗಳು ಮೂಡಿದವು. ಅವರು ಗುರುಗಳ ಆಜ್ಞೆಯಂತೆ ಏಕವಿಹಾರಿಗಳಾಗಿ ಹನ್ನೆರಡು ಬಗೆಯ ತಪಸ್ಸುಗಳಲ್ಲಿ ತೊಡಗಿದ್ದು ಕಡೆಯಲ್ಲಿ ಸನ್ಯಸನವಿಧಿಯಿಂದ ಸತ್ತು ಸರ್ವಾರ್ಥಸಿದ್ಧಿಯಲ್ಲಿ ಮೂವತ್ತಮೂರು ಸಾಗರದಷ್ಟು ಕಾಲ ಆಯುಷ್ಯವನ್ನು ಪಡೆದು ಹುಟ್ಟಿದರು. ಆದ್ದರಿಂದ ಸ್ಥಿತಿಕರಣದ ಫಲ ಸಾಮಾನ್ಯವಲ್ಲ ಎಂದು ಗಣಧರಸ್ವಾಮಿಗಳು ಕತೆಯನ್ನು ಮುಗಿಸಿದರು. ಕ್ಷಿತಿಪೂಜ್ಯನೂ, ವಾಗ್ವಿಲಾಸಿಯೂ, ಸುಕವಿಜನಮನೋರಂಜನನೂ, ಜೈನವಾಕ್ಯಾಮೃತ ತೃಪ್ತನೂ, ವಾಗ್ವಧೂವಲ್ಲಭನೂ, ಪಾಪಸಂಕುಲವಿದ್ರಾವಣನೂ ಆದ ಶ್ರೇಣಿಕ ಮಹಾರಾಜನು ಏಕಚಿತ್ತದಿಂದ ಕತೆಯನ್ನು ಕೇಳಿ ಸಂತುಷ್ಟನಾದನು.

******

ವಾತ್ಸಲ್ಯ

ಸ್ಥಿತಿಕರಣದ ಬಗೆಗಿನ ಕತೆಯನ್ನು ಕೇಳಿದ ಸುಕವಿನಿಕರಪಿಕಮಾಕಂದನಿಗೆ ಇದು ಮೋಕ್ಷಶ್ರೀಯ ಹೊಳೆಯುವ ಆಭರಣವೆಂಬುದು ಮನವರಿಕೆಯಾಯಿತು; ಅದರ ಬಗ್ಗೆ ನಂಬಿಕೆಯುಂಟಾಯಿತು. ಅದರಿಂದ ಉತ್ಸಾಹಿತನಾಗಿ ಮುಂದಿನ ತತ್ವವಾದ ವಾತ್ಸಲ್ಯದ ಬಗೆಗಿನ ಕತೆಯನ್ನು ನಿರೂಪಿಸುವಂತೆ ಯತಿತಿಲಕರನ್ನು ಕೇಳಿಕೊಂಡ. ಸಕಲಗುಣಾನ್ವಿತರೂ, ಅಮಲಚರಿತ್ರರೂ, ಮದನಗರ್ವಭಂಜಿತರೂ, ನುತವಾಕ್ಯರೂ, ಮೂರುಲೋಕಗಳ ಪಾಪಕರ್ಮವೆಂಬ ಮದಗಜಕ್ಕೆ ಸಿಂಹಪ್ರಾಯರೂ ಆದ ಗಣಧರಮುನಿಗಳು ನಿರ್ವೃತಿಶ್ರೀಯ ಅಮೂಲ್ಯ ವಸ್ತುವಾದ ವಾತ್ಸಲ್ಯದ ಬಗೆಗಿನ ಕತೆಯನ್ನು ಹೇಳಲು ತೊಡಗಿದರು.

ಪ್ರಾತಿಹಾರ್ಯದಂತೆ, ಸ್ವರ್ಗಯುಗಳದಂತೆ, ದೆಸೆಗಳಂತೆ, ದಿಕ್ಪಾಲಕರಂತೆ, ಸೀತಾನದಿಯ ದಡದಂತೆ, ನಾಗಕುಲದಂತೆ, ಶ್ರಾವಕರ ಮೂಲಗುಣದಂತೆ, ಪೃಥ್ವಿಯಂತೆ, ದರ್ಶನಾಂಗದಂತೆ, ದೇವರ ಅಷ್ಟಗುಣಗಳಂತೆ ಸಮ್ಯಕ್‌ದರ್ಶನ ನಿಶ್ಶಂಕೆ ನಿಷ್ಕಾಂಕ್ಷೆ ನಿರ್ವಿಚಿಕಿತ್ಸೆ ಆಮೂಢದೃಷ್ಟಿತ್ವ ಉಪಗೂಹನ ಸ್ಥಿತಿಕರಣ ಮತ್ತು ವಾತ್ಸಲ್ಯಗಳು ಎಂಬ ಎಂಟು ಗುಣಗಳಿಂದ ಕೂಡಿ ಜನರು ನಡೆದುಕೊಳ್ಳಬೇಕು. ಎಂಟು ತತ್ವಗಳಲ್ಲಿ ವಾತ್ಸಲ್ಯವೆಂಬುದು ಕಲ್ಯಾಣಕಾರಕವಾದದ್ದು, ಜಗತ್ತಿಗೆ ಮಂಗಳವನ್ನುಂಟುಮಾಡುವಂಥದು, ಸಮ್ಯಕ್ತ್ವತತ್ವದ ಅಧಿದೇವತೆ ಮತ್ತು ಮೋಕ್ಷಲಕ್ಷ್ಮಿಯು ತೊಡುವ ದಿವ್ಯಾಭರಣ ಎನ್ನಿಸುವಂತಹುದು. ಅದನ್ನು ವಿದಿತಗೊಳಿಸಲು ಈ ಕತೆ.

ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಪಾಂಚಾಲ ಎಂಬುದು ಒಂದು ಭಾಗ. ಅದರಲ್ಲಿ ರಮಣೀಯವಾದ ಅಹಿಚ್ಛತ್ರವೆಂಬುದು ಒಂದು ಊರು, ಅದನ್ನು ಆಳುವವನು ಸಂತಪ ಎಂಬ ಅರಸು. ಅವನ ಪುರೋಹಿತನಾದ ಸೋಮದತ್ತನು ಸಕಲಶಾಸ್ತ್ರಗಳಲ್ಲಿಯೂ ಪರಿಣತನಾದವನು. ಅವನ ಹೆಂಡತಿ ಯಜ್ಞದತ್ತೆ ಎಂಬ ಸುದತಿ. ಈ ದಂಪತಿಗಳು ಎಲ್ಲ ಜನರಿಗೂ ತಮ್ಮ ನಂಟರಿಗೂ ಬೇಕಾದವರಾಗಿ ಸುಖದಿಂದ ಬಾಳುತ್ತಿದ್ದರು. ಯಜ್ಞದತ್ತೆಯು ಗರ್ಭವತಿಯಾದಳು; ಇದರಿಂದ ವಿಪ್ರಕುಲಾಂಬರನಾದ ಸೋಮದತ್ತನಿಗೂ ಅವನ ಬಂಧುಗಳಿಗೂ ಅಪಾರ ಸಂತಸವುಂಟಾಯಿತು. ಅವಳ ಗರ್ಭದಲ್ಲಿದ್ದ ಮಗುವು ಮುಂದೆ ಉದ್ಯೋಗದಲ್ಲಿಯೂ ಬದುಕಿನಲ್ಲಿಯೂ ಜೈನಾಗಮಕುಶಲತೆಯಲ್ಲಿಯೂ ವಿಶೇಷತೆಯನ್ನು ಪಡೆಯುವುದನ್ನು ತೋರಿಸುವಂತೆ ಗರ್ಭವತಿಯಾದ ಐದನೇ ತಿಂಗಳಿನಿಂದ ಅವಳಲ್ಲಿ ಅತಿಶಯವಾದ ಬಯಕೆಯುಂಟಾಯಿತು. ಅದೆಂದರೆ ಜಿನಮಂದಿರಗಳಿಗೆ ಹೋಗಿ ಪೂಜೆ ಸಲ್ಲಿಸಬೇಕೆಂಬುದು, ಜಿನಬಿಂಬಗಳನ್ನು ಅಷ್ಟವಿಧಾರ್ಚನೆಯಿಂದ ಅರ್ಚಿಸಬೇಕೆಂಬುದು, ತ್ರಿಭುವನಮಾಂಗಲ್ಯನಿಗೆ ಮಹಾಭಿಷೇಕವನ್ನು ಮಾಡಿಸಬೇಕೆಂಬುದು, ಶ್ರೀಮತ್ ಪರಮೇಶ್ವರನ ರೂಪವನ್ನು ಎವೆಯಿಕ್ಕದೆ ನೋಡಬೇಕೆಂಬುದು, ಮೋಕ್ಷಲಕ್ಷ್ಮೀವಿಲಾಸನನ್ನು ಬಿಟ್ಟಿರಲಾರದುದು, ಜಿನಾಗಮಗಳನ್ನು ಕೇಳಬೇಕೆಂಬುದು, ಸಿದ್ಧಾಂತಗಳನ್ನು ಆಲಿಸಬೇಕೆಂಬುದು, ಚರಿತೆ– ಪುರಾಣಗಳನ್ನು ಇತರರಿಗೆ ಹೇಳಬೇಕೆಂಬುದು, ಜಿನಮುನಿಗಳ ಸನ್ನಿಧಿಯಲ್ಲಿ ಇರಬೇಕೆಂಬುದು, ಜೀವಗಳನ್ನು ಪ್ರೀತಿಸುವುದು ಮತ್ತು ಕುಮಾರ್ಗಾವಲಂಬಿಗಳಿಂದ ದೂರವಿರುವುದು, ಆಹಾರ ಅಭಯ ಔಷಧಗಳನ್ನು ದಾನ ಮಾಡಬೇಕೆಂಬುದು, ಸತ್‌ದೃಷ್ಟಿಯಿರುವವರಿಗೆ ಸೇವೆ ಮಾಡುವುದು, ವಿದ್ಯಾಧರರ ಅಧಿರಾಜರಿಂದ ಸೇವೆ ಮಾಡಿಸಿಕೊಳ್ಳುವುದು, ನಾಲ್ಕೂ ವರ್ಣಗಳವರಿಗೆ ಇದಿರೆದ್ದು ವಂದಿಸಬೇಕೆಂಬುದು, ಅವರಿಗೆ ತನ್ನ ಸರ್ವಸ್ವವನ್ನೂ ನೀಡಬೇಕೆಂಬುದು.

ತನ್ನ ಪ್ರಬಲವಾದ ಬಯಕೆಗಳನ್ನು ಬೇರೆಯವರಿಗೆ ಹೇಳಿಕೊಂಡರೂ ಅವು ತೀರಲಾರದು ಎಂದು ಭಾವಿಸಿದ ಆ ಕಾಮಿನಿಯು ಬಿಸಿ ತುಪ್ಪವನ್ನು ನುಂಗಿದ ಮುಗ್ಧ ಮಗುವಿನ ಹಾಗೆ ಒಳಗೇ ಸಂಕಟಪಟ್ಟುಕೊಂಡಳು. ನೆರೆಯಲ್ಲ ಹೊರೆಯಲ್ಲ,

ಆದರೂ ಮಗು ಗೊರವನನ್ನು ಹೋಲುತ್ತದೆ ಎಂಬ ಗಾದೆಯಂತೆ ನನ್ನ ಬಯಕೆಯ ಪರಿಯಾಯಿತು ಎಂದು ಅವಳು ಚೋದ್ಯಗೊಂಡಳು. ತನ್ನ ಕುಲದವರಾಗಲೀ ಗಂಡನ ವಂಶದವರಾಗಲೀ ಜಿನಧರ್ಮವನ್ನು ಕನಸಿನಲ್ಲಿಯೂ ಕಂಡರಿಯರು; ತನ್ನ ಈಗಿನ ಬಯಕೆ ಆಶ್ಚರ್ಯಕರವಾಗಿದೆ; ಇವುಗಳನ್ನು ಗಂಡನಿಗಾಗಲೀ ಬಂಧುಗಳಿಗಾಗಲೀ ಹೇಳಿಕೊಂಡರೆ ಅವರು ಅವುಗಳನ್ನು ತೀರಿಸುವವರಲ್ಲ ಎಂದು ಯಜ್ಞದತ್ತೆ ಕೊಕ್ಕಳಗುದಿದಳು. ಮೂಗನು ಕಂಡ ಕನಸಿನಂತೆ ತನ್ನ ಮನದಿಂಗಿತವನ್ನು ಬೇರೆಯವರಿಗೆ ಹೇಳಲಾರದೆ ತುಂಬ ಬಡವಾದಳು. ಅದನ್ನು ಕಂಡು ಅವಳ ತಾಯ್ತಂದೆಯರೂ ಗಂಡನಾದ ಸೋಮದತ್ತನೂ ಅಚ್ಚರಿವಟ್ಟರು. ಹಿಂದೆ ಊಟ ಮಾಡುತ್ತಿದ್ದ ರೀತಿ ಇವಳದಾಗಿಲ್ಲ; ಬುದ್ಧಿಯೂ ನಡೆಯುವ ರೀತಿಯೂ ಹಿಂದಿನಂತೆ ಇಲ್ಲ; ಮನಸ್ಸಿನಲ್ಲಿ ಬೇರೇನನ್ನೋ ಯೋಚಿಸುತ್ತ ಇರುವಳು; ಇದಕ್ಕೇನು ಕಾರಣ? ಸುಮ್ಮನೆ ಎಂದಿನಂತೆ ಸಂತೋಷದಿಂದ ಯಾಕಿರುವುದಿಲ್ಲ? ಎಂದು ಅವರೆಂದುಕೊಂಡರು. ಆಸೆಯಿಂದ ಆಕಾಶವನ್ನೇ ನೋಡುತ್ತಿರುತ್ತಾಳೆ; ಪ್ರೀತಿಯಿಂದ ಸದಾ ಜಿನಾಲಯಗಳ ಕಡೆ ನೋಡುತ್ತಾಳೆ; ಸವಣರನ್ನು ಕಂಡರೆ ಉತ್ಸಾಹಗೊಳ್ಳುತ್ತಾಳೆ; ಜಿನಪೂಜೆ ಎಂದರೆ ಕಣ್ಣಲ್ಲಿ ಹೊಸ ಹೊಳಪು; ಜೈನರೆಂದರೆ ಧವಳಲೋಚನೆ ಸಡಗರಗೊಳ್ಳುತ್ತಾಳೆ ಎಂದು ಅವರು ವಿಸ್ಮಯಗೊಂಡರು.

ಇದನ್ನೆಲ್ಲ ಗಮನಿಸಿದ ಅವರು ಸೋಜಿಗದಿಂದ ಯಜ್ಞದತ್ತೆಯ ಬಳಿ ಬಂದು, "ನಿನ್ನ ಬಯಕೆಯನ್ನು ನಮಗೆ ಸ್ಪಷ್ಟವಾಗಿ ಹೇಳು; ಅದು ತೀರಿದಲ್ಲದೆ ನಿನ್ನ ಮೈ ಬಾಡಿರುವುದು ನಿಲ್ಲದು" ಎಂದು ವಿಚಾರಿಸಿದರು. ಆದರೆ ಯಜ್ಞದತ್ತೆಯು ತನ್ನ ಬಯಕೆಯನ್ನು ಹೇಳಿಕೊಳ್ಳಲಾರದೆ ಸುಮ್ಮನಿದ್ದಳು. ಅದಕ್ಕೆ ನಂಟರೂ ಸೋಮದತ್ತನೂ ತಾಯ್ತಂದೆಯರೂ ಹೇಳಬೇಕೆಂದು ನಿತ್ಯವೂ ಬಲವಂತ ಪಡಿಸಿದರು. ಅವರ ಕಾಟವನ್ನು ತಡೆಯಲಾರದೆ ಒಂದು ದಿನ ಹೀಗೆ ಸುಳ್ಳು ಹೇಳಿದಳು: "ಅಮೃತದ ಹಾಗೆ ರುಚಿಯಾದ ಹಾಗೂ ಕುಂಕುಮದಂತೆ ಕೆಂಪಾದ ಮಾವಿನ ಹಣ್ಣನ್ನು ತಂದುಕೊಡಿ." ಅವಳ ಈ ಬಯಕೆಯನ್ನು ಕೇಳಿ ಅವರೆಲ್ಲರೂ ಬೆರಗುಗೊಂಡರು. ಈಗ ಅಕಾಲ; ಹುಲಿಯ ಗಿಣ್ಣೋ, ಮೊಲದ ಕೋಡೋ, ಕಬ್ಬಿನ ಹಣ್ಣೋ, ಹಲಸಿನ ಹೂವೋ ಆದರೂ ಸಿಕ್ಕಬಹುದು; ಆದರೆ ಮಾವಿನ ಹಣ್ಣು ಸಿಗದು; ಏನು ಮಾಡುವುದು ಎಂದು ಅವರಿಗೆ ಚಿಂತೆಯಾಯಿತು. ಮಾವಿನ ಹಣ್ಣುಗಳನ್ನು ತಂದುಕೊಡದಿದ್ದರೆ ಇವಳಿಗೆ ಸಾವು ಸಮನಿಸುವುದು ನಿಶ್ಚಯ ಎಂದು ಅವರಿಗನ್ನಿಸಿತು. ಇವಳ ಬಯಕೆಯನ್ನು ಉಪೇಕ್ಷಿಸಿದರೆ, ಚೆಲ್ಲಿದ ತುಪ್ಪದ ಹಾಗಾದೀತು; ಆದ್ದರಿಂದ ಹೇಗಾದರೂ ಮಾಡಿ ಮಾವಿನ ಹಣ್ಣನ್ನು ತರಬೇಕು ಎಂದು ತಾಯ್ತಂದೆಯರೂ ಗಂಡನಾದ ಸೋಮದತ್ತನೂ ನಂಟರೂ ಯಜ್ಞದತ್ತೆಗೆ ಸಂತೋಷವಾಗುವಂತೆ ಸಮಾಧಾನದ ಮಾತುಗಳನ್ನಾಡಿ ಹಣ್ಣಿಗಾಗಿ ಎಲ್ಲ ದಿಕ್ಕುಗಳಿಗೂ ಹೋದರು.

ನದಿ ತೀರ, ಗಿರಿಯ ತಪ್ಪಲು, ತಿಳಿಗೊಳ, ಕೆರೆ, ಹಳ್ಳಗಳ ದಂಡೆಗಳು, ಹೂದೋಟ, ಮರದ ತೋಪುಗಳು, ಉದ್ಯಾನವನಗಳು, ಎಲ್ಲ ಕಡೆ ಮಾವಿನ ಹಣ್ಣಿಗಾಗಿ ಹುಡುಕಾಡಿದರು. ಇದಕ್ಕಾಗಿ ಅವರು ಹಗಲು ಹಸಿವನ್ನೂ, ಇರುಳು ನಿದ್ರೆಯನ್ನೂ ಮರೆತರು. ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಗಳೆಲ್ಲಕ್ಕೂ ಹೋದರು. ಮಾವಿನ ಹಣ್ಣನ್ನು ತಂದುಕೊಡುವವನಿಗೆ ಕೇಳಿದಷ್ಟು ಹಣವನ್ನು ನೀಡುತ್ತೇವೆ ಎಂದು ಅಲ್ಲಲ್ಲಿ ಸಾರಿಸಿದರು; ತಾವೇ ಹೋಗಿ ಕೇಳಿದರು; ಭೂಮಂಡಲವನ್ನೆಲ್ಲ ಸುತ್ತಾಡಿಬಿಟ್ಟರು. ದನಕಾಯುವ ಗೋವಳರನ್ನು, ಅರಿಕೆಯ ಬೇಡರನ್ನು ವಿಚಾರಿಸುತ್ತ ಅಲೆದರು. ಅವರ ಬಾಯಿ ಬತ್ತಿತು, ಮೈ ಬಾಡಿತು.

ಹೀಗೆಯೇ ಸುತ್ತಾಡುತ್ತ ಬಲವಾಹಿನಿ ಎಂಬ ತೊರೆಯ ದಡದಲ್ಲಿದ್ದ ಬೇಡರ ಹಳ್ಳಿಯೊಂದಕ್ಕೆ ಸೋಮದತ್ತನು ತನ್ನ ಶಿಷ್ಯನೊಡನೆ ಹೋಗಿ, ಮಾವಿನ ಹಣ್ಣು ಇಲ್ಲೆಲ್ಲಿ ಸಿಕ್ಕುವುದೆಂದು ವಿಚಾರಿಸಿದ. ಅವರು ಹುಡುಕುತ್ತಿದ್ದ ಮಾವಿನ ಹಣ್ಣು ಇರುವ ಜಾಗ ತನಗೆ ತಿಳಿದಿದೆಯೆಂದು ಒಬ್ಬ ಬೇಡನು ಸೋಮದತ್ತನಿಗೆ ಹೇಳಿದ. ಅವನ ಮಾತನ್ನು ಕೇಳಿ ಅವನಿಗೆ ಹೋದ ಪ್ರಾಣ ಮರಳಿದಷ್ಟು ಸಂತೋಷವಾಯಿತು. "ಮಾವಿನ ಹಣ್ಣಿರುವ ಎಡೆಯನ್ನು ತೋರಿಸುವುದಾದರೆ ನೀನು ಬೇಡಿದ ವಸ್ತುವನ್ನು ಕೊಡುತ್ತೇನೆ; ಆಮೇಲೆ ಮನೆಗೆ ಹೋಗುತ್ತೇನೆ" ಎಂದು ಸೋಮದತ್ತನು ಹೇಳಿದ. ತನಗೆ ಬೇಕಾದ ವಸ್ತು ಯಾವುದೆಂದು

ತಿಳಿಸಿದ ಕಿರಾತನು ಅವನಿಗೆ, "ಈ ನದಿಯ ತೀರದಲ್ಲಿ ಅಬ್ಜಷಂಡ ಎಂಬ ಒಂದು ಮಾವಿನ ತೋಪಿದೆ. ಅದರಲ್ಲಿ ಒಬ್ಬನು ಮೈಗೆಲ್ಲ ಕೆಸರು ಬಳಿದುಕೊಂಡು ಮರುಳನಂತೆ ತನ್ನಲ್ಲೇ ಏನೋ ಮಾತಾಡಿಕೊಳ್ಳುತ್ತ ಮೌನದಿಂದಿರುತ್ತಾನೆ. ಅವನು ಕುಳಿತ ಜಾಗದಲ್ಲಿರುವ ಮರದಲ್ಲಿ ಹಣ್ಣುಗಳು ತುಂಬಿವೆ. ಅಲ್ಲಿಗೆ ಹೋಗಿ ನಿಮಗೆ ಬೇಕಾದಷ್ಟು ಹಣ್ಣುಗಳನ್ನು ತೆಗೆದುಕೊಳ್ಳಿ" ಎಂದು ಹೇಳಿದ ವ್ಯಾಧನು ಅವರೊಡನೆ ಒಂದಷ್ಟು ದೂರ ಬಂದು ತೋಪಿನ ದಾರಿ ತೋರಿಸಿ ಮರಳಿ ಹೋದ.

ತೊರೆಯ ದಡದ ಗುಂಟ ನಡೆದು ಬಂದು ಒಂದೆಡೆ ಮಾವಿನ ಮರಗಳು ತುಂಬಿದ್ದ ತೋಪನ್ನು ಕಂಡು ಸೋಮದತ್ತನು ತುಂಬ ಸಂತಸಗೊಂಡ; ಅವನ ಮನಸ್ಸಿನ ದುಗುಡ ಇಂಗಿಹೋಯಿತು. ತೋಪಿನೊಳಗೆ ನೋಡುತ್ತ ಬಂದಾಗ ಫಲಭಾರದಿಂದ ಸೊಗಸುವ ಮಾವಿನ ಮರವನ್ನೂ ಅದರ ಕೆಳಗೆ ಕುಳಿತಿದ್ದ ಸುಮತಿ ಭಟ್ಟಾರಕರೆಂಬ ಮಹರ್ಷಿಯನ್ನೂ ಕಂಡ. ಈ ತೋಪಿನ ಬೇರಾವ ಮರದಲ್ಲೂ ಹಣ್ಣುಗಳಿಲ್ಲದಿರುವಾಗ ಈ ಮರದಲ್ಲಿ ಮಾತ್ರ ಇಷ್ಟೊಂದು ಹಣ್ಣುಗಳಿರುವುದು ಅವನಲ್ಲಿ ವಿಸ್ಮಯವನ್ನುಂಟುಮಾಡಿತು. ಈ ಮುನಿಯ ತಪಸ್ಸಿನ ಉನ್ನತಿಯಿಂದಾಗಿ ಈ ಮರದಲ್ಲಿ ಹಣ್ಣುಗಳಿರಬೇಕು; ಅಂದ ಮೇಲೆ ಈ ಮುನಿಯ ತಪಸ್ಸು ಅತ್ಯಂತ ಶ್ರೇಷ್ಠವಾದುದಾಗಿರಬೇಕು, ಅದರ ಮಹಿಮೆಯನ್ನು ಹೊಗಳಲು ಸಾಮಾನ್ಯರಿಂದ ಸಾಧ್ಯವಿಲ್ಲ ಎಂದು ಅವನಿಗನ್ನಿಸಿತು. ಈ ವರಮುನಿಯೇ ಈ ಜಗತ್ತಿನ ಸಾಕ್ಷಾತ್ ದೇವರು; ಬೇರೆಯವರನ್ನು ದೇವರೆಂದು ಕರೆಯಲಾಗದು; ಲೋಕದಲ್ಲಿ ನೆಟ್ಟ ಕಲ್ಲೂ ಮಣ್ಣೂ ದೇವರುಗಳೇನು? ಈ ಮಹಾತ್ಮನ ತಪಸ್ಸಿನ ಸಾಮರ್ಥ್ಯದಿಂದ ಈ ಒಂದು ಮಾವಿನ ಮರದಲ್ಲಿ ಹಣ್ಣುಗಳು ಬಿಟ್ಟಿವೆ; ಈ ನಾಡಿನ ಇತರ ಮರಗಳಲ್ಲಿ ಹಣ್ಣಗಳೇಕೆ ಬಿಟ್ಟಿಲ್ಲ ಎಂಬ ಆಲೋಚನೆ ಅವನಿಗೆ ಬಂತು. ಆ ಪರಮಾವಧಿಲೋಚನನಾದ ಯತಿವೃಷಭನ ಬಗ್ಗೆ ಆದರವುಂಟಾಯಿತು; ಸೋಮದತ್ತನೂ ಶಿಷ್ಯರೂ ಅವರ ಮುಂದೆ ಬಂದು ಕೈಮುಗಿದುಕೊಂಡು ನಿಂತರು.

ಸುಮತಿ ಭಟ್ಟಾರಕರು ತ್ರಿಲೋಕಪ್ರಜ್ಞಪ್ತಿ ಎಂಬ ಆಗಮವನ್ನು ಪರಿವಿಡಿಗೈದು ನರಲೋಕದಲ್ಲಿ ಆಗುವ ವೃತ್ತಾಂತವನ್ನೆಲ್ಲ ನೋಡಿ, ಸ್ವರ್ಗಲೋಕದ ವ್ಯಾವರ್ಣನೆಯನ್ನು ಮಾಡುತ್ತ ಹನ್ನೆರಡನೆಯ ಸಹಸ್ರಾರ ಕಲ್ಪವನ್ನು ನೋಡುತ್ತಿದ್ದರು. ಸೋಮದತ್ತನು ವ್ಯಾಕರಣ ಪರಿಣತನಾದುದರಿಂದ ಅವರ ಮಾತುಗಳನ್ನು ಅಚ್ಚರಿಯಿಂದ ಕೇಳಿಸಿಕೊಂಡ. ಅವರು ಸೂರ್ಯಾಭವೆಂಬ ವಿಮಾನವನ್ನು ವರ್ಣಿಸುವಾಗ, ತಾನು ಆ ವಿಮಾನದಲ್ಲಿ ಹಿಂದಿನ ಜನ್ಮದಲ್ಲಿ ಸೂರ್ಯವರ ಎಂಬ ಹೆಸರಿನ ಮಹರ್ಧಿಕ ದೇವನಾಗಿದ್ದುದರಿಂದ ಆ ವಿಮಾನದ ವೃತ್ತಾಂತವನ್ನೆಲ್ಲ ಕುತೂಹಲದಿಂದ ಕೇಳಿಸಿಕೊಂಡ. ಅವನಿಗಾಗ ಜಾತಿಸ್ಮರಣೆ(ಹಿಂದಿನ ಜನ್ಮದ ನೆನಪುಂಟಾಯಿತು. ಆ ಕ್ಷಣದಲ್ಲಿಯೇ ಆ ಮಹಾ ಖ್ಯಾತಿಯನ್ನು ಪಡೆದ ಬ್ರಾಹ್ಮಣಶ್ರೇಷ್ಠನು ಮೂರ್ಚೆಯಿಂದ ನೆಲದ ಮೇಲೆ ಧೊಪ್ಪನೆ ಬಿದ್ದ. ಅದನ್ನು ಕಂಡು ಶಿಷ್ಯರಿಗೆ ಗಾಬರಿಯಾಯಿತು. ಮನೆಯಿಂದ ಎಂದೂ ಹೊರಗೆ ಹೋಗದ ಮಹಾಸುಖಿಯೂ ಮಹಾಭೋಗಿಯೂ ದೇವಸಮಾನನೂ ಸಂಪದ್ಭರಿತನೂ ಸಮಸ್ತಶಾಸ್ತ್ರಾಂಭೋಧಿಯೂ ಆದ ಆತನು ತನ್ನ ಹೆಂಡತಿಗೆ ಮಾವಿನ ಹಣ್ಣುಗಳನ್ನು ತರುವ ಉತ್ಸಾಹದಿಂದ ಭೂಮಿಯನ್ನೆಲ್ಲ ಸುತ್ತಿದ್ದರಿಂದ ಉಂಟಾದ ಬೇಸರ ಮತ್ತು ದಣಿವಿನಿಂದಾಗಿ ಮೂರ್ಚೆ ಬಿದ್ದನೆಂದೇ ಅವರೆಲ್ಲ ಭಾವಿಸಿದರು. ಗುರುಗಳಿಗೆ ಹೀಗಾದ್ದರಿಂದ ದುಃಖಗೊಂಡ ಅವರು ತಮ್ಮ ಮೇಲುದಗಳನ್ನು ತಿಳಿಗೊಳದಲ್ಲಿ ಅದ್ದಿ ತಂದು ಆ ನೀರನ್ನು ಸೋಮದತ್ತನ ಮುಖದ ಮೇಲೆ ಹಿಂಡಿ, ಕಾಲುಗಳನ್ನು ಒತ್ತುತ್ತ ಶುಶ್ರೂಷೆ ಮಾಡಿದರು.

ಈ ಶೀತಲೋಪಚಾರದಿಂದ ಸೋಮದತ್ತನಿಗೆ ಎಚ್ಚರವಾಯಿತು. ತನ್ನ ಹಿಂದಿನ ಜನ್ಮದ ಸುರಲೋಕಭೋಗವನ್ನು ಅವನು ನೆನೆಸಿಕೊಂಡಾಗ ಈ ಮರ್ತ್ಯಲೋಕದ ಸುಖವನ್ನು ಪರಿಹರಿಸಿಕೊಳ್ಳುವ ನಿರ್ಧಾರ ಅವನಲ್ಲಿ ಮೂಡಿತು. ಪರಮಾರ್ಥವಾದ ಕಾಲಲಬ್ಧಿಯು ಸಾಮಾನ್ಯವಾದುದೇನು? ಜಿನಧರ್ಮದ ಬಗೆಗೆ ಕನಸಿನಲ್ಲಿಯೂ ಕಂಡರಿಯದ ಅವನಲ್ಲಿ ಸಂಸಾರವೆಂಬ ಕಾಡನ್ನು ಕತ್ತರಿಸಿ ಸುಟ್ಟು ಬಿಡುವ ನಿರ್ಧಾರ ತಟ್ಟನೆ ಉಂಟಾಯಿತು. ಸತ್ತವರನ್ನು ಕಂಡವರಾರು? ಕುರಿಗಳಂತಹ ಜನರು 'ಚಿತ್ತವು ಹರಿದ ಹಾಗೆ ಓಡುತ್ತದೆ' ಎನ್ನುತ್ತಾರೆ; ಸತ್ತವರು ಮತ್ತೆ ಹುಟ್ಟದಿದ್ದರೆ ನಾನು ಎಲ್ಲಿಂದ ಬಂದೆ

ಎಂಬ ಪ್ರಶ್ನೆಗಳು ಅವನಲ್ಲಿ ಮೂಡಿದವು. ತನ್ನ ಹಿಂದಿನ ಜನ್ಮದ ವಿವರಗಳನ್ನು ತಿಳಿದುಕೊಂಡು, 'ಜೀವ ಇಲ್ಲ' ಎಂಬ ಕುಮತವನ್ನು ಬಿಟ್ಟು ಅವನಲ್ಲಿ 'ಜೀವ ಇದೆ' ಎಂಬ ಜಿನಾಗಮದಲ್ಲಿ ನಂಬಿಕೆಯು ಅವನ ಮನಸ್ಸಿನಲ್ಲಿ ನಾಟಿತು. ಸುಮತಿ ಭಟ್ಟಾರಕರ ತಿಳಿವಿನ ಪರಿಯನ್ನು ನೋಡಬೇಕೆಂದು ಅವನು ಅವರ ಸಮೀಪಕ್ಕೆ ಬಂದು ತನ್ನ ಹಿಂದಿನ ಜನ್ಮದ ವಿವರಗಳನ್ನು ಹೇಳಲು ಕೇಳಿಕೊಂಡ. ಇವನು ಆಸನ್ನಭವ್ಯನೆಂಬುದು ಭಟ್ಟಾರಕರಿಗೆ ಅರಿವಾಯಿತು. ಆದ್ದರಿಂದ ಅವನಿಗಿಂತ ಮುಂಚೆಯೇ ಅವನ ಮನಸ್ಸಿನ ಇಂಗಿತವನ್ನು ಅರಿತು ಹೇಳಲು ತೊಡಗಿದರು.

"ಹಿಂದಿನ ಜನ್ಮದ ವಿವರಗಳನ್ನು ಜಾತಿಸ್ಮರತ್ವದಿಂದ ತಿಳಿದ ನೀನು ಕುಬುದ್ಧಿಯಿಂದ ನನ್ನನ್ನು ಪರೀಕ್ಷಿಸಬೇಕೆಂದು ಬಂದಿರುವೆ. ನಿನಗೇನು ಬೇಕೋ ಕೇಳು" ಎಂದರು. ಇದರಿಂದ ಸೋಮದತ್ತನಿಗೆ ಬೆರಗೆನಿಸಿತು. ಬೇರನ್ನು ತಿಳಿದವರಿಗೆ ಎಲೆಯನ್ನು ತೋರಿಸಿದರೆಂಬ ಗಾದೆಯಂತೆ ಜಾತಿಸ್ಮರತ್ವವನ್ನು ತಿಳಿಯಬಲ್ಲ ಈ ಮಹಾಪುರುಷನಿಗೆ ಲೋಕದಲ್ಲಿ ನಡೆಯುವ ಸಂಗತಿಗಳನ್ನು ತಿಳಿಯುವುದು ಯಾವ ಮಹಾ ಎನ್ನಿಸಿತು. ಆ ಮುನಿವರರ ಚರಣಯುಗಳವನ್ನು ಹಿಡಿದು ನಮಸ್ಕರಿಸಿ ಕೈಮುಗಿದು ಅವರನ್ನು ಹೀಗೆಂದು ಬೆಸಗೊಂಡನು: "ತಮ್ಮ ಪಾದ, ಬೇಕಾದಷ್ಟು ವಸ್ತುಗಳೂ ತಿನಿಸುಗಳು ಇರಬೇಕಾದರೆ ನನ್ನ ಹೆಂಡತಿಯು ಮಾವಿನ ಹಣ್ಣನ್ನೇಕೆ ಬಯಸಿದಳು ಎಂಬುದನ್ನು ಹೇಳಿ." ಅದಕ್ಕೆ ಸುಮತಿ ಭಟ್ಟಾರಕರು, "ಆಕೆಯ ಗರ್ಭದಲ್ಲಿರುವ ಕೂಸು ಜಿನಸಮಯಪ್ರಾಕಾರನೂ ವಾತ್ಸಲ್ಯರತ್ನಾಕರನೂ ಕರ್ಮಾಚಲವಜ್ರನೂ ಮುನಿಜನ ಹೃದಯಾನಂದನೂ ದಿಗಂಬರ ಸರೋಜರಾಜನೂ ಸುಕವಿನಿಕರಪಿಕಮಾಕಂದನೂ ಸಹಜಕವಿಜನ ಮನೋಹರೋದ್ಯಾನವನಕಲಕಂಠನೂ ಆಸನ್ನಭವ್ಯನೂ ಸುಜನಮನೋರಂಜನನೂ ಸಮ್ಯಕ್ತ್ವಚೂಡಾಮಣಿಯೂ ವಿದ್ಯಾಧರಾನತಪಾದಪಲ್ಲವನೂ ಆದುದರಿಂದ ಅವನ ಬಯಕೆಯು ನಿನ್ನ ಹೆಂಡತಿಯ ಬಯಕೆಯಾಯಿತು; ಜಿನೇಂದ್ರಾಭಿಷೇಕವನ್ನು ಮಾಡಲೂ, ಜಿನಮಹಾಮಹಿಮೆಗಳನ್ನು ನೋಡಲೂ, ಚರಿತಪುರಾಣಗಳನ್ನು ಬೇರೆಯವರಿಗೆ ಹೇಳಲೂ, ಜಿನಾಗಮಗಳನ್ನು ಕೇಳಲೂ, ಶ್ರಾವಕರ ಜೊತೆಯಿರಲೂ, ಶ್ರಾವಕರಿಗೆ ಉಡಲು ತೊಡಲು ಕೊಡಲೂ, ಚತುರ್ವರ್ಣದವರಿಗೆ ವಿನಯದಿಂದ ಸೇವೆ ಮಾಡಲೂ, ಚತುರ್ವಿಧವಾದ ಮಹಾದಾನಗಳನ್ನು ಮಾಡಲೂ, ಮುನಿವೃಂದಾರಕರ ಸಮೀಪದಲ್ಲಿರಲೂ ಮನಸ್ಸಾಯಿತು. ಆದರೆ ನಿಮಗೆ ಆ ಬಯಕೆಗಳನ್ನು ಹೇಳಲಾರದೆ ಮಾವಿನ ಹಣ್ಣಿನ ಬಯಕೆಯಾಗಿದೆಯೆಂದು ಹೇಳಿದಳು" ಎಂದರು. ಇದನ್ನು ಕೇಳಿದ ಸೋಮದತ್ತನಿಗೆ ಅತೀವ ಸೋಜಿಗವಾಯಿತು. ತನ್ನ ಹೆಂಡತಿಯ ಬಗ್ಗೆ ಮುನಿಶ್ರೇಷ್ಠನು ಹೇಳಿದ್ದೆಲ್ಲವೂ ನಿಜವಾದುದೆಂದು ಆ ಬ್ರಾಹ್ಮಣನು ನಂಬಿ ಅವರಿಗೆ ಪೊಡಮಟ್ಟನು. ಸಂಸಾರದ ಬಗ್ಗೆ ಅವನಿಗೆ ಬೇಸರವೆನಿಸಿತು; ಈ ಮಹಾಪುರುಷನ ಪಾದಗಳನ್ನು ನೋಡುತ್ತ, ಅವರ ಮೃದು ನುಡಿಗಳನ್ನು ಕೇಳುತ್ತ ಇರುವುದೇ ಅರಸುಪದವಿಯೆಂದು ಬಗೆದು, ಶಿಷ್ಯರ ಕೈಲಿ ಮಾವಿನ ಹಣ್ಣುಗಳನ್ನು ಅಹಿಚ್ಛತ್ರ ನಗರಕ್ಕೆ ಕಳುಹಿಸಿ ತಾನು ಅಲ್ಲಿಯೇ ಉಳಿದನು.

ಜಿನವಾಕ್ಯದ ಹೊರತಾದ ಮಿಕ್ಕ ಮಾತುಗಳೆಲ್ಲ ವ್ಯರ್ಥವಾದವು, ಅದು ನನಗೆ ಬೇಡ; ನನಗೆ ಜಗತ್ತಿನ ಮೇಲಣ ವಿಷಯ ವ್ಯಾಪಾರಗಳೆಲ್ಲ ತಿಳಿದಿದೆ; ಸಮಸ್ತ ಪಾಪಹಾರಕವಾದ ಜೈನಾಗಮವನ್ನೂ ಕ್ರಮೇಣ ಅರಿತುಕೊಳ್ಳುತ್ತೇನೆ; ಈ ಮುನಿಯ ಪಾದಯುಗಳದಲ್ಲಿ ನಾನು ಸೇರಿರುತ್ತೇನೆ, ಎಂದು ಸೋಮದತ್ತನು ಉತ್ಸಾಹದಿಂದ ನಿರ್ಧರಿಸಿದ. ಬೀದಿಯ ರತ್ನದಂತೆ, ಹೊಸಿಲಿನ ನಿಧಿಯಂತೆ, ಮನೆಗೆ ಬಂದ ನಿಕ್ಷೇಪದಂತೆ, ಕೊಡದೆ ಬಂದ ಭಂಡಾರದಂತೆ, ಕಟ್ಟದೆ ಬಂದ ಮನೆಯಂತೆ, ಬೇಡದೆ ಬಂದ ಸಾಲದಂತೆ, ಪಡೆಯದೆ ಬಂದ ದೇಶದಂತೆ, ವರಿಸದೆ ಬಂದ ಹೆಣ್ಣಿನಂತೆ, ಕಾಡದೆ ಬಂದ ರಾಜ್ಯದಂತೆ, ಬಿತ್ತದೆ ಬಂದ ಧಾನ್ಯದಂತೆ, ಚಿಂತಿಸದೆ ಬಂದ ಹಣದ ಹಾಗೆ, ಪ್ರಾರ್ಥಿಸದೆ ಬಂದ ಮದುವೆಯಂತೆ, ಸಾಧಿಸದೆ ಬಂದ ವಿದ್ಯೆಯಂತೆ, ಕಾದದೆ ಬಂದ ಗೆಲವಿನಂತೆ, ಕೇಳದೆ ಬಂದ ಶಾಸ್ತ್ರದಂತೆ, ಹೇಳದೆ ತಿದ್ದಿದ ಕಾರ್ಯದಂತೆ, ಮಳೆಯಿಲ್ಲದೆ ತುಂಬಿದ ಕೆರೆಯಂತೆ, ನೀರುಣಿಸದೆ ಫಲ ಬಿಟ್ಟ ತೋಟದಂತೆ, ಮದ್ದಿಲ್ಲದೆ ವಾಸಿಯಾದ ರೋಗದಂತೆ, ತನಗೆ ತಾನೆ ಬಂದ

ಸಿರಿಯಂತೆ, ಪುಣ್ಯವಶದಿಂದ ಬಂದ ಜೈನಧರ್ಮವನ್ನು ಒಲ್ಲದೆ ಬಿಟ್ಟರೆ ತಾನು ಮೋಡದ ನೀರನ್ನು ನಂಬಿ ದೋಣೆಯ ನೀರನ್ನು ಬಿಡುವ ಕೋತಿಯನ್ನೂ, ಬೇರೆಯವರ ಬೆಳೆಯನ್ನು ನಂಬಿ ಕೆಲಸ ಮಾಡದ ಒಕ್ಕಲ ಮಗನನ್ನೂ, ನಂಟರ ಮಕ್ಕಳನ್ನು ನಂಬಿ ತನ್ನ ಮಕ್ಕಳನ್ನು ತಿರಸ್ಕರಿಸುವ ಬುದ್ಧಿಹೀನನನ್ನೂ, ಜಾರೆಯ ಮಾತನ್ನು ನಂಬಿ ತನ್ನ ಹೆಂಡತಿಯನ್ನು ಬಿಡುವ ಪ್ರೇಮಿಯನ್ನೂ, ಕಳ್ಳನ ಮಾತನ್ನು ನಂಬಿ ತಳವಾರನನ್ನು ಕೊಲ್ಲುವ ಗ್ರಾಮಣಿಯನ್ನೂ, ಮದುವೆಯ ಊಟವನ್ನು ನಂಬಿ ಮನೆಯ ಧಾನ್ಯವನ್ನು ಸೂರೆಗೊಡುವ ಬೆಪ್ಪನನ್ನೂ, ಸಾಲದ ಹಣವನ್ನು ನಂಬಿ ಹೂತ ಹಣವನ್ನು ಬಿಸಾಡುವ ಮರುಳನನ್ನೂ, ಕೈನಲ್ಲಿರುವುದನ್ನು ಬಿಟ್ಟು ಕಾಲಿನದಕ್ಕೆ ಎರಗುವ ಲೋಭಿಯನ್ನೂ, ಧಾತುವಾದವನ್ನು ನಂಬಿ ಕೈಯಲ್ಲಿರುವ ಒಡವೆಯನ್ನು ಮಾರುವ ಹೀನಬುದ್ಧಿಯವನನ್ನೂ, ಗುಡಿಯನ್ನು ನಂಬಿ ಮನೆಯನ್ನು ಸುಡುವ ಬುದ್ಧಿಹೀನನನ್ನೂ, ಹಿಂಡಿಯನ್ನು ನಂಬಿ ಎಣ್ಣೆಯನ್ನು ಚೆಲ್ಲುವ ಗಾಣಿಗನನ್ನೂ, ಹಣ ನೀಡುವವನನ್ನು ಬಿಟ್ಟು ಬೇಟೆಗಾರನನ್ನು ಕರೆಯುವ ಸೂಳೆಯನ್ನೂ, ಮಣ್ಣ ಕೋಟೆಯನ್ನು ನಂಬಿ ಕಲ್ಲಿನ ಕೋಟೆಯನ್ನು ಕೆಡಹುವ ಮನ್ನೆಯನನ್ನೂ, ಅಲ್ಪನನ್ನು ನಂಬಿ ಪ್ರಾಮಾಣಿಕನಾದ ಒಕ್ಕಲನ್ನು ಕಳಿಸುವ ಯಜಮಾನನನ್ನೂ, ಮಾತಾಳಿಯನ್ನು ನಂಬಿ ವೀರನನ್ನು ಕೈಬಿಡುವ ನಾಯಕನನ್ನೂ, ಸೋರೆಯ ಬಟ್ಟಲನ್ನು ನಂಬಿ ಕಂಚಿನ ಬಟ್ಟಲನ್ನು ಒಡೆದು ಹಾಕುವ ಗೊರವನನ್ನೂ, ಹಾಳು ನಾಡನ್ನು ನಂಬಿ ಸಮೃದ್ಧ ನಾಡನ್ನು ಕೆಡಿಸುವ ರಾಜನನ್ನೂ, ಕಳ್ಳಿಯನ್ನು ನಂಬಿ ಅಡಿಕೆಯ ತೋಟವನ್ನು ಕಡಿಯುವ ತೋಟಗಾರನನ್ನೂ, ಹುಲು ಬಂಟನನ್ನು ನಂಬಿ ಬಲು ಬಂಟನನ್ನು ಬಿಡುವ ಹಗೆಗಾರನನ್ನೂ, ಬೆಂಕಿಯನ್ನು ಬಿಟ್ಟು ನೀರನ್ನು ಹೊಗುವ ವಾತಪೀಡಿತನನ್ನೂ, ತಂಪನ್ನು ಬಿಟ್ಟು ಬಿಸಿಲನ್ನು ಕಾಯುವ ಪಿತ್ತಾಧಿಕನನ್ನೂ ಹೋಲುತ್ತೇನೆ ಎಂದು ನಿಶ್ಚೈಸಿ ಜಿನಧರ್ಮದ ಬಗ್ಗೆ ಸುಮತಿ ಭಟ್ಟಾರಕರಲ್ಲಿ ಚೆನ್ನಾಗಿ ಕೇಳಿ ತಿಳಿದುಕೊಂಡ. ತನ್ನ ಹಿಂದಿನ ಸಂಕಲ್ಪಜಾಲವನ್ನೆಲ್ಲ ತೊರೆದು, ಸಂಸಾರಕ್ಕೆ ಹೇಸಿ ವೈರಾಗ್ಯ ಹುಟ್ಟಲು ಪಂಚೇಂದ್ರಿಯಗಳ ಅಲ್ಪಸುಖವನ್ನು ಬಿಟ್ಟು ಅತೀಂದ್ರಿಯಸುಖವನ್ನು ಕೈಕೊಳ್ಳಲು ನಿರ್ಧರಿಸಿದ.

ಸೋಮದತ್ತನು ತನ್ನ ಕೈಗಳನ್ನು ಮುಗಿದುಕೊಂಡು, ತಲೆ ಬಾಗಿಸಿ, ಪಾಪವನ್ನು ಓಡಿಸಲೆಂದು ಜಿನದೀಕ್ಷೆಯನ್ನು ತನಗೆ ದಯಪಾಲಿಸಬೇಕೆಂದು ಮುನಿಪನನ್ನು ಬೇಡಿಕೊಂಡ. ಅವನ ವಿನಯ ಹಾಗೂ ಮನದ ವೈರಾಗ್ಯಗಳನ್ನು ಸುಮತಿ ಭಟ್ಟಾರಕರು ಕಂಡು ಮೆಚ್ಚಿ ಅವನಿಗೆ ದೀಕ್ಷೆಯನ್ನು ಕರುಣಿಸಿದರು. ಅವನು ದಿಗಂಬರನಾಗಿ ಚತುರನುಯೋಗವನ್ನು ನೋಡಿ ದಶಧರ್ಮಕುಶಲನೂ, ಅಷ್ಟಾವಿಂಶತಿ ಮೂಲಗುಣ ಸಮನ್ವಿತನೂ, ದರ್ಶನಸಂಶುದ್ಧನೂ ಆಗಿ, ಕೆಲವು ದಿವಸ ಗುರುಗಳ ಪಾದಸೇವೆಯಲ್ಲಿ ನಿರತನಾದ. ಆನಂತರ ಗುರುಗಳ ಅನುಜ್ಞೆಯಂತೆ ದೇಶ ಸಂಚಾರವನ್ನು ಮಾಡುತ್ತ ಮಗಧ ದೇಶದ ಸೌಪಾಳ ಎಂಬ ನಗರದ ಪಶ್ಚಿಮ ದಿಕ್ಕಿನಲ್ಲಿದ್ದ ನಾಭಿಗಿರಿ ಎಂಬ ಪರ್ವತದಲ್ಲಿ ಆತಪಯೋಗದಲ್ಲಿ ನಿರತನಾಗಿದ್ದ.

ಸೋಮದತ್ತನು ಕೊಟ್ಟ ಮಾವಿನ ಹಣ್ಣುಗಳನ್ನು ಅವನ ಶಿಷ್ಯರು ತುಂಬ ಪ್ರೀತಿಯಿಂದ ತಂದು ಯಜ್ಞದತ್ತೆಗೆ ನೀಡಿದರು. ಹಾಗೆಯೇ ಸೋಮದತ್ತನಲ್ಲಾದ ಬದಲಾವಣೆಗಳನ್ನು ಎಲ್ಲ ಬಂಧುಜನಗಳಿಗೂ ಅರುಹಿದರು. ಅವನು ಋಷಿಯ ಸಾನ್ನಿಧ್ಯವನ್ನು ಹೊಂದಿದವನಾಗಿದ್ದರೆ ತಮಗೆ ದಕ್ಕುವವನಲ್ಲ ಎಂದು ಅವರೆಲ್ಲ ಮಮ್ಮಲ ಮರುಗಿದರು. ಜಿನರೂಪವನ್ನು ಒಂದೇ ಮನಸ್ಸಿನಿಂದ ಧರಿಸಿದ್ದಾನೆ; ಋಷಿಗಳ ಸಾನ್ನಿಧ್ಯದಲ್ಲಿ ಆ ಬ್ರಾಹ್ಮಣಲಲಾಮನು ಸಂತಸದಿಂದ ಧರ್ಮಶ್ರವಣದಲ್ಲಿ ನಿರತನಾಗಿದ್ದಾನೆ ಎಂದು ಅವರೆಲ್ಲ ಅರಿತರು. ಆಗ "ಯೋಚಿಸಿದರೆ ಭೂಮಿಯಲ್ಲಿ ಶ್ರೇಷ್ಠವಾದ ವಿಪ್ರಕುಲದಲ್ಲಿ ಅವರು ಅಧಿಕರು; ಅಗ್ಗಳವಾದ ವೇದ ಶಾಸ್ತ್ರ ಪುರಾಣ ತರ್ಕ ಪರಾಯಣರು; ಮಿಕ್ಕ ಚಾರಿತ್ರದಲ್ಲಿ ಆ ಸರಸಿಜೋದ್ಭವನೇ ಸರಿ; ಹಾಗಾಗಿ ಅವರು ಖಂಡಿತ ಜೈನದೀಕ್ಷೆಯನ್ನು ಪಡೆದಿರಲಾರರು" ಎಂದು ಸೋಮದತ್ತೆ ಅವರಿಗೆ ಹೇಳಿದಳು. ಅದನ್ನು ಕೇಳಿ ಅಲ್ಲಿದ್ದ ಕೆಲವು ವಿವೇಕಿಗಳು ಹೀಗೆಂದರು: "ಬ್ರಹ್ಮನಂತಹ ಸದಾಚಾರಿಗಳಾದ ಕೆಲವರು ಬ್ರಾಹ್ಮಣರು ಸ್ವಇಚ್ಛೆಯಿಂದ ಜಿನೇಂದ್ರದೀಕ್ಷೆಯನ್ನು ಪಡೆದಿದ್ದಾರೆ; ಅನಂತ ಸೌಖ್ಯವನ್ನು ನೀಡುವ ದಿವ್ಯ ತಪಸ್ಯೆಯು ದೊರೆತ ಮೇಲೆ ಅದನ್ನು ಬಿಟ್ಟು ಬರುವ ಬುದ್ಧಿವಂತರು ಜಗತ್ತಿನಲ್ಲಿ ಯಾರಿದ್ದಾರೆ?" ಹೀಗೆಂದು ಯಜ್ಞದತ್ತೆಯ ಬಂಧುಗಳೂ ಮಿತ್ರರೂ ತಮತಮಗೆ ತೋಚಿದ

ರೀತಿಯಲ್ಲಿ ಮಾತಾಡಿಕೊಂಡರು. "ಸೋಮದತ್ತನು ಮಹಾ ವಿವೇಕಿಯಾದ ಬ್ರಾಹ್ಮಣ; ಖಂಡಿತ ಜಿನದೀಕ್ಷೆಯನ್ನು ಕೈಗೊಂಡಿರಲಾರ; ಹುತ್ತ ಬತ್ತಲೆಗಳು ಬರಿದಾಗಿರುವುದಿಲ್ಲ ಎಂಬ ಗಾದೆಯುಂಟು; ಅದರಿಂದ ಆ ಋಷಿಯನ್ನು ನಂಬಿಸಿ, ಹುಸಿ ಭಕ್ತಿಯನ್ನು ತೋರಿಸಿ ಏನಾದರೊಂದು ಸದ್ವಿದ್ಯೆಯನ್ನು ಸಾಧಿಸ ಬಯಸಿ ಅಲ್ಲಿ ಉಳಿದಿದ್ದಾನೆ; ನಿಶ್ಚಿತವಾಗಿ ವಾಪಸ್ಸು ಬರುತ್ತಾನೆ" ಎಂದು ಮನಸ್ಸಿನಲ್ಲಿ ಸಮಾಧಾನ ಪಟ್ಟುಕೊಂಡು ಅವರೆಲ್ಲ ಸುಖವಾಗಿದ್ದರು.

ಚಂದ್ರಮುಖಿಯಾದ ಯಜ್ಞದತ್ತೆ ಒಂಬತ್ತು ತಿಂಗಳು ಗರ್ಭವನ್ನು ಹೊತ್ತು ತನ್ನ ಸಕಲ ದುಃಖಗಳೂ ಹರಿಯುವಂತೆ ದೇವೇಂದ್ರಸಮಾನನಾದ ಒಂದು ಗಂಡು ಮಗುವನ್ನು ಹೆತ್ತಳು. ಪುತ್ರೋತ್ಸವವನ್ನು ಆಚರಿಸಿ ಕೂಸಿಗೆ ಶ್ರೀದತ್ತನೆಂದು ನಾಮಕರಣ ಮಾಡಿದಳು. ಈ ಕಡೆ ಸೋಮದತ್ತನು ಋಷಿಯಾಗಿ ಮಗಧ ವಿಷಯದ ಸೌಪಾಳ ನಗರದ ಬಳಿಯ ನಾಭಿಗಿರಿ ಎಂಬ ಬೆಟ್ಟದಲ್ಲಿ ಬಂದು ಉಳಿದಿದ್ದಾನೆ ಎಂಬ ಸುದ್ದಿಯು ಜನಗಳಿಂದ ಯಜ್ಞದತ್ತೆಯ ಕಿವಿಗೆ ಬಿತ್ತು. ಅದನ್ನು ಮೂಲಶುದ್ಧಿಯಿಂದ ತಿಳಿದು ಹೊಟ್ಟೆ ಹೊಸೆದುಕೊಂಡು ಅವಳೂ ಅವಳ ಬಂಧುಗಳೂ ದುಃಖಗೊಂಡರು. ಅವನ ತಪಸ್ಸನ್ನು ಯಾವ ಯಾವ ಪರಿಗಳಿಂದ ಸಾಧ್ಯವೋ ಹಾಗೆ ಕೆಡಿಸಲು ಛಲದಿಂದ ಪ್ರತಿಜ್ಞೆ ಮಾಡಿದರು.

ಕೋಪದಿಂದ ಹೊರಟ ಅವರು ಸೋಮದತ್ತನ ತಪಸ್ಸನ್ನು ಹೇಗಾದರೂ ಮಾಡಿ ಹಾಳುಗೆಡವುವ ಉದ್ದೇಶದಿಂದ ನಾಭಿಗಿರಿಯ ಬಳಿ ಬಂದರು. ಅವರಿಗೆ ಕಾಣಿಸಿದ್ದು ಮಂದರಪರ್ವತದಂತೆ ಅಚಲನಾಗಿ ನಿಂತಿದ್ದ ಸೋಮದತ್ತ. ಅವನ ಬಳಿ ಬಂದು ನೆಂಟರೆಲ್ಲ ಹೀಗೆಂದರು: "ಪಡೆಯಲು ದುಸ್ತರವಾದ ಬ್ರಾಹ್ಮಣ ಜನ್ಮವನ್ನು ನೀನು ಪಡೆದವನು; ಅದನ್ನು ಒಲ್ಲದೆ ಗಾವಿಲನಾಗಿ ನಿನ್ನ ಚಾರುಚರಿತ್ರವನ್ನು ಕೆಡಿಸಿಕೊಂಡು, ನಮ್ಮನ್ನು ನಿಂದಿಸಿ ಘಮ್ಮನೆ ಜಿನದೀಕ್ಷೆಯನ್ನು ಹೊಂದಿದೆಯಲ್ಲ! ಒಳ್ಳೆಯ ಬ್ರಾಹ್ಮಣನಾಗಿದ್ದುಕೊಂಡು ಸದ್‌ಬ್ರಾಹ್ಮಣರಿಂದ ಹೊಗಳಿಸಿಕೊಂಡು, ಮರುಳೆ, ಈಗ ಬ್ರಾಹ್ಮಣ್ಯವನ್ನು ತೊರೆದು ಸವಣನಾದೆಯಲ್ಲ! ನಿನ್ನ ವಿದ್ಯೆಗಿಂತ ಇವರ ವಿದ್ಯೆಯು ಹಿರಿದೆಂದು ನೀನು ಹಾಗೆ ಮಾಡಿದೆಯೋ; ಅಥವಾ ನಿನ್ನ ಕುಲಕ್ಕಿಂತ ಇವರ ಕುಲವು ಶ್ರೇಷ್ಠವೆಂದು ಜೈನನಾದೆಯೋ? ಸವಣರ ಆಕರ್ಷಣೆಗೆ ಒಳಗಾಗಿ ಮತಿಗೆಟ್ಟ ನೀನು ಬುದ್ಧಿಯಿಲ್ಲದೆ ಯಾರೂ ಸಮ್ಮತಿಸದ ಹಾಗೆ ನಿನ್ನ ಸದ್ಗತಿಯನ್ನು ಕೆಡಿಸಿಕೊಂಡೆಯಲ್ಲ! ಅಲ್ಲದೆ, ಲೌಕಿಕ ಓದಿನಲ್ಲಿಯೂ ನಿನಗೆ ಸಮಾನರಿಲ್ಲ; ಸಕಲಶಾಸ್ತ್ರಪಾರಂಗತ ಬೇರೆ; ನೀನು ನೃಪಪೂಜಿತ; ಬ್ರಾಹ್ಮಣರ ಆರಾಧ್ಯನಾದ ನೀತಿಪರಿಣತ; ಶ್ರುತಿಸ್ಮೃತಿಗಳ ಜ್ಞಾನ ಹೊಂದಿದವನು. ಇಂಥವನು ಒಂದು ಸಲವೂ ವಿಚಾರಿಸದೆ ಅವಿಚಾರಿಯಾಗಿ ನೀರು ನೇಣುಗಳನ್ನು ತೊರೆದು, ಕುಲವನ್ನು ನೀರಿನಲ್ಲಿ ಅದ್ದಿ, ನಂಟರಿಷ್ಟರಿಂದ ಛಿ ಎನಿಸಿಕೊಂಡು, ಪರಗತಿಯನ್ನು ಹಾಳುಮಾಡಿಕೊಂಡು, ವೇದಾಭಿಪ್ರಾಯವನ್ನು ಉದಾಸೀನ ಮಾಡಿ ಜಿನರೂಪಧಾರಿಯಾದೆ!" ಎಂದು ಅವನ ಕಾಲ ಮೇಲೆ ಬಿದ್ದು ಬೇಡಿಕೊಂಡರು. "ಈ ತಪಸ್ಸನ್ನು ಬಿಟ್ಟುಬಿಡು; ನಿನ್ನ ಬ್ರಾಹ್ಮಣ್ಯವನ್ನು ಬಿಡದೆ ಮತ್ತೊಂದು ಮಾತನಾಡದೆ, ಎಲೈ ವಿಪ್ರಕುಲೋತ್ತಮನೇ, ಈ ಕ್ಷಣವೇ ನಮ್ಮೊಡನೆ ಊರಿಗೆ ಬಾ. ಪರಿಣಾಮವನ್ನು ಆಲೋಚಿಸದೆ ಜಿನರೂಪವನ್ನು ಧರಿಸಿದೆ; ನಿನ್ನನ್ನು ಬಂಧುಗಳು ಬ್ರಾಹ್ಮಣರೂ ಮತ್ತೆ ಸ್ವೀಕರಿಸುವರೋ ಇಲ್ಲವೋ ಎಂಬ ಅಂಜಿಕೆಯಿಂದ ಸುಮ್ಮನಿರಬೇಡ. ಹೋಮಾದಿಗಳ ಮೂಲಕ ಇದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬಹುದು. ನಿನ್ನ ಮಹಾ ಐಶ್ವರ್ಯವನ್ನೂ ವೃತ್ತಿಯನ್ನೂ ಹೆಂಡಿರುಮಕ್ಕಳನ್ನೂ ಬಂಧುಗಳನ್ನೂ ನೋಯಿಸದೆ ವಾಪಸು ಬಾ" ಎಂದು ಗೋಗರೆದು ಕೇಳಿಕೊಂಡರು.

ಈ ಮಾತುಗಳನ್ನೆಲ್ಲ ಕೇಳಿಸಿಕೊಂಡ ಸೋಮದತ್ತನು ತನ್ನ ಮನಸ್ಸಿನಲ್ಲಿ ಹೀಗೆ ಆಲೋಚಿಸಿದ: 'ಬೆಪ್ಪುತನದಿಂದಲೂ ಮಿಥ್ಯಾತ್ವದ ಕಾರಣದಿಂದಲೂ ಇಲ್ಲಿಯವರೆಗೆ ಜಿನವಾಕ್ಯಾಮೃತವನ್ನು ನಂಬದೆ ಕುನಯ ಭಾವನೆಯಿಂದ ಕೆಟ್ಟಿದ್ದೆ. ಜಿನವಚನ ಮತ್ತು ಕುನಯಗಳನ್ನು ಸಮಾನ ಎನ್ನಬಹುದೇ? ಮಿಂಚುಹುಳುಗಳ ಮಿಣುಕು ಸೂರ್ಯನ ಪ್ರಭೆಗೆ ಸಮಾನ ಎನ್ನಬಹದೇ? ಗತಿಯಿಲ್ಲದ ಬಡಸೂಳೆ ವಿಟನ ಬಳಿ ಬಂದು ಬಡಿವಾರದಿಂದ ಅಗಸನನ್ನು ಬೈದಳೆಂಬ ಹಾಗೆ, ಜಿನಾಗಮದ ಉಡುಗೆಯನ್ನು ತಡೆದುಕೊಳ್ಳಲಾರದೆ ಕುಬುದ್ಧಿಗಳೂ, ಸಪ್ತವ್ಯಸನಿಗಳೂ, ಪರಸ್ತ್ರೀವ್ಯಾಮೋಹಿಗಳೂ, ಹಿಂಸಾನಂದರೂ, ಧೂರ್ತಾಲಾಪರೂ

ಆದ ಜನರು ಜಿನಧರ್ಮವನ್ನು ಹೀಗಳೆಯುವರೆಂದರೆ ಅದು ಪ್ರಮಾಣವಲ್ಲ. ಕೊಲ್ಲಬಾರದು, ಜಡತ್ವದಿಂದ ಹುಸಿಯಾಡಬಾರದು, ಚಪಲತೆಯಿಂದ ಕಳ್ಳತನ ಮಾಡಬಾರದು, ಪರಸ್ತ್ರೀವ್ಯಸನದಿಂದ ಕೂಡಿರಬಾರದು, ಲೋಭಿತ್ವದಿಂದ ಪರಿಗ್ರಹಕ್ಕೆ ತುತ್ತಾಗಬಾರದು ಎಂಬ ಜೈನೋಕ್ತಿಗಳು ಕೆಟ್ಟವೇನು? ಆದರೆ ಕುಮತಿಗಳು ಇದನ್ನು ಹೀಗಳೆಯುತ್ತಾರೆ. ಅಗ್ಗದ ಸೂಳೆಯನ್ನೂ ಕೊಡಲಿಲ್ಲದ ಬಡವಿಟನನ್ನೂ ಹಳಿದು ಸಾಮಾನ್ಯ ಭೇದವಾದಿಗಳನ್ನು ಹೊಗಳುವಂತೆ, ಮಹಾ ಪರೀಷಹಗಳಿಗೆ ಪಕ್ಕಾಗಿ ಸುವ್ರತಗಳನ್ನು ಆಚರಿಸುವ ಜೈನಮಾರ್ಗವನ್ನು ದುಷ್ಟರಾದವರು ಅನುಸರಿಸಲಾರದೆ ಸೆಡೆದು ಹಳಿಯುತ್ತಾರೆ; ತಮಗೆ ಸರಿ ತೋರಿದ ಅಧರ್ಮಗಳನ್ನೇ ಮಹಾ ಧರ್ಮವೆಂದು ಕೈಗೊಂಡು ಹೊಗಳುತ್ತಾರೆ. ಇದೇನೂ ಅಚ್ಚರಿಯ ವಿಷಯವಲ್ಲ.'

ಹೀಗೆ ಆಲೋಚಿಸಿದ ಸೋಮದತ್ತನು ಮಾತನಾಡದೆ ಸುಮ್ಮನಿದ್ದನು. ಆಗ ಯಜ್ಞದತ್ತೆ ಬಂದು ಅವನ ಕಾಲ ಮೇಲೆ ಕೆಡೆದು ಹೀಗೆಂದಳು: "ನನ್ನನ್ನೂ ಹಿರಿದಾದ ಔನ್ನತ್ಯವನ್ನೂ ಕಡೆಗಣಿಸದೆ, ವಿಪ್ರೋನ್ನತ, ಈಗಲೂ ತಡವಾಗಿಲ್ಲ, ಇತರರು ನಿಮ್ಮನ್ನು ಕಂಡು ನಗುವಂತೆ ಮಾಡಿಕೊಳ್ಳದೆ ಈ ತಪಸ್ಸನ್ನು ಬಿಟ್ಟು ಬಿಡಿರಿ. ನೀವು ವಿಪ್ರಕುಲಶ್ರೇಷ್ಠರು, ವಿಪ್ರವಂಶಲಲಾಮ, ವಿದ್ಯಾನಿಧಿ; ನಿಮಗೆ ತಕ್ಕುದಲ್ಲದ ಹೀನತೆಯನ್ನು ತಂದುಕೊಂಡು ಇತರರು ನಗುವಂತೆ ಮಾಡಿದಿರಿ; ದಿಕ್ಕಿಲ್ಲದ ಪರದೇಸಿಯಂತೆ ಕಾಡು ಸೇರಿ, ಅನ್ನವಿಲ್ಲದ ಭಿಕ್ಷುಕರಂತೆ ದೇಹ ಎಲುಬುಗೂಡಾಗಿ, ತಬ್ಬಲಿಯ ಹಾಗೆ ಸಿರಿ ಬಿಟ್ಟು, ಹಂದಿಯಂತೆ ಕೆಸರನ್ನು ಬಳಿದುಕೊಂಡು, ಸುಟ್ಟ ಕೊರಡಿನಂತೆ ಬಿಸಿಲಲ್ಲಿ ಬೆಂದು, ಸಾಲ ಸಿಗದ ಕಡು ಬಡವನಂತೆ ಹಸಿದುಕೊಂಡು, ದೇಹವನ್ನು ವೃಥಾ ದಂಡಿಸಿ ಏಕೆ ಗಾವಿಲರಾಗುತ್ತೀರಿ?" ಎಂದು ನಾನಾ ಬಗೆಯಲ್ಲಿ ದೇಹ ಸಿರಿ ಸಂಪತ್ತು ಭೋಗ ಮುಂತಾದುವುಗಳ ಆಮಿಷವೊಡ್ಡಿದರೂ ಅವನ ಮೌನವನ್ನು ಮುರಿಯಲು ಯಜ್ಞದತ್ತೆಗೆ ಸಾಧ್ಯವಾಗಲಿಲ್ಲ. ಕೊನೆಗೆ ಅವಳು ಹಿಂದಕ್ಕೆ ಸರಿದು ಸುಮ್ಮನಾದಳು.

ಆಗ ಸೋಮದತ್ತನು, 'ಓಲಗ ಲೇಸು ಕಾಳಗ ಕಷ್ಟ ಎಂಬ ಹಾಗೆ, ಮದುವೆ ಲೇಸು ಕಾಪಾಡುವುದು ಕಷ್ಟ ಎಂಬಂತೆ, ಮಾನ್ಯ ಲೇಸು ಆದರೆ ಮಾನ್ಯದೆರೆ ಕಷ್ಟ ಎಂಬಂತೆ, ಹಾದರ ಮೇಲು ಸಾವು ಕಷ್ಟ ಎಂಬಂತೆ, ಪೂಣ್ಕೆ ಮೇಲು ಮಾಟ ಕಷ್ಟ ಎಂಬಂತೆ, ಜಗಳ ಲೇಸು ದಂಡ ಕಷ್ಟ ಎಂ¨ಂತೆ, ಖರ್ಚು ಮೇಲು ದುಡಿಮೆ ಕಷ್ಟ ಎಂಬಂತೆ, ಕೊಲೆ ಲೇಸು ಕಾಪಾಡುವುದು ಕಷ್ಟ ಎಂಬಂತೆ, ಜಿನಪನ ಪಾದಸೇವನೆಯಿಂದ ಮೂರು ಲೋಕಗಳ ಒಡೆತನವೂ ತನಗೆ ತಾನೆ ದೊರಕುವುದೆಂದ ಮೇಲೆ ದೇವಲೋಕದ ಒಡೆತನವೂ ಮನುಜರಾಜ್ಯವೈಭವವೂ ದೊರೆಯುವುದು ಯಾವ ಮಹಾ! ತನಗೆ ಒಳ್ಳೆಯದನ್ನು ಹೇಳುವವನ ಮಾತನ್ನು ಕೇಳಬೇಕೇ ವಿನಾ ನರಕಕಾರಣವಾದದ್ದನ್ನು ಹೇಳುವವನ ಮಾತಿಗೆ ಕಿವುಡಾಗಿರುವುದು ಲೇಸು. ಮುತ್ತು ಸಮುದ್ರದಲ್ಲಿ, ನೀರು ಮೋಡದಲ್ಲಿ, ಮಣ್ಣು ಭೂಮಿಯಲ್ಲಿ, ಎಣ್ಣೆ ಎಳ್ಳಿನಲ್ಲಿ, ತುಪ್ಪ ಹಾಲಿನಲ್ಲಿ, ಮಕ್ಕಳು ಹೆಂಗಸರಲ್ಲಿ, ಹಾಲು ಕೆಚ್ಚಲಲ್ಲಿ, ತೃಪ್ತಿ ಊಟದಲ್ಲಿ, ಸೀರೆ ನೂಲಿನಲ್ಲಿ, ಹಗಲು ಸೂರ್ಯನಲ್ಲಿ, ತಂಪು ಗಾಳಿಯಲ್ಲಿ, ಜ್ವಾಲೆ ಬೆಂಕಿಯಲ್ಲಿ, ನೋಟ ಕಣ್ಣಿನಲ್ಲಿ, ಸಿರಿ ಹೊನ್ನಿನಲ್ಲಿ, ಬಲ ಯೌವನದಲ್ಲಿ, ಮದುವೆ ಕನ್ನಿಕೆಯಲ್ಲಿ ಆಗುವಂತೆ ಸ್ವರ್ಗಮೋಕ್ಷಗಳೂ ದಾನಗುಣವೂ ಸದಾಚಾರವೂ ಮಹಾವ್ರತಗಳೂ ಜೈನಮತದಲ್ಲಿ ಹುಟ್ಟುವುದೇ ಹೊರತು ಬೇರೆ ಕುಮತಗಳಲ್ಲಿ ಹುಟ್ಟಲಾರವು. ಆದ್ದರಿಂದ ಅಜ್ಞಾನಿಗಳ ಮಾತನ್ನು ಕೇಳಬಾರದು. ಎಷ್ಟೇ ಚೆನ್ನಾಗಿದ್ದರೂ ಗಾಜಿನ ಮಣಿಗಳು ಚಿನ್ನದ ತೊಡವಿಗಿಂತ ಮೇಲು; ಹಾಗೆಯೇ ಇತರ ನುಡಿಗಳು ಎಷ್ಟೇ ಒಳಿತನ್ನು ಮಾಡಿದರೂ ಜೈನನುಡಿಗಳನ್ನು ಹೋಲುತ್ತವೆಯೇ? ಜಿನವಚನಗಳ ಯೋಗ್ಯತೆಯನ್ನು ತಿಳಿಯದೆ ದುರ್ಜನರು ಹಳಿಯುತ್ತಾರೆ; ಒಳ್ಳೆಯ ಜಿನವಚನಗಳನ್ನು ತಿಳಿದರೆ ಒಳ್ಳೆಯ ಬುದ್ಧಿ ಇರುವವರು ಹಳಿಯುತ್ತಾರೆಯೇ? ಶ್ರೇಷ್ಠವಾದ ಜಿನಮತವನ್ನು ಏನೆಂದು ತಿಳಿಯದೆ ಹಿಂದೆ ಅನುಭವಿಸಿದ ಕೆಡುಕೇ ಸಾಕು; ಅದನ್ನರಿತೂ ಮತಿಗೆಟ್ಟು ಬಿಟ್ಟರೆ ಉಗ್ರ ಸಂಸಾರದ ಕಾಡಿನಲ್ಲಿ ದುಃಖವೇ ಗತಿ!' ಎಂದುಕೊಂಡು ಸುಮ್ಮನೆಯೇ ಇದ್ದ.

ಅವನ ಮೌನದಿಂದ ನೆಂಟರೆಲ್ಲರಿಗೆ ಕೋಪವುಂಟಾಯಿತು. "ಈ ದೊಂಬರಾಟ ಸಾಕು, ಸುಮ್ಮನೆ ನಡೆ; ನಿನಗೇಕೆ ಈ ತಪಸ್ಸಿನ ರೋಗ!" ಎಂದು ಅವರೆಲ್ಲ ಬೈದರು; "ಸಮಸ್ತ ನಂಟರನ್ನೂ ಹೆಂಡತಿಯನ್ನೂ ದುಃಖಕ್ಕೀಡುಮಾಡಿದ ನಿನಗೆ ದುರ್ಗತಿ ಬಾರದಿರುವುದೇ? ಸುಮ್ಮನೆ ನಮ್ಮ ಜೊತೆ ಬಾ" ಎಂದು ಅವರೆಲ್ಲ ಆ ಮುನೀಂದ್ರನನ್ನು ಅಪ್ಪಿಕೊಂಡರು. ಹಾಗೆ ಉಗ್ರ ಕೋಪದಿಂದ ಅವರು ಕೈಕಾಲುಗಳನ್ನು ಹಿಡಿದು ಎಳೆದಾಗ ಸೋಮದತ್ತ ಮುನಿನಾಥನು ತನ್ನ ಮನಸ್ಸಿನಲ್ಲಿ, 'ಮಳಮುಖನು ಕೋಪದಿಂದ ಗುರುದತ್ತ ಮನೀಶ್ವರರನ್ನು ಬೆಂಕಿಯಿಟ್ಟು ಸುಟ್ಟ ಅಂದ ಮೇಲೆ ಖೂಳರ ಮುನಿಸು ಏನು ತಾನೆ ಮಾಡಲಾರದು? ಬಂಡಿಯಲ್ಲಿ ತುಂಬಿದ ಜೋಳವನ್ನು ತಿನ್ನುವ ಕೋಣವು ಮೊರದಲ್ಲಿ ತುಂಬಿದ ಜೋಳವನ್ನು ತಿನ್ನಲಾರದೇ? ನರಕದಲ್ಲಿ ದೀರ್ಘಕಾಲ ನವೆಯಬೇಕಾದಂತಹ ಪಾಪವನ್ನು ಮಾಡುವ ಪಾಪಿಗಳು ನನಗೆ ತೊಂದರೆಯನ್ನು ಕೊಡುವುದು ಆಶ್ಚರ್ಯಕರವೇನಲ್ಲ' ಎಂದು ಆಲೋಚಿಸಿದ. ಮಹಾ ಉಪಸರ್ಗಗಳನ್ನು ಸೈರಿಸಿ ದಿವ್ಯ ಸುಖವನ್ನು ಪಡೆದ ಮಹಾಪುರುಷರ ಚರಿತೆಗಳನ್ನು ಮನಸ್ಸಿನಲ್ಲಿ ನೆನಯುತ್ತ, ಈ ಮನುಷ್ಯೋಪಸರ್ಗವು ತೀರುವವರೆಗೂ ಆಹಾರನಿವೃತ್ತಿಯೇ ಶರೀರನಿವೃತ್ತಿ ಎಂದು ತೀರ್ಮಾನಿಸಿದ. ಅವನ ಸಗೋತ್ರರು ಅವನನ್ನು ಎಳೆದೂ ಎಳೆದೂ ಬೇಸರಗೊಂಡು ಅವನನ್ನು ಸುತ್ತುವರಿದು, "ಎಲೆ ಪಾತಕ, ನೀನು ಈ ಕುಲಸ್ತ್ರೀಯನ್ನೂ ಮಗುವನ್ನೂ ಬಿಟ್ಟು ತಪಸ್ಸನ್ನು ಹಿಡಿದಿದ್ದರೂ ಅದರಿಂದ ಫಲವಿದೆಯೇ, ಪುಣ್ಯವಿದೆಯೇ, ಗತಿಯಿದೆಯೇ? ಬತ್ತಲಿಗರ ಮಾತನ್ನು ಕೇಳಿ ಉತ್ತಮವಾದ ಕುಲವನ್ನು ಹಾಳುಮಾಡಿದೆ; ನಿನಗಿನ್ನೆಲ್ಲಿ ಪರಗತಿ? ನೀನು ಸತ್ತರೂ ಕಷ್ಟಗತಿಯನ್ನು ನೀಗಿಕೊಳ್ಳಬಲ್ಲೆಯಾ?" ಎಂದು ಬಾಯಿಗೆ ಬಂದಂತೆ ನುಡಿದರು.

ಅವರ ಮಾತನ್ನು ಕೇಳಿ ವಾತ್ಸಲ್ಯರತ್ನಾಕರನು ಸುಮ್ಮನೆ ನಕ್ಕ. ಗೋಡೆಯ ಚಿತ್ರದಂತೆ, ಬಸುರಿಯ ಹಣ್ಣಿನಂತೆ, ಕತ್ತೆಯ ಲದ್ದಿಯಂತೆ, ಕಳ್ಳನ ಸತ್ಯದಂತೆ, ಹಾವುಮೆಕ್ಕೆಯ ತಂಪಿನಂತೆ, ಕೊಚ್ಚೆಯ ನೀರಿನಂತೆ, ಬಡವನ ಮಹಿಮೆಯಂತೆ, ಹಗರಣದ ಆನೆಯಂತೆ, ಹೇಡಿಯ ಮಾತಿನಂತೆ, ರಂಗೋಲಿಯ ಹಿಟ್ಟಿನಂತೆ, ದೊಂಬನ ಜಗಳದಂತೆ, ದೂರದ ಬೆಟ್ಟದಂತೆ, ಕಟ್ಟಿದ ಹಲ್ಲಿನಂತೆ, ನವಿಲುಗರಿಯ ಕಣ್ಣಿನಂತೆ, ತಾಳೆಯ ಕಾಯಿಯಂತೆ, ಪಿಶಾಚಿಯ ಕೊಂಬಿನಂತೆ ಹೊರಗೆ ರಂಜಿಸುವ ಬಹಿರಾಲಾಪದ ದೊಂಬತನವನ್ನು ಒಲ್ಲದೆ; ಮಾಸದ ಚಿನ್ನದ ಕೊಡದಂತೆ, ಸಾಧಕನ ಮರುಳಾಟದಂತೆ, ವೀರನ ಹೆದರಿಕೆಯಂತೆ, ಕೇದಗೆಯ ಹೂವಿನಂತೆ, ಬಾಳೆಯ ಹಣ್ಣಿನಂತೆ, ನಿಧಿಯನ್ನು ಕಂಡ ಬಡವನಂತೆ, ಬೂದಿ ಮುಚ್ಚಿದ ಕೆಂಡದಂತೆ, ನುಡಿಜಾಣನ ಮೌನದಂತೆ, ಸಮುದ್ರದ ಕಹಿಯಂತೆ, ತೋಟದ ಬೇಲಿಯಂತೆ, ತುಪ್ಪದ ಕೊಡದಂತೆ ನಿಶ್ಚಿತವಾಗಿ ಕಡು ಲೇಸಾದ ಸನ್ಮಾರ್ಗವನ್ನು ಬಿಟ್ಟು ನರಕದಲ್ಲಿ ತಿರ್‍ರನೆ ತಿರುಗುವ ಪಾಪವನ್ನು ಮಾಡಿದ ಮಾನವರು ಕೈಗೊಳ್ಳರೆಂದು ಜಿನಮಾರ್ಗವನ್ನು ಬಿಡುವುದು ತರವಲ್ಲ ಎಂದು ಜಿನಾಗಮಗಳ ಉಕ್ತಿಗಳನ್ನು ನೆನಪಿಸಿಕೊಳ್ಳುತ್ತಿದ್ದ.

ಅಷ್ಟರಲ್ಲಿ ಸೋಮದತ್ತನ ಬಂಧುಗಳೂ ಹೆಂಡತಿಯೂ ಕೋಪದಿಂದ ಕೂಸನ್ನು ಅವನ ಮುಂದೆ ಇರಿಸಿ, ಬ್ರಹ್ಮೇತಿಯಾದಂತೆ ಊರೊಳಕ್ಕೆ ಬಂದು ಹುಯ್ಯಲಿಟ್ಟು ಆಮೇಲೆ ಸಾಯುತ್ತೇವೆಂದು ಪ್ರತಿಜ್ಞೆ ಮಾಡಿ ಪರ್ವತದಿಂದ ಇಳಿದು ಸೌಪಾಳಪುರಕ್ಕೆ ಹೋದರು. ಬಾಲಕನು ಮೋಕ್ಷದ ದಾರಿಯನ್ನು ನೋಡುವವನಂತೆ ಸೋಮದತ್ತಮುನಿಯ ಪಾದಗಳನ್ನೇ ನೋಡುತ್ತ, ಮುಂದೆ ಸಿಕ್ಕುವ ವಿದ್ಯಾಧರ ರಾಜಲಕ್ಷ್ಮಿಯ ಬರವಿಗೆ ಸಂತೋಷದಿಂದ ನಗುವಂತೆ ನಗುತ್ತಿದ್ದ.

ಇತ್ತ, ಪ್ರಸಿದ್ಧವಾದ ಭರತಕ್ಷೇತ್ರದಲ್ಲಿ ಸೊಗಸುವ ವಿಜಯಾರ್ಧ ಪರ್ವತದ ದಕ್ಷಿಣ ದಿಕ್ಕಿನಲ್ಲಿ ನಾನಾ ಶೋಭೆಗಳಿಂದ ಕೂಡಿ ದಕ್ಷಿಣಶ್ರೇಣಿಯು ಕಂಗೊಳಿಸುತ್ತಿತ್ತು. ಅದರಲ್ಲಿ ಅಮರಾವತಿ ಎಂಬ ಒಂಬ ನಗರವಿತ್ತು. ಅದನ್ನು ಆಳುವವನು ವಿದ್ಯಾಧರರಾಜನಾದ ಶಂಭು ಎಂಬುವವನು; ಅವನ ಹೆಂಡತಿ ಮಂಗಳೆ ಎಂಬುವವಳು. ಅವರಿಗೆ ಮನ್ಮಥನಂತಿದ್ದ ಭಾಸ್ಕರದೇವ ಮತ್ತು ದೇವೇಂದ್ರನಂತಿದ್ದ ಮಂದರರಾಜ ಎಂಬ ಇಬ್ಬರು ಪರಾಕ್ರಮಿಗಳೂ ಉದಾತ್ತರೂ ಆದ ಗಂಡು ಮಕ್ಕಳಿದ್ದರು. ಅವರಿಗಿಂತ ಕಿರಿಯಳಾದ ಮಗಳು ಸುದೇವಿ ಎನ್ನುವವಳು; ಸೌಂದರ್ಯ ರೂಪಗಳಲ್ಲಿ ಅವಳು ಲಕ್ಷ್ಮಿಸರಸ್ವತಿಯರಿಗೂ ಮಿಗಿಲು ಎನ್ನಿಸುವವಳು. ಇಂತಹ ಕುಟುಂಬದಲ್ಲಿ ಶಂಭುವಿಯಚ್ಚರನು ಸುಖದಿಂದ ಬಾಳುತ್ತಿದ್ದ.

ಸುದೇವಿಯನ್ನು ಕನಕಪುರದ ಒಡೆಯನಾದ ವಿಮಲವಾಹನನೆಂಬ ಮಾನವ ಮಹೀವಲ್ಲಭನಿಗೆ ಕೊಟ್ಟು ವಿಜೃಂಭಣೆಯಿಂದ ಮದುವೆ ಮಾಡಿದ್ದ. ಅವರು ಸುಖವಾಗಿದ್ದರು.

ಸಾಕಷ್ಟು ಕಾಲ ಸಂಪತ್ತನ್ನು ಅನುಭವಿಸಿದ ಮೇಲೆ ಕೊನೆಗೊಂದು ದಿನ ಶಂಭುವಿಗೆ ಸಂಸಾರದ ಬಗ್ಗೆ ವೈರಾಗ್ಯವುಂಟಾಯಿತು; ಮೋಕ್ಷಲಕ್ಷ್ಮಿಯನ್ನು ಕೂಡುವ ಉದ್ದೇಶದಿಂದ ಅವನು ಹಿರಿಯ ಮಗನಾದ ಭಾಸ್ಕರದೇವನಿಗೆ ಯೌವರಾಜ್ಯವನ್ನೂ ವಿದ್ಯೆಗಳನ್ನೂ ನೀಡಿದ. ಮೈಸುಖಕ್ಕೆ ಆಸೆಪಡದೆ, ಯಾವುದೋ ಆಸೆಯಿಂದ ಚಂಚಲಚಿತ್ತನಾಗದೆ, ವೈಭವದ ಗೀಳು ಹೊಂದದೆ, ರಾಜ್ಯಲಕ್ಷ್ಮಿಯನ್ನು ಒಮ್ಮೆಗೇ ಬಿಟ್ಟು ಸುಪ್ರಭ ಸುಚಾರಣಲ್ಲಿ ಜಿನೇಂದ್ರ ದೀಕ್ಷೆಯನ್ನು ಪಡೆದ. ಹೀಗೆ ಶಂಭುವು ನಿಶ್ಶಂಕೆಯಿಂದ ಜಿನರೂಪವನ್ನು ಕೈಗೊಂಡು ತಪಸ್ಸಿನಲ್ಲಿ ತೊಡಗಿದ.

ಇತ್ತ ಮಂದರದೇವನು ಸಮಸ್ತವಿದ್ಯಾಸಮನ್ವಿತನಾದ್ದರಿಂದ ಭಾಸ್ಕರ ದೇವನನ್ನು ತನ್ನ ಪ್ರತಾಪದಿಂದ ಓಡಿಸಿ ಅವನು ಖೇಚರರಾಜ್ಯಕ್ಕೆ ಮೊತ್ತ ಮೊದಲಿಗನಾಗಿ ಮೆರೆದ. ಅಮರಾವತಿ ನಗರದಲ್ಲಿದ್ದ ಭಾಸ್ಕರದೇವನು ತನಗೆ ವಿದ್ಯಾಧರರಾಜ್ಯವು ಕೈತಪ್ಪಿ ಹೋದುದಕ್ಕೆ ಚಿಂತಿಸುತ್ತ ಕೂತ. ಮಂದರದೇವನನ್ನು ಎದುರಿಸಲಾರದೆ, ತನ್ನ ಹಿರಿಯ ರಾಣಿಯಾದ ಮಣಿಮಾಲೆ ಮುಂತಾದ ಹಲವು ಮಂದಿ ಅರಸಿಯರೊಡನೆ ಕನಕಪುರಕ್ಕೆ ಬಂದು ತನ್ನ ಮೈದುನನಾದ ವಿಮಲ ಮಹಾರಾಜನೊಡನೆ ಇದ್ದ. ಅವನಿಗೆ ಧರ್ಮಗಳಲ್ಲೆಲ್ಲ ಜಿನಧರ್ಮವೇ ಶ್ರೇಷ್ಠವೆಂಬ ನಂಬಿಕೆಯಿತ್ತು, ನಿರ್ಮಲ ಮನಸ್ಸಿನವನಾಗಿ ಆತನು ಸದ್ಧರ್ಮ ಕಥಾಲಾಪದಿಂದ ಬಾಳುತ್ತಿದ್ದ.

ಹೀಗಿರಲು ಒಂದು ದಿನ ಪರ್ವೋಪವಾಸ ಮಾಡಿ, ಭರತಕ್ಷೇತ್ರದ ಜಿನಭವನಗಳನ್ನೂ ಮಹಾಮುನಿಗಳನ್ನೂ ಸಂದರ್ಶಿಸಿ ಪೂಜೆ ಸಲ್ಲಿಸಲೆಂದು ಮಣಿಮಾಲೆಯೊಡನೆ ವಿಮಾನಾರೂಢನಾಗಿ ಹೊರಟ. ಸಮಸ್ತ ಚೈತ್ಯಾಲಯಗಳನ್ನೂ ಜಿನಮುನಿವರರನ್ನೂ ಕಂಡು ಗೌರವ ಸಲ್ಲಿಸಿ, ನಾಭಿಗಿರಿಯಲ್ಲಿದ್ದ ಸೋಮದತ್ತ ಮುನಿಗಳಿಗೆ ನಮಸ್ಕರಿಸಲೆಂದು ಬಂದ. ಅವರ ಬಳಿ, ಸೂರ್ಯಮಂಡಲವು ಭೂಮಿಯಲ್ಲಿ ನೆಲೆಸಿತೋ, ದೇವಸಂದೋಹವು ಈ ಮುನಿಯನ್ನು ಹೊನ್ನಿನಿಂದ ಪೂಜಿಸಿತೋ, ಮುನಿಗಳ ಪಾದಗಳನ್ನು ನಿಲುಕಿಸಿಕೊಳ್ಳಲು ನಾಗೇಂದ್ರನು ಪಾತಾಳದಿಂದ ಸದ್ಭಕ್ತಿಯಿಂದ ನೋಡುತ್ತಿರುವನೋ ಎಂಬ ಭ್ರಮೆಯನ್ನುಂಟು ಮಾಡುತ್ತ ಬಾಲಸೂರ್ಯನಂತಿದ್ದ ಬಾಲಕನನ್ನು ನೋಡಿದ. ಅವನಿಗೆ ಅತೀವ ಸಂತಸವಾಯಿತು. ಸೋಮದತ್ತಮುನಿಯ ಕೃಪೆಯಿಂದಲೇ ತನಗೆ ಸುಪುತ್ರನು ದೊರಕಿದನೆಂದು ಅವನ ಚರಣಕಮಲಗಳನ್ನು ಪೂಜಿಸಿದ. ನಿಧಿಯಂತೆ ಆ ಮಗುವನ್ನು ಎತ್ತಿಕೊಂಡು, "ನಿನಗೆ ಜಿನಧರ್ಮಪ್ರಸಾದದಿಂದ ಮನ್ಮಥನಂತಹ ಸುಪುತ್ರನು ಸಿಕ್ಕಿದ" ಎಂದು ಹೇಳಿ ಹೆಂಡತಿಯ ಕೈಯಲ್ಲಿ ಮಗುವನ್ನಿರಿಸಿದ. ಮಣಿಮಾಲೆಯು ಗೂಢಗರ್ಭದಲ್ಲಿ ಗಂಡು ಮಗುವೊಂದನ್ನು ಪಡೆದಳೆಂದು ವಿಮಲ ಮಹಾರಾಜನಿಗೂ ಸುದೇವಿ ಮಹಾರಾಜನಿಗೂ ತಿಳಿಸಲು ಕನಕಪುರಕ್ಕೆ ಆಳುಗಳನ್ನು ಕಳಿಸಿದ.

ಇವರು ಪುರವನ್ನು ಹೊಗುವಾಗ ಜನರು ಹಿರಿದಾದ ಉತ್ಸಾಹದಿಂದ ಬಂದು ಇದಿರುಗೊಂಡರು. ಮಗುವು ದೇವೇಂದ್ರನ ವೈಭವವನ್ನೂ, ಸೂರ್ಯನ ತೇಜಸ್ಸನ್ನೂ, ಪರ್ವತೋಪಮ ಧೈರ್ಯವನ್ನೂ, ಮನ್ಮಥನ ರೂಪವನ್ನೂ ಹೊಂದಿದ್ದಿತು. ಆ ಭವ್ಯಾಂಬರಚಂದ್ರನಿಗೆ ಭಾಸ್ಕರದೇವನು ಪ್ರೀತಿಯಿಂದ ವಜ್ರಕುಮಾರನೆಂದು ನಾಮಕರಣ ಮಾಡಿದ. ಮಗುವಿಗೆ ಐದು ವರ್ಷಗಳಾದಾಗ ಬಾಲಕನನ್ನು ಜೈನೋಪಾಧ್ಯಾಯರ ಬಳಿ ಓದಿಗೆಂದು ಬಿಟ್ಟ. ಹುಡುಗನು ಅಕ್ಷರ, ಗಣಿತ, ಸಂಗೀತ, ಚಿತ್ರಕರ್ಮ, ಪತ್ರಚ್ಛೇದ ಮುಂತಾದ ಎಪ್ಪತ್ತು ಕಲೆಗಳಲ್ಲಿಯೂ ಅರವತ್ತನಾಲ್ಕು ಕಲಾಗುಣಗಳಲ್ಲಿಯೂ ಪರಿಣತನಾದ. ಬಾಲಕನಲ್ಲಿ ವಯಸ್ಸಿನೊಡನೆ ಬೆಳಗಿನ ಹಗಲಿನಂತೆ ತೇಜವೂ ಪ್ರತಾಪವೂ ಬೆಳೆಯಿತು. ಕಾಲ ಸರಿದಂತೆ ಅವನು ಯೌವನುಗನಾದ; ಕುಲ ಜಾತಿ ಸಾಧಿತ ಎಂಬ ಮೂರು ಬಗೆಯ ವಿದ್ಯೆಗಳಲ್ಲಿಯೂ ಪಾಂಡಿತ್ಯವನ್ನು ಪಡೆದು ಸುಖವಾಗಿದ್ದ. ಮನ್ಮಥರೂಪನೂ, ಜಿನೇಶ್ವರ ಚರಣಾಂಭೋಜಭೃಂಗನೂ, ಜಿನಧರ್ಮಾಂಬರಚಕ್ರನೂ ಆದ ಬಾಲಕನನ್ನು ಭಾಸ್ಕರದೇವನು

ಕಣ್ಣು ತೃಪ್ತಿ ಹೊಂದುವವರೆಗೂ ನೋಡಿದ. ಮಾವನೂ ಅತ್ತೆಯೂ ತಾಯಿಯೂ ಆ ವಿಭುವಿನ ತೇಜಸ್ಸು, ಪ್ರತಾಪ, ಪರಾಕ್ರಮಗಳನ್ನು ನೋಡಿ ಅತೀವ ಸಂತಸಗೊಂಡರು.

ಹೀಗೆ ಭಾಸ್ಕರದೇವನು ಮಣಿಮಾಲಾದೇವಿಯೂ ವಿಮಲವಾಹನ ಮಹಾರಾಜನೂ ಸುದೇವಿಯೂ ವಜ್ರಕುಮಾರನು ಮಾಡುತ್ತಿದ್ದ ಜಿನಪೂಜೆಯನ್ನೂ, ಆಹಾರ, ಅಭಯ, ಶಾಸ್ತ್ರದಾನಗಳನ್ನೂ, ಚಾತುರ್ವಣ್ರ್ಯದವರಲ್ಲಿ ತೋರುತ್ತಿದ್ದ ವಾತ್ಸಲ್ಯವನ್ನೂ ಕಣ್ಣಾರೆ ನೋಡಿ ಮನವಾರೆ ಹೊಗಳುತ್ತಿದ್ದರು. ಅವರಿಗೆ ಈ ವಾತ್ಸಲ್ಯಸಮುದ್ರನ ಮಾತೇ ಮಾತು. ಹೀಗಿರಲು ಕುಮಾರನಿಗೆ ಮದುವೆಯನ್ನು ಮಾಡಬೇಕೆಂಬ ಆಲೋಚನೆಯಿಂದ ಒಂದು ದಿವಸ ಸುದೇವಿಯ ಮಗಳಾದ ಇಂದುಮತಿಯನ್ನು ಮಗನಿಗೆ ಕೊಟ್ಟು ಮದುವೆ ಮಾಡಲು ಕೇಳಿಕೊಂಡರು. ಒಪ್ಪಿಗೆ ದೊರೆತ ಮೇಲೆ ವಜ್ರಕುಮಾರನ ಮದುವೆಯು ವಿಜೃಂಭಣೆಯಿಂದ ನೆರವೇರಿತು. ಹಸುರು ಚಪ್ಪರ ಹಸೆಗಳು ಶೋಭಿಸಿದವು, ಖಚರಸ್ತ್ರೀಸಂಕುಲವು ಮಂಗಳಗೀತಗಳನ್ನು ಹಾಡಿದರು, ಮಂಟಪವು ಸದ್ರತ್ನಗಳಿಂದ ರಂಜಿಸಿತು, ತೂರ್ಯಧ್ವನಿ ಹೊಮ್ಮಿತು, ಪುರಜನರೆಲ್ಲ ಊರಲ್ಲೆಲ್ಲ ಬಾವುಟಗಳನ್ನು ಕಟ್ಟಿ ಸಂಭ್ರಮಪಟ್ಟರು. ವಜ್ರಕುಮಾರ ಮತ್ತು ಇಂದುಮತಿಯರು ಪ್ರಾಣವಲ್ಲಭರಾಗಿ ವಿಷಯಸುಖವನ್ನು ಅನುಭವಿಸುತ್ತಿದ್ದರು.

ಒಂದು ದಿನ ಮಣಿಕುಂಡಲ ಮುಂತಾದ ಕುಮಾರರ ಜೊತೆಯಲ್ಲಿ ವಾತ್ಸಲ್ಯಸಮುದ್ರನು ವಿಜಯಾರ್ಧಪರ್ವತದ ಸಿದ್ಧಕೂಟದ ಚೈತ್ಯಾಲಯಕ್ಕೆ ಪೂಜೆ ಸಲ್ಲಿಸಲೆಂದು ವಿಮಾನಾರೂಢನಾಗಿ ತೆರಳಿದ. ಅವನಿಗೆ ಹೇಮಗಿರಿಯಲ್ಲಿ ಒಂದು ವಿಚಿತ್ರವು ಕಾಣಿಸಿತು; ಒಂದು ಹೆಬ್ಬಾವು ವಿದ್ಯಾಧರಿಯನ್ನು ತಲೆ ಹೊರತಾಗಿ ನುಂಗಿತ್ತು. ಸಮ್ಯಕ್ತ್ವಚೂಡಾಮಣಿಯು ಪ್ರತಿವಿದ್ಯೆಯನ್ನು ಬಳಸಿ ವಿಘ್ನನಾಶ ಮಾಡಿದ. ಆ ವಿದ್ಯಾಧರಿಯು ವಜ್ರಕುಮಾರನಿಗೆ ತನ್ನ ಕರಗಳನ್ನು ಜೋಡಿಸಿ ವಂದಿಸಿದಳು. ಅವಳು ಯಾರು, ತಂದೆತಾಯಿಗಳ ಹೆಸರೇನು, ಅಲ್ಲಿಗೆ ಬಂದಿದ್ದ ಕಾರಣವೇನು ಮುಂತಾದ ವಿಷಯಗಳನ್ನು ಕುರಿತು ಕುಮಾರನು ಅವಳನ್ನು ಪ್ರಶ್ನಿಸಿದ. ತಾನು ವರಚಂದ್ರಪುರವನ್ನಾಳುವ ಸುರಸದೃಶನಾದ ಗರುಡನೆಂಬ ವಿದ್ಯಾಧರರಾಜ ಮತ್ತು ಅವನ ಹೆಂಡತಿ ಅನಂತಮತಿ ಎಂಬ ವಿಭ್ರಮಾನ್ವಿತೆಯ ಮಗಳು; ತನ್ನ ಹೆಸರು ಪವನವೇಗೆ ಎಂದು; ಇಲ್ಲಿಗೆ ತಾನು ಬಹುರೂಪಿಣೀವಿದ್ಯೆಯನ್ನು ಸಾಧಿಸುವ ಉದ್ದೇಶದಿಂದ ಬಂದಿದ್ದವಳು; ತನ್ನ ಸಾಧನೆಗೆ ಅಡ್ಡಿಯುಂಟುಮಾಡಲೆಂದು ವಿದ್ಯೆಯು ಹೆಬ್ಬಾವಿನ ರೂಪದಿಂದ ಬಂದಿತ್ತು; ಆ ವಿಘ್ನವನ್ನು ನಿವಾರಿಸುವುದು ಸುಲಭವಲ್ಲ, ಆದ್ದರಿಂದ ಅವನ ಕರುಣೆಯಿಂದ ತನಗೆ ಮರುಜೀವವುಂಟಾಯಿತು ಎಂದು ಮುಂತಾಗಿ ತನ್ನ ವೃತ್ತಾಂತವನ್ನೆಲ್ಲ ಅವಳು ಹೇಳಿಕೊಂಡಳು. ತನಗೆ ವಶವಾಗಿದ್ದ ಪ್ರಜ್ಞಪ್ತಿ ಎಂಬ ವಿದ್ಯೆಯನ್ನು ಅವನಿಗೆ ಕೃತಜ್ಞತಾಪೂರ್ವಕವಾಗಿ ಹೇಳಿಕೊಟ್ಟಳು. ಆಗ ಅವಳಿಗೆ ಕುಮಾರನು, "ಎಷ್ಟು ಬಗೆಯ ವಿದ್ಯೆಗಳಿವೆಯೋ ಅವೆಲ್ಲ ಖೇಚರರಿಗೂ ಇವೆ. ಅವೇನು ಕೊಳ್ಳೆ ಹೋಗುವುದಿಲ್ಲವಲ್ಲ. ನಿನಗೆ ಆ ವಿದ್ಯೆ ಸಾಧ್ಯವಾಗದುದಕ್ಕೆ ಕಾರಣವೇನು?" ಎಂದು ಪ್ರಶ್ನಿಸಿದಳು.

ಅದಕ್ಕೆ ಪವನವೇಗೆ ಈ ವಿವರಣೆ ನೀಡಿದಳು: ಸಂಜಯಂತ ಭಟ್ಟಾರಕರೆಂಬ ಮುನಿವರರು ವಿದೇಹದಲ್ಲಿ ಉಗ್ರ ತಪಸ್ಸನ್ನು ಮಾಡುತ್ತಿದ್ದಾರೆ. ಅವರ ಹಿಂದಿನ ವೈರಿಯಾದ ವಿದ್ಯುದ್ವೇಗ ಎಂಬ ವಿದ್ಯಾಧರನು ವಿದ್ಯಾವಿನೋದಾರ್ಥವಾಗಿ ತಿರುಗಾಡುತ್ತ ಬಂದು ಸಂಜಯಂತ ಮುನೀಶ್ವರರನ್ನು ಕಂಡು ಕೋಪಗೊಂಡ. ಈ ಮುನಿಯನ್ನು ತೆಗೆದುಕೊಂಡು ಹೋಗಿ ಭಾರಿಯಾದ ಬಂಡೆಯ ಮೇಲೆ ಅಪ್ಪಳಿಸಲೇ, ಇವರ ದೇಹವು ನಜ್ಜುಗುಜ್ಜಾಗುವಂತೆ ನೆಲಕ್ಕೆ ಕುಕ್ಕಿಬಿಡಲೇ ಎಂದು ಯೋಚಿಸಿದ. ಕೊನೆಗೆ ಹರಿವತಿ, ಗಜಾವತಿ, ಕಮಲಾವತಿ, ಚಂಡವೇಗೆ ಎಂಬ ಐದು ನದಿಗಳ ಸಂಗಮದಲ್ಲಿ ತಂದು ಎಸೆದ. ಸಂಜಯಂತ ಮುನೀಶ್ವರರು ಕ್ಷಮೆಯೆಂಬ ದೊಡ್ಡ ಕೊಡಲಿಯಿಂದ ಪಾಪವೆಂಬ ಕಾಡನ್ನು ಕಡಿದು ಶುಕ್ರಧ್ಯಾನವೆಂಬ ಬೆಂಕಿಯಿಂದ ಕರ್ಮವೆಂಬ ಉರುವಲನ್ನು ಸುಟ್ಟು ಕೇವಲಜ್ಞಾನಿಯಾದವರು. ಹಾಗಾಗಿ ಎಲ್ಲ ದೇವಸಮೂಹವು ಬಂದು ಆ ಕೇವಲಿಗಳಿಗೆ ಪೂಜಿಸಿ ನಾನಾ ಬಗೆಯಿಂದ ಪರಮೇಶ್ವರನನ್ನು ಸ್ತುತಿಸಿದರು. ನಿರ್ದೋಷಿಯೂ ಧೈರ್ಯಚಾಮೀಕರ

ಶೈಲೇಂದ್ರನೂ ಆದವರಿಗೆ ಸುಮ್ಮನೆ ದ್ವೇಷದಿಂದ ಈ ಬಾಧೆಯನ್ನು ಮಾಡಿದ್ದ ಖೇಚರೇಂದ್ರನ ಮೇಲೆ ಧರಣೇಂದ್ರನು ಕೋಪಗೊಂಡು ಅವನನ್ನು ನಿರ್ವಂಶನಾಗಿ ಮಾಡಿ ಸಮುದ್ರದಲ್ಲಿ ಎಸೆಯುವೆನೆಂದು ಹೊರಟಾಗ ನಾಗರಾಜನು ಅವನನ್ನು ತಡೆದ; "ನಿನಗೆ ಇವರು ಸಮಾನರಲ್ಲ" ಎಂದು ಮನವರಿಕೆ ಮಾಡಿಕೊಟ್ಟ. ಇದರಿಂದ ನಾಗರಾಜನ ಕೋಪ ಉಡುಗಿತು; ಅವನು ಸಂಜಯಂತ ಮಹಾಸ್ವಾಮಿಗಳ ಪ್ರತಿಮೆಯನ್ನು ಮಾಡಿ ನದಿಯ ತೀರದಲ್ಲಿ ಮಣಿಕನಕಮಯವಾದ ಚೈತ್ಯಾಲಯವನ್ನು ಕಟ್ಟಿಸಿದ. ಖೇಚರರೇ ಮೊದಲಾದವರು ಸಮಸ್ತ ವಿದ್ಯೆಗಳನ್ನೂ ಇಲ್ಲಿಯೇ ಸಾಧಿಸಬೇಕು; ಬೇರೆಡೆಯಲ್ಲಿ ಪ್ರಯತ್ನಸಿದರೆ ಸಾಧ್ಯವಾಗಬಾರದು ಎಂದು ಪ್ರತಿಜ್ಞೆ ಮಾಡಿ ಹೋದ. ಹಾಗಾಗಿ ನನಗೆ ಇಲ್ಲಿ ವಿದ್ಯಾಸಾಧನೆಗೆ ವಿಘ್ನವಾಯಿತು ಎಂದಳು. ಆನಂತರ ಸಂಜಯಂತ ಭಟ್ಟಾರಕರಲ್ಲಿಗೆ ಬಂದು ಪವನವೇಗೆ ಕೊಟ್ಟ ಪ್ರಜ್ಞಪ್ತಿ ಮೊದಲಾದ ವಿದ್ಯೆಗಳನ್ನು ಸಾಧಿಸಿ ಕನಕಪುರಕ್ಕೆ ವಾಪಸಾದ.

ಸ್ವಲ್ಪ ಕಾಲ ರಾಜ್ಯಸುಖವನ್ನು ಅನುಭವಿಸುತ್ತಿದ್ದ. ಒಂದು ದಿನ ತಮ್ಮ ತಂದೆಯಾದ ಭಾಸ್ಕರದೇವನನ್ನು ಕುರಿತು, "ನೀನಾದರೆ ಖೇಚರ; ಆದರೂ ಹೀನರ ರೀತಿಯಲ್ಲಿ ಭೂಚರಾಶ್ರಯವನ್ನು ಏನೆಂದು ಹೊಂದಿದ್ದೀಯೆ. ನನಗೆ ಇದನ್ನು ಸಮಾಧಾನದಿಂದ ಹೇಳಿ" ಎಂದು ಕೇಳಿಕೊಂಡ. ಆಗ ಭಾಸ್ಕರದೇವನು ಮಗನನ್ನು ಬಿಗಿಯಾಗಿ ಅಪ್ಪಿಕೊಂಡು ತನ್ನ ಹಿಂದಿನ ಕತೆಯೆಲ್ಲವನ್ನೂ ತಿಳಿಸಿದ. "ನಮ್ಮ ಅಜ್ಜನು ಕೊಟ್ಟ ವಿದ್ಯಾಬಲದಿಂದ ವೀರತನವನ್ನು ಪಡೆದು ನಿಮ್ಮನ್ನು ದೇಶದಿಂದಲೇ ಓಡಿಸಿ, ಬಲವಂತವಾಗಿ ರಾಜ್ಯವನ್ನು ವಶಪಡಿಸಿಕೊಂಡು, ನೀವು ಬಾಯಿ ಬತ್ತಿ ಅಲೆದಾಡುವಂತೆ ಮಾಡಿದ ಅವನನ್ನು ಹಿಂಬಾಲಿಸಿ ಹೋಗದಿದ್ದರೆ ನಾನು ನಿಮ್ಮ ಮಗನೇ ಅಲ್ಲ" ಎಂದು ತಂದೆಯ ಮುಂದೆ ಸಿಂಹದಂತೆ ಸಿಟ್ಟಿನಿಂದ ಪ್ರತಿಜ್ಞೆ ಮಾಡಿದ. ಹೆಡೆ ಎತ್ತಿದ ಹಾವಿನಂತೆ, ನೊಂದ ಶರಭದಂತೆ, ಬಲೆಗೆ ಬಿದ್ದ ಹುಲಿಯಂತೆ ಕೋಪಾವಿಷ್ಟನಾಗಿ ಹೊರಹೊರಟ.

ಅಮರಾವತೀಪುರವನ್ನು ಮೂರು ಸುತ್ತು ಆವರಿಸಿಕೊಂಡು ಮುತ್ತಿದ. ಮಂದರದೇವನು ಅವನನ್ನು ಎದುರಿಸಿದಾಗ ಅವನ ಬಲವೆಲ್ಲ ಕಲ್ಲ ಮೇಲೆ ಬಿದ್ದ ಗಾಜಿನ ಹೇರಿನಂತೆ ಚೂರಾಯಿತು. ಅದರಿಂದ ಸಿಟ್ಟಾಗಿ ಅವನು ಸಮುದ್ರಬಾಣವನ್ನು ಪ್ರಯೋಗಿಸಿದ. ಅದನ್ನು ಕಂಡು ಖೇಚರರಾಜನು ಬಾಡಬಾಗ್ನಿಶರವನ್ನು ಬಿಟ್ಟ; ಅದು ಕ್ಷಣದಲ್ಲಿ ನೀರನ್ನೆಲ್ಲ ಹೀರಿಬಿಟ್ಟಿತು. ಅದರಿಂದ ಉರಿದೆದ್ದು ಮಂದರದೇವನು ಉರಗಬಾಣವನ್ನು ಎಸೆದ; ಅದು ವಿಷವನ್ನುಗುಳುತ್ತ ಬಂತು. ಆಗ ಅದಕ್ಕಿದಿರಾಗಿ ಭಾಸ್ಕರದೇವಸುತನು ಮಹಾ ಕೋಪದಿಂದ ಗರುಡಾಸ್ತ್ರವನ್ನು ಪ್ರಯೋಗಿಸಿದ; ಅದು ಉರಗಾಸ್ತ್ರವನ್ನು ಕಡಿಖಂಡವಾಗಿ ಮಾಡಿತು. ಇದರಿಂದ ಕನಲಿದ ಮಂದರದೇವನು ಮೇಘಬಾಣವನ್ನು ಬಿಟ್ಟಾಗ, ಅದನ್ನು ವಜ್ರಕುಮಾರನು ವಾಯುಬಾಣದಿಂದಲೂ; ಪರ್ವತಾಸ್ತ್ರವನ್ನು ವಜ್ರಶರದಿಂದಲೂ; ತಮಂಧಾಸ್ತ್ರವನ್ನು ಸೂರ್ಯಸಾಯಕದಿಂದಲೂ; ನಿರ್ಬುದ್ಧಿಬಾಣವನ್ನು ಮತಿಶರ ದಿಂದಲೂ ಶಕ್ತಿಗುಂದಿಸಿದ. ಅವನನ್ನು ಎದುರಿಸಲಾಗದೆ ಇವನು ಸಾಮಾನ್ಯ ನಲ್ಲವೆಂದು ಮಂದರದೇವನು ಬೆಚ್ಚುವಂತಾಗಿ ಪ್ರಾಣಭಯದಿಂದ ಓಡಿಹೋದ.

ವಜ್ರಕುಮಾರನು ಅಮರಾವತೀ ನಗರವನ್ನು ವೈಭವದಿಂದ ಹೊಕ್ಕು ತಮ್ಮ ತಂದೆಯ ರಾಜ್ಯಪದವಿಯಲ್ಲಿ ನೆಲೆಸಿದ. ಆನಂತರ ತಾಯಿತಂದೆಹೆಂಡತಿಯರನ್ನು ಕರೆಸಿಕೊಂಡ. ಹೀಗೆ ಖೇಚರರಾಜ್ಯಲಕ್ಷ್ಮೀವಲ್ಲಭನಾಗಿ ಜಿನನಾಥನ ಅರ್ಚನೆ, ಜಿನಾಭಿಷೇಕ, ಆಹಾರ–ಔಷಧ–ಶಾಸ್ತ್ರ–ಅಭಯ ದಾನಗಳನ್ನು ಮಾಡುತ್ತ, ಮುನಿಜನಸೇವೆಯಿಂದಲೂ ಜಿನಕಥಾಲಾಪದಿಂದಲೂ ಆ ಕಾಮಿನೀಕಂದರ್ಪನು ಉತ್ತಮವಾಗಿಯೂ ನಿರ್ಮಲಚಿತ್ತದಿಂದಲೂ ರಾಜ್ಯಭಾರ ಮಾಡುತ್ತಿದ್ದ. ಇತ್ತ ಚಂದ್ರಪುರಾಧಿಪತಿಯಾದ ಗರುಡವೇಗ ವಿಯಚ್ಚರರಾಜನು ತನ್ನ ಮಗಳಾದ ಪವನವೇಗೆಗೆ ಮದುವೆಯನ್ನು ಮಾಡಬೇಕೆಂದು ಸ್ವಯಂವರವನ್ನು ಏರ್ಪಡಿಸಿದ. ಸ್ವಯಂವರಶಾಲೆಯನ್ನು ನಿರ್ಮಿಸಿ ಉಭಯ ಶ್ರೇಣಿಯ ವಿದ್ಯಾಧರರಿಗೂ ಕರೆಯೋಲೆಗಳನ್ನು ಕಳಿಸಿದ. ವಜ್ರಕುಮಾರನಿಗೂ ಆಹ್ವಾನ ಹೋಯಿತು. ಗರುಡವೇಗನ ದೂತರು ಬಂದು ಅವನನ್ನು ಕಂಡು ನಮಸ್ಕರಿಸಿ ಬಂದ ಕಾರ್ಯವನ್ನು ಬಿನ್ನಪಗೈದರು. ಕುಮಾರನು ಆ ದೂತರಿಗೆ ಧಾರಾಳವಾಗಿ ಪಾರಿತೋಷಕಗಳನ್ನು

ಸಂತೋಷದಿಂದ ಕೊಡಿಸಿದ. ತಕ್ಷಣವೇ ತಾನೂ ಪ್ರಯಾಣವನ್ನು ಕೈಗೊಳ್ಳಲು ನಿರ್ಧರಿಸಿ ಅಮರಾವತಿಯಿಂದ ಹೊರಟು ಚಂದ್ರಪುರವನ್ನು ಸೇರಿದ. ಅಲ್ಲಿ ಇತರ ವಿದ್ಯಾಧರರೊಡನೆ ಬೀಡು ಬಿಟ್ಟ.

ಮಾರನೆಯ ದಿನ ಗರುಡವೇಗನು ಸಮಸ್ತ ವಿದ್ಯಾಧರನಾಯಕರನ್ನು ಮಂಟಪಕ್ಕೆ ಆಹ್ವಾನಿಸಿದ. ಹೊಸದಾಗಿ ಅರಳಿದ ಕಮಲದಂತಿದ್ದವಳೂ, ನಿರ್ಮಲಗುಣಯುತೆಯೂ, ಸುಂದರಿಯೂ ಆದ ತನ್ನ ಮಗಳು ಪವನವೇಗೆಯನ್ನು ವಿದ್ಯಾಧರಕುಮಾರಿಯರು ಸ್ವಯಂವರ ಮಂಟಪಕ್ಕೆ ಕರೆತಂದರು. ಅವಳು ಕಡಗ ಕಂಕಣ ಹಾರ ನೂಪುರ ಮುಂತಾದ ಆಭರಣಗಳಿಂದ ಶೋಭಿತೆಯಾಗಿದ್ದಳು; ಅತ್ಯಂತ ಮೃದುವಾದ ಚೀನಾಂಬರವನ್ನು ಉಟ್ಟಿದ್ದಳು; ಕುಂಕುಮ ಚಂದನವೇ ಮುಂತಾದ ಪರಿಮಳ ವಸ್ತುಗಳನ್ನು ಪೂಸಿಕೊಂಡಿದ್ದಳು. ಹೀಗೆ ಅಲಂಕೃತೆಯಾದ ಮದುಮಗಳು ಹೊಸ ಹೊನ್ನ ವಿಮಾನದಲ್ಲಿ ಮಂಗಳರವದ ನಡುವೆ ಖೇಚರಸೈನ್ಯದ ಕಾಪಿನಲ್ಲಿದ್ದಳು. ಅಂತಹ ಪವನವೇಗೆಯು ತನ್ನ ಹಿಂದಿನ ಪ್ರತಿಜ್ಞೆಯನ್ನು ನೆನಪಿಸಿಕೊಂಡು ನೆರೆದ ವಿದ್ಯಾಧರಕುಮಾರರನ್ನು ನೋಡುತ್ತ ಬಂದವಳು ವಜ್ರಕುಮಾರನನ್ನು ಕಂಡಳು. ತಕ್ಷಣವೇ ಅವಳಲ್ಲಿ ಮನ್ಮಥನ ಬಾಣವು ಆಳವಾಗಿ ನಾಟಿ ನೋವುಂಟುಮಾಡಿತು; ಅವನ ಕೊರಳಿಗೆ ಮಾಲೆಯನ್ನು ಹಾಕಿದಳು.

ಸರಸಿರುಹಾನನೆಯು ಯಾವ ವಿದ್ಯಾಧರನನ್ನೂ ಒಲ್ಲದೆ ವಜ್ರಕುಮಾರನನ್ನು ಒಂದೇ ಮನಸ್ಸಿನಿಂದ ಪ್ರೀತಿಸಿದಳು; ಅಂದ ಮೇಲೆ ಭಾಗ್ಯವಂತನಿಗೆ ಧರೆಯಲ್ಲಿ ಯಾವುದು ತಾನೇ ದೊಡ್ಡದು? ಇದರಿಂದ ಅಲ್ಲಿ ಸೇರಿದ್ದ ಖೇಚರರೆಲ್ಲರಿಗೂ ನಾಚಿಕೆಯಾಯಿತು; ಅವರೆಲ್ಲ ಹೊರಟು ಹೋದರು. ಸಮ್ಯಕ್ತ್ವಚೂಡಾಮಣಿಯು ಪವನವೇಗೆಯನ್ನು ಮದುವೆಯಾಗಿ ಮಹೋತ್ಸವದಿಂದ ಅಮರಾವತೀನಗರಕ್ಕೆ ವಾಪಸಾಗಿ ಮಹಾ ವೈಭವದಿಂದ ಅರಮನೆಯನ್ನು ಸೇರಿ ಸುಖವಾಗಿದ್ದ. ರೂಪದಲ್ಲಿ ಮನ್ಮಥನೂ, ವೈಭವದಲ್ಲಿ ಸಾಕ್ಷಾತ್ ಇಂದ್ರನೂ, ಶತ್ರುಗಳಿಗೆ ಭಯಂಕರನೂ, ವಿದ್ಯಾಧರವಂದ್ಯನೂ ಆದ ಅವನಿಗೆ ವಿದ್ಯಾಧರರು ತಮ್ಮ ಹೆಣ್ಣುಮಕ್ಕಳನ್ನು ತಂದು ಮದುವೆ ಮಾಡಿ ಕೊಟ್ಟರು. ಸೌಂದರಿ, ಅನಂಗಮಾಲೆ, ವಿಜಯೆ, ಅನಂಗಸೌಂದರಿ, ವಿದ್ಯುದ್ವೇಗೆ, ವಿಜಯಾವತಿ, ರತ್ನಸೌಂದರಿ ಮೊದಲಾದ ಹಲವರು ವಿದ್ಯಾಧರ ಕುಮಾರಿಯರು ಅವನ ಹೆಂಡತಿಯರಾದರು, ಅವರೆಲ್ಲರೊಡನೆ ವಜ್ರಕುಮಾರನು ಸಂತೋಷದಿಂದ ಸಂಸಾರ ಮಾಡಿಕೊಂಡು ರಾಜ್ಯವನ್ನಾಳುತ್ತ ಸುಖದಿಂದಿದ್ದ.

ಒಂದು ದಿನ ವಜ್ರಕುಮಾರನು ಗಂಧಗಜವನ್ನು ಏರಿ ಲೀಲೆಯಿಂದ ಹೊರಟ. ಅವನ ಸುತ್ತ ಆನೆಗಳ ಸಮೂಹವೂ, ಕುದುರೆಗಳ ಗುಂಪೂ, ಭಟಕೋಟಿಯೂ ಇದ್ದವು; ಲಲಿತಾಂಗಿಯರು ಅವನನ್ನು ಸುತ್ತುವರಿದು ಚಾಮರವಿಕ್ಕುತ್ತಿದ್ದರು; ಗುಡುಗಿನಂತೆ ಉದ್ಘೋಷ ಕೇಳಿಬರುತ್ತಿತ್ತು; ವಿಯಚ್ಚರನಾಯಕರು ಅವನಿಗೆ ಒತ್ತಾಗಿ ನಡೆದು ಬರುತ್ತಿದ್ದರು. ಮಣಿಮಾಲೆ ಮಹಾದೇವಿಯು ವಿಲಾಸನೀಸ್ತ್ರೀಯರು ಹಾಗೂ ಸೊಸೆಯಂದಿರೊಡನೆ ಕರುಮಾಡದ ಮೇಲೆ ಕುಳಿತು ಮಗನ ವೈಭವವನ್ನು ಕಂಡು ಸಂತಸಗೊಂಡಳು. "ಪುಣ್ಯವಿದ್ದರೆ ಶರಧಿಯಲ್ಲಿದ್ದ ರತ್ನಸಮೂಹವು ತನಗೆ ತಾನೇ ಬಳಿಗೆ ಬಾರವೇ? ಪುಣ್ಯದಿಂದ ಆಗದುದು ತಾನೇ ಯಾವುದು? ಹೂ ಬಿಡದೆ ಹಣ್ಣು ಬಿಟ್ಟ ನನಗಿಂತ ಕೃತಾರ್ಥರು ಯಾರಿದ್ದಾರೆ?" ಎಂದು ಪಕ್ಕದಲ್ಲಿದ್ದ ವಿಲಾಸಿನಿಯರಿಗೆ ನಲಿದು ಹೇಳಿದಳು. ಅದನ್ನು ಕೇಳಿದ ಪವನವೇಗೆಗೆ ಅಚ್ಚರಿಯಾಯಿತು. ಈ ವಿಷಯವನ್ನು ಕುಮಾರನಿಗೆ ಅಂದು ರಾತ್ರಿ ಅರುಹಿದಳು.

ಮಾರನೆಯ ಬೆಳಿಗ್ಗೆ ಸಮ್ಯಕ್ತ್ವಚೂಡಾಮಣಿಯು ತನ್ನ ತಾಯಿಯ ಬಳಿ ಬಂದು ವಿಚಾರಿಸಿದ; ಅವಳು ಎಲ್ಲ ವೃತ್ತಾಂತವನ್ನೂ ವಿವರವಾಗಿ ನಿರೂಪಿಸಿದಳು. "ಸಂಸಾರವೆಂಬುದು ನೀರ ಮೇಲಿನ ಗುಳ್ಳೆ, ಕಾಮನ ಬಿಲ್ಲು; ಈ ದೇಹವು ಟೊಳ್ಳಾದ ಮರದಂತೆ ಉರುಳಿ ಬೀಳುವಂಥದು. ಸ್ತ್ರೀಯರ ಕಡು ಪ್ರೀತಿಯು ಮಾಯೆ, ಇಂದ್ರಿಯಸುಖವು ನಾಯಿಬಾಲ, ಆದರೂ ಆಸೆಯಿಂದ ಜನ ಇದನ್ನು ಸ್ಥಿರವೆಂದು ನೆಚ್ಚುತ್ತಾರಲ್ಲ! ಇಲ್ಲಿಯವರೆಗೂ ನಾನು ಕರ್ಮವಶನಾಗಿ ಜಡತ್ವದಿಂದ

ಬಾಳಿದೆ, ನನ್ನನ್ನು ನಾನು ತಿಳಿದೂ ಇನ್ನು ಮೇಲೆ ರಾಜ್ಯಮೋಹದಿಂದ ಕೂಡಿರುವುದು ತರವೇ? ದೇಹ, ಧನ, ಇಂದ್ರಿಯಗಳು, ಸ್ನೇಹ, ಸ್ತ್ರೀಯರು ಇವುಗಳನ್ನು ನೆಚ್ಚಿ ಧರ್ಮದ ಸತ್‌ಸ್ನೇಹವನ್ನು ತೊರೆಯುವುದು ಒಳಿತೇನು?" ಎಂಬ ವೈರಾಗ್ಯಭಾವ ಅವನ ಮನಸ್ಸಿನಲ್ಲಿ ಬಲವಾಯಿತು. ಸಂಸಾರದ ಭೋಗೋಪಭೋಗಗಳ ಬಗ್ಗೆ ಜಿಹಾಸೆ ಹುಟ್ಟಿತು. ಜಗತ್ತಿಗೆ ಮಂಗಳವನ್ನುಂಟು ಮಾಡುವ ಜಿನರೂಪವನ್ನು ಧರಿಸಬೇಕೆಂದು ನಿರ್ಧರಿಸಿದ.

ತನ್ನ ಇಂಗಿತವನ್ನು ಭಾಸ್ಕರದೇವನಿಗೂ ಮಣಿಮಾಲೆಗೂ ತಿಳಿಸಿದ. ಅದಕ್ಕೆ ಕಕ್ಕುಲತೆಯಿಂದ ಅವರೆಂದರು: "ಮಗನೇ, ಹುಚ್ಚುತನ ಮಾಡಬೇಡ; ಹೆತ್ತ ಕರುಳಿಗೆ ನೋವುಂಟುಮಾಡದೆ ನಿನ್ನ ತೀರ್ಮಾನವನ್ನು ಬದಲಿಸು. ನಿನಗೆ ಎಷ್ಟು ಬೇಕೋ ಅಷ್ಟು ಜಿನಪೂಜೆಯನ್ನು ಸಂತೋಷವಾಗಿ ಮಾಡು; ಯಾವಾಗಬೇಕಾದರೂ ಚೈತ್ಯಾಲಯಗಳಿಗೆ ಹೋಗಿ ಪೂಜೆ ಸಲ್ಲಿ ಬಾ." ಅವರ ಮಾತಿನಲ್ಲಿ ಮೋಹ ಎದ್ದು ಕಾಣುತ್ತಿತ್ತು. ಆದರೆ ಎಷ್ಟು ಹೇಳಿದರೂ ಕುಮಾರನು ತನ್ನ ನಿರ್ಧಾರವನ್ನು ಬದಲಿಸಲಿಲ್ಲ. ಅವನ ದೃಢಚಿತ್ತವೂ ತೀರ್ಮಾನವೂ ಅವರಿಗೆ ಮನವರಿಕೆಯಾದವು. ದಕ್ಷಿಣ ಮಧುರಾಪುರದ ಸಹಸ್ರಕೂಟ ಚೈತ್ಯಾಲಯದಲ್ಲಿ ಸೋಮದತ್ತ ಭಟ್ಟಾರಕರು ಇರುವುದನ್ನು ಅವಲೋಕಿನೀ ವಿದ್ಯೆಯಿಂದ ಅರಿತು ಮಣಿಮಾಲೆಯು ವಜ್ರಕುಮಾರನೊಡನೆ ಅವರ ಬಳಿ ಹೋದಳು. ಭಟ್ಟಾರಕರಿಗೆ ವಂದಿಸಿ ತನ್ನ ಮಗನ ವೈರಾಗ್ಯದ ವಿಚಾರವನ್ನು ಅವರಿಗೆ ಅರುಹಿದಳು. ಮುನಿಪತಿಗಳು ವಿದ್ಯಾಧರ ಕುಮಾರನಿಗೆ ಅನುನಯದಿಂದ ಜಿನದೀಕ್ಷೆಯನ್ನು ದಯಪಾಲಿಸಿದರು; ಅನಂತಗುಣಗಣನಿಲಯನಾದ ಕುಮಾರನು ತಪೋಲಕ್ಷ್ಮಿಯನ್ನು ಧರಿಸಿದನು.

ಹೀಗೆ ವಜ್ರಕುಮಾರನು ಜಿನರೂಪವನ್ನು ತಾಳಿದಾಗ, ಭಾಸ್ಕರದೇವನೂ ಮಣಿಮಾಲೆಯೂ ಅವರ ವಂಶದವರೂ ಅಣುವ್ರತಗಳನ್ನು ಅನುಸರಿಸಿ ಸೋಮದತ್ತ ಮುನೀಶ್ವರರಿಗೂ ವಜ್ರಕುಮಾರಮುನಿಗೂ ವಂದನೆಗಳನ್ನು ಸಲ್ಲಿಸಿ ವಿದ್ಯಾಧರಲೋಕಕ್ಕೆ ಹೋದರು. ಇತ್ತ ವಜ್ರಕುಮಾರಮುನಿಯು ಮಿತವಚನನಾಗಿ ಸಕಲ ಆಗಮಗಳನ್ನೂ ಅಭ್ಯಸಿಸಿದ. ಸಂಯಮಸಮುದ್ರನೂ ಗುರುಪಾದಭಕ್ತನೂ ಚತುಷ್ಕಯಾಂತಕನೂ ದಶಧರ್ಮಸಮೇತನೂ ವಾತ್ಸಲ್ಯನಿಧಿಯೂ ಸಮಸ್ತದೋಷ ರಹಿತನೂ ಸಂಸಾರಭಯಸ್ಥನೂ ಬಾಹ್ಯಾಭ್ಯಂತರತಪೋನಿರತನೂ ಸಮ್ಯಕ್ತ್ವ ಚೂಡಾಮಣಿಯೂ ಆಗಿ ಉತ್ತರೋತ್ತರವಾಗಿ ತಪಸ್ಸನ್ನು ಕೈಗೊಂಡು ಆಚರಿಸುತ್ತಿದ್ದ. ಕಾಲಕ್ರಮದಲ್ಲಿ ಆ ಗುಣಾಲಂಕಾರನೂ ಮಹಾವ್ರತಿಯೂ ಆದ ವಜ್ರಕುಮಾರಮುನಿಗೆ ಚಾರಣಋದ್ಧಿ ಒದಗಿತು.

ಆ ನಗರದ ದೊರೆ ಪೂತಿವಾಹನನೆಂಬುವವನು. ಅವನ ಪಟ್ಟದ ರಾಣಿ ಸಮ್ಯಕ್ತ್ವನಿಲಯೆಯೂ ಮೂಢತ್ರಯನಿವಾರಿತೆಯೂ ಷಡಾಯತನದೂರಿತೆಯೂ ಅಷ್ಟಮದವರ್ಜಿತೆಯೂ ನಿಶ್ಶಂಕೆಯೇ ಮೊದಲಾದ ಅಷ್ಟಗುಣಸಂಪನ್ನೆಯೂ ಅಣುವ್ರತವನ್ನು ಪಾಲಿಸುವವಳು ಆದ ಓಹಿಲೆ ಎನ್ನುವವಳು. ಅವಳ ಗುಣ ಸತ್ಯವಂತಿಕೆ ನಿರ್ಮಲಚರಿತ ಮನೋಹರರೂಪ ಜಿನಭಕ್ತಿ ಮೊದಲಾದವನ್ನು ಭವ್ಯಸಂಕುಲವು ಹೊಗಳುತ್ತಿತ್ತು. ಆ ದಂಪತಿಗಳು ಸುಖಸಂಕಥಾವಿನೋದದಿಂದ ಬಾಳುತ್ತಿದ್ದರು. ಅದೇ ಊರಿನಲ್ಲಿ ಸಮುದ್ರದತ್ತನೆಂಬ ಒಬ್ಬ ವ್ಯಾಪಾರಿಯಿದ್ದ; ಅವನ ಹೆಂಡತಿ ಧನದೆ ಎಂಬವಳು. ಅವರಿಬ್ಬರೂ ಕೆಲವು ಕಾಲ ಸುಖವಾಗಿದ್ದರು. ಇದ್ದಕ್ಕಿದ್ದಂತೆ ಸಮುದ್ರದತ್ತನು ಕ್ಷೀಣಗೊಂಡ; ಅದೇ ವೇಳೆಗೆ ಯಮನ ಆಗಮನದಂತೆಯೂ ಅವರ ಐಶ್ವರ್ಯಕ್ಕೆ ಕರ್ಮರಾಜನು ದಾಳಿ ಇಟ್ಟಂತೆಯೂ ಧನದೆಯು ಗರ್ಭ ಧರಿಸಿದಳು. ಅವರ ಆಸ್ತಿಯೆಲ್ಲ ಬೆಂಕಿಗೆ ಬಿದ್ದ ಅರಗಿನಂತೆ ಬಹು ಬೇಗ ಕರಗಿಹೋಯಿತ; ಅವರನ್ನು ನಿಷ್ಠುರವಾದ ಬಡತನ ಆವರಿಸಿತು. ಊಟ ಸಿರಿ ಎರಡಕ್ಕೂ ಅವರು ಎರವಾದರು.

ಈ ರೀತಿ ಬಡತನ ಒದಗಲು ಆ ದಂಪತಿಗಳು ದುಃಖದ ಸುಳಿಯಲ್ಲಿ ಸಿಕ್ಕಿ ಮುಳುಮುಳುಗಿ ಏಳುತ್ತಿದ್ದರು. ಸುಲಿಗೆಯನಂತರ ಕೊಲೆ ಎಂಬಂತೆ, ಬಡತನದ ಜೊತೆ ಮಾರಿರೋಗವು ಬಂತು. ತನಗೆ ಆಪತ್ತು ತಂದ ಮಗುವಿನ ಮುಖವನ್ನು ನೋಡಲಾರೆ ಎಂಬಂತೆ ಸಮುದ್ರದತ್ತನು ಮೃತನಾದ. ಧನದೆಯ ದುಃಖಕ್ಕೆ ಕೊನೆಯಿಲ್ಲದಾಯಿತು.

ಚಿಂತಾಸಮುದ್ರದಲ್ಲಿ ಮುಳುಗಿರುವಾಗಲೇ ಅವಳ ಬಸಿರಿಗೆ ಒಂಬತ್ತು ತಿಂಗಳು ತುಂಬಿ ಒಂದು ಹೆಣ್ಣು ಮಗು ಹುಟ್ಟಿತು. ಹುಟ್ಟುವ ಮೊದಲೇ ತಂದೆಯನ್ನು ತಿಂದುಕೊಂಡ ಈ ಮಗು ತನ್ನನ್ನೂ ಕೊಲ್ಲುವುದು ಖಚಿತ; ಆದ್ದರಿಂದ ನಾನಾಗಿಯೇ ಗಂಡನನ್ನು ಸೇರಿಕೊಳ್ಳುತ್ತೇನೆ ಎಂದು ಅವಳು ಯೋಚಿಸಿದಂತೆ ಕೆಲವೇ ದಿನಗಳಲ್ಲಿ ಧನದೆಯೂ ಕ್ರೂರನಾದ ಅಂತಕನ ದಾಡೆಗೆ ಸಿಕ್ಕಿದಳು. ಕೂಸು ಅನಾಥವಾಗಿ ತನ್ನ ಪೂರ್ವಫಲವನ್ನು ಅನುಭವಿಸುತ್ತ ಅನ್ನವಿಲ್ಲದೆ ಊರಲ್ಲಿ ಎಂಜಲನ್ನಾಯ್ದು ತಿನ್ನುತ್ತ, ಬೀದಿಯಲ್ಲಿ ಇತರರು ಎಸೆದ ಹಣ್ಣುಗಳನ್ನು ಮೆಲ್ಲುತ್ತ ಕಾಲ ಕಳೆಯುತ್ತಿತ್ತು.

ಹೀಗಿರಲು ಒಂದು ದಿನ ಆ ಊರಿಗೆ ಜಿನತತ್ವಾಂಬುನಿಧಿವರ್ಧನಚಂದ್ರರೂ ದುರಿತಸಮುದ್ರಬಡಬಾನಲರೂ ಆದ ಅಭಿನಂದನ ಮತ್ತು ನಂದನ ಎಂಬ ಹೆಸರಿನ ಇಬ್ಬರು ಮುನಿಗಳು ಬಂದರು. ಅವರು ಚರಿಗೆಯನ್ನು ಪೂರೈಸಿ ಹೋಗುತ್ತಿರುವಾಗ, ಕಸಕುಪ್ಪೆಯಲ್ಲಿ ಎಂಜಲನ್ನು ಆರಿಸಿ ತಿನ್ನುತ್ತಿದ್ದ ಈ ಮಗುವನ್ನು ಕಂಡರು. ನಂದನಮುನಿಗಳು ವಿಸ್ಮಯದಿಂದ, "ಸಂಸಾರವೆಂಬುದು ಎಷ್ಟು ಕಷ್ಟಕರವಾದದ್ದು" ಎಂದರು. ಅದಕ್ಕೆ ಅಭಿನಂದನಭಟ್ಟಾರಕರು, "ಈ ಮಗುವೇ ಮುಂದೆ ಈ ಊರಿನ ರಾಜನಾದ ಪೂತಿವಾಹನನಿಗೆ ಪ್ರಾಣವಲ್ಲಭೆಯಾಗುತ್ತದೆ" ಎಂದು ಭವಿಷ್ಯ ನುಡಿದರು. ಅವರ ಹಿಂದೆ ಬರುತ್ತಿದ್ದ ಬುದ್ಧಾತ್ಮನೆಂಬ ಕೆಂಪು ಬಟ್ಟೆಯನ್ನು ತೊಟ್ಟಾತ ಆ ಮಾತನ್ನು ಕೇಳಿಸಿಕೊಂಡ. ಋಷಿವಾಕ್ಯವು ಹುಸಿಯಾಗುವುದಿಲ್ಲವೆಂದು ಬಗೆದು ಅತನು ಮಗುವನ್ನು ತನ್ನ ದೇಹಾರಕ್ಕೆ ಕರೆದೊಯ್ದ. ಅದಕ್ಕೆ ಬುದ್ಧದಾಸಿ ಎಂಬ ಹೆಸರಿಟ್ಟು ಬೆಳೆಸುತ್ತಲಿದ್ದ. ಆ ಹುಡುಗಿಯು ವಿಲಾಸದಲ್ಲಿಯೂ ವಿಭ್ರಮದಲ್ಲಿಯೂ ವಿದ್ಯಾಧರಸ್ತ್ರೀಯರೊಂದಿಗೆ ಮತ್ತು ಸ್ವರ್ಗದ ಲಲಿತಾಂಗಿಯರ ಜೊತೆ ಸ್ಪರ್ಧಿಸುವಂತಿದ್ದಳು; ಅವಳ ಗಾಡಿ ಮತ್ತು ಉನ್ನತಿಕೆಗಳು ನಾಡ ಸುಂದರಿಯರಲ್ಲಿ ಮಾತ್ಸರ್ಯವನ್ನುಂಟುಮಾಡುತ್ತಿದ್ದವು. ಹಾಗೆ ಹಾವಭಾವ ವಿಲಾಸವಿಭ್ರಮಗಳಿಗೆ ನೆಲೆಯಾದ ಬುದ್ಧದಾಸಿಯು ಶೃಂಗಾರದ ಉರುಳಿಯಾಗಿದ್ದಳು.

ಒಂದು ದಿವಸ ಅವಳು ದೇಹಾರದ ಹೊರವಲಯದ ನಂದನವನದಲ್ಲಿ ಉಯ್ಯಾಲೆಯಾಡುತ್ತಿದ್ದಳು. ಆ ಹೊತ್ತಿಗೆ ಪೂತಿಮಹಾರಾಜನು ಆನೆಯ ಮೇಲೆ ಕುಳಿತು ಆ ದಾರಿಯಲ್ಲಿ ಹೋಗುತ್ತಿದ್ದ. ಅವಳನ್ನು ನೋಡಿದಾಗ ಮನ್ಮಥನ ಬಾಣಗಳು ಅವನಲ್ಲಿ ನಾಟಿಕೊಂಡವು. ಮುಂದೆ ಹೋಗದೆ ಅಲ್ಲಿಯೇ ನಿಂತು ಅವಳ ರೂಪವನ್ನೇ ತದೇಕ ದೃಷ್ಟಿಯಿಂದ ನೋಡಿದ; ಅರಿವಿಲ್ಲದೆಯೇ ಅವನ ತಲೆ ಮೆಚ್ಚಿಕೆಯಿಂದ ತೂಗಿತು. ಅರಮನೆಗೆ ಹೋದ ಮೇಲೆ ವಿರಹತಾಪವು ಅವನನ್ನು ಕಾಡತೊಡಗಿತು. ಅವಳನ್ನು ತನಗೆ ಮದುವೆ ಮಾಡಿಕೊಡಬೇಕೆಂದು ಬೇಡಿ ತನ್ನ ಪೆರ್ಗಡೆಗಳನ್ನು ಬುದ್ಧ ರಕ್ತಾಂಬರನಲ್ಲಿಗೆ ಅಟ್ಟಿದ. ಅವರ ಮಾತನ್ನು ಕೇಳಿದ ಬುದ್ಧಾತ್ಮನಿಗೆ ಭಿಕ್ಷುಕನಿಗೆ ಸಿರಿ ಸಿಕ್ಕಿದಂತೆ ಆನಂದವಾಯಿತು. ಋಷಿವಾಕ್ಯ ಸುಳ್ಳಾಗದು ಎಂದು ಅವನಿಗನ್ನಿಸಿತು. 'ಸಿರಿ ಬರಲು ಮೊಣಕಾಲಿಂದ ಒದ್ದರು' ಎಂಬಂತೆ ಅರಸನಿಗೆ ಪ್ರಾಣ, ಅರ್ಥಗಳನ್ನು ಬೇಕಾದರೂ ಕೊಡುತ್ತೇನೆ; ಈ ಕೂಸನ್ನು ಕೊಡುವುದೇನು ಮಹಾ ಎಂದು ಬುದ್ಧದಾಸಿಯನ್ನು ಪೂತಿಮಹಾರಾಜನಿಗೆ ಮದುವೆ ಮಾಡಿಕೊಟ್ಟ. ಉÁಜನು ಅವಳ ಪ್ರಾಣವಲ್ಲಭನಾದ. ರಾಜನನ್ನು ಕಾಮನ ಠಕ್ಕು ಆವರಿಸಿತು: ಅವನಿಗೆ ಇತರ ಹೆಂಡತಿಯರಲ್ಲಿ ಆಸಕ್ತಿ ಹೋಯಿತು, ಮಹತ್ವದ ರಾಜಕಾರ್ಯಗಳನ್ನು ಮರೆತ. ಬೇರೆ ಯಾರ ಮಾತನ್ನೂ ಕೇಳದೆ ಬುದ್ಧದಾಸಿಯ ಜೊತೆಯಲ್ಲೇ ಸದಾ ಇರುತ್ತಿದ್ದ. ರೆಪ್ಪೆ ಮಿಟುಕಿಸುವಷ್ಟು ಹೊತ್ತು ಕೂಡ ಅವಳನ್ನು ಬಿಟ್ಟಿರುತ್ತಿರಲಿಲ್ಲ.

ಫಾಲ್ಗುಣ ಮಾಸದ ನಂದೀಶ್ವರದಂದು ಸಕಲ ಗುಣನಿಲಯೆಯಾದ ಓಹಿಲೆ ಮಹಾದೇವಿಯು ಮಹಾಮಹಿಮೆಯಿಂದ ಜಿನಪೂಜೆಗೈದು ಉತ್ಸವವನ್ನು ಹೊರಡಿಸಿದಳು. ಪೂತಿಮಹಾರಾಜನು ತನಗೆ ಎರಡಿಲ್ಲದ ಇನಿಯನಾದ್ದರಿಂದ, ಬುದ್ಧದಾಸಿಯು ಅದನ್ನು ತಪ್ಪಿಸಿ ತನ್ನ ತಂದೆ ಬುದ್ಧಾತ್ಮನ ಅಭಿಮತದಂತೆ ಬುದ್ಧನ ಪೂಜೆ ಮಾಡಿ ಉತ್ಸವವನ್ನು ಹೊರಡಿಸಲೆಂದು ರಥವನ್ನು ಅಲಂಕರಿಸಿ, ಆನೆ ಕುದುರೆ ಮತ್ತು ವಾರವನಿತೆಯರ ಸಮೂಹದೊಂದಿಗೆ ಮೆರವಣಿಗೆಯನ್ನು ಹೊರಡಿಸಿದಳು. ಹೀಗೆ ಅವಳು ದರ್ಪದಿಂದ ಇದ್ದಳು. ಜಿನಪೂಜೆಯನ್ನು ನಿಲ್ಲಿಸಿ ಬುದ್ಧದಾಸಿಯು

ಬುದ್ಧೋತ್ಸವವನ್ನು ಮಾಡಿದಳೆಂಬುದನ್ನು ಅರಿತ ಓಹಿಲೆಯು ಸಭೆಯಲ್ಲಿ ಅಬ್ಬರಿಸಿದಳು. ತಿರುಕನಿಗೆ ಭೂಮಂಡಲವೇ ದೊರೆತರೆ, ಓದೇ ಇಲ್ಲದ ವಂಶದವನು ಓದಿದರೆ ಇತರರನ್ನು ಲೆಕ್ಕಕ್ಕಿಡುವುದಿಲ್ಲ; ವಾಂತಿಯ ಹೆಸರು ಮೈಲಾರ ಎಂಬಂತೆ, ತೊತ್ತಿನ ಹೆಸರು ಲಕ್ಷ್ಮಿ ಎಂಬಂತೆ, ಎಮ್ಮೆಯ ಹೆಸರು ಮಹಾದೇವಿ ಎಂಬಂತೆ, ಓಡಿನ ಹೆಸರು ಮಂಗಳ ಎಂಬಂತೆ ಈ ಬುದ್ಧದಾಸಿಯು ಅರಸಿಯಾದ ಸೊಕ್ಕಿನಿಂದ ತಂಗಳು ತಿರುಕನಾದ ತನ್ನ ತಂದೆಯ ಮಾತನ್ನು ಕೇಳಿ ಮಧುರಾಪುರದಲ್ಲಿ ಎಂದೂ ಆಗದಿದ್ದ ಸುಗತನ ಉತ್ಸವವನ್ನು ಮಾಡಿ, ಸದಾ ಆಗುತ್ತಿದ್ದ ಪಾಂಡ್ಯವಂಶದ ಅಧಿದೈವವಾದ ಜಿನಸ್ವಾಮಿಯ ಪೂಜೆಯನ್ನು ಮಾಡದೆ ಕೊಬ್ಬಿನಿಂದ ಕೂಡಿದ್ದಾಳೆ. ಅದರಿಂದೇನಾಯ್ತು? ಪೂತಿವಾಹನ ಮಹಾರಾಜನ ನಲ್ಮೆಯ ಹೆಂಡತಿಯಾದ ಅವಳ ಸೈನ್ಯಕ್ಕೂ ತನ್ನ ಸೈನ್ಯಕ್ಕೂ ಯುದ್ಧವಾಗಿಬಿಡಲಿ ಎಂದು ಪ್ರತಿಜ್ಞೆ ಮಾಡಿದಳು.

ಆನಂತರ ಓಹಿಲೆಯು ಸೋಮದತ್ತ ಮುನಿಪತಿಯಲ್ಲಿಗೆ ಬಂದು, ವಂದಿಸಿಯಾದ ಮೇಲೆ ತನಗಾದ ಅವಮಾನದ ವಿಷಯವನ್ನು ಅರುಹಿದಳು. ಹಿಂದೆ ಯಾವ ಬಗೆಯಲ್ಲಿ ಪರಮ ಜಿನೇಶನ ಪೂಜೆ ರಥಗಳು ನಡೆಯುತ್ತಿದ್ದವೋ ಅದೇ ರೀತಿಯಲ್ಲಿ ನಡೆಸುವುದಕ್ಕೆ ಒಪ್ಪದರೆ ಮಾತ್ರ ಊಟ ಮಾಡುತ್ತೇನೆ, ಇಲ್ಲದಿದ್ದರೆ ಜೀವಮಾನ ಪೂರ್ತಿ ಊಟಮಾಡುವುದಿಲ್ಲ ಎಂದಳು. ಅವಳು ಆಹಾರ ನಿವೃತ್ತಿಯ ಮಾತನ್ನಾಡಿದಾಗ ಸೋಮದತ್ತ ಮುನಿಗಳು ಹೀಗೇಂದರು: "ವಜ್ರಕುಮಾರ ಮುನಿಗಳಿಂದ ನಿನ್ನ ಕಾರ್ಯವು ನೆರವೇರುತ್ತದೆ. ಆದ್ದರಿಂದ ನೀನು ಅವರಲ್ಲಿಗೆ ಹೋಗು." ಓಹಿಲೆಯು ಅಂತೆಯೇ ವಜ್ರಕುಮಾರಮುನಿಗಳ ಬಳಿ ಹೋಗಿ ವಂದಿಸಿ, ತಾನು ಸೋಮದತ್ತ ಮುನಿಗಳ ಮುಂದೆ ಮಾಡಿದ ಪ್ರತಿಜ್ಞೆಯ ವಿಷಯವನ್ನು ತಿಳಿಸಿದಳು. ಕಲ್ಯಾಣಕಾರಕವಾದ ವಾತ್ಸಲ್ಯವು ಸಾಮಾನ್ಯವಾದದ್ದೇ; ಅದು ಮಂಗಳಕರವಾದದ್ದು, ಮುಕ್ತಿಲಕ್ಷ್ಮಿಯ ಅಮೂಲ್ಯ ಆಭರಣ, ಕರ್ಮಭಯ ನಿವಾರಕವಾದದ್ದು. ಅದನ್ನು ಬಯಸುವ ಮಾನವನು ಮಾತ್ಸರ್ಯವನ್ನು ಬಿಟ್ಟು ಚತುರ್ವರ್ಣದವರಿಗೂ ಒಳ್ಳೆಯದನ್ನು ಮಾಡಬೇಕು, ಅದೇ ವಾತ್ಸಲ್ಯ. ಜೈನವಚನ ಸಮುದ್ರವನ್ನು ಚೆನ್ನಾಗಿ ಅರಿಯಬೇಕು. ಬಾಗಿಲಿಲ್ಲದ ಮನೆ, ಪೆರ್ಗಡೆಯಿಲ್ಲದ ರಾಜ್ಯ, ವಾತ್ಸಲ್ಯವಿಲ್ಲದ ಗುಣಗಣ, ಬಡವನ ಮೌನ, ಇವು ಶೋಭಿಸಲಾರವು. ಆದ್ದರಿಂದ ವಾತ್ಸಲ್ಯವೆಂಬುದು ಸಾಮಾನ್ಯವಲ್ಲ. ಅದನ್ನು ಉದಾಸೀನ ಮಾಡಲಾಗದು – ಎಂಬ ಆಲೋಚನೆಗಳು ಮುನಿಯ ಮನಸ್ಸಿನಲ್ಲಿ ಹಾಯ್ದುಹೋದವು. ಬಹಿರಂಗವಾಗಿ ಆ ಸಹಜಕವಿಜನಮನೋಹರನು ಓಹಿಲೆಯನ್ನು ಕುರಿತು ಹೀಗೆಂದು ಹೇಳಿದ: "ದಿವ್ಯಗುಣಭೂಷಣೆಯೇ, ಭವ್ಯಜನಾನುರಾಗೆಯೇ, ನಿಷ್ಕಾರಣವಾದ ಪ್ರತಿಜ್ಞೆಯನ್ನೇಕೆ ನೀನು ಮಾಡಿದೆ? ನೀನು ಭೂಮಿಯಲ್ಲಿ ಮಾಡಲಾಗದ ಕಾರ್ಯ ಯಾವುದಿದೆ? ನಾಳೆ ನಾನು ಖೇಚರರಾಜರಿಂದ ಆಶ್ಚರ್ಯಕರವಾಗುವ ರೀತಿಯಲ್ಲಿ ಜಿನಪೂಜೆಯನ್ನು ನೆರವೇರಿಸುತ್ತೇನೆ. ಇದರಿಂದ ನಿನಗೆ ಸಂತೋಷವಾಗಲಿ." ಚಂದ್ರೋದಯವಾದಾಗ ಸಮುದ್ರಕ್ಕೆ ಆಗುವಂತೆ ಈ ಮಾತಿನಿಂದ ಓಹಿಲೆ ಮಹಾದೇವಿಗೆ ಸಂತಸವುಟಾಯಿತು.

ಚಾರಣಋದ್ಧಿಪ್ರಾಪ್ತನಾದದ್ದರಿಂದ ವಜ್ರಕುಮಾರಮುನಿಯು ವಾಯುವೇಗ ದಿಂದ ಅಮರಾವತೀಪುರಕ್ಕೆ ಬಂದು ರಾಜಮಂದಿರವನ್ನು ಹೊಕ್ಕ. ಮಹಾ ಮುನಿಯ ಬರವನ್ನು ತಿಳಿದ ಭಾಸ್ಕರದೇವನು ತನ್ನ ಸಿಂಹಾಸನದಿಂದ ಇಳಿದು ಬಂದು ಅವನನ್ನು ಎದುರುಗೊಂಡ. ಮಣಿಮಾಲೆ ಮಹಾದೇವಿಯೂ ಬಂದು ಎದುರುಗೊಂಡು ಮುನಿಗೆ ಭಕ್ತಿಯಿಂದ ವಂದಿಸಿದಳು. ಅವನನ್ನು ದೊಡ್ಡ ಪೀಠವೊಂದರ ಮೇಲೆ ಕುಳ್ಳಿರಿಸಿ ಕಾಲು ತೊಳೆದು ಆ ನೀರನ್ನು ಇಬ್ಬರೂ ತಮ್ಮ ತಲೆಯ ಮೇಲೆ ಸಿಂಪಡಿಸಿಕೊಂಡರು. ಕಲ್ಪವೃಕ್ಷ, ಮೊಲ್ಲೆ, ಪಾದರಿ. ನಮೇರು, ಪಾರಿಜಾತ ಮುಂತಾದ ಹೂಗಳಿಂದ ಅವನ ಚರಣವನ್ನು ಪೂಜಿಸಿದರು. ಸಮ್ಯಕ್ತ್ವಚೂಡಾಮಣಿಯ ಕಾಲುಗಳನ್ನು ತಮ್ಮ ತೊಡೆಯ ಮೇಲಿರಿಸಿಕೊಂಡು ಕೆಲ ಕಾಲ ಮೆಲ್ಲಗೆ ಒತ್ತಿದರು; ಮುನಿಯ ಧರ್ಮವಾಕ್ಕುಗಳನ್ನು ಆಲಿಸಿದರು. ಆನಂತರ ಮುನಿಯ ಮುಖವನ್ನು ನಿರುಕಿಸುತ್ತ, "ತಮ್ಮ ಶ್ರೀಪಾದಪದ್ಮಗಳನ್ನು ಕಂಡು ನಮ್ಮ ದುಃಖವೆಲ್ಲ ಹೋಯಿತು; ಪಾಪಸಮೂಹವೆಲ್ಲ ಮಾಯವಾದವು" ಎಂದು ತಮ್ಮ ಭಕ್ತಿಯು ಹೊರಗಿನ ಜನಕ್ಕೆ ತೋರುವ ಹಾಗೆ ನುಡಿದರು.

ಆನಂತರ, "ತಮ್ಮ ಬೆಸನಾವುದು? ದಯವಿಟ್ಟು ತಿಳಿಸಬೇಕು" ಎಂದು ಭಾಸ್ಕರದೇವನು ವಿನಯದಿಂದ ಕೇಳಿದ. ಅದಕ್ಕೆ ವಾತ್ಸಲ್ಯರತ್ನಾಕರನು, "ನೀವು ನಿಮ್ಮ ಸಮಸ್ತ ವಿದ್ಯಾಧರಬಲದ ಸಮೇತ ನಮ್ಮೊಡನೆ ದಕ್ಷಿಣ ಮಧುರಾಪುರಕ್ಕೆ ಬಂದು ಪೂತಿವಾಹನ ಮಹಾರಾಜನ ಹಿರಿಯ ರಾಣಿಯಾದ ಓಹಿಲೆಗಾಗಿ ಜಿನಪೂಜೆಯ ಉತ್ಸವವನ್ನು ಹೊರಡಿಸಿರಿ" ಎಂದ. ಮಹಾಪ್ರಸಾದವೆಂದು ಬಗೆದು, ಅದನ್ನು ನೆರವೇರಿಸುವುದೇನು ಮಹಾ ಎಂದು ಉಭಯಶ್ರೇಢಿಯ ವಿದ್ಯಾಧರರೆಲ್ಲರಿಗೂ ಹೇಳಿಕಳಿಸಿದರು. ಅವರೆಲ್ಲ ಅಮರಾವತೀ ನಗರಕ್ಕೆ ಬಂದು ಸೇರಿದರು. ಅರಮನೆಯಿಂದ ರಾಜಲೀಲೆಯಿಂದ ಬಂದ ವಿಬುಧೇಶ್ವರಸಮೂಹವು ಎಲ್ಲ ವಿದ್ಯಾಧರರಾಜರೊಡನೆ ಸೇರಿಕೊಂಡರು. ಆನಂತರ ವಜ್ರಕುಮಾರಮುನಿಪನ ಆಣತಿಯಂತೆ ದಿಕ್ಕುಗಳು ಮಾರ್ದನಿಸುವ ಹಾಗೆ ತಮ್ಮಟೆಗಳು ಘೂರ್ಣಿಸಿದವು. ಕ್ಷೀರಸಾಗರದ ಅಲೆಗಳು ಹರಡುವ ರೀತಿಯಲ್ಲಿ ಮುತ್ತಿನ ಬೆಳ್ಗೊಡೆಗಳು ಎಲ್ಲಡೆ ಅರಳಿದವು. ಗಿರಿಬೆಟ್ಟಗಳೆಲ್ಲ ಭೂಮಿಯನ್ನು ಬಿಟ್ಟು ಆಗಸದಲ್ಲಿ ಸೇರಿದವೇನೋ ಎಂಬಂತೆ ಮದಗಜಗಳ ಹಿಂಡು ರಂಜಿಸಿದವು. ನಕ್ಷತ್ರಗಣವು ವಜ್ರಕುಮಾರ ಮುನೀಶ್ವರನನ್ನು ಎದುರುಗೊಳ್ಳಲು ಬಂದವೇನೋ ಎಂಬಂತೆ ಕುದುರೆಗಳ ಸಮೂಹವು ವಿಸ್ತಾರವಾದ ಪ್ರದೇಶದಲ್ಲಿ ಗುಂಪುಗಟ್ಟಿದವು. ಇಂದ್ರನ ಮೇಲೆ ಮುನಿಸಿಕೊಂಡು ಕೋಮಲಶರೀರೆಯರಾದ ದೇವಾಂಗನಾತತಿಯು ಸ್ವರ್ಗಲೋಕದಿಂದ ಖೇಚರ ರಾಜರ ಮನಸ್ಸುಗಳನ್ನು ಕದಡುತ್ತ ಉತ್ಸಾಹದಿಂದ ಬಂದು ನೆರೆಯಿತು. ಅಲ್ಲದೆ, ಮಂದಗಮನದ ಮುದ್ದುನುಡಿಯ ವಿದ್ಯಾಧರ ವಾರನಾರೀಕದಂಬವು ಕಾಮದೇವನ ಸಾಮ್ರಾಜ್ಯಕ್ಕೆ ತಾವೇ ಮೊದಲಿಗರೆಂಬ ರೀತಿಯಲ್ಲಿ ಬಿಂಕದಿಂದ ಕನಕದ್ವೀಪಗಳಂತಹ ಸ್ವರ್ಣವಿಮಾಗಳನ್ನೇರಿ, ಚಂದ್ರಮಂಡಲವೇ ನಾನಾ ರೂಪಗಳಿಂದ ನಭಸ್ಥಳದಲ್ಲಿ ನೆರೆದಂತೆ ಬೆಳ್ಳಿಯ ವಿಮಾನಗಳಲ್ಲಿ ಕುಳಿತು, ಅಂತೆಯೇ ಪದ್ಮರಾಗ, ಮುತ್ತು, ಪಚ್ಚೆ, ನೀಲ ವಿಮಾನಗಳಲ್ಲಿ ಬಂದು ಸೇರಿದರು. ತಮ್ಮ ಹಸ್ತಿಅಶ್ವರಥಪದಾತಿಗಳು ಬೆರೆಯದ ರೀತಿಯಲ್ಲಿ ಕಟ್ಟಿಗೆಕಾರರು ನಿಯಂತ್ರಿಸುತ್ತಿರಲು, ಕಾಮದೇವನ ರೂಪಿಗಿಂತ ತಮ್ಮದೇ ಮಿಗಿಲೆಂಬ ಹಾಗೆ ಕಡಗ ಕಂಕಣ ಹಾರ ಕೇಯೂರ ಮಕುಟಗಳಿಂದ ಒಪ್ಪುವ ಖೇಚರಕುಮಾರರು ಬಂದು ಶೋಭಿಸಿದರು. ಇಂದ್ರನಿಗೂ ನಾಗರಾಜನಿಗೂ ಸ್ವರ್ಗವೂ ಪಾತಳವೂ ಶೋಭಿಸುತ್ತವೆ; ಆದರೆ ಸಿರಿಯಲ್ಲಿ ತಮಗೆ ಯಾವ ಕುಂದೂ ಇಲ್ಲವೆಂಬುದನ್ನು ತೋರಿಸುವಂತೆ ಭಾಸ್ಕರದೇವನು ಆನಂದದಿಂದ ಆಗಸದಲ್ಲಿ ಖೇಚರಲೋಕವನ್ನೇ ಸೃಷ್ಟಿಸಿದನೋ ಎಂಬಂತೆ ಕಾಣಿಸಿತು.

ಎಲವ ಶಂಖ ಕಹಳೆ ಕರಡೆ ಮದ್ದಲೆ ತ್ರಿವಳಿ ಭೇರಿ ಇವುಗಳ ಶಬ್ದದಿಂದ ಸೈನ್ಯವು ಶೋಭಿಸುತ್ತಿತ್ತು. ಕೊಡೆಗಳು ಬೆಳ್ಗೊಡೆಗಳು ಛತ್ರಿಗಳು ಹಾಗೂ ಮೋಡದ ನೆರಳಿನಿಂದ ಆಕಾಶವು ಉದ್ಯಾನವನದಂತೆ ಚೆಲುವಾಗಿ ಕಾಣಿಸಿತು. ಲಾವಣ್ಯ ಸಮುದ್ರವೇ ಜಲಪಾತವಾಗಿ ಸುರಿಯುತ್ತಿದೆಯೋ ಎಂಬಂತೆ ಖೇಚರಸ್ತ್ರೀಸಮೂಹವು ಗೋಚರಿಸಿತು. ನಮಗಿಂತ ಶುಭಾಂಗಿಯರು ಬೇರಾರಿದ್ದಾರೆ ಎಂದು ತೋರಿಸಿವಂತೆ ಸಕಲ ವಿದ್ಯಾಧರಸ್ತ್ರೀಯರು ಅಲ್ಲಿ ಬಂದು ನೆರೆದಿದ್ದರು. ಖೇಚರರ ಮನಸ್ಸುಗಳನ್ನು ನುಚ್ಚುನುರಿಗೊಳಿಸುತ್ತ ಖೇಚರಸ್ತ್ರೀಸಮೂಹವು ಚೆಂದದಿಂದ ಅಲ್ಲಿ ಸೇರಿತ್ತು. ಜನರನ್ನು ಸೋಲಿಸಲು ಮನ್ಮಥನೊಬ್ಬನಿಂದ ಸಾಧ್ಯವಿಲ್ಲ, ಅವನಿಗೆ ನಾವು ಸಹಾಯಕರು ಎಂಬುದನ್ನು ತೋರಿಸುವಂತೆ ವಿದ್ಯಾಧರಸ್ತ್ರೀಯರ ನೆರವಿ ಕೂಡಿತ್ತು. ಗಗನ ಚಕ್ರಕ್ಕೆ ಬೇರೊಂದು ಗಗನ ಚಕ್ರವು ಔತಣಕ್ಕೆ ಬಂದಿತೋ ಎಂಬ ಹಾಗೆ, ದೀರ್ಘ ಕಾಲ ಒಂದೇ ಕಡೆಯಲ್ಲಿದ್ದ ಕ್ಷೀರಸಾಗರವು ಬೇಸರಗೊಂಡು ಬದಲಿಗಾಗಿ ಚಿಮ್ಮಿತೋ ಎಂಬಂತೆ, ವಾತ್ಸಲ್ಯರತ್ನಾಕರನ ಕೀರ್ತಿಲತೆಯ ಚಿಗುರಿನಂತೆ ಒಪ್ಪುತ್ತಿದ್ದ ವಿದ್ಯಾಧರಸಾಧನವೆಲ್ಲ ದಕ್ಷಿಣ ಮಧುರೆಯಲ್ಲಿ ಸೇರಿತ್ತು. ಅದನ್ನು ಕಂಡ ಪೌರರೆಲ್ಲ ಬೆರಗಾದರು; ದೇವಲೋಕವೆಲ್ಲ ತಮ್ಮ ಮೇಲೆ ಬೀಳುವುದೇನೋ ಎಂದು ಹೆದರಿ ನೋಡುತ್ತಿದ್ದರು.

ಅದನ್ನು ಕಂಡು ಬುದ್ಧದಾಸಿಯ ಪಕ್ಷದಲ್ಲಿದ್ದವರೂ ಸುಗತನ ಭಕ್ತರೂ, ಬುದ್ಧನ ರಥೋತ್ಸವಕ್ಕೆ ದೇವಲೋಕದವರೆಲ್ಲ ಸನ್ನದ್ಧರಾಗಿ ಬಂದಿರುವುದರಲ್ಲಿ ಸಂದೇಹವಿಲ್ಲ ಎಂದು ಸಂತಸಗೊಂಡರು. ಆದರೆ ವಾಸ್ತವವು ತಿಳಿದ ಬುದ್ಧದಾಸಿಯ ಪಕ್ಷದವರಿಗೆ, ಕಣ್ಣಲ್ಲಿ ಮರಳನ್ನು ಎರಚಿ ಉಟ್ಟದ್ದನ್ನು ಕಿತ್ತುಯ್ದರು ಎಂಬ ಹಾಗೆ ಆಯಿತು. ಅವರ ಮುಖಗಳು ಸುಟ್ಟು

ಕರಿಕುಗೊಂಡಂತೆ ಕಪ್ಪಗಾದವು, ಪಿತ್ತ ಅಧಿಕಗೊಂಡಂತೆ ಹೊಟ್ಟೆ ಉರಿಯಿತು, ತಾಯಿ ಸತ್ತ ಮಗುವಿನಂತೆ ದುಃಖಿಗೊಂಡರು. ಸಕಲಗುಣನಿಲಯೆಯಾದ ಓಹಿಲೆ ದೇವಿಯ ಅರಮನೆಗೆ ಬಂದ ವಿದ್ಯಾಧರರು ಕಂಗೊಳಿಸಿದರು. ಊರಿನ ಭವ್ಯಜನರೂ, ಹಿರಿಯರೂ, ಪ್ರಧಾನರೂ, ಪರಿಚಾರಕರೂ, ಪೆರ್ಗಡೆಗಳೂ, ಲೆಂಕದಂಡರೂ, ಸಾಮಂತರೂ, ಪೌರರೂ, ರಾಜಕುಮಾರರೂ, ಅವರ ಅರಸಿಯರೂ, ದಂಡನಾಥೆಯರೂ ಸಂತೋಷದ ಆಧಿಕ್ಯದಿಂದ, 'ಅರಸು ಮರುಳನಲ್ಲವೇ; ಹಿರಿಯರಸಿಯ ಸಾಹಸವನ್ನು ಅರಿತೂ ಅರಿಯದ ಹಾಗೆ ಮಚ್ಚರವನ್ನುಂಟುಮಾಡಿದ. ಈ ಪುರದಲ್ಲಿ ಬೇರೆಯವರ ಹೆಗ್ಗಳಿಕೆಗೆ ಅವಕಾಶವೆಲ್ಲಿ?' ಎಂದುಕೊಂಡರು. 'ಈ ಊರಿನಲ್ಲಿ ಇಲ್ಲಿಯವರೆಗೆ ಜಿನೋತ್ಸವವಲ್ಲದೆ ಬೇರೆ ಉತ್ಸವಗಳು ನಡೆದಿಲ್ಲ; ಅದು ರಾಜನಿಗೂ ತಿಳಿದಿರುವಂತಹುದೇ. ಆದರೂ ಹೀಗಾಯಿತಲ್ಲ; ವಾಸ್ತವವಾಗಿ ಓಹಿಲೆ ದೇವಿಯೇ ಪಾಂಡ್ಯರಾಜನ ಪಟ್ಟದ ರಾಣಿ; ಇದನ್ನು ಗಣಿಸದೆ ಬುದ್ಧದಾಸಿಗೆ ಅಗ್ರಮಹಿಷಿ ಪಟ್ಟವನ್ನು ಕೊಟ್ಟನಲ್ಲ. ಇದು ಸರಿಯೇ? ಕೆರವನ್ನು ತಲೆಯ ಮೇಲಿಟ್ಟುಕೊಂಡಂತೆ ಪಟ್ಟದ ರಾಣಿಗಿಂತ ಬುದ್ಧದಾಸಿಗೇ ಪ್ರಾಮುಖ್ಯವಿತ್ತನಲ್ಲ! ಮಹಾರಾಣಿಯು ಕೈಗೊಂಡ ಜಿನಪೂಜೆಯು ಮಹಾ ವೈಭವದಿಂದ ನಡೆಯುವ ಹಾಗಾಯಿತು. ಸದ್ಯ, ಅದರಿಂದ ನಮಗಾಗಿದ್ದ ಅವಮಾನವೂ ಹಿಂಗಿದಂತಾಯಿತು. ಅರಸಿಯ ಸಮ್ಯಕ್ತ್ವಕ್ಕೂ, ಆಕೆಯ ಜೈನಭಕ್ತಿಗೂ ಇದೇನೂ ದೊಡ್ಡದಲ್ಲ. ಈ ವಿಷಯ ತಿಳಿದರೆ ಇಂದ್ರನೂ ನಾಗರಾಜನೂ ಇಲ್ಲಿಗೆ ಬರುತ್ತಾರೆ!' ಎಂದೆಲ್ಲ ಜನರು ತಮ್ಮತಮ್ಮಲ್ಲಿ ಮಾತಾಡಿಕೊಂಡರು.

ಅವರೆಲ್ಲ ಮಂಗಳರವದ ನಡುವೆ ಆನಂದದಿಂದ ಓಹಿಲೆ ಮಹಾದೇವಿಯ ಅರಮನೆಗೆ ಬಂದು, ಸಾಷ್ಟಾಂಗ ವಂದನೆಯನ್ನು ಮಾಡಿ ಸಮುದ್ರದ ಘೋಷದಂತೆ ಹೊಗಳಿಕೆಯ ಮಾತನ್ನಾಡಿದರು. ಪ್ರೀತಿಯಿಂದ ಹೊಗಳುವ ಆ ಪೌರರ ನಾಲಗೆಗಳೆಂಬ ಕೆಂದಳಿರಿನಿಂದ ಕೂಡಿದ ಅಶೋಕವೃಕ್ಷವನ್ನು ಮಹಾರಾಣಿ ಹೋಲುತ್ತಿದ್ದಳು. ಹಾಗೆ ಜನರು ಹಗಲಿನ ತಾವರೆಯಂತೆ ಅರಳಿ ಮಳೆಗಾಲದ ನವಿಲಿನಂತೆ ಆನಂದತುಂದಿಲರಾಗಿ ಮನೆಮನೆಯನ್ನೂ ಅಲಂಕಾರಗೈದು, ಬೀದಿಗಳೆಲ್ಲವನ್ನೂ ಚಂದನದ ಎಳೆದಳಿರ್ಗಳಿಂದ ತೋರಣಗಟ್ಟಿ, ಬಸದಿಗಳನ್ನೆಲ್ಲ ದುಕೂಲದ ಸೂಸಕಗಳಿಂದಲೂ ಮುತ್ತಿನ ರಂಗೋಲಿಗಳಿಂದಲೂ ಚಿನ್ನದ ಕಂಬಗಟ್ಟಿನಿಂದಲೂ ಶೃಂಗಾರ ಮಾಡಿದರು. ಮಾರನೆಯ ದಿವಸ ಊರಲ್ಲೆಲ್ಲ ಉತ್ಸವದ ಹರೆಗಳು, ಶಂಖ ತಮ್ಮಟೆ ಭೇರಿ ರವ, ಸಂಗೀತದ ದನಿ ತುಂಬಿತು. ಊರಿನ ನಾಲ್ಕೂ ದಿಕ್ಕುಗಳಲ್ಲಿ ಮಂಗಳವಾದ್ಯಗಳ ಸದ್ದು ತುಂಬಿಕೊಂಡಿತ್ತು. ಎಲ್ಲೆಡೆಯೂ ರಾಜಕುಮಾರರು, ಮದ್ದಾನೆಗಳೂ, ಹಯಸಂಕುಲವೂ, ವಾರವನಿತೆಯರೂ ಕಾಣಿಸುತ್ತಿದ್ದರು. ಕೈದೀವಿಗೆಗಳೂ, ನೋಟಕಜನರೂ, ರಥಸಂಕುಲ ಹಾಗೂ ಪೂಜಾ ಸಾಮಗ್ರಿಗಳು ಊರಲ್ಲಿ ಎಲ್ಲಿ ನೋಡಿದರೂ ತುಂಬಿಕೊಂಡಿತ್ತು. ಹೀಗೆ ಎಲ್ಲಿ ನೋಡಿದರೂ ಆ ಊರಲ್ಲಿ ಪುಣ್ಯಾಂಗನೆಯರೂ, ಮಂಗಳಶಬ್ದವೂ, ಮಹಾಧ್ವಜಗಳೂ, ಮಣಿವಿತಾನಗಳೂ, ಜಯಧ್ವನಿಯೂ ಹಾಸುಕೊಕ್ಕಾಗಿದ್ದವು. ಹದಿನಾರು ನೆಲೆಯ ಮಣಿಮಾಡದಿಂದ ಒಪ್ಪುವ ರಥದ ಮೇಲೆ ಖೇಚರರು ಇರಿಸಿದ್ದ ಜಿನಮೂರ್ತಿಯನ್ನು ನಲುಮೆಯಿಂದ ಶೃಂಗರಿಸಿದ್ದರು. ಅದರ ನಾಲ್ಕು ದೆಸೆಗಳಲ್ಲಿ ರತ್ನಮಯವಾದ ಚಿನ್ನದ ರಥಗಳಿದ್ದವು; ದೇವಪರ್ವತಗಳನ್ನು ಬೆಳ್ಳಿಯ ಬೆಟ್ಟಗಳು ಸುತ್ತುವರಿದಂತೆ ರಥಸಮೂಹವನ್ನು ಖೇಚರ ರಾಜರ ವಿಮಾನಗಳು ಶೋಭಿಸಿದವು. ಸೂರ್ಯಮಂಡಲವನ್ನು ಆವರಿಸಿದ ಪರಿವೇಷದಂತೆ ಮೊದಲ ಕನಕ ರಥವನ್ನು ವಿಯಚ್ಚರ ಸತಿಯರು ಸುತ್ತುವರಿದಿದ್ದರು. ಕೆಂದಾವರೆಯು ಭೂಮಿಯಿಂದ ಆಕಾಶಕ್ಕೆ ನೆಗೆಯಿತೋ ಎಂಬಂತೆ ರಾಜರುಗಳು ರಥದ ಮೇಲೆ ನಿಂತು ಕೈಮುಗಿಯುತ್ತಿದ್ದರು. ಸುತ್ತಲ ವಿದ್ಯಾಧರ ವಿಮಾನಗಳಾದ ಮೇಲೆ ಗಾಂಧರ್ವರು, ಅವರನಂತರ ಗಜಘಟೆ, ಅದರ ಸುತ್ತ ರಾಜಕುಮಾರರ ಬಳಗ, ಅವರ ಸುತ್ತು ದೇವಕನ್ನಿಕೆಯರಂತಹ ರಾಣಿಗಳ ಸಮೂಹ, ಅದಾದ ಮೇಲೆ ಮೋಡಗಳ ಸಮೂಹ, ಆನಂತರ ಕಡಿತಲೆಗಾರರು, ಅವರಾದ ಮೇಲೆ ಹಿರಿಯ ಹೆಣ್ಣುಗಳ ತಂಡ, ಆಮೇಲೆ ಮಹಾಧ್ವಜಗಳೂ, ಆಮೇಲೆ ಮಣಿವಿತಾನ, ಆನಂತರ ಬಂಗಾರದ ಗುರಾಣಿಗಳು, ಆನಂತರ ಬಲ್ವಡೆ, ಆಮೇಲೆ ಕಟ್ಟೆಗೆಕಾರರು ನಿಂತಿದ್ದರು. ಆನಂತರ ಭಾಸ್ಕರದೇವನ ಅಪ್ಪಣೆಯಂತೆ ರೌದ್ರರೂಪವನ್ನು ಧರಿಸಿ ಖೇಚರನಾಥರು ದೆಸೆಗಳನ್ನು ಅಪ್ಪಳಿಸಿ

ನಿಂತಿದ್ದರು. ಆಗದವರು ಜಿನಪೂಜೆಗೆ ತೊಂದರೆಯನ್ನು ಮಾಡದ ಹಾಗೆ ಅವರು ತಮ್ಮ ಮಹಾದೇಹಗಳಿಂದ ಸುತ್ತಿಕೊಂಡಿದ್ದರು. ಭೂಮಿ, ಆಕಾಶಗಳನ್ನು ಬ್ರಹ್ಮನು ಒಂದು ಮಾಡಿದನೇನೋ ಎಂಬ ಹಾಗೆ ಸನ್ಮಂತ್ರದೇವಿಯರು ನಿರ್ಭಯದಿಂದ ನಿಂತಿದ್ದರು.

ಈ ರೀತಿಯಲ್ಲಿ ಜಂಬೂದ್ವೀಪದ ಖಚರರಾಜನು ಜಿನಮತದ ಹಿರಿಮೆಯನ್ನು ಭವ್ಯಜನರಿಗೆ ತೋರುತ್ತಿರುವನೋ ಎಂಬಂತೆ ನಾನಾ ಅಲಂಕಾರಳಿಂದ ಸುಂದರವಾಗಿದ್ದ ಗಗನತಳವೆಲ್ಲ ವಿಮಾನಗಳಿಂದಲೂ, ಭೂಮಿಯೆಲ್ಲ ರಥಗಳಿಂದಲೂ, ಅಂತರಿಕ್ಷವೆಲ್ಲ ಧ್ವಜಮಯವಾಗಿಯೂ, ದಿಕ್ಕುಗಳೆಲ್ಲ ಜಯನಿನಾದದಿಂದಲೂ ತುಂಬಿದ್ದವು. ದೇವಲೋಕವು ವಿದ್ಯಾಧರಕುಮಾರರೂ, ಖೇಚರಲೋಕವು ರಾಜಕುಮಾರರಿಂದಲೂ, ವ್ಯಂತರಲೋಕವು ವಿದ್ಯಾದೇವತೆ ಗಳಿಂದಲೂ, ಜ್ಯೋತಿರ್ಲೋಕವು ಮಕುಟಬದ್ಧರಿಂದಲೂ ತುಂಬಿದಂತೆ ಸಮವಸರಣವು ಚತುರ್ವರ್ಣದ ಜನಗಳಿಂದ ತುಂಬಿತ್ತು.

ಹೀಗೆ ಭಾಸ್ಕರದೇವನು ಎಂಟು ದಿವಸಗಳ ಕಾಲ ಜಿನ ಮಹಾ ಪೂಜೆಯನ್ನು ಆಚರಿಸಿದನು. ಆನಂತರ ಖೇಚರೇಶ್ವರನು ಭಕ್ತಿಯಿಂದಲೂ ಸಂತೋಷದಿಂದಲೂ ಪಾಪಸಮೂಹವೆಂಬ ಮೋಡಕ್ಕೆ ಗಾಳಿಯಂತಿದ್ದ ಸೋಮದತ್ತ ಮುನಿಯ ಬಳಿ ಹೋಗಿ ಅವನಿಗೆ ವಂದಿಸಿದನು. ಅವರ ಕೃಪೆಯಿಂದ ಜಿನಪೂಜೆಯ ಮಹಾಪುಣ್ಯವು ತನಗೆ ದೊರಕಿತೆಂದು ಹೇಳಿ ಸಕಲಗುಣಗಣ ನಿಲಯೆಯಾದ ಓಹಿಲೆ ಮಹಾದೇವಿಯನ್ನು ಹೊಗಳಿದ. ಆ ಕಮಲಮುಖಿಯು ವಜ್ರಕುಮಾರಮುನಿಯ ಬಳಿ ಬಂದು ಸೂರ್ಯಾಕಾರದ ಜಿನಸ್ತೂಪವನ್ನು ದಯಪಾಲಿಸಬೇಕೆಂದು ಬೇಡಿಕೊಂಡಳು. ಅವಳ ಮಾತಿಗೆ ಎರಡಾಡದೆ ವಜ್ರಮಯವಾದ ಜಿನಪ್ರತಿಮೆಗಳ ಸಾಲಿನಿಂದ ಕೂಡಿದ ಸ್ತೂಪೆಯನ್ನು ದಕ್ಷಿಣ ಮಧುರಾಪುರದಲ್ಲಿರಿಸಿ, ಮನುಷ್ಯರಾರೂ ಅದನ್ನು ಹೊಗಲು ಸಾಧ್ಯವಾಗದಂತೆ ಅದರ ಸುತ್ತಲೂ ಎರಡು ಕ್ರೋಶಗಳ ದೂರ ವಿಗುರ್ವಣೆಯನ್ನು ಮಾಡಿದ ಭಾಸ್ಕರದೇವನು ಅಮರಾವತೀಪುರಕ್ಕೆ ವಾಪಸಾದ. ಇತ್ತ ಓಹಿಲೆ ಮಹಾದೇವಿಯೂ ಸೋಮದತ್ತ ಭಟ್ಟಾರಕರೂ ವಾತ್ಸಲ್ಯರತ್ನಾಕರನಿಗೆ ವಂದಿಸಿ ತಮ್ಮ ಪ್ರತಿಜ್ಞೆಯನ್ನು ಪೂರೈಸಿ ತಮ್ಮ ಮನೆಗೆ ಹೋದರು. "ಭಾಸ್ಕರದೇವನು ಇರಿಸಿದ್ದ ಆ ಸ್ತೂಪೆಗೆ ಈಗಲೂ ಅಷ್ಟಮಿ ಚತುರ್ದಶಿಗಳಂದು ದೇವತೆಗಳು ದುಂದುಭಿಸಮೇತರಾಗಿ ಬಂದು ಪೂಜಿಸುತ್ತಾರೆ. ಆದ್ದರಿಂದ ಶ್ರೇಷ್ಠವಾದ ವಾತ್ಸಲ್ಯವೇ ಭವ್ಯಜನರಿಗೆ ಗುಣಗಣವನ್ನು ಒಳಗೊಳ್ಳುವ ಮನೆ, ಜಗತ್ತಿನಲ್ಲಿ ಅದು ಶಾಶ್ವತಸುಖವನ್ನು ನೀಡುವ ಕಲ್ಪವೃಕ್ಷ" ಎಂದು ಗುಣಧರಸ್ವಾಮಿಗಳು ಕತೆಯನ್ನು ಮುಗಿಸಿದರು. ಕತೆಯನ್ನು ಕೇಳಿ ಪಾಪಕ್ಕೆ ಶತ್ರುವಾದವನೂ, ದುರ್ಗುಣವಿದೂರನೂ, ವಾಗ್ವಧೂವಲ್ಲಭನೂ ಆದ ತ್ರೈವಿದ್ಯಚೂಡಾಮಣಿಯು ಸಂತಸಗೊಂಡ.

ಧರ್ಮಪ್ರಭಾವನೆ

ವಾತ್ಸಲ್ಯವು ಮುಕ್ತಿಲಕ್ಷ್ಮಿಯನ್ನು ಒಲಿಸುವ ದಿವ್ಯೌಷಧ ಎಂಬುದರಲ್ಲಿ ಸಂಶಯವಿಲ್ಲ ಎಂಬ ನಂಬಿಕೆ ಶ್ರೇಣಿಕನಿಗೆ ಉಂಟಾಯಿತು. ಜಗತೀಪೂಜಿತಪದರಾದ ಗೌತಮಮುನಿಗಳನ್ನು ಮಗಧಾವನೀಶ್ವರನು ಅಮೃತವನಿತೆಯ ಆಡುಂಬೊಲವಾದ ಪ್ರಭಾವನೆಯ ಕತೆಯನ್ನು ತನಗೆ ಹೇಳುವಂತೆ ಬೇಡಿಕೊಂಡನು. ಅದಕ್ಕೆ ಗಣಧರಸ್ವಾಮಿಗಳು ಹೀಗೆ ಹೇಳಿದರು: ಮೂಕೊರೆಯನೂ ಕುರುಡನೂ ಕಿವುಡನೂ ಹೆಳವನೂ ಮೋಟನೂ ಶುಭಕಾರ್ಯಕ್ಕಾಗಲೀ ರಾಜಸಭೆಗಾಗಲೀ ಮಂಗಳಕಾರ್ಯಕ್ಕಾಗಲೀ ಸಲ್ಲದಂತೆ ದರ್ಶನದಲ್ಲಿಯೂ ದರ್ಶನದ ಎಂಟು ಅಂಶಗಳಲ್ಲಿಯೂ ಕೊರತೆಯಿಂದಿರುವವನು ಚಕ್ರವರ್ತಿಪದವಿಗಾಗಲೀ ದೇವೇಂದ್ರ ಪದವಿಗಾಗಲೀ ಮಹರ್ಧಿಕಪದವಿಗಾಗಲೀ ಸಲ್ಲಲಾರ. ಮುನಿಯಾಗಲೀ ಶ್ರಾವಕನಾಗಲೀ ಯಾರೇ ಆದರೂ ಶುಭಕರವಾದ ಪ್ರಭಾವನೆಯನ್ನು ಆಚರಿಸಬೇಕು; ಇಲ್ಲದಿದ್ದರೆ ಅವನು ಅನಂತಸುಖ ನಿಲಯನಾಗಲಾರ. ಆದ್ದರಿಂದ ಅದರ ಮಹತ್ವವನ್ನು ತಿಳಿಯಬೇಕು ಎಂದು ಕತೆಯನ್ನು ಹೇಳಲು ತೊಡಗಿದರು.

ಭೂರಮಣಿಯ ಮುಕುರದಂತಿದ್ದ ಕುರುಜಾಂಗಣ ಎಂಬುದು ಒಂದು ಸುಂದರವಾದ ನಾಡು. ಅದರ ರಾಜಧಾನಿ ಹಸ್ತಿನಾಪುರ. ಅದರ ರಾಜ ಮಹಾಪದ್ಮ ಎಂಬ ಮಾಂಡಳಿಕ; ಅವನ ಅರಸಿ ಲಕ್ಷ್ಮೀಮತಿ ಎನ್ನುವವಳು. ಅವರ ಮಕ್ಕಳು ಪದ್ಮ ಮತ್ತು ವಿಷ್ಣುಕುಮಾರ ಎಂಬುವವರು. ಅವರು ರೂಪದಲ್ಲಿ ಮನ್ಮಥನಂತಿದ್ದರು, ಭೋಗದಲ್ಲಿ ಇಂದ್ರಸಮಾನರು: ಆದರೆ ಜಿನಪಾದಕಮಲಭೃಂಗರು; ಉದಾತ್ತ ಹೃದಯರು, ಶತ್ರುಭಯಂಕರರು. ಅವರು ದೃಢಚಿತ್ತರೂ, ಪರ್ವತದಂತೆ ಕ್ಷಮಾಗುಣವುಳ್ಳವರೂ, ಶಾಸ್ತ್ರವಿದ್ಯೆಗಳಲ್ಲಿ ಮಹಾ ಪರಿಣತರೂ ಆಗಿದ್ದರು. ಮಕ್ಕಳ ಚೆಲುವನ್ನು ನೋಡುತ್ತಲೂ, ಪರಮಾಂಡಳಿಕರು ಹಾಗೂ ಪ್ರತಾಪಿಗಳನ್ನು ಅಲ್ಲಾಡಿಸುತ್ತಲೂ, ಚರಿತೆಪುರಾಣಗಳನ್ನು ಕೇಳುತ್ತಲೂ, ಪರನೃಪರು ಮತ್ತು ಕುದೃಷ್ಟಿಗಳನ್ನು ಸೋಲಿಸುತ್ತಲೂ, ಸದ್ಧರ್ಮವನ್ನೂ ಭವ್ಯಜನರನ್ನು ಪರಿಪಾಲಿಸುತ್ತಲೂ ರಾಜರಾಣಿಯರಿದ್ದರು. ಹೀಗೆ ಪದ್ಮ ಮಹಾರಾಜನು ಸುಖಸಂಕಥಾವಿನೋದದಲ್ಲಿ ರಾಜ್ಯವನ್ನು ಪಾಲಿಸುತ್ತಲಿದ್ದ.

ಶ್ರುತಸಾಗರಾಚಾರ್ಯರು ಒಮ್ಮೆ ತಮ್ಮ ಐನೂರು ಮಂದಿ ಮುನಿಶಿಷ್ಯರ ಸಮೇತ ವಿಹರಿಸುತ್ತ ಹಸ್ತಿನಾಪುರಕ್ಕೆ ಬಂದು ಊರ ಹೊರಗಣ ಉದ್ಯಾನದಲ್ಲಿ ಬೀಡು ಬಿಟ್ಟಿದ್ದರು. ತನಗೆ ಹೊಸ ರಾಜ್ಯವೇ ಸಿಕ್ಕಿತೇನೋ ಎಂಬ ಉತ್ಸಾಹದಿಂದ ಋಷಿನಿವೇದಕನು ಅರಮನೆಗೆ ಬಂದು ಆ ವಿಷಯವನ್ನು ರಾಜಕುಮಾರರ ನಡುವೆ ಕುಳಿತಿದ್ದ ಮಹಾಪದ್ಮ ಮಹಾರಾಜನಿಗೆ ಕೈಮುಗಿದು ಹೀಗೆ ಬಿನ್ನವಿಸಿದನು: "ದ್ವಾದಶತಪಗಳೇ ಆದರದಿಂದ ಮೂರ್ತಗೊಂಡು ನಮ್ಮ ಪುಣ್ಯೋದಯದಿಂದ ಬಂದಂತೆ ಶ್ರುತಸಾಗರ ದಿವ್ಯಮುನಿಗಳು ಐನೂರು ಮಂದಿ ಮುನಿಜನ ಸಮೇತ ಬಂದಿದ್ದಾರೆ." ಈ ಸಮಾಚಾರವನ್ನು ಕೇಳಿದ ರಾಜನು ಋಷಿನಿವೇದಕನಿಗೆ ಪಾರಿತೋಷಕವನ್ನು ಕೊಟ್ಟು, ಋಷಿಗಳಿದ್ದ ದಿಕ್ಕಿನಲ್ಲಿ ಭಕ್ತಿಯಿಂದ ಏಳು ಅಡಿಗಳನ್ನಿಟ್ಟು ಆನಂದಭೇರಿಯನ್ನು ಹೊಡೆಸಿದ. ಸಮುದ್ರಘೋಷದಂತಹ ಆ ಶಬ್ದವನ್ನು ಕೇಳಿ ಶ್ರಾವಕರೂ ರಾಜಪರಿವಾರವೂ ಅನೇಕ ರಾಜರೂ ಸಂಭ್ರಮದಿಂದ ತಕ್ಷಣ ನಾನಾ ಬಗೆಯ ಪೂಜಾಸಾಮಗ್ರಿಗಳೊಡನೆ ಅರಮನೆಯ ಬಳಿ ಬಂದು ಸೇರಿದರು. ಮಹಾಪದ್ಮ ಮಹಾರಾಜ, ಅವನ ಅಂತಃಪುರಸ್ತ್ರೀಯರು, ಪದ್ಮ, ವಿಷ್ಣುಕುಮಾರರ ಜೊತೆಯಲ್ಲಿ ಅವರೆಲ್ಲರೂ ಕಾಲ್ನಡಿಗೆಯಿಂದ ಹೊರಟರು. ಹಂಸಗಳು ಕಮಲವನಕ್ಕೆ ಬರುವಂತೆ, ಮೇರುಗಿರಿಯನ್ನು ಪ್ರದಕ್ಷಿಣೆಗೈವ ಚಂದ್ರಸೂರ್ಯರಂತೆ ಅವರು ಮುನಿವೃಂದಾರಕರನ್ನು ತ್ರಿಃಪ್ರದಕ್ಷಿಣೆಗೈದರು. ಭಕ್ತಿಭಾವದಿಂದ ಶ್ರುತಸಾಗರ ಮುನೀಂದ್ರರ ಪಾದಪದ್ಮಗಳನ್ನು ಅರ್ಚಿಸಿ ವಂದಿಸಿ ಕೈಮುಗಿದು ಕುಳಿತುಕೊಂಡರು.

ಅವರ ಬಾಯಿಂದ ಕೊಲೆಯನ್ನು ಸಹಿಸದ, ಮೋಕ್ಷಲಕ್ಷ್ಮಿಯ ಸೊಬಗು ಎನ್ನಿಸುವ, ಪಾಪಹೇತುಗಳಿಗಾಗಿ ಹಂಬಲಿಸದ, ಮಿಥ್ಯಾವಚನಕ್ಕೆ ಬೇಸರಗೊಳ್ಳುವ ಜಿನಧರ್ಮದ ಬಗ್ಗೆ ಮುಕ್ತಮನರಾಗಿ ಧರ್ಮಶ್ರವಣವನ್ನು ಕೇಳಿದರು. ಅದನ್ನು ಕೇಳಿದ ರಾಜನಿಗೆ ಸಂಸಾರದ ಬಗ್ಗೆ ಬೇಸರವೆನಿಸಿತು; ಪಂಚೇಂದ್ರಿಯಗಳೆಂಬ ಮದ್ದಾನೆಗಳನ್ನು ನಿಗ್ರಹಿಸಲು ನಿರ್ಧರಿಸಿದ; ಮೋಹವೃಕ್ಷದ ಬೇರುಗಳನ್ನು ಕಿತ್ತು ಆಕಾಶಕ್ಕೆಸೆಯಲು ಮನಸ್ಸು ಮಾಡಿದ; ಮನಃಕಷಾಯಗಳನ್ನು ಧ್ವಂಸ ಮಾಡಲು ಮನದಂದ. ಆನಂತರ ತನ್ನ ಮನಸ್ಸಿನಲ್ಲಿ ಈ ರೀತಿಯ ಆಲೋಚನೆಗಳು ಬಂದವು; ಮಂಜಿನ ನೀರನ್ನು ನಂಬಿ ಬಿತ್ತನೆ ಮಾಡುವವನೂ, ಸಿಂಹವನ್ನು ಬಿಡದೆ ಎದುರಿಸುತ್ತೇನೆ ಎನ್ನುವವನೂ, ಭಾರಿ ಪ್ರವಾಹವನ್ನು ಅಂಗೈಗಳಿಂದ ತಡೆದು ನಿಲ್ಲಿಸುವೆನೆಂಬುವವನೂ, ಕೇಡಿನೊಡನೆ ತಗುಳ್ಚಿಕೊಂಡಿರುವ ರಾಜ್ಯವನ್ನು ಬಯಸುವವನೂ ಮರುಳನಲ್ಲದೇ ಬೇರೇನು? ಬೂದಿಯಾದ ಪುಳ್ಳಿಯಂತೆ, ಹಿಂಡಿಯಾದ ಎಳ್ಳಿನಂತೆ, ಹೊಟ್ಟೆಯನ್ನು ಸೇರಿದ ಅನ್ನದಂತೆ, ರಸ ಹಿಂಡಿದ ಕಬ್ಬಿನಂತೆ, ಹೇಡಿ ರಾಜನ ಮಾತಿನಂತೆ, ಬೇಸಗೆಯ ಮೋಡದಂತೆ, ಬರಗಾಲದ ಬೆಳೆಯಂತೆ ಧರ್ಮಮಾರ್ಗದಲ್ಲಿ ಹೋಗಗೊಡದ ತಾಯ್ತಂದೆಯರನ್ನೂ, ನೋವುಸಾವುಗಳು ಬಂದಾಗ ಸುಮ್ಮನೆ ನೋಡುವ ನಂಟರನ್ನೂ, ಮಮ್ಮಲ ಮರುಗಿಸುವ ಮಕ್ಕಳನ್ನೂ, ಸುಮ್ಮನೆ ತಿರುಗುವ ಬಾಳನ್ನೂ ನಂಬಿಕೊಂಡು ಭೋಗಾಕಾಂಕ್ಷೆಯಿಂದ ಇದ್ದರೆ, ನೆರಮನೆಯ ಬೆಂಕಿಯನ್ನೂ, ಅಟ್ಟಿಸಿಕೊಂಡು ಬರುವ ಹುಲಿಯನ್ನೂ ನಂಬಿದಂತೆ ಎಂದು ಮನಸ್ಸಿನಲ್ಲಿಯೇ ಅವನಿಗೆ ನಗು ಬಂತು. ಅವನ ಮನಸ್ಸಿನಲ್ಲಿ ರಾಜ್ಯದ ಬಗ್ಗೆ ಹೇಸಿಕೆಯುಂಟಾಯಿತು. ಹಾಗಾಗಿ ಪದ್ಮ ಮತ್ತು ವಿಷ್ಣುಕುಮಾರರನ್ನೂ ಪ್ರಧಾನರನ್ನೂ ಬರಹೇಳಿದ ರಾಜನು ಹೀಗೆಂದ: "ಧರ್ಮದ ಫಲದಿಂದ ಇದುವರೆಗೂ ನಾನು ರಾಜ್ಯವನ್ನು ಆಳಿದೆ; ಇನ್ನೂ ಆಸೆಯಿಂದ ಕೂಡಿದ್ದರೆ ಸರಿಯಾಗದು, ಬೀಜ ತಿಂದ ಹಾಗಾಗುತ್ತದೆ. ಬೀಜದಿಂದ ಬೆಳೆ ತೆಗೆಯುವ ಒಕ್ಕಲಿಗನು ಮುಂದಿನ ಬಿತ್ತನೆಗೆ ಬೀಜವನ್ನು ತೆಗೆದಿಡುವಂತೆ, ಹಿಂದೆ ಮಾಡಿದ ತಪಸ್ಸಿನ ಫಲವನ್ನು ಬಿಡದೆ ಮುಂದುವರೆಸಬೇಕು. ಆದ್ದರಿಂದ ಇದುವರೆಗೆ ಸಂಸಾರಸುಖವನ್ನೇ ಮಹಾ ಎಂದು ನಂಬಿ ಪರತ್ರೆಯನ್ನು ಬಿಟ್ಟು ಕೆಟ್ಟೆ. ಶಾಶ್ವತಸುಖವನ್ನು ನೀಡುವ ಜಿನರೂಪವನ್ನು ತಾಳುವ ಮುಹೂರ್ತ ಇಂದು ಬಂದಿದೆ" ಎಂದು ತನ್ನ ಮನಸ್ಸಿನ ಇಂಗಿತವನ್ನು ತಿಳಿಸಿದ. ಅದರಂತೆ ಪದ್ಮನಿಗೆ ಪಟ್ಟವನ್ನು ಕಟ್ಟಿ ರಾಜ್ಯದ ಆಡಳಿತವನ್ನು ಅವನಿಗೊಪ್ಪಿಸಿದ. ಅಂತೆಯೇ ಸಮ್ಯಕ್ತ್ವಚೂಡಾಮಣಿಯಾದ ವಿಷ್ಣುಕುಮಾರನಿಗೆ ಯುವರಾಜಪದವಿಯನ್ನು ನೀಡಲು ಅವನು, "ರಾಜ್ಯವು ಒಳ್ಳೆಯದಾಗಿದ್ದರೆ ನೀವೇಕೆ ಅದನ್ನು ಬಿಡುತ್ತಿದ್ದಿರಿ? ನೀವು ಆಗುವಂತೆ ನಾನೂ ಆಗುತ್ತೇನೆ. ಹೀನ ಸುಖ ನನಗೂ ಬೇಡ. ದೇಹವು ಒಳ್ಳೆಯದಾಗಿದ್ದರೆ ತಾವೇಕೆ ತಪಸ್ಸನ್ನು ಕೈಗೊಳ್ಳುತ್ತಿದ್ದಿರಿ? ಗೆಳೆಯರು, ಹೆಂಡಿರು, ವೈಭವ, ಐಸಿರಿ, ಸೈನ್ಯ ಇವುಗಳಿರುವ ಭೂಮಿಯನ್ನು ನೀವೇಕೆ ಬಿಟ್ಟಿರಿ? ನಾನು ದಡ್ಡನೂ ಅಲ್ಲ, ಚಿಕ್ಕವನೂ ಅಲ್ಲ. ನನಗೆ ಇಂಥ ಮಾತುಗಳನ್ನು ಹೇಳಬೇಡಿ. 'ರಾಜನ ಓಲಗ ಒಳ್ಳೆಯದು, ಆದರೆ ಕಾಳಗ ಕಷ್ಟ' ಎಂಬ ಹಾಗೆ ಚಂಚಲಚಿತ್ತನಿಗೂ, ದೂರದರ್ಶಿಯಲ್ಲದವನಿಗೂ, ಮಿಥ್ಯಾತ್ವದಿಂದ ಕೂಡಿದವನಿಗೂ ಸಂಸಾರಸುಖವು ದೊಡ್ಡದಾಗಿ ಕಾಣುತ್ತದೆ. ಆದರೆ ಅದರಿಂದ ಆನಂತರ ಒದಗುವ ನರಕದುಃಖಕ್ಕೆ ಈಡಾಗಬಾರದುದರಿಂದ, ದೇವರೇ, ನನಗೆ ರಾಜ್ಯದ ಮೇಲೆ ಎಳ್ಳನಿತೂ ಮೋಹವಿಲ್ಲ" ಎಂದು ಖಂಡಿತವಾಗಿ ನುಡಿದ.

ಮಗನ ಮಾತನ್ನು ಕೇಳಿ ಮಹಾಪದ್ಮರಾಜನಿಗೆ ಬೆರಗಾಯಿತು. ತಿರುಪೆಯವನಿಗೆ ತೊವ್ವೆ ತುಪ್ಪ ದೊರೆತರೆ ನಲಿಯುವ ರೀತಿಯಲ್ಲಿ ಸುಖವನ್ನೇ ಕಾಣದೆ ರೌರವದಿಂದ ಬಂದವನಿಗೆ ಸಿರಿಯಲ್ಲಿ ಮೋಹವುಂಟಾತ್ತದೆ. ಆದರೆ ಸಪ್ತಸಮುದ್ರಪರ್ಯಂತವಾದ ಧಾತ್ರಿಯನ್ನು ಹೊತ್ತಂತೆ ಅಪಕೀರ್ತಿಯುಂಟಾದರೆ ತನ್ನ ಹೆಚ್ಚುಗಾರಿಕೆಯಿಂದ ಹಿರಿದೆನಿಸುವುದಿಲ್ಲ; ಅಂತೆಯೇ ಸುರಲೋಕದಲ್ಲಿ ಸುಖವುಂಡು ಬಂದವನಿಗೆ ಈ ಸುಖವು ಯಾವ ಮಹಾ ಎಂದೂ ಅನ್ನಿಸಿತು. ಆದ್ದರಿಂದ ಇವನು ಸಾಮಾನ್ಯ ಮನುಷ್ಯನಲ್ಲ ಎನ್ನಿಸಿ ಸಂತೋಷವಾಯಿತು. ಬಿಟ್ಟಿ ಕಲ್ಲು ಹೊತ್ತವನು ಅದನ್ನು ಬಿಸಾಡುವಂತೆ ರಾಜ್ಯಭಾರವನ್ನು ಈಡಾಡಿ, ಪಂಚೇಂದ್ರಿಯಸುಖವನ್ನು ಶತ್ರುವಿನಂತೆ ಕಾಣುತ್ತ, ಮಹಾ ಸಂಪತ್ತನ್ನು

ಹುಲ್ಲುಕಡ್ಡಿಯಂತೆ ಪರಿಗಣಿಸಿ ಮಹಾಪದ್ಮನು ವಿಷ್ಣುಕುಮಾರನೊಡನೆ ಶ್ರುತಸಾಗರ ಮುನೀಶ್ವರರ ಬಳಿ ಜಿನದೀಕ್ಷೆಯನ್ನು ಕೈಗೊಂಡ. ಮುಕ್ತಿಶ್ರೀಕಂಠಾಭರಣವೆನಿಸುವ ಪರಮಾಗಮಗಳನ್ನು ಓದಿ, ಹಲವು ಕಾಲ ಗುರುಪಾದ ಸೇವೆಯಲ್ಲಿ ನಿರತನಾಗಿದ್ದ. ಆನಂತರ ಗುರುಗಳ ಆಜ್ಞೆಯಂತೆ ತಂದೆ ಮಗ ಇಬ್ಬರೂ ಬೇರೆ ಬೇರೆ ಕಡೆ ಘೋರ ಅರಣ್ಯಕ್ಕೆ ನಡೆದು ತಪಸ್ಸಿನಲ್ಲಿ ತೊಡಗಿದರು. ಮಹಾಪದ್ಮ ಮುನಿಯು ಅಷ್ಟಾಪದಗಿರಿಯಲ್ಲಿ ಕರ್ಮಕ್ಷಯವನ್ನು ಮಾಡಿಕೊಂಡು ಸುಗತಿಲಕ್ಷ್ಮಿಯನ್ನು ಸೇರಿದ. ವಿಷ್ಣುಕುಮಾರ ಮುನೀಶ್ವರನು ತಪಸ್ಸಿನಲ್ಲಿ ಅನುರಕ್ತನಾಗಿದ್ದ.

ಇತ್ತ ಪದ್ಮ ಭೂಪತಿಯು ಬುವಿಯನ್ನು 'ಜೀಯ' ಎನ್ನುವಂತೆ ಕೈವಶ ಮಾಡಿಕೊಂಡು, ಜ್ಞಾನಿಗಳನ್ನೂ ಶಿಷ್ಟೇಷ್ವರನ್ನೂ ಮನ್ನಿಸುತ್ತಲೂ, ಶತ್ರುರಾಜರ ಗರ್ವವನ್ನು ಅಡಗಿಸುತ್ತಲೂ, ಸದ್ಧರ್ಮವನ್ನು ಪಾಲಿಸುತ್ತಲೂ, ರಾಜನೀತಿಯಲ್ಲಿ ಇವನಿಗೆ ಸಮಾನರಿಲ್ಲ ಎನ್ನುವಂತೆ ಆಡಳಿತ ನಡೆಸುತ್ತಿದ್ದ. ಇತ್ತ, ಅವಂತಿ ವಿಷಯದ ಉಜ್ಜಯಿನಿ ಪುರವನ್ನು ಜಯವರ್ಮ ಮಹಾರಾಜನೆಂಬ ಅರಸನು ಆಳುತ್ತಿದ್ದ; ಅವನ ಮಂತ್ರಿ ಬಲಿ ಎನ್ನುವವನು. ಆ ಮಂತ್ರಿಯ ಒಡಹುಟ್ಟಿದವರೆಂದರೆ ಶುಕ್ರ, ಬೃಹಸ್ಪತಿ ಮತ್ತು ಪ್ರಹ್ಲಾದ ಎಂಬುವವರು. ಅವರೆಲ್ಲ ತುಂಬ ಬುದ್ಧಿವಂತರು; ವೇದಶಾಸ್ತ್ರಪ್ರವೀಣರು. ಇವರೊಡನೆ ಬಲಿ ಸುಖವಾಗಿದ್ದ.

ಪರಮತಪೋಧನರೂ ದುರ್ಧರಚರಿತರೂ ಕಾಲಜಲಧಿಬಡಬಾನಲರೂ ಪೂಜ್ಯರೂ ಸಕಲಮುನಿಗಣವಂದ್ಯರೂ ಆದ ಆಕಂಪನಾಚಾರ್ಯರು ತಮ್ಮ ಐನೂರು ಮಂದಿ ಶಿಷ್ಯರ ಸಮೇತ ವಿಹಾರದಲ್ಲಿ ತೊಡಗಿದ್ದು ಒಮ್ಮೆ ಉಜ್ಜಯಿನಿಗೆ ದಯಮಾಡಿಸಿದರು. ಬಂದವರು ಊರಿನ ಹೊರವಲಯದಲ್ಲಿದ್ದ ಉದ್ಯಾನವನದಲ್ಲಿ ಬೀಡುಬಿಟ್ಟರು. ಊರಿನ ಶ್ರಾವಕರೆಲ್ಲ ವೈಭವಯುತ ಭೂವಲಯವೇ ತಮಗೆ ದೊರೆಕೊಂಡಂತೆ ತುಂಬ ಸಂತೊಷದಿಂದ ಪೂಜಾಸಾಮಗ್ರಿಯ ಸಮೇತ, ಅವರ ವಾಗ್ವೃಷ್ಟಿಯಿಂದ ತಮ್ಮ ಪಾಪವೆಂಬ ಕೊಳೆಯನ್ನು ತೊಳೆದುಕೊಳ್ಳುವವರಂತೆ. ದಿವ್ಯಮುನಿಗಳ ದರ್ಶನ ಪಡೆದರು. ಮುನಿಗಳ ದರ್ಶನಕ್ಕೆಂದು ಹೋಗುವ ಜನಗಳ ಜಯಘೋಷವು ಜಯವರ್ಮ ಮಹಾರಾಜನಿಗೆ ಕೇಳಿಸಿತು. ಆ ಸಮಯದಲ್ಲಿ ಅವನು ತನ್ನ ಅರಮನೆಯ ಮಾಡದ ಮೇಲಿದ್ದ. ಸುತ್ತಲೂ ನೋಡಿ ಇವರೆಲ್ಲ ಪೂಜಾವಸ್ತುಗಳೊಡನೆ ಎಲ್ಲಿಗೆ ಹೋಗುತ್ತಿರುವರೆಂದು ಬಳಿಯಿದ್ದವರನ್ನು ವಿಚಾರಿಸಿದ. ಅಷ್ಟರಲ್ಲಿ ಋಷಿನಿವೇದಕನು ಅಲ್ಲಿಗೆ ಬಂದು ನಮಸ್ಕರಿಸಿ ತಮ್ಮ ಊರಿಗೆ ಶ್ರುತವಾರಾಶಿಗಳಾದ ಆಕಂಪನ ಮುನಿವರ್ಯರು ತಮ್ಮ ಐನೂರು ಮಂದಿ ಶಿಷ್ಯಗಣದೊಡನೆ ಬಂದಿರುವ ವಿಷಯವನ್ನು ನಿವೇದಿಸಿದ.

ಅದನ್ನು ಕೇಳಿದ ರಾಜನು ಮುನಿಗಳಿದ್ದ ದಿಕ್ಕಿನಲ್ಲಿ ಏಳು ಅಡಿಗಳನ್ನಿಟ್ಟು ನಿವೇದಕನಿಗೆ ಮೆಚ್ಚು ಕೊಟ್ಟ. ಪಕ್ಕದಲ್ಲಿದ್ದ ಬಲಿಯ ಕಡೆ ತಿರುಗಿ, "ನಮ್ಮ ಮನಸ್ಸಿನಲ್ಲಿ ಮನೆ ಮಾಡಿಕೊಂಡಿರುವ ಸಂಶಯಗಳನ್ನೆಲ್ಲ ಮುನಿಪುಂಗವರಲ್ಲಿ ಬಿನ್ನವಿಸಿಕೊಂಡು ಅವುಗಳನ್ನು ನಿವಾರಿಸಿಕೊಳ್ಳೋಣ" ಎಂದು ಹೇಳಿದ. ಅದಕ್ಕೆ ಬಲಿಯು, "ತಾನು ಮಾಡಿದ ಕರ್ಮವನ್ನು ಜೀವವು ಅನೇಕ ಜನ್ಮಗಳಲ್ಲಿ ಅನುಭವಿಸುತ್ತದೆಂಬ ಮಾತನ್ನು ನಂಬಿ ಮೂರ್ಖರಾಗಬೇಡಿ. ಪರಲೋಕವನ್ನು ಕಂಡವರು ಯಾರು; ಸತ್ತವರನ್ನು ಮತ್ತೆ ನೋಡಿದವರಾರು? ಬೆತ್ತಲಿಗರ ಮಾತು ಕೇಳಿ ಜೀವ, ಪರಗತಿ ಧರ್ಮ ಮುಂತಾದವುಗಳನ್ನು ನಂಬಬೇಡಿ. ಜೀವ ಮುಂದುವರಿಯುತ್ತದೆ, ಅದಕ್ಕೆ ಶುಭಾಶುಭ ಕರ್ಮವಿದೆ, ಅದರ ಫಲವೂ ಇದೆ, ಅದನ್ನು ಮರುಜನ್ಮದಲ್ಲಿ ತಾನೇ ಅನುಭವಿಸುತ್ತದೆ; ಸ್ವರ್ಗನರಕಗಳಿವೆ ಎಂಬುದೆಲ್ಲಕ್ಕೂ ಸಾಕ್ಷಿಯಾದವರು ಎಲ್ಲಿದ್ದಾರೆ? ಇದು ಗಾಳಿಯನ್ನು ಗಂಟು ಹಾಕುವ ಮಾಯಾ ವ್ಯವಹಾರ. ಪರಲೋಕವುಂಟೆಂದು ನಂಬಿ ಮರುಳಾಗಿ ದೇಹವನ್ನು ವೃಥಾ ತಪಸ್ಸಿನಲ್ಲಿ ಕೆಡಿಸಿಕೊಳ್ಳುವ ಎಗ್ಗ ಋಷಿಗಳ ಮಾತನ್ನು ನಂಬಿ ತಮ್ಮ ರಾಜ್ಯಭೋಗಗಳನ್ನು ಹಾಳು ಮಾಡಿಕೊಳ್ಳಬೇಡಿ" ಎಂದು ಎಚ್ಚರಿಸಿದ.

ಅವನ ಮಾತನ್ನು ಕೇಳಿದ ಮಹಾರಾಜನಿಗೆ ತುಂಬ ಕೋಪ ಬಂತು. "ಸೂರ್ಯೋದಯವಾಗುವ ಮುನ್ನ ಚಂದ್ರಬಿಂಬವು ಬೆಳಕು ಬೀರುತ್ತದೆ; ಸೂರ್ಯ ಹುಟ್ಟಿದ ಮೇಲೆ ಅದರ ಹೊಳಪು ಉಳಿಯುತ್ತದೆಯೇ? ಹಾಗೆಯೇ ಕುವಾದಿಯಾದ ನಿನ್ನಂತಹ ಧೂರ್ತರು ಮಹಾವಾದಿಗಳಿಲ್ಲದಿರುವಾಗ ಸೊಕ್ಕಿ ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಮಹಾವಾದಿಗಳ

ಮುಂದೆ ಕೇದಗೆಯನ್ನು ಏರಿದ ಕೋತಿಯಂತೆ ನೋವಾದರೂ ಮುದುಡಿಕೊಳ್ಳುತ್ತಾರೆ. ನನ್ನ ಮುಂದೆ ಬಾಯಿಗೆ ಬಂದುದನ್ನು ಗಳಹಬೇಡ" ಎಂದು ಗದ್ದರಿಸಿದ. ಅದಕ್ಕೆ ಪ್ರತಿಯಾಗಿ ಬಲಿಯು "ಮಹಾರಾಜರೇ ಅವಧಾರಿಸಿ, ನಿಮ್ಮ ನಚ್ಚಿನ ಋಷಿಗಳು ವಿದ್ಯೆಯಲ್ಲಿ ನನ್ನನ್ನು ಸೋಲಿಸಬಲ್ಲಿರಾದರೆ ಅವರೇ ಭೂಲೋಕದ ದೇವರೆಂದು ಒಪ್ಪುತ್ತೇನೆ" ಎಂದು ಸವಾಲು ಒಡ್ಡಿದ. ಅವನ ಅನಾಚಾರವನ್ನು ರಾಜ ಸೈರಿಸದಾದ; ಇವನ ವಿದ್ಯಾಗರ್ವವನ್ನು ನಾಶಮಾಡಬೇಕು ಎಂದು ನಿರ್ಧರಿಸಿದ. ಅವನ ಕೈಹಿಡಿದುಕೊಂಡು, ರಾಜಕುಮಾರರಗಳು ಮತ್ತು ಅಂತಃಪುರಸ್ತ್ರೀಯರೊಡನೆ ಕಾಲು ನಡಿಗೆಯಿಂದ ಆಕಂಪನಾಚಾರ್ಯರ ಬಳಿಗೆ ಬಂದ.

ಋಷಿಗಳಿಗೆ ಮೂರು ಬಾರಿ ಪ್ರದಕ್ಷಿಣೆ ಹಾಕಿದ ರಾಜನು ಅವರ ಪಾದಕಮಲಗಳನ್ನು ನಾನಾ ವಿಧವಾಗಿ ಅರ್ಚಿಸಿದ. ಅಂತೆಯೇ ಇತರ ಮುನಿಗಳನ್ನೂ ಗೌರವಿಸಿ, ಅವರ ಮುಂದೆ ಕುಳಿತ. "ನೀತಿಅನೀತಿಯಾಗಲೀ ಪಾಪಪುಣ್ಯಗಳಾಗಲೀ ಇಹಪರಗಳಾಗಲೀ ಜೀವಾತ್ಮಗಳಾಗೀ ಇಲ್ಲ ಎಂದು ಕೆಲವರು ಅಜ್ಞಾನದಿಂದ ಬಾಯಿಗೆ ಬಂದಂತೆ ನುಡಿಯುತ್ತಾರೆ. ಈ ವಿಷಯವಾಗಿ ನನಗೆ ಸಂದೇಹವಿದೆ. ವಿದಗ್ಧಜನವಂದಿತರಾದ ತಾವು ಜೈನೋಕ್ತಿಯಿಂದ ಈ ಶಂಕೆಯನ್ನು ಪರಿಹರಿಸಬೇಕು" ಹೀಗೆಂದು ರಾಜನು ಮೋಕ್ಷಕ್ಕೆ ಏಣಿಯಂತಿರುವ ಜಿನೇಂದ್ರಧರ್ಮದ ಬಗ್ಗೆ ಉಪಾಯದಿಂದ ಪ್ರಶ್ನೆ ಕೇಳಿದ.

ಸಮುದ್ರಘೋಷದಂತಹ ತಮ್ಮ ನುಡಿಗಳಿಂದ ಮುನಿಗಳು ಜೈನಾಗಮೋಕ್ತಿಗಳಿಂದಲೇ ಅದಕ್ಕೆ ಹೀಗೆಂದು ಉತ್ತರಿಸಿದರು; "ನೀತಿಯಿಲ್ಲವೆಂದರೆ, ಹೆಂಡತಿಯ ಮೇಲಿನ ಮೋಹ ತಂಗಿಯ ಮೇಲೆ ಅಥವಾ ತಾಯಿಯ ಮೇಲೆ ಏಕೆ ಉಂಟಾಗದು? ನೀತಿ ಇದೆಯೋ ಇಲ್ಲವೋ ಎಂಬುದಕ್ಕೆ ಇದೇ ಪರೀಕ್ಷೆ. ಅಲ್ಲದೆ, ಸೂಳೆಯ ಜೊತೆ ಎಷ್ಟು ಕಾಲವಿದ್ದರೂ ಮಿಂಡ ಎನ್ನುತ್ತಾರೆಯೇ ವಿನಾ ಬೇರೆಯಲ್ಲ; ಯಾರಾದರೂ ಕರ್ಮವಶದಿಂದ ತಾಯಿಯೊಡನೆಯೋ ತಂದೆಯೊಡನೆಯೋ ಕೂಡಿದರೆ ಕೊಲೆ ಮುಟ್ಟುಗೋಲುಗಳಿಗೆ ಒಳಗಾಗುತ್ತಾರೆ. ಆದ್ದರಿಂದ ನೀತಿ ಇದೆ ಎಂಬುದರಲ್ಲಿ ಸಂಶಯವೇ ಇಲ್ಲ. ಅಂದಣವನ್ನೇರಿ ಮನುಷ್ಯರ ನಡುವೆ ಬರುವವರನ್ನು ಕಂಡು 'ಇದು ಈತನ ಹಿಂದಿನ ಜನ್ಮದ ಪುಣ್ಯದ ಫಲ' ಎಂದು ಜನರು ಹೇಳುತ್ತಾರೆ. ಎರಡೂ ಬದಿಗಳಲ್ಲಿ ತರುಣಿಯರು ಚಾಮರವಿಕ್ಕುತ್ತಿರಲು, ಕುದುರೆ ಆನೆಗಳ ಸಮೂಹದ ನಡುವೆ ಇಂದ್ರನ ವೈಭವದಿಂದ ಬರಲು 'ಅವರು ಹಿಂದಿನ ಹುಟ್ಟಿನಲ್ಲಿ ಮಾಡಿದ ಪುಣ್ಯಫಲದಿಂದ ಈ ಸಿರಿ ದೊರೆತಿದೆ' ಎಂದು ಜನರೆನ್ನುತ್ತಾರೆ. ಆದ್ದರಿಂದ ಪುಣ್ಯ ಎಂಬುದು ಇದೆಯೆಂದು ತಿಳಿಯಬೇಕು. ಅಲ್ಲದೆ, ಸುಂದರರಾದವರನ್ನೂ, ಸಿರಿಯಲ್ಲಿ ವಿಲಾಸದಲ್ಲಿ ಅಧಿಕರಾಗಿರುವವರನ್ನೂ, ಸುಭಗರೂ ಆಭರಣಭೂಷಿತರೂ ಆದವರನ್ನೂ, ನಿರೋಗಿಗಳನ್ನೂ ದಿವ್ಯಾಹಾರವನ್ನುಣ್ಣುವವರನ್ನೂ, ದಿವ್ಯವಸ್ತ್ರಗಳನ್ನು ಉಡುವವರನ್ನೂ, ಸುಖಿಗಳನ್ನೂ ಕಂಡರೆ 'ಇದೆಲ್ಲ ಹಿಂದಿನ ಜನ್ಮದಲ್ಲಿ ಮಾಡಿದ ದಾನ, ತಪಸ್ಸುಗಳ ಫಲ' ಎಂದು ಜನ ನುಡಿಯುತ್ತಾರೆ. ಆದ್ದರಿಂದ ಧರ್ಮ ಇದೆಯೆಂದು ತಿಳಿಯಬೇಕು. ಕುರುಡರು ಕುಂಟರು ತಿರುಕರನ್ನು ಕಂಡರೆ 'ಇವರಿಗೆ ಹಿಂದಿನ ಪಾಪದಿಂದ ಹೀಗಾಗಿದೆ' ಎಂದು ನರರು ನುಡಿಯುತ್ತಾರೆ. ಇದರಿಂದ ಪಾಪ ಎಂಬುದು ಇದೆ ಎಂದು ಅರಿಯಬೇಕು. ತುಂಬ ಹೆಚ್ಚಿನ ನೋವಿನಿಂದ ಕೂಗುತ್ತ, ಹೆದರಿಕೆಯಿಂದ ಬೆಚ್ಚುತ್ತ ಇರುವ ಕೊಲೆಗಡುಕರನ್ನು ಕೈಕಟ್ಟಿ ಒಯ್ಯುವುದನ್ನು ಕಂಡರೆ ಜನರು 'ಇದು ಹಿಂದಿನ ಜನ್ಮಗಳಲ್ಲಿ ಕೂಡಿಟ್ಟುಕೊಂಡ ಪಾಪದ ಫಲ' ಎಂದು ಕೊಕ್ಕರಿಸಿ ಹೇಳುತ್ತಾರೆ. ಇದರಿಂದ ಪಾಪ ಎಂಬುದಿದೆ ಎಂಬುದು ಸ್ಪಷ್ಟ. ಅದೂ ಅಲ್ಲದೆ, ಸೆರೆಯಾಗಿ ಹುಯ್ಯಲಿಡುವವರನ್ನೂ ತಿನ್ನಲು ಇಲ್ಲದಿರುವವರನ್ನೂ ಕುರೂಪಿಗಳನ್ನೂ ಹೇಡಿಗಳನ್ನೂ ಕಂಡಾಗ ಜನರು, 'ಹಿಂದಿನ ಜನ್ಮಗಳ ಕರ್ಮಫಲದಿಂದ ಹೀಗಾಯಿತು' ಎನ್ನುತ್ತಾರೆ. ಆದ್ದರಿಂದ ಪಾಪ ಎಂಬುದಿದೆ ಎಂದು ಭಾವಿಸಬೇಕು. ಆಸೆಗಾರ, ಪಾತಕಿ, ಅನ್ಯಸ್ತ್ರೀಮೋಹಿ, ವೃಥಾಲಾಪಿ, ಕೊಳಕ, ಗುಣಹೀನ, ದಯಾಹೀನರು ಸತ್ತರೆ 'ಒಳ್ಳೆಯದೇ ಆಯಿತು; ಒಂದೇ ಸಲಕ್ಕೆ ಅವನು ನೇರವಾಗಿ ನರಕದಲ್ಲಿ ಬೀಳುತ್ತಾನೆ' ಎಂದು ಜನರು ಉಸಿರುಗರೆಯುತ್ತಾರೆ. ಆದ್ದರಿಂದ ಅವಗುಣ, ಪಾಪ, ಹೊಲಸುಗಳನ್ನು ಹೊಂದಿದವರು ನರಕದಲ್ಲಿ ಬೀಳುವುದನ್ನು ನಂಬಿ ನರಕ ಎಂಬುದಿದೆ ಎಂದು ತಿಳಿಯಬೇಕು. ಪರಹಿತ, ಗುಣಿ,

ನಿರ್ಮಲಹೃದಯಿ, ಉದಾತ್ತ, ಸತ್ಪುರುಷ, ಉನ್ನತ ಧಾರ್ಮಿಕ ಇಂಥವರು ಸಾಯಬಾರದು; ಸತ್ತರೂ ಖಂಡಿತವಾಗಿ ಸ್ವರ್ಗಕ್ಕೆ ಹೋಗುತ್ತಾರೆ ಎಂದು ಜನರು ಹೇಳುತ್ತಾರೆ. ಆದ್ದರಿಂದ ಧರ್ಮವೆಂಬುದು ಒಳ್ಳೆಯದು, ಧರ್ಮವಂತರಿಗೆ ಸ್ವರ್ಗಾಪವರ್ಗಗಳು ದೊರೆಯುತ್ತವೆ ಎಂದು ನಂಬಬೇಕು. ಆದ್ದರಿಂದ, ರಾಜನೇ, ಈಗ ಹೇಳಿದ ದೃಷ್ಟಾಂತಗಳಿಂದಾಗಿ ಜೀವ ಎಂಬುದು ಇದೆ ಎಂದು ನಂಬು. ಸುಮ್ಮನೆ ಗಳಹುವ ಕುವಾದಿಗಳ ಮಾತನ್ನು ನಂಬದಿರು" ಎಂದು ವಿವರಿಸಿದರು.

ಇದನ್ನೆಲ್ಲ ಕೇಳಿದ ಬಲಿಯು ತುಂಬುರುಗೊಳ್ಳಿಯಂತೆ ಕನಲಿದ, ಮುನಿಗೆ ಎದುರು ನಿಂತು, ಸಮುದ್ರವನ್ನು ಕಂಡು ಕೊಳವು ಹೊಟ್ಟೆಕಿಚ್ಚುಪಡುಂತೆ ತನ್ನ ಅಳವು ಎಷ್ಟು ಎಂದು ತಿಳಿಯದೆ ಮತ್ತು ಗುರುಲಘುಗಳ ಭೇದವರಿಯದೆ, "ಅರುಹಂತ ಎಂಬುವವನು ಎಲ್ಲಿದ್ದಾನೆ; ಅವನನ್ನು ಸೇರಬೇಕೆಂದು ಮಾಡುವ ತಪಸ್ಸಿನಿಂದ ಆಗುವುದೇನು; ಕೊಲ್ಲಬಾರದು ಎಂದು ಹೇಳುವ ಅಸಾಧ್ಯವಾದ ಧರ್ಮದಿಂದ ಏನು ಪ್ರಯೋಜನ?" ಎಂದು ಗುಡುಗಿದ. ಅದಕ್ಕೆ ಗುರುಗಳು, "ರಾಜರೂ ಜನರೂ ಕೇಳಿ: ನೆಲ್ಲೂ ಹುಲ್ಲೂ, ಕಾಡೆಮ್ಮೆ ಊರೆಮ್ಮೆಗಳೂ, ಕಾಡು ಹಸು ಊರು ಹಸುಗಳೂ, ಹತ್ತಿ ಕಾಡುಹತ್ತಿಗಳೂ, ಕತ್ತಲೆ ಬೆಳಕುಗಳೂ, ಕುಲಹೀನ ಕುಲಜರೂ, ಸೂಳೆ ಗರತಿಯರೂ, ಕಾಡೆಳ್ಳು ಊರೆಳ್ಳುಗಳೂ ಇವೆ. ಒಳ್ಳೆಯವರೂ ಕೆಟ್ಟವರೂ ಇದ್ದಾರೆ, ಅರಸ ಬಡವರೂ ಇದ್ದಾರೆ. ಹಾಗೆಯೇ ಧರ್ಮವೂ ಪಾಪವೂ ಇವೆ. ಅವಕ್ಕೆ ತಕ್ಕ ಫಲಗಳನ್ನು ಕೊಡುವ ಸರ್ವಜ್ಞರೂ ಇದ್ದಾರೆ. ನೆಲ, ದಾರಿ, ದೀಪ, ಮನೆ, ಇವುಗಳು ತಮ್ಮನ್ನು ನಂಬಿದ ಒಕ್ಕಲಿಗನಿಗೆ, ದಾರಿಹೋಕನಿಗೆ, ಹುಡುಕುವವನಿಗೆ, ವಾಸಿಸುವವನಿಗೆ ಮೌನವಾಗಿಯೇ ಧಾನ್ಯವನ್ನೂ, ಬಯಸಿದ ಜಾಗವನ್ನೂ, ಕಾಣಿಸದ ವಸ್ತುಗಳನ್ನೂ, ನೆಮ್ಮದಿಯನ್ನೂ ಕೊಡುತ್ತವೆ. ಹಾಗೆಯೇ ಜಿನಸ್ವಾಮಿಯೂ ತನ್ನನ್ನು ನಂಬಿದವನಿಗೆ ಸ್ವರ್ಗಮೋಕ್ಷಸುಖವನ್ನು ಖಂಡಿತ ನೀಡುತ್ತಾನೆ.

"ನದಿ, ಶಾಸ್ತ್ರ, ಎಮ್ಮೆ, ಹಸು, ಬೀಜ, ಹೊಲ, ಕೆರೆ, ಹಳ್ಳ, ಹಣ್ಣು ಬಿಟ್ಟ ಮರ, ತೋಟ, ಬೆಂಕಿ ಇವುಗಳು ಕಷ್ಟಪಟ್ಟವರಿಗೆ ಒಳ್ಳೆಯ ವಸ್ತುಗಳನ್ನು ಜಿನೇಶ್ವರನಂತೆ ನೀಡುತ್ತವೆ. ಜೈನಮತದ ಹೊರತು ಮಿಕ್ಕ ಮತಗಳು ಹಾಗೆ ನೀಡುವುವೇನು? ಆದ್ದರಿಂದ ಪ್ರಕೃತಿಯ ಸಕಲವೂ ಜಿನೇಶ್ವರನಂತೆ ಮೌನಿಗಳಾಗಿದ್ದುಕೊಂಡೇ ಫಲವನ್ನು ಕೊಡುವುವಲ್ಲದೆ ತಾವಾಗಿಯೇ ಕೊಡುವುದಿಲ್ಲ. ಜಿನೇಂದ್ರನ ರೂಪ ಎಂಬುದು ನಿರ್ಗ್ರಂಥ ಎಂಬುದು ಗೊತ್ತಿರುವ ವಿಷಯವೇ; ಅದನ್ನು ಹೊಂದಿರುವುದು ದಿವ್ಯವಾದ ತಪಸ್ಸು; ಅದರಿಂದಲೇ ಸಕಲಸೌಖ್ಯಗಳು ಉಂಟಾಗುತ್ತವೆ. ನೆಲವು ನಿರ್ಗ್ರಂಥವಾದರೆ ಬಿತ್ತುವವನಿಗೆ ಸುಖ; ಗಗನವು ನಿರ್ಗ್ರಂಥವಾದರೆ ಮದುವೆಗೆ ಅನುಕೂಲ; ನೀರು ನಿರ್ಗ್ರಂಥವಾದರೆ ರೋಗವು ವಾಸಿಯಾಗಲು ಅನುಕೂಲ; ಬೆಂಕಿ ನಿರ್ಗ್ರಂಥವಾದರೆ ಅಡುಗೆಯ ಕೆಲಸ ಸಲೀಸು; ಅಕ್ಕಿ ನಿರ್ಗ್ರಂಥವಾದರೆ ರುಚಿ; ಹಾಲು ನಿರ್ಗ್ರಂಥವಾದರೆ ಮಜ್ಜಿಗೆಗೆ ಸವಿ; ಸೂರ್ಯ ನಿರ್ಗ್ರಂಥವಾದರೆ ದಿವಸ ಶುದ್ಧಿ, ಚಂದ್ರ ನಿರ್ಗ್ರಂಥವಾದರೆ ರಾತ್ರಿ ಶುದ್ಧಿ, ಮನಸ್ಸು ನಿರ್ಗ್ರಂಥವಾದರೆ ಕಾರ್ಯ ಚೆನ್ನ; ರತ್ನ ನಿರ್ಗ್ರಂಥವಾದರೆ ಹೆಚ್ಚು ಬೆಲೆ; ಹೊನ್ನು ನಿರ್ಗ್ರಂಥವಾದರೆ ಮನ್ನಣೆ; ಹಾಗೆಯೇ ಜಿನೇಶ್ವರನ ತಪಸ್ಸಿನ ನಿರ್ಗ್ರಂಥದಿಂದ ಲೋಕದ ಕಾರ್ಯಗಳೆಲ್ಲ ಸಿದ್ಧಿಸುತ್ತವೆ.

"ಭೂಮಿ, ಹುಟ್ಟಿದ ಮಕ್ಕಳು, ಸೂರ್ಯ, ಗೋವೃಂದ, ಆನೆಗಳ ಹಿಂಡು, ಆಕಾಶ, ಸಾಗರ, ಬೆಂಕಿ, ಮರಗಳು, ಬೆಟ್ಟ, ಲೋಕದಲ್ಲಿನ ವಸ್ತುಗಳೆಲ್ಲ ನಿರ್ಗ್ರಂಥನಾದ ಆ ಜಿನೇಶ್ವರನ ಮುದ್ರಾಂಕಿತವೇ ವಿನಾ ಬೇರೆಯಲ್ಲ. ಬತ್ತಲೆಯು ಪೂಜ್ಯವಲ್ಲದಿದ್ದರೆ ಬತ್ತಲೆಯಾದ ಸೂರ್ಯಬಿಂಬ, ಮಕ್ಕಳು, ಸಂಭೋಗಕ್ಕೆ ಸೇರುವಾಗಿನ ಹೆಂಡತಿ ಇವರನ್ನು ಬತ್ತಲೆಯಾಗಿ ಕಂಡು ಸತ್ತವರಾರಿದ್ದಾರೆ? ಹಾಗೆ ನೋಡಿದರೆ ಬತ್ತಲೆಯಿಲ್ಲದ ವಸ್ತು ಯಾವುದಿದೆ? ಸವಣರನ್ನು ಕಂಡರೆ ದೋಷವುಂಟಾಗುವುದಾದರೆ, ಬೇಡರು, ಕೊಲೆಗಾರರು, ಕಳ್ಳರು, ನಾಯಿಗಳು, ಹೊಲೆಯರು, ಕುಲಹೀನರು, ಉಗ್ರರು ಇವರನ್ನು ಸಂತೋಷದಿಂದ ಕಂಡರೆ ಪುಣ್ಯವುಂಟಾಗುವುದೇ? ಋಷಿಗಳನ್ನು ನೋಡುವವರ ಮನೆಯ ಎಮ್ಮೆ ಹಸುಗಳು ಹಾಲು ಕರೆಯುವುದಿಲ್ಲವೇ; ಅವರ ಮನೆಯಲ್ಲಿ ಮಾಂಸವಾಗಲೀ ಅಕ್ಕಿಯಾಗಲೀ ಬೇಯುವುದಿಲ್ಲವೇ; ಸೌದೆ ಹಾಕಿದರೂ

ಬೆಂಕಿ ಉರಿಯುವುದಿಲ್ಲವೇ; ಮಕ್ಕಳು ಮರಿಗಳು ಸಾಯುತ್ತವೆಯೇ; ಊಟ ಮಾಡಿದರೂ ಹಸಿವು ಹಿಂಗುವುದಿಲ್ಲವೇ; ನೀರು ಅನ್ನಗಳು ರುಚಿ ಎನಿಸುವುದಿಲ್ಲವೇ? ಆ ಕಾರಣದಿಂದ ಅವರನ್ನು ಕಾಣದಿದ್ದರೆ ಒಳ್ಳೆಯದು ಎಂದು ಹೇಗೆ ಹೇಳುವುದು? ಸಿರಿಯಿಂದ ಮೈಮರೆತ ಜನರೂ, ನೂರು ವರ್ಷ ಬದುಕುವವರೂ ಋಷಿಗಳನ್ನು ಕಾಣದಿರುವುದರಿಂದ ಸಿರಿಯನ್ನೂ ಆಯುಸ್ಸನ್ನೂ ಪಡೆಯುತ್ತಾರೇನು? ತಿರುಕರೂ, ಸತ್ತವರೂ ಋಷಿಗಳ ರೂಪವನ್ನು ಕಂಡದ್ದರಿಂದ ಹಾಗಾದರೇನು? ಹೆಂಡಿರ ಕಾರಣದಿಂದ ಪಾಂಡವರೂ ಶ್ರೀರಾಮನೂ ವನವಾಸದ ಕಷ್ಟ ಅನುಭವಿಸಿದರು; ಅವರೇನು ಋಷಿಗಳನ್ನು ಕಂಡಿದ್ದರೇನು? ಭರತ ಶತ್ರುಘ್ನರೂ ಪರಾಕ್ರಮಿಯಾದ ದುರ್ಯೋಧನನೂ ಋಷಿಗಳನ್ನು ಕಾಣದ್ದರಿಂದಲೇ ಕೆಲಕಾಲ ಆಳುವಂತಾಯಿತೇನು? ಎಂದೂ ಋಷಿಗಳನ್ನು ಕಾಣದ ಊರಿನ ತಿರುಕರು ಬ್ರಾಹ್ಮಣರಿಗೆ ಹೊಂದಿಕೊಂಡಿದ್ದರೂ ಯಾಕೆ ಹಾಗೆ ಉಳಿಯುತ್ತಾರೆ?

"ಕುಂಚ ಹಿಡಿದ ಸವಣರನ್ನು ಕಾಣಬಾರದಾದರೆ, ಕೊಡೆಯನ್ನು ಹಿಡಿದು ಬರುವವರಾರನ್ನೂ ಕಾಣಬಾರದು. ಬತ್ತಲೆಯು ದೋಷವೆನ್ನುವುದಾದರೆ ಬತ್ತಲೆಯಿರುವ ಮಕ್ಕಳು, ಮರಗಳು ಮತ್ತು ಪ್ರಾಣಿಗಳನ್ನೂ ನೋಡಬಾರದು. ಗುಂಡಿಗೆ (ಕಮಂಡಲ) ದೋಷವೆನ್ನುವುದಾದರೆ ತೆಂಗಿನ ಕಾಯಿ, ಅದನ್ನು ತಿನ್ನುವವರು ಹಾಗೂ ಅದನ್ನು ಮಾರುವ ವ್ಯಾಪಾರಿಗಳನ್ನೂ ಕಾಣಬಾರದು. ಸ್ನಾನ ಮಾಡದಿರುವುದೇ ದೋಷವೆಂದರೆ ಎಂದೂ ಸ್ನಾನ ಮಾಡದಿರುವ ಚಂದ್ರಸೂರ್ಯರನ್ನು ಕಾಣುವುದೂ ದೋಷವೇ. ಕೊಳೆಯನ್ನು ದೇಹದ ಮೇಲೆ ಹೊರುವುದು ದೋಷವಾದರೆ ತಿಪ್ಪೆ, ಅದನ್ನು ಹೊತ್ತ ನೆಲ, ಗೊಬ್ಬರ ಹಾಕಿದ ಹೊಲಗಳನ್ನೂ ಕಾಣಬಾರದು. ವಾಂತಿ ಮಾಡಿದ ನೀರನ್ನು ಕುಡಿಯದಿರುವುದೇ ದೋಷವಾದರೆ ಪ್ರತಿಜ್ಞೆ ಮಾಡಿ ಕುಡಿಯುವ ರಾಜರು ಹಾಗೂ ಕಾಳಗಗಳನ್ನು ನೋಡಬಾರದು. ನಿಂತು ಊಟಮಾಡುವುದು ದೋಷವಾದರೆ ಪ್ರಾಣಿಗಳು, ಮರಗಳನ್ನೂ ಕಾಣಬಾರದು. ಕೈಯಿಂದ ಊಟಮಾಡುವುದು ದೋಷವಾದರೆ ಆನೆಯನ್ನು ನೋಡಬಾರದು. ಲೋಚು ದೋಷವಾದರೆ ತಿದ್ದಿದ ಹುಬ್ಬು, ಮೀಸೆಗಳವರನ್ನು ಕಾಣಬಾರದು. ಪಂಚಮಹಾವ್ರತಗಳನ್ನು ಆಚರಿಸುವುದು ದೋಷವಾದರೆ ಪಾಂಡವರನ್ನೂ, ಭೀಷ್ಮಕರ್ಣರನ್ನು ಹೊಗಳುವ ಮನುಷ್ಯರನ್ನೂ ಕಾಣಬಾರದು. ಹಲ್ಲನ್ನುಜ್ಜದಿರುವುದು ದೋಷವಾದರೆ ಹಸುಗೂಸುಗಳನ್ನು ನೋಡಬಾರದು. ಹಾಗಾಗಿ ಮೋಕ್ಷಸಾಧಕರಾದ ಋಷಿಗಳನ್ನು ಕಾಣುವುದು ದೋಷ ಎಂಬುದಕ್ಕೆ ಆಧಾರವಿಲ್ಲ.

"ದುರ್ಗಮವಾದ ಕೋಟೆಯನ್ನು ಹೊಗಬೇಕಾದರೆ, ಶತ್ರುವನ್ನು ನಾಶ ಮಾಡುವವರೆಗೂ ಉಣ್ಣುವುದಿಲ್ಲ, ಹಲ್ಲುಜ್ಜುವುದಿಲ್ಲ, ಸ್ನಾನ ಮಾಡುವುದಿಲ್ಲ, ಹೆಂಡಿರಲ್ಲಿ ಕೂಡುವುದಿಲ್ಲ, ತಲೆ ಬಾಚುವುದಿಲ್ಲ, ಆಭರಣಗಳನ್ನು ತೊಡುವುದಿಲ್ಲ ಎಂದು ಶಪಥ ಮಾಡುವರು; ಇದು ಜಿನೇಶ್ವರನ ತಪಸ್ಸಿನ ರೀತಿಯನ್ನೇ ಹೋಲುತ್ತದೆ. ಹೀಗಾಗಿ ಸ್ವರ್ಗಾಪವರ್ಗಗಳನ್ನಾಗಲೀ ದುರ್ಗವನ್ನಾಗಲೀ ಸಾಧಿಸುವುದಕ್ಕೆ ಜಿನರು ಹೇಳಿದ ತಪಸ್ಸೇ ಮೂಲ. ಜಿನರ ಜೀವನ ರೀತಿಯೇ ರೀತಿ, ಅವರು ಹೇಳಿದುದೇ ಮಾತು, ಅವರ ನಡತೆಯೇ ನಡತೆ, ಎಂದ ಮೇಲೆ ಜಿನರ ಆಜ್ಞೆಯನ್ನು ಒಲ್ಲದ ಅದಟನು ಇದ್ದಾನೆಯೇ? ಕೊಲೆ, ಹುಸಿ, ಪರವಧುಸಂಗ, ಕಳವು ಇವನ್ನು ಬೇಡ ಎಂಬ ವೀತರಾಗಿಗಳ ಆಣತಿಯನ್ನು ಒಲ್ಲದ ಗಂಡರಿದ್ದಾರೆಯೇ? ಕಳ್ಳು, ಅಡಗು, ಕೊಲೆ, ಹುಸಿ, ಪರಸ್ತ್ರೀವ್ಯಾಮೋಹ ಇವುಗಳನ್ನು ಮೀರಿದರೆ ಶಿಕ್ಷೆ ಖಂಡಿತ. ಆದ್ದರಿಂದ ಜಿನನಾಥನನ್ನು ಅನುಸರಿಸಿಯೇ ಲೋಕ ನಡೆಯುವುದು," ಹೀಗೆಂದು ಮುನಿಗಳು ನುಡಿದರು. ಅದಕ್ಕೆ ಬಲಿಯು, "ಬೆಲೆ ಬಾಳುವುದನ್ನೆಲ್ಲ ದೇವರು ಎನ್ನುವುದಾದರೆ ಕಾಲಿನ ಕೆರ, ಹಸಿವಾದಾಗ ಅನ್ನ, ಬಾಯಾರಿಕೆಯಾದಾಗ ನೀರು, ಮಗುವಿಗೆ ಹಾಲು, ನಾನಾ ಕಾಯಿಲೆಗಳನ್ನು ವಾಸಿ ಮಾಡುವ ಔಷಧಸಸ್ಯಗಳು ಎಲ್ಲ ದೇವರುಗಳಾಗುತ್ತವಲ್ಲ" ಎಂದ.

ಅದಕ್ಕೆ ಆಕಂಪನಾಚಾರ್ಯರ ಉತ್ತರ: "ಹಿಂದಿನ ಸಂಗತಿಗಳನ್ನೂ, ಮುಂದಾಗುವ ಸಂಗತಿಗಳನ್ನೂ ಜೀವ ಅರಿಯದು. ಜೀವ ಹೋದರೆ ದೇಹವನ್ನು ಇರಿಸಿಕೊಳ್ಳಲಾಗದು. ಕೆಲವರು ಜಾತಿಸ್ಮರತ್ವದಿಂದ ಹಿಂದಿನ ಜನ್ಮಗಳ ವಿಷಯಗಳನ್ನು ತಿಳಿಯುತ್ತಾರೆ; ಜೀವ ಇಲ್ಲ ಎಂದರೆ ಇದು ಹೇಗೆ ಸಾಧ್ಯ? ಹೆಣವನ್ನು ಕಡಿದರೆ ಅದು ಅಲ್ಲಾಡುವುದಿಲ್ಲ;

ಜೀವ ಹೋದ ದೇಹವನ್ನು ಸುಟ್ಟರೂ ಅದು ಮಿಸುಕುವುದಿಲ್ಲವಲ್ಲ! ಭೂತಪಿಶಾಚಿಗಳು ಹಿಡಿದಾಗ ಗ್ರಹವಾದಿ ಬಂದು ನುಡಿಸಲು ಆ ಗ್ರಹವು ಬಂದು ಬದುಕಿದ್ದಾಗ ಆದುದನ್ನು ಹೇಳುವುದು; ಜೀವನು ಇಲ್ಲದಿದ್ದರೆ ಆ ಗ್ರಹವು ಹಾಗೆ ಹೇಳಲಾಗುತ್ತದೆಯೇ? ಜಾತಕವನ್ನು ನೋಡಿ ಜೀವನ ಹಿಂದುಮುಂದುಗಳನ್ನು ಹೇಳುವ ದೈವಜ್ಞರ ಮಾತುಗಳಿಂದಲೂ, ಕಲೆಯೊಡನೆ ಹುಟ್ಟುವ ಮಕ್ಕಳನ್ನು ಕಂಡೂ ಜೀವನು ಇದ್ದಾನೆ ಎಂದು ತಿಳಿಯತಕ್ಕದ್ದು. ಆನೆಯನ್ನು ನೋಡಿ ಅದರ ಪಾದವನ್ನು ಹುಡುಕುವ, ಮುಂಗೈಗೆ ಕಟ್ಟಿಕೊಂಡಿರುವ ಕಂಕಣವನ್ನು ಕನ್ನಡಿಯಲ್ಲಿ ನೋಡುವವನಂತೆ ಗಾವಿಲನಾಗಬೇಡ," ಎಂದು ಮುನಿಗಳು ತಿಳಿಯ ಹೇಳಿದರು.

ಅದನ್ನು ಕೇಳಿ ಬಲಿ ಹೀಗೆಂದ: "ರಾಜನು ಅಜ್ಞಾನದಿಂದ ನಿಮ್ಮನ್ನು ದೇವರು ದಿಂಡಿರು ಎಂದುಬಿಟ್ಟರೆ ನೀವು ದೇವರಾಗಿಬಿಡುತ್ತೀರೇನು? ಹಲವು ಮಾತುಗಳಿಂದೇನು, ಜೀವನು ಇರುವುದೇ ಆದರೆ ನಿಮ್ಮ ದೇಹದಿಂದ ಬೇರ್ಪಡಿಸಿ ಅದನ್ನು ತೋರಿಸಿ" ಎಂದು ಸವಾಲು ಹಾಕಿದ. ಅದಕ್ಕೆ ಆಚಾರ್ಯರ ಉತ್ತರ: "ಎಲೈ ದಡ್ಡನೇ, ರಾಜನ ಆಸ್ಥಾನದಲ್ಲಿ ಪಿತ್ತಜ್ವರ ಬಂದಂತೆ ಗಳಹಿದರೆ ಅದು ಚಾತುರ್ಯ ಅಂದುಕೊಂಡಿರುವೆಯಾ? ಮಾಗಿಯ ಕಾಲದಲ್ಲಿ ಬೇಸಗೆಯನ್ನು ತೋರಿಸಲು ಸಾಧ್ಯವೇ? ಹಾಗೆಯೇ ಬೇಸಗೆಯಲ್ಲಿ ಮಳೆಗಾಲವನ್ನು ತೋರಿಸಬಹುದೇ? ಅಂತೆಯೇ ನೀನು ಮಾತನಾಡಲು ತಿಳಿಯದೆ, 'ಜಟ್ಟಿ ಆಕಾಶವನ್ನು ನೋಡಿದ'ನೆಂಬಂತೆ, ನನ್ನ ಮಾತುಗಳಿಗೆ ಉತ್ತರ ತಿಳಿಯದೆ ಎಂಥದೋ ಎಕ್ಕಸಕ್ಕವನ್ನು ಗಳಹಿದರೆ ಏನು ಬಂತು? ಹಾಲೊಳಗೆ ತುಪ್ಪವಿರುವುದನ್ನೂ, ಮರದಲ್ಲಿ ಬೆಂಕಿಯಿರುವುದನ್ನೂ ಎಲ್ಲರೂ ಬಲ್ಲರು. ಅದನ್ನು ಇದ್ದಕಿದ್ದಂತೆ ತೋರಿಸಲು ಸಾಧ್ಯವಿಲ್ಲ; ಹಾಲನ್ನು ಕಾಸಿ, ಹೆಪ್ಪಿಟ್ಟು, ಕಡೆದು ಬೆಣ್ಣೆ ತೆಗೆದು ಹದವಾಗಿ ಕಾಸಿದಾಗ ತುಪ್ಪವಾಗುತ್ತದೆ; ಅಂತೆಯೇ, ಮರವನ್ನು ಹೊಸೆದರೆ ಕಿಚ್ಚು ಬರುತ್ತದೆ; ಎಳ್ಳನ್ನು ಗಾಣದಲ್ಲಿಟ್ಟು ಹಿಂಡಿದರೆ ಎಣ್ಣೆ ಹೊರಬರುತ್ತದೆ. ಅಂತೆಯೇ ಕರ್ಮವಶದಿಂದ ಶರೀರದಲ್ಲಿನ ಜೀವವನ್ನು ಇದ್ದ ಹಾಗೆಯೇ ತೋರಿಸಲು ಅಸಾಧ್ಯ. ದಾನಾದಿ ಧರ್ಮಗಳಿಂದ ಕೂಡಿ ಏಕಾದಶ ನೆಲೆಯಲ್ಲಿನ ಧರ್ಮದಲ್ಲಾಗಲೀ, ದಶಧರ್ಮಗಳಿಂದ ಕೂಡಿದ ಅನಗಾರಧರ್ಮದಲ್ಲಾಗಲೀ ಆಚರಿಸಿ ಪಾಪದ ಮೊಳಕೆಯನ್ನು ಕಿತ್ತು ನಿಧಾನವಾಗಿ ಸ್ವಸ್ವರೂಪನಾಗಿ ಶಾಶ್ವತಸುಖವನ್ನು ಪಡೆದಾಗ ಜೀವನು ಬೇರೆಯಾಗುತ್ತಾನೆ. ಮನೆಯ ಬಡತನಕ್ಕೆ ಹೊಟ್ಟೆಯನ್ನು ಕೊಯ್ದ ಹಾಗೆ ಕರ್ಮಬಂಧನದಲ್ಲಿರುವ ಜೀವವನ್ನು ನಿನಗೆ ತೋರಿಸಲು ಸಾಧ್ಯವಿಲ್ಲ. ಸೋರೆಕಾಯಲ್ಲಿ ಮಣ್ಣನ್ನು ತುಂಬಿಟ್ಟರೆ ಅದು ನೆಗೆಯಬಲ್ಲುದೆ? ಅಂತೆಯೇ ಪಾಪಸಂಕುಲದಿಂದ ಕೂಡಿದ ಜೀವವು ನಿರ್ವೃತಿಗೆ ನೆಗೆಯಲಾರದು. ಪದ್ಮಾಕಾರದ ನಕ್ಷತ್ರಗಳು ಹಗಲಲ್ಲಿ ಅಥವಾ ಮೋಡಗಳಲ್ಲಿ ತಮ್ಮ ಆಕಾರ ಕಳೆದುಕೊಂಡಿರುವ ಹಾಗೆ ಪಾಪಭಾರದಿಂದ ಜೀವವು ಮಿಡುಕಲಾರದೆ ಇರುತ್ತದೆ. ದೃಷ್ಟ, ಶ್ರುತ, ಅನುಭೂತಗಳಿಂದ ಸರ್ವಜ್ಞನನ್ನೂ, ನಿರ್ಗ್ರಂಥವಾದ ತಪಸ್ಸನ್ನೂ, ನೀತಿ ಹಾಗೂ ಜೀವಗಳ ಬಗ್ಗೆ ಅರಿಯಬೇಕು" ಎಂದು ಮುನಿಗಳು ನುಡಿದರು.

ಹೀಗೆ ತಿಳಿದವರಿಗೂ ತಿಳಿಯದವರಿಗೂ ಮನದಟ್ಟಾಗುವಂತೆ ನುಡಿದ ಆಕಂಪನಾಚಾರ್ಯರ ವಾಗ್ಮಿತೆಗೂ ಭಾವಪೂರಿತವಾದ ದಿಗಂಬರತ್ವಕ್ಕೂ ಜಿನಾಗಮ ಪರಿಣತಿಗೂ ಜಯವರ್ಮ ಮಹಾರಾಜನು ವಿಸ್ಮಿತನಾಗಿ ಅವರ ಶ್ರೀಚರಣಗಳಿಗೆ ಬಿದ್ದು ಅವರ ಕಾಲುಗಳನ್ನು ತನ್ನ ತಲೆಯ ಮೇಲಿಟ್ಟುಕೊಂಡ. ನದಿಯನ್ನು ಈಜಲಾರದೆ ಸೋತ ಕಾಲುಗಳನ್ನು ಹಿಡಿದಂತಾಗಿ, ಕಾಳಗದಲ್ಲಿ ಸೋತ ಹೇಡಿ ನಾಚಿಕೆಯಿಂದ ಕೆರೆಗೆ ಬಿದ್ದನೆಂಬಂತೆ, ಬಲಿಯು ರಾಜನ ಮುಖವನ್ನು ನೋಡಲು ಲಜ್ಜೆಗೊಂಡ. ಕೊನೆಗೆ ಮುನಿಸರೋಜಿನೀರಾಜಹಂಸನ ಮುಖವನ್ನು ನೋಡುತ್ತ ಹೀಗೆಂದ: "ಹೀಗಲ್ಲದೆ ಜನರು ನನಗೆ ಬಂದು ಎರಗುವುದಿಲ್ಲವೆಂದು ನೀನು ಮೋಸದ ಮಾತುಗಳಿಂದ ಸೋಲಿಸುತ್ತೀಯೆ. ಮಾಯಾ ತಪಸ್ಸಿನಿಂದ ವಶ್ಯಮಂತ್ರಗಳನ್ನು ಸಾಧಿಸಿ ಜನರನ್ನು ಮರುಳುಮಾಡುತ್ತೀಯೆ. ನಾನಾ ಮದ್ದುಗಳಿಂದ ಮುಖವಶ್ಯವನ್ನು ಸಾಧಿಸಿಕೊಂಡು ಜನವಶ್ಯ ರಾಜವಶ್ಯ ಮಂತ್ರಗಳ ಬಲದಿಂದ ನನ್ನ ನಾಲಗೆಯನ್ನು ಕಟ್ಟಿಹಾಕಿ ಗೆಲ್ಲುತ್ತೀಯೆ. ಹಾಗಲ್ಲದೆ ನನ್ನನ್ನು ಗೆಲ್ಲುವುದು ನಿನಗೆ ಅಸಾಧ್ಯ" ಎಂದು ಸಿಟ್ಟಿನಿಂದ ನುಡಿದ.

ಅದನ್ನು ಕೇಳಿದ ಜನರು, ಜಯವರ್ಮನ ಬೆಂಬಲವಿದೆಯೆಂದು ಮುನಿಯನ್ನು ಮಾತಿನಲ್ಲಿ ಗೆಲ್ಲಬಹುದೆಂಬ ಭ್ರಮೆಯಿಂದ ಬಂದ ಈ ನೀಚನು ಅವರನ್ನು ಗೆಲ್ಲಲಾರದೆ, ಮಾತರಿಯದ ಸೂಳೆ ಕುಂಟಣಿಯನ್ನು ಬೈದಳು ಎಂಬಂತೆ, ಪರಮಾವಧಿಲೋಚನನಾದ ಮುನಿಯ ಮಾತಿಗೆ ಉತ್ತರ ಕೊಡಲಾರದೆ ಬಾಯಿಗೆ ಬಂದಂತೆ ಮಾತಾಡುತ್ತಿದ್ದಾನೆ ಎಂದು ಬಲಿಯನ್ನು ಜರಿದರು. ಅವನ ಮಾತಿನಿಂದ ಮಹಾರಾಜನಿಗೂ ಕೋಪ ಬಂತು; ಜನರನ್ನು ಕುರಿತು ಅವನು ಹೀಗೆಂದ: "ಗರಗಸದ ಬರುವಿಕೆ ಹೋಗುವಿಕೆಗಳಂತೆ, ಬೆಂಕಿಯ ಉರಿ ಹೊಗೆಗಳಂತೆ, ಕಹಿ ಸೋರೆಯ ಮಿಡಿ ಕುಡಿಗಳಂತೆ, ಭಯದ ದಾರಿಯ ನೀರು ನೆರಳುಗಳಂತೆ ಮಿಥ್ಯಾದೃಷ್ಟಿಯ ಕೃತ್ಯಗಳೆಲ್ಲ ಕೆಟ್ಟವಾಗುತ್ತವೆ." ಆನಂತರ ಬಲಿಯನ್ನು ಕುರಿತು, "ಇವರು ಸರ್ವಜ್ಞರಾದ ಹಿರಿಯರು; ಅವರ ಯೋಗ್ಯತೆಯನ್ನರಿಯದೆ ಮೂರ್ಖತನದಿಂದ ಮಾತಾಡುತ್ತಿದ್ದೀಯೆ. ಧೂರ್ತನಾದ ನೀನು ನನ್ನ ಮುಂದೆಯೇ ಮುನಿಪುಂಗವರ ಬಗ್ಗೆ ಹೀನವಚನಗಳನ್ನಾಡಿದೆ. ಒಮ್ಮೆಗೇ ಪ್ರಾಣಕ್ಕೆ ಮುನಿಯಬಾರದು; ನಿನ್ನ ಮಾತುಗಳು ಮರಣದಂಡನೆಗೆ ಅರ್ಹವಾದವು" ಎಂದು ಗದರಿಸಿದ. ಅಲ್ಲದೆ ಅವನೂ ಅವನ ವಂಶದವರೂ ತನ್ನ ಊರಲ್ಲಿರಕೂಡದೆಂದು ಆಜ್ಞೆ ಹೊರಡಿಸಿದ. ಆಮೇಲೆ ಜಯವರ್ಮ ಮಹಾರಾಜನು ಮುನಿಗಳಿಗೆ ಮತ್ತೊಮ್ಮೆ ವಂದಿಸಿ ಅರಮನೆಗೆ ವಾಪಸಾದ.

ಇತ್ತ, ಬಲಿಯ ಒಡಹುಟ್ಟಿದವರಾದ ಶುಕ್ಲ, ಬೃಹಸ್ಪತಿ, ಪ್ರಹ್ಲಾದ ಮೊದಲಾದ ಬಂಧುಗಳೆಲ್ಲರೂ ಒಟ್ಟಿಗೇ ಚಿಂತಾಕ್ರಾಂತರಾಗಿ ಊರಿಂದ ಹೊರಟರು. ಹೋಗುವಾಗ ಬಲಿಯನ್ನು ಕುರಿತು ಅವನ ತಮ್ಮಂದಿರು, "ಅಣ್ಣ, ಸುಖದ ಉನ್ನತಿಯ ಕಾರಣದಿಂದ ನೀನು ಧೂರ್ತತನದಿಂದ ಉಣ್ಣುವವರ ಬಾಯಿಗೆ ಮಣ್ಣು ಬೆಂಕಿಗಳನ್ನು ಹಾಕುವಂಥ ಕೆಲಸ ಮಾಡಿದೆ" ಎಂದು ಆಕ್ಷೇಪಿಸಿದರು. ರಾಜನಿಂದಾದ ಅವಮಾನದೊಡನೆ ಈಗ ಬಂಧುಗಳು ಮಾಡುತ್ತಿರುವ ನಿಂದೆಯು ಸೇರಿ ಬಲಿಗೆ ಮುನಿಯ ಮೇಲಿನ ಕೋಪ ಹೆಚ್ಚಾಯಿತು. ಜಯವರ್ಮ ಮಹಾರಾಜನ ಆಸ್ಥಾನದಲ್ಲಿ ನನ್ನನ್ನು ಒಂದು ಮಡಕೆಯ ಚೂರು ಮಾಡಿದ ಯತಿಯನ್ನು ಕೊಲ್ಲದಿದ್ದರೆ ನಾನು ಮಂತ್ರಿಯೇ ಅಲ್ಲ ಎಂದು ಪ್ರತಿಜ್ಞೆ ಮಾಡಿದ. ಆನಂತರ ಹಸ್ತಿನಾಪುರಕ್ಕೆ ಬಂದು ಪದ್ಮನಿಗೆ ಆಳಾಗಿ ಕೆಲಸ ಮಾಡುತ್ತಿದ್ದನು.

ಹೀಗಿರಲು ಒಂದು ದಿನ ಒಬ್ಬ ದೂತನು ಪದ್ಮನ ಆಸ್ಥಾನಕ್ಕೆ ಬಂದು ರಾಜನಿಗೆ ನಮಸ್ಕರಿಸಿ ಹೀಗೆಂದು ಬಿನ್ನವಿಸಿದ: "ದೇವ, ನಮ್ಮ ಸೈನ್ಯವು ಸಿಂಹಕೀರ್ತಿ ಮಹಾರಾಜನಿಂದ ಯುದ್ಧದಲ್ಲಿ ಸೋಲನ್ನು ಅನುಭವಿಸಿತು." ಇದರಿಂದ ರಾಜನಿಗೆ ನಾಚಿಕೆಯಾಯಿತು; ಹಿಂದೆ ತನ್ನ ದಂಡು ಅನೇಕ ಸಲ ಪಡೆದ ಗೆಲವಿನ ಹಿನ್ನೆಲೆಯಲ್ಲಿ ಅವನಿಗೆ ಈಗಾದ ಅವಮಾನ ಸಹಿಸಲಸಾಧ್ಯವಾದದ್ದೆನಿಸಿತು. ರಾಜನ ಮನಸ್ಥಿತಿಯನ್ನು ತಿಳಿದ ಬಲಿಯು ತನಗೆ ಸರಿಯಾದ ಸಂದರ್ಭ ಒದಗಿ ಬಂತೆಂದು ಹಿಗ್ಗಿದ. ತಕ್ಷಣ ಪದ್ಮರಾಜನಿಗೆ ನಮಸ್ಕರಿಸಿ, ತನಗೆ ಯುದ್ಧದ ಕೆಲಸವನ್ನು ವಹಿಸಿಕೊಡಲು ಬೇಡಿಕೊಂಡ. ಮಹಾರಾಜ ಅದಕ್ಕೆ ಒಪ್ಪಿಗೆ ನೀಡಿದ. ಹಿರಿದಾದ ಪಡೆಯೊಂದನ್ನು ತೆಗೆದುಕೊಂಡು ಬಲಿಯು ಶತ್ರುವನ್ನು ಗೆಲ್ಲುವ ಶಪಥ ಮಾಡಿ ಹೊರಟ. ಅನೇಕ ದಿನಗಳ ಕಾಲ ನಡೆದುಕೊಂಡು ಬಂದ ಪಡೆಯು ಕುಂಭಪುರವನ್ನು ಬಂದು ಸೇರಿತು. ಅದನ್ನು ಮೂರು ಸುತ್ತಿನಲ್ಲಿ ಮುತ್ತಿಗೆ ಹಾಕುವ ತಂತ್ರವನ್ನು ಬಲಿ ಮಾಡಿದ. ಚಲದಿಂದ ಹೋರಾಡಿ ಸಿಂಹಕೀರ್ತಿಯನ್ನು ನಾಯಿಯನ್ನು ಕಟ್ಟಿಹಾಕಿದ ಹಾಗೆ ಕೋಡಗಗಟ್ಟಿ ಕರೆತಂದು ಪದ್ಮ ಮಹಾರಾಜನಿಗೆ ಒಪ್ಪಿಸಿದ. ರಾಜನ ಅವನು ಪ್ರತಾಪಕ್ಕೆ ಮೆಚ್ಚಿ ಅವನಿಗೆ ಮಹಾಮಂತ್ರಿ ಪದವಿಯನ್ನು ನೀಡಿದ. ಅಲ್ಲದೆ ತನಗೆ ಬೇಕಾದ ಮೆಚ್ಚನ್ನು ಕೇಳಬೇಕೆಂದು ಹೇಳಿದ. ಬಲಿಗೆ ಅತೀವ ಸಂತಸವಾಯಿತು; ರಾಜನು ಕೊಟ್ಟ ಮೆಚ್ಚನ್ನು ತನಗೆ ಬೇಕಾದ ಸಮಯದಲ್ಲಿ ಕೇಳಿಕೊಳ್ಳುವುದಾಗಿಯೂ, ಅದುವರೆಗೆ ಅದನ್ನು ತನ್ನ ದಿವ್ಯಚಿತ್ತದಲ್ಲಿಯೇ ಇರಿಸಿಕೊಳ್ಳಬೇಕೆಂದು ರಾಜನನ್ನು ಕೇಳಿಕೊಂಡ. ರಾಜ ಅದಕ್ಕೆ 'ತಥಾಸ್ತು' ಎಂದ. ಅಂದಿನಿಂದ ಬಲಿ ರಾಜನಿಗೆ ಪರಮ ಆಪ್ತನಾದ.

ಹೀಗೇ ಕೆಲ ಕಾಲವಾಯಿತು. ಆಕಂಪನಾಚಾರ್ಯರು ಒಂದು ದಿನ ತಮ್ಮ ಐನೂರು ಮಂದಿ ಶಿಷ್ಯರ ಸಮೇತ ವಿಹರಿಸುತ್ತ ಹಸ್ತಿನಾಪುರಕ್ಕೆ ಬಂದರು. ಊರ ಹೊರವಲಯದಲ್ಲಿದ್ದ ಸಿತಗಿರಿಯಲ್ಲಿ ಬಿಡಾರ ಮಾಡಿ, ಚಾತುರ್ಮಾಸವಾದ್ದರಿಂದ ಯೋಗದಲ್ಲಿ ನಿರತರಾದರು. ಯತಿಪುಂಗವರು ತನ್ನ ಊರಿನಲ್ಲಿ ಬಿಡಾರ ಮಾಡಿದ್ದನ್ನು ಕೇಳಿದ ಮಹಾರಾಜನು ಸಂತಸಪಟ್ಟು, ರಾಜಕುಮಾರರ ಜೊತೆಗೂಡಿ ಹೋಗಿ ಅವರಿಗೆ ವಂದಿಸಿ, ಸ್ವಲ್ಪ ಕಾಲ ಅವರ ಧರ್ಮಶ್ರವಣವನ್ನು ಆಲಿಸಿದ. ಆನಂತರ ಪುನರ್ನಮಸ್ಕಾರಗೈದು ಅರಮನೆಗೆ ವಾಪಸಾದ. ಹುಡುಕುತ್ತಿದ್ದ ಬಳ್ಳಿಯು ಕಾಲಿಗೇ ತೊಡರಿಕೊಂಡ ಹಾಗೆ ತಾನು ಕೊಲ್ಲಬಯಸಿದ್ದ ಶತ್ರುವು ತನ್ನ ಮನೆಗೇ ಬಂದನೆಂದು ಬಲಿ ಹರ್ಷಗೊಂಡ.

ಪದ್ಮ ಮಹಾರಾಜನ ಬಳಿಗೆ "ಂದು ತನಗೆ ನೀಡಲೊಪ್ಪಿ ತನ್ನ ಮನೋಭಂಡಾರದಲ್ಲಿರಿಸಿಕೊಂಡಿದ್ದ ಮೆಚ್ಚನ್ನು ಈಗ ತನಗೆ ದಯಪಾಲಿಸಬೇಕೇಂದು ಬೇಡಿಕೊಂಡ. "ಕೊಟ್ಟಿದ್ದೇನೆ ಬೇಡಿಕೋ" ಎಂದು ರಾಜ ಹೇಳಿದಾಗ ಬಲಿ 'ಮಹಾಪ್ರಸಾದ' ಎಂದು ಮೆಚ್ಚನ್ನು ಕೇಳಿದ. "ದೇವಾ, ತಮಗೂ ನಾಡಿಗೂ ಶಾಂತಿನಿಮಿತ್ತವಾಗಿ ಒಂದು ಯಜ್ಞವನ್ನು ಮಾಡಬೇಕೆಂಬುದು ನನ್ನ ಆಸೆ. ಯಜ್ಞದಿಂದ ಸುರಾಸುರರೆಲ್ಲ ಸಂತೃಪ್ತಿ ಹೊಂದುವುದರಿಂದ ನಮಗೆ ಹಿರಿದಾದ ಫಲ ದೊರೆಯುತ್ತದೆ. ಆದ್ದರಿಂದ ತಮ್ಮ ರಾಜ್ಯವನ್ನು ಹದಿನೈದು ದಿವಸಗಳ ಕಾಲ ನನ್ನ ವಶಕ್ಕೆ ಕೊಡಬೇಕು" ಎಂದು ಪ್ರಾರ್ಥಿಸಿಕೊಂಡ. ಅವನ ಬೇಡಿಕೆಗೂ, ತಾನು ಅವನಿಗೆ ಏನಾದರೂ ಬೇಡಿಕೊಳ್ಳುವಂತೆ ಹೇಳಿದುದಕ್ಕೂ ರಾಜನಿಗೆ ವಿಸ್ಮಯವುಂಟಾಯಿತು. ದೇವರಿಗೂ ಕ್ಷತ್ರಿಯರಿಗೂ ಪುನರ್ವಚನ ಎಂಬುದಿಲ್ಲ ಎಂಬ ನೀತಿ ಅವನ ನೆನಪಿಗೆ ಬಂದು, ಬಲಿಯ ಮನಸ್ಸಿನ ಕಪಟವರಿಯದೆ, "ನೀನೇನು ಮಾಡಬೇಕೆಂದಿರುವೆಯೋ ಅದನ್ನು ನನಗೆ ಹೇಳಬೇಕಾಗಿಲ್ಲ; ನಾನು ನಿನಗೆ ಕೊಟ್ಟ ಮಾತಿನಂತೆ ಹದಿನೈದು ದಿವಸಗಳ ಕಾಲ ರಾಜ್ಯವನ್ನು ನಿನಗೆ ವಹಿಸಿಕೊಡುತ್ತೇನೆ" ಎಂದು ಪದ್ಮರಾಜನು ಹೇಳಿದ. ರಾಜ್ಯವನ್ನು ಮಹಾಮಂತ್ರಿಗೆ ಒಪ್ಪಿಸಿದ ಮಹಾರಾಜನು ಅಂತಃಪುರಕ್ಕೆ ನಡೆದು ಪುರಂಧ್ರಿಯರ ಜೊತೆ ಇದ್ದ.

ಇತ್ತ ಬಲಿಯು ಜಯವರ್ಮನ ಮುಂದೆ ತನಗೆ ಅವಮಾನ ಮಾಡಿದ ವ್ಯಕ್ತಿಯನ್ನು ನಾನಾ ವಿಧವಾದ ಹಿಂಸೆಯಿತ್ತು ಕೊಲ್ಲುತ್ತೇನೆ ಎಂದು ನಿರ್ಧರಿಸಿದ. ತನ್ನ ಮನದಿಂಗಿತವನ್ನು ಮಾತ್ರ ಬೇರೆ ಯಾರಿಗೂ ಅವನು ತಿಳಿಸಲಿಲ್ಲ. ಪದ್ಮಮಹಾರಾಜನಿಗೂ ಪ್ರಜೆಗಳಿಗೂ ನಂಬಿಕೆ ಬರುವಂತೆ ತಾನು ಯಜ್ಞ ಮಾಡುವುದಾಗಿ ಡಂಗುರ ಹೊಡೆಸಿದ. ತನ್ನ ಮಹಾರಾಜನು ಜೈನಧರ್ಮದಲ್ಲಿ ಅಧಿಕನಾದ ಶ್ರಾವಕ. ನಾನು ಋಷಿವಧೆಯನ್ನು ಮಾಡುವುದು ತಿಳಿದರೆ ಅವನು ನನ್ನನ್ನು ಚಿತ್ರಹಿಂಸೆಯಿಂದ ಕೊಲ್ಲಿಸುವುದು ಖಚಿತ; ಆದ್ದರಿಂದ ತನ್ನ ದ್ರೋಹವು ರಾಜನಿಗೆ ಗೊತ್ತಾಗದ ಹಾಗೆ ಕೆಲಸವನ್ನು ಸಾಧಿಸಬೇಕು ಎಂದು ಒಂದು ಕುಟಿಲವನ್ನು ಯೋಚಿಸಿದ. ತಾನು ಯೋಗವನ್ನು ಕೈಕೊಂಡು ತನ್ನ ಯಜ್ಞವು ಮುಗಿಯುವವರೆಗೂ ಋಷಿಗಳು ಈ ಊರಿನಲ್ಲಿರುವುದು ಬೇಡ ಎಂದು ಘೋಷಣೆ ಹೊರಡಿಸಿದ. ಚಾತುರ್ಮಾಸದಲ್ಲಿದ್ದುದರಿಂದ ಬೇರೆಲ್ಲೂ ಅವರು ಹೋಗರು ಎಂಬುದು ಅವನಿಗೆ ಮನದಟ್ಟಾಗಿತ್ತು.

ಈ ಘೋಷಣೆಯನ್ನು ಕೇಳಿದ ಆಕಂಪನಾಚಾರ್ಯರು ತಮ್ಮ ಜೊತೆಗಿನ ಋಷಿಗಳನ್ನು ಕುರಿತು, "ಅವರವರು ಮಾಡಿದ ಪುಣ್ಯಪಾಪಗಳಿಗನುಗುಣವಾಗಿ ಫಲವುಂಟಾಗುತ್ತದೆ; ತಾನು ಹಾಗೆ ಮಾಡುತ್ತೇನೆ ಹೀಗೆ ಮಾಡುತ್ತೇನೆ ಎಂಬುವವರು ದೊಡ್ಡವರಾಗಲು ಸಾಧ್ಯವೇ? ಕಾರಣವಿಲ್ಲದೆ ಬೇರೆಯವರನ್ನು ಮೋಸದಿಂದ ನಾಶಮಾಡುತ್ತೇವೆಂದುಕೊಂಡ ಜಡರು ನರಕದಲ್ಲಿ ದೊಪ್ಪೆಂದು ಬೀಳುತ್ತಾರೆ; ಪಾಪ, ಮೂರ್ಖರು ದುಃಖಕ್ಕೆ ವ್ರತ ತೊಡುತ್ತಾರೆ. ಜಡಮತಿಗಳು ಮುನಿಸಿನಿಂದ ಬೇರೆಯವರನ್ನು ಕೊಲ್ಲಲು ಬಯಸುತ್ತಾರೆ: ಆದರೆ ಅದು ಅವರ ಅಳವಲ್ಲ. ನರಕ್ಕಾಗಲೀ ಸ್ವರ್ಗಕ್ಕಾಗಲೀ ಹೋಗಲು ಇತರರು ಕಾರಣರಾಗುವುದಿಲ್ಲ; ಆದ್ದರಿಂದ ಇತರರ ಮೇಲೆ ಸಿಟ್ಟುಗೊಂಡರೂ ಒಲುಮೆ ತೋರಿಸಿದರೂ ಅದರಿಂದ ಏನೂ ಆಗದು. ನಮ್ಮ ಕಾರಣದಿಂದ ಇವನು ಸುಮ್ಮನೆ ದುಃಖಕ್ಕೆ ಗುರಿಯಾಗುವನು ಎಂಬ ಉಮ್ಮಳದ ಹೊರತು ನಮ್ಮನ್ನು ಅವನು ಕೊಲ್ಲುತ್ತಾನೆ ಎಂಬ ನೋವು ನಮಗಿಲ್ಲ. ಬೇಸಿಗೆಯಲ್ಲಿ ಬಿಸಿಲು ಪ್ರಖರವಾಗಿದ್ದರೂ ತಾವರೆಗಳು

ಬೇಸರಗೊಳ್ಳವು; ಇನ್ನು ಪುಣ್ಯವಂತರನ್ನು ನಾಶಮಾಡುತ್ತೇವೆ ಎನ್ನುವವರಿಗೆ ಅದೆಷ್ಟು ಧೈರ್ಯವೋ! ತನ್ನ ಸ್ನೇಹಿತನಾದರೂ ಚಂದ್ರನು ನೈದಿಲೆಯನ್ನು ಹಗಲಿನಲ್ಲಿ ಅರಳುವಂತೆ ಮಾಡಲಾರ; ಹಾಗೆಯೇ ಪುಣ್ಯಹೀನರನ್ನು ಬೇರೆಯವರು ತಮ್ಮ ಒಲವಿನಿಂದ ರಕ್ಷಿಸಲು ಸಾಧ್ಯವೇ? ತಮ್ಮ ತಮ್ಮ ತಪಸ್ಸು ದಾನ ಇವುಗಳ ಫಲದಿಂದ ಸುಖ, ದೀರ್ಘಾಯಸ್ಸು ಇವು ಉಂಟಾಗುತ್ತವೆ; ತಮ್ಮ ಮೇಲಿನ ಕೋಪದಿಂದ ಇತರರು ಹಾಗೆ ಮಾಡಲಾಗುವುದಿಲ್ಲ" ಎಂದು ಹೇಳಿ ಅವರೆಲ್ಲ ಪರಮಾಗಮ ಭಾವನೆಯಿಂದ ನಿರ್ಮಲಚಿತ್ತರೂ, ಮಂದರಧೈರ್ಯರೂ, ನಿರ್ಭಯರೂ ಆಗಿರಬೇಕೆಂದು ಉಪದೇಶಿಸಿದರು. ಅದರಂತೆ ಅವರೆಲ್ಲ ಬಲಿಯು ಮಾಡಬಹುದಾದ ಉಪಸರ್ಗಗಳು ಕೊನೆಗೊಳ್ಳುವವರೆಗೂ ಆಹಾರ ಶರೀರ ನಿವೃತ್ತಿಯನ್ನು ಕೈಗೊಂಡು ಮನಸ್ಸಿನಲ್ಲಿ ಜಿನಪಾದಾಂಭೋಜಗಳನ್ನು ಧ್ಯಾನಿಸುತ್ತಿದ್ದರು.

ಇತ್ತ ತನ್ನ ಘೋಷಣೆಯಂತೆ ಮುನಿಗಳೆಲ್ಲರೂ ಊರನ್ನು ಬಿಟ್ಟು ಹೋದರೆಂದು ಬಲಿಯು ದೊಡ್ಡದಾಗಿ ಸುಳ್ಳು ಪ್ರಚಾರಮಾಡಿದ. ಹದಿನೈದು ದಿವಸದ ರಾಜನ ಮದದಿಂದ ಊರವರೆಲ್ಲ ಗದಗದ ನಡುಗಿದರು; ಬಲಿಯ ಉಗ್ರತೆಯಿಂದ ಅವರೆಲ್ಲ ಕಂಗೆಟ್ಟರು. ಹೀಗೆ ಅವನು ಒಂದೆರಡು ದಿನಗಳಲ್ಲಿ ಪ್ರಜೆಗಳನ್ನೂ ನಾಡನ್ನೂ ತನ್ನ ಆಜ್ಞಾವರ್ತಿಯಾಗಿ ಮಾಡಿಕೊಂಡ. ಇಡೀ ಜಗತ್ತಿನಲ್ಲಿ ತನಗೆ ಸಮಾನರಾದವರು ಯಾರೂ ಇಲ್ಲ; ಸಮುದ್ರರಾಜನ ಸಿರಿ, ಫಣೀಂದ್ರನ ಮಹಿಮೆ. ಸೂರ್ಯನ ತೇಜಸ್ಸು, ಮನ್ಮಥನ ರೂಪ, ಖೇಚರರ ಪರಾಕ್ರಮ, ಇಂದ್ರನ ವಿಭವ ಇವು ತನಗಿವೆಯೆಂಬ ಭಾವನೆಯಿಂದ ಬಲಿಯು ಕೊಬ್ಬಿದ. ಹುಲ್ಲಿಗೆ ಬೆಂಕಿ ಬಿದ್ದಂತೆ ಉರಿದು, ನಾನು ಏನು ಮಾಡಿದರೂ ಅದನ್ನು ಪ್ರಶ್ನಿಸುವ ಗಂಡರು ಯಾರೂ ಇಲ್ಲ ಎಂದು ನೆಂದ ಅವರೆಯ ಕಾಳಿನಂತೆ ಉಬ್ಬಿ, ಭುಜಗಳನ್ನು ನೋಡಿಕೊಂಡು 'ಪಾಪಿಯೇ ಬಲ್ಲಾಳ' ಎಂಬ ಮಾತನ್ನು ನಿಜ ಮಾಡಿದ ಬಲಿಯು ಮುನೀಂದ್ರೋತ್ತಮರಾದ ಆಕಂಪನಾಚಾರ್ಯರಿದ್ದ ಅಸಿತ ಗಿರಿಯ ಬಳಿ ಬಂದ.

ಈ ಬಯಲು ಯಜ್ಞಶಾಲೆಗೆ ಸೂಕ್ತವಾಗಿದೆ, ಬೇಗನೆ ಇಲ್ಲಿ ಸುಂದರವಾದ ಹಂದರವನ್ನು ಸಿದ್ಧಪಡಿಸಬೇಕು ಎಂದು ಬಲಿಯು ಹೆಗ್ಗಡೆಗೆ ಆಜ್ಞಾಪಿಸಿದ. ಅದಕ್ಕನುಗುಣವಾಗಿ, ಅರ್ಧ ಗಾವುದ ವಿಸ್ತಾರದ ಭೂಮಿಯಲ್ಲಿ ಯಜ್ಞಶಾಲೆಯನ್ನು ಸುಂದರವಾಗಿ ನಿರ್ಮಿಸಲಾಯಿತು. ಹೇಳಿದಂತೆ ಬೇಕಾದುದೆಲ್ಲವನ್ನೂ ಮಾಡಿ ಬಂದು ವಿಜ್ಞಾಪನೆ ಮಾಡಿದ ಹೆಗ್ಗಡೆಗೆ ಬಲಿಯು ಉಚಿತವಾದ ಮೆಚ್ಚುಗೆಯನ್ನು ಕೊಟ್ಟ. ಆಮೇಲೆ ಯಜ್ಞಶಾಲೆಯನ್ನು ಕಣ್ಣಾರೆ ಕಾಣುವ ಆತುರದಿಂದ ಮದಗಜವನ್ನೇರಿ ಬಂದು ಚಪ್ಪರಗಳ ಚೆಲುವನ್ನೂ, ಮಂಟಪಗಳ ವಿಲಾಸವನ್ನೂ, ಜಗಲಿಗಳ ಭಂಗಿಗಳನ್ನೂ, ವಿಸ್ತಾರವಾದ ಹೋಮಕುಂಡಗಳನ್ನೂ ನೋಡುತ್ತ ಗುಹೆಯ ಬಾಗಿಲಿಗೆ ಬಂದ. ಬೇಕಾದವರು ಸಿಕ್ಕಿದರು ಎಂದು ಅಟ್ಟಹಾಸದಿಂದ ನಕ್ಕು, ಜೊತೆಗಿದ್ದವರನ್ನು ವಂಚಿಸಲೆಂದು ಅವರ ಮುಖ ನೋಡಿ, "ಗುಹೆಯಲ್ಲಿ ಕ್ರೂರ ಮೃಗಗಳು ಅಡಗಿಕೊಂಡಿರಬಹುದು; ಅವು ಹೋಗಿ ಬರುವ ಜನಕ್ಕೆ ಅಪಾಯವನ್ನುಂಟುಮಾಡಬಹುದು. ಆದ್ದರಿಂದ ಒಳಗಿರುವ ಪ್ರಾಣಿಗಳನ್ನು ಹೊರಗೆ ಬರುವಂತೆ ಮಾಡಬೇಕು. ಅದಕ್ಕೆ ಗುಹೆಯ ಬಾಗಿಲನಲ್ಲಿ ಪುಳ್ಳೆಗಳನ್ನು ತುಂಬಿ ಬೆಂಕಿಯನ್ನಿಡಿರಿ" ಎಂದು ಆಜ್ಞಾಪಿಸಿದ. ಅದರಂತೆ ಸೇವಕರು ಗುಹೆಯ ಬಾಗಿಲಲ್ಲಿ ಹೊಸತಾದ ಸಾವೆಯ ಹುಲ್ಲನ್ನು ಹಾಕಿ, ತಾರೆ, ತೆಂಗು, ಎಕ್ಕೆ, ಮಾವು ಮುಂತಾದ ಮರಗಳ ಸವುದೆಯನ್ನು ಅಚ್ಚುಕಟ್ಟಾಗಿ ಒಟ್ಟಿದರು. ಅನಂತರ ಒಣಗಿದ ಪುಳ್ಳೆಗಳನ್ನೂ, ಎಳ್ಳಿನ ಹೊಟ್ಟನ್ನೂ, ಬೆರಣಿಗಳನ್ನೂ, ಹರಿದ ಬಟ್ಟೆಗಳನ್ನೂ ಒತ್ತಾಗಿ ಗುಹೆಯ ಬಾಗಿಲಲ್ಲಿ ತುಂಬಿದರು. ಈ ರೀತಿ ಗುಹೆಯ ಬಾಗಿಲನ್ನು ಬಿಗಿಯಾಗಿ ಮುಚ್ಚಲಾಯಿತು. ಆಮೇಲೆ ಎಣ್ಣೆ ತುಪ್ಪಗಳನ್ನು ಕೊಡಗಳಲ್ಲಿ ತರಿಸಿ ತನ್ನ ಮನಸ್ಸಿಗೆ ತೃಪ್ತಿಯಾಗುವಂತೆ ಬೆಂಕಿ ಹಚ್ಚಿ ಮುನಿಸಮೂಹವನ್ನು ಕೊಲ್ಲುವೆನೆಂದು ಬಲಿ ಯೋಚಿಸಿದ.

ಈ ಕಡೆ ಮಿಥಿಲಾಪುರದಲ್ಲಿ ಪರಮ ಗುಣಾಢ್ಯರೂ, ನಿರ್ಮಲಚರಿತರೂ, ಪಾಪವಿನಾಶಿಗಳೂ ಆದ ಶ್ರುತಸಾಗರರೂ ಅವಧಿಲೋಚನರೂ ಮಂದರ ಧೈರ್ಯರೂ ಸಕಲಭವ್ಯವಂದಿತರೂ ಆದ ವಿಷ್ಣು ಎಂಬ ಹೆಸರಿನ ಆಚಾರ್ಯರು ತಮ್ಮ ಪರಿವಾರದೊಡನೆ ಕೂಡಿ ಯೋಗದೀಕ್ಷೆಗೊಂಡು ಬೀಡು ಬಿಟ್ಟಿದ್ದರು. ಅಲ್ಲಿಗೆ ಧರ್ಮರುಚಿಗಳೆಂಬ ಋಷಿಗಳು

ಕಾಯಶುದ್ಧಿಗೆಂದು ಹೊರಬಂದು ಆಕಾಶವನ್ನು ನೋಡಿದರು. "ಪರಮ ತಪೋಧನರ ಆಜ್ಞಾಪಾಲನೆಮಾಡುವವವರೇ ಜಗತ್ತಿನಲ್ಲಿ ಸುಖಭಾಜನರು ಎಂದು ಈ ಖೂಳನು ಅರಿಯ; ಕೋಪಗೊಂಡು ಉತ್ತಮ ಮುನಿಸಮೂಹಕ್ಕೆ ತೊಂದರೆಯನ್ನು ಮಾಡಿ ಮಹಾ ನರಕಕ್ಕೆ ಹೋಗುತ್ತಾನಲ್ಲ" ಎಂದು ಅಧಿಕವಾದ ದಯೆಯಿಂದ ಹೇಳುತ್ತಿರುವಂತೆ ನಡುಗುವ ಶ್ರವಣ ನಕ್ಷತ್ರವನ್ನು ನೋಡಿದರು. ಎಲ್ಲಿಯೋ ಮಹಾ ತಪೋಧನರಿಗೆ ಘೋರವಾದ ಉಪಸರ್ಗ ವಾಗುತ್ತಿರಬೇಕು, ಇಲ್ಲದಿದ್ದರೆ ಈ ನಕ್ಷತ್ರ ನಡುಗುವುದಿಲ್ಲ ಎಂದು ಅವರಿಗನ್ನಿಸಿತು. ಆ ಕ್ಷಣ ಬಿಡಾರದ ಒಳಗೆ ಬಂದು ಈ ವಿಷಯವನ್ನು ಗುರುಗಳಿಗೆ ಅರಿಕೆ ಮಾಡಿಕೊಂಡರು.

ಅದನ್ನು ಕೇಳಿದ ಆ ಸಚ್ಚರಿತರು ತಮ್ಮ ಅವಧಿ ಲೋಚನದಿಂದ ಮುನಿಗಳಿಗೆ ಒದಗಲಿರುವ ಉಪಸರ್ಗವನ್ನು ತಿಳಿದರು. ಅವರ ಜೊತೆಯಲ್ಲಿದ್ದ ಸಿದ್ಧವಿದ್ಯೆಯಲ್ಲಿ ಪರಿಣತನಾದ ಹಾಗೂ ವಾತ್ಸಲ್ಯರತ್ನಾಕರನಾದ ಪುಷ್ಪದೇವನೆಂಬ ಬ್ರಹ್ಮಚಾರಿಯು, ಕುರುಜಾಂಗಣ ವಿಷಯದ ಹಸ್ತಿನಾಪುರದಲ್ಲಿ ಯೋಗದೀಕ್ಷೆಯಲ್ಲಿದ್ದ ಆಕಂಪನಾಚಾರ್ಯರಿಗೂ ಅವರೊಡನಿದ್ದ ಐನೂರು ಮಂದಿ ಸಾಧುಗಳಿಗೂ ಬಲಿ ಎಂಬ ಕ್ರೂರಾತ್ಮನಿಂದ ಘೋರ ಉಪಸರ್ಗವು ಒದಗಲಿರುವುದನ್ನು ತಿಳಿದು ಕೋಪದಿಂದ ಭುಗಿಲೆದ್ದ. ತನ್ನ ವಿದ್ಯೆಯ ಬಲದಿಂದ ಆ ದುರುಳನನ್ನು ಕೋಡಗಗಟ್ಟಿಸಲೇ; ಸಮುದ್ರದಲ್ಲಿ ಅವನನ್ನು ಮುಳುಗಿಸಿ ಜೀವವು ಅಲ್ಲಾಡುವಂತೆ ಮಾಡಲೇ; ಮೇರುಪರ್ವತದ ಶಿಖರದಿಂದ ಉರುಳಿಸಲೇ: ಹಾವುಗಳ ಸಮೂಹದಿಂದ ತಾಕಿಸಿ ಬೆದರಿಸಲೇ; ಅಥವಾ ಇನ್ನಾವ ಪರಿಯಿಂದ ಬಲಿಯನ್ನು ಶಿಕ್ಷಿಸಲಿ ಎಂದು ವಿದ್ಯಾಪರಮೇಶ್ವರನಾದ ತಾನು ವಿಷ್ಣು ಮುನಿಪುಂಗವರ ಮುಂದೆ ತನ್ನ ಪ್ರತಾಪವನ್ನು ಹೇಳಿಕೊಂಡ. ತನ್ನ ವಿದ್ಯೆಯಿಂದ ಬಲಿಯನ್ನು ಕಟ್ಟಿ ಎಳೆದು ತಂದು ಸಮುದ್ರದಲ್ಲಿ ಮುಳುಗಿಸಿ ಕೊಲ್ಲುತ್ತೇನೆ ಎಂದು ಆರ್ಭಟಿಸಿದ.

ಅದನ್ನು ಕೇಳಿದ ವಿಷ್ಣು ಮುನಿಗಳು ಪುಷ್ಪದೇವನಿಗೆ, "ಕಡು ಮೂರ್ಖನು ಮಾಡುವ ಕೆಟ್ಟ ಕೆಲಸವನ್ನು ತಡೆಯದೆ ಅದನ್ನೇ ನಾನೂ ಮಾಡುತ್ತೇನೆಂಬುವವನು ತುಂಬ ಕೀಳು ಮನುಷ್ಯ. ನಾಯಿ ಕಚ್ಚಿದರೆ ನಾವೂ ಕಚ್ಚಬೇಕೇ, ಅದು ಬೊಗಳಿದರೆ ಬೊಗಳಬೇಕೇ? ಕೋಪದಿಂದ ನಿನಗೆ ಸಮಾನನಲ್ಲದವನಿಗೆ ಎದುರಾಗಬಾರದು. ಆನೆಯು ಸಿಂಹದ ಗರ್ಜನೆಗೆ ಮುನಿಯುವಂತೆ ನರಿಯು ಊಳಿಟ್ಟರೆ ಮುನಿಯುವುದೇ?" ಎಂದು ಮೃದುವಚನಗಳಿಂದ ವಿಷ್ಣು ಮುನೀಶ್ವರರು ಪುಷ್ಪದೇವನನ್ನು ಸಮಾಧಾನ ಮಾಡಿದರು.

ಆನಂತರ ವಿಷ್ಣುಕುಮಾರ ಮುನಿತಿಲಕನ ಮುಖವನ್ನು ನೋಡಿ, "ತಪೋಧನರಾಗಲೀ, ಶ್ರಾವಕರಾಗಲೀ ಪ್ರಭಾವನೆಯನ್ನು ಮಾಡದಿದ್ದರೆ ಹೊಸ ಬಸದಿಯನ್ನು ಕಟ್ಟಿಸಿ ತೂತು ಬಿದ್ದ ಕಳಶವನ್ನಿಡುವಂತೆ ಮಹಾವ್ರತವಾಗಲೀ ಅಣುವ್ರತವಾಗಲೀ ನಿಷ್ಫಲವಾಗುತ್ತದೆ. ಆ ಕಾರಣದಿಂದ, ಮುನಿವರರ ಉಪಸರ್ಗವು ಪರಿಹಾರವಾಗಬೇಕಾದರೆ ಭವ್ಯವಂದಿತಪಾದರಾದ ನಿಮ್ಮಿಂದಲೇ ಆಗಬೇಕು" ಎಂದರು. ಅದನ್ನು ಕೇಳಿ ಸುಕವಿನಿಕರಪಿಕಮಾಕಂದನು ನಕ್ಕು ಮನಸ್ಸಿನಲ್ಲಿಯೇ ಲಜ್ಜೆಗೊಂಡ. ಅನಂತರ ಜಿಷ್ಣು ಮುನಿಪತಿಗೆ ವಿನಯದಿಂದ ನಮಸ್ಕರಿಸಿ ತಲೆ ಬಾಗಿ ಕೈಮುಗಿದು, "ಶ್ರೇಷ್ಠ ಮುನಿವರರಿದ್ದೂ ನನ್ನನ್ನು ತಾವು ನನ್ನ ಮೇಲಿನ ಪ್ರೀತಿಯಿಂದ ಮುನಿಗಳ ಉಪಸರ್ಗವು ನನ್ನಿಂದ ಪರಿಹಾರವಾಗುತ್ತದೆ ಎಂದಿರಿ. ನನ್ನಲ್ಲಿ ತಾವು ಅದಾವ ಗುಣವನ್ನು ಕಂಡು ಹೀಗೆಂದಿರೋ ತಿಳಿಯದು" ಎಂದ. ಅದಕ್ಕೆ ಜಿಷ್ಣು ಮುನೀಶ್ವರರು ಹೀಗೆಂದರು: "ಇಡೀ ಧರಿತ್ರಿಯು ಕೈಮುಗಿಯುವಂತೆ, ಯಾವ ಆಸೆಯಿಲ್ಲದೆ ರಾಜ್ಯಲಕ್ಷ್ಮಿಯನ್ನು ತೊರೆದು, ಮನುಷ್ಯಲೋಕವು ಅಸ್ಥಿರವೆಂದು ಆಸೆಯಿಂದ ಸೋತು ಜೀಯೆನ್ನದೆ, ಜಿನದೀಕ್ಷೆಯನ್ನು ಪಡೆದು, ಮೂರು ಮೂಢಗಳನ್ನೂ ಒಮ್ಮೆಗೇ ಬಿಟ್ಟು, ಅನ್ಯಧರ್ಮವನ್ನು ಸೇರದೆ, ಸಂಶಯಗೊಳ್ಳದೆ, ನಿರ್ಮಲಚಿತ್ತದಿಂದ ಮೋಕ್ಷಾಪೇಕ್ಷೆಯಿಂದ ಉತ್ತಮ ತಪಸ್ಸನ್ನು ಮಾಡಿದೆ; ಆದ್ದರಿಂದ ತಪಸ್ಸಿನ ಮಾಹಾತ್ಮ್ಯದಿಂದ ನಿನಗೆ ಅಣಿಮಾ ಮಹಿಮಾ ಗರಿಮಾ ಲಘಿಮಾ ಪ್ರಾಪ್ತಿ ಪ್ರಾಕಾಮ್ಯ ಈಶಿತ್ವ ಮತ್ತು ವಶಿತ್ವ ಎಂಬ ಅಷ್ಟೈಶ್ವರ್ಯಗಳೂ ಉಂಟಾಗಿವೆ. ಹೀಗಾಗಿ ನಿನ್ನಿಂದಲೇ ಆಕಂಪನಾಚಾರ್ಯರ ಉಪಸರ್ಗವು

ಪರಿಹಾರಗೊಳ್ಳುತ್ತದೆ ಎಂದು ಹೇಳಿದೆ. ಜೀವವಧೆಯಾಗದಂತೆ ಅಖಿಲಾವನಿಪೂಜ್ಯನಾದ ನೀನು ಹೋಗಿ ಉಪಸರ್ಗವನ್ನು ಸದ್ಭಾವದಿಂದ ಹಿಂಗಿಸು" ಎಂದರು.

ಮುನಿಗಳ ಮಾತನ್ನು ಕೇಳಿ ವಿಷ್ಣುಕುಮಾರ ಮುನಿಗೆ ಅಚ್ಚರಿಯಾಯಿತು. ಹಾಗೆಯೇ ಜಿಷ್ಣು ಮುನಿಗೆ ವಂದಿಸಿ ಅವರೆಂದಂತೆ ಹೋಗಲು ನಿರ್ಧರಿಸಿದ. ಭವ್ಯನಾದವನು ಧೈರ್ಯದಿಂದ ಪ್ರಭಾವನೆಯನ್ನು ತಾಳಬೇಕು; ಅಕ್ಷಯಲಕ್ಷ್ಮಿಯನ್ನು ಸೇರುವ ಅಪೇಕ್ಷೆಯುಳ್ಳವನೂ ಪಾಪಕ್ಷಯವನ್ನು ಮಾಡುವವನೂ ಪ್ರಭಾವನಾಂಗವನ್ನು ತಾಳಬೇಕು; ಪ್ರಭಾವನೆಯನ್ನು ಮಾಡದವನು ದೇವಲೋಕಸುಖವನ್ನು ಪಡೆಯಲು ಸಾಧ್ಯವೇ? ಮುನಿಯಾಗಲೀ ಶ್ರಾವಕನಾಗಲೀ ಪ್ರಭಾವನೆಯನ್ನು ಮಾಡಬೇಕು; ಇಲ್ಲದಿದ್ದರೆ ಅನಂತಸುಖವನ್ನು ಪಡೆಯಲಾಗುವುದಿಲ್ಲ, ಎಂದು ಪ್ರಭಾವನೆಯ ಪ್ರಭಾವವನ್ನು ನೆನೆಸಿಕೊಂಡ.

ಮಾರನೆಯ ಬೆಳಿಗ್ಗೆ ವಿಷ್ಣುಕುಮಾರಮುನಿಯು ಎದ್ದು ಗುರುಗಳಿಗೆ ವಂದಿಸಿ ಜಿಷ್ಣು ಮುನೀಶ್ವರರ ಆಜ್ಞೆಯಂತೆ ಮಿಥಿಲಾಪುರದಿಂದ ಹೊರಟು ಋದ್ಧಪ್ರಾಪ್ತಿಯಿದ್ದುದರಿಂದ ಮನೋವೇಗದಿಂದ ಹಸ್ತಿನಾಪುರವನ್ನು ಸೇರಿ ಪದ್ಮ ಮಹಾರಾಜನ ಅರಮನೆಯನ್ನು ಹೊಕ್ಕ. ಅವನನ್ನು ಕಂಡು ಮಹಾರಾಜನು ಬಹು ಗೌರವದಿಂದ ತನ್ನ ಹೆಂಡಿರ ಜೊತೆಯಲ್ಲಿ ಮುನೀಶ್ವರರ ಚರಣದ್ವಯಕ್ಕೆ ಚಿಗುರಿಗೆ ಮರಿದುಂಬಿ ಎರಗುವಂತೆ ಎರಗಿದ. ಅವರನ್ನು ಉಚ್ಚಾಸನದಲ್ಲಿ ಕುಳ್ಳಿರಿಸಿ, ಕಾಲುಗಳನ್ನು ತೊಳೆದು ನೀರನ್ನು ತಲೆಗೆ ಸಂಪ್ರೋಕ್ಷಿಸಿಕೊಂಡ. ತನಗೆ ವರವನ್ನು ನೀಡಲು ಕಲ್ಪವೃಕ್ಷವು ಅಮರಾವತಿಯಿಂದ ಇಳಿದು ತನ್ನ ಅರಮನೆಗೆ ಬಂದಿದೆಯೋ ಎನ್ನುವಂತೆ ಮುನಿಗಳನ್ನು ನೋಡಿದ. ಕೈಮುಗಿದು, "ತಮ್ಮ ಚಿತ್ತ, ತಾವು ಇಲ್ಲಿಗೆ ಬಿಜಯ ಮಾಡಿದ ಕಾರಣವೇನು? ಅಪ್ಪಣೆಯಾಗಬೇಕು" ಎಂದು ಬಿನ್ನವಿಸಿಕೊಂಡ. ಅದಕ್ಕೆ ವಾತ್ಸಲ್ಯರತ್ನಾಕರನು, "ದುರಿತದ ಮುಂಗಾಲು, ಪಾಪದ ನೆರಮನೆ, ಬ್ರಹ್ಮೇತಿಕಾರನ ಗಿಳಿ, ನಿಷ್ಕರುಣದ ನೆಲೆ, ದುರ್ಗುಣದ ಆಗರವಾದ ನಿನ್ನ ಮಂತ್ರಿಯಾದ ಬಲಿಯೆಂಬ ಖಳನು ನಿನಗೆ ಅರಸುತನವನ್ನು ತಪ್ಪಿಸಿ, ಅರ್ಧ ತಿಂಗಳ ಕಾಲ ರಾಜ್ಯವನ್ನು ಬೇಡಿ ತಾನು ಪಡೆದುಕೊಂಡು, ಹಿಂದಿನ ಕೋಪದಿಂದಾಗಿ ಯಜ್ಞದ ನೆಪದಿಂದ ಸಿತಗಿರಿಯಲ್ಲಿರುವ ಆಕಂಪನಾಚಾರ್ಯರೇ ಮೊದಲಾದ ಐನೂರು ಮಂದಿ ಮುನಿವರರಿಗೆ ಘೋರೋಪಸರ್ಗವನ್ನು ಮಾಡ ಹೊರಟಿದ್ದಾನೆ. ರಾಜನೇ, ಅದನ್ನು ನೀನು ಉಪೇಕ್ಷಿಸಿ ಮಿಥ್ಯಾದೃಷ್ಟಿಯನ್ನು ತೋರಿಸುವುದು ಉಚಿತವಲ್ಲ. ಯಾವ ತೊಡರೂ ಇಲ್ಲದೆ ಪರಂಪರೆಯಲ್ಲಿ ಬಂದ ಜೈನಧರ್ಮವನ್ನು ಮಧ್ಯೆ ಕೆಡಿಸಿ ಮುನಿಸಂಕುಲಕ್ಕೆ ಆಗುವ ಎಡರನ್ನು ಕಡೆಗಣಿಸಿ ನೋಡುತ್ತಿರುವುದೇ? ಅಲ್ಲದೆ, 'ರಾಜ್ಞಾಹಿ ರಕ್ಷಿತೋ ಧರ್ಮ', 'ದುರ್ಬಲಸ್ಯ ಬಲೋ ರಾಜಾ' ಎಂಬ ಮಾತುಗಳನ್ನೂ; 'ಸರ್ವೇಷಾಂ ಪಾರ್ಥಿವೋ ಗುರು:' ಎಂಬ ನೀತಿ ವಾಕ್ಯವನ್ನೂ; 'ಭೃತ್ಯಾಫರಾಧಃ ಸ್ವಾಮಿನೋ ದಂಡಃ' ಎಂಬ ಪುರಾಣವಾಕ್ಯವನ್ನೂ ನೆನಸಿಕೊಂಡಾದರೂ ಮುನಿವರರ ಉಪಸರ್ಗವನ್ನು ಹೋಗಲಾಡಿಸು" ಎಂದು ಹೇಳಿದರು.

ಇದನ್ನು ಕೇಳಿದ ರಾಜನಿಗೆ ಬೆರಗಾಯಿತು. ತನಗೆ ಮೋಸ ಮಾಡಿ ಯಜ್ಞದ ನೆಪದಿಂದ ಮುನಿನಿಚಯವನ್ನು ಒಟ್ಟಿದ ಕುರಿಯನ್ನು ತರಿದು ಹಾಕದೇ ಬಿಡುವುದಿಲ್ಲ ಎಂದು ಗರ್ಜಿಸಿದ. ಇರುವೆಗೆ ರೆಕ್ಕೆ ಮೂಡಿದಂತೆ ಕೊಬ್ಬಿ ಸಿಂಹದ ಕೇಸರವನ್ನು ಕಿತ್ತರೆಂಬಂತೆ ನನಗೆ ವಂಚನೆ ಮಾಡಿ, ಮೂಗನ್ನು ಕತ್ತರಿಸಿ ಕನ್ನಡಿಯನ್ನು ತೋರಿಸಿದರೆಂಬಂತೆ, ಧೂರ್ತನು ನನ್ನ ಕಣ್ಣುಗಳನ್ನು ಚುಚ್ಚುವಂತೆ ಸೊಕ್ಕಿನಿಂದ ನನ್ನ ಗುರುಗಳಿಗೂ, ನನ್ನ ಊರಿಗೂ ನಾನಾ ವಿಧವಾದ ಉಪಸರ್ಗವನ್ನು ಮಾಡುತ್ತಾನೇನು ಎಂದು ರಾಜನು ಕಿಡಿಕಿಡಿಪೋದ. ಬಲಿಯ ಧೂರ್ತತನಕ್ಕೆ ದುಃಖಿತನಾಗಿ ಸಿಂಹಾಸನವನ್ನು ತಟ್ಟಿದ ರಾಜನು ಆವೇಶದಿಂದ ಹೊರಟ. ಆ ಸಮಯದಲ್ಲಿ ರಾಜನ ಭಕ್ತಿ, ಸದ್ಧರ್ಮ ಪಕ್ಷಪಾತ ಹಾಗೂ ಸ್ವಧರ್ಮ ಪಕ್ಷಪಾತಗಳನ್ನು ನೋಡಿ ವಿಷ್ಣುಕುಮಾರ ಮುನಿಪನಿಗೆ ಮೆಚ್ಚಿಕೆಯುಂಟಾಯಿತು. ಆದರೆ ಅವನನ್ನು ತಡೆದು, ತಾನು ಬಂದದ್ದು ಅವನ ಮನೋಭಾವವನ್ನು ಪರೀಕ್ಷಿಸಲೆಂದು ಮಾತ್ರ ಎಂದು ತಿಳಿಸಿ, ಅವನ ಮನಸ್ಸಿನ ನಿರ್ಮಲತೆ, ಧರ್ಮಪ್ರೀತಿ, ಮುನಿಗಳ ಬಗೆಗಿನ ಗೌರವ ಇವುಗಳನ್ನು ಕಂಡು ತನಗೆ ತುಂಬ ಸಂತಸವುಂಟಾಯಿತೆಂದು ನುಡಿದ. ಆನಂತರ, "ರಾಜನೇ, ನೀನು

ಮುನಿಸಿಕೊಂಡು ಕೊಲ್ಲುವ ಕೆಲಸ ಮಾಡಿಬಿಡುತ್ತೀಯ. ಅದರಿಂದ ನಿಷ್ಠುರ ಪಾಪಸಂಚಯವಾಗುತ್ತದೆ; ಕರ್ಮ ಸೇರಿದರೆ ಕೆಟ್ಟದ್ದು. ಬಲಿಯು ಮಾಡುವ ತೊಂದರೆಯನ್ನು ಜೀವಬಾಧೆ ಯಾಗದಂತೆ ಬುದ್ಧಿವಂತಿಕೆಯಿಂದ ಒಂದೇ ಕ್ಷಣದಲ್ಲಿ ತಪ್ಪಿಸಲು ನಾನೇ ಸಾಕು" ಎಂದು ರಾಜನ ಕೋಪಾವೇಶವನ್ನು ಶಮನಗೊಳಿಸಿದ.

ಆಮೇಲೆ ವಿಷ್ಣು ಮುನಿಪತಿಯು ರಾಜಭವನದಿಂದ ಹೊರಟು ತನಗೆ ಒಲಿದಿದ್ದ ಅಣಿಮಾದಿ ಅಷ್ಟೈಶ್ವರ್ಯದ ಬಲದಿಂದ ತನ್ನ ಆಕಾರವನ್ನು ಕಿರಿದುಗೊಳಿಸಿಕೊಂಡ. ಹೊಳೆಯುವ ಕೊರಳ ಜನಿವಾರ, ಮಿರುಗುವ ಬೆಳ್ಳಿಯ ಉತ್ತರೀಯ, ಬೆರಳಿನಲ್ಲಿ ಶೋಭಿಸುವ ದರ್ಭೆ, ಕೆಂಪಾದ ಕಣ್ಣುಗಳು, ಉಟ್ಟ ದುಕೂಲ, ಇವುಗಳಿಂದ ಒಪ್ಪುವ ಒಬ್ಬ ಬ್ರಾಹಣನ ವೇಷವನ್ನು ಧರಿಸಿದ. ಎದೆ, ಬಾಹುಮೂಲ, ಹಣೆಗಳಲ್ಲಿ ನೀಳವಾದ ತಿಲಕಗಳು ಮೆರೆಯುತ್ತಿದ್ದವು; ಬಾಗಿದ ಕುಳ್ಳುಗಾಲು, ಕುಗ್ಗಿದ ಕೈಗಳು, ಚಿನ್ನದ ಮೈಬಣ್ಣ, ಅಗಲವಾದ ಎದೆ, ಕೆಚ್ಚನೆಯ ತಲೆಗೂದಲು, ಹೊಳೆಯುವ ಕಣ್ಣುಗಳು, ಹೀಗೆ ಅವನು ವಾಮನರೂಪವನ್ನು ತಳೆದ. ಇವನ್ನು ಕಂಡು ಊರವರೆಲ್ಲ ಅಚ್ಚರಿಗೊಂಡರು. ಊರ ಮಧ್ಯದಿಂದ ಹೊರಟ ಈ ಬ್ರಾಹ್ಮಣನು ನಿಧಾನವಾಗಿ ಸಿತಗಿರಿಯ ಕಡೆ ಹೆಜ್ಜೆ ಹಾಕಿದ. ಅವನ ರೂಪ, ತೇಜಸ್ಸುಗಳನ್ನು ಕಂಡವರು ಅವನು ಸಾಕ್ಷಾತ್ ಪರಮೇಶ್ವರನೇ ಎಂದು ತಿಳಿದು ಜಯಕಾರ ಮಾಡಿದರು, ಅವನ ಕಾಲುಗಳಿಗೆ ಬಿದ್ದರು. ಅವನೊಡನೆ ಯಜ್ಞಶಾಲೆಯ ಕಡೆ ಸಾಗಿದರು.

ಅಲ್ಲಿದ್ದ ಬಲಿ ಶುಕ್ಲ ಪ್ರಹ್ಲಾದರು ಬ್ರಾಹ್ಮಣನನ್ನು ಕಂಡು ಸಾಕ್ಷಾತ್ ವಿಷ್ಣು ಎಂದು ಬಗೆದರು. ಬಲಿಯ ಮನಸ್ಸಿಗೆ ಪರಮ ಹರ್ಷವಾಯಿತು; ಜೊತೆಯಲ್ಲಿದ್ದ ಪರಿವಾರದ ಸಮೇತ ಅವನನ್ನು ಭಕ್ತಿಯಿಂದ ಇದಿರುಗೊಂಡು ಪಾದಗಳಿಗೆರಗಿದ. "ನಾನು ಮಾಡುವ ಯಜ್ಞದ ವಿಷಯ ತಿಳಿದು ಅದನ್ನು ನೋಡಲು ವೈಷ್ಣವಲೋಕದಿಂದ ವಿಷ್ಣುವೇ ಅಕ್ಕರೆಯಿಂದ ಬಂದಿರುವನೆಂದರೆ ನನ್ನಷ್ಟು ಪುಣ್ಯಶಾಲಿಗಳು ಈ ಧರಿತ್ರಿಯಲ್ಲಿ ಬೇರಾರಿರುವರು!" ಎಂದು ಸಂಭ್ರಮಗೊಂಡ. ಉತ್ಸಾಹದಿಂದ ಮಾಯಾ ಬ್ರಾಹ್ಮಣನನ್ನು ಕರೆದೊಯ್ದು ಯಜ್ಞಶಾಲೆ ಮತ್ತು ಮಂಟಪಗಳನ್ನು ತೋರಿಸಿದ. ಆನಂತರ ಹಿರಿದಾದ ಗೌರವದಿಂದ ಅವನನ್ನು ಕುಳ್ಳಿರಿಸಿ ಕಾಲು ತೊಳೆದು ಪಾದೋದಕವನ್ನು ತಲೆಯ ಮೇಲೆ ಪ್ರೋಕ್ಷಿಸಿಕೊಂಡ. ಮತ್ತೆ ನಮಸ್ಕರಿಸಿ ಕೈ ಜೋಡಿಸಿಕೊಂಡು, "ದೇವ, ಮಾನವರು ಹಾಗೂ ದೇವರಿಂದ ವಂದಿತನಾದ ನೀನು ನಾನು ಮಾಡಿದ ಪುಣ್ಯಕಾರಣದಿಂದ ಭೂಮಿಗೆ ಇಳಿದು ಬಂದೆ ಎಂದರೆ ನಾನು ನಿಜಕ್ಕೂ ಧನ್ಯ. ಹರಿಯೇ, ನಾನಾದರೋ ದೀರ್ಘ ಕಾಲ ಹೂಗಳ ರಾಸಿಯಿಂದ ಪೂಜಿಸಿ, ತಪಸ್ಸಿನಿಂದ ದೇಹವನ್ನು ಕೃಶಗೊಳಿಸಿಕೊಂಡರೂ ನಿನ್ನನ್ನು ಕಾಣದವನು ಇಂದು ನಿನ್ನ ಪಾದಕಮಲಗಳನ್ನು ದರ್ಶಿಸಿದೆ, ನಾನೇ ಕೃತಕೃತ್ಯ. ನನಗಿಂತ ಪುಣ್ಯವಶರು ಬೇರೆ ಯಾರೂ ಇಲ್ಲ" ಎಂದು ಮೈಯುಬ್ಬಿ ಪರವಶತೆಯಿಂದ ನುಡಿದ.

ತನಗೆ ಒದಗಿ ಬಂದ ಪುಣ್ಯಕ್ಕೆ ಅವನಿಗೆ ವಿಷ್ಮಯವುಂಟಾಯಿತು. ಬ್ರಾಹ್ಮಣನ ಮುಖವನ್ನು ನೋಡುತ್ತ ಭಕ್ತಿಯಿಂದ ತಲೆ ಬಾಗಿ, "ತಾವು ಈ ಯಜ್ಞದಲ್ಲಿ ನನಗೆ ಶ್ರೇಯಸ್ಸು ದೊರೆಯಲು ತಮಗೆ ಇಷ್ಟ ಬಂದ ವಸ್ತುವನ್ನು ಕೇಳಿಕೊಳ್ಳಿರಿ" ಎಂದು ವಿನಯದಿಂದ ಬೇಡಿಕೊಂಡ. ಅದಕ್ಕೆ ಧರಾಮರನು ಹೀಗೆಂದ: "ನೀನು ಮಾಡುವ ಯಜ್ಞದ ವೈಖರಿಯನ್ನು ಕಣ್ಣಾರೆ ಕಾಣಬೇಕೆಂಬ ಒಂದೇ ಕಾರಣದಿಂದ ಬಂದೆ. ಇಲ್ಲಿ ಅಪೂರ್ವವಾದುದನ್ನು ನಿರಾಕುಲನಾಗಿ ನೋಡಿದೆ. ನನಗೆ ಯಾವ ಆಸೆಯೂ ಇಲ್ಲ; ಅಂದ ಮೇಲೆ ಏನು ಬೇಡಲಿ?" ಬಲಿ ಸುಮ್ಮನಾಗಲಿಲ್ಲ. "ಹೇಮರಾಶಿಯನ್ನೋ, ಆನೆಗಳನ್ನೋ, ಕೊನೆಯ ಪಕ್ಷ, ಗೋನಿವಹದಲ್ಲಿ ನಿಮ್ಮ ಮನಸ್ಸಿಗೆ ಬಂದ ಒಂದು ಹಸುವನ್ನಾಗಲೀ ಕುದುರೆಯನ್ನಾಗಲೀ ಕನ್ಯೆಯನ್ನಾಗಲೀ ಸ್ವೀಕರಿಸಿದರೆ ನನ್ನ ಮನಸ್ಸಿಗೆ ಸಮಾಧಾನ" ಎಂದು ಬಲವಂತ ಮಾಡಿದ. ಇದನ್ನು ಕೇಳಿದ ಮಾಯಾ ವಿಪ್ರನು ತಲೆದೂಗಿದ. ಆಮೇಲೆ, "ಪ್ರೀತಿಯಿಂದ ನೀನು ನನಗೆ ಏನನ್ನಾದರೂ ಕೊಡಲೇಬೇಕೆಂದಿದ್ದರೆ, ಏನು ಕೇಳಬೇಕು! ನನಗೆ ಧನಧಾನ್ಯಗಳ ಮೇಲೆ ಕಾಂಕ್ಷೆಯಿಲ್ಲ. ಹ್ಞೂ, ಹೀಗೆ ಮಾಡು: ಹೋಮಕುಂಡಕ್ಕೆಂದು ನನಗೆ ಮೂರು ಅಡಿ ಅಳತೆಯ ಭೂಮಿಯನ್ನು ನೀಡು" ಎಂದು ಕೇಳಿದ.

ಹರಿಸಮಾನನಾದ ಬ್ರಾಹ್ಮಣಶ್ರೇಷ್ಠನಿಗೆ ಭೂಮಿದಾನವನ್ನು ಮಾಡುವುದರಿಂದ ಬರುವ ಕೀರ್ತಿಗೆ ಭಾಜನನಾಗುವ ಆಸೆಯಿಂದ ಅದನ್ನು ಒಪ್ಪಿದ ಬಲಿಯು ಹೊಂಗಳಸದಲ್ಲಿ ನೀರನ್ನು ತರಿಸಿ ಮಂಗಳಶಬ್ದಗಳ ನಡುವೆ ಧಾರೆಯನ್ನೆರೆಯಲು ಸಿದ್ಧನಾದ. ಅಷ್ಟರಲ್ಲಿ ಶುಕ್ರನು ವಿಷ್ಣುಕುಮಾರ ಮುನಿಯ ಕೈಯಲ್ಲಿ ಹಲ ಕುಲಿಶ ಶಂಖ ಕಮಲ ತೋರಣ ಮುಂತಾದ ಲಕ್ಷಣಗಳಿರುವುದನ್ನು ಗಮನಿಸಿದ. ಮೆಲ್ಲನೆ ತನ್ನ ಅಣ್ಣನನ್ನು ಒತ್ತಿ ತಿವಿದು, "ಇವನು ಶುಭಲಕ್ಷಣಸಮನ್ವಿತನಾದ ಬ್ರಾಹ್ಮಣ ಎಂದು ಭೂಮಿಯನ್ನು ದಾನ ಮಾಡಿದರೆ ಮುಂದೆ ನಮ್ಮ ವಂಶಭವರಿಗೆ ಒಳ್ಳೆಯದಾಗುವುದಿಲ್ಲ; ಧಾರೆ ಎರೆಯಬೇಡಿ" ಎಂದು ಪಿಸುಮಾತಲ್ಲಿ ಬೈದು ತಿಳಿಸಿದ. ಸತ್ಪುರುಷನಿಗೆ ಒಮ್ಮೆ ಕೊಟ್ಟ ಮಾತನ್ನು ಮೀರುವುದು ತಕ್ಕುದಲ್ಲವೆಂದು ಬಲಿಯು ವಕ್ರನಾದ ಶುಕ್ರನ ಮಾತನ್ನು ತಳ್ಳಿಹಾಕಿ, ಮೂರು ಅಡಿ ಭೂಮಿಯನ್ನು ದಾನ ಮಾಡಿರುವೆನೆಂದು ಹೇಳಿ ಕಲಶವನ್ನೆತ್ತಿ ಧಾರೆ ಎರೆದ. ಅವನ ಭೂದಾನವನ್ನು ಸ್ವೀಕರಿಸಿದ ವಿಷ್ಣುಕುಮಾರನು, ಸುತ್ತಲಿನ ಜನರೆಲ್ಲ ನೋಡುತ್ತಿದ್ದಂತೆ, 'ಮೂರಡಿ ಕೊಟ್ಟವನಿಗೆ ಆರಡಿ ಮಾಡುತ್ತೇನೆ' ಎಂಬ ಹಾಗೆ, ದಿವಿಜೇಂದ್ರಾದಿಗಳು ಮತ್ಸರ ಪಡುವಂತೆ, ಇದ್ದಕ್ಕಿದ್ದಂತೆ ಕೈ ತಟ್ಟಿ ಕೋಪಾಧಿಕ್ಯದಿಂದ ಆಕಾಶದವರೆಗೂ ಬೆಳೆದುಬಿಟ್ಟ. ಅವನ ದೇಹ ಗಗನಮಂಡಲವನ್ನು ಭೇದಿಸಿತು. ಸೌಧರ್ಮಕಲ್ಪವೇ ಕಿರೀಟ, ಸೂರ್ಯಚಂದ್ರಕಿರಣಗಳೇ ಕರ್ಣಕುಂಡಲಗಳು, ನೀಲಮೇಘಪ್ರಕರವೇ ಗುಂಗುರು ಕೂದಲು, ಬೆವರಿನ ಹನಿಗಳೇ ತಾರಾನಿಕರ, ಇಂದ್ರಪರ್ವತವೇ ದೇಹ, ಕುಲಗಿರಿಗಳು ತೊಂಗಲುಗಳು ಎಂಬ ಹಾಗೆ ಭವ್ಯವಾಗಿ ಮುನೀಂದ್ರನು ಗಗನದವರೆಗೂ ಬೆಳೆದು ನಿಂತ. ದಿಕ್ಕುಗಳ ಸಮೂಹವು ಅವನ ದೇಹದ ಕಾಂತಿಯಿಂದ ತುಂಬಿಹೋಯಿತು; ಆಕಾಶತಳವೆಲ್ಲ ಜಯಜಯ ನಿನಾದದಿಂದ ತುಂಬಿತು; ಭೂಮಂಡಲವೆಲ್ಲ ಅವನ ದೇಹದಿಂದ ತುಂಬಿಬಿಟ್ಟಿತು. ಮಂದರಪರ್ವತದಂತೆ, ಭೂಮಿ ಮತ್ತು ಆಕಾಶಗಳನ್ನು ಅಳೆಯಲು ಎತ್ತಿದ ಬ್ರಹ್ಮನ ಕೈಯ ದಂಡದಂತೆ ಷೋಡಶಾಭರಣಭೂಷಿತನೂ ದೇವಾಂಗವಸ್ತ್ರ ಪರಿವೇಷ್ಟಿತನೂ ಆಗಿ ಜಗತ್ತಿಗೆ ಅದ್ಭುತವನ್ನೂ ಆಶ್ಚರ್ಯವನ್ನೂ ಉಂಟುಮಾಡಿ ಮುನಿಯು ಬೆಳೆದು ನಿಂತ.

ಪರಮ ಗುಣಾಂಬುರಾಶಿಯೂ ಜಿನಧರ್ಮವೆಂಬ ಆಗಸದ ಚಂದ್ರನೂ ಆದ ಮುನಿಯು ವಜ್ರವೇದಿಕೆ ಹಾಗೂ ಮಾನುಷೋತ್ತರವನ್ನು ಬಿಟ್ಟು ಉಳಿದುದನ್ನು ಒಳಗೊಳ್ಳುವಂತೆ ಇಡೀ ಭೂತಳದ ಮೇಲೆ ತನ್ನ ಒಂದು ಹೆಜ್ಜೆಯನ್ನಿಟ್ಟ. ಇನ್ನೊಂದು ಕಾಲನ್ನು ಆಕಾಶತಳಕ್ಕೆತ್ತಿ ಜಿನಪಾದಭಕ್ತನಿಗೆ ಮೂರು ಲೋಕವೂ ಒಂದೇ ಎಂಬಂತೆಯೂ, ಪರ್ವತಗಳ ಶಕ್ತಿಯನ್ನು ಮತ್ತು ಮನುಷ್ಯಕ್ಷೇತ್ರ ಪ್ರಮಾಣವನ್ನು ತನ್ನ ಕಾಲಿಂದಲೇ ಪರೀಕ್ಷಿಸಿ ನೋಡುವಂತೆಯೂ, ದ್ವೀಪಸಮುದ್ರಗಳನ್ನು ಭವ್ಯರಿಗೆ ಕೈವಾರವನ್ನು ಬರೆದು ತೋರಿಸುವಂತೆಯೂ, ಮಾನವರಿಗೆ ಇದು ಮೇರೆ ಎಂದು ತಿಳಿಸುವಂತೆಯೂ ತಿರುಗಿಸುತ್ತ ನಿಂತ. ಸಮಸ್ತ ದೇವತೆಗಳಿಗೂ ಆಸನಕಂಪವಾಯಿತು; ಭಯವಾಯಿತು. ಆದರೆ ಇದರ ಕಾರಣವನ್ನು ಬೇಗ ತಿಳಿದ ಚತುರ್ವಿಧ ದೇವನಿಕಾಯವು ತಮ್ಮ ಮಹಿಮೆಗಳ ಸಮೇತ ಬಂದು ನೆರೆದರು. ಆಗ ದೇವದುಂದುಭಿಗಳು ಮೊರೆಯುತ್ತಿರಲು ಅವರು ವಿಷ್ಣುಮುನಿಯ ಮೇಲೆ ಕಲ್ಪವೃಕ್ಷ, ನಮೇರು ಮತ್ತು ಮಂದಾರದ ಹೂಗಳನ್ನು ಚಿತ್ತೆಯ ಮಳೆಯಂತೆ ಸುರಿಸಿದರು. ಹೊಸ ಮುತ್ತು, ವಜ್ರ, ಪಚ್ಚೆ, ವೈಡೂರ್ಯ, ಸೂರ್ಯಕಾಂತ, ಚಂದ್ರಕಾಂತ ರತ್ನಗಳಿಂದ ಮುನಿಯನ್ನು ಪೂಜಿಸಿದರು. ಭೂಮಿಯ ಮೇಲೆ ಅಮೃತದ ಮಳೆಗರೆಯುತ್ತಿದೆಯೋ ಎಂಬಂತೆ ವಿಷ್ಣುಮುನಿಪನ ಪಕ್ಕದಲ್ಲಿ ನಿಂತು ಅಮರಸ್ತ್ರೀಯರು ನಾನಾ ವಿಧದ ಹಾಡುಗಳನ್ನು ಹಾಡಿದರು. ಮಂಗಳವಾದ್ಯಗಳ ರವ, ಗೀತಗಳ ನಿಸ್ವನ, ಜಯಜಯನಾದ, ದೇವತೆಗಳ ಕಲಕಲ ಶಬ್ದ – ಎಲ್ಲ ಆಗಸವನ್ನು ತುಂಬಿದವು. 'ಶರಣಾಗು' 'ಅವಧರಿಸು' 'ಜೀಯ' 'ಮಹಾಪ್ರಸಾದ' ಎಂಬ, 'ಸ್ಥಿರನಾಗು' ಎಂಬ, 'ಮಝು, ಭಾಪು' ಎಂಬ ನಾನಾ ಬಗೆಯ ಉದ್ಗಾರಗಳು ವ್ಯೋಮವನ್ನು ತುಂಬಿದವು. ಜಿನಧರ್ಮದ ವೈಭವವನ್ನು ಮೇದಿನಿಗೆ ಅರುಹುವ ಹಾಗೆ ಅಮರರೆಲ್ಲ ಮುನಿಯ ಪಾದಗಳನ್ನು ಸೋಂಕುತ್ತ ನಿಧಾನವಾಗಿ ಧಾತ್ರಿಯನ್ನು ಪ್ರದಕ್ಷಿಣೆಗೈದರು.

ಕಹಳಾರವ, ದುಂದುಭಿರವ ಮತ್ತು ದಿವಿಜರ ನಿನಾದವನ್ನು ಕೇಳಿದ ಕಾಶ್ಮೀರ, ಚೋಳ, ಕುಂತಳ, ವೆಂಗಿ, ಸೌರಾಷ್ಟ್ರ ಮುಂತಾದ ಸಕಲ ರಾಜ್ಯಗಳ ಜನರೂ ಎದ್ದು ಹೊರಬಂದು ಗಗನತಳವನ್ನು ನೋಡಿ ಆದುದನ್ನು ವೀಕ್ಷಿಸಿದರು. ನಲವಿನಿಂದ

ಪ್ರೀತಿಪಾತ್ರರನ್ನು ಕೂಗಿ ಕರೆಯುತ್ತ ಮುನೀಂದ್ರನನ್ನು ಪೂಜಿಸಿದರು, ಹಾಡಿ ಹೊಗಳಿದರು. ಓಡಾಡುವ, ಪೂಜಿಸುವ, ಹಾಡುವ ದೇವತೆಗಳನ್ನಿ ಜನರು ಕಂಡು ತಣಿದರು. ಜಿನಧರ್ಮದ ನುಡಿಗಳು ಬೇರೆಯ ಧರ್ಮಗಳಲ್ಲಿ ಉಂಟೇ, ಜಿನನಾಥ, ಜಿನಮುನಿ, ಜಿನಧರ್ಮಗಳನ್ನು ಬಿಟ್ಟು ಬೇರೆ ಪೂಜ್ಯರಿದ್ದಾರೆಯೇ, ನಿಸ್ಪೃಹರಿದ್ದಾರೆಯೇ ಎಂದು ಉಬ್ಬಿದರು. ಮೈಲಾಪದ ನೇಮಿ, ಚೋಳದೇಶದ ದಿವಿಜವಲ್ಲಭ, ಲಲಿತಪುರದ ಶಾಂತಿ ಜಿನ, ಹಾನುಗಲ್ಲಿನ ಮಲ್ಲಿನಾಥ, ಎಳವತ್ತಿಯ ಚಂದ್ರಜಿನ, ಮಾಳವದ ಸಕ್ಷೀರಜಿನ, ಆಶ್ರವದ ಸುವ್ರತೇಶ್ವರ, ಗೌಳ ಮಹಿಯ ಶಂಭುಜಿನ, ತವನಿಧಿಯ ಪಾರ್ಶ್ವಜಿನ, ಕೌಶಾಂಬಿಯ ಪದ್ಮಜಿನ ಇವರಿಂದ ಜಿನಧರ್ಮದ ಸಾಮರ್ಥ್ಯವನ್ನು ತಿಳಿಯಬೇಕು; ಜಿನನು ಹೇಳಿದ ವ್ರತಗಳಿಂದ ಕೇಡು, ನರಕಗಳಿಲ್ಲ. ಆದ್ದರಿಂದ ಜಿನಪತಿ ಜಿನಋಷಿಯರನ್ನು ಅರ್ಚಿಸಿ, ಸದ್ಧರ್ಮವನ್ನು ಹಿಡಿಯಿರಿ ಎಂದು ಸೇರಿದ್ದ ಜನರೆಲ್ಲ ಘೋಷಿಸುತ್ತಿದ್ದರು. ಜಿನಪಾದಗಳನ್ನು ಅರ್ಚಿಸುವ ಈ ಮುನಿಗೆ ಮೂರು ಲೋಕಗಳು ಗಹನವೇ? ಜೈನಪಾದಭಕ್ತಿಯಿಂದಾಗಿ ಮುನಿಗೆ ಅಣಿಮಾದಿ ಅಷ್ಟಗುಣಗಳೂ ವಶವಾದವು; ಅವರಿಗೆ ಸಮಾನರು ಯಾರು ಎಂದು ಸಮಸ್ತ ದಿವಿಜರು ಮುನಿಗೆ ಪೊಡಮಟ್ಟರು; ಪ್ರದಕ್ಷಿಣೆಗೈದು ಪೂಜಿಸಿದರು.

ಇತ್ತ ಇಂದ್ರನ ಬೆಸದಿಂದ ದೇವಕುಮಾರರು ಬಲಿಯನ್ನು ಅಂಬಲಿಯ ಮೊಟ್ಟೆ ಕಟ್ಟುವಂತೆ ಕೋಡಗಗಟ್ಟಿ ಹಸ್ತಿನಾಪುರದಿಂದ ಎಳೆದೊಯ್ದರು. ಚಾರಣ ಋಷಿಯರೂ ಸೌಧರ್ಮೇಂದ್ರನೇ ಮುಂತಾದ ಸುರೇಂದ್ರರು ಸಿತಗಿರಿಯ ಗುಹೆಯ ಬಾಗಿಲಲ್ಲಿದ್ದ ಕಸ ಕಿಚ್ಚುಗಳನ್ನು ಹಿಂಗಿಸಿ ಕರ್ಮವೆಂಬ ಮದ್ದಾನೆಗೆ ಸಿಂಹಸ್ವರೂಪಿ ಗಳೆನಿಸಿದ ಆಕಂಪನಾಚಾರ್ಯರು ಮತ್ತು ಧೈರ್ಯಗಿರಿಗಳೆನಿಸಿದ ಅವರ ಐನೂರು ಮಂದಿ ಶಿಷ್ಯ ಮುನಿವರರ ಘೋರ ಉಪಸರ್ಗವನ್ನು ತಪ್ಪಿಸಿದರು. ಆನಂತರ ವಾತ್ಸಲ್ಯರತ್ನಾಕರನ ಬಳಿ ಬಂದು ದುಶ್ಚರಿತನೂ ಉಗ್ರಮೂರ್ತಿಯೂ ಆದ ಬಲಿಯು ಮಾಡಿದ್ದ ಉಪಸರ್ಗವು ನಿವಾರಣೆಯಾಯಿತು ಎಂದು ಅರುಹಿ, ಆದ್ದರಿಂದ ತನ್ನ ಪಾದವನ್ನು ಹಿಂತೆಗೆದುಕೊಳ್ಳಲು ಭವ್ಯಬಂಧುವಾದ ಗುಣಬೋಧಸುಧಾರ್ಣವನನ್ನು ಬೇಡಿಕೊಂಡರು. ಆಗ ಆ ಮುನೀಶ್ವರನು ಮಾಯೆಯನ್ನು ಉಪಸಂಹರಿಸಿ ತನ್ನ ಮೊದಲಿನ ರೂಪವನ್ನು ತಳೆದ. ದೇವನಿಕಾಯವೆಲ್ಲ ಆ ಸುಕವಿಜನೋದ್ಯಾನ ಕೋಗಿಲೆಯನ್ನು ನೋಡಿ ಭಕ್ತಿಯಿಂದ ನಾನಾ ಬಗೆಯ ಅರ್ಚನೆಗಳನ್ನು ಮಾಡಿದರು. "ಮುನೀಶ್ವರನೇ, ಜಿನಪಾದಭಕ್ತಿ, ಸಕಲಾಗಮಾರ್ಥ, ವಿನಯ, ಓಜೆ, ಸಚ್ಚಾರಿತ್ರ, ಧೈರ್ಯ, ಕೀರ್ತಿ ಇವುಗಳಲ್ಲಿ ನಿನಗೆ ಸಮಾನರಾರು? ಜನವಿನುತವಾದ ಎಂಟನೆಯ ಅಂಶವು ನಿನ್ನಲ್ಲಿದ್ದುದರಿಂದ ನೀನು ದೇವನಿಕಾಯಪೂಜ್ಯನಾದೆ. ನೀನು ಧನ್ಯನೇ ಸರಿ. ಮೋಕ್ಷಲಕ್ಷ್ಮೀಕಾಮಿನಿಗೆ ಧರ್ಮಪ್ರಭಾವನೆಯು ನಿಕ್ಷೇಪದ ನಿಧಿಯಂತೆ, ಸುಖಕ್ಕೆ ಇದು ಅಕ್ಷಯ ನಿಧಿಯಂತೆ. ಪಾಪಕ್ಷಯಕಾರಕವಾದ ಇದನ್ನು ಧರಿಸಿದವನಿಗೆ ಯಾವ ಎಡರೂ ಬಾರದು." ಎಂದು ನಾನಾ ವಿಧವಾಗಿ ಪ್ರಭಾವನೆಯ ಮಹಿಮೆಯನ್ನೂ ವಾತ್ಸಲ್ಯರತ್ನಾಕರನನ್ನೂ ಕೊಂಡಾಡಿದರು.

ಆನಂತರ ಚತುರ್ವಿಧ ದೇವಸಮೂಹವೆಲ್ಲ ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು. ಪದ್ಮ ಮಹಾರಾಜನು ಧರ್ಮದ ಐಶ್ವರ್ಯವನ್ನೂ ಪ್ರಭಾವನೆಯ ಮಹಿಮೆಯನ್ನೂ ಕಂಡು ಮಹಾಭಕ್ತಿಯಿಂದ ಸಮ್ಯಕ್ತ್ವಚೂಡಾಮಣಿಯ ಪಾದಪದ್ಮಗಳನ್ನು ಮನವಾರೆ ಪೂಜಿಸಿದ; ಅನೇಕ ಸದ್ವ್ರತಗಳನ್ನು ಧರಿಸಿದ. ಅವನ ಧರ್ಮಚಿತ್ತ ದೃಢವಾಯಿತು. ಹಿಂದೆ ಜಯವರ್ಮ ಮಹಾರಾಜನ ಮುಂದೆ ಬಲಿಯು ಮಾತನಾಡಲಾಗದೆ ಮುನಿಯ ಮೇಲೆ ಕೋಪಗೊಂಡು ಯೋಗೀಂದ್ರನನ್ನು ಕೊಲ್ಲಲು ನಿರ್ಧರಿಸಿ ನಾಶವಾದ, ಕರ್ಮವೇ ಕಷ್ಟ. ಹಾಗಿರಬೇಕಾದರೆ ಇನ್ನೊಬ್ಬರ ವಿನಾಶವನ್ನು ಬಯಸುವವನಿಗೆ ಒಳಿತಾಗುವುದೇ? ಪರರ ಮನೆಯ ಸೂಜಿಗೆ ಕೇಡನ್ನು ಬಯಸುವವನಿಗೆ ತನ್ನ ಮನೆಯ ಕುಳ ಕೆಟ್ಟಿತು ಎಂಬ ಗಾದೆಯ ಮಾತಿನಂತೆ, ನಿರ್ದೋಷಿಗಳಾದ ಆಕಂಪನ ಮುನಿಗಳಿಗೆ ಉಪಸರ್ಗವನ್ನು ಮಾಡಿದ ಬಲಿಯು ತನ್ನ ಪಾಪದ ಫಲದಿಂದ ಬೊಚ್ಚು ಬಾಯಾಗಿ ಸಿಕ್ಕಿ ಬಿದ್ದ. "ಹೀಗೆ ಪಾಪದ ಪ್ರತ್ಯಕ್ಷ ಫಲವನ್ನು ಕಂಡು ಜನರು ವಿಸ್ಮಯಗೊಂಡರು. ಅನ್ಯರ ಅಳಿವನ್ನು ಬಯಸುವವನು ತಾನೇ ಅಳಿಯುತ್ತಾನೆ: ಅಂತೆಯೇ, ಇತರರಿಗೆ ಒಳಿತನ್ನು ಬಯಸುವವನು ಸಕಲ ಸಿರಿಗೆ ನೆಲೆಯಾಗುತ್ತಾನೆ.

ಆದ್ದರಿಂದ, ಮಗಧಾಧೀಶನೇ, ಪಾಪವು ಹೊಗದ ಹಾಗೆ ಪ್ರಭಾವನೆಯನ್ನು ಅನುಸರಿಸಿದರೆ ಪಾವು ನಾಶವಾಗುತ್ತದೆ. ಪಾಪದ ಕೇಡು ಅಂದರೆ ಮೋಕ್ಷವೇ ತಾನೇ? ಹಾಗಾಗಿ, ಎರಡಿಲ್ಲದಂತೆ ಮನಸ್ಸು ಗುಣವನ್ನು ಆಶ್ರಯಿಸಲಿ. ಕೊನೆಯ ಅಂಗವು ಅತ್ಯುತ್ತಮವೆಂದು ಒಲಿದು ಭವ್ಯರು ಅದನ್ನು ನಂಬಿಕೆಯಿಂದ ಹೊಂದಲಿ." ಹೀಗೆಂದು ಗಣಧರಸ್ವಾಮಿಗಳು ಪ್ರಭಾವನೆಯಿಂದಾದ ಪ್ರತ್ಯಕ್ಷಫಲವನ್ನು ಹೇಳುವ ಕತೆಯನ್ನು ಮುಗಿಸಿದರು. ಅದನ್ನು ಭಕ್ತಿ ವಿನಯಗಳಿಂದ ಕೇಳಿದ ಸುಕವಿ ಜನಮನಃಪದ್ಮಿನೀರಾಜಹಂಸನಾದ ಶ್ರೇಣಿಕ ಮಹಾರಾಜನು ಉತ್ಸಾಹಗೊಂಡ.

ಅಹಿಂಸೆ

ಇದುವರೆಗೆ ಗಣಧರಸ್ವಾಮಿಗಳು ಹೇಳಿದ ಕತೆಗಳನ್ನು ಕೇಳಿದ ಮೇಲೆ ಎಂಟು ದರ್ಶನಾಂಗಗಳು ಮುಕ್ತಿಶ್ರೀಗೆ ಚಿತ್ತಾಹ್ಲಾದಕರವಾದುವೆಂಬ ನಂಬಿಕೆ ಸುಕವಿನಿಕರಪಿಕಮಾಕಂದನಿಗೆ ಬಂತು. ಆನಂತರ ವಿಶ್ವವಂದ್ಯರಾದ ಅವರಿಗೆ ಪೊಡಮಟ್ಟು ಸುಗತವನಿತೆಯ ಕಡೆಗಣ್ಣ ನೋಟವೆನಿಸುವ ಅಹಿಂಸೆಯ ಮಹಿಮೆಯನ್ನು ಹೇಳುವ ಕತೆಯನ್ನು ನಿರೂಪಿಸಬೇಕೆಂದು ಕೈಮುಗಿದು ಕೇಳಿಕೊಂಡ. ಅವರು ಕಡು ರಾಗದಿಂದ ಆ ಕತೆಯನ್ನು ಬೆಸಸಲು ತೊಡಗಿದರು.

ಕರೆಯನ್ನು ಕೊಯ್ದ ಸೀರೆಯ ಹಾಗೆ, ರಾಶಿಗೆ ಬಂದ ಆರಂಬದಂತೆ, ಪತ್ರ ಸೀಳಿ ಹಾಕಿದ ಸಾಲದಂತೆ, ಕೈನೀರೆರೆದ ಮದುವೆಯಂತೆ, ಹೊತ್ತಿಸಿದ ಸೊಡರಿನ ಹಾಗೆ ದರ್ಶನದ ಎಂಟು ಅಂಗಗಳಲ್ಲಿಯೂ ಮೊದಲು ಸಂಪೂರ್ಣವಾಗಿ ಸೇರಿ, ಕಟ್ಟಿಸಿದ ಮನೆಯನ್ನು ಸೇರುವ ಹಾಗೆ, ತಯಾರಿಸಿದ ಆಭರಣವನ್ನು ತೊಡುವಂತೆ, ಅನುಕೂಲಳಾದ ಹೆಂಡತಿಗೆ ಮನೆವಾರ್ತೆಯನ್ನು ಹೇಳುವಂತೆ ಕೊಲ್ಲದ ವ್ರತವನ್ನು ಶ್ರದ್ಧೆಯಿಂದ ಅನುಸರಿಸುವ ವ್ಯಕ್ತಿಯು ದುಃಖ ನೋವುಗಳನ್ನು ಪಡೆಯದೆ ಲೋಕಪೂಜ್ಯನಾಗಿ ಮುಕ್ತಿಲಕ್ಷ್ಮಿಗೆ ಕಾಮನ ಹಾಗೆ ಕಾಣುತ್ತಾನೆ. ಆ ಸುವ್ರತದ ಫಲವು ಎಂಥದೆಂದು ಅರಿವಾಗಬೇಕಾದರೆ ಇದನ್ನು ಕೇಳು ಎಂದು ಕತೆಯನ್ನು ಹೇಳತೊಡಗಿದರು.

ಭರತಖಂಡವೆಂಬ ಮೋಹಿನಿಯು ತೊಟ್ಟ ಹೊಸ ಚಿನ್ನದ ಆಭರಣದಂತೆ ಸುಂದರವಾದ ನಗರಗಳಿಂದ ಕೂಡಿದ ಮಾಳವ ದೇಶವು ಶೋಭಿಸುತ್ತಿತ್ತು. ಅದರಲ್ಲಿ ಉಜ್ಜಯನಿ ಎಂಬ ನಗರವು, ಇಂದ್ರನಂತಹ ಭೋಗಿಗಳಿಂದಲೂ, ಕಲ್ಪವೃಕ್ಷವನ್ನು ಮೀರಿಸಿದ ತ್ಯಾಗಿಗಳಿಂದಲೂ, ಹಣವಂತರನ್ನು ಕಂಡು ಅಸೂಯೆ ಪಡದೆ ನಿರ್ಲೋಭದಿಂದ ದಾನಗೈವ ದಾನಿಗಳಿಂದಲೂ ಕೂಡಿ ಶೋಭಿಸಿತ್ತು. ಆ ಪುರವನ್ನಾಳುವವನು ವಿಶ್ವಂಭರ ಮಹಾರಾಜ. ಅವನ ರಾಜಶ್ರೇಠಿಯ ಹೆಸರು ಗುಣಪಾಲ ಎಂದು; ಅವನ ಹೆಂಡತಿ ಧನಶ್ರೀ ಎನ್ನುವ ಸಾಧ್ವಿ. ಅವಳು ಜಿನಭಕ್ತಿ ಹಾಗೂ ರೂಪಗಳಲ್ಲಿ ಶಚೀದೇವಿ–ರತಿಯರಿಗೂ ಸಾವಿರ ಪಾಲು ಮಿಗಿಲೆನಿಸುವವಳು. ಅಂತೆಯೇ ಆ ಶ್ರೇಷ್ಠಿಯು ಜಿನಭಕ್ತಿ ಮತ್ತು ಸಿರಿಯಲ್ಲಿ ದೇವೇಂದ್ರನಿಗೂ ಖೇಚರೇಶ್ವರನಿಗೂ ಸಾವಿರ ಮಡಿ ಮಿಗಿಲು. ಬುವಿಯಲ್ಲಿ ಲಕ್ಷ್ಮಿಯೇ ಅವತರಿಸುವಂತೆ ಆ ದಂಪತಿಗಳಿಗೆ ಒಂದು ಹೆಣ್ಣುಮಗುವು ಜನಿಸಿತು. ಅದಕ್ಕೆ ಸುಬಂಧುಶ್ರೀ ಎಂದು ಹೆಸರಿಟ್ಟರು. ಈ ಸಂಸಾರವು ಸುಖಸಂಕಥಾವಿನೋದದಿಂದ ಕಾಲ ಕಳೆಯುತ್ತಿತ್ತು.

ಒಂದು ದಿನ ಧನಶ್ರೀಯು ಬೆಳಗಿನ ಜಾವದಲ್ಲಿ, ಐರಾವತವೂ ಚಂದ್ರನೂ ಸೂರ್ಯನೂ ತನ್ನಲ್ಲಿಗೆ ಬಂದಂತೆ ಒಂದು ಕನಸನ್ನು ಕಂಡಳು. ನೇಸರು ಮೂಡಲು ಅವಳಿಗೆ ಎಚ್ಚರವಾಯಿತು. ತನಗೆ ಬಿದ್ದ ಕನಸಿನ ವಿಚಾರವನ್ನು ಗಂಡನಿಗೆ ಹೇಳಿದಳು. ಕನಸಿನ ಫಲಗಳ ಬಗ್ಗೆ ಋಷಿಗಳಲ್ಲಿ ವಿಚಾರಿಸಲೆಂದು ಸೆಟ್ಟಿಯು ಪೂಜಾಸಾಮಗ್ರಿಗಳೊಂದಿಗೆ ಮಗಳೊಂದಿಗೆ ಬಸದಿಗೆ ಬಂದ. ಮೂರು ಬಾರಿ ಜಿನಭವನವನ್ನು ಪ್ರದಕ್ಷಿಣೆ ಹಾಕಿ ಅವರು ಒಳಕ್ಕೆ ಬಂದರು. ಕನಸನ್ನು ನಿವೇದಿಸಿಕೊಂಡು ಅದರ ಫಲವೇನೆಂದು ಋಷಿಗಳನ್ನು ಕೇಳಿದರು. ಅದಕ್ಕೆ ಅವರು ಹೀಗೆ ವಿವರಿಸಿದರು: ಐರಾವತವನ್ನು ಕಂಡದ್ದರಿಂದ ಈಕೆಯು ಅಧಿಕ ಜಿನಭಕ್ತನೂ ಪೂಜ್ಯನೂ ಮುನೀಶ್ವರಚರಣಾಂಭೋಜಭೃಂಗನೂ ಆದವನನ್ನು ಕೈಹಿಡಿಯುವಳು; ಚಂದ್ರನನ್ನು ಕಂಡದ್ದರಿಂದ ತತ್ವಜ್ಞನೂ ಮಹಾಪ್ರಭುವೂ ಮನ್ಮಥರೂಪಿಯೂ ಆದ ಮಗನನ್ನು ಪಡೆಯುವಳು; ಸೂರ್ಯನು ಕನಸಲ್ಲಿ ಬಂದುದುರಿಂದ ಜಿನೇಂದ್ರಸಮಯವರ್ಧನನಾದ ಮಾನವರತ್ನವನ್ನು ಮತ್ತೊಬ್ಬ ಮಗನನನ್ನಾಗಿ ಪಡೆಯುವಳು.

ಇದನ್ನು ಕೇಳಿ ತಂದೆ ಮಗಳಿಬ್ಬರಿಗೂ ಸಂತಸವಾಯಿತು. 'ಸವಣೋ ಅಮೋಘವ ಅಣೋ' ಎಂಬ ಋಷಿವಾಕ್ಯವು ತಪ್ಪದು ಎಂದು ನಂಬಿ ದೇವರಿಗೆ ಪುನರಭಿವಂದನೆಯನ್ನು ಸಲ್ಲಿಸಿ ಮನೆಗೆ ಬಂದರು.

ಕೆಲವು ದಿನಗಳು ಕಳೆದವು. ಧನಶ್ರೀ ಗರ್ಭ ಧರಿಸಿದಳು. ಆಕೆಗೆ ಜಿನೇಂದ್ರಪೂಜೆ ಮಾಡುವ, ಪೂಜೆಗಳನ್ನು ನೋಡುವ, ಜಿನಾಗಮಗಳನ್ನು ಓದುವ, ಜಿನಮುನಿಗಳಿಗೆ ನಮಸ್ಕರಿಸುವ, ಮಿಥ್ಯಾದೃಷ್ಟಿಗಳಿಗೆ ಅಂಜುವ, ದಿವ್ಯಾಹಾರವನ್ನು ಉಣ್ಣುವ, ಬಸದಿಗೆ ಹೋಗುವ, ಹಲವರಿಂದ ನಮಸ್ಕಾರಮಾಡಿಸಿಕೊಳ್ಳುವ, ಸಿಂಹಾಸನವೇರುವ, ಭವ್ಯರನ್ನೂ ಸದ್ಧರ್ಮವನ್ನೂ ರಕ್ಷಿಸುವ, ಪ್ರಜೆಗಳಿಗೆ ಉಪಕಾರವೆಸಗುವ, ಶ್ರಾವಕಗೋಷ್ಠಿಯಲ್ಲಿರುವ, ಜಿನಸನ್ನಿಧಿವಾಸದಲ್ಲಿ ಓಲಗ ಕೊಡುವ, ಜಿನಸ್ತವನಗಳನ್ನು ಹಾಡುವ, ತ್ರಿಷಷ್ಟಿಶಲಾಕಾಪುರುಷರ ಕತೆಗಳನ್ನು ಕೇಳುವ ಬಯಕೆಗಳುಂಟಾದವು. ಹೆಂಡತಿಗೆ ಸಂತೋಷವುಂಟಾಗಬೇಕೆಂದು ಸೆಟ್ಟಿಯು ಅರ್ಹತ್ಪರಮೇಶ್ವರನ ಆಸ್ಥಾನದಲ್ಲಿ ಗೀತ ವಾದ್ಯ ಆತೋದ್ಯ ನೃತ್ಯಗಳನ್ನು ಹಗಲೂ ರಾತ್ರಿ ಏರ್ಪಡಿಸಿದ. ಗೀತವಾದ್ಯಗಳ ಸಮೇತ ಜಿನರ ಉತ್ಸವಗಳನ್ನು ಏರ್ಪಾಟು ಮಾಡಿದನು. ಮಡದಿಗೆ ನೆಮ್ಮದಿಯಾಗುವಂತೆ ದೇವರಿಗೆ ಮೊಸರು ಹಾಲು ತುಪ್ಪ ಕಬ್ಬಿನ ರಸ ಮುಂತಾದವುಗಳ ಅಭಿಷೇಕವನ್ನು ನೆರವೇರಿಸಿದ. ಇರವಂತಿ ಜಾಜಿ ಪಾದರಿ ತಾವರೆ ಮುಂತಾದ ಹೂಗಳಿಂದ ತೀರ್ಥಂಕರರ ಪೂಜೆಗಳನ್ನು ಏರ್ಪಡಿಸಿ ಮಡದಿಯ ಸಂತೋಷವನ್ನು ಹೆಚ್ಚಿಸಿದ. ಹೂಗಳು ಕುಂಕುಮ ಕರ್ಪೂರಗಳಿಂದ ಪೂಜಿಸಿ ತೀರ್ಥಂಕರರ ಪ್ರತಿಮೆಗಳನ್ನು ಅವಳಿಗೆ ತೋರಿಸುತ್ತಿದ್ದ. ಹಸಿಯ ಅಡಕೆ ತೆಂಗು ಮಾದುಫಲಗಳಿಂದ ಜಿನಪತಿಯನ್ನು ಪೂಜಿಸಿ ನಲ್ಲೆಯ ಬಯಕೆಯನ್ನು ಪೂರೈಸುತ್ತಿದ್ದ. ಹೊನ್ನಿನ ಜಿನಪ್ರತಿಮೆಗಳನ್ನು ಮಾಡಿಸಿ ಹಲವು ಪೂಜೆಗಳನ್ನು ಗೈದು ಅವಳಿಗೆ ಆನಂದವನ್ನು ತರುತ್ತಿದ್ದ. ಜಿನಭವನದಲ್ಲಿ ನಾನಾ ಬಗೆಯ ರಂಗವಲ್ಲಿಗಳನ್ನಿ ಹಾಕಿಸಿ, ಚಿನ್ನದಿಂದ ಮಾಡಿದ ವಂಶಮಾಲೆಯನ್ನು ಕಟ್ಟಿಸಿ, ಆಹಾರ ಅಭಯ ಭೈಷಜ್ಯ ಶಾಸ್ತ್ರದಾನಗಳನ್ನು ಮಾಡಿಸುತ್ತಿದ್ದ.

ಹೀಗೆ ಗುಣಪಾಲನು ನಲ್ಲೆಯ ಬಯಕೆಗಳನ್ನು ಸಲ್ಲಿಸುತ್ತ ಇರುವಾಗ, ಒಂದು ದಿನ ವಿಶ್ವಂಭರ ಮಹಾರಾಜನು ಮದಗಜವನ್ನೇರಿ ಮಹಾ ವೈಭವದಿಂದ ವನಕ್ರೀಡೆಗೆಂದು ಹೊರಟ. ಮಾರ್ಗಮಧ್ಯದಲ್ಲಿ ಅವನು ತಮ್ಮ ಮನೆಯ ಹಿಂದಿನ ವನದಲ್ಲಿ ಶೃಂಗಾರ ಮಾಡಿಕೊಂಡು ವಿಲಾಸಿನಿಯರಿಂದ ಪರಿವೃತಳಾದ ಸುಬಂಧುಶ್ರೀಯನ್ನು ಕಂಡ. ಹೂಬಾಣಗಳನ್ನು ತೊಟ್ಟ ಕಾಮನು ಶ್ಯಾಮಲಾಂಗಿಯ ಮರೆಯಲ್ಲಿ ನಿಂತುಕೊಂಡು ರಾಜನ ಮೇಲೆ ಭೋರ್ ಭೋರ್ ಎಂದು ಬಾಣಪ್ರಯೋಗ ಮಾಡಿದ. ಅವೆಲ್ಲ ಮನೋವೇಗಕ್ಕಿಂತ ಮಿಗಿಲಾದ ವೇಗದಲ್ಲಿ ಬಂದು ರಾಜನನ್ನು ತಾಕಿ ಆಳವಾಗಿ ನಾಟಿದವು. ಕಾಮನು ಕಿವಿಯವರೆಗೂ ಹೆದೆಯನ್ನೆಳೆದು ರಾಜನ ಮರ್ಮಸ್ಥಾನಗಳಿಗೆ ಹೊಡೆದಾಗ ವಿಶ್ವಂಭರ ಮಹಾರಾಜನು ಜರ್ಜರಿತಗಾತ್ರನಾದ. ಚಿತ್ರದ ರೂಪಿನಂತೆ ಮಿಟ್ಟನೆ ಮಿಡುಕದೆ ಅವನು ವಿರಹಾನಳದಿಂದ ಬೆಂದು ಹೋದ. ಮನ್ಮಥನ ಕೈಪೊಡಯಾದ ಈ ವಿದಗ್ಧೆಯೊಡನೆ ಕೂಡಿದರೆ ಮಾತ್ರ ಚುಚ್ಚುವ ತನ್ನ ದೇಹದ ಈ ಬಾಧೆಯು ಹೋಗುತ್ತದೆ; ಇಲ್ಲದಿದ್ದರೆ ನೋವನ್ನು ಅನುಭವಿಸುವುದಕ್ಕಿಂತಲೂ ಮನ್ಮಥನಿಗೆ ದೇಹವನ್ನೊಪ್ಪಿಸುವುದೇ ಸರಿ ಎಂದು ಅವನಿಗನ್ನಿಸಿತು. ಕಾಮನು ಕನ್ನೆಯ ಮರೆಯಲ್ಲಿ ನಿಂತು ಹೀಗೆ ಬಾಣ ಬಿಡುತ್ತಿದ್ದಾನೆ; ಅವಳ ಆಶ್ರಯವನ್ನು ಬಿಟ್ಟು ಹೋರಾಡಲಿ ನೋಡೋಣ ಎಂದು ಅವನೆಂದುಕೊಂಡ. ಈ ಅನಂಗನ ರೀತಿಯಲ್ಲಿ ಮೈಯಲ್ಲಿ ಸ್ವಲ್ಪವೂ ಗಾಯವಿಲ್ಲದೆ ಬಾಣ ಬಿಡುವ ಬೇರೆ ಯಾವ ಬಿಲ್ಲಾಳು ಇದ್ದಾನೆ! ಎನ್ನಿಸಿತು.

ಈ ರೀತಿ ಮನಸ್ಸಿನಲ್ಲಿ ಗುಜುಗುಜುಗೊಂಡು ದಿವಿಜರ ಹಾಗೆ ಎವೆಯಿಕ್ಕದೆ, ಸೋತವರಂತೆ ಅಲುಗಾಡದೆ, ಕಣ್ಣು ಮಿಟುಕುಸದೆ, ಮರವನ್ನು ನಾಟಿದ ಬಾಣದಂತೆ ನೋಟವನ್ನು ಬದಲಿಸದೆ, ಬೆಂಕಿ ಬಿದ್ದ ಬೆಟ್ಟದ ಹಾಗೆ ಮೈಯೆಲ್ಲ ಬೆಚ್ಚಗಾಗಿ ವಿಶ್ವಂಭರ ರಾಜನು ವನಕ್ರೀಡೆಗೆ ಹೋಗಲೊಲ್ಲದೆ ಅರಮನೆಗೆ ಮರಳಿ ಬಂದ. ಅವನ ಮನಸ್ಸಿನಲ್ಲಿ ಸುಬಂಧುಶ್ರೀಯ ರೂಪವೇ ತುಂಬಿತ್ತು. ಹೊಸ ಕಮಲಪುಷ್ಪಗಳ ನಾಳದಿಂದಲೂ, ಪದ್ಮಗಳ ದಳಗಳಿಂದಲೂ, ಮಾವಿನ ಚಿಗುರುಗಳಿಂದಲೂ,

ಚೆನ್ನೈದಿಲೆ ಹೂಗಳು ಮತ್ತು ಬಾಳೆಯೆಲೆಗಳಿಂದಲೂ ಮಾಡಿದ ಹಾಸಿಗೆಯಲ್ಲಿ ಹೊರಳುತ್ತ, ಜೊಂಪಗಳಲ್ಲಿ ಹೋಗಿ ವಿಹರಿಸುತ್ತ, ಚಂದನಪಂಕದಲ್ಲಿ ಮುಳುಗುತ್ತ ತಣ್ಣನೆಯ ನೀರಿನಲ್ಲಿ ಹುದುಗಿಕೊಳ್ಳುತ್ತ ತನ್ನ ಕಾಮಸಂತಾಪವನ್ನು ಶಮನ ಮಾಡಲು ಪ್ರಯತ್ನಿಸಿದ; ಆದರೆ ಸಾಧ್ಯವಾಗಲಿಲ್ಲ. ಮುಂದೆ ರಾಜನು ತನ್ನ ಹೆಗ್ಗಡೆಯನ್ನು ಕರೆಸಿ ತನಗಾದುದೆಲ್ಲವನ್ನೂ ವಿವರವಾಗಿ ಹೇಳಿಕೊಂಡ. ಯಾವುದಾದರೂ ಉಪಾಯ ಮಾಡಿ ತನ್ನನ್ನು ಸುಬಂಧುವನೊಡನೆ ಕೂಡುವಂತೆ ಮಾಡಿರಿ; ಇಲ್ಲದಿದ್ದರೆ ತಾನು ಬಹುವಾಗಿ ನೋಯುತ್ತೇನೆ ಎಂದು ಕೇಳಿಕೊಂಡು ಹೆಗ್ಗಡೆಯನ್ನು ಗಣಪಾಲಸೆಟ್ಟಿಯಲ್ಲಿಗೆ ಕಳಿಸಿದ.

ಅದರಂತೆ ಗುಣಪಾಲ ಸೆಟ್ಟಿಯ ಮನೆಗೆ ಬರಲು ಅವನು ಹೆಗ್ಗಡೆಯನ್ನು ವಸ್ತ್ರಾಲಂಕಾರಾದಿಗಳನ್ನಿತ್ತು ಮನ್ನಿಸಿ ಬರಮಾಡಿಕೊಂಡು ಬಂದ ಕಾರ್ಯವೇನೆಂದು ವಿಚಾರಿಸಿದ. ಹೆಗ್ಗಡೆಯು, "ಮದಗಜಗಮನೆ, ಅಂಬುಜವದನೆ, ಕುಟಿಲ ಕುಂತಲೆ, ಹಾವ ಭಾವ ಲಾವಣ್ಯದ ನೆಲೆ, ಜಿನಪದಾಬ್ಜಮಧುಕರೆಯಾದ ನಿಮ್ಮ ಮಗಳು ಸುಬಂಧುಶ್ರೀಯನ್ನು ನಂದನವನದಲ್ಲಿ ಉಯ್ಯಲೆಯಾಡುವಾಗ ವನಕ್ರೀಡೆಗೆ ಹೋಗುತ್ತಿದ್ದ ವಿಶ್ವಂಭರ ಮಹಾರಾಜರು ಕಂಡು ಕಾಮಸಂತಾಪದಿಂದ ನೊಂದು ರಾಜಮಂದಿರಕ್ಕೆ ಬಂದು ಕುಸುಮಾಸ್ತ್ರನ ಬಾಣಗಳ ಆಘಾತದಿಂದ ಬಳಲಿದ್ದಾರೆ. ಸುಬಂಧುಶ್ರೀಯನ್ನು ತಮಗೆ ಕೊಟ್ಟು ಮದುವೆ ಮಾಡಿಕೊಡುವಂತೆ ಕೇಳಿಕೊಂಡು ನನ್ನನ್ನಿಲ್ಲಿಗೆ ಕಳಿಸಿದ್ದಾರೆ. ತಲೆಯೊಡೆಯರಿಗೆ ತಲೆಸುತ್ತು ಬಂದು ವಿರೋಧಿಸಿದಂತೆ ಮಾಡಿ ನಗೆಗೀಡಾಗದೆ ನಿಮ್ಮ ಮಗಳನ್ನು ಸರ್ವಸ್ವಕ್ಕೆ ಒಡೆಯರಾದ ಕುಲಸ್ವಾಮಿಗೆ ಕೊಡಿ" ಎಂದು ಕೇಳಿಕೊಂಡ. ಹೆಗ್ಗಡೆಯ ಮಾತನ್ನು ಕೇಳಿದ ಗುಣಪಾಲ ಸೆಟ್ಟಿಗೆ ಅಚ್ಚರಿಯಾಯಿತು. ಹೆಗ್ಗಡೆಯನ್ನು ತೃಪ್ತಿಪಡಿಸಲು ಕಪಟ ಮಾತುಗಳಿಂದ ಪ್ರಿಯವಾಗಿ ಮಾತನಾಡಿ ನಂಬಿಸಿದ. ಆನಂತರ, "ಇಂದ್ರವೈಭವದ ಅರಸರು ನನ್ನ ಮಗಳನ್ನು ಬೇಡಿ ಕಳಿಸಿದ್ದಾರೆಂದ ಮೇಲೆ ನನಗಿಂತ ಧನ್ಯರು ಬೇರೆ ಯಾರಿದ್ದಾರೆ? ಸ್ಮರತಾಪದಿಂದ ಉರ್ವೀಶ್ವರರು ನನ್ನ ಮಗಳನ್ನು ಮೆಚ್ಚಿಕೊಂಡರೆಂದ ಮೇಲೆ ಅವಳಿಗಿಂತ ಪುಣ್ಯವಂತೆಯು ಬೇರೆ ಯಾರಿರುವಳು? ಒಬ್ಬ ವ್ಯಾಪಾರಿಯ ಮಗಳಿಗಾಗಿ ಮಹಾರಾಜರು ನಿಮ್ಮನ್ನು ಕಳಿಸುವುದೆಂದರೇನು? ಅದರಿಂದ ನನಗಿಂತ ಧನ್ಯರಾದವರು ಬೇರಿನ್ನಾರು?" ಎಂದು ಸವಿನುಡಿಗಳನ್ನಾಡಿ ಹೆಗ್ಗಡೆಯನ್ನು ಅರಮನೆಗೆ ಕಳಿಸಿದ.

ಆನಂತರ ಸೆಟ್ಟಿಯು ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದ: ಜಿನಪಾದಸೇವೆ ಮಾಡದವನ ರೂಪ ವಿಲಾಸ ವೈಭವ ತೇಜಸ್ಸು ವಿದ್ಯೆ ಶೌಚ ಕುಲ ಪರಾಕ್ರಮ ಗುಣಾಳಿ ಯೌನ ಮುಂತಾದವು ಕುರುಬನ ರಾಜತ್ವ, ಬೆಂಕಿಯ ತಂಪು, ವಿಷಾನ್ನ ಭೋಜನ ಇವುಗಳಿಗೆ ಸಮ. ಪರ್ವತದ ತುದಿಯಿಂದ ನೂಕುವುದು, ಮೈಯನ್ನು ಕಟ್ಟಿ ಆನೆಯಿಂದ ತುಳಿಸುವುದು, ಸಮುದ್ರದಲ್ಲಿ ಗಂಟಲು ಕಟ್ಟಿ ಮುಳುಗಿಸುವುದು ಇವುಗಳ ಹಾಗೆ. ಕುದೃಷ್ಟಿಗೆ ಸೋತು ಕೂಸನ್ನು ಕೊಡುವುದು ಒಳ್ಳೆಯದಲ್ಲ. ಅಲ್ಲದೆ, ಮಿಥ್ಯಾದೃಷ್ಟಿಯ ಸಿರಿಯನ್ನು ಉರಿಯೆಂದು ಬೆಚ್ಚುವುದು, ಕುದೃಷ್ಟಿಯ ರೂಪವು ಸಂತಾಪವೆಂದು ನಡುಗುವುದು, ಅದರಂತೆಯೇ ಮಿಥ್ಯಾದೃಷ್ಟಿಯವನಿಗೆ ಅವನ ರೂಪ ವಿಲಾಸಪ್ರತಾಪಗಳನ್ನು ಕಂಡು ಕೂಸನ್ನು ಕೊಟ್ಟರೆ ನರಕ ಪ್ರಾಪ್ತಿಯಾಗುತ್ತದೆ; ಹಾಗೆ ಮಾಡಿದ ಶ್ರಾವಕನಿಗೆ ಆಮೇಲೆ ಏನು ಮಾಡಿದರೂ ಸುಗತಿಯಾಗದು. ಆನಂತರ ಹೆಂಡತಿಯ ಮನಸ್ಸನ್ನು ಅರಿಯಲು ಗುಣಪಾಲ ಸೆಟ್ಟಿಯು ಅವಳ ಬಳಿ ಹೀಗೆಂದ: "ನಮ್ಮ ಮಹಾರಾಜನು ಉಗ್ರವೈರಿಹರಣ, ಬಾಲಸೂರ್ಯನ ತೇಜಸ್ಸುಳ್ಳವನು, ಜಗತ್ತಿನಲ್ಲಿ ವಂದ್ಯನಾದವನು; ಅಂಥವನು ನಮ್ಮ ಮಗಳನ್ನು ಕಂಡು ಮನಸೋತು ಸುಬಂಧುಶ್ರೀಯನ್ನು ಬೇಡಿ ಹೇಳಿಕಳಿಸಿದ್ದಾನೆ. ನಮಗಿಂತ ಪುಣ್ಯಶಾಲಿಗಳು ಬೇರೆ ಯಾರಿದ್ದಾರೆ? ವ್ಯಾಪಾರಿಯ ಐಶ್ವರ್ಯ ರಾಜನ ಸಿರಿಗೆ ಸಮಾನವೇ? ನಮ್ಮ ಕೂಸನ್ನು ಕೊಟ್ಟರೆ ನಮಗೆ ಹೆಚ್ಚಿನ ಶೌರ್ಯದೊರೆಯುತ್ತದೆ; ಹಾಗೆಯೇ ರಾಜ್ಯವೂ ಕೈಸೇರುತ್ತದೆ. ಅವನು ರಾಜಪುತ್ರ, ಅದಟಿನಲ್ಲಿ ಅಸಮಾನ, ಉಜ್ವಲ ಪರಾಕ್ರಮಿ, ಯಶಸ್ಸು ಗಳಿಸಿದವನು, ಭೂಮಿಯ ಒಡೆಯ, ಮಂದರಧೀರ. ಅವನಿಗೆ ಸುಬಂಧುಶ್ರೀಯನ್ನು ಕೊಟ್ಟು ಮದುವೆ ಮಾಡೋಣ." ಗಂಡನ ಮಾತಿಗೆ ಧನಶ್ರೀ ವಿಸ್ಮಯಗೊಂಡಳು. ನೀರಿನಲ್ಲಿ ಕಾಣಿಸಿದ ನಲ್ಲಳ ಪ್ರತಿಬಿಂಬವನ್ನು ಕಂಡು ನಲ್ಲಳೆಂದೇ ಭಾವಿಸಿ ಹಾರಿ ಸಾಯುವವನ ಹಾಗೆ,

ನಿತ್ಯವಲ್ಲದ ಸಂಸಾರಸುಖಕ್ಕೆ ಆಸೆಪಟ್ಟು, ಮಿಥ್ಯಾದೃಷ್ಟಿಯವನಿಗೆ ಮಗಳನ್ನು ಕೊಟ್ಟರೆ ಮಗಳಿಗೂ ತಮಗೂ ಹಿರಿದಾದ ನರಕದುಃಖ ಉಂಟಾಗುವುದು ಖಚಿತ ಎಂದು ಅವಳಿಗನ್ನಿಸಿತು. ಹೀಗಾಗಿ, "ಹಲವು ಕಾಲ ಸಂಸಾರದಲ್ಲಿ ನೆಲೆಗೊಳಿಸದೆ ನಿಮ್ಮ ಹಿರಿದು ಪುಣ್ಯದಿಂದ ಗುಣವಂತೆಯಾದ ಮಗಳು ಹುಟ್ಟಿದ್ದಾಳೆ. ಹಿಂದಿನ ಜನ್ಮಗಳಲ್ಲಿ ಜಿನಧರ್ಮವನ್ನು ಪಡೆಯದೆ ತಿರ್ರನೆ ತಿರುಗುತ್ತ ಪುಣ್ಯ ಮಾಡಿ ಕರ್ಮವು ಉಪಶಮನಗೊಂಡದ್ದರಿಂದ ಸುಬಂಧುಶ್ರೀಯು ಕಾಕತಾಳೀಯವೆಂಬಂತೆ ನಿಮ್ಮ ಮಗಳಾಗಿ ಹುಟ್ಟಿ ಜಿನಧರ್ಮವನ್ನು ಪಡೆದಿದ್ದಾಳೆ. ಅಂಥವಳನ್ನು, ಕಳ್ಳನಿಗೆ ಅಂಜಿ ಹುಲಿಗೆ ಒಪ್ಪಿಸಿದರು ಎಂಬ ಗಾದೆಯಂತೆ, ಶೂನ್ಯಹೃದಯರಂತೆ ಮೇಲಿನ ಅನಂತಸುಖವನ್ನು ಪರಿಗಣಿಸದೆ ಮಿಥ್ಯಾದೃಷ್ಟಿಯವನ ರಾಜ್ಯ ವೈಭವಗಳನ್ನು ಕಂಡು ಮಗಳನ್ನು ಕೊಡುವೆನೆಂಬ ನಿಮ್ಮ ಮರುಳುತನಕ್ಕೆ ನನಗೆ ಆಶ್ಚರ್ಯವೆನಿಸುತ್ತಿದೆ. ನಿಮ್ಮಂತಹ ತೃಪ್ತಿವಂತರೂ ಇಂತಹ ಕೆಲಸವನ್ನು ಮಾಡುವಿರಾದರೆ ಮಿಕ್ಕ ಸಾಮಾನ್ಯ ಶ್ರಾವಕರ ಮತಿಹೀನತೆಗೆ ದುಃಖಗೊಳ್ಳಬಾರದು. ಸಿರಿ ಹೇಗೋ ದೊರೆಯುತ್ತದೆ; ಆದರೆ ಸುಲಭವಾಗಿ ಜೈನಧರ್ಮವು ದೊರೆಯದು. ಸಿರಿತನಕ್ಕೂ ಸದ್ದರ್ಶನಕ್ಕೂ ಇರುವ ಅಂತರ ಅಪಾರ. ಕಲ್ಲು ಕಬ್ಬಿಣಗಳು ಎಲ್ಲೆಡೆಯೂ ದೊರೆಯುತ್ತವೆ; ಆದರೆ ಚಿನ್ನ ರತ್ನಗಳನ್ನು ಹಾಗೆ ಕಾಣಲಾಗದು. ಅಂತಹ ಅಪೂರ್ವವಾದ ದರ್ಶನ ಸದ್ಧರ್ಮಗಳನ್ನು ಪೂರ್ವಜನ್ಮದ ಪುಣ್ಯದಿಂದ ಪಡೆದಿದ್ದರೂ ಅವುಗಳನ್ನು ಅವಗಣಿಸಿ ಸಂಸಾರದ ನಶ್ವರವಾದ ಸಿರಿಗೂ ಸಂಪತ್ತಿಗೂ ಆಸೆಪಟ್ಟು, ಹಾದರಿಗ ಗಂಡನನ್ನು ನಂಬಿ ಮನೆಯ ಗಂಡನನ್ನು ಬಿಡುವ ಹಾಗೆ, ಮೂರು ದಿನದ ಪಗರಣಕ್ಕೆ ಗಡ್ಡ ಮೀಸೆ ಮಂಡೆಗಳನ್ನು ಬೋಳಿಸಿಕೊಳ್ಳುವ ಹಾಗೆ, ನನ್ನಂಥವಳು ನಿಮಗೆ ಬುದ್ಧಿ ಹೇಳುವುದು ಸರಿಯಲ್ಲ. ಅಲ್ಲದೆ ಗಂಡನಿಗೆ ಹೆಂಡತಿ ತಿಳಿವಳಿಕೆ ಹೇಳುವುದುಂಟೇ? ನೀವೇನಾದರೂ ಮಗಳನ್ನು ರಾಜನಿಗೆ ಕೊಟ್ಟರೆ ನನಗೆ ಬಸದಿಯೇ ಶರಣು" ಎಂದು ಗಂಡನಿಗೆ ತಿಳಿಹೇಳಿದಳು.

ಅರ್ಹತ್ಪರಮೇಶ್ವರ ಪಾದಪಂಕಜಭ್ರಮರೆಯಾದ ತನ್ನ ಹೆಂಡತಿಯ ಮುಖವನ್ನು ಆದರದಿಂದ ನೋಡಿ ಗುಣಪಾಲ ಸೆಟ್ಟಿಯು, ದರ್ಶನದಲ್ಲಿ ಇವಳು ಆದಿಯ ಸೀತೆ ರಂಭೆಯರಿಗೆ ಸಮಾನೆ ಎಂದುಕೊಂಡ. ಸಿರಿ ಧನ ಐಶ್ವರ್ಯಗಳಿದ್ದರೂ ದರ್ಶನವಿಲ್ಲದ ಹೆಂಡತಿಯು ದೊರೆತರೆ ಏನು ಪ್ರಯೋಜನ? ಅಂತಹ ಹೆಂಡತಿ ಮಹಾ ದುರಿತದ ನೆಲೆ, ನರಕಗತಿ. ದರ್ಶನ ಧರ್ಮಬುದ್ಧಿಯಿಲ್ಲದ ಹೆಂಡತಿಯ ಬಗೆಗಿನ ಮೋಹವು ಹರಿದ ಹರಿಗೋಲನ್ನೇರಿದಂತೆ; ಅದೇ ದರ್ಶನಶುದ್ಧೆಯೂ ಸದ್ಧರ್ಮಸಮೇತಳಾದ ಹೆಂಡತಿಯನ್ನು ಪಡೆಯುವುದು ಗಟ್ಟಿಮುಟ್ಟಾದ ಹಡಗನ್ನು ಏರಿ ಸಮುದ್ರಯಾನ ಮಾಡುವಂತೆ! ನಿರ್ಮಲಳೂ ವನಿತಾಜನರತ್ನೆಯೂ ಆದ ಇವಳನ್ನು ಹೆಂಡತಿಯಾಗಿ ಪಡೆದ ತಾನು ಪುಣ್ಯವಂತ ಎಂದು ಸೆಟ್ಟಿ ಹರ್ಷಗೊಂಡ. ತನ್ನ ಗಂಡ ಗಳಿಸಿದ ಹಣವನ್ನು ಕದ್ದು ಮುಚ್ಚಿ ತಮ್ಮವರಿಗೆ ಕೊಡುವ ಹೆಣ್ಣಿನಂತಲ್ಲದೆ, ಇವಳು ಧರ್ಮರತ್ನಾಕರೆ ಎಂದು ಮನಸ್ಸಿನಲ್ಲಿಯೇ ಹೊಗಳಿದ. ಅವಳ ಸಮ್ಯಕ್ತ್ವವನ್ನು ಕಂಡು ಸಂತಸಪಟ್ಟ.

ಆನಂತರ ಮಗಳ ಮನಸ್ಸನ್ನು ತಿಳಿಯಲೆಂದು ಬಯಸಿ ಸುಬಂಧುಶ್ರೀಯನ್ನು ಕರೆಸಿ ತೊಡೆಯ ಮೇಲೆ ಕೂರಿಸಿಕೊಂಡು ವಾತ್ಸಲ್ಯದ ಮಾತುಗಳನ್ನಾಡಿದ, ಅವಳ ಮುದ್ದುನುಡಿಗಳನ್ನು ಕೇಳಿ ಸಂತಸಗೊಂಡ. ಆಮೇಲೆ ನಿಧಾನವಾಗಿ ಮಾತು ತೆಗೆದು, "ಮಗಳೇ, ನಿನ್ನಂತೆ ಪುಣ್ಯ ಮಾಡಿದವರುಂಟೇ? ಏಕೆಂದರೆ ಗುಣಗಣನಿಲಯನೂ ಪರಾಕ್ರಮಿಯೂ ಆದ ವಿಶ್ವಂಭರ ಮಹಾರಾಜನು ನಿನ್ನನ್ನು ಅರಸಿಯನ್ನಾಗಿ ಮಾಡಿಕೊಳ್ಳಲು ಬಯಸಿದ್ದಾನೆ. ನೀನು ಅವನ ರಾಣಿಯಾದರೆ ನನಗೆ ಮುಖ್ಯವಾದೊಂದು ಪದವಿಯನ್ನು ನೀಡುತ್ತಾನೆ; ನೀನೂ ಸಂಪತ್ತಿನ ಒಡೆಯಳಾಗಿ ರಾಜ್ಯಲೀಲೆಯಲ್ಲಿ ಸುಖದಿಂದ ಇರಬಹುದು. ನೀನು ಪಟ್ಟದರಸಿಯಾದರೆ ನಿನ್ನ ಮಗನು ರಾಜನಾಗುತ್ತಾನೆ; ಅಂದರೆ ರಾಜ್ಯವು ನಮಗೆ ಬಂದಂತೆಯೇ ಆಗುತ್ತದೆ. ವ್ಯಾಪಾರಿಯ ಮಗಳಾಗಿ ಹುಟ್ಟಿದರೂ ನಿನ್ನಂತೆ ಅರಸಿಯಾಗಿ ರಾಜನ ಪ್ರೀತಿಗೂ ರಾಜ್ಯಕ್ಕೂ ಒಡೆಯಳಾಗುವುದೆಂದರೆ ಪುಣ್ಯವಲ್ಲವೇ?" ಎಂದ. ತಂದೆಯ ಮಾತನ್ನು ಕೇಳಿದ ಸುಬಂಧುಶ್ರೀ ನಕ್ಕು, "ನಿಮ್ಮಂತಹ ಮಹಾಪುರುಷರು ಇಷ್ಟು ಬುದ್ಧಿಹೀನತೆಯನ್ನು ಹೊಂದಿರುವರೇ? ಸಿರಿಗೆ ಎರಗಿ ಧರ್ಮವನ್ನು ಬಿಡುವುದು ಯಾವ

ಬುದ್ಧಿವಂತಿಕೆ? ಕಂಚನ್ನು ಬಿಟ್ಟು ಓಡು ಹಿಡಿಯುವ, ತಾಯಿಯನ್ನು ಬಿಟ್ಟು ರಕ್ಕಸಿಯನ್ನು ಹೊಂದುವ, ಕುದುರೆಯನ್ನು ಬಿಟ್ಟು ನಾಯನ್ನು ಹತ್ತುವ ರೀತಿಯಲ್ಲಿ, ಹಾಲನ್ನು ಕುಡಿಯುವ ಬೆಕ್ಕು ಮೇಲೆ ಬಂದೆರಗುವ ಬಡಿಗೆಯನ್ನು ಕಾಣದೆಂಬಂತೆ, ಮೂರ್ಖರಾದವರು ಇಲ್ಲಿಯ ಸುಖವನ್ನು ಮಿಗಿಲೆಂದು ಭಾವಿಸಿ ಮೇಲಿನ ನರಕದ ದುಃಖವನ್ನು ಪಡೆಯುವಂತೆ, ನನ್ನ ಮುಂದೆ ಇಂತ ಕಪಟ ವಚನಗಳನ್ನು ಆಡಬೇಡಿ, ಮಕ್ಕಳಿಗೆ ಗುಗ್ಗುರಿಯನ್ನು ತೋರಿಸಿ ಅವರ ಕೈಯಲ್ಲಿನ ಮಾಣಿಕ್ಯವನ್ನು ಕಸಿದುಕೊಳ್ಳುವಂತೆ, ಸುದರ್ಶನವನ್ನು ಬಿಡಿಸಿ ಕೆಲಸವನ್ನು ಹಾಳು ಮಾಡುವ ಈ ಸಿರಿ ಸುಖಗಳನ್ನು ತೋರಿಸಿ ಠಕ್ಕಿನ ಮಾತಾಡಬೇಡಿ. ಜೈನಧರ್ಮವು ಪ್ರಾಣಿಗಳಿಗೆ ಆಶ್ರಯಸ್ಥಾನ, ತ್ರಿಭುವನತಿಲಕ, ಸರ್ವಲೋಕೈಕಪೂಜ್ಯ, ಮನುಜೇಂದ್ರಶ್ರೀವಿಲಾಸ, ವಿಬುಧಪತಿನುತ, ಮುಕ್ತಿವಧೂ ಕರ್ಣಪೂರ, ಸಕಲ ಸುಖಗಳನ್ನೀಯುವ ಕಲ್ಪವೃಕ್ಷ. ಅಂಥ ಸದ್ಧರ್ಮವು ಪುಣ್ಯನಿವಾಸಿಗೆ ದೊರೆಯುತ್ತದೆ; ಪಾಪಿಗೆ, ಸುಳ್ಳುಗಾರನಿಗೆ ದೊರಕುವುದಿಲ್ಲ. ಈ ವಿಮಲ ಜೈನಾಗಮವನ್ನು ಅರಿತೂ ನೀವು ಅರಿಯದ ಎಗ್ಗರ ಹಾಗೆ ರಮಣೀಯವೆಂದು ರಾಜ್ಯಕ್ಕೆ ಆಸೆಪಡುವುದು ಸರಿಯೇ? ಸದ್ಧರ್ಮಸಮೇತನಾದ ನಿಮ್ಮ ಶರಣುಬುಗುವಂತೆ ಹುಟ್ಟಿರುವ ನನ್ನನ್ನು ರಕ್ಷಿಸದೆ ಕರ್ಮರಾಜನಿಗೆ ಒಪ್ಪಿಸುವುದು ಸರಿಯಲ್ಲ. ನನ್ನ ಮೇಲೆ ಕೋಪವಿದ್ದರೆ ನಿಮಗೆ ಸರಿ ತೋರಿದ ದಂಡವನ್ನು ವಿಧಿಸಿ. ಆದರೆ ಮಿಥ್ಯಾದೃಷ್ಟಿಯವನಿಗೆ ಕೊಡುವ ನಿರ್ಧಾರ ಮಾಡಬೇಡಿ" ಎಂದು ಕಣ್ಣಲ್ಲಿ ನೀರು ತಂದುಕೊಂಡಳು.

ಮಗಳ ಮನಸ್ಸಿನ ಸ್ವಚ್ಛತೆಗೂ, ಸಮ್ಯಕ್ತ್ವದಲ್ಲಿಟ್ಟ ನಂಬಿಕೆಗೂ ಗುಣಪಾಲ ಸೆಟ್ಟಿಯು ಮನಸ್ಸಿನಲ್ಲಿಯೇ ಸಂತಸಗೊಂಡ. ತನ್ನ ಹಾಗೂ ತನ್ನ ಹೆಂಡತಿಯ ಗುಣಕ್ಕಿಂತಲೂ ಇವಳ ಗುಣವು ಉನ್ನತವಾದುದು. ತನಗಿಂತ ಪುಣ್ಯವಂತರು ಬೇರೆ ಇದ್ದಾರೆಯೇ ಎಂದು ಹೆಮ್ಮೆ ಪಟ್ಟ. ಕಸ್ತೂರಿ ಕರ್ಪೂರ ಶ್ರೀಗಂಧಗಳನ್ನು ಸೋಕಿ ಬರುವ ಗಾಳಿಗೆ ಪರಿಮಳವಿರುವಂತೆ ಪಾಪದಲ್ಲಿ ಸೇರದ ಮತ್ತು ಪೊಲ್ಲಮೆಯಲ್ಲಿ ಕೂಡದ ಜಿನಧರ್ಮವನ್ನು ಅನುಸರಿಸುವವನಿಗೆ ಸುತತ್ವವಿಚಾರವೂ ಮಿಥ್ಯಾತ್ವ ಭೀರುತ್ವವೂ ಸಹಜವೇ ಅನ್ನಿಸಿತು. ಹೆಂಡತಿ ಹಾಗೂ ಮಗಳಿಗೆ ತನ್ನ ಮನಸ್ಸಿನ ವಿಚಾರವನ್ನು ವಿವರಿಸಿ ಹೇಳಿದ. ಇಲ್ಲಿಯೇ ಇದ್ದರೆ ಮಗಳನ್ನು ರಾಜನಿಗೆ ಕೊಟ್ಟು ಮದುವೆ ಮಾಡಬೇಕಾದ ಸಂದರ್ಭ ಬರುತ್ತದೆ; ಹಾಗೆ ಮಾಡಿದೆನಾದರೆ ನಮಗೆ ಮೋಕ್ಷ ದೊರೆಯದು ಎಂದು ಬಗೆದ. ಧನಶ್ರೀ ಗರ್ಭಿಣಿಯಾದ್ದರಿಂದ ಅವಳನ್ನೊಡಗೊಂಡು ಹೋಗಲು ಬಯಸದೆ, ಅವಳನ್ನು ತನ್ನ ಪ್ರಾಣಮಿತ್ರನಾದ ಶ್ರೀದತ್ತನೆಂಬ ಹರದನ ಮನೆಯಲ್ಲಿ ಗುಪ್ತವಾಗಿರಿಸಿದ. ಅವಳ ನಿರ್ವಹಣೆಗಾಗಿ ನೂರೆಂಟು ಹೊನ್ನುಗಳನ್ನು ನೀಡಿದ. ಮಗಳೊಂದಿಗೆ ಆ ಜೈನಧರ್ಮವಾರಿಧಿಯು ಹೊರಟುಬಿಟ್ಟ.

ಕೆಲವು ದಿನಗಳ ಪ್ರಯಾಣದ ನಂತರ ಅವರು ಕೌಸಾಂಬಿ ಎಂಬ ನಗರಕ್ಕೆ ಬಂದರು. ಆ ಧರ್ಮರತ್ನಾಕರನು ತನ್ನ ಸಿರಿಯನ್ನು ನೆನೆದು ಕುಂದಲಿಲ್ಲ; ಜೀವನ ನಿರ್ವಹಣೆಗೆ ಕಷ್ಟವಾಗುವುದೆಂದು ಬುದ್ಧಿಗೆಡಲಿಲ್ಲ; ದೇಶತ್ಯಾಗ ಮಾಡಬೇಕಾದುದಕ್ಕೆ ದುಃಖಿತನಾಗಲಿಲ್ಲ; ಉತ್ತಮ ಗುಣಿಯಾದ ಗುಣಪಾಲ ಸೆಟ್ಟಿಯು ಸಂತಸದಿಂದಲೇ ಇದ್ದ.

ಇತ್ತ, ಗುಣಪಾಲ ಸೆಟ್ಟಿಯು ತನ್ನ ಸಿರಿಯನ್ನೆಲ್ಲ ತೊರೆದು ಹೆಂಡಿರು ಮಕ್ಕಳೊಡನೆ ಎಲ್ಲೋ ಹೋಗಿರುವನೆಂಬುದನ್ನು ಅರಸನು ಕೇಳಿ ಬೆರಗುಗೊಂಡ. ಪ್ರಧಾನರ ಕಡೆ ನೋಡಿ, "ತನ್ನ ಮಗಳನ್ನು ನನಗಿತ್ತು ಒಳ್ಳೆಯ ಸ್ಥಿತಿಯಲ್ಲಿರದೆ ಹೀಗೆ ಓಡಿಹೋಗುವ ಮರುಳ ಅವನು. ಹೀಗೇಕೆ ಮಾಡಿದ?" ಎಂದ. ಅವನು ವೈಶ್ಯ, ತಾನು ರಾಜಪುತ್ರ; ಆದರೂ ಅವನು ಓಡಿಹೋದ. ಯೋಚಿಸಿದರೆ ನನಗೂ ಅವನಿಗೂ ವ್ಯತ್ಯಾಸವೇನಿದೆ? ಮಗಳನ್ನು ನನಗೆ ಕೊಟ್ಟು ಭೂಮಿಗೆ ಒಡೆಯನಾಗಿರದೆ ಹೆದರಿ ಪಲಾಯನ ಮಾಡುವ ಕೆಲಸವನ್ನು ಅವನೇಕೆ ಮಾಡಿದ? ಅವನಿಗಿಂತ ಪುಣ್ಯಹೀನರಿದ್ದಾರೆಯೇ?" ಎಂದು ಹಾಸ್ಯದ ಮಾತಾಡಿದ. ಆಗ ಹೆಗ್ಗಡೆಯು, "ದೇವಲೋಕದ ವೈಭವಕ್ಕಿಂತಲೂ, ಚಕ್ರವರ್ತಿಯ ಐಶ್ವರ್ಯಕ್ಕಿಂತಲೂ, ಮೋಕ್ಷಲಕ್ಷ್ಮಿಯ ಪ್ರೀತಿಗಿಂತಲೂ, ಸುಖಸೌಭಾಗ್ಯಗಳಿಗಿಂತಲೂ ಸದ್ಧರ್ಮವೇ ಮುಖ್ಯವಾದುದು. ನೀವು ಶ್ರಾವಕರಲ್ಲದ್ದರಿಂದ, ಮಿಥ್ಯಾತ್ವದ ಕಾರಣದಿಂದ ಮುಂದೆ ಒದಗುವ ನರಕದುಃಖಕ್ಕೆ ಹೆದರಿ ಮಗಳನ್ನು ನಿಮಗೆ ಕೊಡಲಾರದೆ, ಧರ್ಮದ ಮೇಲಿನ

ಮೋಹದಿಂದ ಸಿರಿಸಂಪತ್ತುಗಳನ್ನು ಉದಾಸೀನ ಮಾಡಿ ಹೋಗಿದ್ದಾನೆ" ಎಂದು ಹೇಳಿದ. ಇದನ್ನು ಕೇಳಿದ ವಿಶ್ವಂಭರ ಮಹಾರಾಜನಿಗೆ ಆಶ್ಚರ್ಯವಾಯಿತು. ಸಿರಿ ವೈಭವಗಳನ್ನು ತೊರೆದು, ವ್ಯವಹಾರದ ವಾಂಛೆಯಿಲ್ಲದೆ, ವೈಶ್ಯನಾದ ಗುಣಪಾಲನು ತನ್ನ ಸಿರಿಯನ್ನು ಪರಿಗಣಿಸಿ ಮಗಳನ್ನು ತನಗೆ ಕೊಡದೆ, ಧರ್ಮವನ್ನೇ ಮುಖ್ಯವೆಂದೆಣಿಸಿ ಈ ದೇಶದಿಂದಲೇ ಹೋದನಲ್ಲ; ಆದ್ದರಿಂದ ಅವನು ನಂಬಿದುದೇ ದೈವ; ಅವನು ಹಿಡಿದಿದ್ದುದೇ ಧರ್ಮ ಎಂದು ಸೆಟ್ಟಿಯ ಬಗ್ಗೆ ರಾಜನಿಗೆ ಮೆಚ್ಚಿಕೆಯೆನಿಸಿತು. ಅಲ್ಲದೆ, ಆ ವೈಶ್ಯಕುಲಮಣಿಯು ನಂಬಿದುದೇ ಶ್ರೇಠಷ್ಠವಾದ ಧರ್ಮ ಎಂದು ರಾಜನಿಗೆ ಜಿನಧರ್ಮದ ಬಗ್ಗೆ ಪ್ರೀತಿಯೂ ಕುಧರ್ಮದ ಬಗ್ಗೆ ಭೀತಿಯೂ ಉಂಟಾಯಿತು. ಗುಣಪಾಲಸೆಟ್ಟಿಯ ಮೇಲೆ ಸ್ನೇಹಮೋಹಗಳುಂಟಾದವು. ಅವನ ಮನೆ ಆಸ್ತಿಗಳ ಮೇಲೆ ಕಾವಲಿರಿಸಿ, ಅವನು ಎಲ್ಲಿದ್ದರೂ ಹುಡುಕಿ ತನ್ನಿ ಎಂದು ವಿಶ್ವಂಭರ ಮಹಾರಾಜನು ದೆಸೆದೆಸೆಗೆ ಪರಿಚಾರಕರನ್ನು ಕಳಿಸಿದ.

ಇತ್ತ ಧನಶ್ರೀಯು ತನ್ನ ಗಂಡನು ಗುಣಾಢ್ಯನೂ ಪುಣ್ಯನಿಲಯನೂ ಆದ್ದರಿಂದ ಎಲ್ಲಿಯೂ ಕೆಟ್ಟುದನ್ನು ಎದುರಿಸುವುದಿಲ್ಲವೆಂದು ಸಮಾಧಾನದಿಂದಿದ್ದಳು. ಒಂದು ದಿನ ಶಿವಗುಪ್ತಾಚಾರ್ಯರೆಂಬ ಮುನಿಗಳು ತ್ರಿಗುಪ್ತರೆಂಬ ತಮ್ಮ ಶಿಷ್ಯರೊಡನೆ ಚಂದ್ರಗತಿಯಿಂದ ಚರಿಗೆಗೆಂದು ಬಂದರು. ಅದನ್ನು ಕಂಡ ಶ್ರೀದತ್ತಸೆಟ್ಟಿಯು ಆದರದಿಂದ ಆ ಮುನಿವರರನ್ನು ಭಕ್ತಿಪೂರ್ವಕವಾಗಿ ತಮ್ಮ ಮನೆಗೆ ಕರೆದು ತಂದ. ಉನ್ನತ ಪೀಠವನ್ನಿತ್ತು ಅವರ ಪಾದಗಳನ್ನು ತೊಳೆದು ಆ ನೀರನ್ನು ಮಸ್ತಕದಲ್ಲಿ ಧರಿಸಿದ. ಪಾದಪೂಜೆ ಮಾಡಿದ ನಂತರ ಉತ್ಕಠಷ್ಟವಾದ ಶುದ್ಧಾನ್ನವನ್ನು ನೀಡಿದ; ಅದನ್ನುಂಡು ಮುನೀಂದ್ರರು ಕುಳಿತಿದ್ದರು. ಸೆಟ್ಟಿಯು ಅವರ ಕಾಲುಗಳನ್ನು ಒತ್ತುತ್ತಿದ್ದ. ಧನಶ್ರೀಯು ಬಂದು ಮುನಿಗಳಿಗೆ ವಂದಿಸಿ ಹೋದಳು. ಅವಳನ್ನು ಕಂಡ ತ್ರಿಗುಪ್ತಮುನಿಗಳಿಗೆ ವಿಸ್ಮಯವಾಯಿತು. ಶಿವಗುಪ್ತಭಟ್ಟಾರಕರಿಗೆ ಪೊಡಮಟ್ಟು ಕೈಮುಗಿದುಕೊಂಡು ವಿನಯದಿಂದ, "ಈ ಗುಣಾನ್ವಿತೆಯಾದ ವನಜಾಕ್ಷಿಯಲ್ಲಿ ಭದ್ರಲಕ್ಷಣಗಳು ತುಂಬಿವೆ. ಆದರೆ ಲಕ್ಷ್ಮಿಯ ಹಾಗಿರುವ ಈಕೆಯು ಕಂದಿ ಕುಂದಿ ಸಂತಸವಿಲ್ಲದೆ ಅನ್ಯರ ಮನೆಯಲ್ಲಿ ಇರುವಳಲ್ಲ! ಸಂಸಾರವನ್ನು ಬಿಟ್ಟು ಬೇರೆಡೆ ಕಷ್ಟವಿಲ್ಲ" ಎಂದರು. ಅದಕ್ಕೆ ಶಿವಗುಪ್ತಾಚಾರ್ಯರು, "ಹಾಗೆ ಹೇಳಬೇಡ. ಈಕೆ ತುಂಬ ಪುಣ್ಯವಂತೆ. ರಾಜನು ತನಗೆ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದು ಬಲವಂತವಾಗಿ ಕೇಳಿದಾಗ, ಇವಳ ಗಂಡನು ಜಿನಧರ್ಮದವನಲ್ಲದವನಿಗೆ ತನ್ನ ಮಗಳನ್ನು ಕೊಡಲು ಇಷ್ಟವಿಲ್ಲದೆ ಮನೆಸಿರಿಗಳನ್ನು ತೊರೆದು ಹೊರಟು ಹೋದ. ಹೋಗುವಾಗ ಇವಳು ಗರ್ಭಿಣಿಯಾಗಿದ್ದುದರಿಂದ ಶ್ರೀದತ್ತಸೆಟ್ಟಿಯ ಮನೆಯಲ್ಲಿ ಗುಪ್ತದಿಂದ ಇರಿಸಿ ಹೋಗಿದ್ದಾನೆ. ಅದಕ್ಕಾಗಿ ಈಕೆ ಕಂದಿದ್ದಾಳೆ" ಎಂದರು. ಇವಳ ಮಗನು ಇಡೀ ಭೂಮಂಡಲಕ್ಕೆ ಒಡೆಯನಾಗುತ್ತಾನೆ ಎಂದು ತಮ್ಮೊಳಗೆ ಮಾತಾಡಿಕೊಂಡರು. ಈ ಮಾತುಗಳನ್ನು ಕೇಳಿಸಿಕೊಂಡ ಶ್ರೀದತ್ತಸೆಟ್ಟಿಯು ಕಾರಣವಿಲ್ಲದೆ ಕೋಪಗೊಂಡ. ಧನಶ್ರೀಯ ಮಗನು ಭೂಮಿಗೆ ಒಡೆಯನಾಗುತ್ತಾನೇನು? ಈ ಮಗುವನ್ನು ಉಪಾಯದಿಂದ ಕೊಲ್ಲಬೇಕು ಎಂದು ನಿರ್ಧರಿಸಿದ. ತನಗೂ ಗುಣಪಾಲನಿಗೂ ಪೂರ್ವವೈರವಿದ್ದುದರಿಂದ ಶ್ರೀದತ್ತನು ಇಬ್ಬರು ತೊತ್ತುಗಳನ್ನು ನೇಮಿಸಿ, ಧನಶ್ರೀಯು ಹೆತ್ತ ಕೂಡಲೇ ಆ ವಿಷಯವನ್ನು ತನಗೆ ತಿಳಿಸಲು ಗುಟ್ಟಾಗಿ ಏರ್ಪಾಟು ಮಾಡಿದ. ಅಲ್ಲಿಯವರೆಗೂ ಅವರಿಬ್ಬರೂ ಧನಶ್ರೀಗೆ ಪ್ರೀತಿಯ ಸಂಗಾತಿಯರಂತೆ ನಟಿಸಬೇಕೆಂದೂ ಆದೇಶಿಸಿದ.

ನವಮಾಸ ತುಂಬಿದ ಬಳಿಕ ಧನಶ್ರೀ ಗಂಡು ಮಗುವನ್ನು ಹೆತ್ತಳು. ಮಾಡಿದ ಏರ್ಪಾಟಿನಂತೆ ಇಬ್ಬರು ತೊತ್ತುಗಳು ಓಡಿ ಬಂದು ಈ ವಿಚಾರವನ್ನು ಶ್ರೀದತ್ತಸೆಟ್ಟಿಗೆ ತಿಳಿಸಿದರು. ಅವನು ಕೋಪಗೊಂಡು ಮಗುವನ್ನು ಕೊಲ್ಲುವ ಉದ್ದೇಶದಿಂದ ಆತುರನಾಗಿ ಬಂದ. ಕೂಸನ್ನು ನೋಡಿ ಬಹಳ ಪ್ರೀತಿಯಿಂದೆಂಬಂತೆ ಧನಶ್ರೀಯನ್ನು ಮಾತನಾಡಿಸಿದ. ಮೋಸದಿಂದ "ಈಕೆಗೆ ಗರ್ಭಸ್ರಾವವಾಯಿತು. ಅಯ್ಯೋ ಕೆಟ್ಟೆ, ಗುಣಪಾಲನು ಈಕೆಯನ್ನು ನನ್ನಲ್ಲಿ ನ್ಯಾಸವಾಗಿರಿಸಿದ. ಎಲ್ಲ ನಾಶವಾಯಿತೇ!" ಎಂದು ಗೋಳಾಡಿದ. ಧನಶ್ರೀಯನ್ನು ಹಾಸಿಗೆಯ ಮೇಲೆ ಮಲಗಿಸಿ, ಅಕ್ಕಪಕ್ಕದಲ್ಲಿದ್ದವರನ್ನೆಲ್ಲ ಹೊರಗೆ ಕಳಿಸಿ ಕೂಸು ಸತ್ತು ಹೋಯಿತು ಎಂದು ಎಲ್ಲರೆದುರಿಗೆ ಹೇಳಿದ. ಯಾರಿಗೂ ತಿಳಿಯದಂತೆ ಮಗುವನ್ನು ಹೊರಗೆ ತಂದು, ಒಬ್ಬ ಕ್ರೂರಿಯಾದ

ಕಟುಕನಿಗೆ ಬೇಕಾದಷ್ಟು ಹೊನ್ನು ಕೊಟ್ಟು ಮಗುವನ್ನು ಕೊಲ್ಲುವಂತೆ ಆಜ್ಞಾಪಿಸಿ ಕಳಿಸಿಕೊಟ್ಟ. ಇತ್ತ ಧನಶ್ರೀಯ ಮುಂದೆ ಬಂದು, "ಬದುಕಿದ್ದಿದ್ದರೆ ಈ ಕೂಸು ತನ್ನ ಭಾವ, ಓಜೆ, ಗುಣ ಇವೆಲ್ಲದರಿಂದ ಖಂಡಿತವಾಗಿ ಜಗತ್ತನ್ನೇ ಸೋಲಿಸುತ್ತಿತ್ತು, ನನ್ನನ್ನೇ ನಂಬಿಕೊಂಡು ಗೆಳೆಯನಾದ ಗುಣಪಾಲನು ತನ್ನ ಸತಿಯನ್ನು ನನ್ನ ಆಶ್ರಯದಲ್ಲಿರಿಸಿ ಹೋದ. ಈಕೆಯನ್ನೂ ಅವಳು ಹಡೆದ ಕೂಸನ್ನೂ ಮತ್ತೆ ಅವನಿಗೆ ಒಪ್ಪಿಸುವ ಭಾಗ್ಯ ನನಗೆ ಬರಲಿಲ್ಲವಲ್ಲ! ಸೂರ್ಯನ ಮಗುವಿನ ಹಾಗೆ ರೂಪು, ತೇಜಸ್ಸುಗಳನ್ನು ಹೊಂದಿದ್ದ ಈ ಕೂಸು ಸತ್ತು ನನಗೆ ಆಘಾತವಾಯಿತು" ಎಂದು ಗೋಳಾಡಿ ಕಪಟ ಮಾಡಿದ. ಧನಶ್ರೀಯು ಅವನ ಮೋಸವನ್ನರಿಯದೆ, "ಸತ್ತವರಿಗಾಗಿ ಹಂಬಲಿಸುವುದು, ಹಲುಬುವುದು, ದುಃಖದಲ್ಲಿ ಮುಳುಗುವುದು ಇವೆಲ್ಲ ಏಕೆ?" ಎಂದು ಸಮಾಧಾನ ಮಾಡಿದಳು. ಶ್ರೀದತ್ತಸೆಟ್ಟಿ ಇದರಿಂದ ಸಾಂತ್ವನಗೊಂಡಂತೆ ಸುಮ್ಮನಾದ. ತಾನು ಋಷಿಗಳ ಮಾತನ್ನು ಹುಸಿ ಮಾಡಿದೆ, ಮಗುವು ಸತ್ತಿತು ಎಂದು ಹೆಮ್ಮೆಯಿಂದ ಬೀಗಿದ.

ಈ ಕಡೆ ಕಟುಕನು ಕಾಡಿಗೆ ಬಂದು, ಯಾರೂ ಇಲ್ಲದ ಜಾಗದಲ್ಲಿ ಅದರ ಗಂಟಲು ಮುರಿಯುವ ಉದ್ದೇಶದಿಂದ ನಿಂತ. ಹಾಗೆ ಮಾಡಲೆಂದು ಅವನು ಮಗುವಿನ ಮುಖವನ್ನು ನೋಡಿದ. ಅರುಣಚ್ಛವಿಯ ತುಟಿಗಳು, ಚಿನ್ನದ ಮೈಬಣ್ಣ, ನೀಳವಾದ ಬಾಹುಗಳು, ತಾವರೆಯಂತಹ ಮುಖ, ಉನ್ನತವಾದ ಹಣೆ, ಕೆಂಪಾಗಿ ಮಿರುಗುವ ಅಂಗೈಗಳು, ನಸುಗೆಂಪಾದ ಚಂಚಲನೇತ್ರಗಳು ಇವುಗಳು ಅವನ ನೋಟವನ್ನು ಸೆರೆಹಿಡಿದವು. ನಗುವ ಆ ಕೂಸನ್ನು ನೋಡಿ ಅವನಲ್ಲಿ ದಯೆ ಹುಟ್ಟಿತು; ಮೋಹ ಉಕ್ಕಿತು. ಕೊಲೆಯ ಯೋಚನೆಯನ್ನು ಕೈಬಿಟ್ಟು ಒಂದು ಹಳ್ಳದಲ್ಲಿ ಮರಳನ್ನು ತೋಡಿ ಅದರಲ್ಲಿ ಮಾವಿನ ಚಿಗುರನ್ನು ತುಂಬಿ ಕೂಸನ್ನು ಮಲಗಿಸಿದ. ಇಂದ್ರಸಮಾನವಾದ ಈ ಮಗುವು ಬಿರುಬಿಸಿಲಲ್ಲಿ ಹುಡುಹುಡನೆ ಬೆಂದು ಸಾಯದಿರದು, ಆ ಪಾಪಕ್ಕೆ ತಾನೇಕೆ ಪಕ್ಕಾಗಬೇಕೆಂದು ಚಿಂತಿಸಿದ. ಅಷ್ಟರಲ್ಲಿ ಅವನ ಪುಣ್ಯವೇ ಬರುವಂತೆ ಖಲ್ವಬಿಲ್ವಸಂಯೋಗದಿಂದ ಶ್ರೀದತ್ತಸೆಟ್ಟಿಯ ಮೈದುನನಾದ ಇಂದ್ರದತ್ತಸೆಟ್ಟಿಯು ವ್ಯಾಪಾರಕ್ಕೆಂದು ಹೋಗುತ್ತ ಆ ಎಡೆ ಬೀಡು ಬಿಟ್ಟಿದ್ದ; ಅವನ ಕಡೆಯವನೊಬ್ಬ ಎಳೆದಳಿರ ಮೇಲೆ ಮಲಗಿದ್ದ ಕೂಸನ್ನು ಕಂಡ. 'ಒಳ್ಳೆಯದಾಯಿತು ಮಗುವನ್ನು ಕರೆದುಯ್ದರೆ ಸೆಟ್ಟಿಗೆ ತುಂಬ ಸಂತಸವಾಗುವುದರಲ್ಲಿ ಸಂದೇಹವಿಲ್ಲ; ಈ ಮಗುವನ್ನಿತ್ತರೆ ತನಗೆ ಹಣವೂ ಸಿಕ್ಕುತ್ತದೆ' ಎಂದುಕೊಂಡ ಅವನು ನಿಧಿಯನ್ನೆತ್ತುವ ಹಾಗೆ ಅದನ್ನು ತೋಳಲ್ಲಿರಿಸಿಕೊಂಡು ಬಂದು ಇಂದ್ರದತ್ತಸೆಟ್ಟಿಗೆ ಒಪ್ಪಿಸಿದ. ತನಗೆ ಮಕ್ಕಳಿಲ್ಲದ್ದರಿಂದ ಬಡವನು ಕಡಾರವನ್ನು ಕಂಡಂತೆ ಸೆಟ್ಟಿಯು ಹರ್ಷಗೊಂಡ. ಶ್ರೀದತ್ತನ ತಂಗಿಯಾದ ತನ್ನ ಹೆಂಡತಿ ರಾಧೆಗೆ, "ನಿನಗೆ ಪುತ್ರಲಾಭವಾಯಿತು" ಎಂದು ಬಾಲಸೂರ್ಯನಂತಿದ್ದ ಆ ಮಗುವನ್ನಿತ್ತ. ಕೂಸನ್ನು ತಂದಿತ್ತವನಿಗೆ ಬೇಡಿದಷ್ಟು ಹಣವನ್ನಿತ್ತ. ತನ್ನ ಹೆಂಡತಿಯು ಗೂಢಗರ್ಭದಿಂದ ಗಂಡು ಕೂಸನ್ನು ಹೆತ್ತಳೆಂದು ಜಿನನಿಗೆ ಪೂಜೆ ಅಭಿಷೇಕಗಳನ್ನು ಮಾಡಿಸಿದ.

ತನ್ನ ಮೈದುನನಾದ ಇಂದ್ರದತ್ತನು ದೇವೇಂದ್ರಸನ್ನಿಭನಾದ ಮಗನನ್ನು ಪಡೆದನೆಂಬ ಸಮಾಚಾರವನ್ನು ಕೇಳಿದ ಶ್ರೀದತ್ತಸೆಟ್ಟಿಗೆ ಆಶ್ಚರ್ಯವಾಯಿತು. ತನ್ನ ತಂಗಿಯಾದ ರಾಧೆಯು ಗರ್ಭ ಧರಿಸಿದ್ದೇ ತಿಳಿದಿರಲಿಲ್ಲ; ಇದ್ದಕ್ಕಿದ್ದಂತೆ ಮಗುವನ್ನು ಪಡೆಯಲು ಹೇಗೆ ಸಾಧ್ಯ; ನಿಜವಾಗಿಯೂ ರಾಧೆಗೆ ಮಗುವಾಯಿತೇ ಎಂದು ಅನುಮಾನಪಟ್ಟ. ಇದರ ಆಂತರ್ಯವನ್ನು ಭೇದಿಸುವ ಉದ್ದೇಶದಿಂದ ಅವನು ತಂಗಿಯ ಮನೆಗೆ ಬಂದ. ನೋಡಿದರೆ ಮಗು ಗುಣಪಾಲಸೆಟ್ಟಿಯ ಅಚ್ಚು ಒತ್ತಿದ ಹಾಗಿದೆ! ಅವನು ಬೆಚ್ಚಿದ, ಕಲ್ಲು ತಾಗಿದ ಹೇಂಟೆಯಂತಾದ. ಬೇಸಗೆಯಲ್ಲಿ ಉಪ್ಪು ತಿಂದವನಂತೆ ಮರುಗಿ ಮತ್ತೆ ಅದನ್ನು ಕೊಲ್ಲಲು ನಿರ್ಧರಿಸಿದ. ಅದಕ್ಕೊಂದು ಉಪಾಯವನ್ನು ಚಿಂತಿಸಿದ. ಕೂರ್ಮೆಯನ್ನು ನಟಿಸುತ್ತ ತನ್ನ ತಂಗಿ ಹಾಗು ಮೈದುನರಿಗೆ, "ನನ್ನ ತಂಗಿಗೆ ಮಗನಿಲ್ಲ; ನಿನ್ನ ಹಣ ಆಸ್ತಿಯೆಲ್ಲ ಪರರ ಪಾಲಾಗುತ್ತದಲ್ಲ ಎಂದು ನನಗೆ ಚಿಂತೆಯಾಗಿತ್ತು. ಈಗ ಇಂಥ ಮಗುವನ್ನು ಕಂಡು ನನಗೆ ತುಂಬ ಸಂತಸವಾಯಿತು. ನನ್ನ ಚಿಂತೆ ದುಃಖಗಳೂ ಮಾಯವಾದವು" ಎಂದು ಚಾಟುಕಾರ ವಚನಗಳನ್ನಾಡಿದ. ಆಮೇಲೆ ಅವರ ಮುಖವನ್ನು ನೋಡಿ, "ಇಷ್ಟು ಕಾಲ ರಾಧೆ ಗರ್ಭ ಧರಿಸಲಿಲ್ಲವೆಂದೇ

ಭಾವಿಸಿದ್ದೆ. ಈಗ ನೋಡಿದರೆ ಅಚ್ಚರಿಯಾಗುತ್ತಿದೆ. ನಿಜವಾಗಿ ಆದುದು ಏನು ಎಂಬುದನ್ನು ಹೇಳು" ಎಂದು ಒತ್ತಾಯಿಸಿದ. ಇವನ ಮಾತೆಲ್ಲ ನಿಜವೆಂದೇ ನಂಬಿದ ರಾಧೆ ನಡೆದ ವೃತ್ತಾಂತವನ್ನೆಲ್ಲ ಹೇಳಿಬಿಟ್ಟಳು. ಅವಳ ಮಾತುಗಳನ್ನು ಕೇಳಿ ಕೃತಕ ಪ್ರೀತಿಯನ್ನು ತೋರಿಸಿ, "ಈ ಸಂತಸವನ್ನು ಆಚರಿಸುತ್ತೇನೆ. ಬಡವರ ಮಗುವಿನ ಹಾಗೆ ಏಕಾಗಬೇಕು? ನಂಟರೆಲ್ಲ ನೋಡುವಂತೆ ಒಂದು ಸಮಾರಂಭವನ್ನು ಮಾಡಿ ನನ್ನ ತಂಗಿ ಬಯಸಿದ್ದನ್ನು ಉಡುಗೊರೆಯಾಗಿ ನೀಡುತ್ತೇನೆ" ಎಂದು ನುಡಿದ. ಹೀಗೆ ಭಾರಿ ಉತ್ಸಾಹವನ್ನು ನಟಿಸುತ್ತ ಇಂದ್ರದತ್ತಸೆಟ್ಟಿಯನ್ನೊಪ್ಪಿಸಿ ರಾಧೆಯನ್ನೂ ಕೂಸನ್ನೂ ಉಜ್ಜಯಿನಿಗೆ ಕರೆತಂದ,.

ಕೆಲವು ದಿನಗಳಾದ ಮೇಲೆ, ಮಗುವಿನ ಆರೈಕೆ ಮಾಡುವ ದಾದಿಯನ್ನು ಒಪ್ಪಿಸಿ ಕೂಸು ಸತ್ತಿತೆಂದು ಮಾಡಿ, ಒಬ್ಬ ನಿಷ್ಠುರನಾದ ಮಾದಿಗನಿಗೆ ದೊಡ್ಡ ಮೊತ್ತದ ಹಣವನ್ನು ಕೊಟ್ಟು ಮಗುವನ್ನು ಊರ ಹೊರಗೆ ಕೊಲ್ಲಲು ಹೇಳಿ ಕಳಿಸಿದ. ರಾಧೆ ಮತ್ತು ತನ್ನ ಹೆಂಡತಿ ವಿಶಾಖೆ ಮತ್ತು ಮಗ ಮಹಾಬಲ ಇವರು ನಂಬುವಂತೆ ಕಪಟ ದುಃಖವನ್ನು ತೋರಿಸಿದ. ಬೇಕಾದಷ್ಟು ಹಣವನ್ನು ಕೊಟ್ಟು ತನ್ನ ಮಗಳನ್ನು ಇವನಿಗಿತ್ತು ಮದುವೆ ಮಾಡಿ ಊರಿಗೇ ಸಡಗರವನ್ನುಂಟು ಮಾಡುತ್ತೇನೆ, ನಾನಾ ಬಗೆಯ ಭೂಷಣಾವಳಿಗಳಿಂದ ಅಲಂಕರಿಸಿ ಸಂತಸಪಡುತ್ತೇನೆ; ನನ್ನ ಆಸ್ತಿಗೂ ವೈಶ್ಯೋತ್ತಮನಾದ ನಿನ್ನ ತಂದೆಯ ಸಂಪತ್ತಿಗೂ ನೀನೇ ಒಡೆಯನಾಗುತ್ತೀ ಎಂದುಕೊಂಡಿದ್ದೆ. ನಿನ್ನಂತೆ ಭಾಗ್ಯಹೀನರು ಬೇರೆ ಯಾರಿದ್ದಾರೆ?" ಎಂದು ಪ್ರಲಾಪಿಸಿದ. ತಂಗಿಯ ಕಡೆ ತಿರುಗಿ, "ದೇವಸನ್ನಿಭನಾದ, ಚಂದ್ರನ ಹಾಗೆ ಸೌಮ್ಯ ರೂಪವನ್ನು ಪಡೆದ ಮಗುವನ್ನು ಪಡೆದೂ ನೀನು ಪಡೆಯದ ಹಾಗಾಯಿತಲ್ಲ! ನನ್ನ ತಂಗಿಗೆ ಮನಘನಂತಹ ಮಗ ಹುಟ್ಟಿದ ಎಂದು ಸಂತಸಗೊಂಡಿದ್ದೆ; ಈಗ ನನ್ನ ಹೊಟ್ಟೆ ದಳ್ಳೆಂದು ಉರಿಯುತ್ತಿದೆ" ಎಂದು ಕೃತಕ ಗೋಳಾಟ ಮಾಡಿದ.

ಇತ್ತ ಮಾದಿಗನು ಕೂಸನ್ನು ಅಡವಿಗೊಯ್ದು ಗಂಟಲನ್ನು ಹಿಸುಕಿ ಕೊಲ್ಲಲೆಂದು ಅದನ್ನು ಹೆಗಲಿನಿಂದ ಕೆಳಗಿಳಿಸಲು ಯತ್ನಿಸಿದ. ಆದರೆ ಕೂಸು ಕೆಳಗಿಳಿಯದೆ ಅವನ ಹರಕು ಗಡ್ಡವನ್ನು ಎಡಗೈಯಲ್ಲಿ ಹಿಡಿದುಕೊಂಡು, ಬಲಗೈಯಿಂದ ಮುಖದ ಮೇಲೆ ಹೊಡೆಯ ತೊಡಗಿತು; ತನ್ನ ಕುಂಕುಮದುಂಡೆ ಯಂತಹ ಕಾಲುಗಳಿಂದ ಅವನ ಎದೆಯನ್ನು ಒದೆಯತೊಡಗಿತು. ಮಗುವಿನ ರೂಪು ಗಾಡಿ ವಿಲಾಸ ಮುದ್ದಾಟಗಳನ್ನು ಕಂಡ ಆ ದುರಾತ್ಮನಿಗೆ ಅದರ ಬಗ್ಗೆ ಕರುಣೆ ಸ್ನೇಹಗಳು ಉಕ್ಕಿ ಬಂದವು. ಕೊಲ್ಲಲು ಮನಸ್ಸು ಬರಲಿಲ್ಲ; ನದಿಯೊಂದರ ದಡದ ಮೇಲೆ ಮರಳನ್ನು ಹಾಸುಗೆಯಂತೆ ಹರಡಿ ಮಗುವನ್ನು ಮೆಲ್ಲನೆ ಮಲಗಿಸಿ, 'ನಿನಗೆ ಇಷ್ಟವಾದಂತೆ ಆಗು' ಎಂದು ಹರಸಿ ಹೊರಟು ಹೋದ.

ಕೆಲ ಹೊತ್ತಿನ ಬಳಿಕ, ನೀರು ಕುಡಿಯಲೆಂದು ಬಂದ ಹಸುಗಳು ಹುಣ್ಣಿಮೆಯ ಚಂದ್ರನಂತೆ ಹೊಳೆಯುತ್ತಿದ್ದ ಮಗುವನ್ನು ನೋಡಿ ಮೂಸುತ್ತ, ಬಾಲದ ತುದಿಯನ್ನೆತ್ತಿ ಆಡಿಸುತ್ತ, ಕೆನೆಯುತ್ತ ಆನಂದದಿಂದ ಅದರ ಸುತ್ತು ಸುಳಿಯುತ್ತಿದ್ದವು. ಇದನ್ನು ಕಂಡ ದನಗಾಹಿಗಳು ಆಶ್ಚರ್ಯಪಟ್ಟು ದನಗಳನ್ನು ಓಡಿಸಿ ನೋಡಿದರೆ, ಮರಳ ಜಗುಲಿಯ ಮೇಲೆ ಸೂರ್ಯಸಮಾನ ತೇಜಸ್ಸಿನ ಒಂದು ಮಗು ಆಟವಾಡುತ್ತ ಮಲಗಿದೆ! ಈ ಮಗುವು ರಾಜಪುತ್ರನ ಹಾಗೆ ಕಾಣುತ್ತದೆ; ಆದ್ದರಿಂದ ಇದನ್ನು ಎತ್ತಿಕೊಂಡು ಹೋಗಿ ತಮ್ಮ ಒಡೆಯನಿಗೆ ಕೊಡುತ್ತೇವೆಂದು ಅವರು ನಿರ್ಧರಿಸಿ ಹಾಗೇ ಮಾಡಿದರು. ಆ ಒಡೆಯನ ಹೆಸರು ಗೋವಿಂದ. ಮಗುವನ್ನು ಕರೆದುಕೊಂಡ ಅವನು ಅದನ್ನು ತಂದಿತ್ತವರಿಗೆ ಮೆಚ್ಚುಗೊಟ್ಟು ಕಳಿಸಿದ. ತನ್ನ ಹೆಂಡತಿಯಾದ ನಂದೆಯನ್ನು ಕರೆದು ತಮಗೆ ಪುತ್ರಲಾಭವಾಯ್ತೆಂದು ಅವಳ ಮಡಿಲಿಗೆ ಮಗುವನ್ನು ಹಾಕಿದ. ತುರುಪಟ್ಟಿಯಲ್ಲಿ ಒಸಗೆಯನ್ನು ಮಾಡಿದ ಅವರು ಮಗುವಿಗೆ ಧನಕೀರ್ತಿ ಎಂದು ಹೆಸರಿಟ್ಟರು. ಆದರದಿಂದ ಅದನ್ನು ಬೆಳೆಸಿ, ಅದರ ಆಟಪಾಟಗಳಿಂದ ಸಂತೋಷಪಡುತ್ತಿದ್ದರು. ಮಗುವು ದಿನೇ ದಿನೇ ಶುಕ್ಲಪಕ್ಷದ ಚಂದ್ರನಂತೆ ಬೆಳೆಯಿತು.

ದಿನಗಳು ಕಳೆದವು. ಧನಕೀರ್ತಿಕುಮಾರನು ಬೆಳೆದು ಕಾಮನಂತೆ ಸುಂದರನಾದ ಯುವಕನಾಗಿ ತುರುಪಟ್ಟಿಗೆ ಅರಸನಾದ. ಒಂದು ದಿನ, ತನ್ನ ಮಗಳಾದ ಶ್ರೀಮತಿಗೆ ಮದುವೆ ಮಾಡಲು ಹವಣಿಸಿದ ಶ್ರೀದತ್ತಸೆಟ್ಟಿಯು, ತುಪ್ಪವನ್ನು

ಕೊಳ್ಳಲೆಂದು ತನ್ನ ಕೆಲವು ಸೇವಕರ ಜೊತೆ ತುರುಪಟ್ಟಿಗೆ ಬಂದ. ಅಲ್ಲಿ ದನಗಾಹಿಗಳಿಂದ ಸುತ್ತುವರಿಯಲ್ಪಟ್ಟ ಧನಕೀರ್ತಿಕುಮಾರನನ್ನು ನೋಡಿ, ಇವನು ಗುಣಪಾಲಸೆಟ್ಟಿಯ ಮಗನೇ ಇರಬೇಕೆಂದು ಅಚ್ಚರಿಗೊಂಡ. ನಿಷ್ಠುರನಾದ ಕಟುಕನಿಗೆ ಬೇಕಾದಷ್ಟು ಹಣವಿತ್ತು ಕೊಲ್ಲಲು ಹೇಳಿದರೂ ಅವನು ತನಗೆ ಎರಡು ಬಗೆದ; ಕೊಲ್ಲೆಂದು ಕಳಿಸಿದರೆ ಅವನು ಈ ತುರುಗಾರನಿಗೆ ಕೊಟ್ಟು ಅವನಿಂದಲೂ ಹಣವನ್ನು ಸಂಪಾದಿಸಿದನಲ್ಲ! ಆದರೇನಾಯ್ತು, ಬೊಜಗನಿಗೆ ಕಷ್ಟವೇ ಹೊರತು ಸೂಳೆಗೆ ಮಿಂಡರಿರುವುದಿಲ್ಲವೇ ಎಂಬ ಗಾದೆಯಂತೆ, ಕಟುಕನ ನೀಚತನ ಇರಲಿ, ನಾನು ಇವನನ್ನು ಕೊಲ್ಲದೆ ಬಿಡುವುದಿಲ್ಲ ಎಂದು ತನ್ನಲ್ಲೇ ನಿಶ್ಚೈಸಿದ. ತುರುಗಾರನನ್ನು ವಸ್ತ್ರತಾಂಬೂಲಭೋಜನಾದಿಗಳಿಂದ ಸತ್ಕರಿಸಿ ಒಲಿಸಿಕೊಂಡು ಹತ್ತೆಂಟು ದಿನಗಳು ಅಲ್ಲಿಯೇ ತಂಗಿದ.

ಹೀಗಿರಲು ಒಂದು ದಿನ ಗೋವಿಂದನನ್ನು ಕರೆಸಿಕೊಂಡ ಶ್ರೀದತ್ತಸೆಟ್ಟಿಯು, "ತುಂಬ ಅವಸರದ ಕಾರ್ಯವೊಂದಿದೆ; ನನ್ನ ಮಗನಿಗೆ ನಾನು ಬರೆದು ಕೊಡುವ ಪತ್ರವನ್ನು ತೆಗೆದುಕೊಂಡು ಹೋಗಿ ಕೊಡುವ ನಂಬಿಕಸ್ಥನನ್ನು ನೀನೇ ನೇಮಿಸು" ಎಂದು ಕೇಳಿಕೊಂಡ. ಯಾರನ್ನು ಕಳಿಸುವುದೆಂದು ಗೋವಿಂದ ತನ್ನ ಜೊತೆಗಾರರ ಕಡೆ ನೋಡಿ ಮಾತನಾಡುವಷ್ಟರಲ್ಲಿ ಶ್ರೀದತ್ತನು, "ಬೇರೆ ಬಂಟರೇಕಾಗಬೇಕು? ಮನ್ಮಥನಂತಿರುವ ನಿನ್ನ ಮಗ ಧನಕೀರ್ತಿಯನ್ನೇ ಕಳಿಸು" ಎಂದ. ಆ ಮಾಯಾಪುಂಜನು ತನಗೆ ಕೊಟ್ಟಿದ್ದ ದ್ರವ್ಯಾದಿಗಳು ಹಾಗೂ ತಾಂಬೂಲಾದಿಗಳನ್ನು ನೆನದ ಗೋವಿಂದನು ಮಗನಿಗೇ ಹೋಗಲು ಹೇಳಿದ. ಸೆಟ್ಟಿಯು ಧನಕೀರ್ತಿಗೆ ಬಹು ಪ್ರೀತಿಯಿಂದೆಂಬಂತೆ ಹಣತಾಂಬೂಲಾದಿಗಳನ್ನು ನೀಡಿ ತನ್ನ ಮೇಲೆ ಅವನಿಗೆ ಆದರ ಹುಟ್ಟುವಂತೆ ಮಾಡಿಕೊಂಡ. ತನ್ನ ಜೊತೆಯಲ್ಲೇ ಅವನನ್ನು ಕೂರಿಸಿಕೊಂಡು ಊಟ ಮಾಡಿ, ತನ್ನ ಮಗ್ಗುಲಿಗೇ ಅವನಿಗೆ ಹಾಸಿಗೆಯನ್ನು ಹಾಕಿಸಿ ಒಂದು ಕ್ಷಣದಲ್ಲೇ ವಾಪಸಾಗುವೆನೆಂದು ನುಡಿದು ಏಕಾಂತಸ್ಥಳಕ್ಕೆ ಹೋದ.

ಅಲ್ಲಿ ತನ್ನ ಮಗನಿಗೆಂದು ಒಂದು ಪತ್ರವನ್ನು ಸಿದ್ಧಪಡಿಸಿದ. "ನನ್ನ ಮೇಲೆ ನಿನಗೆ ಪ್ರೀತಿ ಇರುವುದಾದರೆ ತಡಮಾಡದೆ ಮನೆಯ ಹಿತ್ತಿಲಿಗೆ ಇವನನ್ನು ಕರೆದುಕೊಂಡು ಹೋಗಿ ತಕ್ಷಣ ಕೊಂದು ಯಾರಿಗೂ ಗೊತ್ತಾಗದಂತೆ ಹೂತುಬಿಡುವುದು" ಎಂಬುದು ಅದರ ಒಕ್ಕಣೆ. ಪತ್ರವನ್ನು ಮುಚ್ಚಿ ಬೆಳಗಿನ ಜಾವ ಧನಕೀರ್ತಿಯ ಕೈಯಲ್ಲಿ ಕೊಟ್ಟು ಕಳಿಸಿದ. ಅದರಂತೆ ಅವನು ಉಜ್ಜಯಿನಿಗೆ ವಾಯುವೇಗದಿಂದ ಬಂದ. ಅವನಿಗೆ ಪ್ರಯಾಣದಿಂದ ಆಯಾಸವಾಗಿತ್ತು; ಆದ್ದರಿಂದ ಸಿಂಪಾ ನದಿಯಲ್ಲಿ ಮೈತೊಳೆದುಕೊಂಡು, ನೀರು ಕುಡಿದು ಆ ನದಿಯ ತೀರದಲ್ಲಿನ ಒಂದು ಚಿಗುರಿದ ಮಾವಿನ ಮರದ ಕೆಳಗೆ ಮಲಗಿದ.

ಇತ್ತ ಮೃಗಸೇನೆ ಎಂಬ ಸೂಳೆಯೊಬ್ಬಳು ಕಾಲ ಕಳೆಯಲೆಂದು ತನ್ನ ಜೊತೆಗಾತಿಯರೊಡನೆ ಊರಿಂದ ಹೊರಟು ಸಿಂಪಾ ನದಿಯ ದಡದ ಗುಂಟ ಬರುತ್ತಿದ್ದಳು. ಕೆಂಪಾದ ಚಿಗುರಿನಿಂದಲೂ, ಮೊರೆವ ದುಂಬಿಗಳಿಂದಲೂ, ನೆರೆದಿದ್ದ ಕೋಗಿಲೆಗಳಿಂದಲೂ ಕೂಡಿ ಮನ್ಮಥನ ಓಲಗಶಾಲೆಯಂತಿದ್ದ ಮಾವಿನ ಮರವು ಅವಳ ಕಣ್ಸೆಳೆಯಿತು. ಅದನ್ನು ಹತ್ತಿರದಿಂದ ಕಾಣಲು ಅವಳು ಮೆಲ್ಲನೆ ಮರದೆಡೆಗೆ ಬಂದಳು. ಮರದ ಕೆಳಗೆ ಜಿನಸಮಯವಾರ್ಧಿವರ್ಧನಚಂದ್ರನಾದ ಧನಕೀರ್ತಿ ಮಲಗಿರುವುದನ್ನು ಕಂಡಾಗ, ಹಿಂದಿನ ಜನ್ಮವನ್ನು ಕಣ್ಣು ಗುರುತಿಸಿತು ಎಂಬ ಮಾತು ನಿಜವಾಯಿತು. ಅವನು ತನ್ನ ತಂದೆಯಂತೆಯೇ ಕಾಣಿಸಿದ; ಅವನ ಬಗ್ಗೆ ಪ್ರೀತಿ ಹುಟ್ಟಿತು. ಅವನನ್ನು ಬಿಟ್ಟು ಹೋಗಲಾರದೆ ಅವನ ಬಳಿ ಕುಳಿತಳು. ಚಿಗುರಿನಂತೆ ಕೋಮಲವಾದ ಪಾದಗಳು, ಬಾಳೆಯ ದಿಂಡಿನಂತಹ ನೀಳ್ತೊಡೆಗಳು, ಉನ್ನತವಾದ ಹಣೆ, ಹೊಳೆವ ಕಣ್ಣುಗಳು, ನಿಡಿದೋಳು, ತುಟಿಗಳು, ಕುಲಿಶ ಚಕ್ರ ಮುಂತಾದ ಶುಭಚಿಹ್ನೆಗಳಿಂದ ಕೂಡಿದ ಅಂಗಾಲುಗಳನ್ನು ಕಂಡು ಮೃಗಸೇನೆ ಪರವಶಗೊಂಡಳು. ಅವನು ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಓಲೆಯು ತಟ್ಟನೆ ಅವಳ ಕಣ್ಣಿಗೆ ಬಿತ್ತು. ಅವಳಾದರೋ ಜಾಣೆ, ಸಕಲಶಾಸ್ತ್ರಪ್ರವೀಣೆ; ಆ ಪತ್ರವನ್ನು ಸೆಳೆದುಕೊಂಡು ಮುದ್ರೆಯನ್ನೊಡೆದು ಓದಿಕೊಂಡಳು.

ಅವಳಿಗೆ ಚಿಂತೆಯಾಯಿತು; ತನ್ನ ಮನಸ್ಸಿನಲ್ಲೇ ಹೀಗೆಂದುಕೊಂಡಳು: ಮನ್ಮಥರೂಪನನ್ನೂ, ದೇವಸಮಾನನ್ನೂ, ಸೂರ್ಯತೇಜನನ್ನೂ, ಮುನಿನುತನೂ ಸಕಲ ಶುಭಲಕ್ಷಣನೂ ಆದ ಇವನನ್ನು ಸ್ವತಃ ತಾನೇ ಕೊಲ್ಲುವುದು ಹೇಗೆ ಎಂದು ಪಾಪಕರ್ಮಿಯು ಈ ಉಪಾಯವನ್ನು ಬಗೆದನೇನೋ! ಎಂದು ಕಣ್ಣೀರು ಸುರಿಸಿದಳು. ಆದರೆ ದುಃಖದಿಂದ ಅವಳು ಸುಮ್ಮನೆ ಕುಳಿತುಕೊಳ್ಳಲಿಲ್ಲ; ಅವನ ಮೇಲಿನ ಮೋಹದಿಂದ ಶ್ರೀದತ್ತಸೆಟ್ಟಿಯು ಕಳಿಸಿದ್ದ ಓಲೆಯನ್ನು ಹರಿದು ಸಿಂಪಾ ನದಿಯಲ್ಲಿ ಬಿಸಾಕಿದಳು. ಆನಂತರ ಮನೆಯಿಂದ ಓಲೆ ಕಂಠಗಳನ್ನು ತರಿಸಿ, 'ಮಹಾಬಲನು ತನ್ನ ಬಗ್ಗೆ ಪ್ರೀತಿ ಹೊಂದಿರುವುದೇ ಆದರೆ ಈ ಓಲೆಯನ್ನು ಕಂಡ ತಕ್ಷಣವೇ ಶ್ರೀಮತಿಯನ್ನು ಇವನಿಗಿತ್ತು ಮದುವೆ ಮಾಡುವುದು, ತನ್ನ ಮೇಲಾಣೆ,' ಎಂಬರ್ಥದ ಪತ್ರವೊಂದನ್ನು ಬರೆದು ಮೊದಲಿನಂತೆಯೇ ಅದಕ್ಕೆ ಮುದ್ರೆ ಹಾಕಿ ಧನಕೀರ್ತಿಯ ಸೊಂಟದಲ್ಲಿ ಸಿಕ್ಕಿಸಿ ಮನೆಗೆ ಹೋದಳು.

ಸ್ವಲ್ಪ ಕಾಲದ ಬಳಿಕ ಧನಕೀರ್ತಿಗೆ ಎಚ್ಚರವಾಯಿತು. ಊರನ್ನು ಹೊಕ್ಕು ಶ್ರೀದತ್ತನ ಮನೆಯನ್ನು ವಿಚಾರಿಸಿಕೊಂಡು ಬಂದ. ಅವನ ಮಗನಾದ ಮಹಾಬಲ ಹೆಸರಿಗೆ ತಕ್ಕಂತೆ ದೃಢಕಾಯನಾಗಿದ್ದ. ಅವನೊಡನೆ ಕೆಲ ಕಾಲ ಉಭಯ ಕುಶಲೋಪರಿಯನ್ನಾಡಿ ಶ್ರೀದತ್ತಸೆಟ್ಟಿಯು ಕಳಿಸಿದ್ದ ಪತ್ರವನ್ನು ಆದರದಿಂದ ಕೊಟ್ಟ. ಅದನ್ನು ಬಿಡಿಸಿ ಓದಿಕೊಂಡ ಮಹಾಬಲನು ಧನಕೀರ್ತಿಯ ಬಗ್ಗೆ ಅತ್ಯಾದರವನ್ನು ತಾಳಿದ. ತಂದೆಯು ಒಳ್ಳೆಯ ಯೋಚನೆಯನ್ನೇ ಮಾಡಿದ್ದಾನೆ; ತನ್ನ ತಂಗಿಗೆ ಮನ್ಮಥಸದೃಶನಾದ ಇವನು ತಕ್ಕ ವರ ಎಂದು ಸಂತಸಗೊಂಡ. ಮಹಾಬಲನು ತಂದೆಯ ಭಕ್ತ; ಅವನ ಮಾತನ್ನು ಚಾಚೂ ತಪ್ಪುವವನಲ್ಲವಾದ್ದರಿಂದ ಪತ್ರದ ವಿಚಾರವನ್ನು ತನ್ನ ತಾಯಿಯಾದ ವಿಶಾಖೆಗೆ ಅರುಹಿದ. ಅವಳ ಆಣತಿಯಂತೆ ಮೌಹೂರ್ತಿಕರನ್ನು ಕರೆಸಿ ಶ್ರೀಮತಿಯ ಮದುವೆಗೆ ದಿನವನ್ನು ಗೊತ್ತು ಮಾಡಲು ಕೇಳಿಕೊಂಡ. ಆಗ ಪುರೋಹಿತರು, "ಇವತ್ತೇ ಮಗಳ ಮದುವೆಯನ್ನು ಮಾಡಿದೆಯಾದರೆ ಮುಂದೆ ಈ ವರನು ರಾಜನಾಗುತ್ತಾನೆ" ಎಂದು ಸಲಹೆಯಿತ್ತರು. ಅಂದಿನ ಮುಹೂರ್ತದ ದಿನಶುದ್ಧಿಯೂ, ಲಗ್ನಫಲವೂ ಉತ್ಕೃಷ್ಟವಾದುದು; ಅಂದು ಮದುವೆ ಮಾಡಿದರೆ ಈ ದಂಪತಿಗಳು ಜಿನಸಮಯವಜ್ರಪ್ರಾಕಾರರೂ ಮಾಳವ ದೇಶಾಧೀಶ್ವರರೂ ಸದ್ಧರ್ಮರಾಗಿಗಳೂ ಆಗುತ್ತಾರೆಂದು ನೈಮಿತ್ತಿಕವನ್ನು ಹೇಳಿದರು. ಅವರ ಮಾತಿನಿಂದ ಮಹಾಬಲನಿಗೆ ಸಂತೋಷವಾಯಿತು. ಪುರೋಹಿತರಿಗೆ ಗೌರವವನ್ನು ಸಲ್ಲಿಸಿ, ಇವತ್ತೇ ಶುಭ ಮುಹೂರ್ತವಿರುವುದರಿಂದ ತಂದೆಯು ಹೀಗೆ ಅವಸರದ ಓಲೆಯನ್ನು ಕಳಿಸಿದ್ದಾನೆಂದು ಬಗೆದ. ತಂದೆಯ ಮಾತನ್ನು ಮೀರಬಾರದೆಂದು ಮಹಾಬಲನು ಅಂದೇ ತಂಗಿಯ ಮದುವೆಗೆ ಏರ್ಪಾಟು ಮಾಡಿದ. ಸುಮಂಗಲಿಯರು ಮಂಗಳಗೀತಗಳನ್ನು ಹಾಡುತ್ತಿರಲು, ಹರೆಗಳು ಸಮುದ್ರಘೋಷದಂತೆ ಭೋರ್ಗರೆಯಲು, ಹಸಿರು ಚಪ್ಪರದಲ್ಲಿ ಲತಾಂಗಿಯರು ಬೀಸುವ ಚಾಮರಗಳ ನಡುವೆ, ಬಂಧುತತಿ ಮದುಮಕ್ಕಳನ್ನು ಹರಸಲು ಮಹಾ ವೈಭವದಿಂದ ಶ್ರೀಮತಿ–ಧನಕೀರ್ತಿಯರ ಪಾಣಿಗ್ರಹಣ ಕಾರ್ಯವು ನೆರವೇರಿತು. ಇದರಿಂದ ಎಲ್ಲರೂ ಆನಂದತುಂದಿಲರಾದರು.

ಇತ್ತ, ಧನಕೀರ್ತಿಯನ್ನು ಉಪಾಯದಿಂದ ಮುಗಿಸಿದೆನೆಂದು ಶ್ರೀದತ್ತ ಸೆಟ್ಟಿಯು ಹೆಮ್ಮೆಯಿಂದ ತನ್ನ ಬುದ್ಧಿವಂತಿಕೆಯನ್ನೂ ಚಾತುರ್ಯವನ್ನೂ ಮೆಚ್ಚಿ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡ. ಮುಂದೆ ತುರುಪಟ್ಟಿಯಲ್ಲಿ ಎರಡು ಮೂರು ದಿನಗಳು ತಂಗಿದ್ದು ಮತ್ತೆ ಉಜ್ಜಯಿನಿಗೆ ವಾಪಸಾದ. ಮನೆಗೆ ಬಂದರೆ, ತನ್ನ ಮಗಳಿಗೂ ಧನಕೀರ್ತಿಗೂ ಮದುವೆಯಾಗಿಬಿಟ್ಟಿದೆ! ಅವನ ಆಶ್ಚರ್ಯಕ್ಕೆ ಸೀಮೆಯಿಲ್ಲವಾಯಿತು. ಈ ಖೂಳನನ್ನು ನೇರವಾಗಿ ಕೊಲ್ಲಲಾಗದು ಎಂದು ಉಪಾಯದಿಂದ ಮುಗಿಸಲು ಯೋಚಿಸಿ ಓಲೆಯಟ್ಟಿದರೆ ಹೀಗಾಯಿತಲ್ಲ; ಪುಣ್ಯವುಳ್ಳವರು ಸಾಯುತ್ತಾರೆಯೇ! ಎಂದು ಯೋಚಿಸಿದ. ಇರಿಯಲೆಂದು ಒಳಗೆ ಹೋದವನು ಮೂಗು ಕೊಯ್ಸಿಕೊಂಡನೆಂಬಂತೆ, ಇವನ ಕೊಲೆಗೆ ಏರ್ಪಾಟು ಮಾಡಿ ಓಲೆಯನ್ನು ಕಳಿಸಿದರೆ ಇವನು ತನ್ನ ಮಗಳನ್ನೇ ಕೈಹಿಡಿದನಲ್ಲ ಎಂಬ ಚಿಂತೆ ಗಾಢವಾಯಿತು. ಆದರೆ ಅವನ ಛಲ ಬಲವಾಯಿತು. ತನ್ನ ಮಗಳು ರಂಡೆಯಾದರೂ ಚಿಂತೆಯಿಲ್ಲ ಎಂದು ಧನಕೀರ್ತಿಯ ಕೊಲೆಗೆ ಮತ್ತೊಂದು ಉಪಾಯವನ್ನು

ಬಗೆದ. ಕ್ರೂರಿಯಾದ ಒಬ್ಬ ತಳವಾರನನ್ನು ಕರೆದು, ಬೇಕಾದಷ್ಟು ಹಣವನ್ನು ಅವನಿಗಿತ್ತು, ಅಂದು ರಾತ್ರಿ ನಾಗದೇವತೆಯ ಆಲಯಕ್ಕೆ ನೈವೇದ್ಯವನ್ನು ತರುವ ವ್ಯಕ್ತಿಯನ್ನು ಹಿಂದು ಮುಂದು ನೋಡದೆ ಕೊಲ್ಲಬೇಕು ಎಂದು ನಿಯಮಿಸಿದ.

ಮನೆಗೆ ಬಂದವನೇ ಇತರರಿಗೆ ಗೊತ್ತಾಗದಂತೆ ಧನಕೀರ್ತಿಯನ್ನು ಏಕಾಂತಕ್ಕೆ ಕರೆದು ಶ್ರೀದತ್ತಸೆಟ್ಟಿಯು, "ನಿನಗೂ ಶ್ರೀಮತಿಗೂ ನಿರ್ವಿಘ್ನವಾಗಿ ಮದುವೆಯಾದರೆ ನಾಗೇಂದ್ರನಿಗೆ ನಿನ್ನಿಂದ ಚರುವನ್ನಿಡಿಸುವೆನೆಂದು ನಾನು ಹರಕೆ ಹೊತ್ತಿದ್ದೆ; ಅದನ್ನು ತಪ್ಪಿಸಬಾರದು. ಆದ್ದರಿಂದ ನೀನೊಬ್ಬನೇ ಇಂದು ರಾತ್ರಿ ನಾಗಾಲಯಕ್ಕೆ ಹೋಗಿ ನಮಸ್ಕರಿಸಿ ಬರಬೇಕು" ಎಂದು ತಿಳಿಸಿ, ಬೇರೊಂದು ಕಡೆ ಯಾರಿಗೂ ಗೊತ್ತಾಗದಂತೆ ಇರಿಸಿದ್ದ ಚರುವನ್ನು ತಂದು ಅವನಗಿತ್ತ. ಧನಕೀರ್ತಿಯು ಅಂತೆಯೇ ನಾಗಾಲಯಕ್ಕೆ ರಾತ್ರಿ ಹೊರಟ. ಅವನನ್ನು ದಾರಿಯಲ್ಲಿ ಕಂಡ ಮಹಾಬಲನು ವಿಷಯವನ್ನು ತಿಳಿದು, ತಮ್ಮ ತಂದೆಯು ಮದುವಣಿಗನ ಕೈಯಲ್ಲಿ ಚರುವನ್ನು ಕೊಟ್ಟು ದೇಸಿಗನಂತೆ ಒಬ್ಬನನ್ನೇ ಕಳಿಸುತ್ತಿರುವನಲ್ಲ ಎಂದು ತಂದೆಯ ಮೂರ್ಖತನವನ್ನು ಬೈದು, ಮೈದುನನ ಕೈಯಲ್ಲಿದ್ದ ಚರುವನ್ನು ತಾನೇ ತೆಗೆದುಕೊಂಡು ಧನಕೀರ್ತಿಯನ್ನು ಮನಗೆ ಕಳಿಸಿದ. ಹೀಗೆ ಮಹಾಬಲನು ನಾಗಾಲಯಕ್ಕೆ ಒಬ್ಬನೇ ನಿರ್ಭಯನಾಗಿ ಬಂದ. ಅಲ್ಲಿಯೇ ಅಡಗಿ ಕುಳಿತಿದ್ದ ತಳವಾರನು ಶ್ರೀದತ್ತಸೆಟ್ಟಿಯು ಹೇಳಿದ್ದಂತೆ ಬಂದವರು ಯಾರೆಂದು ವಿಚಾರಿಸದೆ ತಕ್ಷಣವೇ ಅವನ ಬಳಿ ಹಾರಿ ತಲೆಯನ್ನು ಹಿಡಿದು ಕೆಳಕ್ಕೆ ಕೆಡವಿ ಅವನ ಅಂಗಾಂಗಗಳನ್ನು ಕತ್ತಿಯಿಂದ ತಿವಿದು ಕೊಂದು ಓಡಿಹೋದ.

ಇತ್ತ ಧನಕೀರ್ತಿಯನ್ನು ಮನೆಯಲ್ಲಿ ಕಂಡ ಶ್ರೀದತ್ತಸೆಟ್ಟಿಯು ನೋಡಿ ವಿಸ್ಮಯಗೊಂಡ. ಹತ್ತಿರ ಬಂದು ಪಿಸು ಮಾತಿನಲ್ಲಿ ಚರುವನ್ನು ಏನು ಮಾಡಿದೆ ಎಂದು ಕೇಳಿದ. ಅದಕ್ಕೆ ಅವನು, "ನಮ್ಮ ಭಾವನವರದು ಉದಾರಗುಣ. ನಾನೇನೋ ನೀವು ಹೇಳಿದಂತೆ ಒಬ್ಬನೇ ನಾಗಾಲಯಕ್ಕೆ ಹೋಗುತ್ತಿದ್ದೆ. ದಾರಿಯಲ್ಲಿ ಅವರು ಸಿಕ್ಕಿ ಎಲ್ಲಿಗೆ ಹೋಗುತ್ತಿದ್ದೀಯ ಎಂದು ಕೇಳಿದರು. ನೀವು ಹೇಳಿದ್ದನ್ನು ತಿಳಿಸಿದೆ; ಅವರು ನಿಮ್ಮನ್ನು ಬೈದು, ನನ್ನ ಕೈಯಲ್ಲಿದ್ದ ಚರುವನ್ನು ಕಿತ್ತುಕೊಂಡು ನಾಗಾಲಯಕ್ಕೆ ಹೋದರು" ಎಂದ. ಇದನ್ನು ಕೇಳಿದ ಶ್ರೀದತ್ತಸೆಟ್ಟಿಗೆ ಹಾಳು ಹೊಟ್ಟೆಯಲ್ಲಿ ಸಾಸಿವೆಯನ್ನು ಕುಡಿದಂತೆ ಆಯಿತು; ಶುಂಠಿ ತಿಂದ ಬಾಯಲ್ಲಿ ಬಿಸಿನೀರು ಕುಡಿದಂತೆ ಮಿಡುಕಿದ. ತವಕದಿಂದ ತಾನೊಬ್ಬನೇ ನಾಗಾಲಯಕ್ಕೆ ಬಂದ ಅವನು ಅಲ್ಲಿ ತಿವಿತದಿಂದ ಸತ್ತಿದ್ದ ಮಗನನ್ನು ಕಂಡ. ಮಹಾ ದುಃಖದಿಂದ ಮನೆಗೆ ಬಂದು ತನ್ನ ಮಗನನ್ನು ಕಳ್ಳರು ಕೊಂದರು ಎಂದು ಪ್ರಕಟಿಸಿ, ಮಹಾಬಲನ ಹೆಣವನ್ನು ಮನೆಗೆ ತಂದು ಸಂಸ್ಕಾರಗಳನ್ನೆಲ್ಲ ಮಾಡಿದ.

ಶ್ರೀದತ್ತಸೆಟ್ಟಿಯು ಮಗನನ್ನು ನೆನೆಸಿಕೊಂಡು ಹಗಲಿರುಳು ಕೊರಗಿದ; ಕಳ್ಳನ ತಾಯಿಯಂತೆ ಅಗಣಿತಶೋಕನಾಗಿ ಒಳಗೊಳಗೇ ಬೆಂದು ಹೋದ. ಅಳಿಯನನ್ನು ಕೊಲ್ಲಿಸಬೇಕೆಂದು ಹಣವಿತ್ತು ತಾನೇ ಮಗನ ಸಾವಿಗೆ ಕಾರಣನಾದೆನಲ್ಲ; ಹಣವನ್ನು ತೆಗೆದುಕೊಂಡವರಾರೂ ಧನಕೀರ್ತಿಯನ್ನು ಕೊಲ್ಲಲು ಸಾಧ್ಯವಾಗಲಿಲ್ಲ, ತಾನು ದರಿದ್ರನಾದೆ ಎಂದು ಹಲುಬಿದ. ಹಣ್ಣಿಗೆ ಹೊಡೆದರೆ ಕಾಯಿ ಬಿತ್ತು ಎಂಬ ಗಾದೆಯ ಮಾತು ನನಗೇ ಅನ್ವಯವಾಯಿತು ಎಂದು ಮೂಕಶೋಕದಿಂದ ಬಳಲಿದ. ಧನಕೀರ್ತಿಯ ಮೇಲಿನ ಕೋಪ ಮತ್ತಷ್ಟು ಹೆಚ್ಚಿತು. ನನ್ನ ಮಗನು ಇವನ ಕಾರಣದಿಂದ ಸಾಯುವಂತಾಯ್ತು; ನಾನು ಇನ್ನಾದರೂ ಚಿಂತಿಸಿ ಸಾಯದೆ ಬುದ್ಧಿವಂತಿಕೆಯಿಂದ ಇವನನ್ನು ಕೊಂದು ತನಗಾದ ದುಃಖವನ್ನು ಕಳೆದುಕೊಳ್ಳಬೇಕೆಂದು ಆಲೋಚಿಸಿದ. ಒಂದು ಉಪಾಯ ಹೊಳೆಯಿತು. ವಿಶಾಖೆಯನ್ನು ಏಕಾಂತದಲ್ಲಿ ಕರೆದು ಧನಕೀರ್ತಿಯ ವಿಷಯವನ್ನೆಲ್ಲ ತಿಳಿಸಿದ. "ಇವನ ಬಗ್ಗೆ ಅಳಿಯನೆಂಬ ಮೋಹವನ್ನಿರಿಸಿಕೊಳ್ಳದೆ ನನ್ನ ಮಾತನ್ನು ಕೇಳು. ನನ್ನ ಅಳಲಿಗೂ ಮಹಾಬಲನ ಸಾವಿಗೂ ಕಾರಣವಾದ ಶತ್ರುವನ್ನು ಯಾರಿಗೂ ಗೊತ್ತಾಗದ ಹಾಗೆ ವಿಷಪ್ರಯೋಗದಿಂದ ನಾಳೆಯೊಳಗೆ ಕೊಲ್ಲಬೇಕು" ಎಂದು ಕೈಮುಗಿದು ಪ್ರಾರ್ಥಿಸಿಕೊಂಡ. ವಿಶಾಖೆಯು ಗಂಡನ ಮಾತನ್ನು ತೆಗೆದುಹಾಕಲಾರದೆ ಉರಗರಾಜಸಮಾನಭೋಗಿಯನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಶಪಥ ಮಾಡಿದಳು. ದೊಡ್ಡ ಲಡ್ಡುಗೆಯಲ್ಲಿ ಕಡು

ವಿಷವನ್ನು ಸೇರಿಸಿ ಧನಕೀರ್ತಿಗೆ ಕೊಡಬೇಕೆಂದು ಮಗಳ ಕೈಯಲ್ಲಿತ್ತು, ತಾನು ಮಾತ್ರ ಏನೂ ತಿಳಿಯದವಳಂತೆ ನೆರೆಮನೆಗೆ ಹೋದಳು.

ಶ್ರೀಮತಿಯು ಹೊರಗಿನಿಂದ ಬಂದ ಧನಕೀರ್ತಿಯ ಕಾಲು ತೊಳೆದು ಒಳಗೆ ಕರೆತಂದು ಪೀಠದ ಮೇಲೆ ಕುಳ್ಳಿರಿಸಿದಳು. ಊಟಕ್ಕೆಂದು ಅವನ ಮುಂದೆ ಮುಕ್ಕಾಲು ಮಣೆಯನ್ನಿಟ್ಟಳು. ಅಷ್ಟು ಹೊತ್ತಿಗೆ, 'ಹಿಂಸಾವಿರಹಿತನಾದ ನೀನು ತುಂಬು ಬಾಳನ್ನು ಬಾಳು; ಪರರ ಸಾವನ್ನು ಬಯಸುವ ಪಾಪಕರ್ಮನಾದ ನಾನು ಸಾಯುತ್ತೇನೆ' ಎಂದು ಪ್ರತಿಜ್ಞೆ ಮಾಡಿ ಬರುವವನ ಹಾಗೆ ಶ್ರೀದತ್ತಸೆಟ್ಟಿಯು ಹಸಿದು ಮನೆಗೆ ಬಂದ. ತಂದೆಯನ್ನು ಎದುರುಗೊಂಡ ಶ್ರೀಮತಿಯು ಅವನ ಕಾಲು ತೊಳೆದು ಒಳಗೆ ಕರೆತಂದಳು. ಪೀಠವನ್ನಿತ್ತು ಕುಳ್ಳಿರಿಸಿ ಅಡ್ಡಣಿಗೆಯ ಮೇಲೆ ಹರಿವಾಣವನ್ನಿಟ್ಟಳು. ಸವಿಯಾದ ದೊಡ್ಡ ಲಡ್ಡುಗೆಯನ್ನು ತನ್ನ ಗಂಡನಿಗೆ ಬಡಿಸಿದರೆ "ಈ ಡೊಂಬಿತಿಯು ಈಗಾಗಲೇ ಗಂಡನಿಗೆ ಎಷ್ಟು ಮಾರು ಹೋಗಿದ್ದಾಳೆ" ಎಂದು ಹಾಸ್ಯ ಮಾಡಿಯಾರೆಂದು ಹೆದರಿ, ಸಣ್ಣ ಲಡ್ಡುಗೆಯನ್ನು ಗಂಡನಿಗೆ ಬಡಿಸಿ ವಿಷಪೂರಿತವಾದ ದೊಡ್ಡದನ್ನು ತಂದೆಗೆ ನೀಡಿದಳು. ಮಾವ ಅಳಿಯ ಇಬ್ಬರೂ ಬಹಳ ರುಚಿಯಾಗಿದೆಯೆಂದು ತಮ್ಮ ಮುಂದಿನ ಲಡ್ಡುಗೆಗಳನ್ನು ತಿಂದರು. ಸ್ವಲ್ಪ ಹೊತ್ತಿನಲ್ಲಿ ಶ್ರೀದತ್ತನ ಮೈಯನ್ನು ವಿಷ ಆವರಿಸಿ ಕಣ್ಣು ಕತ್ತಲಿಟ್ಟುಕೊಂಡು ಬಂದು ಕೆಳಕ್ಕೆ ಬಿದ್ದ; ಅವನ ಮೈಯೆಲ್ಲ ಬೆವರಿತು. ಇತರರ ಅಳಿವನ್ನು ಬಯಸುವವನು ಹೀಗೆ ಬೇಗ ತಾನೇ ಸಾಯುತ್ತಾನೆ ಎಂದು ತೋರಿಸುವ ಹಾಗೆ ಸತ್ತು ಹೋದ.

ತಂದೆಯ ನೋವನ್ನು ಕಂಡ ಶ್ರೀಮತಿಯು ಗಾಬರಿಗೊಂಡು ಜೋರಾಗಿ ಅಳಲುಪಕ್ರಮಿಸಿದಳು. ಮಾವನ ಮರಣವನ್ನು ಕಂಡ ಮದವಣಿಗನು ದುಃಖದಿಂದ ಗಟ್ಟಿಯಾಗಿ ರೋದಿಸಿದ. ಮನೆಯಲ್ಲಿದ್ದ ಇತರರೂ ಅಳಲು ತೊಡಗಿದರು. ಎಲ್ಲರ ಹಾಹಾಕಾರವನ್ನು ನೆರೆಮನೆಯಲ್ಲಿದ್ದ ವಿಶಾಖೆಯು ಕೇಳಿಸಿಕೊಂಡು ಧನಕೀರ್ತಿ ಸತ್ತನೆಂದು ಭಾವಿಸಿ, ಹಲವು ಬಾರಿ ಹೆಚ್ಚು ಹಣವನ್ನು ನೀಡಿದರೂ ಕೊಲ್ಲಲಾಗದಿದ್ದ ಧನಕೀರ್ತಿಯನ್ನು ತಾನು ಯಾರಿಗೂ ತಿಳಿಯದಂತೆ ಗಮ್ಮನೆ ಕೊಂದೆ ಎಂಬ ಹೆಮ್ಮೆಯಿಂದ, ಇತರರನ್ನು ನಂಬಿಸಲೆಂದು ತಾನೂ ಜೋರಾಗಿ ಅಳುತ್ತ ಮನೆಗೆ ಬಂದಳು. ಅಲ್ಲಿ ಸತ್ತ ಗಂಡ, ಪಕ್ಕದಲ್ಲಿ ಕುಳಿತ ಅಳಿಯ ಇವರು ಕಾಣಿಸಿದರು! ಬೆಪ್ಪಾದ ಅವಳು ಗಂಡನ ಹೆಣವನ್ನು ತಕ್ಕೈಸಿಕೊಂಡು, " 'ತಾನೊಂದು ಬಗೆದರೆ ವಿಧಿ ಬೇರೊಂದು ಬಗೆಯಿತು' ಎಂಬ ಹಾಗೆ ನೀನು ಹಾಳಾಗುವೆಯೆಂದು ಅಂದುಕೊಂಡರೆ ನಾನೇ ಹಾಳಾದೆ; ನಿನ್ನ ಪುಣ್ಯವು ದೊಡ್ಡದು. ಅಣ್ಣಯ್ಯ, ಚಿಕ್ಕಂದಿನಿಂದ ನಿನ್ನನ್ನು ಕೊಲ್ಲುವ ಉಪಾಯಗಳನ್ನು ಮಾಡುತ್ತ ತನ್ನ ಪಾಪಕ್ಕೆ ತಕ್ಕ ಫಲವನ್ನು ಇಂದು ಕಂಡ. ಕೊಲೆಯಿಲ್ಲದ ಜಿನಧರ್ಮದ ಕಾರಣದಿಂದ ನೀನು ಉಗ್ರ ಕಂಟಕಗಳನ್ನು ನಿವಾರಿಸಿಕೊಂಡೆ; ಹಿಂಸೆಯ ಫಲದಿಂದ ನನ್ನ ಗಂಡನೇ ಯಮಪುರವನ್ನು ಸೇರಿದ. ಮುನಿವರರು ಹೇಳಿದ ದಿವ್ಯವಚನವು ಹುಸಿಯಾಗುವುದೇ? ಮಾಳವಾಧಿಪತಿಯಾಗಿ, ಜೈನಸಮಯಾಂಬುಧಿಚಂದ್ರನಾಗಿ, ಮೇದಿನೀವಂದ್ಯನಾಗಿ, ಬೇರೆ ಮಾಂಡಲಿಕರು ನಿನ್ನ ಆಜ್ಞೆಗಾಗಿ ಕಾಯುತ್ತಿರಲು ರಾಜನಾಗಿ ಮೆರೆಯಬೇಕಾದ ನಿನ್ನನ್ನು ಪಾಪಪೂರಿತರಾದವರು ಕೊಲ್ಲಲು ಸಾಧ್ಯವೇ?" ಎಂದು ಅಳಿಯನ ಮುಖವನ್ನು ನೊಡಿ ವಿಶಾಖೆಯು ಹೊಟ್ಟೆ ಹೊಸೆದುಕೊಂಡು ಅತ್ತಳು.

ಆನಂತರ ಮಗಳನ್ನು ನೋಡಿ, "ನರಪತಿಪೂಜ್ಯನಾದ ಧನಕೀರ್ತಿಗೆ ಹೆಂಡತಿಯಾಗಿ, ವಿಲಾಸಿನಿಯರು ಭಯಭಕ್ತಿಯಿಂದ ನಿನ್ನ ಆಜ್ಞೆಯನ್ನು ಪಾಲಿಸುತ್ತಿರಲು, ಪರಮವೈಭವದಿಂದ ಧರಣಿಯನ್ನು ಆಳಬೇಕಾದವಳನ್ನು ರಂಡೆಯನ್ನಾಗಿ ಮಾಡುವ ಕೆಟ್ಟ ಆಸೆಯನ್ನು ಹೊಂದಿದವರು ನಾಶವಾಗದೇ ಇರುವರೇ?" ಎಂದು ತಲೆಯನ್ನು ಹೊಡೆದುಕೊಂಡು ಪ್ರಲಾಪಿಸಿದಳು. ಸುತ್ತಮುತ್ತಲಿದ್ದವರನ್ನು ಕಂಡು, "ರಾತ್ರಿಯಲ್ಲಿ ಚಂದ್ರನ ಕಿರಣಗಳನ್ನು ನಾಶಪಡಿಸಲೆತ್ನಿಸುವವನು, ಕೋಪೋದ್ರೇಕದಿಂದ ಹಗಲು ಸೂರ್ಯನ ಶಾಖವನ್ನು ತಡೆಯುತ್ತೇನೆನ್ನುವವನು, ನಿಖಿಲ ಪುಣ್ಯವಂತನನ್ನು ಕೊಲ್ಲಲು ಬಯಸುವವನು ಗಾಂಪನೇ ಸರಿ. ನನ್ನ ಗಂಡನು ಇವನನ್ನು ಕೊಲ್ಲುತ್ತೇನೆಂಬ ಪಾಪದ ಹಟದಿಂದ ನರಕಕ್ಕೆ ಹೋದನಲ್ಲ! ಬೇರೆಯವರನ್ನು ನಂಬದೆ ತನ್ನ ಮೇಲೆ ಆಪ್ತನೆಂದು ನಚ್ಚಿಕೆಯಿಟ್ಟು ತನ್ನ ಹೆಂಡತಿಯನ್ನು

ನ್ಯಾಸವಾಗಿರಿಸಿ ಹೋದ ಗುಣಪಾಲನ ನಂಬಿಕೆಯನ್ನು ಮರೆತು ಅವನ ಮಗನನ್ನು ಇಲ್ಲವಾಗಿಸುವೆನೆಂದು ಹೊರಟವನಿಗೆ ಹೀಗಾದದ್ದು ಚೋದ್ಯವೇನು?" ಎಂದು ವಿಶಾಖೆಯು ಕಪಟವನ್ನು ಬಿಟ್ಟು ಶ್ರೀದತ್ತನು ಮಾಡಿದ ಕೆಟ್ಟ ಕೆಲಸವನ್ನೆಲ್ಲ ಹೇಳಿದಳು.

ಧನಕೀರ್ತಿಯು ಗುಣಪಾಲಸೆಟ್ಟಿಯ ಮಗನೆಂದು ತಿಳಿಸಿ, ಮಾಳವಾಧೀಶ್ವರ ನಾಗಿ ಜಿನಧರ್ಮದ ಓಜೆಯಿಂದ ಸುಖವಾಗಿ ರಾಜ್ಯಭಾರ ಮಾಡು ಎಂದು ಅವನಿಗೆ ಮನವಾರೆ ಹರಸಿದಳು. ದರ್ಶನಶುದ್ಧಿಯಲ್ಲಿ ಶಚೀದೇವಿಯಂತೆಯೂ, ಪಾತಿವ್ರತ್ಯದಲ್ಲಿ ಪ್ರಭಾವತಿ ಸೀತೆಯರಂತೆಯೂ, ದೃಢವ್ರತದಲ್ಲಿ ಚೇಳಿನೀದೇವಿ ಯಂತೆಯೂ, ಸದ್ದರ್ಶನ ಗುರುಭಕ್ತಿಗಳಲ್ಲಿ ರುಕ್ಮಿಣಿದೇವಿ–ಸುಲೋಚನೆಯರಂತೆಯೂ ಪಟ್ಟದರಸಿಯಾಗಿ ಬಾಳು ಎಂದು ಮಗಳಿಗೆ ಆಶೀರ್ವಾದ ಮಾಡಿದಳು. ಜನರು ಬೇಡಬೇಡವೆಂದರೂ ಕೇಳದೆ ಉಳಿದಿದ್ದ ವಿಷಪೂರಿತ ಲಡ್ಡುಗೆಗಳನ್ನು ತಿಂದು ವಿಶಾಖೆಯು ಸತ್ತಳು. ಪುರಜನರೂ ಬಾಂಧವರೂ ಅವಳ ಮಾತುಗಳಿಂದ ವ್ಯಕ್ತವಾದ ಶ್ರೀದತ್ತಸೆಟ್ಟಿಯ ಕ್ರೌರ್ಯಕ್ಕೆ ಕೊಕ್ಕರಿಸಿ ವ್ಯಥೆಯನ್ನು ತೋರಿದರು. ಜಿನಸಮಯದ ಆಗಮಗಳನ್ನು ಅನುನಯದಿಂದ ಕೇಳದೆ ಅನುಸರಿಸದೆ ಹೆಮ್ಮೆಯಿಂದ ಕೂಡಿದವನು ಮಾಡುವ ಧರ್ಮದಲ್ಲಿ ಹುರುಳಿರುತ್ತದೆಯೇ ಎಂದುಕೊಂಡರು; ಅವನ ಕಷ್ಟತೆಯನ್ನು ನೆನೆದು ಬೈದುಕೊಂಡರು. ಆಮೇಲೆ ಶ್ರೀದತ್ತ ಮತ್ತು ವಿಶಾಖೆಯರ ಹೆಣಗಳ ದಹನಕ್ರಿಯೆಯನ್ನು ನೆರವೇರಿಸಿ ಲೌಕಿಕಕ್ರಿಯೆಗಳನ್ನು ಪೂರೈಸಿದರು. ಹಿರಿದಾದ ಆಪತ್ತುಗಳನ್ನು ನಿವಾರಿಸಿಕೊಂಡು ಮಹಾಪುಣ್ಯಮೂರ್ತಿಯಾದ ಧನಕೀರ್ತಿಯು ಬದುಕುಳಿದ ಬಗೆಯನ್ನು ಕಂಡು ಜನರು ಆಶ್ಚರ್ಯಪಟ್ಟರು. ಅವನಿಗೆ ಕೈಮುಗಿದು, "ನಿನ್ನ ಹಾಗೆ ಪುಣ್ಯವಂತರೂ ಧೈರ್ಯೋನ್ನತರೂ ಗುಣವಂತರೂ ಬೇರೆ ಯಾರಿದ್ದಾರೆ? ನಿಮ್ಮ ತಂದೆಯ ಹಾಗೆ ನೀನೂ ವೈಶ್ಯಾಗ್ರಗಣ್ಯನೂ ಜಿನಸಮಯವಾರ್ಧಿವರ್ಧನನೂ ಆಗಿ ಬಾಳು" ಎಂದು ಪುರಜನರೂ ಬಂಧುವರ್ಗದವರೂ ಹೊಗಳಿ ಆಶೀರ್ವದಿಸಿದರು.

ಈ ಎಲ್ಲ ವಿಷಯಗಳೂ ವಿಶ್ವಂಭರ ಮಹಾರಾಜನಿಗೆ ತಿಳಿಯಿತು. ಧನಕೀರ್ತಿಯು ಮಾಳವಪತಿಯಾಗಿ ರಾಜ್ಯಭಾರ ಮಾಡುವವನಲ್ಲವೇ; ಸಮಸ್ತ ಭೂಪಾಲಕರನ್ನು ತನ್ನ ಪರಾಕ್ರಮದಿಂದ ಅಧೀನಗೊಳಿಸಿಕೊಳುವವನಲ್ಲವೇ; ಅವನು ಜಿನಸಮಯವರ್ಧನನಲ್ಲವೇ; ಭವ್ಯಜನವಿನೋದನಲ್ಲವೇ ಎಂದು ಆ ಅನುಪಮ ಗುಣನಿಲಯನಾದ ರಾಜನು ಕೇಳಿ ನಲಿದ. ಆನಂತರ ರಾಜಕುಮಾರ ಪರಿವೃತನಾಗಿ ಮಹಾ ವೈಭವದಿಂದ ಧನಕೀರ್ತಿಕುಮಾರನ ಮನೆಗೆ ಬಂದ ಮಾಳವಾಧೀಶನು ವಾತ್ಸಲ್ಯರತ್ನಾಕರನನ್ನು ಮೆಚ್ಚಿಕೆಯಿಂದ ನೋಡಿದ. ತೇಜಸ್ಸು, ರೂಪು, ವಿನಯಗುಣ, ಇವುಗಳನ್ನುಳ್ಳ ಈತನು ರಾಜನಾಗುವುದರಲ್ಲಿ ಅಚ್ಚರಿಯೇನಿದೆ ಎಂದು ಮನಸ್ಸಿನಲ್ಲಿಯೇ ಅಂದುಕೊಂಡ. ಆನಂತರ ಧನಕೀರ್ತಿಯ ವೃತ್ತಾಂತವನ್ನೆಲ್ಲ ಕೇಳಿ ತಲೆದೂಗಿ, ಪುಣ್ಯಮೂರ್ತಿಯೂ ದೃಢವ್ರತನೂ ಮಹಾಪುರುಷನೂ ಆದ ಗುಣಪಾಲಸೆಟ್ಟಿಗೆ ಮಗನಾಗಿ ಹುಟ್ಟಿದ ಈತನು ಸಾಮಾನ್ಯನಲ್ಲ, ಕಾರಣಪುರುಷನೇ ಸರಿ ಎಂದು ಬಗೆದು ಅವನನ್ನು ತನ್ನ ಅರಮನೆಗೆ ಕರೆತಂದ. ಅವನಿಗೆ ತನ್ನ ಮಗಳು ವಿಶ್ವಾವತಿಯನ್ನೂ ಅರ್ಧ ರಾಜ್ಯವನ್ನೂ ಕೊಡಬೇಕೆಂದು ನಿರ್ಧರಿಸಿದ. ಅಷ್ಟರಲ್ಲಿ ಒಬ್ಬ ದೂತನು ಬಂದು, "ದೇವ, ಭೂನುತನಾದ ವೈಶ್ಯಾಗ್ರಣಿ ಗುಣಪಾಲಸೆಟ್ಟಿಯು ಕೌಶಾಂಬಿ ನಗರದಲ್ಲಿ ಮಹೋನ್ನತಿಯಿಂದ ಇರುವನು" ಎಂದು ಬಿನ್ನವಿಸಿದ. ಅದನ್ನು ಕೇಳಿದ ರಾಜನಿಗೆ ತುಂಬ ಸಂತೋಷವಾಯಿತು. ಅವನಿಗೆ ಪಾರಿತೋಷಕವನ್ನು ಕೊಟ್ಟು ಸನ್ಮಾನಿಸಿದ.

ಮಾರನೆಯ ದಿನ ರಾಜನು ಕೌಶಾಂಬಿಗೆ ಹೆಗ್ಗಡೆಗಳನ್ನು ಕಳಿಸಿ ಗುಣಪಾಲಸೆಟ್ಟಿಯನ್ನು ಕರೆಸಿಕೊಂಡ. ಅವನು ಬರುವ ವೇಳೆಗೆ ಊರನ್ನೆಲ್ಲ ಸಿಂಗರಿಸಿ, ಸಕಲಸಾಮಂತರಿಂದೊಡಗೂಡಿ ಸೆಟ್ಟಿಯನ್ನು ಸ್ವಾಗತಿಸಿದ; ಅವನಿಗೆ ಮೊದಲಿನ ಪದವಿಯನ್ನಿತ್ತು ಗೌರವಿಸಿದ. "ಇದುವರೆಗೂ ನಿನ್ನ ಆಸ್ತಿಯನ್ನೂ ಮನೆಯನ್ನೂ ರಕ್ಷಿಸಿದ್ದೇನೆ; ಅವುಗಳನ್ನು ಮರಳಿ ಪಡೆದು ಸುಖವಾಗಿರು. ನಿನ್ನ ಅಭಿಮಾನ ಮತ್ತು ವ್ರತದ ಉನ್ನತಿಗಳನ್ನು ಕಂಡು ನನಗೆ ಚೋದ್ಯವೆನಿಸಿತು. ನಿನ್ನನ್ನು ಮತ್ತೆ ನೋಡುವವರೆಗೂ ನಾನು ದಿವ್ಯಭೋಜನವನ್ನು ತೊರೆದಿದ್ದೆ. ನೀನು ನಂಬಿರುವ ಜಿನೇಶಧರ್ಮವನ್ನೂ

ಜಿನಪಾದಸೇವೆಯನ್ನೂ ನನಗೆ ಗೆಳೆಯನಾಗಿಯೂ ನಂಟನಾಗಿಯೂ ಉಪದೇಶಿಸು" ಎಂದು ಸಭೆಗೆಲ್ಲ ತಿಳಿಯುವ ಹಾಗೆ ಅವನ ಮೇಲಿನ ತನ್ನ ಪ್ರೀತಿಯನ್ನು ನುಡಿದ. ಅವನ ಮಗನಾದ ಧನಕೀರ್ತಿಗೆ ಮಾಳವದೇಶದ ಅರ್ಧವನ್ನೂ, ತನ್ನ ಮಗಳನ್ನೂ ಕೊಡುವೆನೆಂದೂ ಅದಕ್ಕೆ ಶೌಚನಿಧಿಯಾದ ಗುಣಪಾಲನು ಒಪ್ಪಿಗೆ ನೀಡಬೇಕೆಂದು ಕೈಮುಗಿದು ಕೇಳಿಕೊಂಡ. ಅವನ ಮನಸ್ಸನ್ನರಿತವನಂತೆ, ತಾನು ಜಿನಪಾದಭಕ್ತನಲ್ಲವೆಂದು ಸಂಶಯಪಡ ಬಾರದೆಂದೂ, ಮೊದಲು ತನಗೆ ಶ್ರೇಷ್ಠವ್ರತವನ್ನು ನೀಡಿ, ಆಮೇಲೆ ತನ್ನ ಮಗಳನ್ನು ಧನಕೀರ್ತಿಗೆ ಮದುವೆ ಮಾಡಿಕೊಡಲು ಆಸ್ಪದ ನೀಡುವಂತೆ ರಾಜನು ಬೇಡಿಕೊಂಡ. ಹೀಗೆ ಗುಣಪಾಲಸೆಟ್ಟಿಯ ಸಂಶಯವನ್ನು ನಿವಾರಿಸಿದ ರಾಜನು ರಾಜಭವನಕ್ಕೆ ಹೋಗಿ ತನಗೆ ಸೆಟ್ಟಿಯಿಂದಾದ ದರ್ಶನಶುದ್ಧಿಯ ದೃಢತೆಯನ್ನು ಆ ದಿನವೆಲ್ಲ ಹೊಗಳಿದ.

ಮಾರನೆಯ ದಿನ ರಾಜನು ನೈಮಿತ್ತಿಕರನ್ನು ಕರೆಸಿ ಶುಭದಿನವನ್ನು ಗೊತ್ತುಪಡಿಸಿದ. ಹಸುರು ಹಂದರದಲ್ಲಿ, ಗಣಿಕಾನಿಕರವು ಹಾಡುತ್ತಿರಲು, ಮಂಗಳವಾದ್ಯಗಳು ಮೊಳಗುತ್ತಿರಲು, ರತ್ನಖಚಿತ ವಿವಾಹ ಮಂಟಪವು ಸಂತೋಷಭರಿತವಾಗಿತ್ತು. ಜಿನಪೂಜೆ ಶೋಭೆಯಿಂದ ನೆರವೇರಿತು. ಧನಕೀರ್ತಿ ಕುಮಾರನಿಗೂ ತನ್ನ ಮಗಳಿಗೂ ಪರಮ ವೈಭವದಿಂದ ಮಹಾರಾಜನು ತಾನೇ ಜಿನಗಂಧೋದಕವನ್ನು ಕೈಧಾರೆ ಎರೆದ. ವಿವಾಹ ಸಂದರ್ಭದಲ್ಲಿ ಮಹಾರಾಜನು ಗುಣಪಾಲಸೆಟ್ಟಿಗೂ ಇತರ ಬಾಂಧವರಿಗೂ ಉಡುಗೊರೆಗಳನ್ನು ನೀಡಿದ. ಕೊನೆಗೆ ತನ್ನ ಆನೆ ಕುದುರೆ ಮತ್ತು ಭಂಡಾರಗಳಲ್ಲಿ ಅರ್ಧಭಾಗವನ್ನು ಅಳಿಯನಿಗೆ ಕೊಟ್ಟು ಹಾಲುನೀರು ನ್ಯಾಯದಿಂದ ರಾಜ್ಯಶ್ರೀಯನ್ನು ಅನುಭವಿಸುತ್ತಿದ್ದ.

ಹೀಗಿರಲು ಒಂದು ದಿನ, 'ನಿಮಗೆ ಧರಣೀತಳದಲ್ಲಿ ಸಮಾನರೇ ಇಲ್ಲ; ಇನ್ನು ತಡವೇಕೆ, ದುರಿತಹಾರಿಯೂ ಸೌಖ್ಯದಾಯಿಯೂ ಆಗಿ ಒಪ್ಪುವ ಜಿನಮಾರ್ಗವನ್ನು ವಿಚಾರ ಮಾಡಿ ತಾಳುವುದು' ಎಂದು ಮೋಕ್ಷಲಕ್ಷ್ಮಿಯೇ ಪ್ರೀತಿಯಿಂದ ಹೇಳಿ ಕಳಿಸಿದ ದೂತನು ಬಂದು ಹಾಗೆ ಯಶೋಧರರೆಂಬ ಮುನಿಗಳು ಏಕವಿಹಾರಿಗಳಾಗಿ ಉಜ್ಜಯಿನಿಗೆ ಬಂದು ಊರ ಹೊರಗಿನ ಉದ್ಯಾನವನದಲ್ಲಿ ಬೀಡು ಬಿಟ್ಟಿದ್ದರು. ಆ ಸುದ್ದಿಯನ್ನು ಋಷಿನಿವೇದಕನೊಬ್ಬನು ವಿಶ್ವಂಭರ ಮಹಾರಾಜನಿಗೆ ಬಂದು ತಿಳಿಸಿದ. ರಾಜನು ಅದನ್ನು ಕೇಳಿ ಆನಂದ ಭೇರಿಯನ್ನು ಹೊಯ್ಸಿ, ಗುಣಪಾಲಸೆಟ್ಟಿ ಮೊದಲಾದ ಶ್ರಾವಕರು, ಧನಕೀರ್ತಿ ಮೊದಲಾದ ಕುಮಾರರು, ವಿಶ್ವಾವತಿ ಮೊದಲಾದ ನಂದನೆಯರು, ಧನಶ್ರೀ ಮೊದಲಾದ ಶ್ರಾವಕಿಯರು, ಲಕ್ಷ್ಮೀಮತಿ ಮೊದಲಾದ ಅರಸಿಯರು – ಇವರ ಸಮೇತ ಹೊರಟ. ಅರಸುವ ಬಳ್ಳಿ ಕಾಲಿಗೆ ಸಿಕ್ಕಿತು ಎಂಬಂತೆ ಸುವ್ರತಾರೂಢನಾಗಬೇಕೆಂದಿದ್ದ ತನಗೆ ಮಹಾರುಷರೇ ಎದುರಾದರು ಎಂದು ವಿಶ್ವಂಭರ ಮಹಾರಾಜನು ಸಂತಸಗೊಂಡು ಉದ್ಯಾನಕ್ಕೆ ಬಂದು ಯೋಗೀಂದ್ರರ ಪಾದಗಳಿಗೆ ವಂದಿಸಿ ಮೂರು ಬಾರಿ ಪ್ರದಕ್ಷಿಣೆ ಬಂದ. ರಾಜನು ತ್ರಿಕರಣಶುದ್ಧಿಯಿಂದ ನಾನಾ ಬಗೆಯ ಅರ್ಚನೆಗಳನ್ನು ಮಾಡಿ ಋಷಿಗಳ ಎದುರಿಗೆ ಕುಳಿತ; ಗುಣಪಾಲಸೆಟ್ಟಿಯು ಆಗಮ ವಿಷಯವಾದ ಹಲವು ಸಂಶಯಗಳನ್ನು ಪೂಜ್ಯರಲ್ಲಿ ಪರಿಹರಿಸಿಕೊಂಡ. ರಾಜನೂ ಧನಕೀರ್ತಿಯೂ ಪಂಚಾಣುವ್ರತರತ್ನ ಗಳನ್ನು ಧರಿಸಬೇಕೆಂದು ನಿರ್ಣಯಿಸಿದರು. ಆಗ ಗುಣಪಾಲಸೆಟ್ಟಿಯು ಶ್ರೀದತ್ತ ಸೆಟ್ಟಿಯು ಮಾಡಿದ ಐದು ಕಂಟಕಗಳನ್ನು ಮೀರಿ ಧನಕೀರ್ತಿಯು ರಾಜ್ಯವನ್ನು ಪಡೆಯಲು ಕಾರಣವಾದ ಪುಣ್ಯವಾವುದೆಂದು ಪರಮಾವಧಿಲೋಚನರನ್ನು ಬೆಸಗೊಂಡ.

ದುರಿತವೆಂಬ ಕಟ್ಟಿಗೆಯನ್ನು ಸುಟ್ಟವರಾದ ಮುನಿಗಳು ತಮ್ಮ ಪರಮಾವಧಿಲೋಚನದಿಂದ ತಿಳಿದು ಧನಕೀರ್ತಿಯ ಹಿಂದಿನ ಜನ್ಮದ ಕತೆಯನ್ನು ಹೇಳತೊಡಗಿದರು. ದೇವೇಂದ್ರನ ಅಮರಾವತಿ ನಗರಕ್ಕೆ ಸಮಾನವಾದ ವೈಭವದಿಂದ ಮೆರೆಯುವುದು ಉಜ್ಜಯಿನಿ ನಗರ. ಅದರ ಸನಿಹದಲ್ಲಿರುವುದು ಶಿರಿಷ್ಟ ಎಂಬ ತುಂಬ ಸುಂದರವಾದ ಊರು. ಆ ಗ್ರಾಮದಲ್ಲಿ ಮೃಗಸೇನ ಎಂಬ ಬೆಸ್ತರವನಿದ್ದ; ಅವನ ಹೆಂಡತಿ ಘಂಟೆ ಎನ್ನುವವಳು. ಈ ದಂಪತಿಗಳು ಕೆಲವು ಕಾಲ ಪಾಪಕಾರ್ಯಗಳನ್ನು ಮಾಡುತ್ತ ಇದ್ದರು. ಒಂದು ದಿವಸ ಮೃಗಸೇನನು ಬಲಿಯನ್ನು ತೆಗೆದುಕೊಂಡು ಸಿಂಪಾ ನದಿಗೆ ಹೋಗುತ್ತಿದ್ದ. ದಾರಿಯಲ್ಲಿ ಯಶೋಧರರೆಂಬ ಮುನಿಗಳು ಹೇಳುವ ಧರ್ಮವನ್ನು ಕೇಳುತ್ತ ಕುಳಿತಿದ್ದ ಜನರ ಗುಂಪು

ಅವನಿಗೆ ಕಾಣಿಸಿತು. ಪಾಪದ ಉಪಶಮನ ಕಾಲದಲ್ಲಿ ಏನಾದರೂ ಚೋದ್ಯವಾಗಲೇಬೇಕಲ್ಲವೇ? ಹೀಗಾಗಿ ಅವನು ಏನಾಗುತ್ತಿದೆಯೋ ನೋಡೋಣ ವೆಂದು ತನ್ನ ಬಲೆಯನ್ನು ಪಕ್ಕದಲ್ಲಿರಿಸಿ ಶಾಂತರೂಪನಾಗಿ ಬಂದು ಕುಳಿತ. ಉಡಲು ಸರಿಯಾದ ಬಟ್ಟೆಯೂ ಇಲ್ಲದ ಈ ಗುರುವಿಗೆ ವಂದನೆ ಸಲ್ಲಿಸಲು ಹಾರ, ಮುತ್ತಿನ ಏಕಾವಳಿ, ವಜ್ರದ ಕಂಕಣ, ಕೇಯೂರದ ರತ್ನಕುಂಡಲ, ಉಂಗುರ ಮುಂತಾದ ಆಭರಣಗಳಿಂದ ಅಲಂಕೃತರಾದ ಪುರುಷರು ಕುಳಿತಿದ್ದಾರಲ್ಲ ಎಂದು ಮೃಗಸೇನನು ಮನಸ್ಸಿನಲ್ಲಿ ಚೋದ್ಯಪಟ್ಟ. ಇವರು ಪ್ರತ್ಯಕ್ಷ ದೇವರಾಗಿರಬೇಕೆಂದು ಭಾವಿಸಿ ತಾನೂ ಕೈಮುಗಿದು ಧರ್ಮವನ್ನು ಕೇಳಿದ. ವರಮುನಿಗಳು ತಮ್ಮ ಮಧುರಸ್ವರದಿಂದ ಪರಮಾಗಮವನ್ನು ಸಮಸ್ತ ಭವ್ಯಜನಕ್ಕೆ ಆದರದಿಂದ ಹೇಳುತ್ತಿದ್ದರು. ಅದನ್ನು ನಿಷ್ಕರುಣಿಯಾದ ಜಾಲಗಾರನೂ ಕೇಳುತ್ತಿದ್ದ.

ಅಷ್ಟರಲ್ಲಿ ಅಲ್ಲಿ ನೆರೆದಿದ್ದ ಶ್ರಾವಕರೆಲ್ಲ ತಮಗೆ ಇಷ್ಟವಾದ ವ್ರತಗಳನ್ನು ಸ್ವೀಕರಿಸಿ ದರ್ಶನದೃಢರಾಗಿ ಮುನಿವರರಿಗೆ ಪೊಡಮಟ್ಟು ಹೋದರು. ಮೃಗಸೇನನೂ ಎದ್ದು ಕೈಮುಗಿದು, "ದೇವಾ, ಮಹಾ ಪ್ರಸಾದ, ನಿಮ್ಮನ್ನು ಅವಜ್ಞೆಯಿಂದ ಬತ್ತಲಿಗ ಎಂದು ಕರ್ಮವಶನಾಗಿ ಇದುವರೆಗೂ ಭಾವಿಸಿದ್ದೆ. ಇಲ್ಲಿ ಸೇರಿದ್ದ ಜನರಿಗೆಲ್ಲ ಪ್ರೀತಿಯಿಂದ ಅವರು ಬಯಸಿದ್ದನ್ನು ಕೊಡುವ ತಾವು ದೇವರೇ ಎಂಬ ನಂಬಿಕೆ ಈಗ ನನಗೆ ಉಂಟಾಗಿದೆ. ನನಗೂ ಒಂದು ವ್ರತವನ್ನು ದಯಪಾಲಿಸಬೇಕು" ಎಂದು ಬೇಡಿಕೊಂಡ. ಆಗ ಮುನೀಶ್ವರರು, "ಹೆಂಡವನ್ನು ಬಿಡು" ಎಂದರು; ಅವನು "ತಮ್ಮ ಪಾದ, ಕಳ್ಳನ್ನು ಬಿಟ್ಟರೆ ನನ್ನ ಪ್ರಾಣವೇ ಹೋಗುತ್ತದೆ" ಎಂದ. "ಹಾಗಾದರೆ ಕೊಲೆಯನ್ನು ಬಿಡು" ಎಂದರು; "ಕೊಲ್ಲುವುದನ್ನು ಬಿಟ್ಟರೆ ನನ್ನ ಹೆಂಡತಿಯನ್ನು ಸಾಕುವುದು ಹೇಗೆ?" ಎಂದು ಅವನೆಂದ. "ಸುಳ್ಳು ಹೇಳುವುದನ್ನು ಬಿಡು" ಎಂದಾಗ, "ಹುಸಿಯುವುದನ್ನು ಬಿಟ್ಟು ಜಗತ್ತಿನಲ್ಲಿ ಬಾಳುವುದಾದರೂ ಹೇಗೆ?" ಎಂದವನು ಪ್ರಶ್ನಿಸಿದ. "ಕಳ್ಳತನವನ್ನು ಬಿಡಬಹುದಲ್ಲ" ಎಂದು ಮುನಿಗಳು ಹೇಳಿದಾಗ, "ನಮ್ಮ ಕುಲದವರು ಕಳವನ್ನು ಬಿಡಬಾರದು, ಬಿಟ್ಟರೆ ಜೀವನ ಕಷ್ಟ" ಎಂದು ಹೇಳಿದ. ಆಗ ಮುನಿಗಳು, "ನೀನು ಪಂಚಾಣುವ್ರತಗಳಲ್ಲಿ ಯಾವುದನ್ನೂ ಕೈಗೊಳ್ಳಲಾರೆ; ಹೋಗಲಿ, ನಿನ್ನ ಬಲೆಯಲ್ಲಿ ಬಿದ್ದ ಮೊದಲನೇ ಮೀನನ್ನು ನದಿಗೇ ಬಿಟ್ಟುಬಿಡು" ಎಂದರು. ಮೃಗಸೇನನು ಅದಕ್ಕೊಪ್ಪಿ ಸಿಂಪಾ ನದಿಗೆ ನಡೆದ.

ನದಿಯ ಒಂದು ಮಡುವಿಗೆ ಹೋಗಿ ತನ್ನ ಬಲೆಯನ್ನು ಬೀಸಿದ. ಅದರಲ್ಲಿ ದೊಡ್ಡ ಮೀನೊಂದು ಸಿಕ್ಕಿತು. ಗುರುವಚನವನ್ನು ಮೀರಬಾರದೆಂದು ಅದಕ್ಕೆ ಗುರುತಾಗಿ ಒಂದು ದಾರವನ್ನು ಕಟ್ಟಿ ನದಿಯಲ್ಲಿ ಬಿಟ್ಟ. ನದಿಯ ದಡದ ಗುಂಟ ಅರೆಗಾವುದ ದೂರ ನಡೆದು ಮತ್ತೆ ತನ್ನ ಬಲೆ ಬಿಸಿದ. ಪುನಃ ಹಿಂದಿನ ಮೀನೇ ಅದರಲ್ಲಿ ಬಿದ್ದಿತ್ತು. ಅದರ ಗುರುತು ಸಿಕ್ಕಿತು. ಯತಿಗೆ ತಾನು ಕೊಟ್ಟ ಮಾತನ್ನುಳಿಸಿಕೊಳ್ಳಲು ಮತ್ತೆ ಅದನ್ನು ನೀರಿಗೆ ಬಿಟ್ಟ. ಇನ್ನಷ್ಟು ದೂರ ಹೋಗಿ ಮತ್ತೆ ಬಲೆ ಹಾಕಿದಾಗಲೂ ಅದೇ ಮೀನೇ ಬಿತ್ತು. ಅದನ್ನು ಕಂಡು ಬೆಸ್ತನಿಗೆ ಬೆರಗಾಯಿತು. ತನ್ನ ವ್ರತವನ್ನು ನೆನೆದು ಪುನಃ ಅದನ್ನು ನೀರಿಗೆ ಬಿಟ್ಟ. ಮತ್ತೆ ನೂರು ಮಾರು ಮುಂದೆ ಹೋಗಿ ಬಲೆ ಬೀಸಿದರೆ, ಹಿಂದಿನ ಮೀನೇ ಮತ್ತೆ ಸಿಕ್ಕಿತು! ಮುನಿಗೆ ಕೊಟ್ಟ ಮಾತಿನಂತೆ ಮತ್ತೆ ಅದನ್ನು ನದಿಗೆ ಅರ್ಪಿಸಿದ. ಮತ್ತೆ ನೂರು ಮಾರು ಹೋದ ಮೃಗಸೇನನು ಮತ್ತೆ ಜಾಲವನ್ನು ಬೀಸಿದ. ಮೊದಲಿನ ಮೀನೇ ಬಿದ್ದಿತ್ತು. ಕೊಲೆಯಲ್ಲಿ ತಮ್ಮ ಮನಸ್ಸನ್ನು ನಟ್ಟವರು ಈ ರೀತಿ ನರಕಕ್ಕಿಳಿಯುತ್ತಾರೆ ಎಂಬುದನ್ನು ಅಭಿನಯಿಸುವಂತೆ ಸೂರ್ಯನು ಅಷ್ಟು ಹೊತ್ತಿಗೆ ಪಶ್ಚಿಮಸಮುದ್ರದಲ್ಲಿ ಮುಳುಗಿದ.

ನೇಸರು ಮುಳುಗಲು ಮೃಗಸೇನನು ಬರಿಗೈಯಲ್ಲಿ ಮನೆಗೆ ಹೋಗಲಾಗದೆ ಸ್ವಲ್ಪ ಪುಳ್ಳೆಗಳನ್ನು ಆರಿಸಿಕೊಂಡು ಹೋದ. ವಾಪಸಾಗಲು ತಡವಾಯಿತೆಂದು ಚಡಪಡಿಸುತ್ತಿದ್ದ ಘಂಟೆಯು ಮೀನಿಲ್ಲದೆ ಪುಳ್ಳೆಗಳನ್ನು ಮಾತ್ರ ತಂದ ಗಂಡನನ್ನು ಕಂಡು ಕಿನಿಸಿ ಅವನನ್ನು ಹೊರಕ್ಕೆ ದಬ್ಬಿದಳು. ಅವನು ಭಯದಿಂದ ಹೆಂಡತಿಯ ಕಾಲ ಮೇಲೆ ಬಿದ್ದು ತಡವಾದ ಕಾರಣವನ್ನು ವಿವರಿಸಿ ಹೇಳಿದ. ಅವಳ ಕಣ್ಣುಗಳು ಕಿಡಿಗಳನ್ನು ಕಾರತೊಡಗಿದವು. ಮೈಯ ಅಂಗಾಂಗಗಳೆಲ್ಲ ಕಂಪಿಸುತ್ತಿರಲು ಅವಳು ಮಹಾ ಕೋಪದಿಂದ ತನ್ನ ಕಾವಲಿಯಂತಹ ಕೈಗಳಿಂದ ಗಂಡನನ್ನು ಹೊಡೆದಳು, ಕಪ್ಪಗಿನ ಕಾಲುಗಳಿಂದ

ಒದೆದಳು. ಅವನ ದೇಹವೆಲ್ಲ ನುಗ್ಗಾಗುವಂತೆ ಬಡಿದು ವ್ರತವನ್ನು ಕೊಟ್ಟ ಮುನಿಯ ಮನೆಗೇ ಹೋಗೆಂದು ಹೊರ ನೂಕಿ ಮನೆಯ ಅಗುಳಿಯನ್ನು ಹಾಕಿಕೊಂಡಳು. 'ಒಂದು ದಿನ ದುಡಿಮೆ ಕಡಿಮೆಯಾದುದಕ್ಕೆ ಹೆಂಡತಿ ಕೋಪದಿಂದ ಹೊಡೆದಳು; ಹೆಂಡಿರುಮಕ್ಕಳು ಇರಬಾರದು ಎಂದ ದಿವ್ಯಮುನಿಯ ಮಾತಿನ ಸತ್ಯವನ್ನು ಇಂದು ಕಂಡುಕೊಂಡೆ; ಇದುವರೆಗೂ ನಾನು ಸದ್ಧರ್ಮರತ್ನವನ್ನು ಬಿಟ್ಟು ದುರಾಸೆಯಿಂದ ಸತಿಯೆಂದು ಅವಳನ್ನು ನಂಬಿದೆ; ಈಗ ಸತಿಯು ಇರಬಾರದೆಂಬುದು ಅರಿತೆ' ಎಂದು ಮೃಗಸೇನನಿಗೆ ಅನ್ನಿಸಿತು. ಕೋಪಗೊಂಡು ಹೊಡೆದ ಹೆಂಡತಿಯನ್ನೂ ಮನೆಯನ್ನೂ ನಿರ್ಧಾರಕವಾಗಿ ತೊರೆದ ಅವನು ಬೆಳಗಾಗುತ್ತಲೇ ಮಲರಹಿತರಾದ ಮುನಿಗಳಲ್ಲಿ ಶ್ರಾವಕ ದೀಕ್ಷೆಯನ್ನು ಕೈಗೊಳ್ಳುವ ತೀರ್ಮಾನವನ್ನು ಮಾಡಿ ನಿದ್ದೆಹೋದ.

ನಡುರಾತ್ರಿಯಲ್ಲಿ ಒಂದು ಹಾವು ಕಪ್ಪೆಯನ್ನು ಹಿಡಿಯಲೆಂದು ಬಂದು, ಕಪ್ಪೆ ತಪ್ಪಿಸಿಕೊಂಡುದರಿಂದ ಮೃಗಸೇನನ ಉಂಗುಟವನ್ನು ಕಚ್ಚಿತು. ಅವನ ದೇಹವನ್ನು ವಿಷ ವ್ಯಾಪಿಸಿ ಅವನು ಸ್ವಲ್ಪ ಹೊತ್ತಿನಲ್ಲೇ ಗತಪ್ರಾಣನಾದ. ಹಾಗೆ ಸತ್ತ ಮೃಗಸೇನನೇ ಸುವ್ರತದ ಕಾರಣದಿಂದ ನಿನ್ನ ಮಗನಾದ ಧನಕೀರ್ತಿಯಾಗಿ ಹುಟ್ಟಿದ್ದಾನೆ; ಗುರುವಿಗೆ ಕೊಟ್ಟ ವಚನವನ್ನು ನೆನೆಸಿಕೊಂಡು ಐದು ಬಾರಿ ಸಿಕ್ಕಿದ ಮೀನನ್ನು ಬಿಟ್ಟದ್ದರಿಂದ ಅವನು ಶ್ರೀದತ್ತನು ಮಾಡಿದ ಐದು ಕೊಲೆಯ ಯತ್ನಗಳಿಂದ ಪಾರಾಗಿ ಈಗ ವಿಶ್ವಂಭರ ಮಹಾರಾಜನ ಅರ್ಧರಾಜ್ಯಕ್ಕೆ ಒಡೆಯನಾಗಿದ್ದಾನೆ. ಮಾರನೆಯ ಬೆಳಿಗ್ಗೆ ಮೃಗಸೇನನ ಹೆಣವನ್ನು ತಟ್ಟನೆ ಕಂಡ ಘಂಟೆಯು ದುಃಖದಿಂದ ಗಂಡನ ವ್ರತವನ್ನು ತಾನೂ ತಾಳಿದೆನೆಂದು ಅವನೊಡನೆ ಸತ್ತಳು. ವ್ರತವನ್ನು ಕೈಗೊಳ್ಳಲು ಅವಳು ತೀರ್ಮಾನಿಸಿದ್ದ ಫಲದಿಂದ ಘಂಟೆಯು ಶ್ರೀದತ್ತ ಸೆಟ್ಟಿಯ ಮಗಳಾದ ಶ್ರೀಮತಿಯಾಗಿ ಹುಟ್ಟಿ ಧನಕೀರ್ತಿಯ ಹೆಂಡತಿಯಾಗಿದ್ದಾಳೆ. ಆ ಮೀನು ಮೃಗಸೇನೆ ಎಂಬ ಸೂಳೆಯಾಗಿ ಹುಟ್ಟಿ ಹೊತ್ತು ಕಳೆಯಲು ಸಿಂಪಾ ನದಿಯ ದಡದಲ್ಲಿ ವಿಹರಿಸುತ್ತ ಕೆಂದಳಿರ ಮಾವಿನ ಮರದ ಕೆಳಗೆ ಮಲಗಿದ್ದ ಧನಕೀರ್ತಿಯನ್ನು ಕಂಡು ಅವನನ್ನು ತಂದೆಯಂತೆ ಪ್ರೀತಿಸಿದಳು; ಅವನ ಸೊಂಟದಲ್ಲಿದ್ದ ಓಲೆಯನ್ನು ಓದಿ ಮರುಕದಿಂದ ಅದನ್ನು ಹರಿದು, ಇವನನ್ನು ಕಂಡ ತಕ್ಷಣ ಶ್ರೀಮತಿಯನ್ನು ಕೊಟ್ಟು ಮದುವೆ ಮಾಡೆಂದು ಸೂಚಿಸುವ ಒಕ್ಕಣೆಯುಳ್ಳ ಮತ್ತೊಂದು ಪತ್ರವನ್ನು ಬರೆದಿಟ್ಟಳು. ಅದರಿಂದ ಧನಕೀರ್ತಿಯ ಸಾವು ತಪ್ಪಿತು.

ಹೀಗೆಂದು ಆ ಮೂವರ ಹಿಂದಿನ ಜನ್ಮಗಳ ವಿವರವನ್ನು ಮುನಿಗಳು ವಿವರಿಸಿದರು. ಇದನ್ನು ಕೇಳಿದ ಅವರೆಲ್ಲರಿಗೂ ಪರಮಾಶ್ಚರ್ಯವಾಯಿತು; ಜಿನೇಂದ್ರಧರ್ಮವನ್ನು ನಂಬಿದವರಿಗೆ ತೊಂದರೆ ಎಂಬುದಿದೆಯೇ ಎಂದು ಅನ್ನಿಸಿತು. ಕಿರಿದಾದ ವ್ರತದಿಂದಲೇ ಮಹಿಮೆ, ಮಹಾಧೈರ್ಯ, ರಾಜ್ಯ, ಶುಭೋನ್ನತಿ, ತೇಜಸ್ಸು, ರೂಪಗಳಿರುವ ಉನ್ನತಿಯನ್ನು ಧನಕೀರ್ತಿ ಪಡೆದನೆಂದ ಮೇಲೆ ಎಲ್ಲ ಪಂಚಾಣುವ್ರತಗಳನ್ನೂ ಕೈಗೊಳ್ಳುವ ನರನಿಗೆ ಮೋಕ್ಷವು ಕೈಸಾರುವುದರಲ್ಲಿ ಅಚ್ಚರಿಯೇನು ಎಂದು ಅವರಿಗೆ ಮನವರಿಕೆಯಾಯಿತು. ದಂಟನ್ನೂದುವವನಿಗೆ ಕೊಳಲು ಸಿಕ್ಕಿತು ಎಂಬಂತೆ, ಕೋಣವನ್ನೇರುವವನಿಗೆ ಮದಕರಿ ದೊರಕಿದಂತೆ, ಗುಡಿಸಿಲ್ಲಿರುವವನಿಗೆ ಮಣಿಮಾಡವು ಸಿಕ್ಕಿದಂತೆ, ಈ ಮೊದಲೇ ವ್ರತವನ್ನು ಕೈಗೊಳ್ಳಲು ನಿರ್ಧರಿಸಿದ್ದವರಿಗೆ ಅಹಿಂಸಾವ್ರತದ ಫಲವನ್ನು ಪ್ರತ್ಯಕ್ಷವಾಗಿ ಕಂಡು ವಿಶ್ವಂಭರ ಮಹಾರಾಜನೂ ಗುಣಪಾಲಸೆಟ್ಟಿಯೂ ಲಕ್ಷ್ಮೀಮತಿ ಮಹಾದೇವಿಯೂ ಧನಶ್ರೀಯೂ ಜಿನದೀಕ್ಷೆಯನ್ನು ಕೈಗೊಂಡರು. ಧನಕೀರ್ತಿಕುಮಾರನೇ ಮೊದಲಾಗಿ ಸಮಸ್ತ ರಾಜಕುಮಾರರೂ, ಶ್ರೀಮತಿ ಮುಂತಾದ ಅರಸಿಯರೂ ಸಕಲ ಪರಿವಾರಜನರೂ ನಿರ್ವಾಣಲಕ್ಷ್ಮಿಯ ಆಭರಣವೆನಿಸಿದ ಪಂಚರತ್ನಗಳಾದ ಪಂಚಾಣುವ್ರತಗಳನ್ನು ಕೈಗೊಂಡು ದರ್ಶನದಲ್ಲಿ ದೃಢರಾಗಿ ಮುನಿರಾಜಹಂಸನಿಗೆ ಪೊಡಮಟ್ಟು ಮನಗೆ ಮರಳಿ ಸಂತೋಷದಿಂದಿದ್ದರು.

ಧನಕೀರ್ತಿ ಮಹಾರಾಜನು ಸನತ್ಕುಮಾರ ಚಕ್ರವರ್ತಿಯಂತೆ ತೇಜಸ್ವಿಯೂ ಜಿನಧರ್ಮೋದ್ಧಾರಕನೂ ಆಗಿ, ಶ್ರೀಷೇಣ ಮಹಾರಾಜನಂತೆ ವೀರನೂ ಅನ್ನದಾನ ವಿನೋದನೂ ಆಗಿ, ಪಂಚಮ ಚಕ್ರಧರನಂತೆ ಸದ್ಧರ್ಮನಿಶ್ಶಂಕನೂ

ಶ್ರುತವಿನೂತನನೂ ಆಗಿ, ಅಭಯಕುಮಾರನಂತೆ ಕುಶಲನೂ ಅಭಯದಾನ ಸಮೇತನೂ ಆಗಿ, ನಾಗಕುಮಾರನಂತೆ ಸುಭಗನೂ ಜಿನಪೂಜಾನಂದನೂ ಆಗಿ, ಧನ್ಯಕುಮಾರನಂತೆ ಮುನಿಜನಾನಂದನೂ ವಿನೀತನೂ ಆಗಿ ರಾಜ್ಯಪರಿಪಾಲನೆ ಮಾಡುತ್ತಿದ್ದನು. ಹೀಗೆ ಕೆಲವು ಕಾಲ ಕಳೆದ ಮೇಲೆ ಒಂದು ದಿನ ಅವನು ಕನ್ನಡಿಯಲ್ಲಿ ತನ್ನ ಕೆನ್ನೆಯ ಮೇಲೆ ನರಗೂದಲನ್ನು ಕಂಡ. "ಜಗತ್ತಿನಲ್ಲಿ ನನಗಿಂತ ಮೂರ್ಖರಿಲ್ಲ; ಹೆಣ್ಣಿನ ಭೋಗ, ಸಂಪತ್ತು, ರಾಜ್ಯ, ನಶ್ವರವಾದ ಈ ದೇಹ, ಇವುಗಳನ್ನು ನಂಬಿಕೊಂಡಿದ್ದು ಕೆಟ್ಟೆ; ಯಮನು ನನ್ನನ್ನು ತಿನಿಸಾಗಿ ಮಾಡದ ಹಾಗೆ ಈಗಲೇ ನಾನು ಜಿನದೀಕ್ಷೆಯನ್ನು ಪಡೆಯುತ್ತೇನೆ" ಎಂದು ನಿರ್ಧರಿಸಿದ. ಕಣ್ಣು ಮುಚ್ಚಿಕೊಂಡ ಉಡು ತನ್ನನ್ನು ಬೇರಾರೂ ನೋಡುತ್ತಿಲ್ಲವೆಂಬ ಎಗ್ಗಿನಿಂದ ಸಾಯುವಂತೆ ಜಡರು ಧನ ಮನೆ ಎಂದು ಕೆಡುತ್ತಾರೆ; ಬೆಳಿಗ್ಗೆ ಹುಟ್ಟುವ ಸೂರ್ಯನು ಧೀರನಾಗಿ ಸಾಗಿ ಸಂಜೆ ಅಸ್ತಮಾನನಾಗುವ ಹಾಗೆ ಮಾನವರು ಬಹು ಬೇಗ ಅಳಿದು ದುರ್ಗತಿಗಿಳಿಯುತ್ತಾರೆ, ಎಂದು ಅವನಿಗೆ ಸಂಸಾರದ ಬಗ್ಗೆ ಹೇಸಿಕೆಯುಂಟಾಯಿತು.

ತನ್ನ ಹಿರಿಯ ಮಗನಾದ ಸಂಕೀರ್ತಿಗೆ ಪಟ್ಟವನ್ನು ಕಟ್ಟಿ ರಾಜ್ಯವನ್ನು ಬಿಟ್ಟು ಯಶೋಧರ ಭಟ್ಟಾರಕರಲ್ಲಿ ಜಿನದೀಕ್ಷೆಯನ್ನು ಪಡೆದು ಸಕಲಶ್ರುತಪಾರಾವಾರ ಪಾರಗನಾಗಿ ಗುರುಗಳ ಆಜ್ಞೆಯಂತೆ ಏಕವಿಹಾರಿಯಾಗಿ ನಡೆದ. ಆನಂತರ ಉಗ್ರೋಗ್ರ ತಪದಲ್ಲಿ ಪ್ರಾಯೋಪಗಮನ ಮಾಡಿ ಸಂನ್ಯಸನವಿಧಿಯಿಂದ ಸತ್ತು ಸರ್ವಾರ್ಥಸಿದ್ಧಿಯಲ್ಲಿ ಮೂವತ್ತಮೂರು ಸಾಗರದಷ್ಟು ಅವಧಿಯ ಆಯುಷ್ಯವನ್ನು ಹೊಂದಿ ಅಹಮಿಂದ್ರನಾಗಿ ಹುಟ್ಟಿದ. "ಸಿರಿಯನ್ನು ತೊರೆದು, ಸಮಸ್ತ ಭೂವಲಯವನ್ನು ತ್ಯಜಿಸಿ ಸುಂದರಿಯರನ್ನು ಬಿಟ್ಟು, ಆನಚಿದಭೋಗಗಳನ್ನು ಪರಿತ್ಯಾಗ ಮಾಡಿ ಮೋಕ್ಷಲಕ್ಷ್ಮಿಗೆ ಸೋತು ಜಿನಪಾದಗಳನ್ನು ಹೊಂದಿ ನನ್ನ ಪತಿಯು ಜೈನದೀಕ್ಷೆಗೆ ತನ್ನನ್ನು ಧೈರ್ಯದಿಂದ ಒಡ್ಡಿಕೊಂಡ. ಇನ್ನು ನನಗೆ ಉಳಿದ ಸಂಪತ್ತೇನು?" ಎಂದು ಶ್ರೀಮತಿಯೂ ಮಗನ ಮೋಹವನ್ನೂ ರಾಜ್ಯದಾಸೆಯನ್ನೂ ಬಿಸುಟು ವಿನಯಮತಿ ಎಂಬ ಕಂತಿಯರ ಬಳಿ ದೀಕ್ಷೆಯನ್ನು ಕೈಗೊಂಡಳು. ಮಾಯಾವಿರಹಿತಳಾಗಿ ಕಾಲ ಕಳೆದು ಕಡೆಯಲ್ಲಿ ಸಮಾಧಿವಿಧಿಯಿಂದ ಮುಡಿಪಿ ದೇವಲೋಕದಲ್ಲಿ ಹುಟ್ಟಿದಳು. ವಿಶ್ವಂಭರ ಮುನಿಕುಂಜರನೂ ಗುಣಪಾಲ ಮುನಿಯೂ ಲಕ್ಷ್ಮೀಮತಿಯೂ ಧನಶ್ರೀಯೂ ಮೃಗಸೇನೆಯೂ ಉತ್ತರೋತ್ತರ ತಪವನ್ನು ನೆಗಳಿ ಸಮಾಧಿಮರಣವನ್ನು ಹೊಂದಿ ದೇವಲೋಕದಲ್ಲಿ ಹುಟ್ಟಿದರು. ಆದ್ದರಿಂದ ಕೊಲೆಯನ್ನು ಬಿಟ್ಟ ಮಹಾತ್ಮನು ಕೈವಲ್ಯಕಾಮಿನೀಶ್ವರನಾಗುತ್ತಾನೆ; ಕೊಲೆಯನ್ನು ಮಾಡುವವನು ಉಗ್ರ ನರಕಸಮುದ್ರದಲ್ಲಿ ತಲೆಕೆಳಕಾಗಿರುವನು, ಅಥವಾ ತಿರಿಕಯೋನಿಯಲ್ಲಿ ಸದಾ ಕಾಲವೂ ತಿರುಗುತ್ತಿರುವನು. ಹೀಗೆಂದು ಗಣಧರಸ್ವಾಮಿಗಳು ಅಹಿಂಸಾವ್ರತದ ಪ್ರತ್ಯಕ್ಷ ಫಲವನ್ನು ಕತೆಯ ಮೂಲಕ ನಿರೂಪಿಸಿದರು. ಅದನ್ನು ಭವ್ಯಾಂಭೋಜಸೂರ್ಯನೂ ನಿರುಪಮಗುಣನೂ ಮೇರುಧೈರ್ಯನೂ ತ್ರೈವಿದ್ಯಚೂಡಾಮಣಿಯೂ ಸುಕವಿಜನಮನಃಪದ್ಮನೀ ರಾಜ ಹಂಸನೂ ಆದ ಶ್ರೇಣಿಕ ಮಹಾರಾಜನು ಕೇಳಿ ಧನ್ಯತೆಯನ್ನು ಅನುಭವಿಸಿದ.

ಸತ್ಯ

ಸಕಲಸುಖಗಳನ್ನೂ ಕೊಡುವ ಶ್ರೇಷ್ಠವಾದ ಚಿಂತಾಮಣಿಯೆನಿಸಿದ ಅಹಿಂಸಾವ್ರತದ ಕತೆಯನ್ನು ಕೇಳಿ ಹರ್ಷಗೊಂಡ ಮಗಧನಾಯಕನು ಗಣಧರಸ್ವಾಮಿಗಳಿಗೆ ಮಣಿದು ಸತ್ಯವ್ರತದ ಕತೆಯನ್ನು ಬೆಸಸುವುದೆಂದು ಕೈಮುಗಿದು ಬೇಡಿಕೊಂಡ. ನಿರ್ವೃತಿಕಾಂತೆಯ ಕೂಟಕ್ಕೆ ಸರಿದಾರಿಯಾದ ಸತ್ಯವ್ರತದ ಕತೆಯನ್ನು ಸ್ವಾಮಿಗಳು ಹೇಳಲು ತೊಡಗಿದರು. ವೀರವನ್ನು ಹೊಂದಿ ಗುರಾಣಿಯನ್ನುಳಿದು ಕಾಳಗಕ್ಕೆ ಹೋಗುವಂತೆ, ಸಂಪತ್ತಿನೊಡನೆ ತೇಜಸ್ಸು, ಮಹಿಮೆಗಳನ್ನು ಹೊಂದಿರುವಂತೆ, ಯೌವನದಲ್ಲಿ ವಿಲಾಸ ಶೃಂಗಾರಗಳನ್ನು ಹೊಂದಿರುವಂತೆ ಸಮ್ಯಕ್‌ದರ್ಶನವನ್ನು ಪಡೆದು ಕೊಲ್ಲದ ಹಾಗೂ ಹುಸಿಯದ ವ್ರತಗಳನ್ನು ಹೊಂದಿರತಕ್ಕದ್ದು. ಹುಸಿಯಿಲ್ಲದ ಸುವ್ರತವನ್ನು ಪಡೆದವನನ್ನು ವಸುಧಾವಲಯವು ದೇವನೆಂದು ಪೂಜಿಸುತ್ತದೆ; ಆದ್ದರಿಂದ ಹುಸಿಯಿಲ್ಲದ ಸುವ್ರತಕ್ಕೆ ಮಿಗಿಲಾದುದು ಬೇರೊಂದಿದೆಯೇ? ಅದರ ವೈಶಿಷ್ಟ್ಯ ಎಂತಹುದೆಂದು ಅರಿಯಲು ಈ ಕತೆಯನ್ನು ಕೇಳಬೇಕು.

ಕಮನೀಯವಾದ ನಂದನವನಗಳಿಂದಲೂ ಸರೋವರಗಳಿಂದಲೂ ಶೋಭಿಸುವ ಊರುಗಳಿಂದ ಪರಿವೃತವಾದ, ಹೊಲಗದ್ದೆಗಳಿಂದಲೂ ಮಿರುಗುವ ರತ್ನಗಳಿಂದಲೂ ಶೋಭಾಯಮಾನವಾದ ಜೈನನಿವಾಸಗಳಿಂದಲೂ, ಎಲ್ಲಡೆ ವ್ಯಾಪಿಸಿದ ಕೆರೆಗಳಿಂದಲೂ ವೆಂಗಿಮಂಡಳವು ರಂಜಿಸುತ್ತಿತ್ತು. ಅದರಲ್ಲಿ ವಿದ್ವಜ್ಜನರಿಂದಲೂ ದೇವಸಮಾನರಾದ ಸದ್ವಚನಯುಕ್ತರಿಂದಲೂ ವಿಟವಿಟಿಯ ರಿಂದಲೂ ರಮಣಿಯವಾಗಿ ಪ್ರತಿಪಾಲಪುರವು ಒಪ್ಪುತ್ತಿತ್ತು. ಅದನ್ನಾಳುವ ದೊರೆ ಧನದ ಎಂಬ ಮಹಾಮಾಂಡಲಿಕ. ಜಿನನಾಥಾರ್ಚನೆಯಲ್ಲಿ ದೇವೇಂದ್ರನನ್ನೂ, ದಾನದಲ್ಲಿ ಶ್ರೇಯಾಂಸನನ್ನೂ, ಮುನಿಪಾದಾಂಬುಜಭಕ್ತಿಯಲ್ಲಿ ಮಘವನನ್ನೂ, ಭೋಗದಲ್ಲಿ ನಾಗೇಂದ್ರನನ್ನೂ, ಧನದಲ್ಲಿ ಖೇಚರರಾಜನನ್ನೂ, ಚೆಲುವಿನಲ್ಲಿ ಮನ್ಮಥನನ್ನೂ, ಬುದ್ಧಿಯಲ್ಲಿ ಮನುವನ್ನೂ, ತೇಜಸ್ಸಿನಲ್ಲಿ ಸೂರ್ಯನನ್ನೂ ವೈಭವದಲ್ಲಿ ಭರತಚಕ್ರವರ್ತಿಯನ್ನೂ ಅವನು ಹೋಲುತ್ತಿದ್ದನು. ಹೀಗೆ ಅವನು ರಾಜ್ಯಲಕ್ಷ್ಮೀಮನೋಹರನಾಗಿ ಸುಖಸಂಕಥಾವಿನೋದದಿಂದ ಬಾಳುತ್ತಿದ್ದ.

ಒಂದು ದಿನ ಚರನೊಬ್ಬನು ಬಂದು ಅರಸನ ಚಿತ್ತವೃತ್ತಿಯನ್ನು ಅರಿತು ತನ್ನ ಮನಸ್ಸಿನಲ್ಲಿದ್ದುದನ್ನು ಅರುಹಿ ಮೆಚ್ಚುಗೊಳ್ವ ಅಪೇಕ್ಷೆಯಿಂದ ರಾಜನಿಗೆ ವಂದಿಸಿ ದೂರದಲ್ಲಿ ನಿಂತು ಹೀಗೆ ಹೇಳಿದ: "ಮದನನ ಕೈಪಿಡಿ, ಮನೋಜನ ಹೂವಿನ ಬಾಣ, ಕಾಮದೇವನ ಮದ್ದಾನೆ ವಿಧಿಯು ಜಗತ್ತನ್ನು ಕಾಡಲೆಂದು ಈ ಸುದತಿಯನ್ನು ಸೃಷ್ಟಿಸಿ ಮೆಲ್ಲನೆ ಮದನನಿಗೆ ಕೊಟ್ಟ; ಮದನನೂ ಅವಳಿಂದಾಗಿ ಜಗತ್ತನ್ನು ಕಾಡಿಸದೆ ಇದ್ದಾನೆ. ಆ ಪದ್ಮಾಕ್ಷಿಯ ಸೊಗಸುವ ರೂಪದ ವರ್ಣನೆಯನ್ನು ಕೇಳಿದವರೂ ಆಸೆಯಿಂದ ಮರುಗುತ್ತಾರೆ ಎಂದ ಮೇಲೆ, ಮಹಾರಾಜನೇ, ಆ ವನಿತೆಯ ಚೆಲುವನ್ನು ನೋಡಿದವನಾರು ಆಸೆಪಡದೇ ಇದ್ದಾನು? ಸಂಘಶ್ರೀ ಎಂಬ ಬುದ್ಧಿಪಾಶಕನ ಮಗಳು ಕಮಲಶ್ರೀ ಎಂಬ ಕನ್ಯೆಯು ತಮಗೆ ಪ್ರಾಣವಲ್ಲಭೆಯಾಗಲು ತಕ್ಕವಳು." ಧನದನು ಅವನಿಗೆ ಉಚಿತ ಪಾರಿತೋಷಕವನ್ನಿತ್ತು, ಹೆಗ್ಗಡೆಗಳನ್ನು ಸಂಘಶ್ರೀಯ ಬಳಿ ಆ ಕಮಲಶ್ರೀಯನ್ನು ಬೇಡಿ ಕಳಿಸಿದ.

ಸಂಘಶ್ರೀ ಹೆಗ್ಗಡೆಗಳನ್ನು ಗೌರವದಿಂದ ಬರಮಾಡಿಕೊಂಡು ಹಿರಿದಾದ ಪೀಠದ ಮೇಲೆ ಕುಳ್ಳಿರಿಸಿ, ವಸ್ತ್ರ ತಾಂಬೂಲಾದಿಗಳನ್ನಿತ್ತು ಸಂತೋಷಪಡಿಸಿದ. ಆನಂತರ ಅವರು ಬಂದ ಕಾರಣವೇನೆಂದು ವಿಚಾರಿಸಿದ. ಭುವನೈಕವಂದ್ಯನೂ, ಇಂದ್ರನಿಭನೂ, ಉನ್ನತತೇಜನೂ ಜಿನಪಾದಶೇಖರನೂ ಆದ ಧನದ ಮಹಾರಾಜನು, ವನಜಲೋಚನೆಯೂ ಲಲಿತಾಂಗಿಯೂ ವಿಲಾಸೋನ್ನತೆಯೂ ಮನೋಜಗಜಗಾಮಿನಿಯೂ ರಮಣಿಯವಕ್ತ್ರೆಯೂ ಆದ ಕಮಲಶ್ರೀಯನ್ನು ಬೇಡಿ ತನ್ನನ್ನು ಕಳಿಸಿರುವ ವಿಷಯವನ್ನು ಹೆಗ್ಗಡೆಯು ತಿಳಿಸಿದರು. ಇದನ್ನು ಕೇಳಿದ ಸಂಘಶ್ರೀಯು

ಬಡವನಿಗೆ ನಿಧಿ ಸಿಕ್ಕಿದಂತೆ ಮನಸ್ಸಿನಲ್ಲಿಯೇ ನಲಿದ. ಧನದ ಮಹಾರಾಜನು ಋಷಿಯರ ಭಕ್ತ, ಆತನು ತನ್ನ ಒಡೆಯ; 'ಯಥಾ ರಾಜಾ ತಥಾ ಪ್ರಜಾಃ' ಎಂಬ ನೀತಿವಾಕ್ಯದಂತೆ ಅವನ ನಾಡುಬೀಡು, ಪ್ರಜೆಪರಿಗ್ರಹ ಮೊದಲಾಗಿ ಎಲ್ಲರೂ ಜೈನರೇ. ನಾನು ಹಿಡಿದ ಬುದ್ಧಸಮಯವು ಈ ದೇಶದಲ್ಲಿಯೂ ಊರಲ್ಲಿಯೂ ಶೋಭಿಸುತ್ತಿದೆ, ಆತನು ಕಮಲಶ್ರೀಯನ್ನು ತಂದುಕೊಂಡರೆ ರಾಜನು ಅವಳ ಮೇಲಿನ ಮೋಹದಿಂದಾಗಿ ನನ್ನ ಇಷ್ಟದೈವವಾದ ಸುಗತನ ಭಕ್ತನಾಗುವನು; ಅದರಿಂದಾಗಿ ನನಗೂ ದೊಡ್ಡ ಗೌರವವು ದೊರೆಯುವುದು' ಎಂದು ಆಲೋಚಿಸಿದ. ಆಮೇಲೆ ಸಂಘಶ್ರೀಯು ಹೆಗ್ಗಡೆಗಳಿಗೆ, "ಮಹಾರಾಜರೇ ನನ್ನ ಮಗಳನ್ನು ಬೇಡುತ್ತಾರೆ ಅಂದ ಮೇಲೆ ಜಗತ್ತಿನಲ್ಲಿ ನನಗಿಂತ ಪುಣ್ಯವಂತರು ಯಾರಿದ್ದಾರೆ? ಜಿನಪಾದಾಂಬುರುಹನೂ ಭವ್ಯಜನವಾರಿಜಾರ್ಕನೂ ಆದ ರಾಜನು ಬೇಡಿದರೆ ನನ್ನ ಮಗಳನ್ನು ಕೊಡದಿರುವೆನೆ? ಸಿರಿ ಬರಲು ಮೊಣಕಾಲನ್ನು ಅಡ್ಡವಿಕ್ಕುವ ಗಾಂಪರಿದ್ದಾರೆಯೇ?" ಎಂದು ನುಡಿದ. ಅಲ್ಲದೆ ಕಮಲಶ್ರೀಯನ್ನು ಅವನೊಡನೆ ಕಳಿಸಿದ.

ಹೆಗ್ಗಡೆಯು ಕುಮಾರಿಯನ್ನು ಆನೆಯ ಮೇಲೆ ಕೂರಿಸಿಕೊಂಡು ಅರಮನೆಗೆ ಬಂದು ಅರಸನಿಗೊಪ್ಪಿಸಿದ. ಅವಳ ರೂಪವನ್ನು ಪರಿಭಾವಿಸಿ ನೋಡಿದ ರಾಜನು, ಅವಳು ಚೆಲುವಿನಲ್ಲಿ ಶಚೀದೇವಿಗೂ ಮೇನಕೆಗೂ ಸೀತೆಗೂ ನಾಲ್ಕು ಬೆರಳು ಮಿಗಿಲು ಎಂದು ಬೆರಗಾದ. ಲಕ್ಷ್ಮಿಯಲ್ಲಿ ನಾರಾಯಣ, ರಂಭೆಯಲ್ಲಿ ದೇವೇಂದ್ರ, ಸೀತೆಯಲ್ಲಿ ರಾಘವೇಶ, ರತಿಯಲ್ಲಿ ಚಿತ್ತೋದ್ಭವ, ರೋಹಿಣಿಯಲ್ಲಿ ಸೌಂದರ್ಯಶೋಭಾಕರನಾದ ಚಂದ್ರ, ಇವರು ಅನುನಯದಿಂದ ಕೂಡಿರುವ ಹಾಗೆ ಭೂಧರಧೈರ್ಯನಾದ ಧನದ ಮಹಾರಾಜನು ಕಮಲಶ್ರೀಯೊಡನೆ ಸಂತಸದಿಂದ ಒಸೆದು ಕೂಡಿದ್ದ.

ಹಾಗಿರುವಲ್ಲಿ ಒಂದು ದಿನ ಜಿನಪಾದಪದ್ಮಮಧುಪನಾದ ಭೂಕಾಂತನು ಅಸಾರವಾದ ಈ ಸಂಸಾರದ ಬಗ್ಗೆ ತನ್ನಲ್ಲಿಯೇ ಯೋಚನೆ ಮಾಡಿದ: 'ಅನೇಕ ರಾಜರು ಹೆಂಡಿರ ವಶವಾಗಿ ದುರ್ಗತಿಯನ್ನು ಎಯ್ದಿದರು; ಹಾಗಾಗಿ ತಿಳಿದವರು ಹೆಂಡಿರ ಸ್ನೇಹಕ್ಕೆ ಆಸೆಪಡುವುದಿಲ್ಲ. ಜಿನಪಾದಸೇವೆಯನ್ನು ಬಿಟ್ಟು ಸದಾ ಕಾಲವೂ ಹೆಂಡಿರ ಹಿಂದೆ ಸುತ್ತುವವನು ಜನನಿಯನೊಲ್ಲದೆ ರಾಕ್ಷಸಿಯನ್ನು ಬಯಸಿದವನಂತೆ ವಿನಾಶವನ್ನು ಹೊಂದುತ್ತಾನೆ; ಜಿನಮುನಿಗಳ ಭಕ್ತಿಯನ್ನು ಬಿಟ್ಟು ಹೆಂಡಿರ ಸೆರಗಿಗೆ ಜೋತು ಬಿದ್ದವನು ಕನಕವನ್ನು ಬಿಸುಟು ಇದ್ದಿಲನ್ನು ಬಯಸುವ ಮರುಳನನ್ನು ಹೋಲುತ್ತಾನೆ. ಜಿನಭಕ್ತಿಯಿಲ್ಲದೆ ಹೆಂಡಿರಲ್ಲಿ ಅನಂಗವಶನಾಗಿರುವವನು ತನ್ನ ಶತ್ರುವಿನ ಮನೆಯನ್ನು ಸೇರಿದ ಗಾಂಪನಂತೆಯೇ ಸರಿ. ನಡುಮನೆಯಲ್ಲಿ ನಿಧಿಯನ್ನು ಕಂಡವನು ಅದನ್ನು ಅಗೆಯಲಾರದೆ ಬಡತನದಲ್ಲಿ ಕ್ಲೇಶ ಪಡುವಂತೆ, ನಿಡುಗಾಲ ದೊರೆಯದ ಸದ್ಧರ್ಮವು ಪುಣ್ಯದಿಂದ ದೊರಕಲು ಧರ್ಮದ ಕಾರಣದಿಂದ ಆಗುವ ಅಲ್ಪ ತೊಂದರೆಗಳಿಗೆ ತನುಮನಧನಗಳನ್ನು ಒಡ್ಡಲಾರದೆ ಹೆಂಡಿರು ರಾಜ್ಯ ಧನ ಇವುಗಳ ಅಲ್ಪ ಸುಖಕ್ಕೆ ಆಸೆಪಟ್ಟು ಮಹಾದುಃಖದಲ್ಲಿ ಮುಳುಗುವವರು ಎಗ್ಗನಲ್ಲವೇ?' ಎಂಬ ಅಲೋಚನಾ ಸರಣಿ ರಾಜನ ಮನಸ್ಸಿನಲ್ಲಿ ಸುಳಿಯಿತು.

ಕಮಲಶ್ರೀಯ ವಿರಹಾಗ್ನಿಯನ್ನು ಜಿನವಚನವೆಂಬ ನೀರಿನಿಂದ ನಂದಿಸಿ, ಹಲವು ತೆರನ ಧರ್ಮಶ್ರವಣದಿಂದ ಕಮಲಶ್ರೀಯನ್ನು ಸದ್ಧರ್ಮಕ್ಕೆ ಬರುವಂತೆ ಮಾಡಿ, ಸಂಘಶ್ರೀಯನ್ನೂ ಶ್ರಾವಕನನ್ನಾಗಿ ಮಾಡುವ ಆಲೋಚನೆಯಿಂದ ಹೀಗೆಂದುಕೊಂಡ: 'ಮುಳ್ಳಿರುವ ಮರಕ್ಕೆ ಹತ್ತಿದ ಬಳ್ಳಿಯು ಹಾಳಾಗುವಂತೆ ಕುಮಾರ್ಗಿಗಳ ಸಹವಾಸ ಮಾಡುವ ನರರ ಗುಣವು ಕೆಡುತ್ತದೆ. ಬಚ್ಚಲನ್ನು ಸೇರಿದ ನೀರು ಕೆಡುವ ಹಾಗೆ ಆಸೆಯಿಂದ ಕಡು ಕೆಟ್ಟವರಾದ ಮಾನವರ ಜೊತೆ ಸೇರಿದವರಿಗೆ ಸದ್ಗುಣ ನಾಶವಾಗುತ್ತದೆ. ಆದ್ದರಿಂದ ಹೆಂಡತಿಯನ್ನು ಪ್ರೀತಿಸುವವನು ಅತ್ತೆಯೊಡನೆ ಬೆಂಕಿಯನ್ನು ಸೇರಿದ ಎಂಬ ಗಾದೆಯನ್ನು ನಿಜ ಮಾಡಿ, ಕುಮತಪ್ರೀತನೂ ದುಷ್ಕರ್ಮಸಮೇತನೂ ಆದ ಸಂಘಶ್ರೀಯನ್ನು ಕಮಲಶ್ರೀಯ ಮೋಹದಿಂದಾಗಿ ಜೊತೆಗೂಡಿ ಸುಗತಿಯಿಂದ ದೂರನಾಗಿ ಸದ್ಧರ್ಮವನ್ನು ಬಿಟ್ಟು ದುರ್ಗತಿಯನ್ನು ಹೊಂದುವ ಕೆಲಸವನ್ನು ಮಾಡಲಾಗದು' ಎಂದುಕೊಂಡನು. ದಿನದಿನವೂ ಕ್ರಮವಾಗಿ ನಿರ್ವೃತಿಯ ಸರಿದಾರಿಯಾದ ಜಿನಾಗಮವನ್ನು ಹೀಗೆ ಹೇಳಿದ: "ಆಲೋಚನೆ

ಮಾಡಿ ಸದ್ಧರ್ಮವನ್ನು ಹಿಡಿಯದೆ ನಿಷ್ಕಾರಣವಾಗಿ ಅವಿಚಾರತೆಯಿಂದ ಸಾರಗೆಟ್ಟ ಧರ್ಮವನ್ನು ಹೊಂದುತ್ತಾರೆಯೇ? ವ್ರತದ ಆಚರಣೆ ಮಾಡಲಾಗದೆ ಸದ್ಧರ್ಮವನ್ನು ಬಿಟ್ಟು ಮಹಾ ಮೋಹದಿಂದ ಕುಧರ್ಮವನ್ನು ಒಲಿಯುವ ಮನುಜನು ಗಾಂಪನೇ ಸರಿ. ತನ್ನಲ್ಲಿ ವಿಚಾರ ಮಾಡಿ ಮನವರಿಕೆಯಾದ ಮತ್ತು ಮುಕ್ತಿಯನ್ನೀಯುವ ಧರ್ಮವನ್ನು ಸನ್ನುತಮತಿಯಾಗಿ ಅನುಸರಿಸದವನೇ ಗಾಂಪ. ಊರಿನ ದನಗಳು ಓಡುವುದನ್ನು ಕಂಡು ಕುರುಡು ದನವೂ ಓಡಿತು ಎಂಬಂತೆ ಜ್ಞಾನಹೀನರೂ ದುರ್ಗತಿಭಾಜನರೂ ಪಾಪಸಮೇತರೂ ಅವಿಚಾರಿಗಳೂ ಆದ ದುರ್ಮತಿಗಳನ್ನು ಕಂಡು ಬೆಪ್ಪುತನದಿಂದ ಕೊಲೆಯಲ್ಲಿ ಸೇರಿದ, ಹುಸಿಯಲ್ಲಿ ಬೆರೆತ, ಕಳವಿನಲ್ಲಿ ಕೂಡಿದ, ಪರಸ್ತ್ರೀಮೋಹದ, ಪರಿಗ್ರಹಾಪೇಕ್ಷೆಯಿಂದ ಮತಿಗೆಟ್ಟು ಮರುಗುವ ಕುತ್ಸಿತ ಧರ್ಮವನ್ನೂ, ರಾಗದ್ವೇಷಾದಿ ದೋಷಯುಕ್ತನೂ ವನಿತಾಸಕ್ತನೂ ರೌದ್ರಾತ್ಮನೂ ನಿರ್ದಯನೂ ಆದ ದೇವತೆಯನ್ನೂ; ಹೆಸರು ಉಪದೇಶ ನಿಯಮ ನಿಷ್ಠೆಗಳಿಲ್ಲದ ದುರಾಚಾರಸಹಿತವಾದ ವ್ರತವನ್ನೂ, ಅಭಿಮಾನಧೈರ್ಯಗಳಿಲ್ಲದ ಶಾಂತರೂಪಲ್ಲದ, ಕೋಪದಲ್ಲಿ ಕೂಡಿದ ಮಾಯಾವಿಯಾಗಿ ತನ್ನ ಮನಸ್ಸಿಗೆ ಬಂದಂತೆ ಮಾಡುವ ತಪಸ್ಸು; ಮತ್ತು ಕೊಂಡಾಡುವ, ಕೈಗೊಳ್ಳುವ, ಕೈಮುಗಿವ ಸುಗತಿಯನ್ನು ಪಡೆಯುವೆನೆಂಬ ಮಾನವನು ಕಟ್ಟೆಗ್ಗನಾಗುತ್ತಾನೆ. ಹೇಗೆಂದರೆ, ಅದು ಮುತ್ತುಗದೆಲೆಯನ್ನು ವೀಳೆಯದೆಲೆಯಂತೆ ಮೆದ್ದು ಹಲ್ಲಿನ ಚಟಕ್ಕೆ ಆಸೆಗೈಯುವವನನ್ನೂ, ಬೂದಿಯ ಬಿಳುಪನ್ನೂ ನುಣುಪನ್ನೂ ಕಂಡು ಅಕ್ಕಿಯ ಹಿಟ್ಟೆಂದು ಭಾವಿಸಿ ಕಾವಲಿಯಲ್ಲಿ ಹಾಕಿ ಔಗನ್ನು ಮಾಡುವೆನೆಂಬುವನನ್ನೂ ಹೋಲುತ್ತದೆ. ಹೊಲದ ಕಸವನ್ನೆಲ್ಲ ತೆಗೆದು ಹಾಕಿ, ಮನೆ ಮಡದಿಯರನ್ನು ಬಿಟ್ಟು ಒಂದೇ ಸಮನೆ ಕಾವಲಿದ್ದು, ಹೊಸ ಮಣ್ಣನ್ನು ಹಾಕಿ, ಚೆನ್ನಾಗಿ ಬಿತ್ತನೆ ಮಾಡಿ ನಿಧಾನವಾಗಿ ಕಾಳನ್ನು ಪಡೆಯುವ ಹಾಗೆ ಸದ್ಧರ್ಮದ ಕಷ್ಟಗಳನ್ನೆಲ್ಲ ಸಹಿಸಿಕೊಂಡು ಮುಕ್ತಿಸುಖವನ್ನು ಕೈಗೊಳ್ಳಬೇಕು. ನೀರಿನಲ್ಲಿನ ಮರದಂತೆ ತೇಲಿಕೊಂಡು ಹೋಗದೆ, ಪಾದರಸದಂತೆ ನೆಲೆಗೆಟ್ಟು ಹರಿದಾಡದೆ, ಸುವ್ರತಗಳನ್ನು ತಾಳಿ ಪರತ್ರೆಯ ಸುಖವನ್ನು ಪಡೆಯಬೇಕು. ಹದವನ್ನರಿತು ಬಿತ್ತನೆ ಮಾಡದ ಬೆಳೆಯೂ, ಹೆಸರೇ ತಿಳಿಯದವನಿಗೆ ಕೊಟ್ಟ ಸಾಲವೂ 'ಹಿಡಿದುದೇ ದೈವ ಮಾಡಿದುದೇ ಧರ್ಮ' ಎಂಬ ಧೋರಣೆಯುಳ್ಳ ಮಾನಿಸರು ಕೊನೆಗೆ ಮಹಾದುಃಖವನ್ನೇ ಪಡೆಯುತ್ತಾರೆ. ತೆಂಗಿನ ಕಾಯಿಯ ಕಾಠಿಣ್ಯವನ್ನು ಕಂಡು ಬರಿ ಮೂಸಿ ನೋಡಿ ಬಿಟ್ಟು ಬಿಡದೆ, ಬುದ್ಧಿವಂತನಾದವನು ನಿಧಾನವಾಗಿ ಎಲ್ಲವನ್ನೂ ಆಲೋಚಿಸಿ ಆಪ್ತನನ್ನು ಪಡೆಯಬೇಕು. ಹೀನೋದ್ಯೋಗಿಗಳ ಮಾತನ್ನು ಕೇಳದೆ ತನ್ನ ಪ್ರಯತ್ನಗಳಿಂದ ಕ್ರಿಯಾಶೀಲನಾದ ಭವ್ಯನು ತಿಳಿದು ಸದ್ದರ್ಶನವನ್ನು ಹಿಡಿಯಬೇಕು. ಹೋಮ ಮಾಡುವ ಬ್ರಾಹ್ಮಣನು ಬೆನ್ನ ಮೇಲೆ ನೊಣ ಕಚ್ಚಿದಾಗ ಅದನ್ನು ಸೈರಿಸಲಾರದೆ ಬೆನ್ನನ್ನು ಕೆರೆದುಕೊಂಡನೆಂದು, ಪಕ್ಕದಲ್ಲಿದ್ದವರು ಕೊಡದ ತುಪ್ಪದಲ್ಲಿ ಕೈಯನ್ನು ಅದ್ದಿಕೊಂಡು ತಮ್ಮ ತಮ್ಮ ಬೆನ್ನುಗಳನ್ನು ಕೆರೆದುಕೊಂಡರೆಂಬ ಮೂರ್ಖತನವನ್ನು ತೋರಿಸಿ ಬೇರೆಯವರು ಮಾಡಿದಂತೆ ಮಾಡದೆ ಮೂಢತ್ರಯವನ್ನು ಬಿಟ್ಟು ಮುಕ್ತಿಯನ್ನು ನೀಡುವ ಸದ್ಧರ್ಮವನ್ನೂ, ನಿರ್ದೋಷಿಯಾದ ದೈವವನ್ನೂ, ಮಹಾ ಪರೀಷಹಗಳನ್ನು ಗೆಲ್ಲಬಲ್ಲ ತಪವನ್ನೂ ಹೊಂದಬೇಕು" ಎಂದು ಧನದ ಮಹಾರಾಜನು ಆಪ್ತ ಧರ್ಮ ಮತ್ತು ತಪಸ್ಸುಗಳ ಸ್ವರೂಪವನ್ನು ವಿವರಿಸಿದನು. ಆದರೂ ಸಂಘಶ್ರೀ ಜಿನಧರ್ಮಕ್ಕೆ ಬರಲಿಲ್ಲ.

ಒಂದು ದಿನ ಪರಮ ತಪೋಧನರೂ, ದುರಿತಸಂಹರಣರೂ, ನಿಖಿಲಾಗಮಾನ್ವಿತರೂ, ಗುರುಪದಭಕ್ತರೂ, ಊರ್ಜಿತಯಶರೂ, ಜಿನಧರ್ಮ ಸರೋರುಹಸೂರ್ಯರೂ, ಉತ್ತಮಗುಣರೂ ಆದ ಇಂದ್ರಶೈಲಸದೃಶರಾದ ಚಾರಣ ಋಷಿಗಳು ಪೂರ್ವ ವಿದೇಹದಿಂದ ವೈಕ್ರಿಯಿಕಋದ್ಧಿಪ್ರಾಪ್ತರಾದ್ದರಿಂದ, ನೂರೈದು ಬಾಣಗಳಷ್ಟು ಎತ್ತರವಾದ ತಮ್ಮ ದೇಹವನ್ನು ಭರತಕ್ಷೇತ್ರದವರ ದೇಹಪ್ರಮಾಣದಷ್ಟಕ್ಕೆ ಇಳಿಕೆ ಮಾಡಿಕೊಂಡು, ಚಂದ್ರನಂತೆ ಹೊಳೆಯುವ ತಮ್ಮ ದೇಹಗಳಿಂದ ಕೂಡಿ ಅಂತರಿಕ್ಷದಲ್ಲಿ ಹೋಗುತ್ತಿದ್ದರು. ಅದನ್ನು ಸಾಮಂತರು ಹಾಗೂ ರಾಜಕುಮಾರರಿಂದ ಪರಿವೃತನಾಗಿದ್ದ ವಾತ್ಸಲ್ಯರತ್ನಾಕರನು ಕಂಡ. ಭಕ್ತಿಯ ಭರದಿಂದ ಅವನ ಮುಖಕಮಲವು ಅರಳಿ ರಾಜನು ಸಿಂಹಾಸನದಿಂದ ಮೇಲೆದ್ದ. ಚಾರಣ ಋಷಿಯರ ರೂಪ ಮತ್ತು ಗುಣಗಳನ್ನು ಕಂಡು ಅವನಿಗೆ ಸಂತಸ ಮಿಗಿಲಾಯಿತು. ಕೈಮುಗಿದು ದರಹಸಿತನಾಗಿ

ಮಂತ್ರಿಯ ಮುಖವನ್ನು ನೋಡಿ, "ಸದ್ಧರ್ಮದ ಮಹಿಮೆಯನ್ನು ನೋಡು" ಎಂದು ಅವನಿಗೆ ಮುನಿಯುಗಳವನ್ನು ತೋರಿಸಿದ. ತಪಸ್ಸಿನಿಂದಾಗುವ ಋದ್ಧಿಗಳನ್ನೂ, ದಾನದಿಂದಾಗುವ ಮಹಾ ಭೋಗಗಳನ್ನೂ, ಪೂಜೆಯಿಂದ ಉಂಟಾಗುವ ಪರಮೈಶ್ವರ್ಯಗಳನ್ನೂ, ಸಮ್ಯಕ್ತ್ವದಿಂದ ದೊರೆಯುವ ನಿರ್ವೃತಿಶ್ರೀಯನ್ನೂ ವಿವರಿಸಿದ. ಅದನ್ನು ಕೇಳಿ ಮತ್ತು ಧರ್ಮದ ಪ್ರತ್ಯಕ್ಷಫಲವನ್ನು ಕಣ್ಣಾರೆ ಕಂಡ ಸಂಘಶ್ರೀಯು ಸದ್ಧರ್ಮಾಭಿಮುಖನಾಗಿ, ಅವನ ಮನದ ಶಂಕೆಯು ನಿವಾರಣೆಯಾಯಿತು. ಮಿಥ್ಯಾತ್ವಕ್ಕೆ ಹೇಸಿದ ಅವನು ಶ್ರಾವಕವ್ರತಗಳನ್ನು ಸ್ವೀಕರಿಸಿ ದೃಢವ್ರತಿಯಾದ. ಇದರಿಂದ ಧನದ ಮಹಾರಾಜನಿಗೆ ತುಂಬ ಸಂತಸವುಂಟಾಯಿತು. ಧನದ ಭೂಪನಿಂದ ತನಗೆ ಅಮೂಲ್ಯವಾದ ಜಿನಧರ್ಮವು ದೊರೆಯಿತು ಎಂದು ಸಂಘಶ್ರೀಯು ಜಿನಪಾದಕಮಲಗಳನ್ನು ನಂಬಿ ಕುಮಾರ್ಗಾಲಾಪವನ್ನು ಬಿಟ್ಟು ಧನದ ಮಹಾರಾಜನಿಗೆ ಆಪ್ತಮಿತ್ರನಾದ.

ಹೀಗಿರಲು ಒಂದು ದಿವಸ ಅವನಿಗೆ ಅರಸನ ವಂಶಾವತಾರವನ್ನೂ, ರಾಜಧಾನಿಗೆ ಪ್ರತಿಪಾಲಪುರವೆಂದು ಹೆಸರು ಬರಲು ಕಾರಣವನ್ನೂ ತಿಳಿಯಬೇಕೆಂಬ ಆಸೆಯಾಯಿತು. ಓಲಗದಲ್ಲಿದ್ದ ಸಮ್ಯಕ್ತ್ವಚೂಡಾಮಣಿಗೆ ನಮಸ್ಕರಿಸಿ, ವಿನಯದಿಂದ ಕೈಮುಗಿದು ತನ್ನ ಮನಸ್ಸಿನ ಆಸೆಯನ್ನು ನಿವೇದಿಸಿಕೊಂಡ. ಅದನ್ನು ಕೇಳಿ ರಾಜನು ಬುದ್ಧಿಸಾಗರ ಎಂಬ ತನ್ನ ಮಂತ್ರಿಯ ಮುಖವನ್ನು ನೋಡಿದ. ಅರಸನ ಇಂಗಿತವನ್ನು ಅರಿತ ಮಂತ್ರಿಯು ರಾಜನ ವಂಶದ ಬಗ್ಗೆ ತನ್ನ ಮೊಳಗುವ ದನಿಯಿಂದ ವಿಸ್ತಾರವಾಗಿ ನಿರೂಪಿಸತೊಡಗಿದ.

ಶ್ರೀ ವಾಸುಪೂಜ್ಯಜಿನನ ತೀರ್ಥಕಾಲದಲ್ಲಿ ನಮ್ಮ ಪ್ರಭುವಿನ ವಂಶಜನಾದ ಯಶೋಧರ ಎಂಬುವ ಇಕ್ಷ್ವಾಕುವಂಶಪವಿತ್ರನಿದ್ದನು. ಅವನು ಅಂಗವಿಷಯವನ್ನು ಚಂಪಾಪುರದಿಂದ ಆಳುತ್ತಿದ್ದ. ಅವನ ಮಹಾರಾಣಿ ಸೌಂದರಿ ಮಹಾದೇವಿ, ಆ ದಂಪತಿಗಳಿಗೆ ಅನಂತವೀರ್ಯ ಹಾಗೂ ಪ್ರಿಯಬಲ ಎಂಬ ಇಬ್ಬರು ಮಕ್ಕಳು. ಅವರಾದರೋ ಅಂಗಜಸನ್ನಿಭರಾದ ರೂಪವುಳ್ಳವರು. ಆ ಸಂಸಾರದವರೆಲ್ಲ ಸಂತೊಷದಿಂದ ಬಾಳುತ್ತಿದ್ದರು. ಹೀಗಿರಲು ಒಂದು ದಿನ, ಇತರ ರಾಜರನ್ನು ತನ್ನ ಪರಾಕ್ರಮದಿಂದ ಗೆದ್ದು ಕಪ್ಪವನ್ನು ಪಡೆದು ಅವರಿಂದ ಬೆಸಕೈಸಿಕೊಳ್ಳದ ಅರಸನು ಚದುರಂಗದ ರಾಜ ಮಾತ್ರ; ಸಕಲ ಧರಿತ್ರಿಯ ರಾಜರಿಂದ ಎರಗಿಸಿಕೊಳ್ಳದ ಅರಸು ವಿರಸನೇ ಸರಿ; ಷಟ್ಖಂಡ ಭೂಮಂಡಲವನ್ನು ಕಣ್ಣೆದುರಿನ ನಿಧಿಯಂತೆ ವಶಪಡಿಸಿಕೊಂಡು, ಸದ್ಧರ್ಮವನ್ನು ತನ್ನ ಉರು ತೇಜದಿಂದ ಪೊರೆದು, ರಾಜ್ಯಸುಖದಲ್ಲಿ ಮೈಮರೆಯದೆ ತ್ರೈಲೋಕ್ಯವಂದ್ಯನಾಗಿ ಮೆರೆಯುವ ರಾಜನಾಗಬೇಡವೇ? ಆದ್ದರಿಂದ, ಸಪ್ತಸಮುದ್ರಪರಿವೃತವಾದ ವಸುಂಧರೆಯನ್ನು ಆಳಿ ಕೀರ್ತಿ ಗಳಿಸದ ಅರಸನು ಕಡಬರಸನೇ ಹೊರತು ನಿಜವಾದವನಲ್ಲ, ಎಂಬ ಆಲೋಚನೆ ಯಶೋಧರನ ಮನಸ್ಸಿನಲ್ಲಿ ಸುಳಿಯಿತು. ಶತ್ರು ರಾಜರನ್ನು ಅಲ್ಲಾಡಿಸಿ, ಪ್ರತಾಪಿಗಳಾದ ರಾಜರನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ಪಡೆಯಲೂ, ಭವ್ಯಜನಕ್ಕೆ ಆನಂದವನ್ನುಂಟು ಮಾಡಲೂ, ಸದ್ಧರ್ಮವನ್ನು ಬೆಳಗಲೂ, ಅವನು ವಿರೋಧಿ ರಾಜರ ಬೆನ್ನಟ್ಟಲು ನಿಶ್ಚಯಿಸಿದ.

ತನ್ನ ಮಂತ್ರಿವರ್ಗವನ್ನು ಕರೆದು ಮನಸ್ಸಿನಲ್ಲಿದ್ದುದನ್ನು ಅವರಿಗೆ ತಿಳಿಸಿದ; ಅಲ್ಲದೆ ಸಮಸ್ತ ಮಕುಟಬದ್ಧರನ್ನೂ ಬರಹೇಳಿದ. ಅವರೆಲ್ಲ ಸೇರಿದ ಮೇಲೆ ಮೂರು ದಿನಗಳ ಕಾಲ ಎಡೆಬಿಡದೆ ಸಮುದ್ರಘೋಷದ ಹಾಗೆ ತೂರ್ಯರವವುಂಟಾಗಲು ಜಿನಪೂಜೆಯನ್ನೂ ಜಿನಾಭಿಷೇಕವನ್ನೂ ಮಾಡಿದ. ಆನಂತರ ವೈರಿಗಳು ಬೆದರುವಂತೆ ಯಶೋಧರ ಭೂಪನು ಪ್ರಯಾಣಭೇರಿಯನ್ನು ಹೊಯ್ಸಿದ. ದಕ್ಷಿಣ ದಿಕ್ಕಿಗೆ ನಡೆದು ಮಾಳವ ಮಗಧ ಕರ್ಣಾಟ ಗೊಲ್ಲ ಕರಹಾಟ ಗೌಳ ಲಾಟ ಚೋಳ ಚೇರ ಪಾಂಡ್ಯ ಕಳಿಂಗ ಮುಂತಾದ ದೇಶಗಳನ್ನು ಗೆದ್ದು ಆ ರಾಜರಿಂದ ಕಪ್ಪವನ್ನು ಪಡೆದು ಅವರನ್ನು ತನಗೆ ಆಶ್ರಿತರನ್ನಾಗಿಸಿಕೊಂಡು ವೆಂಗಿಮಂಡಲಕ್ಕೆ ಬಂದ. ಆ ದೇಶದ ಚೆಲುವಿಗೆ ಮನಸೋತು ತಾನು ಇರುವುದಕ್ಕೆ ಈ ಜಾಗವೇ ತಕ್ಕುದೆಂದು ನಿಶ್ಚೈಸಿದ. ಸಮಸ್ತ ಧಾತ್ರೀವಲಯವನ್ನು ತಾನೊಬ್ಬನೇ ಪ್ರತಿಪಾಲಿಸಿದವನಾದ್ದರಿಂದ, ಲೋಕಕ್ಕೆಲ್ಲ ತನ್ನ ಅಳವನ್ನು ತೋರಿಸುವಂತೆ ದೊಡ್ಡದಾದ ನಗರವೊಂದನ್ನು ನಿರ್ಮಿಸಿ ಅದಕ್ಕೆ ಪ್ರತಿಪಾಲಪುರ ಎಂದು ಹೆಸರಿಟ್ಟ. ಸುರುಚಿರ ರತ್ನಾಳಿಗಳಿಂದ ಸುರರ ವಿಮಾನಗಳ ರೀತಿಯಲ್ಲಿ ಜಿನಭವನಗಳನ್ನು ಆ ಗುಣಕರಂಡಕನು ಮಾಡಿಸಿದ. ಇದರಿಂದ

ಅವನ ಧರ್ಮಪ್ರೀತಿಯು ವ್ಯಕ್ತವಾಯಿತು. ಜಿನಪತಿಯೇ ದೇವರು, ಜಿನಮುನಿಗಳೇ ಸದ್ಗುರುಗಳು, ಜಿನಭಕ್ತನೇ ನಂಟ ಎಂಬ ಆ ರಾಜನ ಸಮ್ಯಕ್ತ್ವದ ಅಳವನ್ನು ಏನೆಂದು ವರ್ಣಿಸುವುದು? ದೇವತಾ ವಿನೋದದಲ್ಲಿ, ಜಿನಪೂಜೆಯಲ್ಲಿ, ಧಾರಿಣೀಸ್ತುತರಾದ ಮುನಿನಾಥರ ಸೇವೆಯಲ್ಲಿ, ಭವ್ಯಸಂಕುಲದ ವಿನೋದದಲ್ಲಿ, ಪದಪದಾರ್ಥ ವಿಚಾರಣೆಯಲ್ಲಿ, ವಿದ್ವತ್‌ಗೋಷ್ಠಿಯಲ್ಲಿ, ರಾಜರ ಓಲಗದಲ್ಲಿ ತನ್ನನ್ನು ತೊಡಗಿಸಿಕೊಂಡು ಯಶೋಧರ ಮಹಾರಾಜನು ಕಾಲ ಕಳೆಯುತ್ತಿದ್ದ.

ಹೀಗಿರಲು ಒಂದು ದಿವಸ ಅವನು ತನ್ನ ಅಂತಃಪುರ ಸ್ತ್ರೀಯರೊಡನೆ ವನಕ್ರೀಡೆಗೆಂದು ಹೊರಟ. ಕಾಡಿನ ಮರಗಳು ರಾಜನ ಸೈನ್ಯವನ್ನು ಇದಿರುಗೊಳ್ಳಲು ಮನ್ಮಥನ ಬೀಡಿನ ಕೆಂಪಾದ ಗುಡಿಗಳಂತೆ ಸಾಲುಗಟ್ಟಿದ ಚಿಗುರಿನಿಂದಲೂ, ಮಿಡಿಗಳಿಂದಲೂ ಕೂಡಿ ಶೋಭಾಯಮಾನದಿಂದಿದ್ದವು. ಅವುಗಳನ್ನು ಅಚ್ಚರಿಯಿಂದ ನೋಡುತ್ತ ಕಾಡಿನೊಳಗೆ ಹೊಕ್ಕು ನಿಡುಗಾಲ ಜಲಕ್ರೀಡೆಯಲ್ಲಿ ನಿರತನಾಗಿದ್ದ. ಆನಂತರ ಶೃಂಗಾರಗೊಂಡು ಗಂಧಸಿಂಧುರವನ್ನೇರಿ ದಿವಿಜೇಂದ್ರ ಲೀಲೆಯಿಂದ ಪುರಕ್ಕೆ ಮರಳಿದ. ದಾರಿಯಲ್ಲಿ ರಾಜಪತ್ನಿಯರೂ ವಿಲಾಸಿನಿಯರೂ ವಿನೋದದಿಂದ ಕಿತ್ತು ಬರಡಾದ ಮಾವಿನ ಮರದ ಕೊಂಬೆಗಳನ್ನು ಕಂಡು ಬೆರಗಾದ. 'ಚಿಗುರಿನಿಂದ ಶೋಭಿಸುವ ಮಾವಿನ ಮರಗಳು ನೋಡನೋಡು ತ್ತಿರುವಂತೆಯೇ ನನ್ನ ಸೈನ್ಯದಿಂದಾಗಿ ಹಾಳಾದುವಲ್ಲ! ಮಾನವರ ಪೆಂಪೂ, ಐಸಿರಿಯೂ, ಆಯುಷ್ಯವೂ, ಬಲವೂ, ಹೆಂಡಿರ ಭೋಗವೂ, ಮಹಿಮೆಯೂ, ಸೌಭಾಗ್ಯವೂ ಈ ರೀತಿಯಲ್ಲಿಯೇ ಇದ್ದಕ್ಕಿದ್ದಂತೆ ನಾಶವಾಗುತ್ತದೆ; ಇದರಲ್ಲಿ ಸಂದೇಹವಿಲ್ಲ' ಎಂಬ ಚಿಂತನೆ ಅವನ ಮನದಲ್ಲಿ ಮೂಡಿತು. 'ಭೂತದ ಮಾತನ್ನು ನಂಬಿ ಕಾಳಗಕ್ಕೆ ಹೋಗುವವನು, ಕಳ್ಳನೊಡಗೂಡಿ ವ್ಯವಹಾರದಲ್ಲಿ ತೊಡಗುವವನು, ಧೂರ್ತನನ್ನು ನಂಬಿ ಬಾವಿಯಲ್ಲಿ ಬೀಳುವವನು ಮತ್ತು ಪಂಚೇಂದ್ರಿಯಗಳ ವಶವಾಗಿ ಸಂಸಾರದ ಅಲ್ಪಭೋಗವನ್ನೂ ಪತ್ನೀಧರ್ಮವನ್ನೂ ಬಿಟ್ಟು ನಡೆವವನೂ ದುಃಖಕ್ಕೂ ದುರ್ಯಶಕ್ಕೂ ಭಾಜನನನಾಗುತ್ತಾನೆ. ಇಂದ್ರಿಯಸುಖವನ್ನು ಹಿಡಿದು ಮೋಕ್ಷಕ್ಕೆ ಹೋಗುವೆನೆಂಬುವವನು ಮಿಂಚಿನ ಬೆಳಕನ್ನು ನಂಬಿ ದಾರಿ ನಡೆಯುವವನಂತೆ ಎಗ್ಗನೇ ಸರಿ. ಆದ್ದರಿಂದ ಜ್ಞಾನಿಯಾದವನು ಸಂಸಾರವನ್ನು ನಂಬಿ ಕೆಡದೆ ಅದನ್ನು ತೊರೆದು ಸದಾಚಾರದಿಂದ ಬದುಕಬೇಡವೇ? ಸಂಸಾರದ ಅಳಿವನ್ನು ಒಲ್ಲದ ಮನುಷ್ಯನು ನಶ್ವರವಾದ ಈ ದೇಹವನ್ನು ತಡಮಾಡದೆ ತಪಸ್ಸಿನಲ್ಲಿ ತೊಡಗಿಸಿ ಕೈವಲ್ಯಶ್ರೀವಲ್ಲಭನಾಗಬೇಡವೇ?' ಹೀಗೆಂದು ಆಲೋಚಿಸಿ ತನ್ನ ಅರಸಿಯರ ಮುಖಗಳನ್ನು ರಾಜನು ನೋಡಿದ. ನಮ್ಮನ್ನು ಬಯಸಿದರೆ ನಿಮ್ಮ ಆತ್ಮಕಾರ್ಯಕ್ಕೆ ಎಡರೇ ಹೊರತು ಒಳಿತಲ್ಲವೆಂಬುದನ್ನು ಸಾರುವಂತೆ ಅವರ ಕೂದಲು ಕೊಂಕಿತ್ತು; ನಮ್ಮನ್ನು ಬಯಸಿದರೆ ಯಮನ ಸುತ್ತು ಬಲೆಯಲ್ಲಿ ಬೀಳುವಿರೆಂಬುದನ್ನು ಸೂಚಿಸುವಂತೆ ಅವರ ಡಾಬುಗಳು ಕಾಣಿಸಿದವು; ನಮ್ಮನ್ನು ಅಪೇಕ್ಷಿಸಿದರೆ ಕರ್ಮರಾಜನು ತನ್ನ ಹಿಡಿಯಿಂದ ಅಲ್ಲಾಡಿಸದೇ ಇರನು ಎಂಬುದನ್ನು ಅರುಹುವಂತೆ ಅವರ ಅಲ್ಲಾಡುವ ದುಕೂಲಗಳಿದ್ದವು; ನಮ್ಮನ್ನು ಒಲಿದರೆ ಯಮನಿಂದ ತೊಂದರೆಗೆ ಸಿಲುಕುವಿರೆಂದು ತೋರಿಸುವಂತೆ ಅವರ ತೊಡೆಯಲ್ಲಿ ಸೀರೆಯ ನಿರಿಗೆಗಳು ಸಿಕ್ಕಿದ್ದವು; ನಮಗೆ ಆಸೆಪಟ್ಟರೆ ನಾರಕಿಗಳ ಕಾಲ ತುಳಿತಕ್ಕೆ ಒಳಗಾಗುವಿರೆಂಬುದನ್ನು ತಿಳಿಸುವಂತೆ ಅವರ ಚರಣಗಳಿದ್ದವು; ನಮಗೆ ಮನಸ್ಸು ಕೊಟ್ಟರೆ ಸಂಸಾರದ ಕೈಗೆ ಒಳಗಾಗುವಿರೆಂದು ಹೇಳುವಂತೆ ಅವರ ತೋಳುಗಳಿದ್ದವು; ನಮ್ಮನ್ನು ಮೋಹಿಸಿದರೆ ಬುದ್ಧಿಹೀನರಾಗುವಿರಿ ಎಂದು ಹೇಳುವಂತೆ ಅವರ ಮುಡಿಗಳು ಕಾಣಿಸಿದವು; ನಮಗೆ ಆಸೆಪಟ್ಟರೆ ಸುಖದಲ್ಲಿ ನೆಲಸದೆ ಅಲೆದಾಡುವಿರೆಂದು ಹೇಳುವಂತೆ ಅವರ ಕಣ್ಣುಗಳಿದ್ದವು. ಇವನ್ನೆಲ್ಲ ನೋಡಿದ ರಾಜನಿಗೆ ವೈರಾಗ್ಯ ಬಲಿಯಿತು. ಬೇರೆಯವರ ಮದುವೆಯಲ್ಲಿ ಹೊಸ ನಂಟರನ್ನು ಮಾಡಿಕೊಳ್ಳದವನೂ, ಶಾಶ್ವತವಲ್ಲದ ಶರೀರವನ್ನು ಹಾಗೂ ಧನವನ್ನು ಸವೆಸಿ ಶಾಶ್ವತವಾದ ಸುಖವನ್ನು ಪಡೆಯದವನೂ ಬುದ್ಧವಂತನಲ್ಲ ಎಂದು ಅವನಿಗನ್ನಿಸಿ, ಸಂಸಾರವೆಂಬ ಬಳ್ಳಿಯನ್ನು ಬೇರುಸಮೇತ ಕಿತ್ತು ಬಿಸಾಡುವ ಕಾರ್ಯವನ್ನು ನೆನೆದು ರಾಜಮಂದಿರಕ್ಕೆ ಬಂದ.

ಮಾರನೆಯ ದಿನ ಅನಂತವೀರ್ಯ ಮೊದಲಾದ ತನ್ನ ಕುವರರನ್ನು ಬರಮಾಡಿಕೊಂಡು ಮುಂದೆ ಕುಳ್ಳಿರಿಸಿಕೊಂಡ ಯಶೋಧರ ಮಹಾರಾಜನು ಹೀಗೆಂದು ನುಡಿದ: "ಸಕಲ ಭೂಮಂಡಲವನ್ನು ಭುಜಬಲದಿಂದ ಸಂಪಾದಿಸಿ, ವೀರತ್ವದಿಂದ

ಎಲ್ಲ ಭೂಪಾಲರು ಕೈಗಳನ್ನು ಮುಗಿದುಕೊಂಡು ಸ್ತುತಿಸುತ್ತ ಸೇವಕರಾಗಿರುವಂತೆ ಮಾಡಿಕೊಂಡು, ಕೀರ್ತಿಯು ಸಮುದ್ರಪರ್ಯಂತ ಹರಡಿರಲು, ಇಲ್ಲಿಯವರೆಗೆ ಎಲ್ಲರಿಂದ ಕಪ್ಪವನ್ನು ಪಡೆದೆ. ಇನ್ನು ನಾನು ಆಳಲಾರೆ; ಮುಕ್ತಿಶ್ರೀಯನ್ನು ನೀಡುವ ಜಿನೇಂದ್ರ ಪಾದಪದ್ಮಗಳನ್ನು ನಾನಿನ್ನು ಶರಣುವೊಗಬೇಕಾಗಿದೆ. ಆದ್ದರಿಂದ ನೀವು ಈ ರಾಜ್ಯದ ಹೊರೆಯನ್ನು ತೆಗೆದುಕೊಳ್ಳಿ." ಅದನ್ನು ಕೇಳಿ ಅನಂತವೀರ್ಯನು, "ದೇವ, ನಾನು ದಡ್ಡನಲ್ಲ; ತಾವು ಕೈಗೊಳ್ಳುವ ತಪಸ್ಸೇ ನನಗೂ ಸಾಕು. ಆದ್ದರಿಂದ ನಾನು ಮುಕ್ತಿಶ್ರೀಯನ್ನು ಬಿಟ್ಟು ಮಹೀವನಿತೆಗೆ ಸೋಲುವ ಗಾಂಪನಲ್ಲ. ಈ ಭವದ ಸುಖವೆಂದರೆ ನನಗೆ ಮಹಾ ಭಯ; ಏನು ಮಾಡಿದರೂ ನನಗದು ಬೇಡ. ರಾಜ್ಯದ ಭಾರವನ್ನು ಹೊತ್ತು ನಾನು ಸುಖವನ್ನು ಹಾಳುಮಾಡಿಕೊಳ್ಳಲಾರೆ. ನನಗೂ ಜಿನದೀಕ್ಷೆಯನ್ನು ದಯಗೆಯ್ಯಿರಿ, ಅಷ್ಟು ಸಾಕು" ಎಂದ. ಮಗನ ಮಾತನ್ನು ಕೇಳಿ ರಾಜನಿಗೆ ಮಹದಾನಂದವಾಯಿತು; ಇವನು ಸಂಸಾರಭೀತ, ರಾಜ್ಯದ ಮೇಲೆ ಇವನಿಗೆ ಮೋಹವಿಲ್ಲ; ಆದ್ದರಿಂದ ಇವನ ತಮ್ಮನಿಗೆ ಈ ರಾಜ್ಯದ ಹೊಣೆಯನ್ನು ಹೊರಿಸುತ್ತೇನೆ ಎಂದುಕೊಂಡ. ಆನಂತರ ಯಶೋಧರ ಮಹಾರಾಜನು ಶ್ರೀಧರಕುಮಾರನ ಮುಖವನ್ನು ನೋಡಿ, ವೆಂಗಿಮಂಡಲವೇ ಮೊದಲಾದ ಸಮುದ್ರಮುದ್ರಿತ ಭೂಮಂಡಲವನ್ನೆಲ್ಲ ವಹಿಸಿಕೊಂಡು ರಾಜ್ಯಲಕ್ಷ್ಮೀಮನೋಹರ ನಾಗಿರುವಂತೆ ಅವನನ್ನು ಕೇಳಿಕೊಂಡ. ಅದಕ್ಕೆ ಆತನು ಮುಗುಳ್ನಗುತ್ತ, "ತಮ್ಮಂತಹವರು ಭರಿಸಿದ ಈ ರಾಜ್ಯದ ಹೊರೆಯನ್ನು ನಮ್ಮಂತಹವರು ತಮ್ಮ ಅಳವನ್ನು ತಿಳಿಯದೆ ಗಾವಿಲತನದಿಂದ ಹೊತ್ತುಕೊಳ್ಳಲಾದೀತೇ? ತಾವು ನನ್ನ ಮೇಲೆ ಕೃಪೆ ಮಾಡುವಿರಾದರೆ ಈ ಕ್ಷಣವೇ ಜಿನರಾಜದೀಕ್ಷೆಯನ್ನು ನೀಡಿರಿ, ನನಗೆ ಬೇರಾವ ನಾಡಾಗಲೀ ಬೀಡಾಗಲೀ ಬೇಡ" ಎಂದು ಬೇಡಿಕೊಂಡ. ನೆಲ್ಲಕ್ಕಿಯ ಅನ್ನವನ್ನೂ ತಿಳಿದುಪ್ಪವನ್ನು ಬಿಟ್ಟು ನುಚ್ಚಿನಿಂದ ಮಾಡಿದ ಅನ್ನವನ್ನೂ ಎಣ್ಣೆಯನ್ನೂ ಉಣ್ಣುವವನೂ; ಬಾಳೆಯ ಹಣ್ಣನ್ನೂ ಖಂಡಸಕ್ಕರೆಯನ್ನೂ ಬಿಟ್ಟು ಎರೆಯ ಮಣ್ಣನ್ನು ತಿನ್ನುವವನೂ; ಅಮೂಲ್ಯವಾದ ಅಣುವ್ರತಗಳನ್ನು ಉದಾಸೀನ ಮಾಡಿ ಸಂಸಾರದ ಅಲ್ಪಸುಖವನ್ನು ಬಯಸುವವನೂ ಮರುಳರಲ್ಲದೆ ಚದುರರಲ್ಲ. ಆದ್ದರಿಂದ ಕೈವಲ್ಯಶ್ರೀಯನ್ನು ನೀಡುವ ಜಿನದೀಕ್ಷೆಯನ್ನು ಕೊಡಿರಿ, ದಯವಿಟ್ಟು ರಾಜ್ಯಭಾರವನ್ನು ಹೊರಿಸಬೇಡಿ. ನನಗೆ ಅವನಿಯ ಮೇಲೆ ಎಳ್ಳಷ್ಟೂ, ಸಾಸಿವೆಯಷ್ಟೂ ಮೋಹವಿಲ್ಲ; ಅದರ ಬದಲು ನನಗೆ ಜಿನದೀಕ್ಷೆಯಲ್ಲೇ ಅಧಿಕ ಮೋಹ" ಎಂದು ನಿಶ್ಚಿತವಾಗಿ ನುಡಿದ. ಯಶೋಧರ ಮಹಾರಾಜನಿಗೆ ಅವನ ಮನಸ್ಸಿನ ನಿರ್ಮಲತೆಯು ಅರಿವಾಯಿತು. ಆದ್ದರಿಂದ ಬೇರೆ ಮಾತನಾಡದೆ ಪ್ರಿಯಬಂಧುಕುಮಾರನಿಗೆ ಪಟ್ಟ ಕಟ್ಟಿ ಧರಾಭಾರವನ್ನು ವಹಿಸಿ, ಅನಂತವೀರ್ಯ ಕುಮಾರ ಹಾಗೂ ಶ್ರೀಧರಕುಮಾರರ ಜೊತೆ ಊರಿಂದ ಹೊರಟ.

ಅವರೆಲ್ಲ ವಿಶ್ವಸೇನರು ಎಂಬ ಗುರುಗಳಲ್ಲಿ ಜಿನದೀಕ್ಷೆಯನ್ನು ಕೈಕೊಂಡು ಸಕಲಾಗಮಗಳನ್ನು ಅಭ್ಯಾಸ ಮಾಡಿದರು. ಗುರುಪದಸೇವೆಯನ್ನು ಮಾಡುತ್ತ, ನಾನಾ ಪರೀಷಹಗಳ ಬಾಧೆಯನ್ನು ಸಹಿಸಿ ಪುರದ ಗುಣಾಢ್ಯರೆಲ್ಲ ತಮ್ಮನ್ನು ಬಣ್ಣಿಸುವಂತೆ ಉತ್ತರೋತ್ತರ ತಪಸ್ಸನ್ನು ಆ ಮೂವರೂ ಸಾಧಿಸಿದರು. ಹಿಂದಿನ ಸಿರಿಯನ್ನಾಗಲೀ, ವೈಭವವನ್ನಾಗಲೀ ನೆನಸಿಕೊಂಡು ಹಂಬಲಿಸದೆ ಸಚ್ಚರಿತ್ರರಿಗೆ ಸಮಾನವೆನ್ನುವಂತೆ ತಪವನ್ನಾಚರಿಸಿದರು; ಶುದ್ಧ ನಡತೆಯಲ್ಲಿ ಪ್ರಸಿದ್ಧರಾದರು. ಬೇರೆಯವರ ಗೌರವಕ್ಕೆ ಎಳಸದೆ, ಜಿನೇಂದ್ರವಚನಕ್ಕೆ ಅನುಗುಣವಾಗಿ ಸುಖದ ಬಗ್ಗೆ ಚಿಂತಿಸದೆ, ನಿರ್ವೃತಿಶ್ರೀಯ ಕೂಟಕ್ಕಾಗಿ ತೀವ್ರ ತಪದಲ್ಲಿ ತೊಡಗಿದರು. ಪಾಚಿಗಟ್ಟಿದ ಕಲ್ಲನ್ನು ಮೆಟ್ಟಿದಂತೆ ಸನ್ಮಾರ್ಗವನ್ನು ಮೀರದೆ, ತ್ರಿದಂಡರಹಿತರೂ, ತ್ರಿಶಲ್ಯವರ್ಜಿತರೂ, ಚತುಷ್ಕಷಾಯದೂರರೂ, ತ್ರಯೋದಶವಿಧಚಾರಿತ್ರಸಂಪನ್ನರೂ, ಪಂಚಾಚಾರಯುಕ್ತರೂ, ದಶಧರ್ಮಧರರೂ ಆದರು. ಗುರುಗಳ ಆಜ್ಞಾನುಗುಣವಾಗಿ ಅವರಿಂದ ಬೇರೆ ಹೊರಟು ವಿಹಾರಿಸುತ್ತ ಬಂದು ಜಟಾಶಿಖರವೆಂಬ ಪರ್ವತಕ್ಕೆ ಬಂದರು. ಅಲ್ಲಿ ಯಶೋಧರ ಭಟ್ಟಾರಕರೂ ಅನಂತವೀರ್ಯಮುನಿಪುಂಗವರೂ ಅಷ್ಟಕರ್ಮವನ್ನು ನಾಶಗೊಳಿಸಿ ಪರಮಶ್ರೀಮನಃಪ್ರಿಯರಾದರು. ಅಕಲಂಕರೆನಿಸಿದ ಶ್ರೀಧರಾಚಾರ್ಯರು ಆ ಗಿರಿಯಲ್ಲಿ ಉಗ್ರೋಗ್ರ ತಪಸ್ಸಿನಲ್ಲಿ ಉದ್ಯುಕ್ತರಾದರು.

ಇತ್ತ, ಪ್ರತಿಪಾಲಪುರದಲ್ಲಿದ್ದುಕೊಂಡು ಉದ್ಧತವೈರಿದರ್ಪಧಳನನಾದ ಪ್ರಿಯಬಲಕುಮಾರನು ಸಮಸ್ತ ಭೂಮಂಡಲವನ್ನು ಮಹೋನ್ನತಿಯಿಂದ ಪಾಲಿಸುತ್ತ ಸುಖಸಂಕಥಾವಿನೋದದಲ್ಲಿದ್ದ. ಒಂದು ದಿನ ವನಪಾಲಕನೊಬ್ಬನು ಬಂದು ಜಿನಸಮಯವಾರ್ಧಿವರ್ಧನಚಂದ್ರನನ್ನು ಕಂಡು ವಂದಿಸಿ ನಾನಾ ವಿಧವಾದ ಹೂಗಳನ್ನು ಕಾಣಿಕೆಯಾಗಿತ್ತು, ವನಕ್ಕೆ ವಸಂತವಲ್ಲಭನ ಆಗಮನವಾಗಿರುವುದನ್ನು ಬಿನ್ನವಿಸಿದ. ಕಾಡಿನಲ್ಲಿ ದುಂಬಿಗಳ ಗಾಯನ, ಕೋಗಿಲೆಗಳ ನಿಸ್ವನ, ನವಿಲುಗಳ ರವಗಳು ಹೊಮ್ಮುತ್ತಿದೆ; ಮಾವಿನ ಮರಗಳು ಕೆಂದಳಿರ ಗೊಂಚಲುಗಳಿಂದ ಕಡು ರಯ್ಯವಾಗಿವೆ; ತಾವರೆಗಳು ಕೊಳಗಳಲ್ಲಿ ಅರಳಿವೆ; ಇವರ ಜೊತೆಗೆ ಉಜ್ವಲವಾಗಿ ಚಂದ್ರನು ಹೊಳೆಯುತ್ತಿದ್ದಾನೆ. ಆದ್ದರಿಂದ ಕಾಲವನ್ನು ನೂಕದೆ ವನವಿಹಾರಕ್ಕೆ ದಯಮಾಡಿಸಬೇಕೆಂದು ವಿನಂತಿಸಿಕೊಂಡ. ಅವನ ಮಾತಿಗೆ ಮೆಚ್ಚಿದ ಪ್ರಿಯಬಲಕುಮಾರನು ಅವನಿಗೆ ಪಸಾಯನವನ್ನಿತ್ತು ಸಂತಸಪಡಿಸಿ ಕಳಿಸಿಕೊಟ್ಟ.

ಮಾರನೆಯ ದಿನವೇ ಉತ್ಸಾಹಭೇರಿಯನ್ನು ಹೊಯ್ಸಿ ಅಂತಃಪುರದ ಕಾಮಿನೀನಿಕರವನ್ನೊಡಗೂಡಿ ಅಮರೇಂದ್ರಲೀಲೆಯಿಂದ ವನವಿಹಾರಕ್ಕೆ ಹೊರಟ. ರಾಜನು ಬರುವನೆಂದು ತೋರಣವನ್ನು ಕಟ್ಟಿದ ಹಾಗಿದ್ದ ಮಾಧವೀಲತೆಗಳನ್ನೂ, ವನದೇವತೆಯರು ಮಂಗಳಗೀತವನ್ನು ಹಾಡುವಂತೆ ಮೃದುನಿನಾದವನ್ನು ಮಾಡುವ ಮರಿದುಂಬಿಗಳನ್ನೂ, ತನ್ನ ಪಡೆಯನ್ನು ಇದಿರುಗೊಳ್ಳುವಂತಿದ್ದ ಸರೋವರಗಳನ್ನೂ, ತನ್ನ ಸೈನ್ಯಕ್ಕೆಲ್ಲ ವಸಂತರಾಜನು ಔತಣವನ್ನು ಏರ್ಪಡಿಸಿದಂತೆ ಕಾಣುತ್ತಿದ್ದ ತನಿರಸದಿಂದ ಕೂಡಿದ ಹಣ್ಣುಗಳ ಭಾರದಿಂದ ಜೋತುಬಿದ್ದಿದ್ದ ಮೈಂದವಾಳೆಗಳನ್ನೂ, ತನ್ನ ಬರವಿಕೆಗೆ ಹೂ ಬಲಿಯನ್ನು ನೀಡುವಂತೆ ನೆಲದಲ್ಲಿ ಹರಡಿದ್ದ ಸುರಗಿ ನಾಗಸಂಪಗೆ ಪಾದರಿ ಹೂಗಳನ್ನೂ, ತನ್ನ ಸೈನ್ಯಕ್ಕೆಂದು ಕಾಮದೇವನು ರಚಿಸಿದ ಬಿಡಾರಗಳಂತಿದ್ದ ಬಳ್ಳಿಮನೆಗಳನ್ನೂ ನೋಡುತ್ತ ಎಲ್ಲರೂ ನಂದನವನದೊಳಕ್ಕೆ ಪ್ರವೇಶಿಸಿದರು. ಅವರೆಲ್ಲ ತಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ವನದಲ್ಲಿ ನಿಡುಗಾಲ ಆಟವಾಡಿದರು. ಅಲ್ಲಿಂದ ಹೊರಡಲು ಯಾರಿಗೂ ಮನಸ್ಸಿಲ್ಲ; ಹಾಗಾಗಿ ಮತ್ತಷ್ಟು ಕಾಲ ವಿನೋದದಿಂದ ತಿರುಗಾಡಿದರು. ಆನಂತರ ಒಂದು ಲತಾಮಂಟಪವನ್ನು ಹೊಕ್ಕು ಕರ್ಪೂರದ ಜಗುಲಿಯ ಮೇಲೆ ಕಂಕೆಲ್ಲಿಯ ಚಿಗುರಿನಿಂದ ಮಾಡಿದ ಹಾಸಿನ ಮೇಲೆ ರಾಜನು ಸುಖದಿಂದ ಮಲಗಿದ್ದ. ಆಗ ಒಂದು ವಿಷಸರ್ಪವು ರಾಜನ ಉಂಗುಟವನ್ನು ಕಪ್ಪೆಯೆಂದು ಭಾವಿಸಿ ಕಚ್ಚಿಬಿಟ್ಟಿತು. ಬೆರಗುಗೊಂಡರೂ ರಾಜನು ತನ್ನ ದೇಹದ ಬಗ್ಗೆ ಯೋಚಿಸದೆ ರಾಜ್ಯಲಕ್ಷ್ಮಿಯನ್ನು ನೆನೆದು ಜಿನೇಂದ್ರನ ಪಾದವನ್ನು ಸ್ಮರಿಸುತ್ತಲೇ ಸ್ವರ್ಗಸ್ಥನಾದ.

ಇತ್ತ ಇಂದ್ರಪ್ರಭನೆಂಬ ಹೆಗ್ಗಡೆಯು ಪ್ರಿಯಬಲಕುಮಾರನು ಪರಲೋಕ ಪ್ರಾಪ್ತನಾದುದನ್ನು ತಿಳಿದು ಮನಸ್ಸಿನಲ್ಲಿಯೇ ಮಮ್ಮಲ ಮರುಗಿದ. ಸಂತತಿಯಿಲ್ಲದ ರಾಜ್ಯವು ಹಿಂದೆ ಬಿತ್ತು; ವೈರಿರಾಜರುಗಳಿಗೆ ಅವಕಾಶವನ್ನುಂಟುಮಾಡಿತು; ವಿಧಿ ಇನ್ನೂ ಏನನ್ನು ಬರೆದಿರುವುದೋ ಎಂಬ ಚಿಂತೆಯಿಂದ ಬೆದಬೆದ ಬೆಂದು ಹೋದ. ಉಂಟಾಗಬಹುದಾದ ತೊಂದರೆಯನ್ನು ನಿವಾರಿಸಲು ಹೆಗ್ಗಡೆಯು ರಾಜನ ಸಾವಿನ ವಿಷಯವನ್ನು ಯಾರಿಗೂ ಹೇಳಲಿಲ್ಲ. ರಾಜನು ವನಕ್ರೀಡೆಯಿಂದ ಬಳಲಿದ್ದಾನೆಂದು ಪ್ರಕಟಿಸಿ ಅವನ ದೇಹವನ್ನು ಅರಮನೆಗೆ ಗುಪ್ತವಾಗಿ ಕರೆತರಿಸಿ ರಾತ್ರಿಯಲ್ಲಿ ಸಂಸ್ಕರಿಸಿದ. ನಾಡ ಗಡಿಗಳಲ್ಲಿ ಪರಮಾಂಡಲಿಕರಿಂದ ತೊಂದರೆಯಾಗದಂತೆ ಆಜ್ಞೆಗಳನ್ನು ನೀಡಿದ. ಆನಂತರ ವಾತ್ಸಲ್ಯರತ್ನಾಕರನು ಋಷಿನಿವಾಸ ಪರ್ವತದಲ್ಲಿರುವನೆಂಬುದನ್ನು ಚರರಿಂದ ತಿಳಿದು, ತನ್ನ ಹಿರಿಯ ಮಗನಿಗೆ ಮಾತ್ರ ಅರಸಿನ ಸಾವಿನ ವಿಚಾರವನ್ನು ತಿಳಿಸಿ ಮನೆಯನ್ನು ಜೋಪಾನವಾಗಿ ಕಾಯುವಂತೆ ಸೂಚಿಸಿದ. ತಕ್ಷಣವೇ ದಂಡೆತ್ತಿ ಹೊರಟು ತೆಂಕಣ ಭೂಪಾಲರ ದರ್ಪವನ್ನಡಗಿಸಿ ಕಪ್ಪವನ್ನು ತರಬೇಕೆಂದು ರಾಜನು ತನಗೆ ಆಜ್ಞಾಪಿಸಿರುವನೆಂದು ವದಂತಿಯನ್ನು ಹಬ್ಬಿಸಿದ.

ಚತುರಂಗಸೈನ್ಯ ಸಮೇತ ಹೊರಟ ಹೆಗ್ಗಡೆಯು ಋಷಿನಿವಾಸ ಪರ್ವತವನ್ನು ಸೇರಿ ಅದರ ತಪ್ಪಲಲ್ಲಿ ಬೀಡು ಬಿಟ್ಟ. ಆಮೇಲೆ ಕೆಲವೇ ಮಂದಿಯನ್ನೊಡಗೊಂಡು ಬಂದು ಪರ್ವತದ ತುದಿಯಲ್ಲಿದ್ದ ಮುನೀಂದ್ರನ ಪಾದಪಂಕಜಗಳಿಗೆ

ಅಭಿವಂದಿಸಿ ಸ್ವಲ್ಪ ವೇಳೆ ಧರ್ಮಶ್ರವಣ ಮಾಡಿದ. ಆನಂತರ ಕೃತಕ ವಿನಯದಿಂದ, "ಪರಮ ಮುನೀಶ್ವರರೇ, ತಾವು ಈ ಗಿರಿಯಲ್ಲಿ ನೆಲೆಸಿರುವಿರೆಂಬುದನ್ನು ಕೇಳಿ ತಮ್ಮ ಪಾದಸರೋಜಾತಗಳನ್ನು ಕಾಣುವ ಆಸೆಯಿಂದ ವೆಂಗಿಮಂಡಲದಿಂದ ನಾವಿಲ್ಲಿಗೆ ಬಂದೆವು. ನಾವು ವ್ಯಾಪಾರಿಗಳು, ಶ್ರಾವಕರು. ಮತ್ತೂ ಕೆಲವು ಮಂದಿ ತಮ್ಮ ಪಾದದರ್ಶನಕ್ಕಾಗಿ ಹಂಬಲಿಸಿ ಬೆಟ್ಟದ ತಪ್ಪಲಲ್ಲಿದ್ದಾರೆ; ಅವರೆಲ್ಲ ಬೆಟ್ಟವನ್ನು ಹತ್ತಲಾರದ ಕಡುವೃದ್ಧರು. ತಾವು ಅವರ ಮೇಲೆ ಕರುಣೆಯಿಟ್ಟು ಅಲ್ಲಿಗೆ ಬಿಜಯಂಗೈದು ಅವರನ್ನು ಹರಸಿ ಅವರ ಮನಸ್ಸಂತೋಷಪಡಿಸಬೇಕು" ಎಂದು ಮುನೀಂದ್ರರನ್ನು ಪ್ರಾರ್ಥಿಸಿಕೊಂಡು ಮತ್ತೆ ನಮಸ್ಕರಿಸಿ ಅವರಿಂದ ಬೀಳ್ಕೊಂಡು ತಮ್ಮ ಬೀಡಿಗೆ ಬಂದ.

ಮುನಿಮುಖ್ಯರು ಹೆಗ್ಗಡೆಯ ಮಾತನ್ನು ನಿಜವೆಂದು ಭಾವಿಸಿ ಪುರಸ್ಕರಿಸಿ ಆ ಮಧ್ಯಾಹ್ನ ಚರಿಗೆಗೆಂದು ಹೊರಟು, ದಾರಿಯಲ್ಲಿ ಬೆಟ್ಟದ ತಪ್ಪಲಿನಲ್ಲಿದ್ದ ಹೆಗ್ಗಡೆಯ ಬಿಡಾರಕ್ಕೆ ದಯಮಾಡಿಸಿದರು. ಅವರನ್ನು ಕಂಡು ಹರ್ಷಗೊಂಡ ಹೆಗ್ಗಡೆಯು ಅವರನ್ನು ಉಪಚರಿಸಿ, ಅನ್ನದಲ್ಲಿ ಕಡು ಮದ್ದನ್ನು ಬೆರೆಸಿ ನೀಡಿದ. ಅವನ ಕಪಟವನ್ನರಿಯದ ಶ್ರೀಧರ ಮುನಿನಾಥರು ಆ ಅನ್ನವನ್ನು ಉಂಡು ಮದ್ದಿನ ಸೊಕ್ಕಿನಿಂದ ಗಾಢನಿದ್ರೆಗೆ ವಶವಾದರು. ಸಂತಸಗೊಂಡ ಹೆಗ್ಗಡೆಯು ಮಹಾ ಸಡಗರದಿಂದ ಅವರನ್ನು ಒಂದು ಸಿಬಿಕೆಯಲ್ಲಿರಿಸಿ ದಡಬಡನೆ ಹೊರಟು ಪ್ರತಿಪಾಲಪುರಕ್ಕೆ ಹೊತ್ತು ತಂದ. ಮೈಮರೆತು ಮಲಗಿದ್ದ ಮುನಿಗಳಿಗೆ ರತ್ನಾಭರಣಗಳನ್ನು ತೊಡಿಸಿ, ಸುಗಂಧದ್ರವ್ಯಗಳನ್ನು ಪೂಸಿ, ದಿವ್ಯವಸ್ತ್ರಗಳನ್ನು ಉಡಿಸಿ, ರೋಮಜವೆಂಬ ಹಾಸಿಗೆಯ ಮೇಲೆ ಮಲಗಿಸಿ ಸುತ್ತಮುತ್ತ ಓಲಗಿಸುತ್ತಿದ್ದ.

ಮೂರನೆಯ ದಿನ ಋಷಿಗಳಿಗೆ ಇಟ್ಟಿದ್ದ ಮದ್ದಿನ ಸೊಕ್ಕು ಇಳಿಯಿತು. ತಮ್ಮ ಮೈ ಹಗುರವೆನಿಸಿ ಘಮ್ಮೆಂಬ ಪರಿಮಳದ ಅರಿವಾಯಿತು. ತಾವು ಗಿರಿಯಲ್ಲಿಯೇ ಇರುವೆವೆಂಬ ಭಾವನೆಯಿಂದ ಮೈಮುರಿದುಕೊಂಡು ಕಾಲನ್ನು ನಿಮಿರಿಸಿ ಒದ್ದು ಮೇಲೆದ್ದು ಕೈಗಳಿಂದ ತಮ್ಮ ದೇಹದ ಮೇಲೆಲ್ಲ ಮುಟ್ಟಿ ನೋಡಿಕೊಂಡರು. ತೊಡಿಸಿದ ತೊಡವುಗಳನ್ನೂ, ಉಡಿಸಿದ ಉಡುಗೆಗಳನ್ನೂ, ಪೂಸಿದ ಶ್ರೀಗಂಧವನ್ನೂ, ಮಲಗಿದ್ದ ಹಾಸಿಗೆಯನ್ನೂ, ಸುತ್ತಮುತ್ತಲಿದ್ದ ಮಕುಟಬದ್ಧರನ್ನೂ ಕಂಡು ಅವರಿಗೆ ಬೆರಗಾಯಿತು. ತಮ್ಮ ಕರ್ಮದ ಏಳಿಗೆಯಿಂದ ಸುರವರ ಪೂಜ್ಯವಾದ ಮೋಕ್ಷವನ್ನು ತರಬಲ್ಲ ಹಾಗೂ ಎಲ್ಲ ದುಃಖವನ್ನೂ ದೂರ ಮಾಡಬಲ್ಲ ಜೈನದೀಕ್ಷೆಯನ್ನು ಹೊಂದಿದರೂ, ಈ ದುರಾತ್ಮನು ಹುಸಿಯಾಡಿ ತನ್ನ ಭುವನತ್ರಯಪೂಜ್ಯತೆಯನ್ನು ಕುಸಿಯಿಸಿ, ಬಾಳುವಿಕೆಗೆ ಆಸ್ಪದವಿಲ್ಲದ ವೈಶ್ಯರು ತಾವೆಂದು ನಂಬಿಸಿ ಕಡು ಧೂರ್ತತನದಿಂದ ಅನ್ನದಲ್ಲಿ ವಿಷ ಬೆರೆಸಿ ತನ್ನನ್ನು ಇಲ್ಲಿಗೆ ಕರೆತಂದು ತನಗೆ ಬೇಕಾದಂತೆ ಮಾಡಿಕೊಂಡುಬಿಟ್ಟನೆಂದು ಅವರು ಬಿಸುಸುಯ್ದು ಹಾಸಿಗೆಯ ಮೇಲೆ ಬಿದ್ದರು.

ಸೇವಕರು ಶೀತಲಕ್ರಿಯೆಗಳಿಂದ ಅವರನ್ನು ಎಚ್ಚರಿಸಿ ಸರಿಯಾಗಿ ಕುಳ್ಳಿರಿಸಿದರು. ಆಗ ಸಮಸ್ತ ಬಂಧುಜನರೂ, ಪ್ರಧಾನರೂ ಅವರಿಗೆ ಮೈಯಿಕ್ಕಿ ಹೀಗೆ ಬಿನ್ನವಿಸಿಕೊಂಡರು: "ದೇವಾ, ಸಂತತಿಯಿಲ್ಲದ ಈ ರಾಜ್ಯವನ್ನು ತಳದಲ್ಲಿ ಅದ್ದಿ ಕೆಡಿಸದೆ ಉನ್ನತ ಗುಣರಾದ ತಾವು ನಿಲ್ಲಿಸಿ, ಸಂತತಿಯನ್ನು ಮಾಡಿ ಆ ಮೇಲೆ ತಪಸ್ಸಿನಲ್ಲಿ ನಿರತರಾಗಿ. ಪರ ಮಾಂಡಲಿಕರು ನಿಮ್ಮ ತಂದೆಯವರ ಭಯದಿಂದ ಕಪ್ಪವನ್ನು ತಂದು ಸಲ್ಲಿಸುತ್ತಿದ್ದರು; ಅಂಥದ್ದನ್ನು ನೀವು ಕೆಡಿಸುವುದೇ?" ಕರುಣೆಯುಕ್ಕುವಂತೆ ಅವರೆಲ್ಲ ಕಣ್ಣಲ್ಲಿ ನೀರನ್ನು ತಂದುಕೊಂಡು, ನಿಷ್ಕರುಣಿಯಾಗಿ ಹೋಗಲು ಬಯಸುವುದೇ ಆದರೆ ಎರಲ್ಲರನ್ನೂ ಕೊಂಡು ಹೋಗಬೇಕೆಂದು ಬೇಡಿಕೊಂಡು, ಬಲವಂತದಿಂದ ಮದಿಸಿದ ಆನೆಯನ್ನು ಕಂಬಕ್ಕೆ ಕಟ್ಟಿ ಹಾಕುವಂತೆ ಎಲ್ಲ ಸೇರಿ ಅವನಿಗೆ ಲಲ್ಲೆಮಾತುಗಳಿಂದ ಪಟ್ಟವನ್ನು ಕಟ್ಟಿದರು; ಸಿಂಹವನ್ನು ಸೆರೆಯಲ್ಲಿಡುವಂತೆ ಅವನನ್ನು ರಾಜ್ಯದಲ್ಲಿ ನಿಲ್ಲಿಸಿದರು; ಮತ್ತು ನಾನಾ ಬಗೆಯ ಕಾವಲನ್ನಿಕ್ಕಿ ರಾಜ್ಯಭಾರ ಮಾಡಿಸಿದರು. ನುತ ರಾಜ್ಯಲಕ್ಷ್ಮಿಯನ್ನು ಬಿಸುಟು ಮುಕ್ತಿ ಗೋಮಿನಿಯಲ್ಲಿ ಕೂಡುವುದು ಎಂಬ ಹಾಗೆ ಅವನಿಗೆ ಅಸಹಾಯ ಪರಾಕ್ರಮಿಯಾದ ಮಗನೊಬ್ಬನು ಹುಟ್ಟಿದನು. ಮಗನಿಗೆ

ಅತೀವ ಸಂತಸದಿಂದ ತನ್ನ ತಂದೆಯ ವರನಾಮವನ್ನಿಟ್ಟು ಆಗಲೇ ಪಟ್ಟವನ್ನು ಕಟ್ಟಿದ. ಆನಂತರ ಸೆರೆಯಿಂದ ಮುಕ್ತಗೊಂಡವನು ನಿಲ್ಲದೆ ಓಡುವಂತೆ ಹಿಮ್ಮಟ್ಟದೆ ಸಕಲ ರಾಜ್ಯಶ್ರೀಯನ್ನೂ ತೊರೆದು ಜಿನದೀಕ್ಷೆಯನ್ನು ಕೈಗೊಂಡ.

ಶ್ರೀಧರಕುಮಾರನು ದ್ವಾದಶ ವಿಧದ ಉತ್ತರೋತ್ತರ ತಪಸ್ಸುಗಳಲ್ಲಿ ನಿರತನಾಗಿದ್ದು, ಹಿಂದಿದ್ದ ಋಷಿನಿವಾಸದಲ್ಲಿ ಕೆಲವು ಕಾಲ ನೆಲೆಸಿದ್ದು, ಕರ್ಮಕ್ಷಯವಾದನಂತರ ನಿರ್ವಾಣಶ್ರೀಯನ್ನು ಸೇರಿಕೊಂಡ. ಪರ್ವತಕ್ಕೆ ಶ್ರೀಧರಾಚಾರ್ಯರ ಹೆಸರೇ ನಿಂತು ಅದು ಶ್ರೀಪರ್ವತವೆನಿಸಿಕೊಂಡಿತು. ಆ ಗಿರಿಯ ದಕ್ಷಿಣಭಾಗದಲ್ಲಿದ್ದ ಒಂದು ಅರಳಿಮರದ ಕೆಳಗೆ ಅವರು ತಪಸ್ಸು ಮಾಡಿ ಮುಕ್ತಿಯನ್ನು ಗಳಿಸಿಕೊಂಡದ್ದರಿಂದ ಆ ಜಾಗಕ್ಕೆ ಸಿದ್ಧವಟವೆಂಬ ಹೆಸರುಂಟಾಯಿತು. ಶ್ರೀಧರಕೇವಲಿಗಳಿಗೆ ಕೇವಲಜ್ಞಾನಪೂಜೆಯನ್ನು ಮಾಡಲೆಂದು ಚತುರ್ವಿಧ ದೇವನಿಕಾಯವೂ ಅಲ್ಲಿ ನೆರೆದಿದ್ದುದರಿಂದ ಆ ಸ್ಥಾನಕ್ಕೆ ಅಮರಾವತಿಯೆಂಬ ಹೆಸರು ಬಂದಿತು. ಆ ಮುನಿಯು ಅರ್ಜುನವೃಕ್ಷದ ಕೆಳಗೆ ತಪಸ್ಸಿನಲ್ಲಿ ನಿರತನಾಗಿರುವಾಗ ಖೇಚರರು ಮಲ್ಲಿಗೆ ಹೂಗಳಿಂದ ಪೂಜಿಸಿದ್ದರಿಂದಾಗಿ ಅದಕ್ಕೆ ಮಲ್ಲಿಕಾರ್ಜುನ ಎಂಬ ಹೆಸರು ಪ್ರಾಪ್ತವಾಯಿತು. ಮುದುಕರು ಬಂದಿರುವರೆಂದು ಇಂದ್ರಪ್ರಭನು ಆ ಮುನಿಯನ್ನು ಮೋಸಗೈದ ಜಾಗವಾದ್ದರಿಂದ ಅದಕ್ಕೆ ವೃದ್ಧಗಿರಿ ಎಂಬ ಹೆಸರುಂಟಾಯಿತು. ಯಶೋಧರಕುಮಾರನು ಋಷಿಪುತ್ರನಾದುದರಿಂದಲೂ, ಅವನ ಮೈದುನರೆಲ್ಲ ಅವನನ್ನು ಮುಂಡಿ(ಸನ್ಯಾಸಿ)ಯ ವಂಶಜನೆಂದು ಹಾಸ್ಯ ಮಾಡುತ್ತಿದುದರಿಂದಲೂ ವಂಶಕ್ಕೆ ಆ ಹೆಸರೇ ಉಳಿಯಿತು. ಹೀಗೆಂದು ಬುದ್ಧಿಸಾಗರನು ಧನದ ಮಹಾರಾಜನ ವಂಶವೃತ್ತಾಂತವನ್ನೂ, ಪ್ರತಿಪಾಲಪುರದ ಹೆಸರಿನ ಇತಿಹಾಸವನ್ನೂ ಹೇಳಿದ.

ಅದನ್ನೆಲ್ಲ ಕೇಳಿದ ಸಂಘಶ್ರೀಯು, ಇವನ ವಂಶಜರು ಸಾಮಾನ್ಯರಾಗಿರದೆ ಬಹು ಪ್ರಖ್ಯಾತರಾದವರು, ಧರ್ಮೋಪೇತರರು; ಹಾಗಾಗಿ ಈ ನೃಪಕುಮಾರನನ್ನು ನಾನು ಎಷ್ಟು ಪುಣ್ಯ ಮಾಡಿ ಸೇರಿದೆನೋ ಎಂದು ಸಂತೋಷಗೊಂಡ. ವಿಷಯವನ್ನು ತಿಳಿಯದೆ ತಾನು ಅವನಿಗೆ ಮಾಡಿದ ಅವಮಾನ ಹಾಗೂ ತಾನು ಜಿನತತ್ವವನ್ನು ಅಲ್ಲಗಳೆದದ್ದು ಇವುಗಳನ್ನು ನೆನೆದು, ತನಗೆ ರಾಜನಿಂದ ಎಷ್ಟು ಒಳಿತಾಯಿತೆಂಬುದನ್ನು ತಿಳಿದ. ಈತನ ಕಾರಣದಿಂದ ತನಗೆ ಮೋಕ್ಷದಾಯಿಯಾದ ಧರ್ಮವೂ, ಹಿರಿದಾದ ಸಿರಿಯೂ ದೊರೆಕೊಂಡಿತು; ತಮಗಿಂತ ಪುಣ್ಯವಂತರು ಬೇರೆ ಯಾರಿದ್ದಾರೆ ಎಂದು ಅವನಿಗೆ ಧನ್ಯಭಾವವುಂಟಾಯಿತು.

ಮುಂದೆ ಒಂದು ದಿನ ಸಂಘಶ್ರೀಯ ಹಿಂದಿನ ಗುರುವಾದ ಬುದ್ಧಶ್ರೀ ಎಂಬ ಭಿಕ್ಕುವಿಗೆ ತನ್ನ ಶಿಷ್ಯನು ಶ್ರಾವಕನಾದ ವಿಚಾರ ಗೊತ್ತಾಯಿತು. ಇದರಿಂದ ಅವನಿಗೆ ಕೋಪವುಂಟಾಗಿ ಸಂಘಶ್ರೀಯ ಮನಗೆ ಬಂದ. ಆದರೆ ಅವನು ಮೊದಲಿನಂತೆ ಗುರುವಿಗೆ ನಮಸ್ಕರಿಸದೆ ಮೌನದಿಂದಿದ್ದ. ಹಿಂದೆಲ್ಲ ಮಾಡುತ್ತಿದ್ದಂತೆ ತನಗೆ ನಮಸ್ಕರಿಸದ ಇವನಿಗೆ ಹೇಗೆ ಶಾಸ್ತಿ ಮಾಡಬಹುದೆಂದು ಅವನ ಮನಸ್ಸಿನಲ್ಲಿ ಯೋಚನೆಯುಂಟಾಯಿತು. ಅವನನ್ನು ನೆಟ್ಟ ನೋಟದಿಂದ ನೋಡುತ್ತ, "ನೀನು ಧನದ ಮಹಾರಾಜನ ಮನೆಯಲ್ಲಿ ಮುಖ್ಯನಾದ ವ್ಯಕ್ತಿ. ನಿನ್ನ ಮನೆಗೆ ನಾನಿಂದು ಬಂದರೆ ಹೀಗೆ ಅವಮಾನವನ್ನು ಮಾಡಿದ್ದೀ. ಮಂತ್ರಿಯಾದವನಿಗೆ ಇದು ಯೋಗ್ಯವೇ? ಉಹ್ಞೂ, ಸರಿಯಲ್ಲ. ನಿನ್ನನ್ನು ಭಕ್ತನೆಂದು ತಿಳಿದು ನಿನ್ನ ಮನೆಗೆ ಬಂದೆ; ಹೀಗೆ ಅವಮಾನವಾಗುತ್ತದೆಂದು ಗೊತ್ತಿದ್ದಿದ್ದರೆ ಬರುತ್ತಿದ್ದೆನೇ? ಮನೆಗೆ ಬಂದವರು ಯಾರೇ ಆಗಿರಲಿ, ಅಹಂಕಾರ ಅಥವಾ ಬಿಂಕದಿಂದಿರುವುದು ಭಾವಕನಿಗೂ ಜ್ಞಾನಿಗೂ ಮಂತ್ರಿಗೂ ಶೋಭಿಸದು" ಎಂದು ಮೃದುವಚನಗಳಿಂದ ನುಡಿದ. ಆನಂತರ, ಸದ್ಧರ್ಮವನ್ನು ಬಿಡಿಸಿ ಅವನನ್ನು ಮತ್ತೆ ಮಿಥ್ಯಾತ್ವಕ್ಕೆ ತಿರುಗಿಸುವ ಉದ್ದೇಶದಿಂದ, "ನೀನು ಬುದ್ಧಾಗಮದಲ್ಲಿ ಕುಶಲ; ನಿನ್ನಂಥವನು ಸ್ವಸಂತೋಷದಿಂದ ಬೇರೊಂದು ಧರ್ಮವನ್ನು ಅವಲಂಬಿಸಿದೆಯೆಂದರೆ ನಂಬುವುದೇ ಕಷ್ಟ. ವ್ರತಗಳನ್ನು ಪಾಲಿಸಿ, ದೇಹವ್ಯಾಮೋಹವನ್ನು ಬಿಟ್ಟು, ವಿದ್ಯೆ, ಹೆಂಡತಿ, ಮಕ್ಕಳು, ಸಂಪತ್ತು ಇವುಗಳನ್ನು ತೊರೆದು ಗಾಂಪತನದಿಂದ ನಿರ್ವೃತಿಯನ್ನು ಸಾಧಿಸುವೆನೆಂಬ ಬತ್ತಲೆ ದಡ್ಡರನ್ನು ನಂಬಿಕೊಂಡು ಸಂಸಾರಸುಖವನ್ನೇಕೆ ಕೆಡಿಸಿಕೊಳ್ಳುವೆ? ಇಚ್ಛೆಯನ್ನು ಪೂರೈಸುವ ಸುಂದರಿಯರ ಜೊತೆ ಕೂಡುತ್ತ, ದಿವ್ಯಭೋಜನವನ್ನು ಮಾಡುತ್ತ, ಬೇಕಾದವರ ಜೊತೆ ಓಡಾಡಿಕೊಂಡು

ಸುಖವಾಗಿರಬೇಕು; ಮೋಕ್ಷವನ್ನು ಕಂಡವರು ಯಾರಿದ್ದಾರೆ?" ಎಂದು ಪುಸಲಾಯಿಸಿದ. ಅದಕ್ಕೆ ಸಂಘಶ್ರೀಯು, ಇಂತೆಂದ: "ಜಿನವಚನವು ಹುಸಿಯಾದರೆ, ಅಂತರಿಕ್ಷದಲ್ಲಿ ಹೋಗುತ್ತಿದ್ದ ಪಾಪಜೀವನದ ಬಡಬಾನಲವೆನಿಸುವ ಮುನಿಯುಗಳವನ್ನು ಧನದ ಮಹಾರಾಜನು ನನಗೇಕೆ ತೋರಿಸಿದ; ಶ್ರೇಷ್ಠವಾದ ತಪಸ್ಸಿನಿಂದ ಉಂಟಾಗುವ ಶ್ರೇಯಸ್ಸನ್ನು ಕಂಡು ಜಿನಮತವನ್ನು ನಾನೇಕೆ ನಂಬಿದೆ; ನನ್ನದೇನೂ ಮರುಳುತನವಲ್ಲ, ಹುರುಳಿಲ್ಲದ ನಿನ್ನ ಮಾತಿನಿಂದ ಪ್ರಯೋಜನವಿಲ್ಲ." ಅದನ್ನು ಕೇಳಿ, ಇವನನ್ನು ಹೇಗಾದರೂ ಬದಲಿಸಬೇಕು ಎಂಬ ಹಟದಿಂದ ಬುದ್ಧಶ್ರೀ ಮತ್ತೆ ಹೀಗೆಂದು ಹೇಳಿದ: "ತನ್ನ ಚತುರ್ಬಲಸಮೇತನಾಗಿ ಹೋರಾಡಿದ ಧನದ ಮಹಾರಾಜನು ಸಪ್ತಸಮುದ್ರಪರ್ಯಂತವಾದ ಭೂಮಂಡಲವನ್ನು ಗೆದ್ದನೆಂದ ಮೇಲೆ ಆಗಸದಲ್ಲಿ ಇಬ್ಬರು ಮುನಿಗಳನ್ನು ತೋರಿಸಿ ನಿನ್ನನ್ನು ವಶಪಡಿಸಿಕೊಂಡದ್ದರಲ್ಲಿ ಏನು ಅಚ್ಚರಿ?" ಎಂದು ಕಿಲಕಿಲ ನಕ್ಕ. ಆನಂತರವೂ ಅನೇಕ ಕುತ್ಸಿತ ಉದಾಹರಣೆಗಳನ್ನು ನೀಡಿ ಶೂನ್ಯವಾದವನ್ನು ಮುಂದಿಟ್ಟ. ಬುದ್ಧಶ್ರೀಯ ವೃಥಾಲಾಪದಿಂದ ಸಂಘಶ್ರೀಯು ಲೋಚನಹೀನನಾಗಿ ಶೋಭೆಗೆಟ್ಟು ಮನಸ್ಸು ಕೆಟ್ಟು, ಮಾಗಿಯ ತೊರೆಯಂತೆ ಬಡವಾಗಿ. ಕಂಗೆಟ್ಟು, ಸದ್ಧರ್ಮವಿಮುಖನಾಗಿ 'ಪುನಃ ಶ್ವಾನೋ ಭವಿಷ್ಯತಿ' ಎಂಬಂತೆ ಮತ್ತೆ ಮಿಥ್ಯಾತ್ವಕ್ಕೆ ಮರಳಿದ. ತನ್ನ ಹಟ ಸಾಧನೆಯಾದುದಕ್ಕೆ ಹರ್ಷಗೊಂಡ ಬುದ್ಧಶ್ರೀ ಹೆಮ್ಮೆ ಪಡುತ್ತ ಹೊರಟು ಹೋದ.

ಜಿನಪದಸೇವೆಯನ್ನು ಬಿಟ್ಟ ಸಂಘಶ್ರೀಯು ದುರ್ಮತಿಗಳ ಜೊತೆ ಸೇರಿ ತನಗೆ ಸುಖವನ್ನೀಯುವ ಧರ್ಮತರುವನ್ನು ಕಡಿದು ಹಾಕಿದ. ವಿಮಲಗುಣಗಣವನ್ನು ಪಡೆದ ಧರ್ಮವನ್ನು ಒಲ್ಲದೆ ಶೂನ್ಯಾಗಮವನ್ನು ಅವಲಂಬಿಸಿದ. ಬಡವನಿಗೆ ಸಿಕ್ಕಿದ ನಿಧಿಯು ರಾಜನಿಗೆ ಗೊತ್ತಾಗದೆ ಅವನ ಬಳಿಯೇ ಉಳಿದಿರುವುದೂ, ಒಳ್ಳೆಯ ಧರ್ಮವನ್ನು ಕೆಡಿಸಿಕೊಳ್ಳದೆ ಉಳಿಸಿಕೊಳ್ಳುವುದೂ ಪುಣ್ಯದಿಂದ ಮಾತ್ರ ಸಾಧ್ಯ. ಮನೆಯನ್ನು ಬಿಟ್ಟು ಬೀದಿಯಲ್ಲಿರುವಂತೆ, ಹಾಲು ಬಿಟ್ಟು ಕಳ್ಳು ಕುಡಿಯುವಂತೆ, ದಿವ್ಯಾಭರಣಗಳನ್ನು ಬಿಟ್ಟು ಬಳ್ಳಿಗಳನ್ನು ಮೈಮೇಲೆ ಹಾಕಿಕೊಳ್ಳುವಂತೆ ಸಂಘಶ್ರೀಯು ಸದ್ಧರ್ಮವನ್ನು ಬಿಟ್ಟು ಮಿಥ್ಯಾತ್ವಪ್ರೀತನಾಗಿರುವುದು ವಾತ್ಸಲ್ಯರತ್ನಾಕರನಾದ ಧನದನಿಗೆ ತಿಳಿಯಿತು. ನಾಯಿಕುನ್ನಿಯನ್ನು ತಂದು ಸಿಂಹಾಸನದ ಮೇಲೆ ಕೂರಿಸಿ ಓಲಗಿಸಿದರೂ ಅದು ಹೇಸಿಗೆಯನ್ನು ತಿನ್ನುವುದನ್ನು ಬಿಡುವುದೇ ಎಂದು ಅವನಿಗೆನ್ನಿಸಿತು. ಆನಂತರ ಸಂಘಶ್ರೀಯನ್ನು ಕರೆಸಿ ಮುಂದೆ ಕುಳ್ಳಿರಿಸಿಕೊಂಡು ಧರ್ಮಬೋಧೆಯನ್ನು ಮಾಡಿದ. ಅದನ್ನು ಕೇಳಿದ ಅವನು ಮೂಗನಂತೆ ಮಾತನಾಡದೆ ಶೂನ್ಯಹೃದಯನಾಗಿ ತಲೆಬಗ್ಗಿಸಿಕೊಂಡು ಮಿಥ್ಯಾತ್ವವೆಂಬ ಗ್ರಹದ ಹಿಡಿತದಲ್ಲೇ ಇದ್ದ.

ಹಲವು ದಿನಗಳಾದರೂ ಸಂಘಶ್ರೀಯನ್ನು ಮರಳಿ ಧರ್ಮದ ಮಾರ್ಗದಲ್ಲಿ ತರಲಾರದೆ ಧನದ ಮಹಾರಾಜನು ಕಮಲಶ್ರೀಯ ಸಾಮಂತರ ಮುಖವನ್ನು ನೋಡಿ ಹೀಗೆಂದ: "ಕಲ್ಲು ನೆನೆದು ಮೃದುವಾಗದ ಹಾಗೆ ಕೆಟ್ಟುದನ್ನು ಮಾಡಿ ರೌರವಕ್ಕಿಳಿಯುವವರು ಪಾಪವಶರಾದ ಕಾರಣ ಸದ್ಧರ್ಮಕ್ಕೆ ಬಾರರು; ಕತ್ತಲಾದಾಗ ಸೂರ್ಯನು ಪಶ್ಚಿಮಾಂಬುಧಿಗೆ ಇಳಿಯುವ ಹಾಗೆ ಪಾಪಸಂಕುಲದಿಂದ ಕೂಡಿದವರು ನರಕಕ್ಕಿಳಿಯುವುದರಲ್ಲಿ ಸಂದೇಹವೆಲ್ಲಿಯದು? ಬೇವಿನ ಮರವನ್ನು ಗಂಧದ ಮರವಾಗಿ ಮಾಡುವೆನೆನ್ನುವವನು ಗಾಂಪ; ಹಾಗೆಯೇ ಎಷ್ಟೇ ಪ್ರಯತ್ನಿಸಿದರೂ ಪಾಪಿಗಳು ನಿರ್ಮಲಧರ್ಮವನ್ನು ಹೊಂದುವರೇ?" ಹೀಗೆಂದು ನುಡಿದ ಧನದನು ಸಂಘಶ್ರೀಯು ನರಕಕ್ಕೆ ಸಲ್ಲದೆ ಪಂಚಮಗತಿಯನ್ನು ಹೊಂದಬೇಕೆಂಬ ಕರುಣೆಯಿಂದ ಎಷ್ಟೆಷ್ಟೋ ಕತೆಗಳನ್ನೂ ದೃಷ್ಟಾಂತಗಳನ್ನೂ ಹೇಳಿದರೂ ಅವನನ್ನು ವ್ರತದ ಹಾದಿಯಲ್ಲಿ ತರಲು ಸಾಧ್ಯವಾಗಲಿಲ್ಲ. "ಅಂಬರದಲ್ಲಿ ಹೋಗುತ್ತಿದ್ದ ವರ ಚಾರಣಋಷಿಗಳನ್ನು ನಿನಗೆ ಉದಾರಬುದ್ಧಿಯಿಂದ ತೋರಿಸಿದೆ; ಆದರೂ ನೀನು ಜಡಮತಿಯಾಗಿ ಮಿಥ್ಯಾತ್ವಯುತರಾದವರ ಮಾತನ್ನು ಕೇಳಿ ಪರವೂ ಇಲ್ಲ ದೇವರೂ ಇಲ್ಲ ಎಂಬ ಒಣ ಮಾತನ್ನಾಡಬೇಡ. ಅನುಪಮ ತಪಸ್ಸಿನ ಫಲವಾಗಿ ಆಕಾಶಪಥದಲ್ಲಿ ಹೋಗುವ ಮುನಿವರರನ್ನು ಪ್ರತ್ಯಕ್ಷ ಕಂಡರೂ ವೇತಂಡಸ್ನಾನವನ್ನು ಮಾಡಿ ಸುವ್ರತವನ್ನು ಬಿಟ್ಟು ಮತಿಗೆಟ್ಟು ಸದ್ದರ್ಶನವನ್ನು ಬಿಡುತ್ತೀಯಾ? ನಿನ್ನ ಗುರುವಾದ ಬೆಳಪುಂಜನ ಮಾತನ್ನು ಬಿಡು; ಆಕಾಶದಲ್ಲಿ ಹೋಗುತ್ತಿದ್ದ ಚಾರಣಋಷಿಗಳನ್ನು ನೀನು ಕಣ್ಣಾರೆ ಕಂಡದ್ದು ಉಂಟೋ

ಇಲ್ಲವೋ, ಹೇಳು" ಎಂದು ಕೇಳಿದ. ಬುದ್ಧಶ್ರೀಯ ಕುತರ್ಕವನ್ನು ನಂಬಿ ಬಕ್ಕತನಕ್ಕೂ ಒರಟುತನಕ್ಕೂ ಮದ್ದಿಲ್ಲ ಎಂಬ ಮಾತನ್ನು ನಿಜ ಮಾಡಿ ತಾನು ಚಾರಣಋಷಿಯರನ್ನು ಕಾಣಲೇ ಇಲ್ಲ ಎಂದು ತಲೆ ಮುಟ್ಟಿಕೊಂಡು ಬಾಯಿ ಬಡಿದ. ಇದನ್ನು ಕೇಳಿದ ಪುರದೇವತೆಗಳು ಬಂದು ದುರಾತ್ಮನ ಎರಡೂ ಕಣ್ಣಗಳನ್ನು ತಕ್ಷಣವೇ ಕಿತ್ತುಕೊಂಡರು, ಅವನು ಪೂರ್ತಿ ಕುರುಡನಾಗಿಬಿಟ್ಟ. ಸುಳ್ಳಿನಿಂದ ಗರ್ವಪಡುವವರಿಗೆ ಇದೇನು ಹೆಚ್ಚೇ? ಕಣ್ಣುಗಳೆರಡೂ ನೆಲದ ಮೇಲೆ ಬಿದ್ದಿರಲು, ತಲೆ ನೋಯಲು ಸಭೆಯೆಲ್ಲ ಬೆರಗಾಯಿತು. ಆಗ ಖೂಳನು ನೆಲವನ್ನು ತಡವರಿಸುತ್ತ ದೂರದಲ್ಲಿ ಕುಳಿತ. ಅಂತಹ ಸಂಘಶ್ರೀಯನ್ನು ನೋಡಿ ಸಭಾಸದರು ಪಾಪದ ಪ್ರತ್ಯಕ್ಷ ಫಲವನ್ನು ಕಂಡಂತಾಗಿ, ದೇಹವು ಸೂರ್ಯನ ತೇಜಸ್ಸನ್ನು ಪಡೆದು, ಮಾನವರೂ ದೇವತೆಗಳೂ ಖೇಚರರೂ ಪೂಜಿಸುವ ನುತ ಚಾರಣರು ಅಂತರಿಕ್ಷದಲ್ಲಿ ಹೋಗುತ್ತಿದ್ದವರನ್ನು ಧನದನು ತೋರಿಸಿದ್ದರೂ ಈ ಖೂಳನು ತಾನು ಕಾಣಲೇ ಇಲ್ಲ ಎಂದನಲ್ಲ; ಇವನಿಗಿಂತ ದುಷ್ಟರೂ ದುಃಖಭಾಜನರೂ ಅಸತ್ಯವಾದಿಗಳು ಬೇರೆ ಇಲ್ಲ ಎಂದುಕೊಂಡರು. ಕಂಡದ್ದನ್ನು ಕಂಡಿಲ್ಲವೆಂದು ಹುಸಿದ ಕಾರಣದಿಂದ ಇವನು ಕುರುಡಾದ; ನರಕಕ್ಕೆ ಹೋಗುವ ಹೆದ್ದಾರಿಯಾದ ಸುಳ್ಳಿಗಿಂತಲೂ ದೊಡ್ಡ ಪಾಪ ಯಾವುದಿದೆ?

ಜನರೆಲ್ಲ ಸಂಘಶ್ರೀಯನ್ನು ಬಾಯಿಗೆ ಬಂದಂತೆ ಬೈದುಕೊಂಡರು. ಧನದ ಮಹಾರಾಜನು ಮಿಥ್ಯಾತ್ವಕ್ಕೆ ಗಡ ಗಡ ನಡುಗಿ, ಕಣ್ಣು ಕಳೆದುಕೊಂಡು ನೆಲದಲ್ಲಿ ಹೊರಳುವ ಸಂಘಶ್ರೀಯನ್ನು ಮನೆಗೆ ಹೊತ್ತುಕೊಂಡು ಹೋಗಲು ಆಜ್ಞಾಪಿಸಿ ಕಳಿಸಿದ. ಸಂಘಶ್ರೀಯು ಚಿಂತೆಯಿಂದ ಜರ್ಜರನೆ ಜರಿದು ದುಃಖಪೀಡಿತನಗಿ ಕೆಲವು ದಿನಗಳಲ್ಲಿಯೇ ಸತ್ತು ನರಕಕ್ಕಿಳಿದು ದೀರ್ಘ ಸಂಸಾರಿಯಾದ. ಅವನಿಂದ ಮೊದಲಾಗಿ ಏಳು ತಲೆಮಾರುಗಳವರೆಗೆ ಹುಟ್ಟಿದ ಮಕ್ಕಳೆಲ್ಲರೂ ಕುರುಡರಾದರು. ಅದರಿಂದ ಆ ದೇಶಕ್ಕೆ ಅಂಧವಿಷಯ ಎಂಬ ಹೆಸರಾಯಿತು.

ಇತ್ತ ವೆಂಗಿಮಂಡಲದ ಒಡೆಯನಾದ ಧನದ ಮಹಾರಾಜನು ಸಂಸಾರದ ವೈಚಿತ್ರ್ಯವನ್ನು ಕಂಡು ಭಯಗೊಂಡ. ಚಾರಣ ಋಷಿಗಳನ್ನು ಕಂಡರೂ ಕಾಣೆನೆಂದು ಹೇಳಲು ದುಷ್ಟಪ್ರೇರಣೆ ಕಾರಣ; ಆದ್ದರಿಂದ ದುಷ್ಟಸಂಗವು ಕೆಟ್ಟದ್ದು; ಕತ್ತಲೆಯಲ್ಲಿ ಕಣ್ಣು ಕಾಣಲಾರದ ಹಾಗೆ ಕರ್ಮತೀವ್ರತೆಯಿಂದ ಸದ್ದರ್ಶನ ಅರಿಯಲಾಗದು; ಆದ್ದರಿಂದ ಭಾವನೆಯಲ್ಲಿಯೂ ಸಮ್ಯಕ್ತ್ವದಲ್ಲಿಯೂ ಬಲ್ಲಿದರೆನಿಸಿ ನೆಗಳುವ ಭವ್ಯರೇ ಮೋಕ್ಷಗಾಮಿಗಳೆಂದು ನಂಬಿದ. ಹೆಪ್ಪಿಟ್ಟರೆ ಹಾಲು ಆಗುವಂತೆ ನೀರು ಮೊಸರಾಗಲು ಸಾಧ್ಯವಿಲ್ಲ; ಅಂತೆಯೇ ಭವ್ಯರು ಸದ್ದರ್ಶನಕ್ಕೆ ಬರುವಂತೆ ಅಭವ್ಯರು ಬರುವರೇ? ಸಮ್ಯಕ್ತ್ವವು ಕರ್ಮಗಳನ್ನು ಹೋಗಲಾಡಿಸುವಂತೆ ಮಿಥ್ಯಾತ್ವವು ಮಾಡಲಾರದು. ಅವೆರಡರ ಭೇದವೆಂತಹುದೆಂದರೆ, ತೋಟದ ಗಿಡ – ಮನೆಯ ಗಿಡ, ಹೊನ್ನ ರಾಶಿ – ಮಣ್ಣಿನ ರಾಶಿ ಇವುಗಳ ವ್ಯತ್ಯಾಸದಂತೆ. ಕಾಸಿದಾಗ ಬೆಣ್ಣೆಯು ತುಪ್ಪವಾಗುವಂತೆ ಎಣ್ಣೆಯನ್ನು ಕಾಸಿದರೆ ಆಗುವುದೇ? ಹಾಗೆಯೇ ಆಸನ್ನಭವ್ಯನು ಮೋಕ್ಷಲಕ್ಷ್ಮಿಗೆ ಎರಗುವಂತೆ ಖಳನು ಎರಗುವನೇ? ಕೆಸರಲ್ಲಿ ನೆಲ್ಲು ಬೆಳೆಯುವಂತೆ ಜೋಳ ಬೆಳೆಯಲಾರದು; ಬಯಲಲ್ಲಿ ಜೋಳ ಬೆಳೆಯುವಂತೆ ನೆಲ್ಲು ಬೆಳೆಯಲಾರದು. ಸುಳ್ಳುಬುರುಕರು ಅಂಥವರನ್ನೇ ಸೇರುತ್ತಾರೆಯೇ ಹೊರತು ಸತ್ಯವಂತರನ್ನು ಸೇರುವುದಿಲ್ಲ. ಹೀಗೆಂದು ಭಾವಿಸಿ ಮಿಥ್ಯಾತ್ವದ ಪ್ರತ್ಯಕ್ಷ ಫಲವನ್ನು ಕಣ್ಣಾರೆ ಕಂಡೂ, ಹುಸಿ, ಕೊಲೆಗಳನ್ನು ಒಲ್ಲದ ಜಿನೇಂದ್ರ ದೀಕ್ಷೆಯನ್ನು ಉದಾಸೀನ ಮಾಡಿ ಸಂಘಶ್ರೀಯಂತೆ ಮಿಥ್ಯಾತ್ವಕ್ಕೆ ಎಡೆಗೊಟ್ಟು ನರಕದಲ್ಲಿ ತಲೆಕೆಳಗಾಗಿ ಬಿದ್ದು ಮರುಗುವುದು ಸರಿಯಲ್ಲ ಎಂದು ಅವನು ತನ್ನ ಮನಸ್ಸಿನಲ್ಲಿ ಅಂದುಕೊಂಡ. ಪರಮ ಜಿನೇಂದ್ರ ದೀಕ್ಷೆಯನ್ನು ತಾಳಿ ಕರ್ಮವೆಂಬ ಮರವನ್ನು ಕಡಿದು ಧರಿತ್ರಿಯು 'ಮಝು, ಭಾಪು' ಎನ್ನುವಂತೆ ಶಾಶ್ವತಸುಖವನ್ನು ಪಡೆಯುತ್ತೇನೆ; ಭೂಮಿಯ ಭಾರವನ್ನು ಹೊತ್ತು ನರಕದಲ್ಲಿ ಮುಳುಗಿ ದುಃಖಸಮುದ್ರವನ್ನು ಈಸುವ ಗಾಂಪತನವೇಕೆ ಎಂದು ನಿರ್ಧರಿಸಿದ.

ಆ ಕ್ಷಣವೇ ತನ್ನ ಮಗನಾದ ಇಂದ್ರಗುಪ್ತನನ್ನು ಮುಂದೆ ಕುಳ್ಳಿರಿಸಿಕೊಂಡು ಅವನಿಗೆ ರಾಜ್ಯದ ಹೊಣೆಯನ್ನು ಹೊರಿಸಲು ಮುಂದಾದ. ಆಗ ಮಗನು, "ಆನೆ ಧರಿಸುವ ಪುಷ್ಕದ ಭಾರವನ್ನು ಕೋತಿ ತಾಳಬಲ್ಲುದೇ? ನೀವು ಆಳಿದ

ಧರಣಿಯನ್ನು ನಾನು ಆಳಬಲ್ಲೆನೆ?" ಎಂದು ಉತ್ತರಿಸಿದ ಮಗನ ಮಾತೂ ಅವನ ವಿನಯವೂ ರಾಜನಿಗೆ ಮೆಚ್ಚಿಕೆಯಾಗಿ ಅವನನ್ನು ಅಪ್ಪಿಕೊಂಡ. ಆನಂತರ ನಾನಾ ತೆರದ ಮೃದು ಮಾತುಗಳಿಂದ ಅವನನ್ನು ಪಟ್ಟಕ್ಕೆ ಒಪ್ಪಿಸಿದ. ಲತಾಂಗಿಯರು ಸುಶ್ರಾವ್ಯವಾಗಿ ಮಂಗಳಗೀತಗಳನ್ನು ಹಾಡಿದರು; ವಿದಗ್ಧೆಯರು ಹೊನ್ನ ಚಾಮರಗಳನ್ನಿಕ್ಕಿದರು; ಸಮುದ್ರಘೋಷದಂತೆ ದುಂದುಭಿಸ್ವನ ಶೋಭಿಸಿತು; ಆಗ ರಾಜನು ಮುದದಿಂದ ಮಗನಿಗೆ ಪಟ್ಟ ಕಟ್ಟಿದ; ವೆಂಗಿಮಂಡಲಸಮೇತವಾದ ಸಕಲ ಧರೆಯ ಹೊಣೆಯನ್ನು ಅವನಿಗೆ ವಹಿಸಿಕೊಟ್ಟ. ಕೈಮುಗಿದುಕೊಂಡು ಧರ್ಮವನ್ನೂ, ಜಿನೇಂದ್ರಪಾದಸೇವೆಯನ್ನೂ, ಚತುರ್ವರ್ಣದ ಬಗೆಗಿನ ಪ್ರೀತಿಯನ್ನೂ, ದರ್ಶನದಲ್ಲಿನ ನಂಬಿಕೆಯನ್ನೂ, ಭವ್ಯರ ಬಗೆಗಿನ ಗೌರವವನ್ನೂ, ಸುಕವಿಗಳ ಜೊತೆಗಿನ ಗೋಷ್ಠಿಯನ್ನೂ, ದಾನವಿನೋದವನ್ನೂ, ಪೂಜೆಯ ಆನಂದವನ್ನೂ ಬಿಡದಿರುವಂತೆ ಬೇಡಿಕೊಂಡ.

ಆನಂತರ ಭೂಮೋಹ, ಪುತ್ರಮೋಹಗಳನ್ನು ತೊರೆದು, ಮೈಸುಖಕ್ಕೆ ಆಸೆಪಡದೆ, ಹೆಂಡಿರ ಪ್ರೀತಿಯನ್ನು ನೆನೆದು ಹಿಂಜರಿಯದೆ, ಆನೆ, ಸೈನ್ಯ, ವಾಹನಗಳ ಮೋಹದಿಂದ ಚಂಚಲಗೊಳ್ಳದೆ ಚಕ್ಕನೆ ರಾಜ್ಯವನ್ನು ತೊರೆದು, ನಾನ್ನೂರು ಮಂದಿ ಅರಸುಮಕ್ಕಳ ಸಮೇತ ಪುರದಿಂದ ಹೊರಟು ಶ್ರುತಾಣ್ವರೆಂಬ ಆಚಾರ್ಯರಲ್ಲಿ ಜಿನದೀಕ್ಷೆಯನ್ನು ಕೈಗೊಂಡ. ದ್ವಾದಶಾಂಗಶ್ರುತಧರನಾಗಿ ಗುರುಗಳ ಆಜ್ಞೆಯಂತೆ ಏಕವಿಹಾರವನ್ನು ಕೈಗೊಂಡ. ಹಿಮವನ್ನು ಅಪ್ಪಿಕೊಂಡು ಉದ್ಧಟತನದಿಂದ ಅಡರಿ ಬೀಸುವ ಮಾರುತ, ಧಾತ್ರೀರಮಣಿಯು ಮುತ್ತಿನ ಸೀರೆಯನ್ನು ಉಟ್ಟಳೊ ಎಂಬಂತೆ ಮುಸುಕಿದ ಮಂಜು ಒಪ್ಪಲು ಶೀತವು ಜಗತ್ತನ್ನು ಆವರಿಸಿತು. ಮೇಲೆ ತರುಮಿಕೊಂಡು ಬಂದು ಅವುಕಿದ ಹಿಮದಲ್ಲಿ ಸಿಕ್ಕಿದರೂ ಮನಗುಂದದೆ ಅವರೆಲ್ಲ ತೊರೆಕೆರೆಗಳ ತೀರದಲ್ಲಿ ಧೈರ್ಯದಿಂದ ಕಾಲ ಕಳೆದರು.

ಬೆಪ್ಪರಂತೆ ತಲ್ಲಣಿಸದೆ ಅವರು ಮಾಗಿಯ ನಾಲ್ಕು ತಿಂಗಳು ಬೆಳವಾಸದಲ್ಲಿದ್ದರು. ಬಿಸಿಲಿನಿಂದ ಬಸವಳಿಯದೆ, ಬಾಯಾರಿಕೆಯಿಂದ ಬಾಯ್ ಬಿಡದೆ, ಧೈರ್ಯಗೆಟ್ಟು ಓಡದೆ, ಸುರಲೋಕವು ಗೌರವ ತೋರಿಸುವಂತೆ ಆ ಯೋಗಿವಂದ್ಯನು ಗಿರಿಶಿಖರದಲ್ಲಿ ಉಗ್ರೋಗ್ರ ತಪಸ್ಸಿನಲ್ಲಿ ನಿಂತ. ದೇಸಿಗನ ಕಾಳಗದಂತೆ ಓಸರಿಸದೆ ಬೇಸಗೆಯ ನಾಲ್ಕು ತಿಂಗಳನ್ನು ಕಲ್ಲಿನಂತೆ ದೃಢವಾಗಿ ಎದುರಿಸಿ ನಿಂತ. ಆಗಸದಲ್ಲಿ ಹಾವು ಜೋತು ಬಿದ್ದಂತೆ ಆಶ್ಚರ್ಯ ಹುಟ್ಟಿಸುವ ಕುಡುಮಿಂಚು, ಶಬ್ದದಿಂದ ಭಯಗೊಳಿಸುವ ಗುಡುಗುಗಳಿಂದ ಕೂಡಿ ಭೋರೆಂದು ಮಳೆ ಸುರಿಯುತ್ತಿದ್ದರೂ ದೃಢಚಿತ್ತನಾದ ಧನದನು ಮರದ ಬುಡದಲ್ಲಿ ನಿಂತರೂ ಮಳೆಗಾಲದ ನಾಲ್ಕು ತಿಂಗಳು ದರವುರಿಗರಂತೆ ಅರವರಿಸಲಿಲ್ಲ. ಪಾಪವೆಂಬ ಶತ್ರುವನ್ನು ಸೋಲಿಸಿ ಮೋಕ್ಷವೆಂಬ ಗಟ್ಟಿಯಾದ ಕೋಟೆಯನ್ನು ವಶಪಡಿಸಿಕೊಳ್ಳುವೆನೆಂಬ ಸಂಕಲ್ಪ ಅವನದಾಗಿತ್ತು. ಭೂಮಿಯೆಲ್ಲ ಜೀಯೆನ್ನುತ್ತಿರಲು, ದೇವೇಂದ್ರ ಮೊದಲಾದ ಸುರರು ಮೆಚ್ಚಲು, ಸುಕವಿಪಿಕನಿಕರಮಾಕಂದನು ಘೋರ ತಪಸ್ಸಿನಲ್ಲಿ ತೊಡಗಿದ.

ಜಿನತತ್ವಾನುರಾಗನೂ, ವಾತ್ಸಲ್ಯರತ್ನಾಕರನೂ, ಚತುಷ್ಕಪಾಯದೂರನೂ, ನಿಷ್ಕಳಂಕನೂ, ನವವಿಧ ಬ್ರಹ್ಮಚರ್ಯೋಪೇತನೂ, ಚತುರ್ಗತಿಗಮನಭಿತನೂ, ಷಡ್ವಿಧಜೀವೋಪೇತನೂ, ಲೋಕಪೂಜಾಲಾಭ ನಿರಪೇಕ್ಷಕನೂ ಆಗಿ ತಪಸ್ಸನ್ನು ಆಚರಿಸಿ, ಆವಂತಿ ನಾಡಿನ ವಿದಿಸೆ ಎಂಬ ನದಿಯ ದಡದಲ್ಲಿ ಐರಣೆ ಎಂಬ ಪರ್ವತದಲ್ಲಿ ಅಷ್ಟವಿಧಕರ್ಮಗಳನ್ನೂ ನಾಶಪಡಿಸಿಕೊಂಡು ಅವನು ಕೈವಲ್ಯವನ್ನು ಪಡೆದ. ಹುಸಿಯಿಂದಾಗಿ ಸಂಘಶ್ರೀಯು ರೌರವದಲ್ಲಿ ಮುಳುಗಿದ್ದ. ಹುಸಿಯನ್ನು ಕಂಡು ಅಂಜುವ ಮಾನಸನು ನಿರ್ವೃತಿಸುಖವನ್ನು ಹೊಂದುವನಲ್ಲವೇ? ಹುಸಿಯನ್ನು ಕೆಟ್ಟುದೆಂದು ದೂರಮಾಡಿದ ಮಹಾರಾಜನು ತಪಗೈದು ಸಂತೋಷವಾಗಿ ನಿರ್ವೃತಿಸುಖವನ್ನು ಹೊಂದಿದ. ಆದ್ದರಿಂದ ಹುಸಿಯು ಕೆಟ್ಟುದೆಂದು ಅಂಜಿ ನಡೆಯಬೇಕು. ಈ ರೀತಿಯಲ್ಲಿ ಗಣಧರಸ್ವಾಮಿಗಳು ಸತ್ಯದಿಂದ ಉಂಟಾಗುವ ಸುಖವನ್ನೂ, ಅಸತ್ಯದಿಂದ ಒದಗುವ ದುಃಖವನ್ನೂ ನಿರೂಪಿಸಿದರು. ಅದನ್ನು ಕೇಳಿದ ಶ್ರೇಣಿಕ ಮಹಾರಾಜನು ಧನ್ಯಭಾವವನ್ನು ಅನುಭವಿಸಿದ.

ಅಸ್ತೇಯ

ಸತ್ಯವ್ರತದ ಕತೆಯನ್ನು ಕೇಳಿ ಸಂತೋಷಚಿತ್ತನಾದ ಮಗಧಾಧಿಪತಿಯು ಭಕ್ತಿಯಿಂದ ಮುನಿಪೋತ್ತಮನಿಗೆ ವಂದಿಸಿ ಕಳ್ಳತನ ಮಾಡದ ವ್ರತವನ್ನು ಕುರಿತ ಕತೆಯನ್ನು ತನಗೆ ಹೇಳಬೇಕೆಂದು ಗಣಧರಸ್ವಾಮಿಗಳನ್ನು ಕೇಳಿಕೊಂಡ. ಪಾಪದ ಬಲವನ್ನು ಕುಗ್ಗಿಸುವ ಅಸ್ತೇಯ ವ್ರತದ ಕತೆಯನ್ನು ಹೇಳಲು ತೊಡಗಿದರು. ಅರಸ, ಅರಸಿಯರು, ಪರಿಜನರು, ಇವರಿಂದ ಕೂಡಿ ಅರಮನೆಯು ಒಪ್ಪುವಂತೆ, ಮಳೆಯಿಂದ ಕೆರೆ ಹೊಲ ತೋಟಗಳು ಶೋಭಿಸುವಂತೆ, ಕಾಡಿಗೆಯಿಂದ ಕೂಡಿ ಕಣ್ಣಿನ ಬಿಳಿ ಮತ್ತು ಕಪ್ಪು ಆಲಿಗಳು ಸುಂದರವಾಗುವಂತೆ, ಬಲ್ಲಿದರಿಂದ ಕೂಡಿ ಗಿರಿದುರ್ಗ ಜಲದುರ್ಗ ವನದುರ್ಗಗಳನ್ನೊಳಗೊಂಡ ಕೋಟೆಯು ಒಪ್ಪುವಂತೆ, ಶುಕ್ಲಪಕ್ಷದಲ್ಲಿ ಚಂದ್ರಬಲ ತಾರಾಬಲಗಳಿಂದ ಕೂಡಿ ಮದುವೆಯೊಪ್ಪುವಂತೆ ಸಮ್ಯಕ್ತ್ವದಲ್ಲಿ ಕೂಡಿ ಕೊಲೆ ಹುಸಿ ಕಳವುಗಳನ್ನು ದೂರಮಾಡುವ ಸುವ್ರತಗಳಿಂದ ಭವ್ಯರು ಒಪ್ಪುತ್ತಾರೆ. ಮೇದಿನಿಚಕ್ರವು ಕಡು ಕೂರ್ಮೆಯಿಂದ ಮನಸ್ಸನ್ನು ತಿಳಿಸುತ್ತದೆ, ಬಯಕೆಯ ಧನವನ್ನು ತಿಳಿಸುವುದು, 'ನೀನೆ ಶರಣು' ಎನ್ನುವುದು ಎಂದ ಮೇಲೆ ಅಸ್ತೇಯ ಎಂಬ ಸುವ್ರತಕ್ಕೆ ಎಣೆಯಾದುದು ಯಾವುದಿದೆ? ಇನ್ನು ಆ ವ್ರತದ ಮಹಿಮೆ ಎಂತಹುದೆಂದರೆ, ಈ ಕತೆಯನ್ನು ಕೇಳು.

ನಂದನವನಗಳಿಂದಲೂ, ತಾವರೆಗಳಿಂದ ತುಂಬಿದ ಸರೋವರ ಗಳಿಂದಲೂ, ನಾನಾ ಗ್ರಾಮಗಳಿಂದಲೂ ತುಂಬಿದ ಅವಂತಿ ಎಂಬುದು ಒಂದು ನಾಡು. ಅದರಲ್ಲಿ ಭೂಸುದತಿಯ ಮಣಿಭೂಷಣದಂತೆ ಉಜ್ಜಯಿನಿ ನಗರವು ಶೋಭಿಸುತ್ತದೆ. ಅದನ್ನಾಳುವವನು ಧರ್ಮಧರ ಮಹಾರಾಜ. ಆತನ ರಾಜಶ್ರೇಷ್ಠಿ ಅನುಪಮಗುಣನಿಲಯನೂ ಜಿನಪಾದಪಯೋಜಷಟ್ಪದನೂ ಜನವಿನುತನೂ ಇಂದ್ರಸಮಾನನೂ ನಿರ್ಮಲನೂ ಆದ ಜಿನದತ್ತ ಎಂಬುವವನು. ಅವನು ಜೈನಸಮಯವಾರಿಧಿಚಂದ್ರನೆನಿಸಿಕೊಂಡಿದ್ದವನು. ಅವನ ಹೆಂಡತಿ ಶುದ್ಧಚರಿತೆ ಯಾದ ಜಿನೇಂದ್ರದಾಸಿ ಎಂಬುವವಳು. ಆ ದಂಪತಿಗಳಿಗೆ ಜಿನದಾಸ ಎಂಬುವ ಹಿರಿಯ ಮಗನಿದ್ದ. ಅವನು ಮನ್ಮಥನಂಥ ರೂಪವಂತ, ಜಗತ್ಪೂಜ್ಯ ಮತ್ತು ವಿಕ್ರಮದಲ್ಲಿ ಸಿಂಹನಂಥವನು. ಅವರು ಹಲವು ಕಾಲ ಸುಖದಿಂದ ಬಾಳುತ್ತಿದ್ದರು.

ಹೀಗಿರಲು ಒಂದು ದಿನ, ಪಾಪವೆಂಬ ಮೋಡಕ್ಕೆ ಗಾಳಿಯಂತಿದ್ದವರೂ, ಉಜ್ವಲಚರಿತರೂ, ಜೈನಾಗಮಸಮುದ್ರರೂ ಆದ ಜಿನಪಾಲಿತರೆಂಬ ತಪೋಧನರು ಏಕವಿಹಾರಿಗಳಾಗಿ ಉಜ್ಜಯಿನಿಯನ್ನು ಸಮೀಪಿಸಿದರು. ಆಗ ಸೂರ್ಯಾಸ್ತ ವಾದದ್ದರಿಂದ ಅಷ್ಟು ಹೊತ್ತಲ್ಲಿ ಸುತ್ತಾಡುವುದು ಸಂಯಮಧರರಾದ ಋಷಿಗಳಿಗೆ ತಕ್ಕುದಲ್ಲವೆಂದು ಅವರು ಗಂಧವತಿ ಎಂಬ ನದಿಯ ದಡದ ಮೇಲಿದ್ದ ಒಂದು ರುದ್ರವಾದ ಶ್ಮಶಾನವನ್ನು ಹೊಕ್ಕರು. ಇನ್ನೂ ಕಣ್ಣ ಬೇಳಕಿರುವಾಗಲೇ ಹುಡುಕಾಡಿ ಬೇರೆ ಜೀವಿಗಳಿಲ್ಲದ, ಹಸನಾದ ಒಂದು ಹಾಸುಗಲ್ಲನ್ನು ಆಯ್ದುಕೊಂಡರು. ಪಾಪವೆಂಬ ಕತ್ತಲೆಗೆ ಸೂರ್ಯನ ಹಾಗಿದ್ದವರೂ ಮಂದರಧೈರ್ಯರೂ ಆದ ಋಷಿಯು ರವಿಯುದಯದವರೆಗೂ ಮಿಸುಕುವುದಿಲ್ಲವೆಂದು ಆಲೋಚಿಸಿ ಒಂದು ಪಕ್ಕವಾಗಿ ಮಲಗಿದರು.

ಹಾಗೆ ಆ ಗುಣಗಣಾಭರಣರು ನಿತ್ಯಯೋಗದಲ್ಲಿ ತಮ್ಮ ಶರೀರವನ್ನು ಅಲುಗಾಡಿಸದೆ ಒಂದೇ ಮಗ್ಗುಲಲ್ಲಿ ಏರಿಸಿದ ಬಿಲ್ಲಿನಂತೆ ಮಲಗಿರುವಾಗ ಉಜ್ಜಯಿನಿಯಿಂದ ವಿಡಂಬನೆಂಬ ಒಬ್ಬ ಸಾಧಕನು ಅಲ್ಲಿಗೆ ಬಂದ. ನಿಧಿನಿಕ್ಷೇಪಗಳನ್ನು ಸಾಧಿಸುವ ಉದ್ದೇಶದಿಂದ ಯಥೋಚಿತವಾದ ಬಲಿಯ ಸಮೇತ ಅವನು ಬಂದಿದ್ದ. ಅವನು ತನ್ನ ಮನೆಯಲ್ಲಿಯೇ ಹಲ್ಲುಜ್ಜಿ, ಸ್ನಾನ ಮಾಡಿ ಶುಚಿಗೊಂಡು ಧೌತಾಂಬರವುಟ್ಟು ವೀರೋಪವಾಸವನ್ನು ಕೈಗೊಂಡು ಹೊರಟಿದ್ದ. ನಡುರಾತ್ರಿಯಲ್ಲಿ ಕಟ್ಟಾಳ್ತನದಿಂದ ಹಲವು ಪ್ರತಿಜ್ಞೆಗಳನ್ನು ಕೈಗೊಂಡು ಛಲವಂತಿಕೆಯಿಂದ ತನ್ನ ಅಳವು ಕಲಿತನಗಳನ್ನು ನಂಬಿ ಅಂದುಕೊಂಡಿದ್ದನ್ನು

ಸಾಧಿಸುವೆನೆಂಬ ನಂಬಿಕೆಯಿಂದ ಅಲ್ಲಿಗೆ ಬಂದಿದ್ದ. ವಿಧಾತ್ರನು ಕರಡಿಯ ಚರ್ಮವನ್ನು ಕಾಡಿಗೆಯಲ್ಲಿ ಅದ್ದಿ ಲೋಕವನ್ನೆಲ್ಲ ಬಾಸಣಿಸಿರುವನೇನೋ ಎಂಬಂತಿದ್ದ ಕತ್ತಲೆಯ ಆ ರಾತ್ರಿಯಲ್ಲಿ ಗಂಧವತಿಯ ದಡದ ಗುಂಟ ಬಂದು ವಿಡಂಬನು ಪಿತೃವನವನ್ನು ಹೊಕ್ಕ. ನಡೆಯುತ್ತಿರುವಾಗ ಅವನಿಗೆ ದಾರಿಯಲ್ಲಿ ತಲೆ ಹರಿದಿದ್ದ, ದೊಡ್ಡ ದಸಿಯ ಮೇಲೆ ಅದ್ಭುತವೆಂಬಂತೆ ಇದ್ದು ತಮ್ಮ Pಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಬಿದ್ದಿದ್ದ. ಕರುಳು ಹರಿದಿದ್ದ, ಭೂತಲದ ಮೇಲೆ ಮಲಗಿ ಕಣ್ಣು ತೆರೆದುಕೊಂಡು ಸ್ವೈರಣೆಗೆಟ್ಟು ಭಯಂಕರವಾಗಿ ಅಳುತ್ತಿದ್ದ ಜನರು ಕಾಣಿಸಿದರು. ಒಂದೇ ಮಗ್ಗುಲಲ್ಲಿ ಮಲಗಿದ್ದ ಜಿನಪಾಲಿತ ಮುನಿಯನ್ನು ಕಂಡು ಹೆಣವೆಂದು ಭಾವಿಸಿದ ಅವನು ಅವರಿದ್ದೆಡೆಗೆ ಧಾವಿಸಿದ. ಮತ್ತೆರಡು ಹೆಣಗಳನ್ನು ತಂದು ಮೂರು ತಲೆಗಳನ್ನು ಒಲೆಯಂತೆ ಹೂಡಿ ಕಿಚ್ಚು ಹೊತ್ತಿಸಿ ಚರುವನ್ನು ಬೇಯಿಸತೊಡಗಿದ.

ಭೋರೆಂದು ಕಿಚ್ಚಿನ ನಾಲಗೆಗಳು ವ್ಯಾಪಿಸಲು ಉಂಟಾದ ಅತೀವ ನೋವಿನಲ್ಲೂ ಸ್ವೈರಣೆಗೆಟ್ಟು ಕಿರಿಚಾಡದೆ ಧೀರನಾದ ಮುನಿಯು ಜಿನಪಾದಪದ್ಮಗಳನ್ನು ನೆನದು, ದುರ್ನಯವಿಲ್ಲದೆ ಏಕಚಿತ್ತದಿಂದ ಜಿನಪತಿಯನ್ನೇ ನಂಬಿಕೊಂಡಿದ್ದರು. ಜಿನನೇ ಗುರು, ಜಿನನೇ ದೈವ, ಜಿನನೇ ಕುಲಸ್ವಾಮಿ, ಜಿನನೇ ತಾನು ನಂಬಿದ ಒಡೆಯ ಎಂಬ ಭಾವನೆಯಿಂದ ಜರಿಯದೆ ಬೆಚ್ಚದೆ ಮುನಿಯದೆ ಸೆಡೆಯದೆ ದೇಹದ ಮೇಲಿನ ಮೋಹವನ್ನು ಕಳೆದುಕೊಂಡಿದ್ದ ಮುನಿವರೇಣ್ಯರು ಅಲುಗಾಡದೆ ಇದ್ದರು. ಹೆಗಲೆಲ್ಲ ಬೆಂದುಹೋಗಿ ತೋಳಿನ ಮೂಲವನ್ನು ಕಿಚ್ಚು ಸುಡುವಾಗ ಮುನಿಯ ನರಗಳು ಸೆಟೆದು ತೋಳುಗಳು ತಮಗೆ ತಾವೇ ನೆಗೆದವು. ಇದನ್ನು ಕಂಡ ವಿಡಂಬನು ಸೊಡರನ್ನು ಕಂಡ ಕೋಡಗದಂತೆ ಗಾಬರಿಗೊಂಡ; 'ಕಾಡು ಎದ್ದಿತು' ಎಂದು ಬೆಚ್ಚಿ ಮಂತ್ರವ್ಯಾಕರಣವನ್ನು ಅರಿಯದವನಾದ್ದರಿಂದ ಮಂತ್ರದಲ್ಲಾದ ಹೆಚ್ಚುಕಡಿಮೆಗಳನ್ನು ತಿಳಿಯದೆ ಮತಿಗೆಟ್ಟ. ಮರ ಗಿಡ ಪೊದರು ಮುಂತಾದ ತರುನಿಕಾಯವೆಲ್ಲ ಒಟ್ಟಾಗಿ ಬಂದು ತನ್ನನ್ನು ದಯೆಯಿಲ್ಲದೆ ನುಂಗಿ ಹಾಕುವಂತೆ ಅವನಿಗೆ ತೋರಿತು. ಕೆಟ್ಟೆ ಎನ್ನುತ್ತ ಬಾಯ್ಬಿಟ್ಟು ಸುರಗಿಯನ್ನು ಎಸೆದು ಅಡುಗೆಯನ್ನು ಬಿಟ್ಟು ಪ್ರಜ್ಞೆಯಿಲ್ಲದವನಂತೆ ಬತ್ತಲೆಯಾಗಿ ತಡವರಿಸಿಕೊಂಡು ಕತ್ತಲಲ್ಲಿ ಓಡಿಹೋದ.

ಅವನ ಕಾಲ ತುಳಿತದಿಂದ ತ್ರಸಸ್ಥಾವರಜೀವಿಗಳಿಗೆ ಬಾಧೆಯಾಗದಿರದು ಎಂದು ಪಾಪಭೀರುವಾದ ಜಿನಪಾಲಿತಮುನಿಯು ಕರುಣೆಯಿಂದ ವ್ಯಥೆಗೊಂಡರು. ವನದೇವತೆಯರೂ ನಗರದೇವತೆಯರೂ ಅಲ್ಲಿ ಬಂದು ವಿಡಂಬನನ ದೊಂಬಾಟಕ್ಕೂ ಸಮ್ಯಕ್ತ್ವಚೂಡಾಮಣಿಯ ಧೈರ್ಯಕ್ಕೂ ಜೀವದಯೆಗೂ ವಿಸ್ಮಯಗೊಂಡರು. ಜಯಜಯ ನಿನಾದವೂ ದುಂದುಭಿರವವೂ ಸಮುದ್ರಘೋಷದ ಹಾಗೆ ಘೂರ್ಣಿಸುತ್ತಿರಲು, ಪ್ರೀತಿಯಿಂದ ಬಂದು ನಮೇರು ಮಂದಾರ ಪಾರಿಜಾತ ಕಲ್ಪವೃಕ್ಷ ಮುಂತಾದ ಹೂಗಳನ್ನು ಮುನಿಯ ಮೇಲೆ ಸುರಿದು ಕೈಮುಗಿದುಕೊಂಡು, ಮುನಿಯ ಧೈರ್ಯ, ದೇಹದ ಬಗೆಗಿನ ನಿರ್ಮೋಹ, ದೃಢಚಿತ್ತ ಮುಂತಾದವುಗಳನ್ನು ಹೊಗಳಿದರು. ತನ್ನ ಶಕ್ತಿಯ ಅರಿವಿಲ್ಲದೆ, ವಿಡಂಬನು ಕಿನ್ನರ ಭೂತ ಕಿಂಪುರುಷ ದೈತ್ಯನಿವಾಸಗಳನ್ನು ಹೊಕ್ಕು ಡಾಂಭಿಕತೆಯಿಂದ ಈ ಉನ್ನತಚಿತ್ತನನ್ನು ಹೆಣವೆಂದು ಭಾವಿಸಿ ಕಿಚ್ಚಿನಿಂದ ಸುಟ್ಟರೂ ಅಳುಕದ ಮಂದರಕ್ಷಮನಾದ ಮುನಿಯ ಬಗ್ಗೆ ಅವರಿಗೆ ಅಪಾರ ಗೌರವವುಂಟಾಯಿತು. ಮುನಿಯ ತೋಳು ನೆಗೆಯಲು ಸಾಧಕನು ಭಯದಿಂದ ಪಿತೃವನದಿಂದ ಓಡಿಹೋದ. ದೇಹವನ್ನೂ ಹಣವನ್ನೂ ತೊರೆದು ಅನುಪಮರೆನಿಸಿದ ಜೈನಯೋಗಿಗೂ ಉಪಾಸಕರಿಗೂ ಇರುವ ಧೈರ್ಯವು ಬೇರೆಯವರಿಗೆ ಎಲ್ಲಿಂದ ಬರಬೇಕು? ಬೇಡದೆ, ದೈನ್ಯವನ್ನು ತೋರದೆ ಸಂಸಾರಸಮುದ್ರದಲ್ಲಿ ಬಿದ್ದು ಉರುಳದೆ ವೀರವೃತ್ತಿಯಿಂದ ಮೋಕ್ಷಸುಖಕ್ಕೆ ಚಿತ್ತವನ್ನು ತಿರುಗಿಸುವ ಜೈನಮುನಿಪುಂಗವರಿಗೆ ಲೋಕದಲ್ಲಿ ಯಾರು ಸಮಾನರು? ಎಂದು ಹಲವು ಬಗೆಯಲ್ಲಿ ಹೊಗಳಿದ ದೇವಸಮೂಹದ ಸದ್ದನ್ನೂ ಪಂಚಮಹಾಶಬ್ದವನ್ನೂ ಕೇಳಿದ ಊರಿನ ಜನರೆಲ್ಲ ವಿಸ್ಮಯಗೊಂಡರು.

ಜಿನಾಗಮದ ಬಲದಿಂದ ಬೆಟ್ಟದಂತೆ ಸ್ಥಿರನಾಗಿ ನಿಂತ ಮನಸಿಜ ನಾಗಕೇಸರಿಯಾದ ಮುನಿಜನವಂದ್ಯನನ್ನು ಈಗಲೇ ನೋಡಬೇಕೆಂಬ ಆತುರದಿಂದ ಬಂದವನಂತೆ ದಿನಕರನು ದಿವಿಜದಿಕ್ಕನ್ನು ಏರಿದ. ತನ್ನ ಯೋಗವನ್ನು ನಿರ್ವರ್ತಿಸಿ

ಅಲ್ಲಿಂದ ಎದ್ದು ಬರುತ್ತಿದ್ದ ಮುನಿಯನ್ನು ಜಿನದತ್ತನು ಕಂಡು ಆದರದಿಂದ ವಂದಿಸಿ ತಮ್ಮ ಮನೆಗೆ ಕರೆದುಕೊಂಡು ಬಂದ. ಮುನಿಯನ್ನು ದೇಹಾರದಲ್ಲಿ ಇರಿಸಿ ದಿವ್ಯೌಷಧವನ್ನು ತಿಳಿದ ವೈದ್ಯರನ್ನು ಅಲ್ಲಿಗೆ ಕರೆಸಿ ವೆಚ್ಚಕ್ಕೆ ಯೋಚಿಸದೆ ಚಿಕಿತ್ಸೆ ಮಾಡಿಸಿದ. ತಾನು ಪಕ್ಕದಲ್ಲೇ ಇದ್ದು ಪಥ್ಯಪಾನಗಳನ್ನು ಕ್ರಮವಾಗಿ ನಡೆಸಿ ಉಪಚರಿಸಿದ. ಮುನಿಯ ಹುಣ್ಣುಗಳೆಲ್ಲ ಕೆಲವು ದಿನಗಳಲ್ಲಿ ವಾಸಿಯಾಯಿತು. ತನ್ನ ಗಾಯಗಳನ್ನು ಸುವೈದ್ಯರಿಂದ ಚಿಕಿತ್ಸೆ ಮಾಡಿಸಿದ ವೈಶ್ಯಲಲಾಮನ ಬಗ್ಗೆ ಮುನಿಗೆ ಮೆಚ್ಚಿಕೆಯುಂಟಾಯಿತು. ದೇಹದ ಬಾಧೆ ಮತ್ತು ಮನಸ್ಸಿನ ಕ್ಲೇಶಗಳು ಹೋದ ಮೇಲೆ ಎಷ್ಟು ದಿನ ಇಲ್ಲಿರುವುದು, ತನ್ನ ವಿಹಾರವನ್ನು ಮುಂದುವರೆಸೋಣವೆಂದು ನಿಶ್ಚೈಸಿ ಮುನಿಯು ಅದನ್ನು ಸೆಟ್ಟಿಗೆ ಹೇಳಿ ಆಲಯದಿಂದ ಹೊರಟರು. ಅವನನ್ನು ಬಿಟ್ಟಿರಲಾರದೆ ಆ ವೈಶ್ಯಾಂಬರಭಾನುವು ತಾನೂ ಆಲಯದಿಂದ ಹೊರ ಬಂದ. ಸ್ವಲ್ಪ ದೂರದಲ್ಲಿ ನಿಂತು ಮುನಿಯು, "ಮುನಿಮತವನ್ನು ತಿರಸ್ಕರಿಸದೆ ಸದ್ಧರ್ಮವನ್ನು ಅನುಸರಿಸುತ್ತ ಸನ್ಮಾರ್ಗದಲ್ಲಿ ನಡೆಯಬೇಕು" ಎಂದು ಧರ್ಮವನ್ನು ಬೋಧಿಸಿ ಮನೆಗೆ ಮರಳಲು ಸೆಟ್ಟಿಗೆ ತಿಳಿಸಿದರು. ಹಾಗೇ ಆಗಲೆಂದು ಸೆಟ್ಟಿಯು ಮುನಿಗೆ ಪ್ರದಕ್ಷಿಣೆ ಬಂದು ಮನೆಗೆ ವಾಪಸಾದ.

ಆ ಹೊತ್ತಿಗೆ, ತಂದೆ ಹೊರಗೆ ಹೋದುದನ್ನು ನೋಡಿ, ಅಂದಿನ ವೆಚ್ಚಕ್ಕೆ ಹಣವಿಲ್ಲವೆಂದು ಹಳಹಳಿಸಿದ್ದ ಸೆಟ್ಟಿಯ ದುರಾತ್ಮನಾದ ಮಗನು, ಮನೆಯವರಿಗೆ ತಿಳಿಯದಂತೆ ಬೀಗದ ಕೈಯನ್ನು ತೆಗೆದುಕೊಂಡು ಕೋಣೆಯ ಕದವನ್ನು ತೆರೆದು ಅಲ್ಲಿದ್ದ ಹಣವನ್ನು ನೋಡಿದ. ಅವನಿಗೆ ಸಂತೋಷವಾಯಿತು. ತನಗೆ ಬೇಕೆನಿಸಿದಷ್ಟು ಹಣವನ್ನು ಕಟ್ಟಿಕೊಂಡು ಹೋಗಬೇಕೆಂದು ಅಲೋಚಿಸಿದ. ಅಷ್ಟರಲ್ಲಿ ಜಿನದತ್ತಸೆಟ್ಟಿ ವಾಪಸಾದ. ಅವನಿಗೆ ಹೊನ್ನಿನ ಬಗ್ಗೆ ಬಹಳ ಮೋಹವಾದ್ದರಿಂದ ಹೊನ್ನಿದ್ದ ಕೋಣೆಯ ಬಳಿ ಬಂದ. ತಾನು ಹಾಕಿದ್ದ ಬೀಗ ಕಾಣಿಸಲಿಲ್ಲ; ಕದವನ್ನು ನೂಕಿದ, ತಂದೆ ಬಂದುದು ಜಿನದಾಸನಿಗೆ ಗೊತ್ತಾಯಿತು. ಗಾಬರಿ ಭಯಗಳು ಅವನನ್ನು ಆವರಿಸಿದವು; ತಪ್ಪಿಸಿಕೊಂಡು ಹೊರಗೆ ಹೋಗಲಾರದೆ, ಚಿನ್ನದ ದಿಂಡಿದ್ದ ಜಾಗಕ್ಕೆ ಹೋಗಿ ಅವಿತುಕೊಂಡು ಮೇಲೊಂದು ದಿಂಡನ್ನು ಮುಚ್ಚಿಕೊಂಡ, ಕೋಣೆಯನ್ನು ಪ್ರವೇಶಿಸಿದ ಸೆಟ್ಟಿಯು ರಾಶಿಯಲ್ಲಿ ಸ್ವಲ್ಪ ಹೊನ್ನು ಇಲ್ಲದ್ದನ್ನು ಕಂಡು ಅತೀವ ದುಃಖದಿಂದ ಮೈಮರೆತು ಬಿದ್ದು ಬಿಟ್ಟ. ಕೊಂಚ ಹೊತ್ತಿಗೆ ಸೆಟ್ಟಿಗೆ ಎಚ್ಚರವಾಯಿತು. ಕಳ್ಳನಿಗಾಗಿ ಹುಡುಕಾಡಿದ; ಯಾರನ್ನೂ ಕಾಣದೆ, ಕೋಣೆಯ ಬಾಗಿಲನ್ನು ಮುಂಚಿನಂತೆ ಭದ್ರಪಡಿಸಿ ಮನೆಯಿಂದ ಹೊರಟ. ಕುದುರೆಯನ್ನು ಕಳೆದುಕೊಂಡವರು ಗವಾಕ್ಷಿಯನ್ನು ಕೆದಕಿದರೆಂಬ ಹಾಗೆ ಜಿನಪಾಲಿತ ಮುನಿಯೇ ಹೊನ್ನನ್ನು ತೆಗೆದುಕೊಂಡು ಹೋಗಿರಬೇಕೆಂದು ಭಾವಿಸಿ ಅವರ ಹಿಂದೆಯೇ ಬಂದ. ಅವರಿಗೆ ಕೃತಕ ವಿನಯದಿಂದ ವಂದಿಸಿ, "ಇಲ್ಲಿಯವರೆಗೆ ತಾವು ನನ್ನನ್ನು ಹರಸುತ್ತಿದ್ದಿರಿ. ಇಂದು ನನ್ನನ್ನು ಅವಜ್ಞೆ ಮಾಡಿ ಹೋಗಬೇಡಿ; ತಾವು ನಾಳೆ ಹೋಗಿರಿ" ಎಂದು ಹಲವು ವ್ರತಗಳ ನೆವವೊಡ್ಡಿ ಮುನಿಯನ್ನು ತನ್ನ ಜೊತೆ ಮತ್ತೆ ಮನೆಗೆ ಕರೆತಂದ.

ಹಣವಿದ್ದ ಕೋಣೆಯ ಬಾಗಿಲಿನಲ್ಲಿ ದೊಡ್ಡ ಮಣೆಯೊಂದನ್ನು ಇರಿಸಿ ಯತಿನಾಥನನ್ನು ಅದರ ಮೇಲೆ ಕೂರಿಸಿದ ಜಿನದತ್ತ ತಾನೂ ಪಕ್ಕದಲ್ಲಿ ಕೂತ; ಮೋಕ್ಷವನ್ನು ಪಡೆಯುವ ಆಕಾಂಕ್ಷೆಯಿಂದ ದೇಹಮೋಹವನ್ನು ತೊರೆದು ಕೈವಲ್ಯವನ್ನು ಪಡೆಯದೆ ಈ ಸಾಧುವು ಮೂರ್ಖನಾಗಿ ನನ್ನ ಹಣವನ್ನೇಕೆ ಕಳ್ಳತನ ಮಾಡಲು ಬಯಸಿದ ಎಂದು ಅವನಿಗೆ ವಿಸ್ಮಯವಾಯಿತು. ತನ್ನ ದುರ್ಭಾವದಿಂದ ಲೋಭಿಯು ಗುಣವಿಶೇಷವನ್ನು ಅರಿಯ ಎಂಬಂತೆ ಮುನಿಯನ್ನು ಕಳ್ಳನೆಂದೇ ತೀರ್ಮಾನಿಸಿದ. ಕದ್ದ ಹೊನ್ನನ್ನು ಒಮ್ಮೆಗೇ ವಾಪಸ್ಸು ಕೇಳಿದರೆ ಕಂಡವರೆಲ್ಲ ಮುನಿಗೆ ತಾನು ಅವಮಾನ ಮಾಡುತ್ತಿರುವನೆಂದು ಭಾವಿಸಿ ತನ್ನನ್ನೇ ಕೊಂದಾರು ಎಂದು ಅವನಿಗೆ ಭಯವಾಯಿತು. ಹಾಗಾಗಿ ಉಪಾಯದಿಂದ ತನಗೆ ಕೆಟ್ಟ ಹೆಸರಾಗಲೀ ಅಪವಾದವಾಗಲೀ ಬಾರದಂತೆ ಕಳೆದುಕೊಂಡ ಹಣವನ್ನು ಪಡೆಯಬೇಕೆಂದು ಸಂದರ್ಭಕ್ಕೆ ತಕ್ಕನಾದ ಕತೆಯೊಂದನ್ನು ಹೇಳಿದ.

"ಮಹಾ ಮುನಿಗಳೇ, ಒಂದು ಕತೆ ಹೇಳುತ್ತೇನೆ ಕೇಳಿ" ಎಂದು ಉಪಕ್ರಮಿಸಿದ. ವ್ಯಾಘ್ರಖೇಡ ಎಂಬ ಒಂದು ಊರು. ಅಲ್ಲಿ ದಿನಕರ ಎಂಬ ಸೂರ್ಯತೇಜಸ್ಸಿನ ಒಬ್ಬ ವ್ಯಕ್ತಿ ವಾಸಿಸುತ್ತಿದ್ದ. ಅವನ ಹಿರಿಯ ಮಗ ಕರಾಳ ಎಂಬುವವನು; ಕೆಟ್ಟವರ ಸಹವಾಸ, ಸಪ್ತವ್ಯಸನಗಳಿಂದ ಕೂಡಿದವನು. ಹೀಗಿರಲು ಒಮ್ಮೆ ಸೂಳೆಗೆ ಕೊಡಲು ತನ್ನಲ್ಲಿ ಹಣವಿಲ್ಲದಂತಾದಾಗ, ರಾಜಭವನಕ್ಕೆ ಕನ್ನ ಹಾಕಿದ. ತನ್ನ ಕೈಲಾದಷ್ಟು ಹೊನ್ನು ತೆಗೆದುಕೊಂಡು ಹೊರಟ. ಕಾವಲು ಕಾಯುತ್ತಿದ್ದ ತಳವಾರರು ಅವನನ್ನು ನೋಡಿ ಕಲ್ಲು ಗುಂಡು ಬಡಿಗೆಗಳನ್ನು ತೆಗೆದುಕೊಂಡು ಕೂಗುತ್ತ ಹಿಂಬಾಲಿಸಿದರು. ಭಯಗೊಂಡ ಆ ದುರಾತ್ಮನು ಎಲ್ಲಿಗೆ ಹೋಗಬೇಕೆಂಬುದು ತಿಳಿಯದೆ ಗಾಬರಿಗೊಂಡ. ಓಡಿ ಸುಸ್ತಾಗಿ ಕೊನೆಗೆ ಒಬ್ಬ ವ್ಯಾಪಾರಿಯ ಬಳಿ ಬಂದು ಅವನ ಕಾಲಿಗೆ ಬಿದ್ದು ತನ್ನ ಪರಿಸ್ಥಿತಿಯನ್ನು ಹೇಳಿಕೊಂಡ. ತನಗೆ ಸಾವು ಸಮನಿಸುತ್ತಿದೆ; ಇದನ್ನು ತಪ್ಪಿಸದಿದ್ದರೆ ತಳವಾರರು ತನ್ನನ್ನು ಹಿಡಿದು ಚಿತ್ರಹಿಂಸೆಯಿಂದ ಕೊಲ್ಲುವರೆಂದು ಗೋಗರೆದ. ಕಳ್ಳ ಒಳ್ಳೆಯವನಲ್ಲ, ನಾಯಿ ಮೌನಿಯಲ್ಲ ಎಂಬ ಗಾದೆಯ ಮಾತನ್ನು ಗಮನಿಸದೆ ಆ ಹರದನು ಕರುಣೆಯಿಂದ ಆ ದುರಾತ್ಮನನ್ನು ತನ್ನ ಬಳಿ ಕುಳ್ಳಿರಿಸಿಕೊಂಡು ಬಟ್ಟೆಯನ್ನು ಹೊದ್ದುಕೊಂಡ. ಅಷ್ಟರಲ್ಲಿ ತಳವಾರರು ಅಲ್ಲಿಗೆ ಬಂದು, "ಇಲ್ಲಿಗೆ ಯಾರಾದರೂ ಬಂದು ಮನೆಯನ್ನು ಹೊಕ್ಕರೇ?" ಎಂದು ಕೇಳಿದರು. ಅಷ್ಟಕ್ಕೇ ಬಿಡದೆ ಮನೆಯೊಳಗೆ ಬಂದು ಎಲ್ಲ ಕಡೆ ತಡಕಾಡಿದರು. ಎಲ್ಲಿಯೂ ಕಾಣದೆ, ಮುಂದೆ ಕುಳಿತಿದ್ದ ಸೆಟ್ಟಿ ಡೊಳ್ಳು ಹೊಟ್ಟೆಯವನೆಂದು ಭಾವಿಸಿ ಅವನನ್ನು ಪರೀಕ್ಷಿಸದೆ ಹೊರಟು ಹೋದರು.

ಊರಿನಲ್ಲಾದ ಗದ್ದಲವೆಲ್ಲ ಅಡಗಿದಾಗ ಕರಾಳನ ಮನಸ್ಸಿನ ಆತಂಕ ಕಡಿಮೆಯಾಯಿತು; ಮೆಲ್ಲನೆ ವ್ಯಾಪಾರಿಯ ಹಣದ ಚೀಲವನ್ನು ನೋಡಿದ. ಅವನ ಮನಸ್ಸಿನಲ್ಲಿ ಉಂಟಾದ ಆಲೋಚನೆಯು ಜಿನೇಂದ್ರವಾಕ್ಯದಂತೆ ಹುಸಿಯ ತವರುಮನೆ, ಪಾಪದ ಆಗರ, ಇಂದ್ರಿಯಗಳ ಆರ್ಭಟಗಳ ತಾಣ, ಕೋಪದ ಬಿತ್ತು, ದುರ್ವ್ಯಸನದ ಠಾವು, ಮನ್ಮಥವ್ಯಸನದ ಆವಾಸ ಎಂಬುದಕ್ಕೆ ಅನುಗುಣವಾಗಿತ್ತು. ವ್ಯಸನಿಗಿಂತ ಪಾತಕನೂ ಹುಲಿಗಿಂತ ಕ್ರೂರಿಯೂ ಇಲ್ಲವೆಂಬ ಮಾತನ್ನು ನಿಜ ಮಾಡುವಂತೆ, ವ್ಯಾಪಾರಿಯ ದಯೆಯಿಂದಾಗಿ ತನಗೆ ಒದಗಿದ ಆಪತ್ತು ನಿವಾರಣೆಯಾಯಿತು, ಹಾಗಾಗಿ ಈತನೇ ತನ್ನ ಬಂಧು ಎಂಬುದನ್ನು ಮರೆತು ಹೊನ್ನಿನ ಆಸೆಗೆ ಒಳಗಾದ. ಹುಸಿಕನಿಗೆ ಮಾಡಿದ ಹಿತವೂ, ಕಳ್ಳನಿಗೆ ಮಾಡಿದ ಉಪಕಾರವೂ, ಸಮುದ್ರದಲ್ಲಿ ಮುಳುಗಿದ ಜಿಂಕೆಯೂ, ಗ್ರಾಮ ಮುಖಂಡನಿಗೆ ಮಾಡಿದ ಮೇಲ್ಮೆಯೂ ವ್ಯಥಾ ಎನ್ನುವುದಕ್ಕೆ ಅನುಗುಣವಾಗಿ ವ್ಯಾಪಾರಿಗೆ ಕೇಡು ಬಗೆದ. ತಾನು ಸಿಕ್ಕಿಸಿಕೊಂಡಿದ್ದ ಕಿರುಗತ್ತಿಯಿಂದ ಕರಾಳನು ಆಡನ್ನು ಕೊಲ್ಲುವಂತೆ ವ್ಯಾಪಾರಿಯನ್ನು ಹೊರಳಿಸಿ ಕೊಂದು ಅವನ ಹಣದ ಥೈಲಿಯನ್ನು ತೆಗೆದುಕೊಂಡು ಹೋದ. ಅಂತೆಯೇ ಕೆಲವರು ದೌರ್ಜನ್ಯವನ್ನು ಮಾಡುತ್ತಾರೆಯೇ ವಿನಾ ಪರೋಪಕಾರವನ್ನು ಮಾಡರು ಎಂದು ಕತೆಯನ್ನು ಮುಗಿಸಿ ಜಿನದತ್ತನು ಸುಮ್ಮನಾದ.

ಈ ಕತೆಯನ್ನು ಕೇಳಿ ಮುನಿನಾಥರಿಗೆ ಅಚ್ಚರಿಯಾಯಿತು. ಜಿನದತ್ತನು ತನಗೆ ಈ ಕತೆಯನ್ನು ಹೇಳುವ ಉದ್ದೇಶ ಬೇರೆ ಇರಬೇಕು ಎಂದು ಅವರು ಬಗೆದರು. ಈತನ ಮನೆಯಿಂದ ಯಾವುದಾದರೂ ವಸ್ತುವು ಕಳ್ಳತನವಾಗಿರಬಹುದು; ಅದರ ಮೇಲಿನ ಮೋಹದಿಂದ ಬಾಯ್ಬಿಟ್ಟು ಕೇಳಲಾರದೆ ನನ್ನ ಮೇಲಿನ ಶಂಕೆಯಿಂದ ಇದನ್ನು ಹೇಳಿರಬಹುದು ಎಂದು ಊಹಿಸಿದರು. ಇದು ಇವನ ಗೊಟ್ಟಾಟವಲ್ಲ; ದುಷ್ಕೃತ್ಯದ ಗೊಟ್ಟಾಟ ಎಂದು ತಮ್ಮಲ್ಲಿಯೇ ನಕ್ಕರು. ಈ ವಣಿಕನಿಗೆ ನಂಬಿಕೆಯುಂಟಾಗುವಂತೆ ತಾವೂ ಒಂದು ಕತೆಯನ್ನು ಹೇಳಿ ತಮ್ಮ ಮೇಲಿನ ಅಪವಾದವನ್ನು ನಿವಾರಣೆ ಮಾಡಿಕೊಳ್ಳಬೇಕೆಂದು ಬಗೆದು ಹೀಗೆ ಹೇಳಲು ತೊಡಗಿದರು: ದ್ವಾರಾವತಿ ಎಂಬ ಒಂದು ರಾಜಧಾನಿಯಿತ್ತು; ಅದನ್ನು ಆಳುತ್ತಿದ್ದ ರಾಜ ಭೂನುತನಾದ ನಾರಾಯಣ ಎಂಬುವವನು. ಒಮ್ಮೆ ಆ ನಗರಕ್ಕೆ ಧರಣೀಖ್ಯಾತರೂ, ಗುಣಗಣಸಮೇತರೂ, ಉನ್ನತಶೀಲರೂ, ಅಮರಗಿರಿನಿಭ ಧೈರ್ಯರೂ ಆದ ದಂಡಕರೆಂಬ ಋಷಿಗಳು ಬಂದರು. ಅವರ ಬರುವಿಕೆಯನ್ನು ಋಷಿನಿವೇದಕನಿಂದ ಅರಿತ ರಾಜನು ಪರಿಜನ ಸಮೇತನಾಗಿ ಬಂದು ಅವರಿಗೆ ವಂದನೆ ಸಲ್ಲಿಸಿ, ಸ್ವಲ್ಪ ಕಾಲ ಧರ್ಮಶ್ರವಣ ಮಾಡಿದ. ಋಷಿಗಳು ಹಿರಿದಾದ ಒಂದು ವ್ಯಾಧಿಯಿಂದ ನರಳುತ್ತ ಗಿಡಿಗಿಡಿಜಂತ್ರವಾಗಿದ್ದುದನ್ನು ಗಮನಿಸಿ ಅವರ

ರೋಗವನ್ನು ನಿವಾರಿಸಲು ನಿರ್ಧರಿಸಿದ. ಬುದ್ಧವಂತನಾದ ರಾಜನು, "ತಮ್ಮ ಪಾದ, ನನ್ನ ಮೇಲೆ ದಯೆಯಿಟ್ಟು ತಾವು ನಮ್ಮ ಊರಲ್ಲಿಯೇ ಚಾತುರ್ಮಾಸವನ್ನು ಕಳೆದು ನಮ್ಮನ್ನು ಹರಸಬೇಕು" ಎಂದು ಬೇಡಿಕೊಂಡ. ಮಳೆಗಾಲ ಹತ್ತಿರವಿದ್ದುದರಿಂದ ದಂಡಕ ಋಷಿಗಳು ಆತನ ಪ್ರಾರ್ಥನೆಗೆ 'ತಥಾಸ್ತು' ಎಂದರು. ನಾರಾಯಣನು ಋಷಿಗಳನ್ನು ತನ್ನ ದೇಹಾರದಲ್ಲಿ ನಿಲ್ಲಿಸಿದ.

ರಾಜನು ಒಬ್ಬ ಸದ್ವೈದ್ಯನನ್ನು ಏಕಾಂತದಲ್ಲಿ ಬರಮಾಡಿಕೊಂಡು ಆದಷ್ಟು ಬೇಗ ಮುನಿಗೆ ಅಡಸಿರುವ ವ್ಯಾಧಿಯನ್ನು ಹೋಗಲಾಡಿಸು ಎಂದು ಹೇಳಿದ. ಅದಕ್ಕೆ ಒಪ್ಪಿದ ವೈದ್ಯನು ಮನೆಗೆ ಹೋಗಿ ಋಷಿಯ ರೋಗನಿವಾರಣೆಗೆ ಬೇಕಾದ ದಿವ್ಯೌಷಧಗಳನ್ನು ತೆಗೆದುಕೊಂಡು ಬಂದು ರಾಜನ ಕೈಯಲ್ಲಿಟ್ಟ. ತಾನು ಕೊಡುತ್ತಿರುವುದು ಔಷಧವೆಂದು ತಿಳಿದರೆ ಮುನೀಂದ್ರರು ಅದನ್ನು ತೆಗೆದುಕೊಳ್ಳಲಾರರೆಂದು ಬಗೆದು, ಆ ದಿನ ಉಂಡೆಯ ಹಬ್ಬದ ಆಚರಣೆಯೆಂದು ಪ್ರಕಟಿಸಿ, ಮದ್ದನ್ನು ನವಣೆಯ ಹಿಟ್ಟಿನಲ್ಲಿ ಬೆರಸಿ ಸಣ್ಣ ಸಣ್ಣ ಉಂಡೆಗಳನ್ನು ಮಾಡಿ ಅವುಗಳನ್ನು ಮುನಿಗಳಿಗೆ ಸಮರ್ಪಿಸಬೇಕೆಂದು ಆದೇಶಿಸಿ ತನ್ನ ಹದಿನಾರು ಸಾವಿರ ಅರಸಿಯರ ಮನೆಗಳಿಗೆ ಕಳಿಸಿಕೊಟ್ಟ. ಅರಸಿಯರು ಆತ್ಮವಲ್ಲಭನ ಮಾತಿನಂತೆಯೇ ಮುನಿಯ ಬಳಿ ನಿತ್ಯವೂ ಹೋಗಿ ಎದುರಿಗೆ ನಿಂತು, "ಸ್ವಾಮಿ, ಈ ಊರಿನಲ್ಲಿಯೂ ಅರಮನೆಯಲ್ಲಿಯೂ ಇದೇ ಊಟ" ಎಂದು ಸಮರ್ಪಿಸಿದರು. ಅವರ ಮಾತನ್ನು ನಂಬಿದ ಮುನೀಂದ್ರನು ಉಂಡೆಗಳನ್ನು ಮೆಲ್ಲುತ್ತಿದ್ದ. ಅದರಿಂದಾಗಿ ಕೆಲವು ದಿನಗಳಲ್ಲಿಯೇ ಅವರ ವ್ಯಾಧಿಯು ವಾಸಿಯಾಯಿತು. ಇದರಿಂದ ನಾರಾಯಣ ಮಹಾರಾಜನಿಗೆ ಮಹಾ ಮುದವಾಯಿತು.

ತಾನು ಮಾಡಿದ ಮದ್ದಿನಿಂದ ಮುನಿಯ ಮಹಾರೋಗವು ವಾಸಿಯಾಯದುದರಿಂದ ತನಗಿಂತ ಶ್ರೇಷ್ಠನಾದ ವೈದ್ಯನು ಇಲ್ಲವೆಂಬ ಹಮ್ಮು ವೈದ್ಯನಿಗುಂಟಾಯಿತು. ತನ್ನ ವೈದ್ಯದ ಹಿರಿಮೆಯನ್ನು ನಾರಾಯಣನಿಗೆ ಮನವರಿಕೆ ಮಾಡಿಸಿ ಅವನಿಂದ ಮೆಚ್ಚು ಪಡೆಯುವೆನೆಂದುಕೊಂಡು ಮೈಮರೆತು ಆ ವೈದ್ಯನು ದಂಡಕ ಋಷಿಯ ಬಳಿಯೇ ಕುಳಿತಿದ್ದ ನಾರಾಯಣನ ಬಳಿ ಬಂದ. ರಾಜನಿಗೂ ಋಷಿಗೂ ಗೌರವಪುರಸ್ಸರವಾಗಿ ವಂದಿಸಿದ ಅವನು ಮುನೀಂದ್ರನ ಮುಖಕಮಲವನ್ನು ನೋಡುತ್ತ ಹೀಗೆಂದ: "ಲೋಕೋತ್ತಮರಾದ ತಮ್ಮನ್ನು ಇಲ್ಲಿಯವರೆಗೂ ಗುಣಪಡಿಸಲು ಅಸಾಧ್ಯವಾದ ರೋಗವೊಂದು ಬಾಧಿಸುತ್ತಿತ್ತು; ಈಗ ಸದ್ಯ ವಾಸಿಯಾಯಿತು" ಎಂದು ನಯವಾಗಿಯೇ ನುಡಿದ. ಅದಕ್ಕೆ ಋಷಿಯು, "ಕರ್ಮದಿಂದ ಕಡುದುಃಖವುಂಟಾಗುತ್ತದೆ; ಆ ಕರ್ಮದ ಉಪಶಮನದಿಂದ ದುಃಖವೂ ನಾಶವಾಗುತ್ತದೆ; ಇದರಲ್ಲಿ ಚೋದ್ಯವಾವುದೂ ಇಲ್ಲ" ಎಂದು ಜಿನಾಗಮದ ಕ್ರಮದಂತೆ ಉತ್ತರಿಸಿದರು. ರೋಗವು ತಾನು ಮಾಡಿದ ಔಷಧೋಪಚಾರದಿಂದ ಹೋಯಿತು ಎನ್ನದೆ ಶುಭಕರ್ಮೋದಯದಿಂದ ಹೋಯಿತು ಎಂದು ಹೇಳಿ ತನ್ನ ವೈದ್ಯವನ್ನು ಅರಸನ ಮುಂದೆ ಕೀಳ್ಮಾಡಿದನೆಂದು ವೈದ್ಯನಿಗೆ ಮುನಿಯ ಮೇಲೆ ಅತೀವ ಕೋಪವುಂಟಾಯಿತು. ಈ ಕಾರಣದಿಂದ ಅವನು ಕೆಲವು ದಿನಗಳಲ್ಲಿಯೇ ಸತ್ತು ಕೋಡಗವಾಗಿ ಹುಟ್ಟಿದ.

ಯತಿನಾಥನು ದ್ವಾರಾವತಿಯಿಂದ ಹೊರಟು ಹಿಂದಿನಂತೆಯೇ ವಿಹರಿಸುತ್ತ ಆ ಕೋಡಗವಿದ್ದ ವನವನ್ನು ಸೇರಿ ಒಂದು ಮಾವಿನ ಮರದ ಕೆಳಗಿನ ಶುದ್ಧವಾದ ಜಾಗದಲ್ಲಿ ಪ್ರತಿಲೇಖನವನ್ನು ಮಾಡಿ ಕುಳಿತುಕೊಂಡು ಪಂಥಾತಿಚಾರವನ್ನು ಗೈಯುತ್ತಿದ್ದರು. ಹಿಂದಿನ ಜನ್ಮದಲ್ಲಿ ವೈದ್ಯನಾಗಿದ್ದ ಕೋಡಗವು ಹಿಂದಿನ ವೈರವನ್ನು ನೆನೆಸಿಕೊಂಡು, ನಾರಾಯಣನ ಮುಂದೆ ಅಂದು ತನ್ನನ್ನು ಅವಮಾನಿಸಿದ ಈ ಮುನಿಯ ಸೊಕ್ಕನ್ನು ಮುರಿದು ನೋವುಂಟುಮಾಡುವುದಾಗಿ ಪ್ರತಿಜ್ಞೆ ಮಾಡಿತು. ಇತರ ಕೋತಿಗಳ ಜೊತೆ ಸೇರಿ ಒಂದು ಒಣಗಿದ ಮಾವಿನ ಮರದ ಕೊಂಬೆಯನ್ನು ತಂದು ಮುನಿಯ ಮೇಲೆ ಎಸೆಯಿತು. ಅದು ಆ ಮುನಿಪನ ತೊಡೆಗೆ ಚುಚ್ಚಿ ಗಾಯವಾಯಿತು. ಇದರಿಂದ ವಿಚಲಿತನಾಗದ ಮುನಿಯು ಮನಸ್ಸಿನಲ್ಲಿಯೂ ಕುದಿಯದೆ ದೇಹವು ತನ್ನದಲ್ಲವೆಂಬಂತೆ ಕುಳಿತಿದ್ದ. ಹೀಗೆ ಮುನಿನಾಥನು ಮೌನದಿಂದಿರುವುದನ್ನು ಕಂಡು ಕೋತಿಗೆ ಜ್ಞಾನೋದಯವಾಯಿತು; ದೇಹವು ತನ್ನದಲ್ಲ ಎಂಬಂತೆ ಇರುವ ಈ ಮಂದರಧೈರ್ಯನಾದ ಮುನಿಗೆ ತಾನು ವೈದ್ಯವನ್ನು ಮಾಡುವೆನೆಂಬುದು ಎಗ್ಗತನ, ತಾನು ಕಡು ಪಾಪಿ, ನಿರಪರಾಧಿಗೆ ನೋವನ್ನುಂಟುಮಾಡಿದೆ ಎಂದು ತನ್ನನ್ನು

ನಿಂದಿಸಿಕೊಂಡಿತು. ಇತರ ಕೋತಿಗಳೊಡನೆ ಸೇರಿ ಮುನಿಪನ ತೊಡೆಯನ್ನು ಚುಚ್ಚಿದ್ದ ಕೊರಡನ್ನು ಕಿತ್ತು, ಹಿಂದಿನ ಜನ್ಮದಲ್ಲಿ ವೈದ್ಯನಾಗಿದ್ದುದರಿಂದ ತಕ್ಕ ಮದ್ದನ್ನು ಮಾಡಿ ಹುಣ್ಣನ್ನು ವಾಸಿ ಮಾಡಿ ಅಣುವ್ರತಧಾರಿಯಾಗಿ ಸತ್ತು ದೇವಗತಿಯನ್ನು ಪಡೆಯಿತು. ಹೀಗೆ ಕೆಲವರು ಮೂರ್ಖರು ವಿಚಾರಹೀನರಾಗಿ ಸಾಧುಗಳನ್ನು ಸುಮ್ಮನೆ ಕಾಡುವರು ಎಂದು ಮುನಿಯು ಕತೆಯನ್ನು ಮುಗಿಸಿದರು.

ಇದನ್ನು ಕೇಳಿದ ಜಿನದತ್ತನಿಗೆ ಈ ಮುನಿಯು ಸಂಪಾದಿಸಲು ಅಸಾಧ್ಯವಾದಷ್ಟು ಹಣವನ್ನು ಲೋಭದಿಂದ ಕದ್ದು ಅದನ್ನು ಕಳೆದುಕೊಳ್ಳಲಾರದೆ ಬಚ್ಚಿಟ್ಟುಕೊಂಡಿದ್ದಾನೆ ಎಂದು ದುಃಖವುಂಟಾಯಿತು. ಸ್ವಲ್ಪ ಕಾಲ ಸುಮ್ಮನಿದ್ದ ನಂತರ ಸೈರಿಸಲಾರದೆ ಮತ್ತೊಂದು ಕತೆಯನ್ನು ಹೇಳಿ ತನ್ನ ಹೊನ್ನನ್ನು ಮರಳಿ ಪಡೆಯುವೆನೆಂದು ನಿರ್ಧರಿಸಿ ಹೇಳಲು ತೊಡಗಿದ. ಭಾನುಪುರವೆಂಬ ಊರಿನಲ್ಲಿ ಅನೂನಗುಣನಾದ ಕಪಿಲನೆಂಬ ಬ್ರಾಹ್ಮಣನೊಬ್ಬ ವಾಸಿಸುತ್ತಿದ್ದ. ಒಮ್ಮೆ ಅವನಿಗೆ ಒಂದು ಆಲೋಚನೆ ಬಂತು. ತನಗೆ ಅನುಪಮ ವಿದ್ಯೆಗಳು ತಿಳಿದಿದ್ದರೂ ಗಾರುಡ ವಿದ್ಯೆಯು ಮಾತ್ರ ಗೊತ್ತಿಲ್ಲ; ಅದನ್ನು ಕಲಿತರೆ ತಾನು ಜನರ ದೃಷ್ಟಿಯಲ್ಲಿ ತುಂಬ ವಿದ್ಯಾವಂತನೆನಿಸಿಕೊಳ್ಳಬಹುದು ಎಂಬುದೇ ಆ ಆಲೋಚನೆ. ಅಲ್ಲದೆ, ಅದಿಲ್ಲದೆ ಲಾಭವೂ ಕೀರ್ತಿಯೂ ಲಭಿಸುವುದಿಲ್ಲವೆಂದು ತೀರ್ಮಾನಿಸಿದ. ಎಲ್ಲಿಗೆ ಹೋದರೆ ತಾನು ಗಾರುಡವಿದ್ಯೆಯನ್ನು ಕಲಿಯಬಹುದೆಂದು ವಿಚಾರಿಸಿ ಪೂರ್ವದೇಶಕ್ಕೆ ಹೋದರೆ ಅದು ಸಾಧ್ಯವಾಗುತ್ತದೆಂದು ತಿಳಿದು ಅಲ್ಲಿಗೆ ಹೋಗಲು ನಿರ್ಧರಿಸಿದ.

ಭಾನುಪುರದಿಂದ ಹೊರಟ ಕಪಿಲನು ಪೂರ್ವದೇಶದ ಒಬ್ಬ ಪ್ರಸಿದ್ಧ ಮಂತ್ರವಾದಿಯ ಬಳಿ ನಡೆದ. ತಿರಿದುಂಡು ಅವನು ಹೇಳಿದಂತೆ ಮಾಡಿ, ಕಪಟೋಪಾಯಗಳಿಂದಲೂ ಲಲ್ಲೆವಾತುಗಳಿಂದಲೂ ಶಿಷ್ಯವೃತ್ತಿಯನ್ನು ಕೈಗೊಂಡ. ಮಂತ್ರವಾದಿಯು ಇವನ ಮೇಲೆ ಕರುಣೆಯನ್ನು ಹೊಂದಿ ಉಪದೇಶವನ್ನು ನೀಡಿದ. ಗರುಡವಿದ್ಯೆಯನ್ನು ಕಲಿತು ಕಪಿಲನು ಆ ದೇಶದಿಂದ ಹೊರಟು ಬರುತ್ತಿದ್ದ. ದಾರಿಯಲ್ಲಿ ಅವನಿಗೆ ಸತ್ತ ಹುಲಿಯೊಂದು ಕಾಣಿಸಿತು. ಅದು ಹಾವು ಕಚ್ಚಿದುದರಿಂದ ಸತ್ತಿದೆಯೆಂದು ತಿಳಿದ. ಅವನಿಗೆ ತಾನು ಕಲಿತಿದ್ದ ಮಂತ್ರದ ಬಗ್ಗೆ ನಚ್ಚಿಕೆಯಿತ್ತು. ಹುಲಿಯ ಮೇಲಿನ ಕರುಣೆಯಿಂದ ಕಪಿಲನು ನೀರನ್ನು ಮಂತ್ರಿಸಿ ಅದರ ಮೇಲೆ ಚಿಮುಕಿಸಿದ. ಇದರಿಂದ ಹಾವಿನ ವಿಷವಿಳಿದು ಹುಲಿ ಎದ್ದು ಕೂತಿತು. ಬ್ರಾಹ್ಮಣನು ತನ್ನನ್ನು ಬದುಕಿಸಿದನೆಂಬ ಉಪಕಾರವನ್ನು ನೆನೆಯದ ಹುಲಿಯು ಕ್ರೌರ್ಯದಿಂದ ಅವನನ್ನು ಹಿಡಿದು ಸೀಳಿ ತಿಂದು ಹಾಕಿತು. ಹೀಗೆಂದು ಕತೆಯನ್ನು ಕೇಳಿದ ಜಿನದತ್ತನು, "ನಿಮ್ಮಡಿ, ವಿಷದ ಹಾವು ತನ್ನನ್ನು ಕಚ್ಚಿ ಸಾಯಿಸಿತು; ಆದರೆ ಹುಲಿಯು ತನ್ನನ್ನು ಬದುಕಿಸಿದ ವಿಪ್ರನನ್ನು ಕೊಂಡು ಹಾಕಿತು; ಇದಾವ ನ್ಯಾಯ?" ಎಂದು ಕೇಳಿದ.

ಜಿನದತ್ತನ ಮನಸ್ಸಿನಲ್ಲಿ ನಡೆದಿರುವ ವಿಚಾರವನ್ನು ಊಹಿಸಿದ ಜಿನಪಾಲಿತ ಮುನಿಯು ಅವನ ಕಪಟವೃತ್ತಿಯನ್ನು ತಿಳಿದ. ತನ್ನ ಶುದ್ಧ ಚಾರಿತ್ರವನ್ನು ಅವನಿಗೆ ಉಪಾಯದಿಂದ ತಿಳಿಸಬೇಕೆಂದು ಮುನಿಯು ಮತ್ತೊಂದು ಕತೆಯನ್ನು ಹೇಳಲುಪಕ್ರಮಿಸಿದ. ಕೇಸರಿಪುರವೆಂಬುದು ಒಂದು ಊರು; ಅದನ್ನು ವಾಸವ ಎಂಬ ಹೆಸರಿನ ರಾಜನು ಆಳುತ್ತಿದ್ದ. ಅವನು ಭಾಸುರಕೀರ್ತಿಯನ್ನು ಪಡೆದು ಇಂದ್ರನಿಗೆ ಸಮಾನವಾದ ವೈಭವದಿಂದ ರಾಜ್ಯವನ್ನಾಳುತ್ತಿದ್ದ. ಅಲ್ಲಿನ ರಾಜಶ್ರೇಷ್ಠಿಯು ಅಮಲ ಎಂಬಾತ; ಅವನ ಸಣ್ಣ ವಯಸ್ಸಿನ ಮಗ ವಿಮಲ ಎಂಬುವವನು. ಆ ಮಗುವು ಆಭರಣಗಳನ್ನು ತೊಟ್ಟು ಮನೆಯ ಅಂಗಳದಲ್ಲಿ ಸಾಮಾನ್ಯವಾಗಿ ಆಡಿಕೊಂಡಿರುತ್ತಿತ್ತು.

ಒಮ್ಮೆ ಹೀಗೆ ಆಡಿಕೊಂಡಿರುವಾಗ, ನೆರೆಮನೆಯಾಕೆಯು ಹೊಳೆಯುವ ಆಭರಣಗಳನ್ನು ಕಂಡು ಮೋಹಗೊಂಡಳು. ಇತರರು ತನ್ನನ್ನು ಏನು ಮಾಡಿಯಾರೆಂಬ ಕೆಟ್ಟ ಧೈರ್ಯದಿಂದ ಕ್ರೂರಿಯಾದ ಅವಳು ಮಗುವಿನ ಗಂಟಲನ್ನು ಹಿಸುಕಿ ಅದರ ಮೇಲಿದ್ದ ಒಡವೆಗಳನ್ನು ಕಿತ್ತುಕೊಂಡಳು. ಮಗುವಿನ ಹೆಣವನ್ನು ಈ ಮನೆಯಲ್ಲೇ ಬಿಟ್ಟರೆ ತಳವಾರರು ತನ್ನನ್ನು ಹಿಡಿದು ಶಿಕ್ಷೆಗೆ ಒಳಪಡಿಸುವರೆಂದು ಊಹಿಸಿ, ಮಗುವಿನ ದೇಹವನ್ನು ಬೀದಿಯಲ್ಲಿ ಸಾಗುತ್ತಿದ್ದ ಒಂದು ಸಾಧು ಬಸವನ ಕೋಡಿಗೆ ಸಿಕ್ಕಿಸಿ, ನೋಡಿದವರಿಗೆ ಎತ್ತು ಮಗುವನ್ನು ಕೊಂದಿರಬೇಕೆಂಬ ಭಾವನೆ ಬರುವಂತೆ

ಮಾಡುವೆನೆಂದು ಬಗೆದಳು. ಹಗಲೆಲ್ಲ ಓಡಾಡಿಕೊಂಡು ಬೀದಿಯಲ್ಲಿ ಯಾರಾದರೂ ಕರುಣೆಯಿಂದ ಕಬ್ಬು, ಜೋಳ, ಅಕ್ಕಿ, ಕಡಲೆ, ತೌಡು, ಹಿಂಡಿ, ಹುಲ್ಲು ಮುಂತಾದವನ್ನು ಕೊಟ್ಟರೆ ತಿಂದು ಆ ಬಸವನು ತೃಪ್ತಿಯಿಂದ ಮೆಲುಕು ಹಾಕುತ್ತ ಬರುತ್ತಿದ್ದ ಅದರ ಬಳಿ ಕುಟಿಲೆಯು ನಡೆದಳು. ಕೂಸಿನ ಹೆಣವನ್ನು ಅ ತಾಟಕಿಯು ಬಸವನ ಎಡಗಡೆಯ ಕೋಡಿನ ಮೇಲೆ ರಭಸದಿಂದ ಕುಕ್ಕಿ ತನ್ನ ಮನಗೆ ವಾಪಸಾದಳು.

ಈ ಕಡೆ, ಮಗುವಿನ ಮೇಲಿನ ಮಮತೆಯಿಂದ ಬಾಳೆಯ ಹಣ್ಣುಗಳನ್ನು ತೆಗೆದುಕೊಂಡು ವಣಿಗ್ವರನು ಮಗನಿಗೆ ಕೊಡಲೆಂದು ಅವನನ್ನು ಹುಡುಕಿಕೊಂಡು ಬಂದ. ಎಲ್ಲರೂ ಭ್ರಮಿತರಾದವರಂತೆ ಮಗುವಿಗಾಗಿ ಹುಡುಕಿದರು; ಆದರೆ ಎಲ್ಲಿಯೂ ಕಾಣಲಿಲ್ಲ. ದುಃಖದಿಂದ ಬೀದಿ ಬೀದಿಗಳಲ್ಲಿ ಮಗುವಿಗಾಗಿ ತಿರುಗಾಡಿದರು. ಕೊನೆಗೆ ಬಸವನ ಕೋಡಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ಮಗುವಿನ ಹೆಣ ಕಾಣಿಸಿತು. ಎತ್ತು ಮಗುವನ್ನು ಕೊಂದಿದೆಯೆಂದು ಭಾವಿಸಿ ಜನರೆಲ್ಲ ಅದನ್ನು ಸುತ್ತಿಕೊಂಡು ನುಗ್ಗುನುರಿಯಾಗುವಂತೆ ಬಡಿದರು. ಬಸವನು ವೇದನೆಯನ್ನು ತಡೆಯಲಾರದೆ ಗೋಳಿಡುತ್ತ ಒರಲಿ ದಿಕ್ಕು ದಿಕ್ಕಿಗೆ ಹರಿದು, ತನ್ನ ಮನಸ್ಸಿನ ನಿರ್ಮಲತೆಯನ್ನು ಜನರಿಗೆ ತೋರಿಸಲೆಂಬಂತೆ ಕಮ್ಮಾರನ ಮನೆಯನ್ನು ಹೊಕ್ಕು ಅಲ್ಲಿ ಕೆಂಪಾಗಿ ಕಾದಿದ್ದ ಕಬ್ಬಿಣವನ್ನು ಕಚ್ಚಿ ಹಿಡಿದು ಜನರಿಗೆದುರಾಗಿ ಬಂದಿತು. ಜನರಿಗೆಲ್ಲ ಅಚ್ಚರಿಯಾಯಿತು. ಹೊಡೆಯುವುದನ್ನು ನಿಲ್ಲಿಸಿ, "ಈ ಪ್ರಾಣಿಯು ಮಗುವನ್ನು ಕೊಂದಿರಲಿಕ್ಕಿಲ್ಲ; ಯಾರೋ ಧನವಂಚಕರು ಕರುಣೆಯಿಲ್ಲದೆ ಕೊಂದಿರಬೇಕು" ಎಂದು ಭಾವಿಸಿದರು. ತಕ್ಷಣವೇ ತಳವಾರನನ್ನು ಕರೆದು, ಈ ಕೃತ್ಯವನ್ನು ಉಪೇಕ್ಷಿಸದೆ ನಿಜವಾದ ಕಳ್ಳನನ್ನು ಬೇಗ ಹಿಡಿಯಬೇಕೆಂದು ಕೇಳಿಕೊಂಡರು. ಅವನು ತಡಮಾಡದೆ ತನ್ನ ಬುದ್ಧಿಯ ಬಲದಿಂದ ಕೊಲೆಪಾತಕಿಯನ್ನು ಹಿಡಿದು ಪ್ರಜೆಗಳಿಗೆ ಒಪ್ಪಿಸಿದ. ವಿಚಾರ ಮಾಡದೆ ಬಡ ಸಾಧು ಎತ್ತನ್ನು ತಾವು ಅನ್ಯಾಯವಾಗಿ ಹೊಡೆದೆವೆಂದು ಮರುಗಿದರು. ಆದ್ದರಿಂದ ವಿವೇಕಿಗಳು ಅವಿಚಾರಿಗಳಾಗದೆ ವಿವೇಚನೆಯಿಂದ ವರ್ತಿಸಬೇಕು ಎಂದು ಮುನಿಯು ಕತೆಯನ್ನು ಮುಗಿಸಿದರು.

ಆದರೆ ಜಿನದತ್ತಸೆಟ್ಟಿ ಅವರ ಕೊನೆಯ ಮಾತನ್ನು ಅನುಸರಿಸಲಿಲ್ಲ. ಮುನಿಯೇ ಕಳ್ಳನೆಂದು ಬಗೆದು ಇನ್ನೊಂದು ಕತೆಯನ್ನು ಹೇಳಿ ತನ್ನ ಹೊನ್ನನ್ನು ಮತ್ತೆ ಪಡೆಯುವ ಆಲೋಚನೆ ಮಾಡಿದ. ಆ ಕತೆ ಹೀಗಿತ್ತು: ಕಾಪಾಲಿ ಎಂಬ ಹೆಸರಿನ ಒಬ್ಬ ಗೊರವನು ಭಾರತಿ ಎಂಬ ನದೀ ತೀರದಲ್ಲಿ ವಾಸಿಸುತ್ತಿದ್ದ. ಅವನು ಧೀರನಾದ ತಾಪಸಿ; ಮಿಕ್ಕೆಲ್ಲರಿಗಿಂತ ಹಿರಿಯನಂತೆ ಹೆಸರು ಪಡೆದಿದ್ದ. ಒಂದು ದಿನ ಆಕಾಶದಿಂದ ಹಾವುಗಳನ್ನು ನೇತುಬಿಟ್ಟ ಹಾಗೆ ಒಂದೇ ಸಮನೆ ಮಳೆ ಬಂತು. ಅದರ ನೀರಿನಿಂದ ಕಾಡು ಬೆಟ್ಟಗಳಲ್ಲಿದ್ದ ನದಿಗಳೆಲ್ಲ ಒಂದಾಗುವವಂತಾಯಿತು; ಸಮುದ್ರವು ಮೇರೆದಪ್ಪಿತೋ ಎಂಬಂತೆ ಕಾಣುತ್ತಿತ್ತು. ಜನರೆಲ್ಲ ಆಶ್ಚರ್ಯದಿಂದ ಮೂಕವಿಸ್ಮಿತರಾದರು. ಹಾಗೆ ಹೊಲನೆಲಗಳು ಜಳಪ್ರಳಯದಂತೆ ಬಂದ ತೊರೆಯಲ್ಲಿ ಒಂದು ಆನೆಯ ಮರಿ ಬಿದ್ದು ಪ್ರಾಣಭಯದಿಂದ ತಲ್ಲಣಿಸಿ ಬೇರುಸಹಿತ ಕಿತ್ತು ತೇಲಿಕೊಂಡು ಬರುತ್ತಿದ್ದ ಒಂದು ಮತ್ತಿಯ ಮರವನ್ನು ಹಿಡಿದುಕೊಂಡಿತು. ಹೀಗೆ ಮರ ಆನೆ ಎರಡೂ ಒಟ್ಟಿಗೇ ತೇಲಿಕೊಂಡು ಬರುತ್ತಿದ್ದವು. ಅದನ್ನು ಕಾಪಾಲಿ ಭಿಕ್ಷುಕ ನೋಡಿ, ಕರುಣೆಯಿಂದ ಈ ಹೊಳೆಯಲ್ಲಿ ಕೊಚ್ಚಿಹೋಗುವೆನೆಂದು ಅಂಜಿ ಹಿಂಜರಿಯದೆ ತಾನೂ ತನ್ನ ಚಟ್ಟಿನೊಡನೆ ದಡಕ್ಕನೆ ತೊರೆಯನ್ನು ಹಾಯ್ದು. ನೋವಾಗದ ರೀತಿಯಲ್ಲಿ ಆ ಆನೆಮರಿಯನ್ನು ಪ್ರವಾಹದಿಂದ ಪಾರು ಮಾಡಿ ಅದರ ಮನದ ಭಯವನ್ನು ಹಿಂಗಿಸಿ ತನ್ನ ಮಠಕ್ಕೆ ಕರೆತಂದ.

ಹುಳಿ ಅನ್ನ, ಬೇಲದ ಕೆಂದಳಿರು, ಹಾಲಿನ ಕೆನೆ, ಎಳೆಯ ಗರಿಕೆ, ಕಬ್ಬು ಇವುಗಳನ್ನು ತಂದು ಆನೆಮರಿಗಿತ್ತು ಅದನ್ನು ಸಲಹಿದ. ಅದು ಬೆಳೆದು ಇಂದ್ರನ ಐರಾವತಕ್ಕಿಂತ ಮಿಗಿಲೆನಿಸಿ ಕಾಪಾಲಿಯ ಮಠದಲ್ಲಿತ್ತು. ಕೆಲವು ಚಾಡಿಕೋರರು ಗೊರವನ ಮನೆಯಲ್ಲಿ ಆನೆಯಿರುವುದರ ಬಗ್ಗೆ ಅರಸನ ಬಳಿ ಹೋಗಿ ಚಾಡಿಯಾಡಿದರು. ಅದನ್ನು ಕೇಳಿದ ಅರಸನು ಗೊರವರು ಹಸುಗಳನ್ನು ಬಿಟ್ಟು ಆನೆಗಳನ್ನು ಕಟ್ಟಿಕೊಳ್ಳುವುದು ಸಂಪ್ರದಾಯಕ್ಕೆ ವಿರುದ್ಧ; ಆದ್ದರಿಂದ ಅದನ್ನು ತನಗೆ ಕಳಿಸಬೇಕು, ಇಲ್ಲದಿದ್ದರೆ ಅದನ್ನು ಹಿಡಿತರಿಸುವುದು ತನಗೆ ಸಾಧ್ಯ ಎಂದು ಹೇಳಿಕಳಿಸಿದ. ರಾಜಭೃತ್ಯರ ಮೂಲಕ ಕಾಪಾಲಿಗೆ

ನಡೆದುದೆಲ್ಲ ಗೊತ್ತಾಯಿತು; ಭಯದಿಂದ ಅವನು ಮದಗಜವನ್ನು ರಾಜನಿಗೆ ಕೊಟ್ಟು ಕಳಿಸಿದ. ಅವರು ಆನೆಯನ್ನು ಹೊಡೆದುಕೊಂಡು ಹೋಗಿ ರಾಜನಿಗೆ ಒಪ್ಪಿಸಿದರು. ಆದರೆ ಆನೆಯು ಅರಮನೆಯಲ್ಲಿರಲಾರದೆ ಸಿಡಿಮಿಡಿಗೊಂಡು ತನ್ನ ಹಿಂದಿನ ನೆಲೆಯನ್ನು ನೆನೆಸಿಕೊಂಡಿತು. ಕಾವಲುಗಾರರನ್ನು ಕೊಂದು ಅರಮನೆಯಿಂದ ಹೊರಟು ಕಾಪಾಲಿಯ ಮಠಕ್ಕೆ ಬಂತು. ರಾಜನು ವಿಚಾರಿಸಿದಾಗ ಆನೆಯು ಕಾವಲು ಭಟರನ್ನು ಕೊಂದು ಹಿಂದಿನ ನೆಲೆಗೆ ಹೋಯಿತೆಂಬುದು ತಿಳಿಯಿತು. ಅದರ ಮೇಲೆ ರಾಜನಿಗೆ ಮೋಹವಿದ್ದುದರಿಂದ ಅವನು ಭಟರನ್ನು ಕಳಿಸಿ ಮಠದಿಂದ ಮತ್ತೆ ಅದನ್ನು ಅರಮನೆಗೆ ಕರೆತರಿಸಿ ಹಿಂದಿನ ಜಾಗದಲ್ಲಿಯೇ ಕಟ್ಟಿ ಹಾಕಿಸಿದ. ಆದರೆ ಆನೆ ಮತ್ತೆ ಅಲ್ಲಿಂದ ತಪ್ಪಿಸಿಕೊಂಡು ಮಠಕ್ಕೆ ಹೋಯಿತು. ರಾಜನು ಅದನ್ನು ತರಿಸುವುದು, ಅದು ತಪ್ಪಿಸಿಕೊಂಡು ಮಠಕ್ಕೆ ಹಿಂತಿರುಗುವುದು – ಹೀಗೆ ಅನೇಕ ಬಾರಿ ಆಯಿತು. ಕೊನೆಗೆ ರಾಜನು ಕಾಪಾಲಿಯ ಮೇಲೆ ಕೋಪಬೇಸರಗಳನ್ನು ಮಾಡಿಗೊಂಡ. ತನಗೆ ಆನೆಯನ್ನು ಕೊಟ್ಟೂ ಕೊಡಲಾರದೆ ತನ್ನ ಮಠದ ಗೀಳನ್ನು ಹಿಡಿಸಿದ್ದರೇನು; ಅವನು ತನ್ನ ದೇಶದಿಂದಲೇ ಹೊರಟು ಹೋಗಬೇಕೆಂದು ಆಜ್ಞೆ ಮಾಡಿದ.

ಕಾಪಾಲಿಯು ಭಯಗೊಂಡು ಶಿಷ್ಯರೊಡನೆ ಆನೆಯನ್ನು ಅರಮನೆಗೆ ತಾನೇ ಕರೆತಂದು ರಾಜನಿಗೆ ಒಪ್ಪಿಸಿ, ತನ್ನ ಮೇಲೆನ ಅಪವಾದವನ್ನು ನಿವಾರಿಸಿಕೊಂಡು ಮನೆಗೆ ಮರಳಿದ. ರಾಜನು ರಾಜ್ಯದಿಂದ ಹೊರಹೋಗೆಂದು ಹೇಳಲು ಭಯಗೊಂಡು ಆ ಸಾಧುವು ತನ್ನನ್ನು ತಂದು ಅರಸನಿಗೊಪ್ಪಿಸಿ ಹೋದ, ಅವನದು ತಪ್ಪಿಲ್ಲ ಎಂದು ಆಲೋಚಿಸದೆ ಆನೆಯು ಕಾಪಾಲಿಯ ಮೇಲೆ ಮುಳಿದು, ಅರಮನೆಯಿಂದ ಬಂದು ಅವನನ್ನು ಕೊಂದುಹಾಕಿತು. ಹೀಗೆ ನಿರ್ದಯಿಗಳಾದ ದುರ್ಗುಣಯುತರು ಒಳ್ಳೆಯದನ್ನು ಮಾಡುತ್ತಾರೆಯೇ? ದಯೆಯಿಲ್ಲದೆ ಅನೇಕರು ನಿಂತು ನೋಡುತ್ತಿರುವಾಗ ಕಾಪಾಲಿಯು ಕಷ್ಟಪಟ್ಟು ಪ್ರವಾಹವನ್ನು ಹೊಕ್ಕು ತನ್ನನ್ನು ಕರುಣೆಯಿಂದ ರಕ್ಷಿಸಿದನೆಂದು ಬಗೆಯದೆ ಆನೆಯು ನಡುರಾತ್ರಿಯಲ್ಲಿ ಬಂದು ಆ ಬೌದ್ಧನನ್ನು ಕೊಂದುಹಾಕಿತು. ಧರಣಿಯಲ್ಲಿ ನಿರ್ದಯರು ಏನು ತಾನೇ ಮಾಡುವುದಿಲ್ಲ? ಎಂದು ಜಿನದತ್ತಸೆಟ್ಟಿ ಕತೆಯನ್ನು ಮುಗಿಸಿ ಮೌನ ತಾಳಿದ.

ಜಿನಪಾಲಿತಮುನಿ ತನ್ನಲ್ಲಿಯೇ ನಕ್ಕು, ಲೋಭಿಯ ಮನಸ್ಸೂ ಬಂದ ತೊರೆಯೂ ಶುದ್ಧವಾಗಲರಿಯವು ಎಂಬ ನಾಣ್ಣುಡಿಯನ್ನು ಇವನು ನಿಜ ಮಾಡುತ್ತಿದ್ದಾನೆ ಎಂದುಕೊಂಡರು. ಇನ್ನೂ ಒಂದು ಕತೆಯನ್ನು ಹೇಳಿ ತನ್ನ ಮೇಲಿನ ಅಪವಾದವನ್ನು ಹಿಂಗಿಸಿಕೊಳ್ಳಲು ಯೋಚಿಸಿ ಮುನಿಯು ಹೇಳತೊಡಗಿದರು. ದಂತಿಪುರವೆಂಬ ನಗರದಲ್ಲಿ ಅನಂತಶ್ರೀ ಎಂಬ ಒಬ್ಬ ಸೂಳೆಯಿದ್ದಳು. ಅವಳಾದರೋ ಮನ್ಮಥನ ಹೂಬಾಣವೇ ಹೆಣ್ಣ ರೂಪವನ್ನು ತಳೆಯಿತೋ ಎಂಬಂತಹ ಚೆಲುವೆ. ಅವಳ ಕೆಳದಿ ವಾಸವದತ್ತೆ. ಅವಳು ಹಣ ಕೊಟ್ಟು ಗಿಳಿಯೊಂದನ್ನು ಕೊಂಡು ತಂದು ಅದನ್ನು ಅನಂತಶ್ರೀಗೆ ಕಾಣಿಕೆಯಾಗಿತ್ತಳು. ಗಿಳಿಯ ಚೆಲುವಿಗೆ ಮನಸೋತ ಅನಂತಶ್ರೀ ವಾಸವದತ್ತೆಗೆ ಮೆಚ್ಚುಗೊಟ್ಟಳು. ಗಿಳಿಯನ್ನು ಹೊನ್ನಿನ ಪಂಜರದಲ್ಲಿರಿಸಿ ನಾನಾ ಪ್ರಕಾರದ ಸೂಳೆ ಮಾತುಗಳನ್ನೂ ಶೃಂಗಾರದ ವೃತ್ತಗಳನ್ನೂ ಅದಕ್ಕೆ ಕಲಿಸಿದಳು. ಅದರೊಡನೆ ಪರಮಸ್ನೇಹದಿಂದಿದ್ದ ಅನಂತಶ್ರೀ ಅದರ ಜೊತೆ ವಿನೋದದಿಂದ ಕಾಲ ಕಳೆಯುತ್ತಿದ್ದಳು.

ಸಿರಿಯಲ್ಲಾಗಲೀ ಸೌಭಾಗ್ಯದಲ್ಲಾಗಲೀ ತನಗೆ ಯಾರೂ ಸಮನಲ್ಲವೆಂಬ ಹೆಮ್ಮೆಯಿಂದ ಅನಂತಶ್ರೀಯು ಯಾರನ್ನೂ ಮೆಚ್ಚುವುದಿಲ್ಲ; ಆದರೆ ಅವಳು ಹೊಗಳಿಕೊಳ್ಳುವುದರ ಒಂದು ಅಡಕೆಯಷ್ಟು ಭಾಗದ ಪೆಂಪೂ ಅವಳಿಗಿಲ್ಲ ಎಂದು ಊರಿನ ಇತರ ಸೂಳೆಯರು ಅವಳ ಮೇಲೆ ಮುನಿಸಿಕೊಂಡಿದ್ದರು; ಅಲ್ಲದೆ ಅವಳನ್ನು ಕೊಲೆ ಮಾಡುವ ಆಲೋಚನೆಯನ್ನೂ ಮಾಡಿದರು. ಅವರೆಲ್ಲ ಸೇರಿ ವಾಸವದತ್ತೆಯನ್ನು ಅನುನಯದಿಂದ ತಮಗೆ ಆಪ್ತಳನ್ನಾಗಿ ಮಾಡಿಕೊಂಡರು. ಉಪಾಯದಿಂದ ಅನಂತಶ್ರೀಯನ್ನು ಕೊಲ್ಲಲು ಹೇಳಿ ಅಪಾರವಾದ ಹೊನ್ನನ್ನು ನೀಡಿ ವಾಸವದತ್ತೆಯನ್ನು ಪುಸಲಾಯಿಸಿ ಕಳ್ಳಿನಲ್ಲಿ ಕಾಲಕೂಟವನ್ನು ಬೆರಸಿ ಕೊಟ್ಟರು. ವಾಸವದತ್ತೆಯು ಹೊನ್ನಿನ ಮೇಲಿನ ವ್ಯಾಮೋಹದಿಂದ ಇದಕ್ಕೆ ಸಮ್ಮತಿಸಿ ವಿಷಪೂರಿತವಾದ ಕಳ್ಳನ್ನು ತೆಗೆದುಕೊಂಡು ಬಂದಳು. ನಯವಾಗಿ ಮಾತನಾಡುತ್ತ ಅದನ್ನು ಅವಳು ಅನಂತಶ್ರೀಗೆ

ಕುಡಿಯಲು ಕೊಟ್ಟಳು. ತಕ್ಷಣವೇ ಅದನ್ನು ಕುಡಿಯದೆ ಕಳ್ಳನ್ನು ಇರಿಸಲು ಹೇಳಿ, ಇಬ್ಬರೂ ಕೂಡಿ ಅದನ್ನು ಸಂಜೆ ಕುಡಿಯಬಹುದೆಂದು ಅನಂತಶ್ರೀ ಸೂಚಿಸಿದಳು. ಅದಕ್ಕಾಗಿ ಆ ಸಂಜೆ ಬರಬೇಕೆಂದು ವಾಸವದತ್ತೆಯನ್ನು ಆಹ್ವಾನಿಸಿ ಅವಳಿಗೆ ಮೆಚ್ಚುಗೊಟ್ಟಳು. ವಾಸವದತ್ತೆಯು ಕಳ್ಳಿನ ಬಟ್ಟಲನ್ನು ಮಂಚದ ಕೆಳಗಿರಿಸಿ ತನ್ನ ಮನೆಗೆ ಹೋದಳು.

ಇತ್ತ ಅನಂತಶ್ರೀಯು ಹಾಸಿಗೆಯ ಮೇಲೆ ಮಲಗಿಕೊಂಡಳು. ಪಂಜರದಲ್ಲಿದ್ದ ಗಿಳಿಯು ಗಾಜಿನ ಬಟ್ಟಲಿನಲ್ಲಿದ್ದ ಸುರೆಯನ್ನು ನೋಡುತ್ತ ಇತ್ತು. ಕಳ್ಳಿನ ವಾಸನೆಯಿಂದ ಆಕರ್ಷಿತವಾಗಿ ಅದನ್ನು ಮುತ್ತಿಕೊಂಡ ನೊಣಗಳೆಲ್ಲ ಸಾಯುತ್ತಿದ್ದುದನ್ನು ಕಂಡು ಅದು ವಿಷವೆಂಬುದು ಗಿಳಿಗೆ ತಿಳಿದುಹೋಯಿತು. ಈ ಕಳ್ಳನ್ನು ಕುಡಿದರೆ ಅನಂತಶ್ರೀಯು ಸಾಯುವಳೆಂದು ಬಗೆದು ಗಿಳಿಯು ಕರುಣೆಯಿಂದ ನೆಲದ ಮೇಲಕ್ಕೆ ಹಾರಿ ಬಟ್ಟಲಿನಲ್ಲಿದ್ದ ಕಳ್ಳನ್ನೆಲ್ಲ ಚೆಲ್ಲಿಬಿಟ್ಟಿತು. ಇದನ್ನು ಕಂಡ ಅನಂತಶ್ರೀ ಕೋಪಾಧಿಕ್ಯದಿಂದ ಗಿಳಿಯನ್ನು ಕೊಂದಳು. ನಿರಾಸೆಯಿಂದ ಉಳಿದ ಕಳ್ಳನ್ನು ನೋಡುತ್ತಿರುವಾಗ ಅದನ್ನು ಮುತ್ತಿಕೊಂಡ ನೊಣಗಳೆಲ್ಲ ಸಾಯುತ್ತಿದ್ದುದು ಅವಳ ಗಮನಕ್ಕೆ ಬಂತು. ಅವಳು ಎದೆಗೆಟ್ಟಳು; ತಾನೇನಾದರೂ ಇದನ್ನು ಕುಡಿದಿದ್ದರೆ ತಕ್ಷಣವೇ ಸಾಯುತ್ತಿದ್ದೆ; ಪಾಪ, ಈ ಗಿಳಿಯ ದಯೆಯಿಂದ ನಾನು ಸಾವಿನಿಂದ ಪಾರಾದೆ; ನನಗೆ ಉಪಕಾರ ಮಾಡಿದ ಗಿಳಿಯನ್ನು ವಿಚಾರ ಮಾಡದೆ ಕೊಂದು 'ನಿರ್ದಯಿಗಳು ಕಳ್ಳುಗುಡುಕರೂ ಮಾಡದ ಪಾಪವಿಲ್ಲ' ಎಂಬ ಮಾತನ್ನು ನಿಜ ಮಾಡಿದ ಪಾಪಿ ತಾನು ಎಂದು ಬಯ್ದುಕೊಂಡಳು. ಗಿಳಿಯ ಹೆಣವನ್ನು ತನ್ನ ಎದೆಯ ಮೇಲಿರಿಸಿಕೊಂಡು ಗೊಳೋ ಎಂದು ಅತ್ತಳು. ಹೀಗೆ ಬುದ್ಧವಂತರಾದವರು ಅವಳಂತೆ ಅವಿವೇಕಿಗಳಾಗದೆ ಕಾರ್ಯಗಳನ್ನು ಮಾಡಬೇಕೇ ಹೊರತು ಕೇವಲ ಉದ್ಧಟತನದಿಂದ ನಿರ್ದೋಷಿಗಳ ಮೇಲೆ ದೋಷಾರೋಪಣೆ ಮಾಡಬಾರದು ಎಂದು ಹೇಳಿ ಮುನಿಯು ಕತೆಯನ್ನು ಮುಗಿಸಿದರು.

ಮುನಿಯ ಮಾತು ಜಿನದತ್ತನಿಗೆ ಒಪ್ಪಿಗೆಯೇನೋ ಆಯಿತು, ಆದರೂ ಅವರ ಶುದ್ಧತೆಯ ಬಗ್ಗೆ ಸಂಪೂರ್ಣ ಮನವರಿಕೆಯಾಗಲಿಲ್ಲ. ಹೀಗಾಗಿ ಅವನು 'ಅಚ್ಚರಿಯ ಕತೆ' ಎಂದು ಪೀಠಿಕೆ ಹಾಕಿ ಮಗುದೊಂದು ಕತೆಯನ್ನು ಹೇಳಲು ತೊಡಗಿದ. ಅವನಿಭೂಷಣ ಎಂಬುದು ಒಂದು ಊರು. ಅದರಲ್ಲಿ ಕರಕುಶಲತೆಯಿಂದಲೂ ಬುದ್ಧಿವಂತನಾಗಿಯೂ ಇದ್ದ ಒಬ್ಬ ಬಡಗಿಯು ವಾಸಿಸುತ್ತಿದ್ದ. ಒಂದು ದಿನ ಅವನು ಮರ ಕಡಿಯಲೆಂದು ವಿಂಧ್ಯಪರ್ವತಕ್ಕೆ ಹೋದ. ಆಗಸದವರೆಗೂ ನೀಳವಾಗಿ ಬೆಳೆದ ತರತರವಾದ ಮರಗಳನ್ನು ಆದರದಿಂದ ನೋಡುತ್ತ ಪರಿಶೀಲಿಸುತ್ತ ಇದ್ದ. ಇದ್ದಕ್ಕಿದ್ದಂತೆ ಮದದಾನೆಯೊಂದು ಅತಿ ಭರದಿಂದ ಸರ್ರನೆ ಅವನೆಡೆಗೆ ಓಡಿ ಬಂತು. ಬಡಗಿಯು ಸುರ್ರನೆ ಸುಗಿದು ಅಂಜಿ ನಡುಗುತ್ತ ವನದಲ್ಲೆಲ್ಲ ತಿರ್ರನೆ ತಿರುಗಿದ. ಮುಂದೆ ಓಡಲಾರದೆ ಕೊನೆಗೆ ಒಂದು ಹೆಮ್ಮರವನ್ನು ಏರಿ ಕುಳಿತ. ಬಡಗಿಯನ್ನು ಕೊಲ್ಲಲಾರದೆ ಸ್ವಲ್ಪ ಹೊತ್ತು ಅಲ್ಲಿದ್ದ ಮದಗಜವು ಬೇರೆಡೆಗೆ ಹೊರಟು ಹೋಯಿತು. ಅದನ್ನು ನೋಡಿದ ಬಡಗಿ ಮರದಿಂದ ಇಳಿದು ಬಂದ. ಆ ಆನೆಯೇನಾದರೂ ಅವನನ್ನು ಅಟ್ಟಿಸಿಕೊಂಡು ಬಂದು ತುಳಿದಿದ್ದರೆ ಅವನು ಸಾಯುತ್ತಿದ್ದ; ಆದರೆ ಈ ಮರದ ಕಾರಣದಿಂದ ಬದುಕಿಕೊಡ; ಈ ಕೃತಜ್ಞತೆಯಿಂದ ಮರವನ್ನು ಕಡಿಯಬಾರದೆಂದು ಪರಿಗಣಿಸದೆ ಆ ಮರವನ್ನು ಅವನು ಕಡಿದುಬಿಟ್ಟ. ದುರ್ಜನನಾದವನು ಸ್ವಾರ್ಥಕ್ಕಾಗಿ ಸಜ್ಜನರನ್ನು ಯೋಚನೆಯಿಲ್ಲದೆ ಕಷ್ಟಕ್ಕೀಡುಮಾಡುವುದರಲ್ಲಿ ಅಚ್ಚರಿಯೇನು ಎಂದು ಸೆಟ್ಟಿಯು ಕತೆಯನ್ನು ಮುಕ್ತಾಯಗೊಳಿಸಿದ.

ಜಿನಪಾಲಿತ ಮುನಿಯು ತನ್ನಲ್ಲೇ ನಕ್ಕು, ತನ್ನ ಮೇಲಿನ ದೋಷಾರೋಪವನ್ನು ನಿವಾರಿಸಿಕೊಳ್ಳಲು ಇನ್ನೂ ಒಂದು ಕತೆಯನ್ನು ಹೇಳಿದ. ಅಮರಖೇಟವೆಂಬ ಊರಿನಲ್ಲಿ ಚಂದ್ರದತ್ತನೆಂಬ ಒಬ್ಬ ಬ್ರಾಹ್ಮಣನಿದ್ದ. ಅವನ ಹೆಂಡತಿ ಯಜ್ಞದತ್ತೆ ಎಂಬುವವಳು. ಅವಳು ಮುಂಗುಸಿಯೊಂದನ್ನು ಅತಿ ಅಕ್ಕರೆಯಿಂದ ಸಾಕಿ ಸದಾ ಅದನ್ನು ಮುದ್ದಾಡುತ್ತಿದ್ದಳು. ಒಂದು ದಿನ ಅವಳು ತನ್ನ ಮಗುವನ್ನು ತೊಟ್ಟಿಲಿನಲ್ಲಿ ಮಲಗಿಸಿ ಕಾಲ ಕಳೆಯಲೆಂದು ತಿರುಗಾಟಕ್ಕೆ ಹೊರಟಳು. ಅಷ್ಟರಲ್ಲಿ ಒಂದು ಹಾವು ಹರಿದು ಬಂದು ನಿದ್ದೆ ಮಾಡುತ್ತಲಿದ್ದ ಮಗುವನ್ನು ಕಚ್ಚುವುದರಲ್ಲಿತ್ತು. ಅದನ್ನು ನೋಡಿದ ಮುಂಗುಸಿಯು ಓಡಿ ಬಂದು

ಹಾವನ್ನು ಕೊಂದು ಒಡತಿಯ ಬಳಿ ಬಂದು ಅವಳ ಕಾಲ ಮೇಲೆ ಹೊರಳಾಡಿತು. ಮುಂಗುಸಿಯ ಬಾಯಲ್ಲಿ ರಕ್ತ ಅಂಟಿರುವುದನ್ನು ನೋಡಿದ ಅವಳು ಅದು ತನ್ನ ಮಗುವನ್ನು ಕೊಂದಿರಬೇಕೆಂದು ತೀರ್ಮಾನಿಸಿದಳು. ಬಳಿಯಿದ್ದ ಒಂದು ದೊಡ್ಡ ಒನಕೆಯಿಂದ ತಲೆ ಇಬ್ಭಾಗವಾಗುವಂತೆ ಹೊಡೆದು ಮುಂಗುಸಿಯನ್ನು ಕೊಂದು ಹಾಕಿದಳು. ಮಗು ಸತ್ತಿತೆಂಬ ದುಃಖದಿಂದ ಅಳುತ್ತ ಮನೆಯನ್ನು ಹೊಕ್ಕಳು; ನೋಡಿದರೆ, ಮಗು ತೊಟ್ಟಿಲಲ್ಲಿ ಹಾಯಾಗಿ ಮಲಗಿತ್ತು, ಪಕ್ಕದಲ್ಲಿಯೇ ಸತ್ತ ಹಾವೂ ಇತ್ತು! ಅವಳು ಮತಿಗೆಟ್ಟಳು. ಹಾವನ್ನು ಕೊಂದು ಮುಂಗುಸಿಯು ತನ್ನ ಮಗುವನ್ನು ಕಾಪಾಡಿದೆಯೆಂಬುದು ಅವಳ ಅರಿವಿಗೆ ಬಂತು. ವಿಚಾರ ಮಾಡದೆ ಅನ್ಯಾಯವಾಗಿ ಅದನ್ನು ಕೊಂದುಬಿಟ್ಟೆನಲ್ಲ ಎಂದು ಮಿಡಮಿಡ ಮಿಡುಕಿ ಮರುಗಿದಳು. ಸತ್ಪುರುಷರು ಅವಳಂತೆ ಅವಿಚಾರಿಗಳಾಗದೆ ವಿವೇಚನೆಯಿಂದ ನಡೆದುಕೊಳ್ಳಬೇಕು ಎಂದು ಮುನಿಯು ಕತೆಯನ್ನು ನಿರೂಪಿಸಿದರು.

ಇಷ್ಟಾದರೂ ಜಿನದತ್ತಸೆಟ್ಟಿಯ ಮನದ ಸಂಶಯ ನಿವಾರಣೆಯಾಗಲಿಲ್ಲ; ಅವರ ಮಾತನ್ನು ನಂಬದೆ ಹಣವನ್ನು ಉಪಾಯವಾಗಿ ವಾಪಸು ಪಡೆಯುವೆನೆಂದು ಬಗೆದು ಮಗುದೂ ಒಂದು ಕತೆಯನ್ನು ಹೇಳಿದ. ಕಾಮುಕವನವೆಂಬುದು ಒಂದು ದುರ್ಗಮವಾದ ಕಾಡು. ಅದರಲ್ಲಿ ಹಳೆಯ ದೊಡ್ಡ ಬಾವಿಯೊಂದಿತ್ತು. ಒಮ್ಮೆ ಅದರಲ್ಲಿ ಒಂದು ಹಾವು, ಒಂದು ಹುಲಿ, ಒಂದು ಕೋತಿ ಹಾಗೂ ಒಬ್ಬ ಅಕ್ಕಸಾಲಿಗನು ಬಿದ್ದಿದ್ದರು. ಕೌಶಿಕನೆಂಬ ಒಬ್ಬ ಸಚ್ಚರಿತನಾದ ಬ್ರಾಹ್ಮಣನು ಗಂಗೆಯ ಸಂದರ್ಶನಕ್ಕೆಂದು ಆ ದಾರಿಯಲ್ಲಿ ಹೋಗುತ್ತಿದ್ದ. ಬಾಯಾರಿಕೆಯಿಂದ ಅವನು ನೀರಿಗಾಗಿ ಹುಡುಕಿಕೊಂಡು, ದಾರಿಹೋಕರಿಂದ ಈ ಬಾವಿಯ ವಿಚಾರ ತಿಳಿದು ಅದರ ಬಳಿ ಬಂದ. ಮೇಲೆ ನಿಂತು ತನ್ನ ಅಡುಗೆಯ ಮಡಕೆಯ ಕೊರಳಿಗೆ ಬಳ್ಳಿಯಿಂದ ಕಟ್ಟಿ ನೀರನ್ನು ಸೇದಲೆಂದು ಬಾವಿಯಲ್ಲಿ ಬಿಟ್ಟ. ಸೇದುವ ಬಳ್ಳಿಯನ್ನು ಹುಲಿ ಹಿಡಿದುಕೊಂಡು ಎಳೆಯಿತು. ಮಡಕೆಯಲ್ಲಿ ನೀರು ತುಂಬಿದೆಯೆಂದು ಭಾವಿಸಿ ಬ್ರಾಹ್ಮಣನು ಬಳ್ಳಿಯನ್ನು ಮೇಲೆಳೆದ. ಹುಲಿ ಹೊರಕ್ಕೆ ಬಂತು. ಕೌಶಿಕನಿಗೆ ಭಯವಾಯಿತು. ಆದರೆ ಹುಲಿಯು ಬ್ರಾಹ್ಮಣನಿಗೆ ನಮಸ್ಕರಿಸಿ, "ನಿಮ್ಮ ದಯೆಯಿಂದ ನನ್ನ ಪ್ರಾಣ ಉಳಿಯಿತು. ಬೇಕಾದಾಗ ನನಗೆ ಏನಾದರೂ ಕೆಲಸ ಹೇಳಿರಿ" ಎಂದು ನುಡಿದು ತನ್ನ ಗುಹೆಗೆ ಹೋಯಿತು.

ಬ್ರಾಹ್ಮಣನಿಗೆ ನೀರಡಿಕೆ ಹೆಚ್ಚಾಯಿತು. ಆದ್ದರಿಂದ ಅವನು ಬಳ್ಳಿಯಿಂದ ಕಟ್ಟಿದ ಮಡಕೆಯನ್ನು ಮತ್ತೆ ಬಾವಿಯಲ್ಲಿ ಇಳಿಬಿಟ್ಟ. ಈ ಬಾರಿ ಬಳ್ಳಿಯನ್ನು ಹಾವು ಹಿಡಿದು ಜಗ್ಗಿತು. ಬಳ್ಳಿಯನ್ನೆಳೆದಾಗ ಹಾವು ಹೊರಬಂತು. ಹಾರುವನು ಬೆರಗಿನಿಂದ ಅದರ ಕಡೆ ನೋಡಿದ. ಫಣಿಪತಿಯು ಕೌಶಿಕನಿಗೆ ಪೊಡಮಟ್ಟು, "ತಮ್ಮ ಕೃಪೆಯಿಂದ ನನ್ನ ಕಂಟಕ ಪರಿಹಾರವಾಯಿತು. ನಿಮ್ಮ ಉಪಕಾರವನ್ನು ಎಂದಿಗೂ ಮರೆಯಲಾರೆ. ನಿಮಗೆ ಯಾವುದಾದರೂ ಆಪತ್ತು ಒದಗಿದರೆ ಮರೆಯದೆ ನನ್ನನ್ನು ನೆನೆಸಿಕೊಳ್ಳಿರಿ; ನಾನು ಬಂದು ಸಹಾಯ ಮಾಡುತ್ತೇನೆ" ಎಂದು ಹೇಳಿ ತನ್ನ ನಿವಾಸಕ್ಕೆ ಹೋಯಿತು. ಅಷ್ಟರಲ್ಲಿ ಬ್ರಾಹ್ಮಣನ ತೃಷೆ ಅಗಾಧವಾಗಿತ್ತು. ಅವನು ಆತುರದಿಂದ ಮತ್ತೆ ಮಡಕೆಯನ್ನು ಬಾವಿಯಲ್ಲಿಳಿಸಿದ. ಈ ಸಲ ಕೋತಿಯು ಅದನ್ನು ಜಗ್ಗಿತು. ಮಡಕೆಯಲ್ಲಿ ನೀರು ತುಂಬಿತೆಂದು ಭಾವಿಸಿ ಅದನ್ನು ಮೇಲಕ್ಕೆಳೆದಾಗ ಕೋತಿಯು ಹೊರ ಬಂದು ಅಚ್ಚರಿಗೊಂಡ ಕೌಶಿಕನಿಗೆ ವಂದಿಸಿತು. ಅದು ವಿನಯದಿಂದ ತಲೆಬಾಗಿ ನಿಂತು, "ನಿಮ್ಮ ದಯೆಯಿಂದ ನನಗೆ ಒದಗಿದ್ದ ಅಪಮೃತ್ಯು ತಪ್ಪಿತು. ನಾನು ನಿಮಗೇನಾದರೂ ಪ್ರತ್ಯುಪಕಾರವನ್ನು ಮಾಡಲೇಬೇಕು. ನಾನಿರುವುದು ಈ ಕಾಮುಕವನದಲ್ಲಿಯೇ; ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಿಮ್ಮ ಕಷ್ಟಕಾಲದಲ್ಲಿ ನನ್ನನ್ನು ನೆನೆಪಿಸಿಕೊಳ್ಳಿ" ಎಂದು ಹೇಳಿ ತಾನಿದ್ದ ಜಾಗಕ್ಕೆ ಹೊರಟು ಹೋಯಿತು. ಇಷ್ಟು ಹೊತ್ತಿಗೆ ಹಾರುವನು ನೀರಡಿಕೆಯಿಂದ ಚಡಪಡಿಸುವಂತಾಗಿತ್ತು. ಅವನು ಬಾವಿಯಲ್ಲಿ ಮತ್ತೆ ಮಡಕೆಯನ್ನಿಳಿಸಿದ. ಈ ಸಲ ಬಳ್ಳಿಯನ್ನು ಹಿಡಿದುಕೊಂಡು ಮೇಲೆ ಬಂದವನು ಹೆದರಿಕೆಯಿಂದ ಗಡಗಡ ನಡುಗುತ್ತಿದ್ದ ಅಕ್ಕಸಾಲಿಗ. ಅವನನ್ನು ಕಂಡು ವಿಪ್ರನಿಗೆ ಸೋಜಿಗವಾಯಿತು. ಅಕ್ಕಸಾಲೆಯು ಅವನಿಗೆ ನಮಸ್ಕಾರ ಮಾಡಿ, "ನನ್ನಲ್ಲಿ ಈಗ ಇರುವುದು ನೀವು ಕೊಟ್ಟ ಜೀವವೇ. ನೀವು ಬರದಿದ್ದರೆ ನನಗೆ ಖಂಡಿತ ಸಾವುಂಟಾಗುತ್ತಿತ್ತು. ನಿಮ್ಮ ಉಪಕಾರಕ್ಕೆ ನಾನೇನು

ಕೊಡಲಿ? ಪ್ರತ್ಯುಪಕಾರ ಮಾಡದಿದ್ದರೆ ಕಷ್ಟ. ಈ ಕಾಡಿನ ಪಕ್ಕದಲ್ಲಿರುವ ತಾಮ್ರಕೂಟವೆಂಬ ಊರಿನಲ್ಲಿ ನಾನು ವಾಸಿಸುತ್ತೇನೆ. ನೀವು ದಯವಿಟ್ಟು ಅಲ್ಲಿಗೆ ಬರಬೇಕು" ಎಂದು ಕೈಮುಗಿದು ಪ್ರಾರ್ಥಿಸಿಕೊಂಡ. ತಾನು ಯಾತ್ರೆಯಿಂದ ವಾಪಸು ಬರುವಾಗ ಅವನ ಮನೆಗೆ ಬರುವುದಾಗಿ ಬ್ರಾಹ್ಮಣನು ಹೇಳಿದ. "ಹಾಗೇ ಆಗಲಿ" ಎಂದು ಅಕ್ಕಸಾಲಿಯು ತನ್ನ ಊರಿಗೆ ಹೋದ.

ಕೌಶಿಕನು ತನ್ನ ಯಾತ್ರೆಯನ್ನು ಮುಗಿಸಿಕೊಂಡು ಕೆಲವು ದಿವಸಕ್ಕೆ ತನ್ನೂರಿಗೆ ವಾಪಸು ಹೊರಟ. ಬರುವಾಗ ದಾರಿಯಲ್ಲಿ ಕಾಮುಕವನದಲ್ಲಿದ್ದ ಕೋಡಗದ ನಿವಾಸಕ್ಕೆ ಬಂದ. ಬ್ರಾಹ್ಮಣನು ತನಗೆ ಮಾಡಿದ ಉಪಕಾರವನ್ನು ನೆನೆದು ವಾನರನು ಹಣ್ಣುಹಂಪಲುಗಳಿಂದ ಅವನನ್ನು ಉಪಚರಿಸಿತು. ತೃಪ್ತಿಯಾಗುವಷ್ಟು ಅದನ್ನು ತಿಂದು, ಸ್ವಲ್ಪ ಕಾಲ ವಿಶ್ರಾಂತಿ ಪಡೆದು ಕೌಶಿಕನು ಅಲ್ಲಿಂದ ಹೊರಟ. ಹುಲಿಯನ್ನು ನೆನೆದು ಅದರ ವಾಸಸ್ಥಾನವಾದ ಗುಹೆಗೆ ಹೋದ. ತನ್ನನ್ನು ಕಾಪಾಡಿದ ಮಹಾನುಭಾವನೆಂಬ ಕೃತಜ್ಞತೆಯಿಂದ ಅದು ನಲಿಯಿತು; ತನ್ನ ಪುಣ್ಯ ಫಲಿಸಿತು, ಕುಲ ಸಾರ್ಥಕವಾಯಿತು ಎಂದು ಬೀಗಿತು. ಕೆಲವು ರತ್ನದ ಆಭರಣಗಳನ್ನು ತಂದು ಬ್ರಾಹ್ಮಣನ ಮುಂದಿಟ್ಟು ನಮಸ್ಕರಿಸಿತು. ಅವನು ಅದನ್ನು ಆನಂದದಿಂದ ತೆಗೆದುಕೊಂಡು ಅಲ್ಲಿಂದ ಪೊರಮಟ್ಟ.

ಮಾತು ಕೊಟ್ಟಿದ್ದಂತೆ ಕೌಶಿಕನು ತಾಮ್ರಕೂಟ ನಗರಕ್ಕೆ ಬಂದು ವಿಚಾರಿಸಿಕೊಂಡು ಅಕ್ಕಸಾಲಿಗನ ಮನಗೆ ಬಂದ. ಅವನು ಅಭ್ಯಾಗತನಿಗೆ ಮಾಡಬೇಕಾದ ಉಪಚಾರಗಳನ್ನೆಲ್ಲ ಗೈದು ಅವನ ಪಥಶ್ರಮವನ್ನು ಹೋಗಲಾಡಿಸಿದ. ಮಾರನೆಯ ದಿವಸ 'ಬೃಹಸ್ಪತಿರವಿಶ್ವಾಸಂ' (ಬೃಹಸ್ಪತಿಯನ್ನೂ ನಂಬಬಾರದು) ಎಂಬ ನೀತಿಯನ್ನು ಮರೆತು ಹುಲಿ ತನಗೆ ಕೊಟ್ಟಿದ್ದ ಆಭರಣಗಳನ್ನೆಲ್ಲ ಕರಗಿಸಿ ಚಿನ್ನದ ಗಟ್ಟಿಯಾಗಿಸಿ ಕೊಡುವಂತೆ ಕೇಳಿಕೊಂಡು ಅವನ್ನೆಲ್ಲ ಅಕ್ಕಸಾಲಿಗನ ಕೈಲಿ ಗುಟ್ಟಾಗಿ ಕೊಟ್ಟ. ಅದಕ್ಕೆ ಒಪ್ಪಿ ಅವನು ಅದನ್ನೆಲ್ಲ ತೆಗೆದುಕೊಂಡ. ಇಷ್ಟೊಂದು ಹೊನ್ನನ್ನು ತೆಗೆದುಕೊಂಡು ಹೋಗಿ ರಾಜನಿಗಿತ್ತು ಅವನಿಂದ ಹೆಚ್ಚಿನ ಬಹುಮಾನವನ್ನು ಪಡೆಯುತ್ತೇನೆ; ಈ ಬ್ರಾಹ್ಮಣನಿಂದ ಬರಬಹುದಾದ ಲಾಭ ಎಷ್ಟು ಮಹಾ ಎಂದು ಆಲೋಚಿಸಿ ರಾಜನಲ್ಲಿ ದೂರಿತ್ತ. ಅಕ್ಕಸಾಲಿಯು ಹೇಳಿದ ಹಾರುವನನ್ನು ಸೆರೆಯಲ್ಲಿಡುವಂತೆ ರಾಜನು ತಳವಾರನಿಗೆ ಆಜ್ಞೆ ಮಾಡಿದ. ಅಕ್ಕಸಾಲಿಗನ ಜೊತೆ ಹೋಗಿ ತಳವಾರನು ಬ್ರಾಹ್ಮಣನನ್ನು ಹಿಡಿದು ಸೆರೆಯಲ್ಲಿಟ್ಟ. ಕೌಶಿಕ ಈ ಬೆಳವಣಿಗೆಯಿಂದ ದಿಙ್ಮೂಢನಾದ. ನನ್ನ ಬಳಿ ಇಷ್ಟು ಒಡವೆಗಳಿರುವುದು ರಾಜನಿಗೆ ಹೇಗೆ ತಿಳಿಯಬೇಕು; ಈ ದುರಾತ್ಮನಾದ ಅಕ್ಕಸಾಲೆಯೇ ಹೇಳಿರಬೇಕು ಎಂದು ಅವನ ಕೆಟ್ಟತನಕ್ಕೆ ಬೆರಗಾದ.

ಕಷ್ಟಕಾಲದಲ್ಲಿ ತನ್ನನ್ನು ನೆನೆದರೆ ಬಂದು ಸಹಾಯ ಮಾಡುವುದಾಗಿ ಹೇಳಿದ್ದ ಹಾವಿನ ಮಾತು ಕೌಶಿಕನಿಗೆ ನೆನಪಾಯಿತು. ತಕ್ಷಣ ಅದನ್ನು ನೆನೆಸಿಕೊಂಡ. ಫಣಿಪತಿಯು ಬಂದು ತನ್ನನ್ನು ನೆನೆಸಿಕೊಂಡ ಕಾರಣವನ್ನು ಕೇಳಿತು. ದುಷ್ಟ ಅಕ್ಕಸಾಲಿಗನಿಂದ ತನಗಾದ ಕಷ್ಟವನ್ನೆಲ್ಲ ಬ್ರಾಹ್ಮಣನು ವಿವರಿಸಿದ. ಹಾವು ರಾಜನ ಮಗನನ್ನು ಕಚ್ಚಿತು; ಅವನು ಸತ್ತು ಬಿದ್ದ. ಯಾರು ಬಂದು ಪ್ರಯತ್ನಿಸಿದರೂ ವಿಷವಿಳಿಸಲು ಸಾಧ್ಯವಾಗಲಿಲ್ಲ. ಹಾವಿನ ಸಹಾಯದಿಂದ ಕೌಶಿಕನು ರಾಜಕುಮಾರನನ್ನು ನಿರ್ವಿಷನನ್ನಾಗಿ ಮಾಡಿದ, ಇದರಿಂದ ರಾಜನು ಬ್ರಾಹ್ಮಣನನ್ನು ಬಿಡುಗಡೆ ಮಾಡಿ ಮೆಚ್ಚು ಕೊಟ್ಟ. ಆಗ ಕೌಶಿಕನು ನಡೆದುದೆಲ್ಲವನ್ನೂ ಅರಸನಿಗೆ ಬಿನ್ನವಿಸಿಕೊಂಡ. ಇದರಿಂದ ಅಚ್ಚರಿಗೊಂಡ ರಾಜನು ಅಕ್ಕಸಾಲಿಗನ ವಿಶ್ವಾಸಘಾತಕತನಕ್ಕೆ ಕೋಪಗೊಂಡು ಅವನ ಆಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಂಡ. ಹೀಗೆ ಕೆಲವರು ಉಪಕಾರಶೂನ್ಯರಿರುತ್ತಾರೆ ಎಂದು ಜಿನದತ್ತಸೆಟ್ಟಿಯು ಕತೆಯ ಇಂಗಿತವನ್ನು ವಿವರಿಸಿದ.

ಕತೆಯನ್ನು ಕೇಳಿದ ಜಿನಪಾಲಿತಮುನಿಯು ವಿಸ್ಮಯದಿಂದ ಸೆಟ್ಟಿಯ ಮುಖವನ್ನು ನೊಡಿ ಮಗುದೂ ಒಂದು ಕತೆಯನ್ನು ಹೇಳಲು ತೊಡಗಿದ. 'ಇದು ಮಹಾ ಚೋದ್ಯವಾದ ಕತೆ' ಎಂದು ಆರಂಭಿಸಿದ. ಉಜ್ಜೈನಿ ಎಂಬುದು ಊರು; ಅದನ್ನಾಳುತ್ತಿದ್ದವನು ಮಹೇಂದ್ರ ಎಂಬ ಅರಸ. ಅವನ ರಾಜಶ್ರೇಷ್ಠಿಯ ಹೆಸರು ಕುಬೇರ ಎಂದು. ಒಮ್ಮೆ ಆ ವ್ಯಾಪಾರಿಯು ಜಲಯಾತ್ರೆಗೆ ಹೋಗಿ ತುಂಬ ಲಾಭ ಸಂಪಾದನೆ ಮಾಡಿದ. ಅಲ್ಲಿ ಒಬ್ಬನು ಒಂದು ಮಾವಿನ ಹಣ್ಣನ್ನು ತಂದು

ಕುಬೇರನಿಗಿತ್ತು, ಅದು ಅಪೂರ್ವವಾದ ಹಣ್ಣೆಂದೂ ಅದನ್ನು ತಿಂದವರ ಸಕಲ ರುಜೆಗಳೂ ವಾಸಿಯಾಗುವುವೆಂದೂ, ಅದಕ್ಕೇ ಅದರ ಹೆಸರು 'ಸರ್ವರುಜಾಪಹಾರಿ' ಎಂದೂ ಹೇಳಿದ. ಅದನ್ನು ಕೇಳಿದ ಸೆಟ್ಟಿಯು ಹಣ್ಣನ್ನಿತ್ತವನಿಗೆ ಬೇಕೆಂಬಷ್ಟು ಹಣವಿತ್ತು ಕಳಿಸಿದ. ಹಣ್ಣನ್ನು ನೋಡುತ್ತಿರುವಾಗ ಕುಬೇರನಿಗೆ ಒಂದು ಆಲೋಚನೆ ಬಂತು: ತಾನು ಅದನ್ನು ಮೆದ್ದು ಹಾಳು ಮಾಡುವುದಕ್ಕಿಂತ ಮಾಳವಾಧಿಪತಿಗೆ ಕೊಟ್ಟರೆ ಅದರಿಂದ ತುಂಬ ಅಭ್ಯುದಯವಾಗುತ್ತದೆ ಎಂದು ಅವನಿಗನ್ನಿಸಿತು. ಹಾಗಾಗಿ ಅದನ್ನು ತಿನ್ನದೆ ತನ್ನ ದೇಶಕ್ಕೆ ಮರಳಿದ.

ಉಜ್ಜೈನಿಗೆ ಬಂದವನೇ ಕುಬೇರನು ಒಂದು ಹರಿವಾಣದಲ್ಲಿ ಅಮೂಲ್ಯವಾದ ವಸ್ತುಗಳನ್ನು ತುಂಬಿಕೊಂಡು ಅದರ ನಡುವೆ ಅಲಂಕಾರದಂತೆ ಅಪೂರ್ವವಾದ ಮಾವಿನ ಹಣ್ಣನಿಟ್ಟು ರಾಜನನ್ನು ಕಂಡು ಅಭಿವಂದಿಸಿ ತಟ್ಟೆಯನ್ನು ಅವನ ಮುಂದಿಟ್ಟ. ರಾಜನು ಆ ಹಣ್ಣನ್ನು ತೆಗೆದುಕೊಂಡು, "ಭೂಧರಧೈರ್ಯನೇ, ಈ ಮಾವಿನ ಹಣ್ಣು ಲೋಕದಲ್ಲಿ ಅಷ್ಟು ಅಪೂರ್ವವಾದದ್ದೇನು? ನೀನೆಲ್ಲೋ ಮರುಳ! ಅಮೂಲ್ಯವಾದ ರತ್ನಗಳ ಜೊತೆ ಇದನ್ನು ಯಾವ ಕಾರಣದಿಂದ ತಂದೆ?" ಎಂದು ಕೇಳಿದ. ಅದಕ್ಕೆ ಕುಬೇರ ಹೀಗೆಂದು ಉತ್ತರಿಸಿದ: "ನರೆ ಬಂದವರು ಇದನ್ನು ತಿಂದರೆ ತಾರುಣ್ಯವನ್ನು ಪಡೆಯುತ್ತಾರೆ; ಮಹಾವ್ಯಾಧಿಗಳಿಂದ ಬಳಲುವವರು ತಿಂದರೆ ಅವರ ರೋಗಗಳೆಲ್ಲ ವಾಸಿಯಾಗುತ್ತವೆ," ಎಂದು ಅದರ ಮಹಿಮೆಯನ್ನು ವಿವರಿಸಿದ. ಇದನ್ನು ಕೇಳಿದ ರಾಜನಿಗೆ ತುಂಬ ಆಶ್ವರ್ಯವಾಯಿತು. ಕುಬೇರನಿಗೆ ಮೆಚ್ಚುಗೊಟ್ಟು ಮನೆಗೆ ಕಳಿಸಿದ.

ಒಬ್ಬನೇ ಕುಳಿತು ಆ ಮಾವಿನ ಹಣ್ಣನ್ನು ನೋಡುತ್ತಿದ್ದಾಗ ಅವನಿಗನ್ನಿಸಿತು: 'ಮಳೆ, ನದಿಗಳು, ಪ್ರಾಣಿಗಳು, ವೈದ್ಯರು, ಬೆಳೆ, ಹಣ್ಣುಹಂಪಲು, ಜಿನೇಂದ್ರಮತ ಇವುಗಳು ಸಕಲರಿಗೂ ಉಪಕಾರ ಮಾಡುವಂತಹವು; ಸದ್ಗುಣಿಯಾದ ಮನುಷ್ಯನೂ ಅದೇ ರೀತಿ ಬದುಕಬೇಕು; ತಾನೂ ಕೆಟ್ಟು ಲೋಗರನ್ನೂ ಕೆಡಿಸುವವನು ಮನುಷ್ಯನೇನು? ಆದ್ದರಿಂದ ಪರೋಪಕಾರಿಯಾದ ಮಾನವನ ಬಾಳುವೆಯೇ ಸಾರ್ಥಕವಾದದ್ದು; ಹೀಗಾಗಿ ಈ ಮಾವಿನ ಹಣ್ಣನ್ನು ತಾನೊಬ್ಬನೇ ತಿನ್ನದೆ ಊರಿನವರು ಪರಿವಾರದವರು ರಾಣಿಯರು ಹಾಗೂ ರಾಜಕುಮಾರರ ಜೊತೆ ತಿನ್ನುತ್ತೇನೆ' ಎಂದು ನಿರ್ಧರಿಸಿ ಹಣ್ಣನ್ನು ಅರಮನೆಯ ಹಿತ್ತಿಲಿನಲ್ಲಿ ಬಿತ್ತಿಸಿದ. ಕಾಲಕ್ರಮೇಣ ಅದು ದೊಡ್ಡ ಮರವಾಗಿ ಬೆಳೆದು ಹಣ್ಣು ಬಿಡಲು ತೊಡಗಿತು.

ಒಮ್ಮೆ ಒಂದು ಹದ್ದು ಹಾವನ್ನು ಹಿಡಿದು ಮರವನ್ನೇರಿತು; ಅದರ ವಿಷವು ಬಹು ಬೇಗ ಒಂದು ಹಣ್ಣಿನಲ್ಲಿ ಇಳಿಯಿತು; ಕಾಲಕ್ರಮೇಣ ಆ ಹಣ್ಣು ಮಾಗಿ ಕೆಳಗೆ ಬಿತ್ತು; ಅದನ್ನು ತೆಗೆದುಕೊಂಡು ಹೋಗಿ ವನಪಾಲಕನು ರಾಜನಿಗೆ ಕೊಟ್ಟ; ಅರಸನು ಪಕ್ಕದಲ್ಲಿದ್ದ ತನ್ನ ಮಗನಿಗೆ ಅದನ್ನು ಪ್ರೀತಿಯಿಂದ ತಿನ್ನಲು ಕೊಟ್ಟ; ಅವನಿಗೆ ವಿಷವೇರಿ ಸತ್ತು ಬಿದ್ದ. ಮಗನ ಸಾವನ್ನು ತಂದ ಮರವನ್ನು ರಾಜನು ಕೋಪದಿಂದ ಕಡಿಸಿ ಹಾಕಿಬಿಟ್ಟ. ಅಲ್ಲದೆ, ಹಣ್ಣನ್ನು ಕೊಟ್ಟ ಕುಬೇರನನ್ನು ಸಾಯೆ ಬಡಿಸಿ ಅವನ ಸರ್ವಸ್ವವನ್ನೂ ಮುಟ್ಟುಗೋಲು ಹಾಕಿಕೊಂಡ. ಅಷ್ಟರಲ್ಲಿ ಊರಲ್ಲಿದ್ದ ತೊನ್ನರೂ ಹೆಳವರೂ ಕುಂಟರೂ ಓಡಿ ಬಂದು ತಾವೂ ಸಾಯುತ್ತೇವೆಂದು ಕಡಿಸಿದ ಮರದ ಹಣ್ಣುಕಾಯಿಗಳನ್ನು ತಿಂದರು; ರೋಗಗಳೆಲ್ಲ ವಾಸಿಯಾಗಿ ಅವರು ಸುವರ್ಣಕಾಯರಾದರು. ಅದನ್ನು ಕಂಡು ಅರಸನಿಗೆ ಆಶ್ಚರ್ಯವಾಯಿತು; ಕುಬೇರನಿಗೆ ಅವನ ಆಸ್ತಿಯೆಲ್ಲವನ್ನೂ ವಾಪಸು ಕೊಟ್ಟು ಅವನ ಕ್ಷಮೆ ಯಾಚಿಸಿದ. ಪಾತಕಿಯಾದ ತಾನು ವಿಚಾರಿಸದೆ ಮರವನ್ನು ಕಡಿಸಿಹಾಕಿದೆನಲ್ಲ ಎಂದು ಪಶ್ಚಾತ್ತಾಪಪಟ್ಟ. ಹೀಗೆ ಕೆಲವರು ಅವಿಚಾರತೆಯಿಂದ ಕಾರ್ಯ ಮಾಡಿದರೆ, ಸಜ್ಜನರು ವಿಚಾರಿಸಿ ಮಾಡುತ್ತಾರೆಂದು ವಿವರಿಸಿ ಜಿನಪಾಲಿತಮುನಿಯು ಮೌನ ವಹಿಸಿದರು.

ಆದರೂ ಜಿನದತ್ತನಿಗೆ ಮುನಿಯ ನಿರಪರಾಧಿತ್ವದ ಬಗ್ಗೆ ಮನವರಿಕೆಯಾಗಲಿಲ್ಲ. ತಾನು ಇನ್ನೊಂದೇ ಕತೆಯನ್ನು ಹೇಳುವುದಾಗಿ ನುಡಿದು ನಿರೂಪಣೆಗೆ ಶುರು ಮಾಡಿದ. ಸಾನಂದಗಿರಿ ಎಂಬುದು ಒಂದು ಊರು; ಅದರಲ್ಲಿ ಅಮಿತ ಎಂಬ ಬೇಡರವನು ವಾಸಿಸುತ್ತಿದ್ದ. ಅವನು ಒಂದು ದಿನ ದೈತ್ಯವನವೆಂಬ ಕಾಡಿನಲ್ಲಿ ತಿರುಗಾಡುತ್ತ ನೀರಡಿಕೆಯಿಂದ ಮುಂದೆ ಹೋಗಲಾರದೆ ಒಂದೆಡೆ ಕುಳಿತುಕೊಂಡ. ಅವನನ್ನು ಒಂದು ಕೋಡಗವು ನೋಡಿತು; ಅವನ ಬಗ್ಗೆ ಕರುಣೆಗೊಂಡು

ನೀರಿರುವ ಜಾಗವನ್ನು ಅವನಿಗೆ ತೋರಿಸಿತು. ನೀರನ್ನು ಕುಡಿದ ಬೇಡನು ವಾನರನು ತನಗೆ ಮಾಡಿದ ಉಪಕಾರಕ್ಕೆ ಕೃತಜ್ಞತೆ ತೋರಿಸದೆ ಹೋದ. ತಾನು ಬಹು ದೂರ ಹೋಗಬೇಕಾಗಿದೆಯೆಂಬುದನ್ನು ನೆನೆದು, ದಾರಿಯಲ್ಲಿ ನೀರು ಬೇಕಾದೀತೆಂದು ಕೋತಿಯನ್ನು ಕೊಂದು ಅದರ ಚರ್ಮದಿಂದ ಚೀಲ ಮಾಡಿಕೊಂಡು ಅದರಲ್ಲಿ ನೀರನ್ನು ತುಂಬಿಕೊಂಡು ಹೊರಟ. ಹೀಗೆ ಕೆಲವರು ಉಪಕಾರಶೂನ್ಯರಿರುತ್ತಾರೆ ಎಂದು ನುಡಿದ ವಣಿಕ್ಪತಿಯು ಸುಮ್ಮನಾದ.

ಕತೆ ಕೇಳಿದ ಮುನಿಪತಿಯು ವಿಸ್ಮಯಪಟ್ಟು, ತಾನೂ ಕತೆ ಹೇಳಲುಪಕ್ರಮಿಸಿದ. ಕೌಶಾಂಬಿ ಎಂಬ ನಗರದಲ್ಲಿ ವಿಶಾಖನಂದನನೆಂಬ ಒಬ್ಬ ವ್ಯಾಪಾರಿಯಿದ್ದ. ಅವನ ಮಗ ಅಂಗಾರಕ ಎಂಬುವವನು. ಆತನು ಒಂದು ದಿವಸ ಒಂದು ಪದ್ಮರಾಗವನ್ನು ಪಡೆದು ದೊಡ್ಡದೊಂದು ಮಣೆಯ ಮೇಲೆ ದಿವ್ಯ ವಸ್ತ್ರವನ್ನು ಹಾಸಿ ಆ ರತ್ನವನ್ನಿಟ್ಟು ನೋಡುತ್ತಿದ್ದ. ಆಗ ಮೇಧಾವಿ ಎಂಬ ಹೆಸರಿನ ಮುನೀಶ್ವರರು ಚರಿಗೆಗೆಂದು ಬಂದರು. ಅವರನ್ನು ಕಂಡ ವೈಶ್ಯಕುಲಲಾಮನು ಪರಮಾದರದಿಂದ ಚರಿಗೆಗೆಂದು ನಿಲ್ಲಿಸಿಕೊಂಡ. ತಾನು ಕೃತಾರ್ಥನಾದೆನೆಂದು ಭಾವಿಸಿದ ಸೆಟ್ಟಿಯು ಅವರನ್ನು ಮನೆಯೊಳಗಡೆ ಕರೆದೊಯ್ದು ಕುಳ್ಳಿರಿಸಿದ. ಇತ್ತ ನೆರೆಮನೆಯ ಅಂಗಳದಲ್ಲಾಡುತ್ತಿದ್ದ ನವಿಲು ಮಾಂಸವೆಂದು ಭಾವಿಸಿ ಪದ್ಮರಾಗ ಮಾಣಿಕ್ಯವನ್ನು ನುಂಗಿಬಿಟ್ಟಿತು. ವಿಶಾಖನಂದನನು ಮುನಿಗೆ ನವವಿಧಪುಣ್ಯದಿಂದ ಅನ್ನವನ್ನು ನೀಡಿದ; ಮುನಿಯು 'ಅಕ್ಷಯದಾನ' ಎಂದು ಹರಸಿ ಹೊರಟು ಹೋದರು. ಆನಂತರ ಸೆಟ್ಟಿಯ ಮಗನು ಹೊರಗೆ ಬಂದು ನೋಡಲು ರತ್ನ ಅಲ್ಲಿರಲಿಲ್ಲ.

'ಲೋಭಿಯೇ ಕಡು ಪಾಪಿ, ತುಡುಗುಣಿಯೇ ಕಡುಧೂರ್ತ' ಎಂಬ ಮಾತನ್ನು ನಿಜ ಮಾಡಿ ಮೇಧಾವಿ ಮುನಿಯೇ ರತ್ನವನ್ನು ತೆಗೆದುಕೊಂಡು ಹೋಗಿದ್ದಾನೆಂದು ಅವನು ಭಾವಿಸಿದ. ಮುನಿಗಳನ್ನು ಹಿಂಬಾಲಿಸಿ ಬಂದು ಕೃತಕತೆಯಿಂದ ನಮಸ್ಕರಿಸಿ ಮತ್ತೆ ಮನೆಗೆ ಕರೆತಂದು ಕುಳ್ಳಿರಿಸಿದ. "ತಮ್ಮ ಪಾದ, ಸಕಲ ವಸ್ತುಗಳನ್ನೂ ತೊರೆದ ನಿಮಗೆ ಈ ರತ್ನದ ಮೇಲೆ ಏಕೆ ಮೋಹ? ಕಾಡದೆ ಬೇಗ ಪದ್ಮರಾಗದ ಮಣಿಯನ್ನು ಕೊಡಿ" ಎಂದು ಗದರಿ ಕೇಳಿದ. ಆ ಕಡು ಮೂರ್ಖನ ಮಾತನ್ನು ಕೇಳಿ ಮುನಿಗೆ ಆಶ್ಚರ್ಯವಾಯಿತು. ಇವನು ಒಡವೆಯನ್ನು ಕಾಣದೆ ನನ್ನನ್ನು ಕಳ್ಳನೆಂದು ಭಾವಿಸಿ ಮಣಿಗಾಗಿ ಕೇಳುತ್ತಿದ್ದಾನೆ ಎಂದು ಊಹಿಸಿದರು. ತಾನು ತೆಗೆದುಕೊಂಡಿಲ್ಲವೆಂದು ಹೇಳಿದರೂ ಇವನು ನಂಬುವುದಿಲ್ಲ; ಹಾಗಾಗಿ ಮಾತಾಡಿ ಪ್ರಯೋಜನವಿಲ್ಲವೆಂದು ನಿರ್ಧರಿಸಿ ಮುನಿಗಳು ಮೌನ ವಹಿಸಿದರು. ಮಂದರಧೈರ್ಯರಾದ ಅವರು ಅರ್ಹತ್‌ಪಾದಗಳನ್ನು ಮನಸ್ಸಿನಲ್ಲಿಯೇ ಧ್ಯಾನಿಸುತ್ತಿದ್ದರು. ಮಾತಾಡಿಸಿದರೆ ಇವರು ಉತ್ತರ ಕೊಡುತ್ತಿಲ್ಲ; ಆಸೆಯಿಂದ ಮಣಿಯನ್ನು ಕದ್ದು ಏನೂ ಮಾತನಾಡದೆ ಜಾಣತನದಿಂದ ಸುಮ್ಮನೆ ಕುಳಿತಿದ್ದಾನೆ; ಮೌನದಿಂದ ಇದ್ದರೆ ರತ್ನವನ್ನು ಅರಗಿಸಿಕೊಳ್ಳಬಹುದೇನು? ಎಂದು ವ್ಯಂಗ್ಯವಾಡಿಕೊಂಡ. "ಮಾತನಾಡದೆ ಸುಮ್ಮನಿದ್ದರೆ ನಿನ್ನನ್ನು ಕೆಡವಿ ಹೊರಳಿಸಿ ಗಂಟಲನ್ನು ಅವುಕಿ ಚೆನ್ನಾಗಿ ತದುಕಿ ನನ್ನ ಒಡವೆಯನ್ನು ಉಗುಳಿಸದೆ ಬಿಡುವುದಿಲ್ಲ. ಯಾರು ಅಡ್ಡ ಬಂದರೂ ಸುಮ್ಮನಿರುವುದಿಲ್ಲ" ಎಂದು ವೈಶ್ಯನು ನುಡಿದ. ಆದರೂ ಮುನಿಯು ಮೌನವೇ. ವೈಶ್ಯನ ಕೋಪಾಗ್ನಿಯು ಕೆರಳಿತು; ಹಿಂದುಮುಂದು ನೋಡದೆ ಪಕ್ಕದಲ್ಲಿದ್ದ ಬಂಡಿಯ ಕಟ್ಟಿಗೆಯನ್ನು ತೆಗೆದುಕೊಂಡು ಮುನಿಗೆ ಸೊಪ್ಪು ಸೊವಡಾಗುವ ಹಾಗೆ ಬಡಿದ. ನಿರ್ದೋಷಿಯಾದ ತನ್ನನ್ನು ಬಡಿಯುತ್ತಿದ್ದಾನೆ ಎಂದು ಕೋಪಗೊಳ್ಳದೆ, ಇದು ತನ್ನ ದೇಹವೇ ಅಲ್ಲ ಎಂಬಂತೆ ಏಟುಗಳನ್ನು ಸಹಿಸಿಕೊಂಡರು. ತನ್ನ ದೇಹವನ್ನು ನೋಯಿಸುತ್ತಿದ್ದರೆ ಮೇಧಾವಿ ಮುನಿಗಳು ಶುಕ್ಲಧ್ಯಾನವೆಂಬ ದಳ್ಳುರಿಯಿಂದ ಕರ್ಮೇಂಧನಗಳನ್ನು ಸುಟ್ಟು ಕೇವಲಿಗಳಾಗಿ ಕೋಟಿ ಸೂರ್ಯಪ್ರಭಾನ್ವಿತ ದೇಹಿಗಳಾಗಿದ್ದರು. ಆ ಕೇವಲಿಗಳ ಪೂಜೆ ಮಾಡಲು ಚತುರ್ವಿಧ ದೇವನಿಕಾಯವೂ ಅಲ್ಲಿ ನೆರೆದರು. ಇದನ್ನು ನೋಡಿದ ಅಂಗಾರಕನು ನೀರ್ಮುಟ್ಟಿದ ಅಂಗಾರಕ(ಕೆಂಡ)ನಂತೆ ತಣ್ಣಗಾದ.

ಹೊಡೆಯುತ್ತಿದ್ದಾಗ ಉದ್ದವಾದ ಕಟ್ಟಿಗೆಯ ಒಂದು ಸೀಳು ಹಾರಿ ನವಿಲಿನ ಕೊರಳಿಗೆ ನಾಟಿತು. ಅದರ ಕೊರಳು ಸೀಳಿ ಅಲ್ಲಿದ್ದ ರತ್ನವು ನೆಲದ ಮೇಲೆ ಬಿತ್ತು. ಅದನ್ನು ಕಂಡ ಅಂಗಾರಕನಿಗೆ ನಿಜ ಸ್ಥಿತಿ ಅರಿವಾಯಿತು. ರತ್ನವನ್ನು ಕದ್ದರೆಂದು ಆರೋಪಿಸಿ ನಿಷ್ಕಷಾಯಿಯಾದ ಈ ಮುನಿಮಂಡನರನ್ನು ದಂಡಿಸಿದ ಪಾಪಿ ತಾನು ಎಂದು ಆತ್ಮಭತ್ಸ್ರನೆ ಮಾಡಿಕೊಂಡು

ವೈರಾಗ್ಯವುಂಟಾಗಲು ಅವರಿಗೇ ಶರಣಾಗಿ ಜಿನದೀಕ್ಷೆಯನ್ನು ಪಡೆದ. ಈ ರೀತಿ ಅಜ್ಞಾನಿಯಾಗಿ ಒಡವೆಯ ಆಸೆಯಿಂದ ಕಳ್ಳತನ ಮಾಡದವರನ್ನು ಕಳ್ಳರೆಂದು ಕಾಡುವುದು ಧರ್ಮವಲ್ಲ ಎಂದು ಜಿನಪಾಲಿತ ಮುನಿಗಳು ತಮ್ಮ ಕತೆಯನ್ನು ಮುಗಿಸಿದರು.

ಇಷ್ಟರಿಂದಲೂ ಸೆಟ್ಟಿಗೆ ನಂಬಿಕೆ ಬರಲಿಲ್ಲ. ಅವನ ಮುನಿಸನ್ನು ಕಂಡ ಜಿನಪಾಲಿತ ಮುನಿಗಳು, ಇವನು ಲೋಭಿ, ದುರ್ಜನ; ನನ್ನ ಮೇಲೆ ಅನುಮಾನ ಪಡುತ್ತಿದ್ದಾನೆ; ಸುಮ್ಮನೆ ಬಾಯಿ ಬಡಿಯುವುದು ಸರಿಯಲ್ಲ; ಎಂದು ಈ ಘೋರೋಪಸರ್ಗವು ಹಿಂಗುವವರೆಗೂ ಆಹಾರ ಶರೀರನಿವೃತ್ತಿಯನ್ನು ಕೈಗೊಳ್ಳಲು ನಿರ್ಧರಿಸಿ ಮೌನ ವಹಿಸಿದರು. ಅವರನ್ನು ಮುಂದೆ ನುಡಿಸಲಾರದೆ ಕೋಪದಿಂದ ಮೀಸೆ ಕಡಿಯುತ್ತ ಜಿನದತ್ತಸೆಟ್ಟಿಯು, "ಕದ್ದ ಒಡವೆಯನ್ನು ಕೊಡು; ಇಲ್ಲದಿದ್ದರೆ ಇಕ್ಕುಳದಿಂದ ನಿನ್ನ ಕೈ ಮುರಿಯುತ್ತೇನೆ; ಕೂಗಿದರೆ ಕತ್ತು ಕೊಯ್ದು ಸುಣ್ಣವಿಡುತ್ತೇನೆ; ನಿನ್ನನ್ನು ಹೊತ್ತುಕೊಂಡು ಹೋಗಿ ಕೆರೆಯಲ್ಲಿ ಮುಳುಗಿಸುತ್ತೇನೆ" ಎಂದು ರೌದ್ರಾಟೋಪದಿಂದ ಕೂಗಾಡಿದ. ಇವರಿಬ್ಬರ ನಡುವಣ ಮಾತುಗಳನ್ನೆಲ್ಲ ಬಾಗಿಲ ಹಿಂದೆ ಅಡಗಿಕೊಂಡು ಕೇಳಿಸಿಕೊಳ್ಳುತ್ತಿದ್ದ ಜಿನದಾಸನು ತನ್ನಲ್ಲೇ ನಕ್ಕು, ತನ್ನ ತಂದೆ ಮಹಾದ್ವೇಷದಿಂದ ಮುನಿವಂದ್ಯನಿಗೆ ತೀವ್ರತರವಾದ ಹಿಂಸೆಯನ್ನು ಮಾಡುವ ಮುಂಚೆಯೇ ತಾನು ಹೊರಬಂದು, ದುರ್ವಿನಯನಾದ ತಂದೆಗೆ ಹೊನ್ನನ್ನೆಲ್ಲ ಕೊಟ್ಟು ತಾನು ದೀಕ್ಷೆ ಪಡೆಯಲು ತೀರ್ಮಾನಿಸಿದ.

'ಈ ಮುನಿಪನು ಹೊನ್ನಿಗೆ ಆಸೆಪಡುವುದಿಲ್ಲ; ಹಾಗೆ ಆಸೆಯಿದ್ದರೆ ಎಲ್ಲವನ್ನೂ ತೊರೆಯುತ್ತಿದ್ದನೇನು ಎಂಬುದನ್ನು ಆಲೋಚಿಸದೆ ತನ್ನ ತಂದೆಯು ಅವರನ್ನು ದಂಡಿಸುತ್ತಿರುವನಲ್ಲ; ಇಂಥ ಕಷ್ಟರನ್ನು ತಾನು ಕಂಡಿಲ್ಲ. ಧರ್ಮದ ದಾರಿಯನ್ನು ಮರೆತಿದ್ದಾನೆ; ಲೋಭದ ಕಾರಣದಿಂದ ಮರುಕವೆಂಬುದೂ ಕಣ್ಮರೆಯಾಯಿತು. ಹಾಗೆ ನೋಡಿದರೆ ಹಣದ ಮರುಕಕ್ಕೆ ಎಣೆಯಾದುದು ಜಗತ್ತಿನಲ್ಲಿ ಬೇರೊಂದಿದೆಯೇ? ಇವನು ಕಳ್ಳನೆಂದು ತಿಳಿದರೆ ಎಲ್ಲರೂ ಅಟ್ಟಿ ಕೊಲ್ಲದಿರುವರೇ? ಕಳವಿಗಿಂತ ಕೆಟ್ಟದ್ದು ಬೇರೆ ಇದೆಯೇ? ಬೇರೆಯವರ ಹಣಕ್ಕೆ ಆಸೆಪಡುವವನು, ಬೇರೆಯವರ ಹಣವನ್ನು ತರಿಸಿಕೊಳ್ಳುವವನು ಎಂದು ಗೊತ್ತಾದರೆ ಕೊಲ್ಲುತ್ತಾರೆ, ಮನೆಯಿಂದ ಓಡಿಸುತ್ತಾರೆ, ದೂಷಿಸುತ್ತಾರೆ, ಯಾರೂ ಬೆಂಬಲಿಸುವುದಿಲ್ಲ. ಕಳ್ಳರ ಕೂಟವೆಂದರೆ ಬಲ್ಲಿದರೂ ನಡುಗುತ್ತಾರೆ; ಆದ್ದರಿಂದ ಇದಕ್ಕಿಂತ ಕೆಟ್ಟದ್ದು ಬೇರೆ ಇಲ್ಲ; ಕಳ್ಳತನವನ್ನು ಕಂಡು ಅಂಜಬೇಕೇ ಹೊರತೂ ಅದನ್ನು ನಚ್ಚಬಹುದೇ? ತನ್ನ ಹಣ ನಾಶವಾದರೆ ಗೊಳೋ ಎಂದು ಅಳುತ್ತಾರೆ; ತನ್ನ ಹಾಗೆಯೇ ಇತರರು ಎಂದು ಅರ್ಥಮಾಡಿಕೊಳ್ಳಬಾರದೇ? ಕಳ್ಳನನ್ನು ಹಿಡಿದು ತಳವಾರರು ಕಟ್ಟಿ ಹಾಕಿದಾಗ ನಡುಗುವ ದೇಹವೂ, ನುಡಿಯಲಾರದ ನಾಲಗೆಯೂ, ತನ್ನ ಇಚ್ಛೆಯಂತೆ ನಡೆಯಲಾರದ ಕಾಲುಗಳೂ ಅಂಜಿಕೆಯೂ ಕಳ್ಳತನವು ಸರಿಯಲ್ಲವೆಂಬುದನ್ನು ಜಗತ್ತಿನಲ್ಲಿ ಸಾರಿ ಹೇಳುತ್ತವೆ' – ಎಂದು ಕಳವಿನ ಕಷ್ಟವೃತ್ತಿಯನ್ನು ಮತ್ತು ಹಣದಿಂದ ಆಗುವ ಸಂಕ್ಲೇಶವನ್ನು ಆಲೋಚಿಸಿ ಹೇಸಿದ ಜಿನದಾಸನು ಬಾಗಿಲನ್ನು ತೆರೆದು ಹೊರಬಂದ.

ಗಣಧರರಾದ ಮುನಿಗಳನ್ನು ಸುಮ್ಮನೆ ಪೀಡಿಸುವ ತಂದೆಯ ಬಳಿ ಬಂದು "ನಿನ್ನ ಹೊನ್ನನ್ನು ತೆಗೆದುಕೋ" ಎಂದು ಹೊನ್ನನ್ನು ತಂದೆಯ ಮೇಲೆ ಎರಚಿದ. ಮುನಿನಾಥನಿಗೆ ನಮಸ್ಕರಿಸಿ, "ಚಾರು ಚರಿತ್ರರೇ, ನಿರ್ವೃತಿಶ್ರೀಸತಿಯನ್ನು ದೊರಕಿಸುವ ಜಿನೇಂದ್ರ ದೀಕ್ಷೆಯನ್ನು ದಯವಿಟ್ಟು ಕರುಣಿಸಿ" ಎಂದು ಬೇಡಿಕೊಂಡ. ಜಿಪಾಲಿತಮುನಿಯು ಅವನಿಗೆ ಪರಮಶ್ರೀಯಲ್ಲಿ ನೆರಪುವ ಜಿನದೀಕ್ಷೆಯನ್ನು ನೀಡಿದರು. ಹಾಗೆ ಜಿನದಾಸನು ಮುನಿವೇಷವನ್ನು ಧರಿಸಲು ಜಿನದತ್ತಸೆಟ್ಟಿಯೂ ವೈರಾಗ್ಯಪರನಾದ. ತಾನು ಮಾಡಿದ ಅಪರಾಧದಿಂದ ಕಡು ನೊಂದು ಪ್ರಾಯಶ್ಚಿತ್ತವಾಗಿ ತಾನೂ ದೀಕ್ಷೆಯನ್ನು ತಾಳಿದ. ಘೋರ ತಪಸ್ಸು ಮಾಡಿದ ಅವನು ಸನ್ಯಸನವಿಧಿಯಿಂದ ಮುಡಿಪಿ ಮಹರ್ಧಿಕದೇವನಾಗಿ ಹುಟ್ಟಿದ. ಜಿನದಾಸಮುನಿಯೂ ಹಲವು ಕಾಲ ತಪವನ್ನು ಗೈದು ಸಮಾಧಿಮರಣವನ್ನು ಅನುಸರಿಸಿ ಸತ್ತು ಸರ್ವಾರ್ಥಸಿದ್ಧಿಯಲ್ಲಿ ಮೂವತ್ತಮೂರು ಸಾಗರದಷ್ಟು ಆಯುಸ್ಸನ್ನು ಪಡೆದು ಅಹಮಿಂದ್ರನಾಗಿ ಜನಿಸಿದ. 'ಕಳವಿನ ಮಾತನ್ನು ಆಲೋಚಿಸದೆ ಜಿನಪದಸೇವೆಯಿಂದ

ಇರುವ ಮನುಷ್ಯನು ಮಲಹಾರಿಯಾಗಿ ನಿರ್ವೃತಿಲಲನೆಗೆ ಪತಿಯಾಗುತ್ತಾನೆ ಎಂಬುದರಲ್ಲಿ ಆಶ್ಚರ್ಯವೇನಿದೆ? ಕಳವಿನ ಮರೆಯಲ್ಲಿ ಕೋಪಗೊಂಡ ಪಾಪ ಎಂಬ ಬೇಡನು ಅಡಗಿದ್ದು ಬಾಣಪ್ರಯೋಗ ಮಾಡುತ್ತಾನೆ; ಅವನನ್ನು ವಂಚಿಸಿ ಸುಖದಲ್ಲಿ ನೆಲೆಗೊಳ್ಳುವ ಮನಸ್ಸಿದ್ದರೆ ಕಳವಿನ ಬಗ್ಗೆ ಅಂಜಿ ನಡೆಯಬೇಕು' – ಹೀಗೆಂದು ಗಣಧರಸ್ವಾಮಿಗಳು ಅಸ್ಥೆಯಿಂದ ಅಸ್ತೇಯದ ಮಹಿಮೆಯನ್ನು ವಿವರಿಸಿದರು. ಈ ಕತೆಯನ್ನು ಕೇಳಿದ ವಾಗ್ವಧುಸೌಂದರರೂಪನಾದ, ಸುಕವಿಜನಮನಃಪದ್ಮಿನೀರಾಜಹಂಸನಾದ ಶ್ರೇಣಿಕ ಮಹಾರಾಜನು ಧನ್ಯತೆಯನ್ನು ಅನುಭವಿಸಿದ.

ಬ್ರಹ್ಮಚರ್ಯ

ಅಸ್ತೇಯವ್ರತದ ಮಹಿಮೆಯನ್ನು ಕೇಳಿದ ರಾಜನು ಗೌತಮಸ್ವಾಮಿಗಳಿಗೆ ಪೊಡಮಟ್ಟು ಕೈಮುಗಿದು, "ನಿಮ್ಮಡಿ, ದಯವಿಟ್ಟು ನಾಲ್ಕನೆಯ ವ್ರತವಾದ ನಿಬ್ರಹ್ಮದ ಕತೆಯನ್ನು ಬೆಸಸಬೇಕು" ಎಂದು ಪ್ರಾರ್ಥಿಸಿಕೊಂಡ. ಆಗ ಸ್ವಾಮಿಗಳು ತಮ್ಮ ಮೃದುನಿನಾದದಿಂದ ಭೂಪಶಿಖಾಮಣಿಗೆ ಕತೆಯನ್ನು ಹೇಳಲು ತೊಡಗಿದರು. ಹಣತೆಯಲ್ಲಿ ಬತ್ತಿ ಎಣ್ಣೆ ಬೆಂಕಿಗಳು ಕೂಡಿ ಹೇಗೆ ಸೊಡರಾಗುತ್ತದೆಯೋ, ಕಪ್ಪು ಭೂಮಿಯಲ್ಲಿ ಬೇರು ಕಾಂಡ ರೆಂಬೆಕೊಂಬೆಗಳಿಂದ ಕೂಡಿ ಆಲದ ಮರ ಹೇಗೆ ಬೆಳೆಯುತ್ತದೆಯೋ, ಬಲ್ಲವರಲ್ಲಿ ಬಣ್ಣ ತೂಕ ಮಚ್ಚಿಗೆಗಳಿಂದ ಕೂಡಿ ಹೊನ್ನು ಹೇಗೆ ಒಪ್ಪುವುದೋ, ರೂಪಿನಿಂದ ಕೂಡಿ ವಸ್ತ್ರ ತಿಲಕ ಆಭರಣ ಕಾಡಿಗೆಗಳಿಂದ ಹೆಣ್ಣು ಹೇಗೆ ಒಪ್ಪುವಳೋ, ಬೆಳ್ದಿಂಗಳೊಡಗೂಡಿ ತಂಗಾಳಿ ಉಯ್ಯಾಲೆ ತಿಳಿಗೊಳಗಳಿಂದ ವಸಂತ ಹೇಗೆ ಶೋಭಿಸುವುದೋ ಹಾಗೆಯೇ ಸಮ್ಯಕ್ತ್ವದಲ್ಲಿ ಸೇರಿ ಕೊಲ್ಲದ, ಹುಸಿಯದ, ಕಳ್ಳತನ ಮಾಡದ, ಹಾದರವಿಲ್ಲದ ವ್ರತಗಳು ಶ್ರಾವಕನನ್ನು ಶೋಭೆಗೊಳಿಸುತ್ತವೆ. ಪರವನಿತೆಗೆ ಆಸೆಗೈಯದವನನ್ನು ಧರೆ ನಂಬುವುದು; ಈ ವ್ರತವನ್ನು ರಾಜರೂ ಕೈಗೊಳ್ಳುತ್ತಾರೆಂದ ಮೇಲೆ ಹಾದರವನ್ನು ನಿಷೇಧಿಸುವ ವ್ರತವೇನು ಸಾಮಾನ್ಯವೇ?

ಆ ವ್ರತದ ಮಹಿಮೆಗೆ ಈ ಕತೆ ಹೇಳುತ್ತೇನೆ ಕೇಳು. ಈ ಜಂಬೂದ್ವೀಪದ ಭರತಕ್ಷೇತ್ರದ ವತ್ಸಕಾವತೀ ವಿಷಯದಲ್ಲಿ ಕೌಶಾಂಬಿ ಎಂಬ ಪೊಳಲು ಶೋಭಿಸುತ್ತಿತ್ತು. ಅದನ್ನಾಳುವ ರಾಜ ದಂತಿಬಲ ಎಂಬ ಒಬ್ಬ ಮಹಾಮಾಂಡಲಿಕ. ಅವನ ಪಟ್ಟದರಸಿ ಧಾರಿಣೀ ಮಹಾದೇವಿ. ಅವರ ಪ್ರಿಯ ಹಿರಿಯ ಪುತ್ರ ಪ್ರಮಾಥಿ ಎಂಬುವವನು. ಅವನಾದರೋ ವೈಭವದಲ್ಲಿ ಸುರಪತಿಗೆ ಸಮನಾಗಿದ್ದ, ಧೈರ್ಯದಲ್ಲಿ ಪರ್ವತದಂತಿದ್ದ, ರೂಪಿನಲ್ಲಿ ಕಾಮದೇವನ ಹಾಗಿದ್ದ, ಶತ್ರುರಾಜರೆಂಬ ಆನೆಗಳಿಗೆ ಸಿಂಹದಂತಿದ್ದ; ಜೊತೆಗೆ ಅರ್ಹಚ್ಚರಣಕಮಲಭೃಂಗ ಮತ್ತು ವಿಮಲಚರಿತ್ರ. ಹೀಗೆ ಆ ಕುಟುಂಬದವರು ಅನಂತ ಸುಖದಲ್ಲಿ ಬಾಳುತ್ತಿದ್ದರು.

ಒಮ್ಮೆ ವಸಂತ ಬಂತು. ವನಜಗಳಲ್ಲಿ ದಳವೇರಿತು, ಮಾವಿನ ಮರ ಮಲ್ಲಿಗೆ ಬಳ್ಳಿಗಳಲ್ಲಿ ಚಿಗುರೇರಿದವು, ಚಂದ್ರನು ಪೂರ್ವಾದ್ರಿಯನ್ನೇರಿದ, ಮನ್ಮಥ ಎಂಬ ಗಜವು ಸೊಕ್ಕೇರಿತು, ವನಜಾಕ್ಷಿಯರು ಹೊನ್ನ ಉಯ್ಯಾಲೆಗಳನ್ನೇರಿದರು, ಕಾಮಬಾಣವು ಚೂಪಾಯಿತು, ಇಕ್ಷುಚಾಪನ ಧನುಸ್ಸಿಗೆ ಗೊಲಗೇರಿತು! ಜಿನವಚನಸಮುದ್ರವು ಜಗತ್ತನ್ನು ಆವರಿಸಿತೋ, ಭೂಮಿಯನ್ನು ಜಿನವರನ ನಿರ್ಮಲಕೀರ್ತಿಯು ಆವರಿಸಿತೋ, ಅಮೃತಸಾಗರವು ಲೋಕವನ್ನೇ ತನ್ನ ನೆಲೆ ಮಾಡಿಕೊಂಡಿತೋ ಎಂಬಂತೆ ಅಪೂರ್ವ ಕಾಂತಿಯಿಂದ ವಸಂತವು ಶೋಭಿಸಿತು. ಬೆಟ್ಟದಾವರೆಯ ಒಪ್ಪು, ಸುರಹೊನ್ನೆ ಹೂವಿನ ಚೆಲುವು, ಪೆಂಪುವೆತ್ತ ಸಂಪಗೆಯ ಬೆಡಗು ರಂಜಿಸಲು ವನದೇವಿಯರು ನಲಿದು ಮನ್ಮಥರಾಜನ ಆಗಮನದಿಂದ ಸಂತಸಗೊಂಡು ಅವನನ್ನು ಸ್ವಾಗತಿಸಲು ಹೊತ್ತಿಸಿಟ್ಟ ದೀವಿಗೆಗಳಂತೆ ಕಂಗೊಳಿಸಿದವು. ನಲಿನಲಿದು ಅತ್ತಲಿತ್ತ ಎಡೆಯಾಡುವ ಸೋಗೆನವಿಲುಗಳು, ಮೆಲ್ಲುಲಿಯಿಂದ ಹಾಡುವ ಮದಾಳಿಗಳು, ಕಾಮೋನ್ಮಾದದಿಂದ ಸುಳಿದಾಡುವ ಜಕ್ಕವಕ್ಕಿಗಳು, ದನಿಗೈಯುತ್ತಿರುವ ಕೋಗಿಲೆಗಳು, ಪ್ರೇಮಿಗಳಿಗೆ ಹಿತವನ್ನುಂಟುಮಾಡಿ ಮೆಲ್ಲನೆ ತೀಡುವ ತೆಂಗಾಳಿ, ಇವುಗಳಿಂದ ಪ್ರಿಯಕರರಿಗೆ ಅಭ್ಯುದಯವನ್ನುಂಟು ಮಾಡುವಂತೆ ವಸಂತಕಾಲ ಆಗಮಿಸಿತು.

ವನಪಾಲಕನು ಅರಮನೆಗೆ ಬಂದು ದಂತಿಪಾಲ ಮಹಾರಾಜನಿಗೆ ಕಾಡಿನ ಸೌಂದರ್ಯದ ಬಗ್ಗೆ ನಿವೇದನೆ ಮಾಡಿದ. ಅವನಿಗೆ ಉಚಿತ ಬಹುಮಾನವಿತ್ತು ಕಳಿಸಿದ ರಾಜನು ಮಾರನೆಯ ದಿವಸ ವನಕ್ರೀಡೆಗೆ ಹೋಗಲು ನಿರ್ಧರಿಸಿ ಆನಂದಭೇರಿಯನ್ನು ಹೊಯ್ಸಿದ. ಅಂತಃಪುರಸ್ತ್ರೀಯರು ಪುರಪುರಂಧ್ರಿಯರು ರಾಜಕುಮಾರರು ಪ್ರಮಾಥಿಕುಮಾರ ಮುಂತಾದವರೊಡನೆ ಧಾರಿಣಿ ಮಹಾದೇವಿಯೂ ತಾನೂ ಗಂಧಸಿಂಧುರಾರೂಢರಾಗಿ ವನಕ್ರೀಡೆಗೆಂದು ಹೊರಟರು. ಕರಡೆ

ಡಕ್ಕೆ ಪರಿಡಕ್ಕೆಗಳ ಧ್ವನಿಯ ಭೋರ್ಗರೆತವು ಸಮುದ್ರದ ಘೋಷವನ್ನು ಹೋಲುತ್ತಿತ್ತು. ಹೀಗೆ ಹೊರಟ ದಂತಿ ಮಹಾರಾಜನು ವನವನ್ನು ಹೊಕ್ಕು ವಸಂತರಾಜನ ಸೈನ್ಯದ ಹಾಗಿದ್ದ ವನದ ಚೆಲುವನ್ನು ನೋಡಿ ಧಾರಿಣೀ ಮಹಾದೇವಿಯನ್ನು ಕುರಿತು, "ಗಾಳಿಯ ಬೀಸುವಿಕೆಯಿಂದ ಉಲಿಯುವ ಕೆಂದಳಿರು ಹರೆಯನ್ನೂ, ಹಾರಾಡುವ ದುಂಬಿಗಳ ಝೇಂಕಾರವು ಮಂಗಳಗೀತಗಳನ್ನೂ, ಮಾವಿನ ಮರಗಳು ಸುಂದರವಾದ ಮಂಟಪಗಳನ್ನೂ ಹೋಲುವ ಈ ವನವು ವೈಭವೋಪೇತವಾದ ವಿವಾಹಗೇಹವನ್ನು ಹೋಲುತ್ತಿದೆ" ಎಂದು ವರ್ಣಿಸಿ ಹೇಳಿದ. ಮುಂದೆ ಸ್ವಲ್ಪ ದೂರ ಸಾಗಿ ಗಗನತಳದ ನಿರ್ಮಲತೆಯನ್ನು ನೋಡಿ ನಲ್ಲಳಿಗೆ ಹೀಗೆಂದ: "ಪಾಪದಿಂದ ದೂರವಾದ ಮತದ ರೀತಿಯಲ್ಲಿಯೂ, ದುರಿತಾರಿಯಾದ ಭಾಸುರ ಜಿನವಾಕ್ಯದಂತೆಯೂ, ಒಳ್ಳೆಯದನ್ನು ಕೇಳಿದವನು ಪರಮತವನ್ನು ಬಿಟ್ಟು ನಿರ್ಮಲನಾದ ಹಾಗೆ ಈ ಆಕಾಶವು ಮೋಡಗಳನ್ನು ತೊರೆದು ನಿರ್ಮಲತೆಯನ್ನು ಪಡೆದಿವೆ." ಮುಂದೆ ತಾವರೆಯ ಕೊಳವನ್ನು ನೋಡಿ, ದೇವೇಂದ್ರವಂದಿತನಾದ ಜಿನೇಶನನ್ನು ಎದುರಿಸಲಾರದೆ ಜಡಾತ್ಮರನ್ನು ಅಂಜಿಸಲೆಂದು ಒಳಗೆ ಹೋದ ಕಾಮನನ್ನು ಭೂವಧುವು ಹಾಸ್ಯ ಮಾಡುತ್ತಿರುವಂತಿದೆ ಎಂದು ಹೋಲಿಸಿ ನುಡಿದ. ಸ್ವಲ್ಪ ದೂರ ನಡೆದು ಮನ್ಮಥನ ಮನೆಯಂತಿದ್ದ ಮಾವಿನ ಮರಗಳನ್ನೂ, ಸುಜನರ ಮನಸ್ಸಿನಂತೆ ನೇರವಾಗಿದ್ದ ಪರಿಮಳಭರಿತ ಬಳ್ಳಿಗಳನ್ನೂ, ನಿರ್ಮಲವಾಗಿ ಸೊಗಸುವ ತಿಳಿಗೊಳಗಳನ್ನೂ, ಸುಜ್ಞಾನಿಯ ಮನಸ್ಸಿನಂತೆ ಚೆಲುವಾದ ಅಶೋಕೆಯ ಮರಗಳನ್ನೂ, ಸಹಜಕವಿಯ ವಚನರಚನೆಯಂತೆ ಇನಿದಾದ ಮೈಂದವಾಳೆಗಳನ್ನೂ ತನ್ನ ಮನೋವಲ್ಲಭೆಗೆ ತೋರಿಸುತ್ತ ಬಂದ; ಮೊಲ್ಲೆ ಸಂಪಿಗೆ ಸುರಹೊನ್ನೆ ಮುಂತಾದ ಹೂಗಳ ಗೊಂಚಲುಗಳಿಂದ ಮಾಡಿದ ಬಾಸಿಗಗಳನ್ನೂ, ಸುರಗಿ ಜಾಜಿ ಹೂಗಳಿಂದ ವಿರಚಿಸಿದ ಕಂಕಣಗಳನ್ನೂ ತನ್ನ ಮನೋರಮೆಗೆ ತೊಡಿಸಿದ, ತಾನೂ ಮುಡಿದ. ಪ್ರಮಾಥಿಕುಮಾರನೇ ಮೊದಲಾದವರಿಗೂ ಅವುಗಳನ್ನು ಕೊಟ್ಟು ನಿಡುಗಾಲ ವಿಹರಿಸಿದ. ವನವಿಹಾರದಿಂದ ಅವರೆಲ್ಲ ಮುದಗೊಂಡರ್ಪು ಆದರೆ ಆಯಾಸಗೊಂಡರು.

ವನಕ್ರೀಡೆಯಿಂದ ರಾಜನು ಬಳಲಿ ಒಂದು ಮಾವಿನ ಮರದಡಿಯ ಬಳ್ಳಿಮಾಡದಲ್ಲಿ ಚಿಗುರಿನ ಹಾಸಿಗೆಯ ಮೇಲೆ ಮಲಗಿದ. ರಾಜಕುಮಾರರೂ ವಿಲಾಸಿನೀಜನರೂ, ಕುಮಾರರ ತಂಡವೂ ತಮಗೆ ಇಷ್ಟವಾದ ಮಾವಿನ ಮರಗಳ ಬಳಿ ಹೋಗಿ ವಿನೋದದಿಂದ ಕಾಲ ಕಳೆದರು. ಆಗ ಪ್ರಮಾಥಿಕುಮಾರನು ಸೌಂದರದೇವಿಯೊಡನೆ ಒಂದು ಅಶೋಕ ಮರದ ಕೆಳಗೆ ವಿಶ್ರಾಂತಿಗೆಂದು ಮಲಗಿದ. ಹೂಹಾಸಿನ ಮೇಲೆ ರಂಭೆ–ಇಂದ್ರ, ರತಿ–ಕಾಮರ ಹಾಗೆ ಅವರು ಪರಸ್ಪರರ ಗಾಡಿಯನ್ನು ಮೆಚ್ಚುಗೆಯಿಂದ ನೋಡುತ್ತಿದ್ದರು. ಮೊರೆಯುವ ದುಂಬಿಗಳ ಮೃದು ನಿನಾದಕ್ಕೂ, ಹಾಡುವ ಗಾಂಧರ್ವಗೇಯದ ಕೋಮಲದನಿಗೂ, ಜನರ ಕಲಕಲ ರವಕ್ಕೂ ಕಿವಿ ಸೋತು, ಮುನಿಸಿನಿಂದ ಸವತಿವೆಂಡತಿಯು ಹೊರಹೋಗುವಂತೆ ನಿದ್ದೆಯು ಸೌಂದರ ಮಹಾದೇವಿಯನ್ನು ಒಲಿಯಿತು. ಅರೆ ಮುಚ್ಚಿದ ಅವಳ ಕಣ್ಣುಗಳ ಹೊಳಪು, ಎರಡು ಮೀನುಗಳು ಸರೋವರದಿಂದ ಚಿಮ್ಮುವ ಹಾಗೆ ಕಾಣಿಸಿತು; ನಿದ್ರೆಯ ಭಾರದಿಂದ ಅವಳ ಮೈಓರೆಯಾಗಲು ಹಾರವು ಪಕ್ಕಕ್ಕೆ ಉರುಳಿತು; ತಲೆಗೂದಲು ಗಾಳಿಯಿಂದ ಅಲುಗಾಡಿತು; ದಿವ್ಯಾಂಬರವು ದೇಹದಿಂದ ಜಾರಿತು. ಅವಳನ್ನು ಕಂಡ ಪ್ರಮಾಥಿಕುಮಾರನು ಅಕ್ಕರೆಯಿಂದ ತಕ್ಕೈಸಿಕೊಂಡು ಮೆಲ್ಲನೆ ಹೂವಿನ ಹಾಸಿಗೆಯ ಮೇಲೆ ಮಲಗಿಸಿ ಸುತ್ತಮುತ್ತ ನೋಡುತ್ತಿದ್ದ.

ಆಗ ಒಬ್ಬ ಮಹಾ ಸಾಮಂತನ ಮಗನು ತನ್ನ ಪ್ರಾಣವಲ್ಲಭೆಯಾದ ವಸಂತತಿಲಕೆ ಎಂಬ ರಾಜಪುತ್ರಿಗೆ ತನ್ನ ಬಿಲ್ಲ ಬಲ್ಮೆಯನ್ನು ತೋರಿಸುತ್ತಿದ್ದ. ಪುಂಖಾನುಪುಂಖವೆಂಬ ವಿದ್ಯೆಯಿಂದ ಹೊಡೆದು, ನೆಲಕ್ಕೆ ಬೀಳದಂತೆ ಸಿಹಿ ಮಾವಿನ ದೋರೆಗಾಯಿಗಳ ಗೊಂಚಲನ್ನು ಕೈಯಿನ ಹಾಗೆ ಬಾಣದಿಂದಲೇ ಹಿಡಿದು ಅವನು ನಲ್ಲಳಿಗೆ ಮಲಗಿದ್ದಲ್ಲಿಂದಲೇ ಕೊಡುತ್ತಿದ್ದುದು ಕಾಣಿಸಿತು. ಅವನ ಬಿಲ್ಲ ಜಾಣ್ಮೆ, ಮನ್ಮಥನ ರೂಪು, ತನ್ನ ನಲ್ಲಳಿಗೆ ತೋರಿಸುತ್ತಿರುವ ಬಿಲ್ಲ ಕೌಶಲ ಇವುಗಳನ್ನು ಸೌಂದರಿಯು ಎಚ್ಚರಗೊಂಡು ಕಂಡರೆ ತನಗೂ ಹಾಗೆ ತೋರಿಸು ಎಂದು ತನ್ನನ್ನು ಕೇಳಿಯಾಳೆಂದು ಬಗೆದ ಪ್ರಮಾಥಿಕುಮಾರನಿಗೆ ಅಳುಕುಂಟಾಯಿತು. ತನಗೋ ಬಿಲ್ಲ ಜಾಣ್ಮೆಯಿಲ್ಲ; ಆದರೆ ಹಾಗೆ ಹೇಳಿಕೊಳ್ಳಲು ಬಿಗುಮಾನ. ಸದ್ಯ,

ಇವಳು ನಿದ್ದೆ ಮಾಡುತ್ತಿರುವಳಲ್ಲ ಎಂದು ಅವನಿಗೆ ಸಮಾಧಾನವಾಯಿತು. ಇವಳರಿಯದ ಕಲೆಗಳಿಲ್ಲ; ಇವಳು ಎದ್ದು ಜಾಣ್ಮೆಗಳನ್ನು ತೋರೆಂದು ತನ್ನನ್ನು ಕೇಳುವ ಮುನ್ನವೇ ಅಲ್ಲಿಂದ ಹೋಗಬೇಕು ಎಂದುಕೊಂಡ. ಯಾರಿಗೂ ಗೊತ್ತಾಗದ ಹಾಗೆ ಅಲ್ಲಿಂದ ಹೊರಟು ಬಿಟ್ಟ.

ಧನುರ್ವಿದ್ಯೆಯನ್ನು ಕಲಿಯಬೇಕೆಂಬ ನಿರ್ಧಾರದಿಂದ ಕೆಲವು ದಿನ ಪ್ರಯಾಣ ಮಾಡಿ ಪಾಟಲೀಪುತ್ರ ಎಂಬ ನಗರಕ್ಕೆ ಬಂದು ಅಲ್ಲಿದ್ದ ದ್ರೋಣಾಚಾರ್ಯರೆಂಬುವವರನ್ನು ಕಂಡ. ಬೆಲೆಯಿಲ್ಲದ ರತ್ನಾಭರಣಗಳಿಂದ ಬಿಲ್ಲೋಜನ ಪಾದಕಮಲಗಳನ್ನು ಪೂಜಿಸಿ ರಾಜನು ವಿನಯದಿಂದ ನಿಂತುಕೊಂಡ. ಜಾಣನೂ ರೂಪವಂತನೂ ಆದವನು ಇಷ್ಟು ವಿನಯವಂತನಾಗಿರಬೇಕಾದರೆ ಈತನು ರಾಜನಾಗಿರಬೇಕೆಂದು ದ್ರೋಣಚಾರ್ಯನು ಊಹಿಸಿದ. ಮಹಾವಿನಯಪರನಾದ ಇವನು ಕ್ಷತ್ರಿಯನಾಗಿರಬೇಕೆಂದುಕೊಂಡು ಆಚಾರ್ಯನು ಪ್ರಮಾಥಿಕುಮಾರನ ಮುಖವನ್ನು ನೋಡಿ, ಅವನ ಹೆಸರೇನು, ಅವನು ಬಂದುದೆಲ್ಲಿಂದ, ಎಲ್ಲಿರುವನು, ಬಂದ ಕಾರಣವೇನು ಮುಂತಾದವುಗಳನ್ನು ವಿಚಾರಿಸಿದ. ತಾನು ದೂರ ದೇಶದವನೆಂದು ಹೇಳಿ, ತನ್ನ ಹೆಸರನ್ನು ನಿವೇದಿಸಿಕೊಂಡ; ತಾನು ಜಿನಭಕ್ತನೆಂಬುದನ್ನೂ, ತಾನು ಬಂದುದು ಚಾಪವಿದ್ಯೆಯಯನ್ನು ಕಲಿಯಲೆಂದೂ ಬಿನ್ನವಿಸಿಕೊಂಡ. ಪರಮಾಥಿಕುಮಾರನ ನುಡಿಯುವ ರೀತಿಗೂ ವಿನಯಕ್ಕೂ ಸಂತಸಗೊಂಡ ದ್ರೋಣಾಚಾರ್ಯನು ಇವನನ್ನು ಬಿಲ್ಲುವಿದ್ಯೆಯಲ್ಲಿ ಜಾಣನ್ನಾಗಿ ಮಾಡುವೆನೆಂದು ಮನಸ್ಸಿನಲ್ಲಿಯೇ ನಿರ್ಧರಿಸಿದ. ಅವನ ಕೈಯನ್ನು ಹಿಡಿದುಕೊಂಡು ತನ್ನ ಪಂಕ್ತಿಯಲ್ಲೇ ಊಟಕ್ಕಿಡಿಸಿ, ವಸ್ತ್ರ ತಾಂಬೂಲಾದಿಗಳನ್ನು ಕೊಟ್ಟು ಸಂತಸಪಡಿಸಿದ.

ಆ ದಿನ ಪಥಶ್ರಮದಲ್ಲಿ ಮುಗಿಯಿತು. ಮಾರನೆಯ ದಿನ ಆಚಾರ್ಯನು ಪ್ರಮಾಥಿಕುಮಾರನನ್ನು ಕುರಿತು, "ಜಿನಭಕ್ತನೇ, ನನ್ನ ಬಳಿ ಚಾಪವಿದ್ಯೆಯನ್ನು ನೆಟ್ಟ ಮನಸ್ಸಿನಿಂದ ಕಲಿತವನು ಇಲ್ಲ; ನಿನ್ನನ್ನು ಚಾಪವಿದ್ಯೆಯಲ್ಲಿ ಅರ್ಜುನಭೀಮರಿಗಿಂತ ಅಧಿಕನೆಂಬಂತೆ ಮಾಡುತ್ತೇನೆ; ಯಾವ ಹಿಂಜರಿಕೆಯೂ ಇಲ್ಲದೆ ಬಿಲ್ವಿದ್ಯೆಯನ್ನು ಕಲಿ" ಎಂದು ಪ್ರೋತ್ಸಾಹದ ಮಾತುಗಳನ್ನಾಡಿದ. ಆಚಾರ್ಯನ ಕರುಣೆಯನ್ನು ಕಂಡು ಕುಮಾರನಿಗೆ ಸಮಾಧಾನವಾಯಿತು. ಓಲಗಿಸುವವನಿಗೆ ರಾಜನ ಮೆಚ್ಚಿಕೆ, ಉತ್ತಮ ಧರ್ಮಶ್ರವಣ ಮಾಡಲು ಬಂದವನಿಗೆ ಮುನಿನಾಥರ ಪ್ರೀತಿ, ಶಸ್ತ್ರಶಾಸ್ತ್ರಗಳನ್ನು ಕಲಿಯ ಬಯಸುವವನಿಗೆ ಓಜರ ಕರುಣೆ ಉಂಟಾದರೆ ಅವನೇ ಭಾಗ್ಯವಂತ, ಧನ್ಯ ಎಂದು ಪ್ರಮಾಥಿಕುಮಾರ ಎಂದುಕೊಂಡ; ಬಿಲ್ಲ ಬಲ್ಮೆ ತನಗೆ ಆಗಲೇ ಒದಗಿದಂತೆ ಮುದಗೊಂಡ.

ಶುಭದಿನದಲ್ಲಿ ಚಾಪವಿದ್ಯೆಯನ್ನು ಕಲಿಯಲು ಆರಂಭಿಸಿದ ಕುಮಾರನು, ಒಂದೇ ಜಾಗದಲ್ಲಿ ಊಟ ಮಾಡಿದರೆ ಬಿಲ್ವಿದ್ಯೆಯು ಸಾಧಿತವಾಗದು, ಆದ್ದರಿಂದ ಕಲಿಕೆಯು ಮುಗಿಯುವವರೆಗೆ ತಿರಿದು ಉಣ್ಣುವುದೇ ಸರಿ ಎಂದು ತೀರ್ಮಾನಿಸಿದ. ವಿದ್ಯೆಯ ಕಾರಣದಿಂದ ಮೈಸುಖವನ್ನು ಬಿಟ್ಟ ಅವನು ದ್ರೋಣಾಚಾರ್ಯರ ಮಾತನ್ನು ಮೀರಿ ಭಿಕ್ಷಾಹಾರವನ್ನು ಉಂಡು, ಉಪಾಧ್ಯಾಯರು ಹೇಳಿದಂತೆ ನಡೆದುಕೊಂಡು ಹಲವು ದಿನ ಪ್ರೀತಿಯಿಂದ ಚಾಪವಿದ್ಯೆಯನ್ನು ಕಲಿತ. ಜಿನಭಕ್ತರಿಗೆ ಮೇದಿನಿಯಲ್ಲಿ ಯಾರು ಸಮಾನ; ಇವನ ಚಾಪವಿದ್ಯೆಯಲ್ಲಿ ಅರ್ಜುನ ಕರ್ಣ ರಾಮರು ಸರಿಗಟ್ಟಬಹುದೇ ಹೊರತು ಸಾಮಾನ್ಯ ರಾಜರು ಸಮಾನರಾಗಲಾರರು ಎಂದು ಪುರಜನರೂ ಜಗಜ್ಜನರೂ ಒಂದೇ ಕಂಠದಿಂದ ಹೊಗಳುವ ಹಾಗೆ ಅವನ ಪ್ರಸಿದ್ಧಿ ಬೆಳೆಯಿತು. ಶಿಷ್ಯರೇ ಮಿಗಿಲು ಎಂಬ ಮಾತನ್ನು ನಿಜ ಮಾಡಿ ಪ್ರಮಾಥಿಕುಮಾರನು ಚಾಪವಿದ್ಯೆಯಲ್ಲಿ ದ್ರೋಣಚಾರ್ಯರಿಗಿಂತ ಮೇಲೆನಿಸಿ ಸುಖದಿಂದಿದ್ದ. "ನನ್ನ ಶಿಷ್ಯರಲ್ಲೆಲ್ಲ ಈತನು ಬಿಲ್ಲ ಬಲ್ಮೆಯಲ್ಲಿ ಜಾಣ, ಅತ್ಯುನ್ನತ, ಕಡು ವೀರ; ಅಲ್ಲದೆ ಇವನು ಉತ್ತಮ ಜೈನ, ಊರ್ಜಿತತೇಜ, ಬುದ್ಧಿವಂತ, ವಿವೇಕಿ, ಧೈರ್ಯಪರ ಮತ್ತು ಜನಸ್ತುತ" ಎಂದು ದ್ರೋಣಾಚಾರ್ಯನು ಅವನ ಬಗ್ಗೆ ವಿಶೇಷ ಕೂರ್ಮೆಯನ್ನು ತಾಳಿದ. ಅವನನ್ನು ಮಗನಂತೆ ವಾತ್ಸಲ್ಯದಿಂದ ಕಾಣತೊಡಗಿದ.

ಹೀಗಿರಲು ಒಂದು ದಿನ ದ್ರೋಣಾಚಾರ್ಯನು ಜಿನಭಕ್ತನೇ ಮೊದಲಾದ ತನ್ನ ಶಿಷ್ಯರ ಸಮೇತ ಊರಿಂದ ಹೊರಗೆ ಹೋಗುತ್ತಿರುವಾಗ, ಎದುರಿಗೆ ಆ ಊರಿನ ರಾಜನಾದ ಸಿಂಹಸೇನನು ತನ್ನ ಮಗಳಾದ ಚಂದ್ರಲೇಖೆ ಎಂಬ ಕುಮಾರಿಯೊಡನೆ ಕೆಲವು ಪರಿವಾರಜನರೊಂದಿಗೆ ಪುರದ ಹೊರವಲಯದ ಸಹಸ್ರಕೂಟ ಚೈತ್ಯಾಲಯದಲ್ಲಿ ಪೂಜೆ ಸಲ್ಲಿಸಿ ಬರುತ್ತಿದ್ದುದು ಕಾಣಿಸಿತು. ಈ ಮಧ್ಯೆ ಒಂದು ಆನೆಯು ಮದದಿಂದ ಕಣ್ಗೆಟ್ಟು, ಕಟ್ಟಿದ್ದ ಕಂಬವನ್ನೇ ಕಿತ್ತು ಕಾಪಿನವರನ್ನು ಬಡಿಯುತ್ತ, ಹಾಕಿದ್ದ ನಿಗಳವನ್ನು ಚೂರು ಚೂರು ಮಾಡಿ ಕತ್ತರಿಸಿಕೊಂಡು ಕೋಪದಿಂದ ಕುಮಾರಿಯೆಡೆಗೆ ನುಗ್ಗಿ ಬಂದಿತು. ಮಾರಿಯ ಮೂರಿಯ ಹಾಗೆ ಬರುತ್ತಿದ್ದ ಆನೆಯನ್ನು ಕಂಡು ವೀರರೆಲ್ಲ ಹಿಂದೆ ಸರಿದರು, ಮಾತಾಳಿಗಳು ಮುದುರಿಕೊಂಡರು, ಅಹಂಕಾರಿಗಳ ದರ್ಪವಳಿಯಿತು, ಬಿರುದರು ಇದು ಅರಿದು ಎಂದು ಓಡಿದರು, ಬಂಟರು ಮೂಕರಾದರು, ಪಲ್ಲಕ್ಕಿ ಹೊತ್ತವರು ಅದನ್ನಿಳಿಸಿ ಪಲಾಯನಗೈದರು. ಚಂದ್ರಲೇಖೆಯೊಬ್ಬಳೇ ಉಳಿದಳು. ಪರಮಜಿನೇಂದ್ರನ ಪಾದಕಮಲಗಳನ್ನು ತನ್ನ ಹೃದಯದಲ್ಲಿ ಧರಿಸಿ ಧೃತಿಗೆಡದೆ, ಈ ಆನೆಯ ಉಪದ್ರವ ನೀಗುವವರೆಗೂ ದೇಹ ತನ್ನದಲ್ಲ ಎಂಬ ಹಿರಿಮೆಯನ್ನು ತಾಳಿ, ರಾಜಕುಮಾರಿಯೆಂಬ ಬಿಂಕವನ್ನು ತೊರೆದು ಪಂಚಪದವನ್ನು ಧ್ಯಾನಿಸುತ್ತಿದ್ದಳು.

ದ್ರೋಣಾಚಾರ್ಯರ ಶಿಷ್ಯರೆಲ್ಲ ಬೆತ್ತಬೆಟ್ಟಾಗಿ ಗುಂಪಾಗಿ ನೋಡುತ್ತಿದ್ದರು. ಜಿನಭಕ್ತನು ಚಂದ್ರಲೇಖೆಯ ಧೈರ್ಯವನ್ನೂ, ಧರ್ಮದಲ್ಲಿನ ನಂಬಿಕೆಯನ್ನೂ, ಮಿಡುಕದೆ ನಿಂತ ದೃಢತೆಯನ್ನೂ ಕಂಡು ಮೆಚ್ಚಿ ಸಮಯವಾತ್ಸಲ್ಯವನ್ನು ಮೆರೆಯುವೆನೆಂದು ತೀರ್ಮಾನಿಸಿ, ಕುಮಾರಿಯೆಡೆ ಕೋಪಾಟೋಪದಿಂದ ನುಗ್ಗಿ ಬರುತ್ತಿದ್ದ ಆನೆಗೆ ಅಡ್ಡಲಾಗಿ ಬಂದ. ಶ್ರೇಷ್ಠವಾದ ಪಂಚಪಾದಗಳನ್ನು ಧ್ಯಾನಿಸಿದ ಅಧಿಕಗುಣಿಯಾದ ಕುಮಾರನು ಆನೆಯನ್ನು ಹಿಡಿದು ಬಗ್ಗಿಸಿ ಅದರ ಬೆನ್ನೇರಿದ. ಹೀಗೆ ವಿದ್ಯಾಧರಕರಣದಿಂದ ಆನೆಯ ಮೇಲೇರಿ, ತನ್ನ ಹರಿತವಾದ ಕತ್ತಿ ಮತ್ತು ಕಟ್ಟಿದ ಹಗ್ಗಗಳೇ ಅಂಕುಶದಂತಾಗಲು ಸಿಂಹದಂತಿದ್ದ ಆನೆಯನ್ನು ಗ್ರಾಮಸಿಂಹದಂತೆ ಮಾಡಿಬಿಟ್ಟ. ನೆರೆದವರೆಲ್ಲ ಕೈಮುಗಿದು ಜಯಕಾರ ಮಾಡಿದರು. ಆಗ ಅವನು ಕುಮಾರಿಯ ಬಳಿ ಹೋದ. 'ಜಿನಧರ್ಮೋತ್ಪಲಚಂದ್ರಿಕೆಯೆ, ಶುದ್ಧ ದರ್ಶನದಲ್ಲಿ ನಿನಗೆ ಯಾರು ಸಮಾನರು? ನೀನು ಮೇದಿನಿಪೂಜಿತೆ, ಜನವಂದಿತೆ; ಇದನ್ನು ನೂರು ಬಾರಿ ಹೇಳಿದರೂ ಸರಿ' ಎಂದು ಅವಳನ್ನು ಮನಸ್ಸಿನಲ್ಲಿಯೇ ಹೊಗಳಿದ. "ಉಪಸರ್ಗ ನೀಗಿತು; ಕೈಯನ್ನೆತ್ತಿಕೊಳ್ಳಿ" ಎಂದು ಹೇಳಿದ; ಚಂದ್ರಲೇಖೆ ಹಾಗೆಯೇ ಮಾಡಿದಳು. ಅವನನ್ನು ನೋಡಿ, ಅವನು ಮಹಾತ್ಮನೆಂಬುದನ್ನು ಅರಿತಳು. "ಈ ಜನ್ಮದಲ್ಲಿ ಈತನೇ ನನ್ನ ಗಂಡ, ಉಳಿದ ರಾಜಕುಮಾರರು ಇವನಿಗೆ ಸರಿದೊರೆಯಲ್ಲ" ಎಂದು ನಿರ್ಧರಿಸಿ ರಾಜಮಂದಿರಕ್ಕೆ ಹೋದಳು.

ಇತ್ತ ಪ್ರಮಾಥಿಕುಮಾರನು ಆನೆಯನ್ನು ಮೊದಲಿನ ಜಾಗಕ್ಕೆ ಕರೆದೊಯ್ದು ಕಟ್ಟಿ ಹಾಕಿ ಮತ್ತೆ ಬಂದು ದ್ರೋಣಾಚಾರ್ಯನ ಜೊತೆಗೂಡಿದ. ಅವನನ್ನು ಪುರಜನರೂ ರಾಜನೂ ದ್ರೋಣಾಚಾರ್ಯನೂ ಮೆಚ್ಚಿ ಕೊಂಡಾಡಿದರು; ಮೇರುಧೈರ್ಯನೆಂದೂ, ಇಂದ್ರವೈಭವನೆಂದೂ, ಖೇಚರಶೌರ್ಯನೆಂದೂ, ಚಾಪವಿದ್ಯಾಪರಿಣತನೆಂದೂ, ಭಾಸ್ಕರತೇಜನೆಂದೂ ವಿಶೇಷವಾಗಿ ಹೊಗಳಿದರು. ಶಿಷ್ಯರೆಲ್ಲ ಅವನ ಸುತ್ತ ನೆರೆದು ಗುಜುಗುಜು ಮಾಡುತ್ತ ಹಲ್ಲು ಕಡಿಯುತ್ತಿರಲು ದ್ರೋಣಾಚಾರ್ಯರು ಅವರನ್ನೆಲ್ಲ ಖಂಡಿಸಿದರು, ಆನಂತರ, ಕವಿಗಳು ಕವಿಗಳಿಗೆ, ಬಿರುದರು ಬೀರರಿಗೆ, ರಾಜರು ರಾಜರಿಗೆ, ವಿಟರು ವಿಟರಿಗೆ, ಬುದ್ಧಿವಂತರು ಬುದ್ಧವಂತರಿಗೆ, ಬಂಟರು ಬಂಟರಿಗೆ, ಪಣ್ಯವನಿತೆಯರು ಪಣ್ಯಾಂಗನೆಯರಿಗೆ ಅಸೂಯೆ ವ್ಯಕ್ತಪಡಿಸುವುದು ಲೋಕದಲ್ಲಿ ಸಾಮಾನ್ಯ; ಇವರ ಕೋಪವೇನೂ ಆಶ್ಚರ್ಯಕರವಲ್ಲ ಎಂದು ತಮ್ಮಲ್ಲಿಯೇ ಅಂದುಕೊಂಡು ಬೆರಳು ಮಿಡಿದರು. ಸಿಂಹದ ದನಿಯು ಕೇಳಿಸುವವರೆಗೂ ಆನೆಗಳದ್ದು ಪ್ರತಾಪ, ಅದರ ದನಿ ಕೇಳಿದಾಕ್ಷಣ ಭಯದಿಂದ ಓಡುತ್ತವೆ; ಹಾಗೆಯೇ ಜಿನಭಕ್ತನ ಧನುರ್ವಿದ್ಯೆಯನ್ನು ನೋಡುವವರೆಗೂ ಈ ಲಲಿತಘಟೆಗಳು ತಾನು ಹೇಳಿದ್ದನ್ನು ತಿರಸ್ಕರಿಸಿ ತಾವೇ ಧನುರ್ವಿದ್ಯಾಪ್ರವೀಣರೆಂದುಕೊಂಡಿರುತ್ತಾರೆ; ಅವನ ಕೈಚಳಕವನ್ನು ಕಂಡರೆ ತಮ್ಮ

ದರ್ಪವನ್ನು ಅಡಗಿಸಿಕೊಳ್ಳುತ್ತಾರೆ. ಆದ್ದರಿಂದ ಈ ಜಿನಭಕ್ತನನ್ನು ಪ್ರಪಂಚವೇ ಹೊಗಳುವ ಹಾಗೆ ಚಾಪವಿದ್ಯಾಪರಿಣತನನ್ನಾಗಿ ಮಾಡುತ್ತೇನೆ, ಆಗ ಇವರ ಹೊಟ್ಟೆಯ ಕಿಚ್ಚು ತಣ್ಣಗಾಗುವುದು ಎಂದು ನಿರ್ಧರಿಸಿದ.

ತಡಮಾಡದೆ ಉಪಾಧ್ಯಾಯನು ಜಿನಭಕ್ತನನ್ನೂ ಇತರ ಎಲ್ಲ ಶಿಷ್ಯರನ್ನೂ ಕರೆದು ಅವರವರ ಧನುರ್ವಿದ್ಯಾ ಕೌಶಲವನ್ನು ತೋರಿಸಲು ಆದೇಶಿಸಿದ. ಅವರೆಲ್ಲ ಉತ್ಸಾಹದಿಂದ ಒವಜರಿಗೆ ಪೊಡಮಟ್ಟು ಹೋದರು. ಮಾರನೆಯ ದಿನ ಎಲ್ಲರೂ ಸಿಂಗಾರ ಮಾಡಿಕೊಂಡು ಸಡಗರದಿಂದ ನೆರೆದು ದ್ರೋಣಾಚಾರ್ಯನಲ್ಲಿಗೆ ಬಂದು ವಂದಿಸಿದರು. ಗುರು ತನ್ನ ಶಿಷ್ಯನಿಕಾಯವನ್ನು ಊರ ಹೊರಗಿನ ಉದ್ಯಾನಕ್ಕೆ ಕರೆತಂದ. ಮರದಿಂದ ತೆಂಗಿನ ಕಾಯಿಗಳನ್ನು ನೆಲಕ್ಕೆ ಬೀಳದಂತೆ ಬಾಣಗಳಿಂದಲೇ ನಿಧಾನವಾಗಿ ಕೆಳಕ್ಕೆ ತರಬೇಕೆಂದು ಆದೇಶಿಸಿದರು. ಅಂತೆಯೇ ಮಾಡಿ ತಮ್ಮ ಜಾಣ್ಮೆಯನ್ನು ತೋರಿಸಲು ಅವಕಾಶ ಒದಗಿತೆಂದು ಶಿಷ್ಯರು ಸಂಭ್ರಮಿಸಿದರು. ಅವರೆಲ್ಲ ಆಚಾರ್ಯರ ಪಾದಕ್ಕೆರಗಿ ಬಿಲ್ಲನ್ನು ತೆಗೆದುಕೊಂಡು ನೆರೆದ ಜನರೆಲ್ಲ ನೋಡುತ್ತಿರಲು ತೆಂಗಿನ ಕಾಯಿಗೆ ಅನೇಕ ಬಾರಿ ಬಾಣಗಳನ್ನು ಬಿಟ್ಟರು. ಆದರೆ ಅವರಾರಿಗೂ ಬಾಣಗಳಿಂದಲೇ ಕಾಯಿಗಳನ್ನು ನೆಲಕ್ಕೆ ತರಲು ಸಾಧ್ಯವಾಗಲಿಲ್ಲ. ನಡೆಯಲಾರದ ರೋಗಿಯಂತೆ, ಚಿಕ್ಕ ವಯಸ್ಸಿನ ಹೆಂಡತಿಯ ಮುದಿ ಗಂಡನಂತೆ, ಮಗನಿಲ್ಲದ ಹಣವಂತನಂತೆ ಕುಂದಿ ಅವರೆಲ್ಲ ನಾಚಿಕೆಯಿಂದ ಉಪಾಧ್ಯಾಯರ ಮುಖವನ್ನು ನೋಡಲಾರದೆ ಭಾರವಾದ ತೆನೆಯ ಹಾಗೆ ತಲೆ ಬಗ್ಗಿಸಿ ನಿಂತರು. ಅವರನ್ನು ಕಂಡ ದ್ರೋಣನು, ಕೆಟ್ಟವರು ಸಜ್ಜನರ ಬಗ್ಗೆ, ಕುತ್ಸಿತರು ಮಾನ್ಯರಿಗೆ, ಪಾಪಿಗಳು ಜಿನಧರ್ಮೋದಯರಾದವರಿಗೆ, ಬಡವರು ಹಣವಂತರಿಗೆ ಕುರೂಪಿಗಳು ಸುಂದರಕಾಯರಿಗೆ ಸಿಟ್ಟುಗೊಂಡು ಅಳಲಿ; ಆದರೆ ಆಗುವುದು ಆಗಿಯೇ ತೀರುತ್ತದೆ ಎಂದುಕೊಂಡ.

ಆನಂತರ ಜಿನಭಕ್ತನನ್ನು ಕರೆದು ನಾರಿಕೇಳ ಫಲಗಳನ್ನು ನೆಲವನ್ನು ಮುಟ್ಟದಂತೆ ಮತ್ತು ಮಧ್ಯದಲ್ಲಿಯೇ ತಡೆಯದಂತೆ ತರಲು ಸಾಧ್ಯವೇ ಎಂದು ಕೇಳಿದರು. ಆಗ ಜಿನಭಕ್ತನು ಗುರುವಿಗೆ ನಮಿಸಿ ಅವರ ಆದೇಶವನ್ನು ಪಾಲಿಸಲು ಬಿಲ್ಲನ್ನು ಠೇಂಕಾರ ಮಾಡಿ ಸಿದ್ಧನಾದ. ಪರಮಜಿನಚರಣಗಳನ್ನು ಧ್ಯಾನಿಸಿ ನಯದಿಂದ ಶರಸಂಧಾನವೆಂಬ ಅಲಗಿನಿಂದಲೇ ತೆಂಗಿನ ಕಾಯಿಗಳನ್ನು ಕೊಯ್ದು ನೆಲಕ್ಕೆ ತಾಕದಂತೆ ಅವು ದ್ರೋಣಾಚಾರ್ಯನ ಬಳಿ ಬೀಳುವಂತೆ ಬಾಣಸಮೂಹದಿಂದಲೇ ತಂದ. ಜನರೆಲ್ಲ 'ಮಝು ಭಾಪು' ಎಂದು ಜಯಕಾರ ಮಾಡಿದರು; ನಾಡು ಬೀಡು ಅವನ ಬಿಲ್ಲ ಬಲ್ಮೆಗೆ ಸಂತೋಷಗೊಂಡು ಹೊಗಳಿತು. ದ್ರೋಣಾಚಾರ್ಯನು ತನ್ನ ಶಿಷ್ಯಸಮೂಹದೊಡನೆ ಮನೆಗೆ ಬಂದು ಸಂತೋಷದಿಂದಿದ್ದ.

ಪ್ರಮಾಥಿಕುಮಾರನ ಮೇಲೆ ಇತರ ಶಿಷ್ಯರು ಅಸೂಯೆಯಿಂದ ಒಂದು ತಂತ್ರ ಹೂಡಿದರು: ತಾವೆಲ್ಲ ಇವನಲ್ಲಿ ತುಂಬ ಗೆಳೆತನದಿಂದಿರುವಂತೆಯೂ ಅವನ ಮೇಲೆ ತುಂಬ ಪ್ರೀತಿಯಿರುವಂತೆಯೂ ನಟಿಸಿ, ಒಂದು ದಿನ ಯಮನಂತಹ ಮದಾಂಧಸಿಂಧುರದ ಬಳಿ ಇವನನ್ನು ಕರೆದೊಯ್ದು, ಅದನ್ನು ಹೊಡೆಯಲು ಅವನಿಗೆ ಹೇಳಿ ಅದರ ಮುಂದೆ ನಿಲ್ಲಿಸಿ, ಇವನನ್ನು ಆನೆ ತುಳಿಯುವುದನ್ನು ನೋಡೋಣ, ಇದೇ ಮಂತ್ರ ಎಂದು ತಮ್ಮಲ್ಲಿಯೇ ಮಾತಾಡಿಕೊಂಡರು. ಅವರೆಲ್ಲ ಹುಸಿ ಪ್ರೀತಿಯಿಂದ ಜಿನಭಕ್ತನನ್ನು ನಂಬಿಸಿದರು. ಕೆಲವಾರು ದಿವಸಗಳಾದ ಮೇಲೆ ಅವರೆಲ್ಲ ಊರಿನ ಹೊರವಲಯದ ಉದ್ಯಾನವನದಲ್ಲಿ ಆಡುತ್ತಿದ್ದರು. ಅವರ ಮನಸ್ಸಿನಲ್ಲಿದ್ದಂತಹ ಆನೆಯೊಂದು ಕಣ್ಗಾಣದಂತಹ ಮದದಿಂದ ಕಂಬವನ್ನು ಮುರಿದುಕೊಂಡು ಗಾಳಿಯಂತೆ ವೇಗವಾಗಿ ಬರುತ್ತಿತ್ತು. ಆಗ ಇತರ ಶಿಷ್ಯರು ಹುಸಿ ಹೊಗಳಿಕೆಯಿಂದ, "ಜಿನಭಕ್ತನು ಪರಾಕ್ರಮದಲ್ಲಿ ಫಲ್ಗುಣನಿಗಿಂತ ಮಿಗಿಲು; ಇವನೊಬ್ಬನೇ ಇದರೊಡನೆ ಹೋರಾಡುತ್ತಾನೆ; ಮಿಕ್ಕವರೆಲ್ಲ ಏತಕ್ಕೆ?" ಎಂದು ಹುರಿದುಂಬಿಸಿದರು. ಆಗ ಪ್ರಮಾಥಿಕುಮಾರನು ಮನಸ್ಸಿನಲ್ಲಿ ಶಾಂತಿ ಜಿನೇಶ್ವರನನ್ನು ಧ್ಯಾನಿಸುತ್ತ ತನ್ನ ಪಕ್ಕದಲ್ಲಿದ್ದ ತಿರಿದುಣ್ಣುವ ದುಲ್ಲಟೆಯನ್ನು ತೆಗೆದುಕೊಂಡು ಅಜವನ್ನು ಹೊಡೆಯುವಂತೆ ಭಯವಿಲ್ಲದೆ ಆ ಗಜವನ್ನು ಹೊಡೆದ. ಆಗ ಕರಿಯು ನರಿಯಂತೆ ಇವನ ಎದುರು ಬಂದು ನಿಲ್ಲಲು ಧೈರ್ಯವಿಲ್ಲದೆ ಭಯದಿಂದ ಘೀಳಿಡುತ್ತ ವಾಪಸ್ಸು ತನ್ನ ನೆಲೆಗೆ ಹೊರಟು ಹೋಯಿತು.

ಇತ್ತ ಜಿನಭಕ್ತನು ಹರಿಕಾಂತನಂತೆ ಗರ್ವಪಡದೆ, ಕುಪ್ಪಕುರಿಯಾಡುವ ಮಕ್ಕಳಂತೆ ತನ್ನನ್ನು ಹೊಗಳಿಕೊಳ್ಳದೆ, ನವಿಲಂತೆ ತನ್ನಾಟಕ್ಕೆ ತಾನೆ ನಲಿಯದೆ, ಸಮುದ್ರದಂತೆ ಗಂಭೀರನಾಗಿದ್ದ. ದ್ರೋಣನ ಚಿಟ್ಟರೆಲ್ಲ ಜಿನಭಕ್ತನ ಪುಣ್ಯದ ಮಹಿಮೆಗೂ, ಮನಸ್ಸಿನ ಧೈರ್ಯಕ್ಕೂ ಚೋದ್ಯಪಟ್ಟರು. ತಮ್ಮ ಮನಸ್ಸಿನ ಕೋಪವನ್ನು ಹತ್ತಿಕ್ಕಿಕೊಂಡು ಸಮ್ಯಕ್ತ್ವಚೂಡಾಮಣಿಗೆ ಮನಸ್ಸಿನಲ್ಲಿಯೇ ನಮಸ್ಕರಿಸಿ, ದ್ರೋಣಾಚಾರ್ಯನಿಗೆ ತಮ್ಮ ದುರ್ಭಾವವನ್ನು ಹೇಳಿಕೊಂಡರು. ಅದಕ್ಕೆ ದ್ರೋಣನು ಹೀಗೆಂದ: "ಧಾರಿಣಿ ಲಲಿತಾಂಗಿಯರು ವೈಭವ ಸೌಖ್ಯ ವೀರ್ಯ ಮುಂತಾದವು ಹಿಂದೆ ಗಳಿಸಿದ ಪುಣ್ಯದಿಂದ ದೊರೆಯುತ್ತವೆ. ಬೆಳಗಿನಿಂದ ಹಿಡಿದು ಸೂರ್ಯ ಮುಳುಗುವವರೆಗೂ ಊರವರು ಕೊಡಗಳನ್ನು ಹಿಡಿದು ತುಂಬಿಕೊಂಡರೂ, ತೂಬು ಹೊಲಗಳಿಗೆ ಹರಿಸಿದರೂ, ಅನೇಕ ಜೀವಕೋಟಿಗಳು ಕುಡಿದರೂ, ಕೆರೆಯ ನೀರು ಮಳೆಯ ನೀರು ಇರುವವರೆಗೂ ತೀರುವುದಿಲ್ಲ; ಆದರೆ ಮಳೆ ಬರದಿದ್ದರೆ ಯಾರೂ ರಕ್ಷಿಸಲಾಗದಂತೆ ಬತ್ತಿ ಹೋಗುತ್ತದೆ. ಹಾಗೆಯೇ ಪುಣ್ಯಾಧಿಕನಾದ ಮಹಾತ್ಮನಿಗೆ ಸದ್ವಿದ್ಯೆ ಪರಾಕ್ರಮ ಧನ ಭೋಗ ಬುದ್ಧಿ ಇವುಗಳು ಉತ್ತರೋತ್ತರವಾಗಿ ಹೆಚ್ಚುತ್ತದೆ; ಆ ಪುಣ್ಯವಿಲ್ಲದಾಗ ಎಷ್ಟು ಪ್ರಯತ್ನಪಟ್ಟರೂ ಅವಮಾನ ಕಷ್ಟವೃತ್ತಿ ಮೊದಲಾದವು ಉಂಟಾಗುತ್ತವೆ" ಎಂದು ಧರ್ಮದ ಮಹಿಮೆಯನ್ನೂ ಕರ್ಮದ ದುಃಸ್ಥಿತಿಯನ್ನೂ ಪಾಪದ ಹೀನತೆಯನ್ನೂ ವಿವರಿಸಿ ಹೇಳಿದ. ಕರ್ಮಕ್ಕೆ ಅಡ್ಡ ಬರುವ ಶಕ್ತಿ ಯಾರಿಗೂ ಇಲ್ಲ, ಕರ್ಮವಿದ್ದವನು ಹಗ್ಗವನ್ನು ಹಿಡಿದರೂ ಹಾವಾಗಿ ಕಚ್ಚುತ್ತದೆ, ಹೊನ್ನನ್ನು ಹಿಡಿದರೂ ಮಣ್ಣಾಗುತ್ತದೆ, ಆಯುಸ್ಸಿದ್ದರೂ ರಾಜಾಧಿಕನಾಗಿ ನಮೆಯುತ್ತಾನೆ, ಶಸ್ತ್ರಶಾಸ್ತ್ರ ವಿದ್ಯೆಗಳನ್ನು ಕಲಿತರೂ ಫಲವೀಯುವುದಿಲ್ಲ ಎಂದು ವಿವರಿಸಿದ. ಆದ್ದರಿಂದ ಧರ್ಮವೇ ತಂದೆತಾಯಿ, ಮನೋಹರಿ, ಬಂಧುಬಳಗ, ಸೋದರ, ಸಖ, ಪಜ್ಜ ಎಲ್ಲ; ಆ ಧರ್ಮದಿಂದಲೇ ಒಳ್ಳೆಯ ಊಟ, ಸುರರಾಜ ಭೋಗ, ಉನ್ನತಿ, ಒಳ್ನುಡಿ, ವಿವೇಕ, ಅದಟು, ತೇಜ, ಅಕ್ಷಯ ಸೌಖ್ಯ ಉಂಟಾಗುವುದು ಎಂದು ದ್ರೋಣಾಚಾರ್ಯನು ತಮ್ಮ ಶಿಷ್ಯರಿಗೆ ಧರ್ಮದ ಮಹಾಗುಣಗಳನ್ನೂ, ಪಾಪದ ಮಹಾ ಕಷ್ಟವನ್ನೂ ತಿಳಿಸಿ, 'ಇಷ್ಟಂ ಧರ್ಮೇಣ ಯೋಜಯೇತ್' ಎಂಬ ನೀತಿಯನ್ನು ಮನದಟ್ಟಾಗುವಂತೆ ವಿವರಿಸಿದ. ಅದನ್ನು ಕೇಳಿ ಅವರೆಲ್ಲ ತಮ್ಮ ಮಾತ್ಸರ್ಯಕೋಪಗಳನ್ನು ಬಿಟ್ಟು ಜಿನಭಕ್ತನ ಕ್ಷಮೆ ಕೋರಿ ಅವನ ಪರಮ ಮಿತ್ರರಾದರು; ಗುರುಗಳಲ್ಲಿ ಭಕ್ತಿಯಿಂದ ತಮ್ಮ ವಿದ್ಯೆಯನ್ನು ಮುಂದುವರಿಸಿದರು.

ಹೀಗೆ ಎಲ್ಲರೂ ಸಂತಸದಿಂದಿರುವಾಗ ಒಂದು ಊರಿನಲ್ಲಿ ಒಂದು ಘೋಷಣೆ ಕೇಳಿ ಬಂತು. ಅದು ರಾಜನದು: ಯಾರು ಚಂದ್ರಕವೇಧವನ್ನು ಬಾಣದಿಂದ ಭೇದಿಸಿ ಚಾಪದ ಬಲ್ಮೆಯನ್ನು ತೋರಿಸುವನೋ ಅವನಿಗೆ ಲಕ್ಷ್ಮೀವಿಲಾಸದಿಂದ ಕೂಡಿದ ತನ್ನ ಮಗಳು ಚಂದ್ರಲೇಖೆಯನ್ನು ಮದುವೆ ಮಾಡಿ ಕೊಡುತ್ತೇನೆಂಬುದು ಅದರ ಸಾರಾಂಶ. ಭಿಕ್ಷಾನ್ನವನ್ನು ನದಿಯ ತೀರದಲ್ಲಿ ಉಣ್ಣಲೆಂದು ಹೋಗುತ್ತಿದ್ದ ಪ್ರಮಾಥಿಕುಮಾರನಿಗೆ ಈ ಘೋಷಣೆ ಕೇಳಿಸಿತು. ತಡಮಾಡದೆ ಬಂದು ಅವನು ಘೋಷಣೆಯನ್ನು ಒಪ್ಪಿದ. ಭಟರು ಜಿನಭಕ್ತನನ್ನು ಸಿಂಹಸೇನ ಮಹಾರಾಜನ ಬಳಿ ಕರೆತಂದು ಅವನು ಘೋಷಣೆಯನ್ನು ಹಿಡಿದ ವಿಚಾರವನ್ನರುಹಿದರು. ರಾಜನು ಕುಮಾರನನ್ನು ನೋಡಿದಾಗ, 'ಇವನು ಚಂದ್ರಕವೇಧವನ್ನು ಹೊಡೆಯುವುದರಲ್ಲಿ ಸಂಶಯವಿಲ್ಲ; ಇವನ ರೂಪ ಶೌರ್ಯಗಳನ್ನು ನೋಡಿದರೆ ಇವನು ರಾಜಕುಮಾರನೇ ಇರಬೇಕು; ಇವನು ಸಾಮಾನ್ಯನಾಗಿರಲಾರ' ಎನ್ನಿಸಿತು. ಅವನ ಬಗ್ಗೆ ವಾತ್ಸಲ್ಯವುಕ್ಕಿ ಅವನ ಕೈ ಹಿಡಿದುಕೊಂಡು ಹೋಗಿ ಮಜ್ಜನ ಭೋಜನ ತಾಂಬೂಲ ವಸ್ತ್ರಾಭರಣಾದಿಗಳಿಂದ ಸಂತೋಷಪಡಿಸಿದ.

ಮರುದಿನ ದ್ರೋಣಾಚಾರ್ಯನೇ ಮೊದಲಾದ ಚಾಪವಿದ್ಯಾಪರಿಣತರನ್ನೂ ವಿದ್ವಜ್ಜನರನ್ನೂ ಬರಮಾಡಿಕೊಂಡ ಮಹಾರಾಜನು ಚಂದ್ರಕವೇಧಕವನ್ನು ಹೊಡೆಯುವುದನ್ನು ಪರೀಕ್ಷಿಸಬೇಕೆಂದು ವಿನಂತಿಸಿಕೊಂಡ. ಅವರು ಅದಕ್ಕೆ ಸಮ್ಮತಿಸಿದರು. ಅಳುಕಾಗಲೀ ಭಯವಾಗಲೀ ಹಿಂಜರಿಕೆಯಾಗಲೀ ಇಲ್ಲದೆ ಕುಮಾರನು ದೃಷ್ಟಿಮುಷ್ಟಿಶರಸಂಧಾನಗಳಿಂದ ಚಂದ್ರವೇಧವನ್ನು ಬಾಣದಿಂದ ಚುಚ್ಚಿದ. ರಾಜನು ಆಶ್ಚರ್ಯದಿಂದ ತಲೆದೂಗಿದ, ದ್ರೋಣನು ಮುದದಿಂದ ಹೊಗಳಿದ,

ನೋಟಕರು 'ಭಾಪು' ಎಂದು ಜಯಕಾರ ಮಾಡಿದರು. ಸಿಂಹಸೇನ ಮಹಾರಾಜನು ಅವನಿಗೆ ಅರ್ಧರಾಜ್ಯವನ್ನಿತ್ತು, ಮಹಾವೈಭವದಿಂದ ಚಂದ್ರಲೇಖೆಯನ್ನು ಮದುವೆ ಮಾಡಿಕೊಟ್ಟ. ಹೀಗೆ ಪ್ರಮಾಥಿಕುಮಾರನು ಪೂರ್ವೋಪಾರ್ಜಿತ ಪುಣ್ಯಫಲದಿಂದ ಚಂದ್ರಲೇಖೆಯ ಕೈಹಿಡಿದು ಮಾಳವಾರ್ಧಾಧೀಶ್ವರನಾಗಿ ಸುಖವಾಗಿ ರಾಜ್ಯಭಾರ ಮಾಡುತ್ತಿದ್ದ.

ಒಂದು ದಿನ ಒಬ್ಬ ದೂತನು ಬಂದು, "ದೇವಾ, ಮಹಾ ಪ್ರತಾಪದಿಂದ ಎಲ್ಲ ಮಾಂಡಲಿಕರೂ ಸೇರಿ ಕೌಶಾಂಬೀ ನಗರವನ್ನು ಮುತ್ತಿ ಭಯಂಕರವಾಗಿ ಕಾದುತ್ತಿದ್ದಾರೆ. ದಂತಿಬಲ ಮಹಾರಾಜನು ಕೋಟೆಯನ್ನು ಬಿಟ್ಟುಕೊಡದೆ ತಮ್ಮ ಭಾರಿ ಸೈನ್ಯದೊಂದಿಗೆ ಹೋರಾಡುತ್ತಿದ್ದಾರೆ; ಹೀಗೆ ಅಲಸದೆ ಕಾದುವವರನ್ನು ನಾನು ಕಾಣೆ. ಕೋಟೆಯ ಹೊರಗೆ ಸುತ್ತುಗಟ್ಟಿದ ಶತ್ರು ನೃಪರು ಬೆನ್ನಟ್ಟಿ ಹಟದಿಂದ ಕಾದುತ್ತಿದ್ದಾರೆ. ಗೆಲ್ಲುವುದು ಅಸಾಧ್ಯವೆಂದು ಅವರು ಹೊರಟು ಹೋದರೆ ಪುಣ್ಯ" ಎಂದು ಅರಸನಿಗೆ ಬಿನ್ನವಿಸಿದ. ಪಕ್ಕದಲ್ಲಿದ್ದ ಪ್ರಮಾಥಿಕುಮಾರನು ಅದನ್ನು ಕೇಳಿ ಸಿಂಹದಂತೆ ಗರ್ಜಿಸಿ ಮುನಿದು, ಸಿಂಹಸೇನ ಮಹಾರಾಜನಿಗೆ ಹೇಳಿದರೆ ತನ್ನನ್ನು ಹೋಗಗೊಡುವುದಿಲ್ಲವೆಂದು ತಿಳಿದು, ಆ ಊರಿನ ಉದ್ಯಾನದಲ್ಲಿ ವಾಸವಾಗಿದ್ದ ಧರ್ಮೋಜ್ವಲನೆಂಬ ಯಕ್ಷನು ಕೊಟ್ಟ ಅದೃಶ್ಯಾಂಜನದ ಪ್ರಯೋಗದಿಂದ ನಡುರಾತ್ರಿಯಲ್ಲಿ ನಲ್ಲಳೊಡನೆ ರಥವನ್ನೇರಿ ಹೊರಟ. ಆ ಸಾಹಸಿಯು ರಿಪುಬಲವನ್ನು ಓಡಿಸಲೆಂದು ಊರ್ಜಿತತೇಜಸ್ಸಿನಿಂದ ಕೂಡಿ ಧಾವಿಸಿದ. ನದಿಗಳನ್ನು ದಾಟಿ, ಧೂರ್ತತನದಿಂದ ಮೇಲೆ ಹಾಯುವ ಹುಲಿಗಳು, ಜಿನುಗುವ ನೊಣಗಳು, ಸೀಳ್ನಾಯಿಗಳು, ಮಲೆವ ಕಾಡೆಮ್ಮೆಗಳು, ಸೀಳ್ಕರಡಿಗಳು ಮುಂತಾದವುಗಳಿಂದ ಕೂಡಿದ ಭಯಂಕರವಾದ ಕಾಡನ್ನು ಭೇದಿಸಿ ನಡೆದ. ಸಿಂಹವನ್ನು ತನ್ನ ಚಕ್ರಾಘಾತದಿಂದಲೂ, ಶಾರ್ದೂಲವನ್ನು ಶರವೇಧದಿಂದಲೂ, ಮದಾಂಧಸಿಂಧುರವನ್ನು ಶರಸಂಧಾನದಿಂದಲೂ, ಹಾವುಗಳನ್ನು ಧ್ವನಿಯೆಂಬ ದೃಷ್ಟಿವಿಷದ ಬಾಣಗಳಿಂದಲೂ ಓಡಿಸಿ ತನ್ನ ಬಿಲ್ಲ ಬಲ್ಮೆಯನ್ನು ಮೆರೆದ.

ಹೀಗೆ ಕುಮಾರನು ಅಡ್ಡ ಬಂದ ವಿಘ್ನಗಳನ್ನು ನಿವಾರಿಸಿಕೊಳ್ಳುತ್ತ ನಿಧಾನವಾಗಿ ನಟ್ಟಡವಿಯಲ್ಲಿ ಬರುತ್ತಿದ್ದ. ಅಲ್ಲಿ ಒಂದೆಡೆ ಹೀನಗುಣನೂ ಪಾಪಯುಕ್ತನೂ ಅವಿಚಾರಿಯೂ ಸ್ತೇನವಿನೋದನೂ ಚೋರಜನಾನಂದನೂ ಶೌಚವಿಹೀನನೂ ಆದ ಸುವೇಗನೆಂಬ ಒಬ್ಬ ರಾಜನು ಅಡಗಿಕೊಂಡಿದ್ದ. ದಾಯಾದಿಗಳು ಬಲಿಷ್ಠರಾಗಿ ಒಟ್ಟಾಗಿ ಬಂದು ತನ್ನ ರಾಜ್ಯವನ್ನು ಗೆಲ್ಲಲು ಈ ವನವನ್ನು ಹೊಕ್ಕು ಕಳ್ಳರ ಜೊತೆ ಸೇರಿಕೊಂಡಿದ್ದ. ದ್ರೋಣಾಚಾರ್ಯನ ಪ್ರತಿಮೆಯೊಂದನ್ನು ಮಾಡಿಟ್ಟುಕೊಂಡು ನಾನಾ ಬಗೆಯ ಹೂಗಳಿಂದ ಅದನ್ನು ಪೂಜಿಸಿ, ಅವರ ಪಾದಕಮಲಗಳನ್ನು ನೆನೆದು ಬಿಲ್ವಿದ್ಯೆಯನ್ನು ನಿತ್ಯವೂ ಅಭ್ಯಾಸ ಮಾಡುತ್ತಿದ್ದ. ಕಾಲಕ್ರಮೇಣ ಅವನು ಬಿಲ್ವಿದ್ಯೆಯಲ್ಲಿ ಅರ್ಜುನನಿಗಿಂತ ಮಿಗಿಲೆನಿಸುವಂತೆ ಸಾಧನೆ ಮಾಡಿದ್ದ. ಏಕೆಂದರೆ ಗುರುಪಾದಭಕ್ತನಿಗೆ ಸಾಧ್ಯವಲ್ಲದ್ದು ಯಾವುದಿದೆ? ಹೀಗೆ ಅಪ್ರತಿಮ ಬಿಲ್ಗಾರನೆನಿಸಿದ ಸುವೇಗನು ಪ್ರಮಾಥಿಕುಮಾರನ ಪಕ್ಕದಲ್ಲಿದ್ದ ಚಂದ್ರಲೇಖೆಯನ್ನು ನೋಡಿ ಅವಳಲ್ಲಿ ಮೋಹಗೊಂಡ. ಜ್ವರ ಬಂದವರಂತೆ ಅವನ ದಾಹ ಹೆಚ್ಚಿತು, ಕಾದ ಕಬ್ಬಿಣದಂತೆ ಮೈ ಬಿಸಿಯಾಯಿತು, ದೆವ್ವ ಬಡಿದವರಂತೆ ನಡುಗಿದ, ಬೇಸಗೆಯಲ್ಲಿ ಪ್ರಯಾಣ ಮಾಡುವವನಂತೆ ಬೆವತ, ಕಾಡುಗಿಚ್ಚಿಗೆ ಸಿಕ್ಕಿದ ಬೆಟ್ಟದಂತೆ ಕಂದಿದ. ಇದರಿಂದ ಪಾರಾಗಲು ತಂಪಾದ ಒಂದು ಕಡೆ ಮಲಗಿ, ತಂಗಾಳಿಗೆ ಮೈಯನ್ನೊಡ್ಡಲು ಬಯಸಿದ, ಮೈಮೇಲೆ ಚಂದನಕರ್ಪೂರಗಳನ್ನು ಒಟ್ಟಿಕೊಳ್ಳಲು ಆಶಿಸಿದ, ತಣ್ಣೀರನ್ನು ಮೈಮೇಲೆ ಎರಚಿಕೊಳ್ಳಲು ಬಯಸಿದ; ಅವನ ವಿರಹಾಗ್ನಿ ಅಷ್ಟು ತೀವ್ರವಾಗಿತ್ತು.

ತಾನು ಕಂಡ ಆ ಸುಂದರಿಯ ಚೆಲುವನ್ನು ಯಾರು ವರ್ಣಿಸಬಲ್ಲರು? ಅವಳು ಕಾಮದೇವನ ಬಾಣ ಮಾತ್ರವಲ್ಲ, ಅವನ ಅಧಿದೇವತೆ, ಅವನಿರುವ ಬೀಡು, ಅವನ ಪತಾಕಿನಿ, ಅವನ ಆಟದ ಬೊಂಬೆ, ಅವನೇರುವ ಮದಗಜ ಎಂದುಕೊಂಡ. ಮನಸಿಜನೆಂಬ ಶತ್ರುವು ತನ್ನ ಮೇಲಿನ ಮುನಿಸಿನಿಂದ ಈ ಕಾಂತೆ ಎಂಬ ಕೂರಲಗಿನಿಂದ ತನ್ನನ್ನು ಇರಿಯುತ್ತಿದ್ದಾನೆ; ತನಗಿನ್ನು ಸಾವೇ ಗತಿ, ಉಳಿಯುವ ರೀತಿ ತಿಳಿಯದು ಎಂದು ಹಲುಬಿದ. ಈ ತರುಣಿಯನ್ನು ಕಂಡದ್ದರಿಂದ ತಾನು ಬಿರುದನೆಂಬ ಮಾತು ಹಿಂದೆ ಉಳಿಯಿತು, ಒಳ್ಳೆಯ ಭಟನೆಂಬ ಮಾತು ಉಡುಗಿತು, ವೀರನೆಂಬ

ಅಗ್ಗಳಿಕೆಯು ದೂರವಾಯಿತು, ನಿಷ್ಠುರಿ ಎಂಬ ಮಾತು ದೂರ ಓಡಿತು, ಇವಳ ಮೇಲಿನ ಮೋಹದಿಂದ ತನಗೆ ಭಯವಾಗುತ್ತಿದೆ ಎಂಬ ಅಳುಕು ಅವನಲ್ಲುಂಟಾಯಿತು. ಇವಳ ರೂಪು, ಚಂಚಲವಾದ ಕಣ್ಣುಗಳು, ಘನಸ್ತನಗಳು, ಹಾವಭಾವವಿಲಾಸಗಳು ತನ್ನನ್ನು ಎತ್ತಿ ನೂಕುತ್ತಿವೆ, ದರ್ಪದಿಂದ ಕುಕ್ಕಿ ಬಡಿಯುತ್ತಿವೆ, ಬೇರು ಸಮೇತ ಕಡಿದು ಕಾಡುತ್ತಿವೆ, ತನ್ನ ಚಿತ್ತವನ್ನು ಅಲುಗಾಡಿಸುತ್ತಿವೆ ಎಂಬ ಭಾವನೆ ಅವನಲ್ಲುದಯಿಸಿತು. ಆ ಸಲ್ಲಲಿತಾಂಗಿಯ ರೂಪವು ಅಡಿಯಿಂದ ಮುಡಿಯವರೆಗೆ ಚೋದ್ಯಪಡಿಸುವಷ್ಟು ಪ್ರಮಾಣಬದ್ಧವಾಗಿದೆ; ಕಾಮನೆಂಬ ಖಳನು ಈ ಲಲಿತಾಂಗಿಯನ್ನು ಆಶ್ರಯಿಸಿ ರಭಸವಾಗಿ ಪುಷ್ಪಬಾಣಗಳನ್ನು ತನ್ನ ಮೇಲೆ ಪ್ರಯೋಗಿಸುತ್ತಿರುವುದರಿಂದ ಅವನು ಅಂಜಿದ. ಅವಳ ಕಟಾಕ್ಷವು ಅವನ ಎದೆಯನ್ನು ಇರಿದವು; ಅವಳ ರೂಪು ಅವನ ಮೇಲೆ ಭರದಿಂದ ದಾಳಿ ಮಾಡಿತು; ಅವಳ ಯೌವನವು ಕಾಡಿತು; ಅವಳ ಗಾಡಿಯು ಸೊಕ್ಕಿನಿಂದ ಬಂದಿವಿಡಿಯಿತು. ಗಂಡನ ಆಶ್ರಯದಲ್ಲಿರುವ ಇವಳನ್ನು ಮುಂದೆ ಮಾಡಿಕೊಂಡು ಮನ್ಮಥನು ಎಲ್ಲ ಕಡೆಯಿಂದಲೂ ಪುಷ್ಪಶರಸಂತತಿಯನ್ನು ಬಿಡದೆ ಬಿಡುತ್ತಿದ್ದಾನೆ; ತಾನಿನ್ನು ಯಾರ ಶರಣುವೊಗಲಿ ಎಂಬ ಪರಿತಾಪ ಸುವೇಗನನ್ನಾವರಿಸಿತು. ಅವಳ ಒಂದೊಂದು ಅವಯವವೂ ಚೆಲುವಿನ ನೆಲೆ; ಅವಳನ್ನು ಕಂಡು ಸೋಲದ ವೀರನಾವನಿದ್ದಾನು ಎಂಬ ಅಂಜಿಕೆ ಅವನನ್ನಾವರಿಸಿತು.

ದೇವೇಂದ್ರನೇ ಎದುರಾದರೂ, ಅಹಿಪತಿಯು ಬಂದು ಅಡ್ಡ ನಿಂತರೂ, ಆದಿತ್ಯನೇ ಆವೇಶದಿಂದ ಮೇಲೆ ಬಿದ್ದರೂ, ಭೂಮಿಯ ಮೇಲಿರುವ ರಾಜರೆಲ್ಲರೂ ಒಟ್ಟಾಗಿ ಸೇರಿ ತನ್ನ ಮೇಲೆ ದಾಳಿ ಮಾಡಿದರೂ ಈ ಸುಂದರಿಯನ್ನು ಬಿಡುವುದಿಲ್ಲ; ಪಕ್ಕದಲ್ಲಿರುವ ಇವನನ್ನು ಕೊಂದು ಇವಳನ್ನು ಭೋಗಿಸುತ್ತೇನೆ ಎಂದು ಸುವೇಗನು ನಿರ್ಧರಿಸಿದ. ಪ್ರಮಾಥಿಕುಮಾರನು ಏಕಾಂಗಿ ಎಂದು ಏಮಾರಿ ಅವನ ಮೇಲೆ ತಾನೇ ಬೀಳಲು ಇಷ್ಟಪಡದೆ ತನ್ನ ಕಡೆಯ ಮುಂದಾಳೊಬ್ಬನನ್ನು ಕರೆದು ಕುಮಾರನನ್ನು ಕೊಂದು ಅವನ ಹೆಂಡತಿಯನ್ನು ರಥಸಮೇತ ತಂದು ಒಪ್ಪಿಸಲು ಹೇಳಿದ. ಅದಕ್ಕೆ ಒಪ್ಪಿದ ನಾಯಕನು ತಲೆ ಬಾಗಿ ತನ್ನ ನೆಲೆಗೆ ಬಂದು ತನ್ನ ಬಲವೆಲ್ಲವನ್ನೂ ಸೇರಿಸಿಕೊಂಡು ಪ್ರಮಾಥಿಕುಮಾರನ ಮೇಲೆ ದಾಳಿಗೈದ. "ಈ ತರಳಾಯತಾಕ್ಷಿಯು ನಿನಗೇಕೆ? ಈ ಸುಂದರಾಕಾರೆಯಾದ ಕಾಮಿನಿಯನ್ನು ಕಾಯದೆ ಬಿಟ್ಟು ಹೋಗು; ಹೋಗದಿದ್ದರೆ ನೀನು ಸಾಯುತ್ತೀ" ಎಂದು ಶರವೃಷ್ಟಿಯನ್ನು ಸುರಿಸಿದ. ಆಗ ವಾತ್ಸಲ್ಯರತ್ನಾಕರನು ಜಿನಪಾದಗಳನ್ನು ನೆನೆದು ತನ್ನ ಬಿಲ್ಲನ್ನು ಕೈಗೆತ್ತಿಕೊಂಡ; ವೈರಿಸೇನೆಯನ್ನು ಬಾಣಾಳಿಯಿಂದ ಇಕ್ಕಿ ಮೆಟ್ಟಿದ; ನಾಯಕನನ್ನು ಯಮಸದನಕ್ಕೆ ಅಟ್ಟಿದ. ಅನಂತರ ಶತ್ರುವನ್ನು ತನ್ನ ಮನೋರಮೆಗೆ ತೋರಿಸಿ ಮುಗುಳ್ನಕ್ಕ.

ಅಮೋಘಾಸ್ತ್ರನ ಬಾಣದಿಂದ ಹೇಗೋ ಬದುಕಿ ಜೀವಭಯದಿಂದ ಓಡಿ ಬಂದ ಒಬ್ಬ ಭಟನು ಸುವೇಗನಿಗೆ ನಾಯಕನ ಸಾವಿನ ವಿಷಯವನ್ನು ಬಿನ್ನಹಗೈದ. ಆಗ ಸುವೇಗನು ಕೋಪಾಟೋಪದಿಂದ ಎಲ್ಲ ನಾಯಕರನ್ನೂ ಕರೆದು, "ಬೆಟ್ಟವನ್ನು ಗುಂಗುರು ಕಾಡಿತ್ತು ಎಂಬಂತೆ, ಸಿಂಹವನ್ನು ನಾಯಿ ಕೆಣಕಿತ್ತು ಎಂಬಂತೆ ದಾರಿಹೋಕ ಭಿಕ್ಷುಕನೊಬ್ಬ ನನ್ನ ನಾಯಕನನ್ನು ಕೊಂದು ಅವನ ಸೈನ್ಯವನ್ನೆಲ್ಲ ನಾಶ ಮಾಡಿ ಅಹಂಕಾರದಿಂದ ಕೂಡಿದ್ದಾನೆ; ನೀವೆಲ್ಲರೂ ಹೋಗಿ ಕಾದಿ ಅವನ ದರ್ಪವನ್ನಡಗಿಸಿರಿ; ಅವನನ್ನು ಕೊಲ್ಲದೆ ಕೋಡಗಗಟ್ಟು ಕಟ್ಟಿ ನನ್ನ ಬಳಿ ಕರೆತನ್ನಿರಿ; ಅವನನ್ನು ಮನವಾರೆ ನಾನೇ ಚಿತ್ರಹಿಂಸೆ ಮಾಡಿ ಕೊಂದು ದಿಗ್ಬಲಿ ಕೊಡುತ್ತೇನೆ; ಆಮೇಲೆ ಅವನ ಹೆಂಡತಿಯನ್ನು ನನ್ನ ಅರಸಿಯನ್ನಾಗಿ ಮಾಡಿಕೊಳ್ಳುತ್ತೇ£" ಎಂದು ಬೆಸಸಿದ. ಅದರಂತೆ ಆ ತಸ್ಕರ ಮುಂದಾಳುಗಳು ಉತ್ಸಾಹದಿಂದ ಯೋಧರನ್ನೆಲ್ಲ ಕೂಡಿಕೊಂಡು ಮಹಾ ಸಮುದ್ರವು ಭೂಮಿಯನ್ನು ಆವರಿಸುವಂತೆ ನಡೆದರು.

ಹಾಗೆ ಬಂದು ಅವರೆಲ್ಲ ಪ್ರಮಾಥಿಕುಮಾರನ ರಥವನ್ನು ಮೂವಳಸಾಗಿ ಮುತ್ತಿಕೊಂಡು ಅದು ಮುಂದೆ ಸಾಗದಂತೆ ಮಾಡಿದರು. ಅಡ್ಡಂಬು ಕೂರಂಬು ಕವಲಂಬು ಪಾರುಂಬಳೆ ಕಕ್ಕಡೆ ಮಿಟ್ಟೆ ಮೊಟ್ಟೆ ಮುಂತಾದ ಆಯುಧಗಳನ್ನು ಬಳಸಿ ಅವನ ಮೇಲೆ ದಾಳಿ ಮಾಡಿದರು. ಇಷ್ಟು ದೊಡ್ಡ ಸೈನ್ಯವನ್ನು ತಾನೊಬ್ಬನೇ ಎದುರಿಸಲು ಕಷ್ಟವೆಂಬ ಅಳುಕು

ಪ್ರಮಾಥಿಕುಮಾರನ ಮನಸ್ಸಿನಲ್ಲಿ ಸ್ವಲ್ಪವೂ ಸುಳಿಯಲಿಲ್ಲ. ಆ ರೀತಿಯಲ್ಲಿ ನಿಂತು ಅವರ ಬಾಣಗಳೆಲ್ಲಕ್ಕೂ ಒಂದೇ ಬಾಣವನ್ನು ಪ್ರತಿಯಾಗಿ ಹೊಡೆದು ಕತ್ತರಿಸಲು, ಅವರೆಲ್ಲ ಸಿಗ್ಗಿನಿಂದ ಹಿಂದಕ್ಕೆ ಓಡಲಾರದ್ದರಿಂದ ಕತ್ತಿಗಳನ್ನು ಹಿರಿದು ನಿಂತುಕೊಂಡರು. ಅದನ್ನು ನೋಡಿ ಚಂದ್ರಲೇಖೆಯು, "ದೇವ, ಇವರು ನಿಮಗೆ ಸಮನಲ್ಲ; ನಿಮ್ಮಿಬ್ಬರ ನಡುವೆ ಸಿಂಹ–ನಾಯಿ, ಹುಲಿ–ಹುಲ್ಲೆ, ತೋಳ–ಕುರಿಗಳಷ್ಟು ಅಂತರವಿದೆ, ಸೋತಿರುವ ಇವರು ಮತ್ತೆ ಹೋಗಿ ತಮ್ಮ ಒಡೆಯನ ಮುಖವನ್ನು ನೋಡಲು ನಾಚಿ ಈಗ ನಿಮ್ಮ ಬಾಣಕ್ಕೆ ಆಹುತಿಯಾಗಲು ನಿಂತಿದ್ದಾರೆ. ನರಿಯನ್ನು ಕೊಂದರೆ ಹೇಸಿಗೆ ಸುರಿಯುವುದೇ ಹೊರತೂ ಲಾಭವಿಲ್ಲ; ಆದ್ದರಿಂದ ಇಷ್ಟು ಜನಗಳನ್ನು ಕೊಂದು ಸುಮ್ಮನೆ ಪಾಪ ಸಂಪಾದನೆ ಮಾಡದೆ, ನಿದ್ರಾಬಾಣದಿಂದ ಇವರಿಗೆ ನಿದ್ದೆ ಬರಿಸಿ ನಾವು ಹೊರಟು ಹೋಗೋಣ" ಎಂದು ಸಲಹೆಯಿತ್ತಳು. ಅವಳ ಕರುಣೆ ಮತ್ತು ಬುದ್ಧಿವಂತಿಕೆಗಳನ್ನು ಮೆಚ್ಚಿದ ಪ್ರಮಾಥಿಕುಮಾರನು ಅವಳು ಹೇಳಿದಂತೆ ಒಂದು ನಿದ್ರಾಬಾಣವನ್ನು ಬಿಟ್ಟು ಅವರನ್ನು ಸುಪ್ತಸ್ಥಿತಿಗೆ ತಳ್ಳಿದ; ಅವರೆಲ್ಲ ಏಟು ತಿಂದ ನೆಲ್ಲಿಕಾಯಿಗಳಂತೆ ಉರುಳಿದರು.

ತನ್ನ ಕಡೆಯವರೆಲ್ಲ ಅಪಜಯವನ್ನು ಹೊಂದಿದರೆಂಬುದನ್ನು ಕೇಳಿದ ಸುವೇಗನು ಆವೇಶದಿಂದ ನೆಲವನ್ನು ಹೊಡೆದು, ತಾನು ನರಕದೆಡೆಗೆ ಸಾಗುವುದನ್ನು ತೋರಿಸುವಂತೆ ಕಂಪಿಸುವ ಮೈ, ಕೆಂಗಣ್ಣು, ಬೆಚ್ಚಗಾದ ದೇಹ, ಉರಿಯುವ ಎದೆಗಳಿಂದ ಕೂಡಿ ಸಿಟ್ಟುಗೊಂಡ. ಅವನಿಗೆ ಚತುರರಾದ ಪ್ರಧಾನರು ಹೀಗೆಂದು ಹೇಳಿದರು: "ಇಷ್ಟು ಜನಗಳನ್ನು ಕಂಡು ಹೆದರದೆ, ಅವರನ್ನೆಲ್ಲ ಕೊಂದಿಕ್ಕಿದ ಆ ಭಾಸ್ಕರತೇಜನ ವೀರತ್ವವನ್ನೂ ಕಾರ್ಯಕ್ಷಮತ್ವವನ್ನೂ ಯಾರು ಬಣ್ಣಿಸಬಲ್ಲರು? ಅವನಿದಿರು ನಿಂತು ಯುದ್ಧ ಮಾಡುವವರು ಯಾರು? ಹೇರಡವಿಯಲ್ಲಿ ತನ್ನ ಹೆಂಡತಿಯನ್ನು ಒಂಟಿಯಾಗಿ ಕರೆದೊಯ್ಯುತ್ತಿರುವನೆಂದ ಮೇಲೆ ಅವನ ಧೈರ್ಯವನ್ನು ಹೊಗಳಲಾದೀತೆ? ಪರಹೆಣ್ಣಿಗೆ ಆಸೆಪಟ್ಟ ರಾವಣನು ಧೈರ್ಯಗುಂದಿ ನಾಯಿಯ ಹಾಗೆ ಸತ್ತ; ಪರವಧುವೆಂದು ಬಗೆಯದೆ ದ್ರೌಪದಿಗೆ ಮನಸೋತ ಸುಯೋಧನನು ಮಂದರಸಮಾನಧೈರ್ಯಸ್ಥನಾದ ಭೀಮನಿಂದ ಹತನಾದ. ಅನ್ಯರ ಹೆಂಡತಿಗೆ ಮನತೆತ್ತವರಾರು ತಾನೇ ಅಳಿಯುವುದಿಲ್ಲ? ಪರಸ್ತ್ರೀಯ ನೋಟ ಜವನ ಕಾಟ, ಅವಳ ವಿಲಾಸ ಯಮಪಾಶ, ಅವಳ ರೂಪು ಯಮನ ದಾರಿ! ಅದಕ್ಕೆ ಕೈಹಾಕುವವನು ಹುಲಿಯ ಮುಂದೆ ಮಲಗುವ, ಸಿಂಹದ ಮೀಸೆಯನ್ನು ಎಳೆಯುವ, ರಕ್ಕಸಿಯ ಕೆಳೆ ಮಾಡುವ, ಮಸೆದ ಸುರಗಿಯನ್ನು ನುಂಗುವ ಎಗ್ಗನಂತೆಯೇ ಸರಿ. ಸಮ್ಯಕ್ತ್ವವನ್ನೂ ಸುಖವನ್ನೂ ಪುತ್ರಲಾಭವನ್ನೂ ನೀಡುವ ಕುಲಾಂಗನೆಯನೊಲ್ಲದೆ, ದುಃಖ ಕ್ಲೇಶ ಧರ್ಮಕ್ಷಯಗಳನ್ನು ಉಂಟುಮಾಡುವ ಪರಾಂಗನೆಗೆ ಆಸೆಪಡುವುದು ಸರಿಯಲ್ಲ" ಎಂದು ಬುದ್ಧಿವಾದವನ್ನು ನುಡಿದರು.

ಅವರ ಮಾತುಗಳಿಂದ ತನ್ನ ತಪ್ಪನ್ನು ತಿಳಿದು ಸುವೇಗನು ಮನಸ್ಸನ್ನು ಬದಲಿಸಲಿಲ್ಲ. ನಾಯಕರು ಸತ್ತರೆಂಬುದನ್ನು ಕೇಳಿ ಭೀüತಿಯಿಂದ ಹೀಗೆ ತನಗೆ ಬುದ್ಧಿ ಹೇಳುತ್ತಿರುವರೆಂದು ಅವರನ್ನು ಹೀಯಾಳಿಸಿದ; ಅವರ ಪರಾಕ್ರಮ ತನಗೆ ತಿಳಿಯದೇ ಎಂದು ಗೇಲಿ ಮಾಡಿದ. ನಾಯಿಯ ಬಾಲವನ್ನು ಹಿಡಿದು ನದಿಯನ್ನು ದಾಟ ಬಯಸುವ ಗಾವಿಲನ ಹಾಗೆ ತಾನು ಅವರ ಬಲವನ್ನು ನಚ್ಚಿಕೊಂಡು ಚೆಲುವೆಯನ್ನು ಒಲಿಯಲಿಲ್ಲ; ತನ್ನ ಭುಜಬಲವೇ ಸಾಕು ಎಂದ. "ನನ್ನೊಡನೆ ಯುದ್ಧಕ್ಕೆ ಬರಲು ಧೈರ್ಯವಿಲ್ಲದಿದ್ದರೆ ಮಾತನಾಡದೆ ಇಲ್ಲಿಯೇ ಬಿದ್ದಿರಿ; ಸುಮ್ಮನೆ ಕಾಳು ಧರ್ಮಶ್ರವಣ ನನಗೆ ಬೇಕಿಲ್ಲ" ಎಂದು ನುಡಿದ. ಸುವೇಗನ ಮನದ ತೀವ್ರತೆಯನ್ನು ಕಂಡು ಅವರೆಲ್ಲ, ದಿನಪತಿಗೆ ಶಾಖ, ಚಂದ್ರನಿಗೆ ತಂಪು, ಸಮುದ್ರಕ್ಕೆ ಉಪ್ಪುನೀರು, ಹೆಣ್ಣಿಗೆ ಮಾಯಾವೃತ್ತಿ, ಹಾವಿಗೆ ವಿಷ ಹೇಗೆ ಸಹಜವೋ ಹಾಗೆ ನಯಹೀನರಿಗೆ ದುರ್ಮತಿ, ತಿರುಳಿಲ್ಲದ ಮಾತು, ಮುನಿಸು, ಚಿಂತೆಗಳು ಸಹಜವಾದವು ಎಂದುಕೊಂಡರು. ನರಕದಲ್ಲಿ ಬೀಳಬೇಕೆಂದು ಆಶಿಸಿದವನಿಗೆ ಪರಸ್ತ್ರೀವ್ಯಾಮೋಹ ಹೋಗದು; 'ದುರಾಗ್ರಹಸ್ಯ ಹಿತೋಪದೇಶೋಬಧಿರಸ್ಯಾಗ್ರತೋ ಗಾನಮಿವ' ಎಂಬ ನೀತಿವಾಕ್ಯವೇ

ಇದೆಯಲ್ಲ; ಹಾಗಾಗಿ ಏನು ಹೇಳಿದರೂ ಇವನು ಕಿವಿಗೊಡುವುದಿಲ್ಲ; ಆದ್ದರಿಂದ ತಾವು ಮಾತನಾಡದಿರುವುದೇ ಲೇಸು ಎಂದು ಅವರೆಲ್ಲ ತೀರ್ಮಾನಿಸಿದರು.

ಸುವೇಗ ವೇಗದಿಂದ ಯುದ್ಧಕ್ಕೆ ನಡೆದ; ತನ್ನ ಚಾಪ ಪರಿಶ್ರಮವನ್ನು ತೋರಿಸುವೆನೆಂದು ಪ್ರಮಾಥಿಕುಮಾರನ ಮೇಲೆ ಶರಸಂಕುಲವನ್ನೇ ಸುರಿಸಿದ. ಅದಕ್ಕೆ ಹೆದರದ ಕುಮಾರನು ಅವನ್ನೆಲ್ಲ ಖಂಡಿಸಿ ಶತ್ರುಸೈನ್ಯವನ್ನು ತಲ್ಲಣಗೊಳಿಸಿದ. ಇವನು ಬಾಣ ಪ್ರಯೋಗಿಸುವುದಕ್ಕೆ, ಅವನು ಅವನ್ನೆಲ್ಲ ತುಂಡರಿಸುವುದಕ್ಕೆ! ಇದರಿಂದಾಗಿ ರಾಜನ ರಥವು ಬಾಣಗಳಿಂದ ತುಂಬಿ ಹೋಗಿ ಬಿದಿರ ಮೆಳೆಯನ್ನು ಹೋಲುತ್ತಿತ್ತು. ಆದರೆ ಪ್ರಮಾಥಿಯು ಅವುಗಳನ್ನೆಲ್ಲ ಒಂದೇ ಬಾಣದಿಂದ ತತ್ತರ ತರಿದ. ಮಹಾ ಕೋಪದಿಂದ ಸುವೇಗನು ಶರಾವಳಿಯನ್ನು ಪ್ರಯೋಗಿಸಿದಾಗ ಅವು ಮರಿದುಂಬಿಗಳಂತೆ ಒಟ್ಟಿಗೇ ಹಾರಿ ಬಂದವು. ಅವನ್ನೆಲ್ಲ ಸೌಂದರರೂಪನು ತಡೆದಾಗ ಅವುಗಳೆಲ್ಲ ಸೇರಿ ನವಿಲುಗರಿಯಂತೆ ಕಾಣಿಸಿತು. ಸುವೇಗನು ಪ್ರಯೋಗಿಸಿದ ಬಾಣತತಿಗಳನ್ನು ಮಾರ್ಗಮಧ್ಯೆಯೇ ತುಂಡರಿಸಲು ಆ ಚೂರುಗಳೆಲ್ಲ ನೆಲದಲ್ಲಿ ಬಿದ್ದು ನೆಲವು ಬಾಣಗಳ ಸಾಗರದಂತೆ ಕಾಣಿಸಿತು. ಉಕ್ಕು ಉಕ್ಕನ್ನು ತಾಗುವಂತೆ ಇಬ್ಬರೂ ಕಾದುತ್ತಿರಲು ಕೊನೆಯಲ್ಲಿ ಪ್ರಮಾಥಿಕುಮಾರನ ಕೈಯಲ್ಲಿ ಎರಡೇ ಬಾಣಗಳು ಉಳಿದವು. ಅದನ್ನು ಕಂಡು ಚಂದ್ರಲೇಖೆಯು ಗಾಬರಿಗೊಂಡಳು; ಹಲ್ಲಿಲ್ಲದ ಹುಲಿಯೂ, ನಖವಿಲ್ಲದ ಸಿಂಹವೂ ಎಷ್ಟು ಬಲಿಷ್ಠವಾದರೆ ತಾನೇ ಏನು ಮಾಡಬಲ್ಲುದು ಎಂದುಕೊಂಡಳು. ಬಲ್ಲಿದನಾದರೂ ತನ್ನ ನಲ್ಲನ ಬಳಿ ಆಯುಧಗಳಿಲ್ಲದೆ ಏನು ತಾನೇ ಮಾಡಬಲ್ಲ; ಸಾವೇ ನಿಶ್ಚಯ ಎಂದು ಚಿಂತೆಯನ್ನು ಹೊದ್ದಳು. ಪತಿಯನ್ನು ಕಳೆದುಕೊಂಡು, ಪರತ್ರೆಗೆಟ್ಟು, ಕುಲವನ್ನು ಕೆಡಿಸಿಕೊಂಡು, ನಾಯಿಯ ಹಾಗೆ ದುರ್ಮತಿ ದುರ್ಜನ ದುರಾಚರಿತರಾದ ನಿರ್ಧರ್ಮರೊಡನೆ ಕೂಡಿ ಪಾತಿವ್ರತ್ಯವನ್ನು ಕಳೆದುಕೊಳ್ಳು ವುದಕ್ಕಿಂತ ಸಾವೇ ಮೇಲು ಎಂದುಕೊಂಡಳು. ನರಕದಲ್ಲಿ ಬಿದ್ದು ಒದ್ದಾಡಲಾರೆ; ನರಿ, ನಾಯಿ, ಬೆಕ್ಕು, ಓತಿ ಮುಂತಾದ ಜನ್ಮಗಳನ್ನು ಪಡೆದು ಸುತ್ತಲಾರೆ ಎಂದುಕೊಂಡು ತಾನು ಕೇಳಿದ್ದ ಮಹಾ ಪತಿವ್ರತೆಯರ ಕತೆಗಳನ್ನು ನೆನೆಸಿಕೊಂಡಳು. ತನ್ನ ಪತಿವ್ರತಾಗುಣಕ್ಕೂ ದರ್ಶನಕ್ಕೂ ಹಾನಿಯಾಗದಂತೆ ಪ್ರಮಾಥಿಕುಮಾರನಿ ಗಿಂತಲೂ ಮುಂಚೆಯೇ ಸಾಯಲು ಅವಳು ನಿರ್ಧರಿಸಿದಳು.

ದೇಹಮೋಹವನ್ನು ತೊರೆದು ಧರ್ಮಧ್ಯಾನದಿಂದ ಪಂಚಪರಮೇಷ್ಠಿಗಳನ್ನು ತನ್ನ ಹೃದಯಕಮಲದಲ್ಲಿ ತಾಳಿಕೊಂಡು ಪಂಚನಮಸ್ಕಾರಗಳನ್ನು ನೆನೆಯುತ್ತ ಅವಳು ರಥದಿಂದ ಹೊರಬಿದ್ದಳು; ವೇಗವಾಗಿ ಬರುವ ಬಾಣಗಳಿಗೆದುರಾಗಿ ನಿಂತಳು. ಅವಳ ಸರ್ವಾಂಗದಲ್ಲಿ ಸುವೇಗನ ದೃಷ್ಟಿ ನಾಟಿತು; ಮತಿಭ್ರಮೆಗೊಂಡು ಪರವಶನಾಗಿ ಕಾಳಗಮಧ್ಯದಲ್ಲಿ ಕೂವೆಕಂಬದ ಹಾಗೆ ಅವನು ನಿಂತುಬಿಟ್ಟ. ಇದೇ ಕ್ಷಣದಲ್ಲಿ ಪ್ರಮಾಥಿಕುಮಾರನು ಒಂದು ಹರಿತವಾದ ಬಾಣವನ್ನು ಅವನೆಡೆಗೆ ತೆಗೆದು ಬಿಟ್ಟ. ತಲೆ ಹರಿದು ಸುವೇಗನು ನೆಲದಲ್ಲಿ ಧೊಪ್ಪೆಂದು ಬಿದ್ದ. ಪರವನಿತೆಗೆ ಮನಸೋತ ಫಲದಿಂದ ಮಲಿನಮನನಾದ ಅವನು ಜವನ ದಾಡೆಗೊಳಗಾದ. ಕಾಳಗದಲ್ಲಿದ್ದರೂ ಬಾಲೆಗೆ ಸೋತು ಅತ್ತ ಇತ್ತ ಮಿಡುಕದೆ ನಿಂತಾಗ, ಶ್ರೇಷ್ಠ ಶೂರನು ಅವನನ್ನು ಇರಿದನು ಎಂದ ಮೇಲೆ ಅನ್ಯರ ಹೆಂಡತಿಗೆ ಸೋತವನಿಗೆ ಬುದ್ಧಿ ಇರುವುದೇ? ಪರಸ್ತ್ರೀಗೆ ಅಳುಪುವವನಿಗೆ ಗತಿಯುಂಟೇ, ದಯೆಯುಂಟೇ, ಮತಿಯುಂಟೇ, ಸುಗತಿಯುಂಟೇ, ಧೃತಿಯುಂಟೇ? ಈ ರೀತಿ ಪ್ರಮಾಥಿಕುಮಾರನ ಬಾಣದಿಂದ ಮಿಡಮಿಡಮಿಡುಕಿ ಸುವೇಗನು ನರಕದಲ್ಲಿ ಹುಟ್ಟಿದ. ಸಮ್ಯಕ್ತ್ವಚೂಡಾಮಣಿಯು ಶತ್ರುವನ್ನು ಗೆದ್ದು ಹಿಂದೆ ನಿದ್ರಾಬಾಣ ಕ್ಕೊಳಗಾಗಿದ್ದವರ ನಿದ್ದೆಯನ್ನು ಉಪಸಂಹಾರ ಮಾಡಿ ಅವರನ್ನೆಲ್ಲ ಅವರವರ ಮನೆಗಳಿಗೆ ಕಳಿಸಿದ. ಆನಂತರ ನಿರುಮ್ಮಳನಾಗಿ ತನ್ನ ಮನಃಪ್ರಿಯೆಯೊಡನೆ ಕೌಶಾಂಬಿಗೆ ಬಂದ.

ಪ್ರಮಾಥಿಕುಮಾರನು ಬರುತ್ತಿರುವನೆಂಬುದನ್ನು ಅರಿತ ದಂತಿಬಲ ಮಹಾರಾಜನು ಪುರವನ್ನು ಅಲಂಕರಿಸಿ, ಗುಡಿ ತೋರಣಗಳನ್ನು ಕಟ್ಟಿಸಿ ಸಮಸ್ತ ಬಲದೊಡನೆ ಪ್ರೀತಿಯಿಂದ ಅವನನ್ನು ಇದಿರುಗೊಂಡ. ಕುಮಾರನು ಚಂದ್ರಲೇಖೆಯೊಡನೆ ಮಹಾರಾಜನಿಗೆ ನಮಿಸಿದ. ಅದಕ್ಕೆ ದಂತಿಬಲನು, "ಜಿನಭಕ್ತನಾಗು; ಜಿನಧರ್ಮಕ್ಕೆ ಒಳ್ಳೆಯದನ್ನು ಮಾಡು; ಜೈನಶಾಸ£

ವರದೀಪಕನಾಗು; ಜಿನಸೇವೆಯಲ್ಲಿ ದೃಢನಾಗು; ರಾಜ್ಯಕ್ಕೆ ಒಡೆಯನಾಗಿ ಭವ್ಯಜನಾವಳಿಯನ್ನು ಕೂಡಿ ಸಜ್ಜನನುತನಾಗಿ ಅವನಿಯನ್ನು ಪಾಲಿಸು" ಎಂದು ಹರಸಿದ. ಅವನನ್ನು ಅಪ್ಪಿಕೊಂಡು ಅರಮನೆಗೆ ಕರೆತಂದು ಜಿನಾಭಿಷೇಕ ಪೂಜೆಗಳನ್ನು ಮಾಡಿ ಸಂತೋಷದಿಂದಿದ್ದ.

ಕೆಲವು ದಿನಗಳ ನಂತರ ಮಹಾರಾಜನು ತನ್ನ ಮಗನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ಜಿನೇಂದ್ರಪಾದಸೇವೆಯಲ್ಲಿ ಲೀನನಾಗಿದ್ದ. ಇತ್ತ ಪ್ರಮಾಥಿಕುಮಾರನು ಅಧೀನ ರಾಜರು ತನ್ನ ಆಜ್ಞೆಯನ್ನು ಪಾಲಿಸುವಂತೆ, ಭೃತ್ಯರು ಗೌರವದಿಂದ ಸೇವಿಸುವಂತೆ, ಇತರ ರಾಜರುಗಳು ತನಗೆ ನರಿಯಂತೆ ಹೆದರಿ ಕಪ್ಪಕಾಣಿಕೆಗಳನ್ನು ಸಲ್ಲಿಸುವಂತೆ, ಭವ್ಯಜನರು ಸುಖವಾಗಿದ್ದು ಸದ್ಧರ್ಮವು ಬೆಳಗುವಂತೆ ಧರೆಯನ್ನು ಪರಿಪಾಲಿಸುತ್ತಿದ್ದ. ಈ ಬಗೆಯಲ್ಲಿ ಆಡಳಿತ ನಡೆಸುತ್ತ, ಸೌಂದರ ಮಹಾದೇವಿ ಮತ್ತು ಚಂದ್ರಲೇಖೆಯೇ ಮುಂತಾದ ಅನೇಕ ಅರಸಿಯರಲ್ಲಿ ಕೂಡಿ ಸುಖಸಂಕಥಾ ವಿನೋದದಿಂದ ರಾಜ್ಯಭಾರ ಮಾಡುತ್ತಿದ್ದ.

ಒಮ್ಮೆ ಆ ಪುರಕ್ಕೆ ಧರ್ಮಘೋಷ ಭಟ್ಟಾರಕರೆಂಬ ರಾಜರ್ಷಿಗಳು ಬಂದರು. ಋಷಿನಿವೇದಕನು ಅವರ ಬರವನ್ನು ಅರಸನಿಗೆ ನಿವೇದಿಸಿದಾಗ ಅವನಿಗೆ ಉಚಿತ ಗೌರವವನ್ನು ಸಲ್ಲಿಸಿ, ಋಷಿಗಳನ್ನು ಕಂಡು ಪೂಜಿಸಲು ರಾಜನು ಪರಮ ಭಕ್ತಿಯಿಂದ ರಾಜಕುಮಾರರೊಡನೆ ದೇವೇಂದ್ರನಂತೆ ಹೊರಟ. ಜಿನಮುನೀಂದ್ರರಿಗೆ ನಮಿಸಿ ಭಕ್ತಿಯಿಂದ ಕೈಮುಗಿದು ಕೆಲ ಕಾಲ ಧರ್ಮಶ್ರವಣ ಮಾಡಿದ. ಅವನಿಗೆ ಪರಾಂಗನೆಗೆ ಅಳುಪಿದ ಸುವೇಗನ ನೆನಪುಂಟಾಯಿತು. ಧರ್ಮಘೋಷಣ ಭಟ್ಟಾರಕರು ಅವಧಿಜ್ಞಾನಿಗಳಾದ್ದರಿಂದ ಅವನ ಮನಸ್ಸಿನಲ್ಲಿನ ಆಲೋಚನೆಯನ್ನು ಅರಿತರು. "ನಿನ್ನ ಹೆಂಡತಿಗೆ ಮನಸೋತ ಸುವೇಗನನ್ನು ನೀನು ನೆನೆಯುತ್ತಿರುವೆ, ಅಲ್ಲವೇ? ಅವನೀಗ ಪರಾಂಗನೆಗೆ ಸೋತ ಕಾರಣದಿಂದ ನರಕವನ್ನು ಸೇರಿ ವೇದನೆಯಿಂದ ನವೆಯುತ್ತಿದ್ದಾನೆ" ಎಂದು ಹೇಳಿದರು. ಸ್ತ್ರೀಸುಖವನ್ನು ಹೆಚ್ಚು ಎಂದು ಭಾವಿಸಿ ಬೆಳ್ತನದಿಂದ ಸಂಸಾರಿಗಳು ಅನ್ಯರ ನಾರಿಯನ್ನು ಮೋಹಿಸಿ ನರಕಕ್ಕೆ ಜಾರುತ್ತಾರಲ್ಲ; ಇದು ತೌಡು ತಿಂದು ಪಾಯಸವುಂಡೆನೆಂದು ತಿಳಿದಂತೆ, ಹಣ್ಣೆಂದು ಎಲೆಯನ್ನು ತಿಂದಂತೆ, ಬೇರನ್ನು ಮೆದ್ದು ಕಬ್ಬನ್ನು ಮೆದ್ದಂತೆ ಸಂಸಾರಸುಖವನ್ನು ದೊಡ್ಡದೆಂದು ಭಾವಿಸಿ ಮಹಾದುಃಖಕ್ಕೊಳಗಾಗುವರಲ್ಲ, ಅಕ್ಕಟಾ ಎಂದು ತನ್ನಲ್ಲೇ ಚಿಂತಿಸಿದ. ಆನಂತರ ಮುನಿಕುಂಜರನಿಗೆ ಪುನರ್ನಸ್ಕಾರವನ್ನು ಮಾಡಿ ತನ್ನರಮನೆಗೆ ವಾಪಸ್ಸು ಬಂದ.

ಮುಂದೆ ಪ್ರಮಾಥಿಕುಮಾರನು ಪರಸ್ತ್ರೀ ಎಂದರೆ ಹುಲಿ, ಸೊಕ್ಕಿದ ಆನೆ, ವಿಷದ ಹಾವು ಎಂದು ಭಾವಿಸುತ್ತ ಪರಾಂಗನೆಯನ್ನು ತಾಯ ಸಮಾನವೆಂದು ಗೌರವಿಸಿದ. ಪರವನಿತೆಯ ತೆಳ್ವಸಿರನ್ನು ಹೆತ್ತ ಬಸಿರಂತೆಯೂ, ಮೊಲೆಗಳನ್ನು ತಾನುಂಡ ತಾಯ ಮೊಲೆಯಂತೆಯೂ ಸುಕವಿನಿಕರಪಿಕಮಾಕಂದನು ತಿಳಿದ, ಅನ್ಯಸ್ತ್ರೀಯರ ನಿಡಿದೋಳುಗಳನ್ನು ತನ್ನನ್ನು ಎತ್ತಿ ಆಡಿಸಿದ ತೋಳುಗಳೆಂದು ತಿಳಿದ. ಹೀಗೆ ಪರನಾರೀನಂದನನೂ ಜಿನಪಾದಪದ್ಮಷಟ್ಪದನೂ ಸದ್ಧರ್ಮವಿನೋದನೂ ಭವ್ಯಸರೋಜಿನೀರಾಜಹಂಸನೂ ಆಗಿ ಹಲವು ಕಾಲ ರಾಜ್ಯಭಾರ ಮಾಡಿದ. ಒಂದು ದಿನ ಕನ್ನಡಿಯಲ್ಲಿ ಗಂಟಲನ್ನು ಒತ್ತಿ ಹಿಡಿದ ಉಗುರಿನಂತೆ, ತನ್ನ ಕಿವಿಯಲ್ಲಿ ಪಿಸುಗುಟ್ಟುವ ಯಮದೂತನಂತೆ ಭಯಂಕರವಾದ ನರೆಗೂದಲು ಅವನಿಗೆ ಕಾಣಿಸಿತು. ಎಷ್ಟೆಷ್ಟು ಸಿರಿಯಲ್ಲಿದ್ದರೂ ಅಷ್ಟಷ್ಟೂ ಮನಸ್ಸು ಅದರಲ್ಲಿ ಮೋಹಗೊಳ್ಳುತ್ತದೆ, ಆದ್ದರಿಂದ ಮನಸ್ಸು ಹೇಳಿದಂತೆ ನಡೆಯುವ ಮನುಜನೇ ಗಾಂಪ; ತನಗೆ ಮರಣವೇ ಇಲ್ಲ ಎಂಬಂತೆ ಹಣವನ್ನು ಸಂಪಾದಿಸುವುದನ್ನು ಯಾರು ತಪ್ಪಿಸಬಲ್ಲರು; ಕಳ್ಳರು ಬಂದು ಗಂಟಲನ್ನು ಒತ್ತಿ ಹಿಡಿದರೆ ಹೆದರಿ ಅವರು ಕೇಳಿದಷ್ಟು ಹಣವನ್ನು ಕೊಡುವರು, ಆದರೆ ಧರ್ಮಕಾರ್ಯಕ್ಕೆಂದರೆ ಒಂದು ಅಡಕೆಯನ್ನೂ ನೀಡರು; ಸಾವು ಸಮನಿಸಿದರೂ ಸಿರಿಯ ಬಗ್ಗೆ ಚಿಂತಿಸುತ್ತ, ಹೆಂಡಿರು ಮಕ್ಕಳನ್ನು ನೆನೆಯುವರಲ್ಲದೆ ಜನರು ಸದ್ಧರ್ಮವನ್ನು ಕುರಿತು ಚಿಂತಿಸರಲ್ಲ ಎಂದು ಜೀವದ ಹೀನಸ್ವಭಾವವನ್ನು ಕುರಿತು ಅವನ ಆಲೋಚನೆಗಳು ಸಾಗಿದವು. ಅದರಿಂದ ವೈರಾಗ್ಯಪರನಾಗಿ ತನ್ನ ಹಿರಿಯ ಮಗನಾದ ವಿಮಲಕೀರ್ತಿಗೆ ಪಟ್ಟ ಕಟ್ಟಿ

ರಾಜ್ಯವನ್ನು ತೊರೆದು ತಪಸ್ಸು ಮಾಡಿ ಸಮಾಧಿಮರಣದಿಂದ ಮುಡಿಪಿ ದೇವಗತಿಯನ್ನು ಪಡೆದು ಆರಣವೆಂಬ ಹದಿನೈದನೆಯ ಸ್ವರ್ಗದಲ್ಲಿ ಇಪ್ಪತ್ತೆರಡು ಸಾಗರ ಪರ್ಯಂತ ಅಯುಷ್ಯವನ್ನು ಪಡೆದು ಕೀರ್ತಿಧರನೆಂಬ ಮಹರ್ಧಿಕ ದೇವನಾಗಿ ಹುಟ್ಟಿದ. "ಹೀಗೆ ಪರವನಿತೆಗೆ ಸೋಲದೆ ಜಿನೇಂದ್ರಪದವನ್ನು ನೆನೆಯುವ ಮಹಾತ್ಮನು ನಿರ್ವೃತಿಯನ್ನು ಹೊಂದುತ್ತಾನೆ" ಎಂದು ಸ್ವದಾರ ಸಂತುಷ್ಟತೆಯಿಂದ ದೇವಗತಿಯನ್ನು ಪಡೆದ ಪ್ರಮಾಥಿಕುಮಾರನ ಹಾಗೂ ಪರಸ್ತ್ರೀರತಿಯಿಂದ ನರಕಕ್ಕೆ ಸಂದ ಸುವೇಗನ ಕತೆಯನ್ನು ಗಣಧರರು ಮುಗಿಸಿದರು. ಅದನ್ನು ಕೇಳಿದ ಮೇರುಸಮಾನಧೈರ್ಯನೂ ಜೈನಯೋಗೀಶ್ವರದಾಸನೂ ಗುಣಗಣನಿಲಯನೂ ಸುಕವಿನಿಕರಪಿಕಮಾಕಂದನೂ ಆದ ಶ್ರೇಣಿಕ ಮಹಾರಾಜನು ಧನ್ಯತೆಯನ್ನು ಅನುಭವಿಸಿದ.

ಅಪರಿಗ್ರಹ

ಹೀಗೆ ಬ್ರಹ್ಮಚರ್ಯವ್ರತದ ಮಹಿಮೆಯನ್ನು ಹೇಳುವ ಕತೆಯನ್ನು ಕೇಳಿದ ಮೇಲೆ ಶ್ರೇಣಿಕ ಮಹಾರಾಜನು ಕೈಮುಗಿದು ತನಗೆ ಅಪರಿಗ್ರಹದ ಕತೆಯನ್ನು ಹೇಳಬೇಕೆಂದು ವಿನಮ್ರನಾಗಿ ಗಣಧರರನ್ನು ಕೇಳಿಕೊಂಡ. ಅವನ ಆಸಕ್ತಿ ವಿನಯಗಳನ್ನು ಕಂಡು ಮುನೀಂದ್ರರು ಕತೆಯನ್ನು ಹೇಳಲು ತೊಡಗಿದರು. ಫಲವಿಲ್ಲದೆ ಹೂವನ್ನು ತೋರುವ ಸಂಪಗೆಯಂತೆ ಬರೀ ಮಾತನ್ನು ಆಡಿ ಹೊರಟು ಹೋಗದೆ; ಚಿಗುರನ್ನು ಪಡೆದು ಹೋಗುವ ಅಶೋಕೆಯಂತೆ ಸಿರಿಯನ್ನು ಮಾತ್ರ ತೋರಿ ಹೋಗದೆ; ಹರಹನ್ನು ಪಡೆದ ಆಲದ ಮರದಂತೆ ಕೇವಲ ಬಳಸು ದಾರಿಯನ್ನು ಹಿಡಿಯದೆ; ಬಲವನ್ನು ಮಾತ್ರ ತೋರಿ ಹೋಗುವ ಹಡಗಿನಂತೆ ಬರೀ ಮಹಿಮೆಯನ್ನು ತೋರಿ ಹೋಗದೆ; ನಾರನ್ನು ತೋರಿ ಹೋಗುವ ಸೆಣಬಿನಂತೆ ತನ್ನನ್ನೇ ಮರೆತು ಹೋಗದೆ; ಮಾವಿನಂತೆ ಎಲ್ಲದರಲ್ಲೂ ಸೇರಿ, ಹುಣಿಸೆಯಂತೆ ಹಲವರಲ್ಲಿ ಮಾತ್ರ ಒಂದಾಗಿ, ಉಪ್ಪಿನಂತೆ ಸದ್ದೃಷ್ಟಿಗಳ ಕೂಟದಲ್ಲಿ ರುಚಿ ಪಡೆದು; ದೀಪದ ಬತ್ತಿಯಂತೆ ಪಂಚಪರಮೇಷ್ಠಿಗಳಿಗೆ ವಂದಿಸಿ; ಸೊಡರಿನಂತೆ ಚಾತುರ್ವರ್ಣದವರಲ್ಲಿಯೂ ಸ್ನೇಹದಿಂದ ಕೂಡಿ; ಹೊಲಿದ ಚೀಲದಲ್ಲಿ ಹೊನ್ನನ್ನಿಡುವಂತೆ, ಬೆಂಕಿಯಿರುವ ಒಲೆಯಲ್ಲಿ ಅಡುಗೆ ಮಾಡುವಂತೆ, ಅಲಂಕರಿಸಿದ ಆನೆಯ ಮೇಲೆ ಕುಳಿತುಕೊಳ್ಳುವಂತೆ; ಮಡಿಯಾದ ಬಟ್ಟೆಯನ್ನು ಉಡುವಂತೆ, ಮದುವೆಯಾದವಳನ್ನು ಮನೆಗೆ ಕರೆತರುವಂತೆ, ರಾಶಿ ಹಾಕಿದ ಧಾನ್ಯವನ್ನು ಅಳೆಯುವಂತೆ; ಸಿದ್ಧ ಮಾಡಿದ ಆಭರಣವನ್ನು ತೊಡುವಂತೆ, ತಂದೆ ತೋರಿಸಿದ ನಿಧಿಯನ್ನು ಅಗೆದು ತೆಗೆಯುವಂತೆ; ಸಮ್ಯಕ್ತ್ವದಿಂದ ಕೂಡಿ, ಪಂಚಾಣುವ್ರತಗಳನ್ನು ಅನುಸರಿಸುತ್ತ; ಕೋಡಗವು ತಾಂಬೂಲವನ್ನು ಮೆಲ್ಲುವಂತೆಯೂ, ಮರುಳು ಬಟ್ಟೆಯನ್ನು ತೊಡುವಂತೆಯೂ, ಕಾಗೆ ಕೂಳನ್ನು ತಿನ್ನುವಂತೆಯೂ, ಕುರುಡಿಯು ಜೋಳವನ್ನು ಕುಟ್ಟುವಂತೆಯೂ, ಹಸುಗೂಸು ಹಾಲನ್ನು ಕುಡಿಯುವಂತೆಯೂ, ಹಲ್ಲಿಲ್ಲದ ಎಮ್ಮೆ ಹುಲ್ಲು ಮೇಯುವಂತೆಯೂ, ಮುದುಕನು ಮುಲುಗುಟ್ಟು ವಂತೆಯೂ, ಜ್ವರ ಬಂದವನು ಊಟ ಮಾಡಿದಂತೆಯೂ, ಮೋಟನು ನೀರು ಕುಡಿಯುವಂತೆಯೂ ಹಂಚುಹರಿ ಮಾಡಿ ಕೆಡಿಸದೆ ಚೆನ್ನಾಗಿ ನಡೆಸಿ; ವ್ಯವಹಾರಕ್ಕೆ ಹೋದವನು ಅಲ್ಲಿ ಕಷ್ಟವನ್ನು ಸೈರಿಸಿ ಲಾಭವನ್ನು ಪಡೆದು ಮನೆಗೆ ಹಿಂದಿರುಗುವಂತೆ; ಷಟ್ಖಂಡಗಳನ್ನು ಗೆದ್ದ ಚಕ್ರವರ್ತಿಯು ಜಯಶೀಲನಾಗಿ ರಾಜಧಾನಿಯನ್ನು ಪ್ರವೇಶಿಸುವಂತೆ; ಹೊಲವನ್ನು ಕಾದು ಕಷ್ಟ ಪಟ್ಟ ಒಕ್ಕಲಿಗನು ಕಾಳುಕಡಿಗಳನ್ನು ಹೊತ್ತು ಮನೆಗೆ ಬರುವಂತೆ; ಹಲವು ಕಾಲ ನಿಧಿಗಾಗಿ ಶ್ರಮಪಟ್ಟವನು ನಿಧಿಯೊಡಗೂಡಿ ಮನೆ ಸೇರುವಂತೆ; ಮಾವನಿಗೆ ಸೇವೆಗೈದು ಅವನ ಮಗಳನ್ನು ಮದುವೆಯಾಗಿ ಸುಖವಾಗಿರುವ ಅಳಿಯನಂತೆ; ಸಿರಿಯುಳ್ಳ ತಂದೆಗೆ ವಿರುದ್ಧನಾಗದೆ ಅವನು ಹೇಳಿದಂತೆ ಕೇಳಿ ಆಸ್ತಿಗೆ ಒಡೆಯನಾಗುವಂತೆ; ಕೊನೆಯಲ್ಲಿ ದೇವೇಂದ್ರ ಚಕ್ರವರ್ತಿಗಳ ಪದವಿಯನ್ನು ಪಡೆದು ಕಾಲಕ್ರಮೇಣ ಮೋಕ್ಷಲಕ್ಷ್ಮಿಯಲ್ಲಿ ಸೇರಿ ಸುಖವಾಗಿರಬೇಕು. ಪರಿಗ್ರಹದ ತೊಂದರೆಯು ಎಷ್ಟೋ ಅಷ್ಟು ಮನಸ್ಸಿಗೆ ದುಃಖ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಪರಿಗ್ರಹವನ್ನು ತೊರೆಯುವವನೇ ದೇವನಾಗುತ್ತಾನೆ, ಅವನೇ ಮುಕ್ತಿಗೆ ಒಡೆಯನಾಗುತ್ತಾನೆ.

ಹೀಗೆ ಪೀಠಿಕೆ ಹಾಕಿದ ಗಣಧರರು ಅಪರಿಗ್ರಹದ ಮಹಿಮೆಯನ್ನು ನಿರೂಪಿಸುವ ಕತೆಯನ್ನು ಮುಂದಿನಂತೆ ಹೇಳಿದರು: ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಕುರುಜಾಂಗಣ ಎಂಬುದು ನಾಡು; ಶ್ರಾವಂತಿ ಎಂಬುದು ಅದರ ರಾಜಧಾನಿ; ಅದನ್ನಾಳುವವನು ಉಪರಿಚರ ಎಂಬ ಹೆಸರಿನ ಮಹಾರಾಜ. ಅವನ ಪಟ್ಟದರಸಿಯರು ನಾಲ್ವರು: ಪದ್ಮಾವತಿ, ಪ್ರಭಾವತಿ, ಸುಪ್ರಭೆ ಮತ್ತು ಕನಕಪ್ರಭೆ ಎಂಬುವವರು. ಇವರನ್ನೊಳಗೊಂಡಂತೆ ರಾಜನಿಗೆ ಐನೂರು ಮಂದಿ ರಾಣಿಯರು. ಸುಂದರಿಯೂ, ಸಮ್ಯಕ್ತ್ವನಿಲಯೆಯೂ, ಸೀತೆಯಂತೆ ಪತಿವ್ರತಾಧರ್ಮಿಯೂ ಆದ ಪದ್ಮಾವತಿಯ ಮಗನೇ ಅನಂತವೀರ್ಯ. ರಾಜನಿಗೆ ಅವನೂ ಸೇರಿದಂತೆ ಒಟ್ಟು ಐನೂರು ಮಂದಿ ಕುಮಾರರು. ಇವರು ಮತ್ತಿತರ ಮಕುಟಬದ್ಧರು ವಿಲಾಸಿನೀಜನರ

ಜೊತೆಗೂಡಿ ರಾಜನು ದೇವೇಂದ್ರನಂತೆ ಓಲಗಗೊಟ್ಟು ರಸವತ್ತಾದ ಗೀತೆಗಳನ್ನೂ, ಪರ ಮಾಂಡಲಿಕರು ಹಾಗೂ ಪೆರ್ಗಡೆಗಳ ಮಾತುಗಳನ್ನೂ ಕೇಳುತ್ತ, ಕುಮಾರರು ವಿಲಾಸಿನೀಜನ ಮತ್ತು ಅರಸಿಯರ ರೂಪುಗಳನ್ನು ನೋಡುತ್ತ ಮಹಾ ವಿನೋದದಿಂದ ಉಪರಿಚರ ಮಹಾರಾಜನು ರಾಜ್ಯಭಾರ ಮಾಡುತ್ತಿದ್ದ.

ಒಮ್ಮೆ ವನಪಾಲಕನು ಬಂದು ಒಡ್ಡೋಲಗದಲ್ಲಿದ್ದ ಮಹಾರಾಜನಿಗೆ ಸುರಗಿ ಸಂಪಗೆ ಸುರಹೊನ್ನೆ ಜಾಜಿ ಪಾದರಿ ಮುಂತಾದ ಪರಿಮಳಭರಿತ ಹೂಗಳನ್ನೂ; ಮೊಗ್ಗು ಮತ್ತು ಹೂಗಳಿಂದ ಚೆಲುವಾಗಿ ಕಟ್ಟಿದ ಹಾರಗಳನ್ನೂ; ಮಾವಿನ ಚಿಗುರಿನ ತೊಂಗಲುಗಳನ್ನೂ ಮತ್ತು ಎಳೆಗಾಯಿಗಳ ಗೊಂಚಲುಗಳನ್ನೂ ತಂದು ಅರ್ಪಿಸಿ, ನಮಸ್ಕರಿಸಿ ದೂರದಲ್ಲಿ ಕೈಮುಗಿದು ನಿಂತುಕೊಂಡ. ವಸಂತನ ಆಗಮನದಿಂದ ವನದೇವಿಯು ಯೌವನವನ್ನು ಪಡೆದ ಕಾಡು ಸುಂದರವಾಗಿರುವುದನ್ನು ನಿವೇದಿಸಿದ. ಅರಸನು ಅವನಿಗೆ ಉಚಿತವಾದ ಮೆಚ್ಚು ಕೊಟ್ಟು, ಮಾರನೆಯ ದಿನ ಸಕಲರ ಜೊತೆ ವನಕ್ರೀಡೆಗೆ ಬರುವುದಾಯೂ, ವನವನ್ನು ಲೇಸು ಮಾಡಬೇಕೆಂದೂ ಆದೇಶಿಸಿ ಅವನನ್ನು ಕಳಿಸಿಕೊಟ್ಟ. ವನಪಾಲಕನು ತಂದಿತ್ತ ಹೂ ಕಾಯಿಗಳನ್ನು ಹಿರಿಕಿರಿಯ ಅರಸಿಯರಿಗೂ ಮಕ್ಕಳಿಗೂ ಹಂಚಿದ.

ಮರುದಿವಸ ವನಕ್ರೀಡೆಗೆಂದು ರಾಜಪರಿವಾರ ಹೊರಟಿತು. ಸಮುದ್ರದ ಘೋಷದಂತೆ ತೂರ್ಯರವ ಉಣ್ಮುತ್ತಿತ್ತು; ರಾಜಕುಮಾರರು ಮದಗಜಗಳನ್ನೇರಿ ಕಾಮರುಗಳಂತೆ ಬರುತ್ತಿದ್ದರು; ಮನೋಹರಿಯರಾದ ಗಣಿಕಾಜನ ಮಹಾರಾಜನಿಗೆ ಚಾಮರವಿಕ್ಕುತ್ತಿತ್ತು. ಹೀಗೆ ಪದ್ಮಾವತಿಯೇ ಮೊದಲಾದ ಐನೂರು ಮಂದಿ ಅರಸಿಯರೊಡನೆಯೂ ವಿಲಾಸಿನೀಜನರೊಡನೆಯೂ ಪುರದಿಂದ ಹೊರಟ ರಾಜನು ವನವನ್ನು ಸೇರಿದ. ಕಾಡಿನ ಸೌಂದರ್ಯಕ್ಕೆ ಸಂತೋಷಗೊಂಡು ಸ್ವಲ್ಪ ಕಾಲ ವಿಹಾರ ಮಾಡಿದ ರಾಜನು ಬಳಲಿ ರಾಜಕುಮಾರರನ್ನೂ ಇತರರನ್ನೂ ದೂರವಿರಲು ಹೇಳಿ ಪಟ್ಟದರಸಿಯರೊಡನೆ ಸುದರ್ಶನ ಎಂಬ ಹೆಸರಿನ ಕೊಳಕ್ಕೆ ಬಂದ. ಅದನ್ನು ವನಪಾಲಕ ಇಷ್ಟು ಹೊತ್ತಿಗೆ ಶ್ರೀಗಂಧ ಕಾಳಾಗರು ಕುಂಕುಮ ಮೊದಲಾದ ಪರಿಮಳದ್ರವ್ಯಗಳನ್ನು ಬೆರಸಿ ಸಿದ್ಧಗೊಳಿಸಿದ್ದ. ನೀರುಹಕ್ಕಿಗಳಿಂದಲೂ, ಸುಳಿವ ಹಂಸಗಳಿಂದಲೂ, ನೆಯ್ದಿಲೆ ಹೂಗಳಿಂದಲೂ, ಜಲದ ಹುಲ್ಲಿನಿಂದಲೂ ಕೂಡಿ ಚೆಲುವಾದ, ಮಹೋಜ್ವಲವಾದ ರತ್ನಕಾಂತಿಯಿಂದ ಹೊಳೆಯುವ, ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟ ಸರೋವರವನ್ನು ನಿಡುಗಾಲ ನೋಡಿದ. ಕೊಳದ ಚೆಲುವು ರಾಜನನ್ನು ಆಕರ್ಷಿಸಿತು. ರತ್ನಮಯವಾದ ಮೆಟ್ಟಿಲುಗಳನ್ನಿಳಿದು ನೀರನ್ನು ಹೊಕ್ಕು ಜಲಕ್ರೀಡೆಗೆ ತೊಡಗಿದ. ಚೀರ್ಕೊಳವೆಗಳಿಂದ ಮನೋಹರಿಯರ ಮೇಲೆ ನಯದಿಂದ ನೀರು ಚಿಮ್ಮಿದಾಗ ಅದು ತಳೋದರಿಯರ ಮೈಯಿನ ಕುಂಕುಮವನ್ನು ಸೇರಿ ಹೊಳೆಯಿತು. ಹಾಗೆಯೇ ರಾಣಿಯರು ತಮ್ಮ ನಲ್ಲನ ಮೇಲೆ ತುಳುಕಿಸಿದ ನೀರು ಅವನು ಪೂಸಿಕೊಂಡಿದ್ದ ಚಂದನ ಪಂಕದಲ್ಲಿ ಸೇರಿ ನೋಡುವವರಿಗೆ ಮೌಕ್ತಿಕಾಭರಣದಂತೆ ಚೆಲ್ವುವಡೆಯಿತು. ಸುರಗಿ ಮಲ್ಲಿಗೆ ಜಾಜಿ ಮೊಲ್ಲೆ ಹೂಗಳ ಬಿಳುಪಿನಿಂದಲೂ ಕುಂಕುಮರಜದ ಕೆಂಪಿನಿಂದಲೂ ಕಸ್ತೂರಿಯ ಕಪ್ಪಿನಿಂದಲೂ ಕೂಡಿ ಸರೋವರವು ಸುಂದರವಾದ ಮನ್ಮಥನ ಚಿತ್ರಪಟದಂತೆ ಶೋಭೆವಡೆಯಿತು. ಹೀಗೆ ರಾಜ ಮತ್ತು ಅವನ ರಾಣಿಯರು ಪರಸ್ಪರರ ಮೇಲೆ ನೀರನ್ನು ನಗುತ್ತ ಎರಚುತ್ತ ಚಿತ್ತಾಹ್ಲಾದದಿಂದ ಜಲಕ್ರೀಡೆಯಲ್ಲಿ ತಲ್ಲೀನರಾದರು.

ಇತ್ತ ವಿಜಯಾರ್ಧ ಪರ್ವತದ ಉತ್ತರ ಶ್ರೇಣಿಯಲ್ಲಿ ಅಲಕಾಪುರವೆಂಬ ಒಂದು ನಗರ; ಅದನ್ನಾಳುವವನು ಖೇಚರರಾಜನಾದ ವಜ್ರದಾಡ. ಅವನ ಪ್ರಾಣವಲ್ಲಭೆಯಾದ ಪಟ್ಟದರಸಿ ಮದನವೇಗೆಯೊಡನೆ ವಿಹಾರಾರ್ಥವಾಗಿ ವಿಮಾನವನ್ನೇರಿ ದಕ್ಷಿಣ ದೆಸೆಗೆ ಬರುತ್ತಿದ್ದ. ದಾರಿಯಲ್ಲಿ ತನ್ನ ಪ್ರಾಣೇಶ್ವರಿಯರ ಜೊತೆ ಜಲಕ್ರೀಡೆಯಲ್ಲಿ ತಲ್ಲೀನನಾದ ಉಪಚರ ಮಹಾರಾಜನನ್ನೂ ಅವನ ನಾಲ್ವರು ಪಟ್ಟದರಸಿಯರನ್ನೂ ಕಂಡ. ಅವರನ್ನೇ ತದೇಕವಾಗಿ ಆಸಕ್ತಿಯಿಂದ ನೋಡುತ್ತಿದ್ದ. ಅದನ್ನು ಕಂಡ ಮದನವೇಗೆಯು, "ಈ ತರಳಾಯತಾಕ್ಷಿಯರು, ನೆರೆದಿರುವ ಕುಮಾರರು, ಖ್ಯಾತಿಯ ಭೂಪನಿಕುರುಂಬ, ಹಯಕೋಟಿ, ಕರಿವ್ರಾತ, ವಿಲಾಸದ ವಿಲಾಸಿನಿಯರು, ಭಟಾಳಿ ಇವನ್ನೆಲ್ಲ ನೋಡಿದರೆ ಇವನ

ರಾಜ್ಯಲೀಲೆಯು ಸುರರಾಜನಿಗೆ ಸಮಾನವಾಗಿರುವಂತೆ ತೋರುತ್ತದೆ. ಅಂಗಾರಕವಾರದ ಹೆಸರು ಮಂಗಳವಾರ ಎಂಬಂತೆ ಸುಮ್ಮನೆ ಕಾಗೆಗಳಂತೆ ಆಕಾಶದಲ್ಲಿ ಹಾರುವ ನಮಗೆ ವಿದ್ಯಾಧರರೆಂಬ ಒಣ ಹೆಸರಲ್ಲದೆ ಈ ಮಹಾರಾಜನು ಹೊಂದಿರುವಂತಹ ವೈಭವವಿಲ್ಲ" ಎಂದಳು. ತನ್ನ ನಲ್ಲೆಯ ಮಾತನ್ನು ಕೇಳಿದ ವಜ್ರದಾಡನಿಗೆ ಉಪಚರನ ಮೇಲೆ ಮಹಾ ಕೋಪವುಂಟಾಯಿತು. ಮದನವೇಗೆಯನ್ನು ಅಲಕಾಪುರಕ್ಕೆ ಕಳಿಸಿ ತಾನೊಬ್ಬನೇ ವಾಪಸ್ಸು ಬಂದ.

ಹಾಗೆ ಬರುವಾಗ ಒಂದು ಭಾರಿ ಬಂಡೆಯನ್ನು ತಂದು ಮುನಿಸಿನಿಂದ ಎಸೆದು ಸರೋವರವನ್ನು ಮುಚ್ಚಿ ಹೊರಟು ಹೋದ. ಪರಿವಾರದವರೆಲ್ಲ 'ಅಯ್ಯೋ' ಎಂದು ಕೂಗಿಕೊಂಡರು. ಆ ಹಾಸುಗಲ್ಲು ಕೊಳವನ್ನು ಆಕ್ರಮಿಸಿರಲು ರಾಜನೂ ಅರಸಿಯರೂ ಹೊರಗೆ ಹೋಗಲು ಸಾಧ್ಯವಾಗದೆ ಆವಿಗೆಯ ಕಿಚ್ಚಿನಲ್ಲಿದ್ದಂತೆ ಸರೋವರದಲ್ಲಿಯೇ ಸಿಲುಕಿದ್ದರು. ಅನೇಕ ಮಂದಿ ಬಲಿಷ್ಠರು ಬಂಡೆಯನ್ನು ಮೇಲೆತ್ತಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಆಗ ನಾಲ್ವರೂ ಕಾಮಿನಿಯರು, "ಇದು ನಮ್ಮ ಕರ್ಮದಿಂದ ಆದುದು; ಹಾಗಾಗಿ ಬರಿದೇ ಮರುಗಿ ಕುದಿದರೆ ನಿವಾರಣೆಯಾಗುವುದೇ? ವಿಧಿ ಬರೆದ ಅಕ್ಷರವನ್ನು ಅಳಿಸಲು ಸಾಧ್ಯವೇ? ಆದ್ದರಿಂದ ಬರಿದೆ ಮರುಗುವುದೇಕೆ, ಚಿಂತಿಸುವುದೇಕೆ, ಹಲಬುವುದೇಕೆ, ಬೇಯುವುದೇಕೆ? ಹಾಗೆ ಮಾಡದೆ ಬುದ್ಧಿಯುಳ್ಳವರು ಆತ್ಮಹಿತವನ್ನು ಮಾಡಿಕೊಳ್ಳಬೇಕು" ಎಂದು ತಮ್ಮತಮ್ಮಲ್ಲಿಯೇ ಧರ್ಮಶ್ರವಣವನ್ನು ಮಾಡಿಕೊಂಡು ಶುದ್ಧಮನಸ್ಕರಾದರು. ತಮ್ಮ ಮನಃಪ್ರಿಯನಿಗೆ ಸುಖವಾಗುವಂತೆ ಮಾಡುವೆವೆಂದು ರಾಜ್ಯಾಭಿಲಾಷಾಚಿತ್ತನೂ, ಅಧರ್ಮಮನನೂ, ಸ್ತ್ರೀಲಂಪಟನೂ, ಗದ್ಗದಕಂಠನೂ, ವಿಹ್ವಲೀಭೂತನೂ, ಮರಣಭೀರುವೂ ಆದ ಉಪಚರ ಮಹಾರಾಜನೆದುರು ನಿಂತು ಹೀಗೆ ಧರ್ಮವನ್ನು ವಿವರಿಸಿದರು: "ಸಾವು ಬಂತೆಂದು ಬೆಚ್ಚದೆ, ನನ್ನನ್ನು ಕಾಯುವವರಾರೆಂದು ಜರಿಯದೆ, ನೋವಿಗೆ ಏನು ಮಾಡಲಿ ಎಂದು ಚಿಂತಿಸದೆ ಜಿನನ ಪಾದಗಳನ್ನು ಧ್ಯಾನ ಮಾಡು, ಅನ್ಯವನ್ನು ಭಾವಿಸಬೇಡ. ಮುಂಚಿನ ಸಿರಿ, ಮಹಿಮೆ, ಉನ್ನತಿ, ಗಜ ಅಶ್ವ ನಂದನರು ಪುರಂಧ್ರಿಯರು ಇವರ ಬಗ್ಗೆ ಯೋಚಿಸದೆ ಜಿನೇಶ್ವರನ ಪಾದಗಳನ್ನೇ ನೆನೆಯುತ್ತಿರು. ಏನನ್ನೋ ಚಿಂತಿಸುತ್ತ ಸತ್ತು ತಿರ್ಯಕ್ಜಾತಿಯಲ್ಲಿ ತೊಳಲುತ್ತಿರದೆ ಸುಜ್ಞಾನಾಂಬುಧಿಯ ದಿವ್ಯಪಾದಗಳನ್ನು ನೆನೆಯುತ್ತಿರು. ರಾಜ್ಯದ ಮೋಹವನ್ನು ಬಿಡು, ಜೈನಧರ್ಮವನ್ನೇ ನೆನೆ, ನಾಶವಾಗುವ ಪರಿಗ್ರಹವನ್ನು ಹಿಡಿಯದೆ ಹೋದರೆ ನೀನು ಶುಭಗತಿಯನ್ನು ಹೊಂದುವೆ. ಪರಿಗ್ರಹದ ಮೋಹದಿಂದ ಸಂಸಾರದಲ್ಲಿ ತಿರುಗುತ್ತ ದೆಸೆಗೆಟ್ಟು ಮರುಗಿದ ಪಟಹಸ್ತ, ಕಡಾರಪಿಂಗಳ, ಪಿಣ್ಯಾಕಗಂಧ, ದಂಡಕ, ಬ್ರಹ್ಮದತ್ತರಂತೆ ಮಹಾ ದುಃಖಕ್ಕೊಳಗಾಗದೆ ಬಾಹ್ಯಾಭ್ಯಂತರ ಪರಿಗ್ರಹಗಳನ್ನು ಬಿಟ್ಟು ಒಂದೇ ಮನಸ್ಸಿನಿಂದ ಜಿನಪಾದಪಲ್ಲವಗಳನ್ನೇ ನೆನಯುತ್ತಿರು" ಎಂದು ಹೇಳಿದರು. ಅದರಂತೆ ತಾವು ಎಲ್ಲ ಪರಿಗ್ರಹಗಳನ್ನೂ ತೊರೆದು ಸತ್ತು ಸೌಧರ್ಮಕಲ್ಪದಲ್ಲಿ ಸ್ವಸ್ತಿಕಾವರ್ತ ಎಂಬ ವಿಮಾನದಲ್ಲಿ ಒಂದು ಸಾಗರಕಾಲ ಆಯುಷ್ಯವನ್ನು ಪಡೆದು ಕಾಂತ ಆನಂದ ಅಮಿತಕಾಂತ ಸುಕಾಂತ ಎಂಬ ಹೆಸರಿನ ಸಾಮಾನಿಕದೇವರಾಗಿ ಹುಟ್ಟಿದರು.

ಇತ್ತ ಉಪಚರ ಮಹಾರಾಜನು ಕರಿ ತುರಗ ಪದಾತಿ ರಥಗಳ ಸಮೂಹವು ಒಪ್ಪಲು, ಸುಂದರಿಯರು ಸುತ್ತಲೂ ಚಾಮರವಿಕ್ಕುತ್ತ ಬರುತ್ತಿರಲು, ಸುರೇಂದ್ರನ ಹಾಗೆ ರಾಜಬೀದಿಯಲ್ಲಿ ಮೆರವಣಿಗೆ ಬರುತ್ತಿದ್ದುದನ್ನು ನೆನೆಸಿಕೊಂಡ. 'ಇಂದ್ರ ಖೇಚರ ಚಕ್ರವರ್ತಿಗಳ ಭಂಡಾರಕ್ಕೆ ಸಮಾನವಾಗಿದ್ದ ಹಣದ ರಾಶಿಯನ್ನು ಹೇಗೆ ಬಿಟ್ಟು ಹೋಗುವುದು? ಐನೂರು ಮಂದಿ ಅಂತಃಪುರವಾಸಿನಿಯರ ಸಹವಾಸವನ್ನು ತೊರೆದು ಹೇಗಿರಲಿ? ನಾಗಪತಿ ಮತ್ತು ದೇವರಾಜನದಕ್ಕಿಂತಲೂ ಮಿಗಿಲಾದ ಐಶ್ವರ್ಯವನ್ನು ತೊರೆದು ನಾನು ಹೋಗಬೇಕೇ?' ಎಂದು ಪರಿಗ್ರಹಾಕಾಂಕ್ಷೆಯಿಂದ ಕುದಿವ ನೀರಿನಂತೆ ದುಃಖಿಸಿದ. ಮಾಗಿಯ ನದಿಯಂತೆ ಕಂದಿ, ಹಿಡಿದಿಟ್ಟ ಹಾವಿನಂತೆ ಸುಯ್ದು ತನ್ನ ವಿಧಿಯನ್ನು ಬೈದುಕೊಂಡು ಆರ್ತಧ್ಯಾನದಿಂದ ಸತ್ತ. ಅದರಿಂದಾಗಿ ಮನೋಹರವೆಂಬ ಉದ್ಯಾನದಲ್ಲಿ ಸರ್ಪಾಶ್ರಯವೆಂಬ ಗುಹೆಯಲ್ಲಿ ಹೆಬ್ಬಾವಾಗಿ ಹುಟ್ಟಿದ.

ಇತ್ತ ರಾಜನಿಗೆ ಇದ್ದಕ್ಕಿದ್ದಂತೆ ಕೇಡಾದುದಕ್ಕೆ ಅನಂತವೀರ್ಯ ಮೊದಲಾದ ಐನೂರು ಮಂದಿ ರಾಜಕುಮಾರರೂ ಸಾಮಂತರೂ ಪರಿಜನರೂ ದುಃಖಪಟ್ಟರು; ಹಗಲಿರುಳು ರಾಜರಾಣಿಯರ ಗುಣಗಳನ್ನು ನೆನೆಸಿಕೊಳ್ಳುತ್ತಿದ್ದರು.

ಮದಗಜವನ್ನೇರಿ ಮಹಾ ವೈಭವದಿಂದ, ಸಮಸ್ತ ರಾಜಸಂಕುಲದೊಡನೆ, ವಿಲಾಸಿನಿಯರು ಮಕ್ಕಳು ಮತ್ತು ಪರಿವಾರದೊಂದಿಗೆ ವನಕ್ಕೆ ಹೋಗುವುದೆಂದರೇನು, ನಿಷ್ಠುರವಾದ ಅಪಮೃತ್ಯು ಅಡಸಿಕೊಳ್ಳುವುದೆಂದರೇನು ಎಂದು ಆಶ್ಚರ್ಯಪಟ್ಟರು. ಅವನ ಸಿರಿಯನ್ನು ಖೇಚರರಾಜರು ಸ್ಪರ್ಧೆಯಿಂದ ತಂದಿಟ್ಟರೋ ಅಥವಾ ವ್ಯಂತರದೇವರು ಧೂರ್ತತನದಿಂದ ತಂದು ಅಡಕಿದರೋ ಎಂಬಷ್ಟು ಅಗಾಧ ಎಂದು ವಿಸ್ಮಯಪಟ್ಟರು. ಹೀಗೆ ರಾಜ ಮತ್ತವನ ಅರಸಿಯರ ಗುಣಗಳನ್ನು ನೆನೆದು ಮರುಗಿದರು. 'ಅಯ್ಯೋ, ಕೆಟ್ಟೆವು' ಎಂದು ಅಳಲುವ ಅನಂತವೀರ್ಯ ಮುಂತಾದ ಕುಮಾರರು ಬುದ್ಧಿವಂತ ರಾದ್ದರಿಂದ ತಮ್ಮ ದುಃಖವನ್ನು ಧರ್ಮಶ್ರವಣದಿಂದ ಹೋಗಲಾಡಿಸಿಕೊಂಡರು.

ಮರುದಿವಸ ಎಲ್ಲ ರಾಜರುಗಳೂ ಸೇರಿ ಅನಂತವೀರ್ಯನಿಗೆ ಪಟ್ಟವನ್ನು ಕಟ್ಟಿ, 'ಜಿನಧರ್ಮೋತ್ಪಲಚಂದ್ರನಾಗು, ಮುನಿಜನವಿಲಸಿತಪದಭಕ್ತನಾಗು' ಎಂದು ಹರಸಿದರು. ಅದರ ಮರುದಿವಸ ಸಾರಸ್ವತರೆಂಬ ಹೆಸರಿನ ಅವಧಿಜ್ಞಾನಿಗಳು ತಮ್ಮ ಐನೂರು ಮಂದಿ ಶಿಷ್ಯರ ಸಮೇತ ಶ್ರಾವಂತಿಪುರಕ್ಕೆ ವಿಹಾರಕ್ಕೆಂದು ಬಂದು ಮನೋಹರೋದ್ಯಾನದಲ್ಲಿ ಸುಂದರವಾದ ಶಿಲಾತಲದ ಮೇಲೆ ಕುಳಿತು ಪಂಥಾತಿಚಾರವನ್ನು ಮಾಡುತಿದ್ದರು. ಅವರ ಬರವನ್ನು ಒಬ್ಬ ನಿವೇದಕನು ಬಂದು ಅನಂತವೀರ್ಯ ಮಹಾರಾಜನಿಗೆ ಅರುಹಿದ. ಅರಸನು ಆ ದೆಸೆಯಲ್ಲಿ ಏಳು ಅಡಿಗಳನ್ನಿಟ್ಟು ನಮಸ್ಕರಿಸಿ ಋಷಿನಿವೇದಕನಿಗೆ ಮೆಚ್ಚುಗೊಟ್ಟು ಕಳಿಸಿದ. ಆನಂತರ ಅನಂತವೀರ್ಯನು ಭಕ್ತಿಯಿಂದ ಪೂಜಾವಸ್ತುಗಳೊಡನೆ ಸಮಸ್ತ ರಾಜರೊಂದಿಗೆ ಮುನಿಪುಂಗವರೆಡೆಗೆ ಬಂದ. ಅವರನ್ನು ಮೂರು ಸಲ ಬಲಗೊಂಡು ಬಂದು ಅಷ್ಟವಿಧಾರ್ಚನೆಯಿಂದ ಅರ್ಚನೆಗೈದು ಭಕ್ತಿಪೂರ್ವಕವಾಗಿ ವಂದಿಸಿದ. ಉಳಿದ ಋಷಿಗಳಿಗೂ ಗೌರವ ಸಮರ್ಪಿಸಿ ಮುನಿಪತಿಯ ಮುಂದೆ ಕುಳಿತು ಸದ್ಧರ್ಮರೂಪವನ್ನು ಕೇಳಿಸಿಕೊಂಡ. ಆನಂತರ ತಮ್ಮ ತಾಯಿತಂದೆಯರಿಗೆ ಆಕಸ್ಮಿಕ ಸಾವು ಬಂದುದು ಹೇಗೆಂದು ತಿಳಿಸಲು ಬೇಡಿಕೊಂಡ. ಅವರು ಅವಧಿಜ್ಞಾನಿಗಳಾದ್ದರಿಂದ, ವಜ್ರದಾಡನೆಂಬ ವಿದ್ಯಾಧರನು ಮದನವೇಗೆ ಎಂಬ ತನ್ನ ಹೆಂಡತಿಯೊಡನೆ ವಿಹಾರಾರ್ಥವಾಗಿ ಅಲ್ಲಿಗೆ ಬಂದು ಜಲಕ್ರೀಡೆಯಾಡುತ್ತಿದ್ದ ಉಪಚರನನ್ನು ಕಂಡ; ಮದನವೇಗೆಯು ಇವನ ರಾಜ್ಯವೇ ಸಫಲ ಎಂದು ಹೊಗಳಿದ್ದನ್ನು ಕೇಳಿ ವಜ್ರದಾಡನು ಕೋಪಗೊಂಡು ಹೆಂಡತಿಯನ್ನು ಅಲಕಾಪುರಕ್ಕೆ ಕಳಿಸಿ ದೊಡ್ಡ ಬಂಡೆಯೊಂದನ್ನು ತಂದು ಕೊಳವನ್ನು ಮುಚ್ಚಿದಾಗ ಅವರೆಲ್ಲರ ಸಾವು ಸಂಭವಿಸಿತೆಂದು ತಿಳಿಸಿದರು. ತನ್ನ ತಂದೆ ತಾಯಿ ಮುಂತಾದವರು ಸತ್ತು ಎಲ್ಲಿ ಹುಟ್ಟಿರುವರೆಂಬುದನ್ನು ತಿಳಿಸಲು ಮುನಿಗಳನ್ನು ಬೇಡಿಕೊಂಡ. ಅದನ್ನು ತಿಳಿಸಲು ಮುನಿಗಳು ಉದ್ಯತರಾದರು.

ಅವನ ತಾಯಿ ಪದ್ಮಾವತಿ ಮೊದಲಾದ ನಾಲ್ವರೂ ಪಟ್ಟದರಸಿಯರು ಭಯಂಕರವಾದ ಬಂಡೆಗೆ ಹೆದರದೆ, ಪ್ರಾಣಭಯದಿಂದ ನಡುಗದೆ, ಚಿತ್ತದಲ್ಲಿ ಕೊಂಕದೆ ದೇಹವನ್ನೂ, ಈ ಲೋಕದ ಅಲ್ಪಸುಖವನ್ನೂ, ಭೋಗಭಾಗ್ಯಗಳನ್ನೂ ಮಕ್ಕಳನ್ನೂ ನೆನೆಸಿಕೊಂಡು ಕೊರಗದೆ ನಿರ್ಮಲ ಚಿತ್ತದಿಂದ ಸತ್ತು ಸೌಧರ್ಮ ಸತ್ಯಕಲ್ಪದಲ್ಲಿ ಸ್ವಸ್ತಿಕಾವರ್ತವೆಂಬ ವಿಮಾನದಲ್ಲಿ ಸಾಮಾನಿಕದೇವರಾಗಿ ಹುಟ್ಟಿದರು. ಆದರೆ ಉಪಚರ ಮಹಾರಾಜನು ರಾಜ್ಯದ ವೈಭವವನ್ನೂ, ಮಕ್ಕಳು ಭಂಡಾರ ಹೆಂಡಿರ ಸಹವಾಸ ಭೋಗಗಳನ್ನೂ, ಚತುರಂಗಬಲ ಮುಂತಾದವುಗಳನ್ನೂ ಮೋಹದಿಂದ ನೆನೆದು ಆರ್ತಧ್ಯಾನಪರನಾಗಿ ಸತ್ತದ್ದರಿಂದ ದುಃಖದಿಂದ ಬಂದು ಈ ವನದಲ್ಲಿ ಹೆಬ್ಬಾವಾಗಿ ಹುಟ್ಟಿರುವನೆಂದು ವಿವರಿಸಿದರು. ನಿರ್ವೃತಿಯಿಂದ ತಾಯಂದಿರಿಗೆ ದೇವಗತಿಯೂ, ಪರಿಗ್ರಹದಿಂದ ತಂದೆಗೆ ತಿರಿಕ ಗತಿಯೂ ಪ್ರಾಪ್ತವಾದುದನ್ನು ಕೇಳಿ ಅನಂತವೀರ್ಯನಿಗೆ ಅಚ್ಚರಿಯಾಯಿತು. ಪರಿಗ್ರಹಕ್ಕೆರಗಿದ ದುಷ್ಪರಿಣಾಮದಿಂದ ಏಳಿಗೆಗೆಟ್ಟು ಸೌಖ್ಯವೆಂಬ ಮರವನ್ನು ಕಡಿದು, ಅಕ್ಷಯಲಕ್ಷ್ಮಿಯ ಮನಸ್ಸು ಮುರಿದು ಪ್ರಾಣಿಯಾಗಿ ಹುಟ್ಟಿ ದುಃಖಜೀವಿಗಳು ಅತೀವ ದುಃಖದಿಂದ ನಮೆಯುತ್ತವೆ; ದೇಹ, ಮನೆ, ಆಸ್ತಿ ಪಾಸ್ತಿ, ಮಡದಿ ಮಕ್ಕಳು, ತಂದೆ ತಾಯಿ ಇವು ಬೇರೆ ತಾನು ಬೇರೆ ಎಂಬ ಭಾವನೆಯಿಂದ ಕೂಡಿದ ಭವ್ಯನೇ ಧನ್ಯ ಎಂದವನು ಪರಿಗ್ರಹ ನಿಷ್ಪರಿಗ್ರಹಗಳ ಹೀನಾಧಿಕ್ಯವನ್ನು ಮನಸ್ಸಿನಲ್ಲಿಯೇ ಚಿಂತಿಸಿದ.

ಆನಂತರ ತನ್ನ ಕರಕಮಲಗಳನ್ನು ಜೋಡಿಸಿ, "ತಮ್ಮಡಿ, ದುರಾಗ್ರಹಿಯಾಗಿ ದುರ್ವ್ಯಸನಿಯಾಗಿರುವ ಉಪಚರ ನೃಪತಿಗೆ ಜಿನೇಶ್ವರ ಮತೋಕ್ತಿಯ ಮೂಲಕ ಈಗ ಪ್ರಿಯವಾದ ತಿಳಿವಳಿಕೆಯನ್ನು ನೀಡಲು ಸಾಧ್ಯವೇ?" ಎಂದು ಪ್ರಶ್ನಿಸಿದ. "ನೀನು ಹೋಗಿ ಧರ್ಮವನ್ನು ಹೇಳಿದರೆ ಆ ಹಾವಿಗೆ ಜಾತಿಸ್ಮರತೆಯುಂಟಾಗಿ ತನ್ನ ಮೊದಲಿನ ಜನ್ಮವಿಚಾರವು ತಿಳಿದು ಧರ್ಮವನ್ನು ಕೈಗೊಳ್ಳುತ್ತದೆ; ಅಷ್ಟರವರೆಗೆ ದೇವಲೋಕದಲ್ಲಿರುವ ನಿಮ್ಮ ನಾಲ್ವರು ಜನನಿಯರೂ ಬಂದು ಪೂರ್ವಸ್ವರೂಪದಿಂದ ಕಾಣಿಸಿಕೊಂಡು ಧರ್ಮವನ್ನು ಹೇಳಿ ಜಿನಪದಸ್ಮರಣೆಯ ಪ್ರಭಾವವನ್ನು ವಿವರಿಸಿ ದಿವ್ಯಸ್ವರೂಪವನ್ನು ಕೈಗೊಂಡು ಗಗನತಳಕ್ಕೆ ನೆಗೆದು ತಮ್ಮ ಶ್ರೀ ಮತ್ತು ವಿಭೂತಿಗಳನ್ನು ತೋರಿಸಿ ದೇವಲೋಕಕ್ಕೆ ಹೋಗುತ್ತಾರೆ" ಎಂದು ಮುನಿಗಳು ತಮ್ಮ ಗಂಭೀರಸ್ವನದಿಂದ ತಿಳಿಸಿದರು.

ಅನಂತವೀರ್ಯನು ಭಕ್ತಿಭಾವದಿಂದ ಮುನಿಪತಿಗೆ ವಂದಿಸಿ ನಿಧಾನವಾಗಿ ಸರ್ಪವಿದ್ದ ಹುತ್ತದ ಬಳಿ ಬಂದು ಅದರ ಬಾಗಿಲ ಹತ್ತಿರ ನಿಂತು ನೋಡಿದ. ಮುನಿವೃಂದಾರಕನು ಹೇಳಿದ್ದ ಮಾರ್ಗದಿಂದ ಸುಯ್ಯುತ್ತ ಬಂದ ನಾಗನನ್ನು ಕಂಡು ರಾಜನು ಹೀಗೆ ಹೇಳಿದ: "ಹೆಂಗಸರಾಗಿದ್ದರೂ ನಾಲ್ವರೂ ಅರಸಿಯರು ಧೈರ್ಯದಿಂದ ಎಲ್ಲವನ್ನೂ ಒಮ್ಮೆಲೇ ತೊರೆದು ಜಿನಪಾದಭಕ್ತಿಯಿಂದ ದೇವಗತಿಯನ್ನು ಪಡೆದರು; ನೀನೂ ಹಾಗೇ ಮಾಡಬೇಡವೇ? ಮೀಸೆ ಹೊತ್ತಿದ್ದೂ ಧೃತಿಗೆಟ್ಟು ಮನದುಬ್ಬೆಗದಿಂದ ಹಾವಾಗಿ ಹುಟ್ಟಿ ಹುತ್ತದಲ್ಲಿ ಬದುಕುವಂತಾಯಿತಲ್ಲ! ಅವರೆಲ್ಲ ಅರ್ಹಚ್ಚರಣವೇ ಶರಣೆಂದು ವೀರದಿಂದ ಮುಡಿಪಿ ಸುರಾಸುರವಂದ್ಯ ರಾದರು; ಆದ್ದರಿಂದ ಧರೆಯಲ್ಲಿ ಸನ್ಮತಿಗಳಾದವರು ಕೆಡುವರೇ? ಪರಿಗ್ರಹವನ್ನು ಬಿಡಲಾರದೆ ಜಿನಪಾದಸೇವೆಯನ್ನು ತೊರೆದು ಸತ್ತು ನೀನು ಸರ್ಪನಾಗಿ ಹುಟ್ಟಿದ್ದೀಯೆ; ಕಡುಮೂರ್ಖರು ಕೆಡುವುದರಲ್ಲಿ ಚೋದ್ಯವೇನಿದೆ? ವೈಭವದಿಂದ ಅರಮನೆಯಲ್ಲಿ ಬದುಕುತ್ತಿದ್ದವನು ಹುತ್ತದಲ್ಲಿದ್ದು ನಮೆಯುವಂತಾಯಿತಲ್ಲ! ಸಣ್ಣಕ್ಕಿಯ ಅನ್ನವನ್ನು ತಿನ್ನುತ್ತಿದ್ದವನು ಹುಳುಗಳನ್ನಾಯ್ದು ತಿನ್ನುವಂತಾಗಿದೆಯಲ್ಲ! ಮೃದುವಾದ ಹಾಸಿಗೆಯಲ್ಲಿ ಮಲಗುತ್ತಿದ್ದವನು ಕಲ್ಲುಗಳ ಮೇಲೆ ಮಲಗುವಂತಾಯಿತೇ! ವಿಷಯಗಳ ಕಾಂಕ್ಷೆಯಿಂದ ವಿಷಧರನಾಗಿರುವೆ; ಇನ್ನೂ ಲೋಲುಪತೆಯನ್ನು ಪಡೆದಿದ್ದರೆ ನರಕಕ್ಕಿಳಿಯುತ್ತೀಯೆ!"

ಉಪಚರನಾದ ಹೆಬ್ಬಾವಿಗೆ ಜಾತಿಸ್ಮರತೆಯುಂಟಾಗಿ ತನ್ನ ಹಿಂದಿನ ಜನ್ಮವನ್ನು ನೆನೆದು ಗುಹೆಯ ಬಾಗಿಲಿಗೆ ಬಂದು ಕಿವಿಯಿಟ್ಟು ಅನಂತವೀರ್ಯ ಮಹಾರಾಜನ ಮಾತುಗಳನ್ನು ಕೇಳಿಸಿಕೊಂಡಿತು. ಇತ್ತ ದೇವಲೋಕದಲ್ಲಿ ಹುಟ್ಟಿದ್ದ ನಾಲ್ವರೂ ಅರಸಿಯರು ಪರಿಗ್ರಹಾಕಾಂಕ್ಷೆಯಿಂದ ಸತ್ತು ಹೆಬ್ಬಾವಾಗಿ ಹುಟ್ಟಿದುದನ್ನು ಅವಧಿಜ್ಞಾನದಿಂದ ಅರಿತು ಧರ್ಮವಾತ್ಸಲ್ಯದಿಂದ ಬೋಧಿಸಲೆಂದು ಮನೋಹರೋದ್ಯಾನಕ್ಕೆ ದೇವಲೋಕದಿಂದಿಳಿದು ಬಂದು ಮುಂಚಿನ ರೂಪವನ್ನು ತಾಳಿ ಹುತ್ತದ ಬಾಗಿಲಲ್ಲಿದ್ದು ಹಾವಿಗೆ ಮೃದುನಿನಾದದಿಂದ ಧರ್ಮವನ್ನು ತಿಳಿಸಿದರು. ನಿಷ್ಕಾರಣವಾಗಿ ರೇಷ್ಮೆಯ ಹುಳುವಿನಂತೆ ತಮ್ಮ ಸುತ್ತ ಗೂಡು ಕಟ್ಟಿಕೊಂಡು, ಬೆಟ್ಟದಲ್ಲಿ ಹೋರಾಡುವ ಕೋಡಿಲ್ಲದ ಕಾಡಾನೆಯಂತೆ ಸಿಕ್ಕದ ಸುಖಕ್ಕೆ ಆಸೆಪಟ್ಟು ಆಯಾಸಗೊಳ್ಳದೆ; ತಾವು ವೀರವೃತ್ತಿಯಿಂದ ದೇವಗತಿಯನ್ನು ಪಡೆದುದನ್ನೂ ಉಪಚರ ಮಹಾರಾಜನು ಭೀತಮನನಾಗಿ ತಿರ್ಯಕ್‌ಗತಿಯನ್ನು ಪಡೆದುದನ್ನೂ ನಿರೂಪಿಸಿದರು. ಆನಂತರ ದಿವ್ಯಾಂಬರ ಭೂಷಣಾಲಂಕೃತರಾಗಿ ಗಗನತಳಕ್ಕೆ ಹಾರಿದರು. ತೇಜಸ್ಸಿನಲ್ಲಿ ಇವರಿಗೂ ಸೂರ್ಯನಿಗೂ ವ್ಯತ್ಯಾಸವೇ ಇಲ್ಲವಲ್ಲ ಎಂಬಂತೆ; ಕಾಂತಿಯಲ್ಲಿ ಇವರಿಗೂ ಚಂದ್ರನಿಗೂ ಏನು ವ್ಯತ್ಯಾಸ ಎನ್ನುವಂತೆ; ರೂಪಿನಲ್ಲಿ ಇವರಿಗೂ ಕಾಮನಿಗೂ ಅಂತರವೇ ಕಾಣದು ಎನ್ನುವಂತೆ ಅವರು ಆಕಾಶದಲ್ಲಿ ನಿಂತರು. ಹಾಗೆ ಮುಕ್ತಾಜಾಲ ಘಂಟಾಜಾಲಗಳಿಂದೊಪ್ಪುವ ವಿಮಾನಾರೂಢರಾಗಿ, ಸಮುದ್ರರವಕ್ಕೆ ಎಣೆಯೆನಿಸುವ ದೇವದುಂದುಭಿಗಳು ಮೊಳಗಲು, ನಾಲ್ವರೂ ದೇವರುಗಳು ತಂತಮ್ಮ ವೈಭವವನ್ನೂ, ಪರಿಗ್ರಹ ನಿವೃತ್ತಿಯಿಂದಾದ ಮಹಾಫಲಗಳನ್ನೂ ವಿವರಿಸಿ ದೇವಲೋಕಕ್ಕೆ ಹೋದರು.

ಈ ಕಡೆ ಅನಂತವೀರ್ಯ ಮಹಾರಾಜ ಹಾಗೂ ಸೇರಿದ್ದ ಜನರು ಇದನ್ನೆಲ್ಲ ಕೇಳಿ ವಿಸ್ಮಯಪಟ್ಟರು. ಜಿನತತ್ತ್ವೋಕ್ತಿಯಂತೆ ನಡೆದು, ಜೈನಮತವನ್ನು ಸಂಶಯರಹಿತವಾಗಿ ನಂಬಿ, ಸಜ್ಜನರು 'ಜೀಯ, ಜೀಯ' ಎನ್ನುವಂತೆ ಬಾಳುವ ಮಹಾತ್ಮನಿಗೆ ದೇವಸಂತತಿಯು ಬೆಸಕೈವುದು ಏನು ಆಶ್ಚರ್ಯ ಎಂದುಕೊಂಡರು. ಎಲ್ಲರೂ ಮತ್ತೆ ಬಂದು ಸಾರಸ್ವತ ಮುನಿನಾಥನಿಗೆ ನಮಸ್ಕರಿಸಿ, "ತಾವು ಹೇಳಿದಂತೆ ಎಲ್ಲ ಕಾರ್ಯಗಳು ನೆರವೇರಿದವು. ಇನ್ನು ಆ ಹಾವಿಗೆ ಎಷ್ಟು ಆಯುಸ್ಸು ಉಳಿದಿದೆ ಎಂಬುದನ್ನು ದಯವಿಟ್ಟು ತಿಳಿಸಿ" ಎಂದು ಕೇಳಿಕೊಂಡರು. ಅದಕ್ಕೆ ಇನ್ನು ಹದಿನೈದು ದಿನಗಳು ಮಾತ್ರವೇ ಆಯುಸ್ಸು, ಕೊಂಚವೂ ಹೆಚ್ಚಿಲ್ಲವೆಂದು ಋಷಿಗಳು ತಿಳಿಸಿದರು. ಅದನ್ನು ಕೇಳಿ ಅಚ್ಚರಿವಟ್ಟ ರಾಜನು, ಅಲ್ಲಿಗೆ ಬಿಜಯಗೈದು ಹಾವಿಗೆ ತೊರವಿ(ವೈರಾಗ್ಯ)ಯನ್ನು ಬೋಧಿಸಬೇಕೆಂದು ಭಟ್ಟಾರಕರನ್ನು ಬೇಡಿಕೊಂಡ. ಅದಕ್ಕೆ ಒಪ್ಪಿದ ಸಾರಸ್ವತ ಮುನಿವೃಂದಾರಕರು ಇತರ ಮುನಿಗಳ ಜೊತೆಗೆ ಹುತ್ತದ ಬಳಿ ಹೋಗಿ ಅದರ ಬಾಗಿಲಿನಲ್ಲಿ ಧರ್ಮವನ್ನು ಹೇಳಿದರು. ಕೊನೆಗೆ ಮೃದು ಮಾತುಗಳಿಂದ, "ನಿನಗೆ ಆಯುಸ್ಸು ಹೆಚ್ಚಿಲ್ಲ, ಇನ್ನು ಹದಿನೈದೇ ದಿನಗಳು; ಅಷ್ಟು ಕಾಲವೂ ನೀನು ಒಳ್ಳೆಯದನ್ನು ನೆನೆಯುತ್ತಿರು. ಹಿಂದಿನ ಜನ್ಮದಲ್ಲಿ ನೀನು ಅತ್ಯುನ್ನತನಾಗಿದ್ದವನು; ರಾಜಪುತ್ರನಾಗಿದ್ದ ನೀನು ದುರ್ಮನಸ್ಸಿನಿಂದ ಸಿರಿಯನ್ನು ಮೋಹಿಸಿ ಹಾವಾಗಿ ಹುಟ್ಟಿದೆ; ನಿನ್ನ ಹೆಂಡತಿಯರು ಯಾವುದಕ್ಕೂ ಆಸೆಪಡದೆ ಜಿನನನ್ನು ಧ್ಯಾನಿಸಿ ಅನೂನ ಸುಖಕ್ಕೆ ಭಾಜನರಾದರು; ಜಿನರೂಪಸ್ಮರಣೆಯೇ ಆತ್ಮಹಿತಕಾರಿ" ಎಂದು ವಿವರಿಸಿದರು. ಆನಂತರ ಜಿನಪಾದಸೇವೆಯ ಫಲಗಳನ್ನೂ, ಸನ್ಯಸನದ ಪೆಂಪನ್ನೂ ಅರಿತು ತಾವು ಹೇಳುವುದನ್ನು ತದೇಕಚಿತ್ತದಿಂದ ಕೇಳಲು ಆದೇಶಿಸಿದರು. ಆಮೇಲೆ ದಾನ ಪೂಜೆ ಶೀಲೋಪವಾಸ ಮುಂತಾದವುಗಳಿಂದ ಪುಣ್ಯವು ಹೆಚ್ಚುವುದೆಂದು ತಿಳಿಯ ಹೇಳಿದರು; ಒಂದು ಭವದಲ್ಲಿ ಸಮಾಧಿಮರಣವನ್ನು ಕೈಗೊಂಡರೆ ದೇವಮಾನವಪತಿತ್ವವನ್ನು ಹೊಂದಿ ಸಮಸ್ತ ಕರ್ಮಗಳನ್ನು ನಾಶಗೈದು, ಅಕ್ಷಯವಾದ ಮೋಕ್ಷಲಕ್ಷ್ಮಿಯನ್ನು ಸೇರಿ ಸುಖವಾಗಿರಬಹುದು ಎಂಬುದನ್ನು ಸರಳವಾಗಿ ಬೋಧಿಸಿದರು; ಅಪರಿಗ್ರಹದ ವೈಶಿಷ್ಟ್ಯ ಮತ್ತು ಪರಿಣಾಮಗಳನ್ನು ವಿವರಿಸಿದರು.

ಅತ್ತ ಅನಂತವೀರ್ಯ ಮಹಾರಾಜನು ಹದಿನೈದು ದಿವಸಗಳ ಕಾಲ ಅಖಂಡವಾಗಿ ಜಿನಪೂಜೆಗಳನ್ನೂ ಮಾಡಿಸುತ್ತಿದ್ದ, ಉಪಚರನ ಈಗಿನ ರೂಪದ ಹೆಬ್ಬಾವು ಧರ್ಮವನ್ನು ಕೇಳುತ್ತ ಪ್ರಾಣ ಹೋಗುವ ಸಮಯದಲ್ಲಿ ವಜ್ರದಾಡನ ಪಾಪದ ಕೆಲಸಗಳನ್ನು ಸ್ಮರಿಸುತ್ತ ಸತ್ತಿತು. ಆಮೇಲೆ ಭವನವಾಸಿಗರಲ್ಲಿ ಮೂರು ಪಳಿತದಷ್ಟು ಕಾಲ ಆಯುಷ್ಯವನ್ನು ಪಡೆದು ವ್ಯಂತರಕುಲದಲ್ಲಿ ವಿಮಲನೆಂಬ ಹೆಸರಿನ ದೇವನಾಗಿ ಹುಟ್ಟಿದ. ಈ ಕಡೆ ಅನಂತವೀರ್ಯ ಮಹಾರಾಜನು ಮುನೀಂದ್ರೋತ್ತಮರನ್ನು ಬೇಡಿಕೊಂಡು, ಹಾವು ಭವನವಾಸಿಗಳ ಲೋಕದಲ್ಲಿ ಹುಟ್ಟಿದುದನ್ನು ತಿಳಿದು ಬೆರಗುಗೊಂಡ. ಪರಿಗ್ರಹದ ಆಸೆಯಿಂದ ಹೀಗಾದನೆಂಬುದನ್ನು ಅರಿತು ತನ್ನ ಹಿರಿಯ ಮಗನಾದ ಸುಬಾಹು ಕುಮಾರನಿಗೆ ರಾಜ್ಯಪಟ್ಟವನ್ನು ಕಟ್ಟಿ, ಸಕಲ ಸಾಮ್ರಾಜ್ಯವನ್ನೂ ತೊರೆದು, ಸಮಸ್ತ ರಾಜಕುಮಾರರೊಡನೆ ಜಿನದೀಕ್ಷೆಯನ್ನು ಕೈಗೊಂಡು ಉಗ್ರೋಗ್ರ ತಪಸ್ಸನ್ನಾಚರಿಸಿ ಸಂಮೇದ ಪರ್ವತದಲ್ಲಿ ಕರ್ಮಕ್ಷಯ ಮಾಡಿಕೊಂಡು ನಿರ್ವೃತಿಯನ್ನು ಪಡೆದ.

ಇತ್ತ ಭವನವಾಸಿಗನಾದ ವಿಮಲದೇವನು ವಜ್ರದಾಡನಾದ ವಿದ್ಯಾಧರನನ್ನು ಕಂಡು ವಿಭಂಗಜ್ಞಾನದಿಂದ ಪೂರ್ವವೈರವನ್ನು ತಿಳಿದ. ಅವನ ಮೇಲೆ ಕೋಪಗೊಂಡು ಖಚರನ ವಿದ್ಯೆಯೆಲ್ಲವನ್ನೂ ಕೆಡಿಸಿ ಮಹಾ ಸಮುದ್ರಕ್ಕೆ ಎಳೆದೊಯ್ದು, ತನ್ನನ್ನೂ ತನ್ನ ಅರಸಿಯರನ್ನೂ ಗರ್ವದಿಂದ ಹುರುಡಿಸಿ ಕೊಂದ ನಿಷ್ಕರುಣಿಯೆಂದು ಜರೆದು ತಾನು ಅವನನ್ನು ಕಂಡು ಈಗ ಹೇಗೆ ಸೈರಿಸಬಹುದೆಂದು ಖೇಚರೇಶ್ವರನನ್ನೂ ಖಚರಾಧಿಪತಿಯ ವಲ್ಲಭೆಯರನ್ನೂ ಕುರಿತು, "ನೀರು ಕುಡಿ, ಬಾಯಿ ಬಿಡು, ನೋವಿಗೆ ಸೆಡೆಯದಿರು" ಎಂದು ಅಡಿಗಡಿಗೆ ಹೇಳುತ್ತ ಆ ಖೇಚರಪತಿಯನ್ನು ಹುಡುಕು ನೀರಲ್ಲದ್ದಿ ಮೂದಲಿಸುತ್ತಿದ್ದ. ವಜ್ರದಾಡ ವಿದ್ಯಾಧರನು ಮಕ್ಕಳ ಸಮೇತ 'ಕೊಂದವರ ಕೊಲೆಯಾದರು' ಎಂಬ ನಾಣ್ಣುಡಿಯನ್ನು ದಿಟ

ಮಾಡಿ ರೌದ್ರಧ್ಯಾನದಿಂದ ಸತ್ತು ಮೊದಲ ನರಕದಲ್ಲಿ ಮೂರು ಪಳಿತದಷ್ಟು ಕಾಲ ಆಯುಷ್ಯವನ್ನು ಪಡೆದು ನಾರಕನಾಗಿ ಹುಟ್ಟಿದ.

ಇತ್ತ ಕುರುಜಾಂಗಣ ವಿಷಯದಲ್ಲಿ ಹಸ್ತಿನಾಪುರವನ್ನು ಜಯದತ್ತ ಮಹಾರಾಜನು ಆಳುತ್ತಿದ್ದ; ಅವನ ಅರಸಿ ವಿಜಯ ಮಹಾದೇವಿ. ತನಗೆ ಮಕ್ಕಳಿಲ್ಲದ್ದರಿಂದ ಅವಳು ಗುರುಗಳ ಬಳಿ ಬಂದು ವಂದಿಸಿ ತನ್ನ ಅಳಲನ್ನು ತೋಡಿಕೊಂಡಳು. ಕಾಮನಂತಹ ರೂಪವಂತನೂ, ಜಿನಧರ್ಮಾಭ್ಯುದಯನೂ, ಭುವನೈಕವಂದ್ಯನೂ, ಅಮಲಚರಿತ್ರನೂ ಆದ ಮಗನೊಬ್ಬನು ಅವಳಿಗೆ ಹುಟ್ಟುವನೆಂದು ಮುನಿಗಳು ನುಡಿದರು. ವಿಜಯ ಮಹಾದೇವಿಯು ಅದನ್ನು ನಂಬಿ ಸಂತಸಗೊಂಡಳು. ಕೆಲವು ದಿನಗಳ ಬಳಿಕ ವಿಮಲದೇವನಾದ ಭವನವಾಸಿಗನು ಬಂದು ಅವಳ ಗರ್ಭದಲ್ಲಿ ಸೇರಿಕೊಂಡ. ಒಂಬತ್ತು ತಿಂಗಳು ಕಳೆದವು; ಅವಳು ಗಂಡು ಮಗುವೊಂದನ್ನು ಹೆತ್ತಳು. ಗುರುದತ್ತ ಭಟ್ಟಾರಕರ ಆದೇಶದಂತೆ ಹುಟ್ಟಿದ್ದರಿಂದ ಮಗುವಿಗೆ ಗುರುದತ್ತನೆಂದು ನಾಮಕರಣ ಮಾಡಿದರು. ಆ ಮಗುವು ಬೆಳೆದು ಸಕಲ ಶಾಸ್ತ್ರಗಳಲ್ಲಿ ಪರಿಣತಿಯನ್ನು ಪಡೆದ. ವಿಜಯದತ್ತ ಮಹಾರಾಜನು ಅವನಿಗೆ ಪಟ್ಟವನ್ನು ಕಟ್ಟಿ ರಾಜ್ಯದ ಹೊಣೆಯನ್ನು ಹೊರಿಸಿ, ತಾನು ಸುಧರ್ಮಭಟ್ಟಾರಕರ ಬಳಿ ದೀಕ್ಷೆಯನ್ನು ಕೈಗೊಂಡ.

ಇತ್ತ, ಗುರುದತ್ತ ಮಹಾರಾಜನು ತಂದೆಗಿಂತ ವೀರದಲ್ಲಿ ಒಂದು ಬೆರಳು ಮೇಲು ಎಂದು ಸಕಲ ಲೋಕದಲ್ಲಿ ಕೀರ್ತಿಯನ್ನು ಪಡೆದು ವೈಭವದಿಂದ ಆಳುತ್ತಿದ್ದ. ಹಾಗಿರುವಾಗ ಒಮ್ಮೆ ಚಂಪಾಪುರದ ಧಾತ್ರಿವಾಹನನ ಮಗಳಾದ ಅಭಯಮತಿಯನ್ನು ಬಯಸಿ ಅವನ ಬಳಿ ಹೆಗ್ಗಡೆಗಳನ್ನು ಕಳಿಸಿಕೊಟ್ಟ. ಆದರೆ ಅವನು ಮಗಳನ್ನು ವಿಜಯದತ್ತನಿಗೆ ಕೊಡಲು ನಿರಾಕರಿಸಿದ. ಏಟು ತಿಂದ ಸಿಂಹದಂತೆ ಗುರುದತ್ತನು ಅವನ ಮೇಲೆ ದಾಳಿ ನಡೆಸಿ ಕಾದಿದ. ಕದನದಲ್ಲಿ ಏಳನೆಯ ದಿನ ಮಹೀಂದ್ರದತ್ತನೆಂಬ ರಾಜಪುತ್ರನ ಅಂಗೈ ಕತ್ತರಿಸಿ ನೆಲಕ್ಕೆ ಬಿತ್ತು. ಅದನ್ನೊಂದು ಗಿಡಗವು ಕಚ್ಚಿಕೊಂಡು ಹೋಗಿ ಕನ್ಯಾಮಾಡದ ಮುಂದೆ ಬೀಳಿಸಿತು. ಅದನ್ನು ನೋಡಿದ ಅಭಯಮತಿ ಕುಮಾರಿಯು ಎಲ್ಲ ವಿಷಯವನ್ನು ತಿಳಿದು ಆದ ಜೀವಬಾಧೆಗೆ ತುಂಬ ಭಯಗೊಂಡಳು. ತನಗೆ ಗುರುದತ್ತನಲ್ಲದೆ ಬೇರೆಯವರ ರೂಪು ಸಲ್ಲದೆಂದು ದೂತಿಯೊಬ್ಬಳ ಮೂಲಕ ರಾಜನ ಬಳಿ ಹೇಳಿಕಳಿಸಿದಳು. ಇದನ್ನು ಕೇಳಿದ ಧಾತ್ರಿವಾಹನ ಮಹಾರಾಜನಿಗೆ ತುಂಬ ಸಂತೋಷವಾಯಿತು. ಅವನು ಕಾಳಗವನ್ನು ನಿಲ್ಲಿಸಿ ಗುರುದತ್ತ ಮಹಾರಾಜನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ. ಗುರುದತ್ತನು ಅಭಯಮತಿಗೆ ಮಹಾದೇವಿಯ ಪಟ್ಟವನ್ನು ಕಟ್ಟಿ ಹಸ್ತಿನಾಪುರಕ್ಕೆ ಬಂದು ಸುಖವಾಗಿ ರಾಜ್ಯಭಾರ ಮಾಡುತ್ತಿದ್ದ.

ಆಗ ವಜ್ರದಾಡನಾದ ನಾರಕನು ನರಕದಿಂದ ಬಂದು ನೀಲಗಿರಿಯೆಂಬ ಪರ್ವತದಲ್ಲಿ ಹುಲಿಯಾಗಿ ಹುಟ್ಟಿ ಆ ಬೆಟ್ಟದ ತಪ್ಪಲಿನಲ್ಲಿದ್ದ ಜನರನ್ನು ಕಾಡುತ್ತಿದ್ದ. ಅವರೆಲ್ಲ ಗುರುದತ್ತ ಮಹಾರಾಜನ ಬಳಿ ಬಂದು ತಮ್ಮ ತೊಂದರೆಯನ್ನು ಹೇಳಿಕೊಂಡರು. ಪೂರ್ವವೈರವಿದ್ದುದರಿಂದ ರಾಜನಿಗೆ ತಕ್ಷಣವೇ ಕೋಪ ಭುಗಿಲೆಂದಿತು. ಹುಲಿಯಿದ್ದ ಗುಹೆಯ ಬಳಿ ಬಂದ ಅವನು ಅದರ ಬಾಯಿಗೆ ಸವುದೆಗಳನ್ನು ಒತ್ತಾಗಿ ಒಟ್ಟಿ ಬೆಂಕಿಯಿಟ್ಟ. ಹೊರಗೆ ಹೊಡೆದ ಹರೆಗಳ ಶಬ್ದಕ್ಕೆ ಕೆರಳಿದ ಹುಲಿಯು ಹೊರಬರಲು ಪ್ರಯತ್ನಿಸಿದರೂ ಸಾಧ್ಯವಾಗದೆ ಗುಹೆಯಲ್ಲಿ ಬೆಂದು ಸತ್ತು ಹೋಯಿತು. ಆನಂತರ ಕಾಮನಿರ್ಜರೆ ಎಂಬ ಸೌರಾಷ್ಟ್ರ ವಿಷಯದ ದ್ರೋಣಿಮಂಥ ಎಂಬ ಪರ್ವತದ ಕೆಳಗಿದ್ದ ಪಳ್ಳಿಖೇಟವೆಂಬ ಹಳ್ಳಿಯಲ್ಲಿ ಇಳಾಭರಣ–ಕಂಟಕೆಯೆಂಬ ಬ್ರಾಹ್ಮಣ ದಂಪತಿಗಳ ಮಗನಾಗಿ ಹುಟ್ಟಿ ಬೆಳೆಯುತ್ತಿದ್ದ. ಅವನ ಹೆಸರು ಹಳಮುಖ.

ಇತ್ತ ಅಮೃತಾಶ್ರಯ ಭಟ್ಟಾರಕರು ಏಕವಿಹಾರಿಗಳಾಗಿ ತನ್ನ ಊರಿಗೆ ಬಂದಿರುವುದನ್ನು ಗುರುದತ್ತ ಮಹಾರಾನು ತಿಳಿದು ಅವರಿಗೆ ವಂದಿಸಿ ಬರಲು ಹೋದ. ಅಲ್ಲಿ ತನ್ನ ಹಿಂದಿನ ಭವಗಳ ಬಗ್ಗೆ ತಿಳಿಸಲು ಅವರನ್ನು ಕೇಳಿಕೊಂಡ. ಉಪಚರ ಮಹಾರಾಜನ ಜನ್ಮದಿಂದ ಮೊದಲುಗೊಂಡು ಗುರುದತ್ತ ಮಹಾರಾಜನಾಗಿ ಹುಟ್ಟುವವರೆಗಿನ ನಾಲ್ಕು ಜನ್ಮಗಳ ವಿಷಯವನ್ನು

ಅವರು ವಿವರಿಸಿದರು. ಅಭಯಮತಿದೇವಿಯೂ ತನ್ನ ಹಿಂದಿನ ಹುಟ್ಟುಗಳ ಬಗ್ಗೆ ತಿಳಿಯಲು ಉತ್ಸುಕಳಾದಳು. ಆಗ ಭಟ್ಟಾರಕರು ತಮ್ಮ ದುಂದುಭಿಧ್ವನಿಯಿಂದ ಅವಳ ವೃತ್ತಾಂತವನ್ನು ಹೇಳಲು ತೊಡಗಿದರು.

ಚಂಪಾಪುರದಲ್ಲಿ ಗರುಡವೇಗನೆಂಬ ಒಬ್ಬ ಬೇಡನಿದ್ದಾನೆ; ಅವನ ಹೆಂಡತಿ ಗೋಮುಖಿ ಎನ್ನುವವಳು. ಒಂದು ದಿನ ಶ್ರಾವಕರೆಲ್ಲ ಸಮಾಧಿಗುಪ್ತಾಚಾರ್ಯರಲ್ಲಿ ವ್ರತಗಳನ್ನು ಕೈಗೊಳ್ಳುವುದನ್ನು ಅವಳು ಕಂಡಳು. ಅದರಿಂದ ಆಕರ್ಷಿತಳಾಗಿ ತಾನೂ ಪಂಚಾಣುವ್ರತಗಳನ್ನು ಸ್ವಇಚ್ಛೆಯಿಂದ ಸ್ವೀಕರಿಸಿದಳು. ಆಮೇಲೆ ಮನೆಗೆ ಬಂದು ಗರುಡವೇಗನು ಬಲೆ ಹಾಕಿ ಹಿಡಿದಿದ್ದ ಹಕ್ಕಿಗಳನ್ನೆಲ್ಲ ಬಿಟ್ಟುಬಿಟ್ಟಳು. ಬೇಡನು ಬಂದು ಕೋಪಗೊಂಡು ಅವಳನ್ನು ಚೆನ್ನಾಗಿ ಹೊಡೆದ. ಅವಳು ಗಂಡನನ್ನು ಬಿಟ್ಟು ನಂಟರ ಮನೆಯನ್ನು ಸೇರಿದಳು. ಧಾತ್ರಿವಾಹನ ಮಹಾರಾಜನ ಸಿರಿಯನ್ನು ಕಂಡು ಅವಳಿಗೆ ಅದರ ಮೇಲೆ ಆಸೆಯಾಯಿತು. ಮುಂದೆ ಕೆಲವೇ ದಿನಗಳಲ್ಲಿ ಯಾವುದೋ ಕಾಯಿಲೆಯಿಂದ ಸತ್ತು, ಕೈಗೊಂಡಿದ್ದ ವ್ರತಗಳ ಫಲದಿಂದಾಗಿ, ಅವಳು ಈಗ ಮಹಾರಾಜನ ಮಗಳಾಗಿ ಹುಟ್ಟಿರುವುದಾಗಿ ವಿವರಿಸಿದರು. ಹೀಗೆ ರಾಜರಾಣಿಯರು ತಮ್ಮ ಪೂರ್ವಜನ್ಮಗಳ ವಿಷಯವನ್ನು ವಿಸ್ತಾರವಾಗಿ ತಿಳಿದು ನಂಬಿ ಸಂಸಾರಸಾಗರವನ್ನು ದಾಟುವ ಬಗೆಯನ್ನು ಕುರಿತು ಆಲೋಚಿಸತೊಡಗಿದರು. ಭವಭವದಲ್ಲೂ ಯಮನೆಂಬ ನಾಯ ಬಾಯಿಗೆ ಬಿದ್ದರೂ ಜೀವನೆಂಬ ಮೊಲವು ಹಿಂದಿನ ಜನ್ಮಗಳ ವಿಷಯ ತಿಳಿಯದ್ದರಿಂದ ಯಮನನ್ನೇ ಮೆಚ್ಚಿಸುತ್ತದೆ; ಅದಕ್ಕೆ ಅತಿಶಯ ಸುಖದ ಕಲ್ಪನೆಯೇ ಇರುವುದಿಲ್ಲ. ಆಸೆಯ ಕಾರಣದಿಂದ ಸಂಸಾರದ ಒಳಗನ್ನು ತಿಳಿಯದೆ ಅದನ್ನು ನಂಬಿ ಪಡುವ ಪಾಡೇ ಸಾಕು; ಇನ್ನು ಮುಂದೆ ಮಲರಹಿತವಾದ ಜಿನಪಾದಕಮಲಗಳನ್ನು ಆಶ್ರಯಿಸಬೇಕು ಎಂದು ನಿರ್ಧರಿಸಿದರು.

ಹೀಗೆ ತೀರ್ಮಾನಿಸಿ ಶ್ರೀದತ್ತನೆಂಬ ಮೊದಲ ಮಗನಿಗೆ ಪಟ್ಟವನ್ನು ಕಟ್ಟಿದ ಗುರುದತ್ತ ಮಹಾರಾಜನು ಅಮೃತಾಸ್ರವ ಭಟ್ಟಾರಕರ ಬಳಿ ಜಿನದೀಕ್ಷೆಯನ್ನು ಪಡೆದು ದ್ವಾದಶಾಂಗಶ್ರುತಧರನಾಗಿ ಕೆಲ ಕಾಲ ಗುರುಸೇವೆಯಲ್ಲಿ ನಿರತನಾಗಿದ್ದ. ಆನಂತರ ಗುರುಗಳ ಆದೇಶದಂತೆ ಏಕವಿಹಾರಿಯಾಗಿ ಹೋದ. ಈ ಕಡೆ ಅಭಯಮತಿಯೂ ಅದೇ ಗುರುಗಳ ನೇತೃತ್ವದಲ್ಲಿ ಸುವ್ರತಗಂತಿಯರಲ್ಲಿ ದೀಕ್ಷೆಯನ್ನು ಪಡೆದು ಉಗ್ರೋಗ್ರ ತಪಸ್ಸನ್ನು ಆಚರಿಸಿ ಸಮಾಧಿಮರಣದಿಂದ ಸತ್ತು ಕಾಪಿಥ ಎಂಬ ಎಂಟನೆಯ ಕಲ್ಪದಲ್ಲಿ ಮಿತಕಾಂತನೆಂಬ ದೇವನಾಗಿ ಹುಟ್ಟಿದಳು.

ಇತ್ತ ಗುರುದತ್ತ ಭಟ್ಟಾರಕರು ವಿಹಾರಿಗಳಾಗಿ ಬಂದು, ತಾವು ಯತ್ರಾಸ್ತಮಿತವಾಸಿಗಳಾದ್ದರಿಂದ (ಸೂರ್ಯ ಮುಳುಗಿದ ಕಡೆಯೇ ತಂಗುವುದು), ಪಳ್ಳಿಖೇಡವೆಂಬ ಊರಿನಲ್ಲಿ ರಾತ್ರಿ ಪ್ರತಿಮೆಯಂತೆ ನಿಂತರು. ಬೆಳಗಾದಾಗ ಮಳೆ ಹೆಚ್ಚಾಗಲು ನೆಲ ಅಪ್ರಾಸುಕವೆಂದು ಸೂರ್ಯಪ್ರತಿಮೆ ನಿಂತರು. ಅಷ್ಟರಲ್ಲಿ ವಜ್ರದಾಡನಾಗಿದ್ದ ಹಳಮುಖನು ಮೂಡಣ ದಿಕ್ಕಿನ ಹೊಲಕ್ಕೆ ತನಗೆ ಬುತ್ತಿಯನ್ನು ತರುವಂತೆ ಹೆಂಡತಿಗೆ ಹೇಳಿ ಉಳಲೆಂದು ಹೋಗುತ್ತಿದ್ದ. ಅಲ್ಲಿನ ಹೊಲದಲ್ಲಿ ಹೆಚ್ಚು ಕೆಸರಾಗಿರಲು, ಪಡುವಣ ಹೊಲಕ್ಕೆ ಹೋಗುವಾಗ, ಬುತ್ತಿಯನ್ನು ಅಲ್ಲಿಗೆ ತರಲು ಹೇಳುವಂತೆ ಮುನಿಗೆ ತಿಳಿಸಿ ಹೋದ. ಅಲ್ಲಿ ಮೂರು ಜಾವದವರೆಗೂ ಉತ್ತನೆ ಮಾಡಿದ; ಆದರೆ ಹೆಂಡತಿ ಬರಲಿಲ್ಲ. ಹೀಗಾಗಿ ಹಸಿದುಕೊಂಡೇ ಮನೆಗೆ ವಾಪಸಾಗಿ ಕೋಪದಿಂದ ಹೆಂಡತಿಯನ್ನು ಸಾಯುವಂತೆ ಬಡಿದ. ಅವಳು ಅಳುತ್ತಲೇ ಅವನು ಹೋಗಿದ್ದ ಜಾಗ ಗೊತ್ತಾಗಲಿಲ್ಲವೆಂದು ತಿಳಿಸಿದಳು. "ಅಲ್ಲಿ ನಿಂತಿದ್ದ ಋಷಿ ಹೇಳಲಿಲ್ಲವೇ, ಬೊಗಳು" ಎಂದು ಕೇಳಿದಾಗ, ಅವಳು ಹೆದರಿಕೆಯಿಂದ ಇಲ್ಲ ಎಂದು ಸುಳ್ಳು ಹೇಳಿದಳು. ಹಳಮುಖನಿಗೆ ಋಷಿಯ ಮೇಲೆ ಅಸಾಧ್ಯ ಕೋಪ ಬಂತು. ದುಷ್ಟ ಮುನಿಯನ್ನು ಸುಟ್ಟಲ್ಲದೆ ಉಣ್ಣುವುದಿಲ್ಲವೆಂದು ಭರದಿಂದ ಹೋದ. ಒಂದು ಬಟ್ಟೆಯನ್ನು ಎಣ್ಣೆಯಲ್ಲಿ ಅದ್ದಿ ಅದನ್ನು ಪಾದದಿಂದ ತಲೆಯವರೆಗೂ ಮುನಿಗೆ ಸುತ್ತಿ ಬೆಂಕಿ ಇಟ್ಟುಬಿಟ್ಟ. ವಿನಾಕಾರಣ ಹಳಮುಖನು ತನ್ನನ್ನು ಸುಡುತ್ತಿದ್ದಾನೆ ಎಂದು ಮುನಿಯು ತಲ್ಲಣಿಸದೆ, ತಳರದೆ ಶಂಕಿಸದೆ ಅಚಲಿತನಾಗಿ ಧೈರ್ಯದಿಂದ ನಿಂತಿದ್ದ. ಹಳಮುಖನ ಮೇಲೆ ಕೋಪಗೊಳ್ಳದೆ ತನ್ನ ಕರ್ಮವ್ರಾತವನ್ನು ಕಳೆದುಕೊಂಡ. ಜಗತ್ತಿನಲ್ಲಿ ಕೋಪಗೊಳ್ಳದವನೇ ಧನ್ಯ! ಹಿಂದಿನ ಕರ್ಮವು ಫಲ ನೀಡುತ್ತವೆಯಾದ್ದರಿಂದ ಕರ್ಮದ ಮೇಲೆ

ಮುನಿಯಬೇಕೇ ಹೊರತು ಸುಮ್ಮನೇ ಇತರರ ಮೇಲೆ ಕೋಪಗೊಳ್ಳುವುದು ಮತಿವಂತರಿಗೆ ಸರಿಯೇ? ಬಟ್ಟೆಯೊಡನೆ ಮಾಡುವ ಸ್ನಾನವೂ, ನೀರು ಬೆರಸಿದ ಹಾಲೂ, ದೋಷದಿಂದ ಕೂಡಿದ ಮಾಣಿಕ್ಯವೂ ಒಳ್ಳೆಯದಲ್ಲ; ಹಾಗೆಯೇ ಕೋಪದಿಂದ ಕೂಡಿ ಮಾಡಿದ ಕೆಲಸ, ಮಣ್ಣಿನಿಂದ ಕೂಡಿದ ಅನ್ನ ಇವೂ ಒಳ್ಳೆಯವಲ್ಲ. ಅಂತೆಯೇ ತನ್ನ ಕಾರ್ಯ ತೀರಿದ ಮೇಲೆ ಶರೀರವನ್ನೂ ಪರಿಗ್ರಹವನ್ನೂ ತ್ರಿಶುದ್ಧಿಯಿಂದ ಬಿಡುವುದು ನೀತಿಯೇ ಹೊರತು ಸ್ವರ್ಗಾಪವರ್ಗವನ್ನು ಹೊಂದ ಬಯಸುವವನು, ಗಳೆಯೊಡನೆ ಬಿಲವನ್ನು ಹೊಗುತ್ತೇನೆ ಎನ್ನುವವನಂತೆ ಮೂರ್ಖನಾಗುತ್ತಾನೆ, ಎಂದು ಶರೀರವನ್ನೂ ಪರಿಗ್ರಹವನ್ನೂ ತೊರೆದು ಶುಕ್ಲಧ್ಯಾನದಿಂದ ಘಾತಿಕರ್ಮಗಳನ್ನು ನಾಶಪಡಿಸಿಕೊಂಡು ಕೇವಲಜ್ಞಾನಿಯಾದ. ಆಗ ಚತುರ್ವಿಧ ದೇವರುಗಳು ಕೇವಲಿಪೂಜೆಯನ್ನು ಮಾಡಲೆಂದು ಅಲ್ಲಿಗೆ ಬಂದರು. ಪೂಜೆ ಮಾಡಿ ಹೀಗೆ ಸ್ತುತಿಸಿದರು:

ಜಯ ದಿವಿಜಮಹಿತ ಜಯ ದೋಷರಹಿತ
ಜಯ ದಿವ್ಯಮೂರ್ತಿ ಜಯ ವಿದಿತಕೀರ್ತಿ
ಜಯ ಮದನವೈರಿ ಜಯ ದುರಿತಹಾರಿ
ಜಯ ಗುಣನಿಧಾನ ಜಯ ಸುಖನಿಧಾನ
ಜಯ ಶಾಂತರೂಪ ಜಯ ವಿಜಿತಕೋಪ
ಜಯ ಮೋಹವಿಲಯ ಜಯ ಧರ್ಮನಿಲಯ
ಜಯ ಭವ್ಯವಂದ್ಯ ಜಯ ಜಗದ್ವಂದ್ಯ
ಜಯ ಕಾಂತಿಧಾಮ ಜಯ ಪುಣ್ಯಧಾಮ
ಜಯ ಮುನಿಗಣೇಶ ಜಯ ಮದವಿನಾಶ
ಜಯ ದಯಾಸಮುದ್ರ ಜಯ ನಯಸಮುದ್ರ
ಜಯ ಸಚ್ಚರಿತ್ರ ಜಯ ಜಗಪವಿತ್ರ
ಜಯ ಸೇವ್ಯವಚನ ಜಯ ಸತ್ಯವಚನ
ಜಯ ಯಮಕೃತಾಂತ ಜಯ ಮುಕ್ತಿಕಾಂತ
ಜಯ ಬೋಧರೂಪ ಜಯ ನಷ್ಟತಾಪ
ಜಯ ಸಕಲರುಂದ್ರ ಜಯ ಜಯ ಜಿನೇಂದ್ರ

ಹೀಗೆ ನಾನಾ ಬಗೆಯಲ್ಲಿ ಸ್ತುತಿ ಮಾಡುವ ದಿವಿಜನಿಕಾಯವನ್ನು ಕಂಡು ಹಳಮುಖನು ಭಯಗೊಂಡು ಗುರುದತ್ತ ಕೇವಲಿಗಳ ಶ್ರೀಪಾದಪದ್ಮಗಳಿಗೆ ಎರಗಿ, ಹಿಂದಿನ ತನ್ನ ನಾಲ್ಕು ಜನ್ಮಗಳ ವಿವರವನ್ನು ಕೇಳಿ ಸಂಸಾರದ ಬಗ್ಗೆ ವಿಸ್ಮಯಗೊಂಡು ವಿರಕ್ತನಾಗಿ ಅವಸರ್ಪಿಣೀ ಕಾಲದ ಸಾಮರ್ಥ್ಯವನ್ನು ತನಗೆ ಹೇಳಬೇಕೆಂದು ಕೇಳಿಕೊಂಡು ತಲೆ ಬಾಗಿ ನಿಂತ. ಆಗ ಜಿನಸಮಯವಾರ್ಧಿ ವರ್ಧನಚಂದ್ರರು ಹೀಗೆ ಹೇಳಿದರು: "ಲೋಕದಲ್ಲಿ ಹೆಚ್ಚಿದ ದುಷ್ಷಮಕಾಲದಲ್ಲಿ ಮಾನವರಲ್ಲಿ ಧರ್ಮಪರರು ಇರುವುದಿಲ್ಲ, ದಯಾನ್ವಿತರಿರುವುದಿಲ್ಲ; ಕರುಣಿಗಳೂ ಸಚ್ಚರಿತ್ರರೂ ದೃಢವ್ರತರೂ ಇರುವುದಿಲ್ಲ; ಸಮಸ್ತಶಾಸ್ತ್ರಗಳಲ್ಲಿ ಪರಿಣತರೂ ಶೀಲಗುಣವುಳ್ಳವರೂ ಇರುವುದಿಲ್ಲ. ಮಳೆ ಇಲ್ಲದ್ದರಿಂದ ಹೆಚ್ಚಿನ ಬೆಳೆಯಿರದು, ರಾಜರಲ್ಲಿ ಸ್ಥಿರಗುಣರಿರುವುದಿಲ್ಲ, ಭಿಕ್ಷುಕರು ಹೆಚ್ಚಾಗುವರು, ಹಣವಂತರು ಇರುವುದಿಲ್ಲ, ಕಳ್ಳತನ ಹೆಚ್ಚಾಗುವುದು ಮತ್ತು ರಾಜಪೀಡೆ ಉಂಟಾಗುವುದು. ಅನೇಕರು ಸಿರಿಯ ಬಗ್ಗೆ ಚಿಂತಿಸಿದರೂ ಯಾರಿಗೂ ಸಿರಿ ಸಮನಿಸದು; ಆಗಮಜ್ಞರ ಮಾತಿನಂತೆ ನಡೆವವರಿರುವುದಿಲ್ಲ; ಜನರು ಆಗಮಗಳಂತೆ ನಡೆಯದೆ ದುರ್ಗತಿಹೇತುವಾದ ದುಶ್ಚರಿತ್ರದಲ್ಲಿ ತೊಡಗುತ್ತಾರೆ. ದಯೆ ದಮಗಳಿಂದ ಕೂಡಿದ ಧರ್ಮವನ್ನೊಲ್ಲದೆ ಕಷ್ಟಕರವಾದ ಮತ್ತು ದಯಾರಹಿತವಾದ ಧರ್ಮದಲ್ಲಿ ಜನ ನಡೆಯುತ್ತಾರೆ,

ಗುಣವಂತರನ್ನು ಬಾಧಿಸಿ ಕೆಡುಕರೊಂದಿಗೆ ಕೈಜೋಡಿಸುತ್ತಾರೆ. ಗಂಡಸರಲ್ಲಿ ಸತ್ಯಗುಣವೂ ಪ್ರಭುಶಕ್ತಿಯೂ ಪರಿಣಾಮಕಾರಿಯಾಗಿರದು; ಹೆಂಗಸರ ದಿವ್ಯಗುಣವೂ ಪತಿಭಕ್ತಿಯೂ ಉಳಿಯದು; ಪಂಡಿತರ ಒಳ್ಳೆಯ ಗುಣವೂ ಆಗಮದೋಜೆಯೂ ಕಾಣಬರದು. ಉದಾರಿಗಳಾದವರಲ್ಲಿ ಕಡು ಲೋಭವೂ, ಒಳ್ಳೆಯವರಿಗೆ ಬಡತನವೂ, ಕುಲಸ್ಥರಲ್ಲಿ ಹೀನವೃತ್ತಿಯೂ ಸೇರುತ್ತದೆ; ಕುಲಹೀನರಲ್ಲಿ ಮಹಿಮೆಯೂ, ಗಾವಿಲರಲ್ಲಿ ಸಿರಿಯೂ, ಬುದ್ಧವಂತರಿಗೆ ಬಡತನವೂ ಸಮನಿಸುತ್ತದೆ. ಬೆಳೆ ಹಾಳಾಗುತ್ತದೆ, ಕಳೆ ಹೆಚ್ಚುತ್ತದೆ; ಅಸತ್ಯ ಹೆಚ್ಚುತ್ತದೆ; ಶಾಸ್ತ್ರವು ಬಲಹೀನವಾಗುತ್ತದೆ; ಉದಾರಿಗಳು ಸಾಯುತ್ತಾರೆ; ಕುಧರ್ಮವೂ ಕುದೈವಗಳೂ ಬಲಿಷ್ಠವಾಗುವುವು. ಹಲವರು ಪಾಪವನ್ನು ಪ್ರೀತಿಸಿ ದುರ್ಮತವನ್ನು ಹಿಡಿದು ಸೊಕ್ಕಿನಿಂದ ನಿಷ್ಠುರ ನರಕಸಮುದ್ರದಲ್ಲಿ ಬಿದ್ದು ದುಃಖವನ್ನನುಭವಿಸುವರು; ಕೆಲವರು ಮಾತ್ರ ಜೈನಪದಸೇವನೆಯಿಂದ ಸುರಲೋಕಕ್ಕೆ ಹೋಗುತ್ತಾರೆ. ಇವೆಲ್ಲ ದುಷ್ಷಮಕಾಲದಲ್ಲಿನ ವೈಲಕ್ಷಣ್ಯಗಳು." ದುಷ್ಷಮಕಾಲದ ಲಕ್ಷಣಗಳನ್ನೂ ತಾನು ಗೈದ ಪಾಪಗಳನ್ನೂ ನೆನೆಸಿಕೊಂಡು ಹಳಮುಖನು ಜಿನದೀಕ್ಷೆಯನ್ನು ಕೈಗೊಂಡು ಹೋದ. ಗುರುದತ್ತ ಮುನಿನಾಥನು ಭೂಮಂಡಲವನ್ನೆಲ್ಲ ವಿಹಾರಿಸುತ್ತ ಬಂದು ಹಳ್ಳಿಖೇಟದಲ್ಲಿ ಜಾತಿಜರಾಮರಣತ್ರಯದೂರವಾದ ನಿರ್ವಾಣಲಕ್ಷ್ಮಿಯನ್ನು ಸೇರಿದ.

ಆದ ಕಾರಣ ಪರಿಗ್ರಹವನ್ನು ಹಿಡಿಯದೆ ಜಿನೇಂದ್ರಾಗಮದಂತೆ ನಡೆಯುವ ಮಹಾಪುರುಷನಿಗೆ ಅಕ್ಷಯ ಸಿರಿಯುಂಟಾಗುತ್ತದೆ. ಜಿನಪಾದಸೇವೆ ಮತ್ತು ಜಿನಭಕ್ತಿಗಳು ನಿನಗೆ ಸಹಜವಾದವು. ಜಿನಪಾದಪದ್ಮಗಳನ್ನು ಬಿಗಿಯಾಗಿ ಹಿಡಿದಿರುವುದರಿಂದ ನಿನ್ನ ದುರಿತಗಳೆಲ್ಲ ಮಾಯವಾದವು. ಸುಕವಿನಿಕರಪಿಕ ಮಾಕಂದನೇ, ಮಿಥ್ಯಾವಾದಿಗಳ ಸಹವಾಸ ಮಾಡದಿರುವ ಕಾರಣದಿಂದ ನೀನು ಸಂಸಾರವನ್ನು ಗೆದ್ದಿರುವೆ. ಮೇರುಗಿರಿಯು ಭೂಮಿಯನ್ನು ಬಿಟ್ಟು ಕದಲದಿರುವಂತೆ ನಿನ್ನನ್ನು ಅರ್ಹತ್ಪದವು ಎಂದೂ ಬಿಟ್ಟಿರದು. ಕೆರೆಯನ್ನು ನೋಡಿ ಬತ್ತವನ್ನು ಬಿತ್ತುವಂತೆ, ಮಳೆಯನ್ನು ನೋಡಿ ಆರಂಬಕ್ಕೆ ಶುರುಮಾಡುವಂತೆ, ಹೊಲವನ್ನು ಕಂಡು ಕಣವನ್ನು ಮಾಡುವಂತೆ, ನಿರ್ದೋಷಿಯಾದ ಗುರುವನ್ನು ಕಂಡು ಸಮ್ಯಕ್ತ್ವವನ್ನು ಬೆರಸಿ ವ್ರತಗಳಲ್ಲಿಯೂ ಧರ್ಮದಲ್ಲಿಯೂ ನಡೆಯುವವನಿಗೆ ಕಾರ್ಯಸಿದ್ಧಿಯಾಗುತ್ತದೆ. ಸಮ್ಯಕ್ತ್ವವಿಲ್ಲದ ವ್ರತತಪಗಳು ಸೂರ್ಯನಿಲ್ಲದ ಹಗಲಿನಂತೆಯೂ, ದಾರಿಯಿಲ್ಲದ ಪ್ರಯಾಣದಂತೆಯೂ, ನೀರಿಲ್ಲದ ಬೆಳೆಯಂತೆಯೂ, ಹಾಲಿಲ್ಲದ ತಾಯಂತೆಯೂ ನಿಷ್ಫಲವಾದವು. ಆದ್ದರಿಂದ ನಿಶ್ಶಂಕೆಯೇ ಮೊದಲಾದ ದರ್ಶನಾಂಗಗಳ ಫಲದಿಂದಲೂ, ದರ್ಶನ ಬೆರಸಿದ ಐದು ಅಣುವ್ರತಗಳಿಂದಲೂ ಕೂಡಿ ಸುಖವನ್ನು ಹೊಂದಿದ ವಸುಭೂತಿ, ಅಂಜನಚೋರ, ಅನಂತಮತಿಕುಮಾರಿ, ಒದ್ದಾಯನ ಮಹಾರಾಜ, ರೇವತೀ ಮಹಾದೇವಿ, ಜಿನೇಂದ್ರಭಕ್ತ, ವಾರಿಷೇಣಕುಮಾರ, ವಜ್ರಕುಮಾರ, ವಿಷ್ಣುಕುಮಾರ, ಧನಕೀರ್ತಿಕುಮಾರ, ಧನದ ಮಹಾರಾಜ, ಜಿನೇಂದ್ರದಾಸ, ಪ್ರಮಾಥಿಕುಮಾರ ಮತ್ತು ಗುರುದತ್ತ ಮಹಾರಾಜ, ಈ ಹದಿನಾಲ್ಕು ಮಂದಿ ಮಹಾಪುರುಷರ ಕತೆಗಳನ್ನು ಕೇಳಿ ಅವರಂತೆ ನಡೆದು ಸಂಸಾರಸಮುದ್ರವನ್ನು ದಾಟಬೇಕೆಂದು ಗೌತಮಸ್ವಾಮಿಗಳು ಉಪದೇಶಿಸಿದರು. ಅದನ್ನು ಕೇಳಿ ಮಗಧಾಧೀಶ್ವರನು ತನಗೆ ಆಗಲೇ ಮುಕ್ತಿಶ್ರೀಯು ಕೈಸಾರಿದ ಹಾಗೆ ಸಂತೋಷಪಟ್ಟು ಪುರಕ್ಕೆ ಮರಳಿದ. ಭಕ್ತಿಯಿಂದ ಇಪ್ಪತ್ತನಾಲ್ಕು ಮಂದಿ ತೀರ್ಥಂಕರರಿಗೆ ಅಭಿಷೇಕ ಪೂಜೆಗಳನ್ನು ಮಾಡಿ ಹಲವು ತೆರದ ರತ್ನಗಳಿಂದ ಅರ್ಚಿಸಿದ. ಆನಂತರ ಭಕ್ತಿಪರವಶನಾಗಿ ಹೀಗೆ ಪ್ರಾರ್ಥಿಸಿದ:

ಪುರುಪರಮೇಶ್ವರ ಸೌಖ್ಯಸದನ ಜಯ
ದಿವಿಜಗಣಾರ್ಚಿತಪಾದಪದ್ಮ ಜಯ
ವಿಲಸದಜಿತಜಿನ ದುರಿತಹರಣ ಜಯ
ಶತಮುಖ ಶತನುತ ಚಾರುಚರಣ ಜಯ
ಶಂಭವ ಜಿನಪತಿ ದುರಘದೂರ ಜಯ

ಮುಕ್ತಿಶ್ರೀಕುಚನೂತ್ನಹಾರ ಜಯ
ಸಂದಭಿನಂದನ ವಿಗತಮೋಹ ಜಯ
ರಮ್ಯಾಲಂಕೃತ ಗುಣಸಮೂಹ ಜಯ
ಸುಮತಿ ಜಿನೇಶ ಪರೋಪಕಾರಿ ಜಯ
ಮನಸಿಜಮದಗಜಸಿಂಧುರಾರಿ ಜಯ
ಪದ್ಮಪ್ರಭಜಿನ ಶಾಂತರೂಪ ಜಯ
ಲೋಕತ್ರಯಹಿತ ಪೂಜ್ಯಪಾದ ಜಯ
ಸತ್ಸುಪಾರ್ಶ್ವ ಭುವನೈಕಸಾರಜಯ
ಕರ್ಮಮಹೀರುಹವರಕುಠಾರ ಜಯ
ಚಂದ್ರಪ್ರಭ ಹಿಮಕಿರಣತೇಜ ಜಯ
ಭಾಕ್ತಿಕಜನಕಲ್ಪಾವನೀಜ ಜಯ
ಪುಷ್ಪದಂತ ದಿಗ್ರಮ್ಯವಸ್ತ್ರ ಜಯ
ಕಿಲ್ಬಿಷನಗಕುಲವಾಸವಾಸ್ತ್ರ ಜಯ
ಶೀತಲಶೀತಲಸದೃಶ ವಚನ ಜಯ
ವಜ್ರಶಿಲಾತಲಲಿಖಿತವಚನ ಜಯ
ಸುಶ್ರೇಯಾಂಸಜಿನೇಂದ್ರರುದ್ರ ಜಯ
ದುಷ್ಕೃತಪನ್ನಗಪತಿಖಗೇಂದ್ರ ಜಯ
ವಾಸುಪೂಜ್ಯ ದೇವಾಧಿದೇವ ಜಯ
ಸನ್ಮುನಿಸೇವ್ಯ ಮಹಾನುಭಾವ ಜಯ
ವಿಮಲ ಗುಣ(ಗಣ)ರತ್ನರಾಶಿ ಜಯ
ನಿಖಿಲ ಶೀಲಗುಣತೋಯರಾಶಿ ಜಯ
ಅನಂತಗುಣಾಂಬುಧಿ ವೀತರಾಗ ಜಯ
ಪಂಚಮಹಾಕಲ್ಯಾಣಯೋಗ್ಯ ಜಯ
ಧರ್ಮಜಿನೇಶ್ವರ ಧರ್ಮವಾರ್ಧಿ ಜಯ
ನಿಷ್ಠುರಾಷ್ಟಕರ್ಮಾಭ್ರಪವನ ಜಯ
ಶಾಂತಿ ಜಿನೇಶ್ವರ ಪುಣ್ಯನಿಲಯ ಜಯ
ಶರಣಾಗತಜನಕರ್ಮವಿಲಯ ಜಯ
ಕುಂಥುಜಿನೇಶ್ವರ ಜಗದ್ವಂದ್ಯ ಜಯ
ಗುಣಮಣಿ ಮುನಿಗುಣನಿಕರವಂದ್ಯ ಜಯ
ಅರಜಿನ ಸುರನರನಿಕರವಂದ್ಯ ಜಯ
ಸಾರಸ್ವತತತ್ವವಿದಿತನೂತ ಜಯ
ಮಲ್ಲಿಜಿನೇಶ್ವರ ಸುಸ್ವರೂಪ ಜಯ

ಕರ್ಮಕಲಂಕಿತತಮಃಪ್ರದೀಪ ಜಯ

ಮುನಿಸುವ್ರತ ಜಿನರಾಜಹಂಸ ಜಯ

ಸುಗತಿವಧೂಕರ್ಣಾವತಂಸ ಜಯ

ನಿಮಿಜಿನಮುಕ್ತಿಶ್ರೀನಿವಾಸ ಜಯ

ಸಕಲಶ್ರೀವನಿತಾವಿಲಾಸ ಜಯ

ನೇಮಿಜಿನೇಶ್ವರವಿನುತಶರಣ ಜಯ

ಹರಿಕುಲಗಗನಸಹಸ್ರಕಿರಣ ಜಯ

ಪಾರ್ಶ್ವಜಿನೇಶ್ವರ ದಿವ್ಯಮೂರ್ತಿ ಜಯ

ಲೋಕಾಲೋಕವ್ಯಾಪ್ತಕೀರ್ತಿ ಜಯ

ವರ್ಧಮಾನಜಿನ ಭುವನಪೂಜ್ಯ ಜಯ

ನೆಗಳ್ದಷ್ಟಾದಶದೋಷರಹಿತ ಜಯ

ಹೀಗೆಂದು ನಾನಾ ಬಗೆಯಲ್ಲಿ ಸ್ತುತಿಸಿದ ನಂತರ ಮಹಾರಾಜನು ಅರಮನೆಯನ್ನು ಪ್ರವೇಶಿಸುವಾಗ ಸಮುದ್ರದ ಅಲೆಗಳಂತೆ ತೂರ್ಯಧ್ವನಿಯುಂಟಾಯಿತು, ವಾರನಾರಿಯರು ಉತ್ಸಾಹದಿಂದ ಸುತ್ತುಗಟ್ಟಿ ಬಂದರು, ಪುಣ್ಯಕಾಂತೆಯರು ಪ್ರೀತಿಯಿಂದ ಅಕ್ಷತೆಯನ್ನು ಎರಚಿ ಹರಸಿದರು.

******

ಪಾರಿಭಾಷಿಕ ಪದಕೋಶ

ಅಂತರಾಯ/೧೧೭ ಮೋಕ್ಷವನ್ನು ಬಯಸಿ ಮುಂದುವರಿಯುವವರಿಗೆ ನಡುವೆ ಉಂಟಾಗುವ ತೊಡಕು; ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ ಮತ್ತು ವೀರ್ಯಾಂತರಾಯ ಎಂಬ ಐದು ಬಗೆ. ಒಟ್ಟಾರೆ ಇವನ್ನು ಅಂತರಾಯಪಂಚಕ ಎನ್ನುತ್ತಾರೆ.

ಅಣುವ್ರತ/೮೭ ಜೈನ ಗೃಹಸ್ಥರು ಆಚರಿಸಬೇಕಾದ ಐದು ವ್ರತಗಳು: ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ.

ಅತಿಚಾರ/೮೯ ಶಾಸ್ತ್ರಕ್ಕೂ ಪದ್ಧತಿಗೂ ವಿರುದ್ಧವಾದ ನಡವಳಿಕೆ.

ಅದೃಶ್ಯಾಂಜನ/೨೬೫ ತಾನು ಬೇರೆಯವರ ಕಣ್ಣಿಗೆ ಕಾಣಿಸದ ಹಾಗೆ ಮಾಡಿಕೊಳ್ಳಲು ಕಣ್ಣಿಗೆ ಹಚ್ಚಿಕೊಳ್ಳುವ ಕಾಡಿಗೆ.

ಅನಗಾರಧರ್ಮ/೧೮೩ ಮುನಿಗಳು ಆಚರಿಸುವ ಧರ್ಮ

ಅಪವರ್ಗ/೧೨೩ ತೊರೆಯುವುದು, ಬಿಡುವು; ಮೋಕ್ಷ.

ಅಪ್ರಾಸುಕ/೨೮ ಜೀವಂತವಸ್ತುಗಳಿಂದ ಕೂಡಿರುವುದು.

ಅವಧಿಜ್ಞಾನಿ/೮೫ ಕಾಲ ದೇಶಗಳ ಮಿತಿಯನ್ನು ಮೀರಿ ಯಾವುದೇ ಕಾಲದಲ್ಲಿ ಮತ್ತು ಯಾವುದೇ ಜಾಗದಲ್ಲಿ ನಡೆಯುವ ಸಂಗತಿಗಳನ್ನು ತಿಳಿದುಕೊಳ್ಳಬಹುದಾದ ಒಂದು ಶಕ್ತಿಯಿರುವವನು.

ಅವಧಿಲೋಚನ/೧೮೭ ಮೇಲೆ ವಿವರಿಸಿರುವ ಶಕ್ತಿ.

ಅವಲೋಕಿನೀ/೪೩ ದೂರದಲ್ಲಿ ನಡೆಯುವ ಸಂಗತಿಗಳನ್ನು ತಿಳಿಯಬಹುದಾದ ವಿದ್ಯೆ.

ಅವಸರ್ಪಿಣೀ/೯೬ ಧರ್ಮದ ಇಳಿಗಾಲ

ಅಷ್ಟಮದ/೧೬೬ ಎಂಟು ಬಗೆಯ ಮದಗಳು. ಇವುಗಳನ್ನು ಬೇರೆ ಬೇರೆಡೆಯಲ್ಲಿ ವಿವಿಧವಾಗಿ ಹೇಳಲಾಗಿದೆ. ಆದರೆ 'ರತ್ನಕರಂಡಕ ಶ್ರಾವಕಾಚಾರ'ದಲ್ಲಿನ ಪಟ್ಟಿಯು ಇದು: ಜ್ಞಾನ, ಪೂಜಾ, ಕುಲ, ಜಾತಿ, ಬಲ. ಋದ್ಧಿ, ತಪ ಮತ್ತು ವಪು – ಇವುಗಳ ಮದ.

ಅಷ್ಟಾದಶ ದೋಷ/೧೨೮ ಹಸಿವು, ಬಾಯಾರಿಕೆ, ಮುಪ್ಪು, ರೋಗ, ಜನನ, ಮರಣ, ಭಯ, ಗರ್ವ, ಪ್ರೀತಿ, ವೈರ, ಮಮತೆ, ರತಿ, ಚಿಂತೆ, ವಿಷಾದ, ಖೇದ, ಸ್ವೇದ, ನಿದ್ರೆ ಮತ್ತು ಐಶ್ವರ್ಯ.

ಆತಪಯೋಗ/೧೫೫: ಬಿಸಿಲಲ್ಲಿ ನಿಂತು ತಪಸ್ಸು ಮಾಡುವುದು.

ಆರಣ/೨೭೨ ಒಂದು ಸ್ವರ್ಗದ ಅಥವಾ ಕಲ್ಪದ ಹೆಸರು.

ಆಸನಕಂಪ/೧೯೩ ದೇವತೆಗಳ ಪೀಠವು ಅಲುಗುವುದು; ವಿಶೇಷ ಸಂದರ್ಭಗಳಲ್ಲಿ ಹೀಗಾಗುವುದು.

ಆಸನ್ನಭವ್ಯ/೩೦ ಅನತಿಕಾಲದಲ್ಲಿಯೇ (ಕೆಲವೇ ಜನ್ಮಗಳಲ್ಲಿ)ಮೋಕ್ಷ ಸಂಪಾದಿಸುವ ಯೋಗ್ಯತೆಯುಳ್ಳವನು.

ಉಪಸರ್ಗ/೩೭ ತೊಂದರೆ, ಕಷ್ಟ, ಉಪದ್ರವ.

ಋದ್ಧಿಪ್ರಾಪ್ತಿ/೧೮೯ ಋದ್ಧಿ (ವೃದ್ಧಿ) ಹೊಂದುವುದು.

ಏಕಭುಕ್ತ/೧೩೨: ದಿನದಲ್ಲಿ ಒಂದು ಹೊತ್ತು ಮಾತ್ರ ಊಟಮಾಡುವುದು.

ಏಕವಿಹಾರಿ/೨೮೨ ಒಂಟಿಯಾಗಿ ಸಂಚರಿಸುವವನು

ಏಕಾದಶ ನೆಲೆ/೧೮೩ ಏಕಾದಶನಿಲಯದ ಶ್ರಾವಕರು ಆಚರಿಸಬೇಕಾದ ಹನ್ನೊಂದು ಪ್ರತಿಮೆಗಳು: ದರ್ಶನ, ವ್ರತ, ಸಾಮಾಯಿಕ, ಪ್ರೋಷದೋಪವಾಸ, ಸಚಿತ್ತವಿರತಿ, ರಾತ್ರಿಭುಕ್ತಿತ್ಯಾಗ, ಬ್ರಹ್ಮಚರ್ಯೆ, ಆರಂಭತ್ಯಾಗ, ಪರಿಗ್ರಹತ್ಯಾಗ, ಅನುಮತಿತ್ಯಾಗ, ಉದ್ದಿಷ್ಟತ್ಯಾಗ ಎಂಬ ಐದನೆಯ ಗುಣಸ್ಥಾನದ ಹನ್ನೊಂದು ನಿಲಯಗಳು.

ಏಕಾದಶ ರುದ್ರ/೯೭ ವೈದಿಕ ಪರಿಸರದಲ್ಲಿ ಬೇರೆಯಿದ್ದರೂ ಜೈನ ಪರಂಪರೆಯಲ್ಲಿನ ಹನ್ನೊಂದು ಮಂದಿ ರುದ್ರರೆಂದರೆ: ಭೀಮಾವಲಿ, ಜಿತಶತ್ರು, ರುದ್ರ, ವಿಶ್ವಾನಲ. ಸುಪ್ರತಿಷ್ಠ, ಅಚಲ, ಪುಂಡರೀಕ, ಅಜಿತಂಧರ ಅಜಿತನಾಭಿ, ಪೀಠ ಮತ್ತು ಸತ್ಯಕಿಸುತ.

ಕರ್ಮ/೧೨೯ ಜೀವದ ಎಂಟು ಬಗೆಯ ಕರ್ಮಗಳು: ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ, ಆಯುಃಕರ್ಮ, ನಾಮಕರ್ಮ, ಗೋತ್ರಕರ್ಮ ಮತ್ತು ವೇದನೀಯ.

ಕರ್ಮೋಪಶಮನ/೩೦ ಕರ್ಮವು ಕಳೆಯುವುದು.

ಕಾಯಶುದ್ಧಿ/೧೮೭ ಕಾಯ, ಭಾವ, ವಿನಯ, ಈರ್ಯಾಪಥ, ಭಿಕ್ಷಾ, ಪ್ರತಿಷ್ಠಾಪನಾ, ಶಯನಾಸನ ಮತ್ತು ವಾಕ್ಯ ಎಂಬಎಂಟು ಶುದ್ಧಿಗಳಲ್ಲಿ ಒಂದು.

ಕಾಲಲಬ್ಧಿ/೧೫೩ ಐದು ಬಗೆಯ ಲಬ್ಧಿಗಳಲ್ಲಿ ಒಂದು; ಆಧ್ಯಾತ್ಮಿಕ ಜೀವನ ಆರಂಭಗೊಳ್ಳಲು ಪಕ್ವವಾದ ಕಾಲ.

ಕೇವಲಿ/೧೬೨ ಕೇವಲಜ್ಞಾನವನ್ನು ಪಡೆದವನು. ಲೋಕ ಮತ್ತು ಅಲೋಕಗಳಲ್ಲಿನ ತ್ರಿಕಾಲಗಳಲ್ಲಿನ ಸರ್ವವಸ್ತುಗಳ ಸಮಗ್ರಜ್ಞಾನವೇ ಕೇವಲಜ್ಞಾನ.

ಗುಣವ್ರತತ್ರಯ/೯೦ ಗ್ರಂಥಾರ್ಥಪರಿಜ್ಞಾನ, ತಾತ್ಪರ್ಯಾರ್ಥನಿರೂಪಣ ಮತ್ತು ಆದ್ಯಂತಮಧ್ಯವ್ಯಾಖ್ಯಾನಶಕ್ತಿ

ಚತುರನುಯೋಗ/೧೫೫ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ ಮತ್ತು ದ್ರವ್ಯಾನುಯೋಗ

ಚತುರ್ಗತಿ/೧೪೦ ದೇವ, ಮಾನವ, ತಿರ್ಯಕ್ ಮತ್ತು ನಾರಕವೆಂಬ ನಾಲ್ಕು ಗತಿಗಳು.

ಚತುರ್ವಿಧ ದೇವನಿಕಾಯ/೧೯೩ ಭವನವಾಸಿ, ವ್ಯಂತರ, ಜ್ಯೋತಿಷ ಮತ್ತು ಕಲ್ಪನಾವಸಿ ಎಂಬ ನಾಲ್ಕು ಬಗೆಯ ದೇವತೆಗಳು.

ಚತುಷ್ಕಷಾಯ/೨೨೮ ಅನಂತಾನುಬಂಧಿ, ಅಪ್ರತ್ಯಾಖ್ಯಾನಾವರಣ, ಪ್ರತ್ಯಾಖ್ಯಾನಾವರಣ ಮತ್ತು ಸಂಜ್ವಲನ ಎಂಬವು. ಪ್ರತಿಯೊಂದರಲ್ಲಿಯೂ ಕ್ರೋಧ, ಮಾನ, ಮಾಯಾ ಮತ್ತು ಲೋಭ ಎಂಬ ನಾಲ್ಕು ಪ್ರಭೇದಗಳಿವೆ.

ಚಾತುರ್ಮಾಸ/೧೮೫ ಮಳೆಗಾಲದಲ್ಲಿ ನಾಲ್ಕು ತಿಂಗಳು ಮಾತ್ರ ಮುನಿಗಳು ಒಂದು ಕಡೆ ವಾಸಿಸಬೇಕು ಎಂಬ ನಿಯಮ.

ಚಾರಣ ಋಷಿ/೨೨೪ ಗಗನದಲ್ಲಿ ಸಂಚರಿಸುವ ಋಷಿ.

ಜಂಘಚಾರಣಋದ್ಧಿ/೧೪೫ ನೆಲದ ಮೇಲೆ ಕಾಲೂರದೆ ನಡೆಯಬಲ್ಲ ಸಿದ್ಧಿ.

ಜಂಘಚಾರಣತ್ವ/೧೩೯ ಮೇಲಿನದೇ.

ಜ್ಞಾನಾವರಣೀಯ/೧೩೫ ಎಂಟು ಬಗೆಯ ಘಾತಿಕರ್ಮಗಳಲ್ಲಿ ಒಂದು; ಜ್ಞಾನವನ್ನು ಮರೆಮಾಡುವ ಕರ್ಮ.

ತ್ರಿದಂಡ/೧೩೯ ಸನ್ಯಾಸಿಯ ಕೋಲು.

ತ್ರಿಲೋಕಪ್ರಜ್ಞಪ್ತಿ/೧೫೨ ಮೂರು ಲೋಕಗಳಲ್ಲಿ ನಡೆಯುವ ಸಂಗತಿಗಳನ್ನು ತಿಳಿದುಕೊಳ್ಳುವ ಶಕ್ತಿ.

ತ್ರಿಶಲ್ಯ/೧೩೯ ಮಿಥ್ಯಾಶಲ್ಯ, ಮಾಯಾಶಲ್ಯ ಮತ್ತು ನಿದಾನಶಲ್ಯಗಳು.

ದರ್ಶನಾವರಣೀಯ/೧೩೫ ಆತ್ಮನ ಅನಂತಜ್ಞಾನ, ಅನಂತವೀರ್ಯ ಮೊದಲಾದ ಗುಣಗಳನ್ನು ಮಲಿನಗೊಳಿಸುವಂತಹ ನಾಲ್ಕು ವಿಧವಾದ ಘಾತಿಕರ್ಮಗಳಲ್ಲಿ ಒಂದು.

ದಶಧರ್ಮ/೧೧ ಕ್ಷಮೆ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪಸ್ಸು, ತ್ಯಾಗ, ಅಕಿಂಚನ್ಯ ಮತ್ತು ಬ್ರಹ್ಮಚರ್ಯ.

ದಾನಚತುಷ್ಟಯ/೫೩ ಆಹಾರ, ಔಷಧ, ಶಾಸ್ತ್ರ ಮತ್ತು ಅಭಯಗಳೆಂಬ ನಾಲ್ಕು ಬಗೆಯ ದಾನಗಳು.

ದುಷ್ಷಮಕಾಲ/೨೮೫ ಅವಸರ್ಪಿಣೀ ಕಾಲ; ಧರ್ಮದ

ಇಳಿಗಾಲ.

ನವಕೇಶವ/೯೭ ತ್ರಿಷಷ್ಟಿಶಲಾಕಾಪುರುಷರಲ್ಲಿನ ಒಂಬತ್ತು ಮಂದಿ ವಾಸುದೇವರು ಅಥವಾ ಕೇಶವರು: ತ್ರಿಪೃಷ್ಠ, ದ್ವಿಪೃಷ್ಠ ಸ್ವಯಂಭೂ, ಪುರುಷೋತ್ತಮ, ಪುರುಷಸಿಂಹ, ಪುಂಡರೀಕ, ದತ್ತ, ಲಕ್ಷ್ಮಣ ಮತ್ತು ಕೃಷ್ಣ ಎಂಬ ಹೆಸರಿನವರು.

ನವಪದಾರ್ಥ/೯೪ ಪಂಚಭೂತಗಳು ಮತ್ತು ಕಾಲ, ದಿಕ್ಕು, ಆತ್ಮ ಮತ್ತು ಮನಸ್ಸುಗಳು.

ನವವಿಧಪುಣ್ಯ/೬೯ (ಮುನಿಗಳು ಚರಿಗೆಗೆ ಬಂದಾಗ) ದಾನ ಮಾಡುವ ಒಂಬತ್ತು ಕರ್ಮಗಳು: ಆವಾಹನ, ಪಾದ್ಯ, ಆಸನ, ಅರ್ಚನ, ವಂದನ, ಮನಃಶುದ್ಧಿ, ವಾಕ್‌ಶುದ್ಧಿ, ಕಾಯಶುದ್ಧಿ (ಕರಣಶುದ್ಧಿ), ಏಷಣಾಶುದ್ಧಿ – ಇವುಗಳು.

ನವವಿಧಬ್ರಹ್ಮಚರ್ಯ/೨೩೬ ಮನವಚನಕಾಯಗಳಲ್ಲಿ ಪ್ರತಿಯೊಂದಕ್ಕೂ ಕೃತ ಕಾರಿತ ಅನುಮೋದನ ಎಂಬ ಭೇದದಿಂದ ಒಂಬತ್ತು ಬಗೆಯಾದ ಬ್ರಹ್ಮಚರ್ಯೆ.

ನಾರಕ/೨೮೨ ದೇವ, ಮನುಷ್ಯ, ತಿರ್ಯಕ್ ಮತ್ತು ನಾರಕ ಎಂಬ ನಾಲ್ಕು ಜನ್ಮಗಳಲ್ಲಿ ಒಂದು.

ನಾಲ್ಕು ಬಗೆಯ ಕಷಾಯಗಳು/೧೪೦ ನೋಡಿ, ಚತುಃಕಷಾಯಗಳು.

ನಿರ್ಗ್ರಂಥ/೮೬ ಬೆತ್ತಲೆ.

ನಿರ್ವಾಣಪದವಿ/೫೯ ಮೋಕ್ಷ.

ನಿಷಿಧ್ಧಿ/೮೩ ನಿಸಿದಿ; ಸನ್ಯಸನವಿಧಿಯಿಂದ ಮರಣಹೊಂದಿದವರ ಸಮಾಧಿ.

ಪಂಚನಮಸ್ಕಾರ/೧೩ ಜೈನಧರ್ಮದ ಪಂಚಗುರುಗಳಿಗೆ ಮಾಡಬೇಕಾದ ನಮಸ್ಕಾರಗಳು: ಕರದ್ವಯ, ಜಾನುದ್ವಯ, ಶಿರಸ್ಸು, ವಚಸ್ಸು ಮತ್ತು ದೃಷ್ಟಿ ಇವುಗಳಿಂದ ಮಾಡುವ ನಮಸ್ಕಾರಗಳು. ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಅಯಾರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಏ ಸಬ್ಬಸಾಹೂಣಂ ಎಂಬ ಐದು ಮಂತ್ರಗಳು.

ಪಂಚಪರಮೇಷ್ಠಿ/೮೭ ಅರ್ಹತ್, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧುಗಳು.

ಪಂಚಮಗತಿ/೧೪೦ ಐದನೆಯ ಅವಸ್ಥೆ; ದೇವ, ಮಾನುಷ, ತಿರ್ಯಕ್ ಮತ್ತು ನಾರಕ ಎಂಬ ನಾಲ್ಕು ಅವಸ್ಥೆಗಳನ್ನು ಮೀರಿದ ಅವಸ್ಥೆ.

ಪಂಚಮಹಾವಾದ್ಯ/೧೭೯ ಅರಮನೆ ಮತ್ತು ದೇವಾಲಯಗಳಲ್ಲಿ ಮಾಡುವ ಐದು ವಾದ್ಯಶಬ್ದಗಳು. ಬೇರೆ ಬೇರೆ ಶಬ್ದಗಳು ಬೇರೆ ಬೇರೆ ಕಾಲಗಳಲ್ಲಿ ರೂಢಿಯಲ್ಲಿತ್ತು. ಉದಾಹರಣೆಗೆ, ಕೊಂಬು, ಹಲಗೆ, ಶಂಖ, ಭೇರಿ ಮತ್ತು ಜಾಗಟೆ.

ಪಂಚವಿಂಶತಿಮಲ/೮೮ ಇಪ್ಪತ್ತೈದು ಬಗೆಯ ಮಲಗಳು ಅಥವಾ ದೋಷಗಳು: ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರ, ಮಿಥ್ಯಾದೃಷ್ಟಿಯವನು, ಮಿಥ್ಯಾಜ್ಞಾನವುಳ್ಳವನು, ಮಿಥ್ಯಾಚರಿತ್ರ ಎಂಬ ಆರು ಅನಾಯತನಗಳು;

ದೇವಮೂಢ, ಗುರುಮೂಢ, ಸಮಯಮೂಢ ಎಂಬ ಮೂರು ಮೂಢಗಳು: ಜ್ಞಾನ, ಕುಲ, ಬಲ, ಪೂಜೆ, ಜಾತಿ, ಐಶ್ವರ್ಯ, ತಪ, ಶರೀರ ಎಂಬ ಎಂಟು ಮದಗಳು; ಶಂಕೆ, ಕಾಂಕ್ಷೆ, ಅನ್ಯದೃಷ್ಟಿಪ್ರಶಂಸೆ, ಸಂಸ್ತವ, ವಿಚಿಕಿತ್ಸೆ ಮುಂತಾದ ಎಂಟು ಶಂಕೆಗಳು

ಪಂಚಾಚಾರ/೧೦ ದರ್ಶನಾಚಾರ, ಜ್ಞಾನಾಚಾರ, ಚಾರಿತ್ರಾಚಾರ, ತಪಾಚಾರ ಮತ್ತು ವೀರ್ಯಾಚಾರ ಎಂಬವು.

ಪಂಚಾಸ್ತಿಕಾಯ/೯೪ ಜೀವ, ಕಾಲ, ಪುದ್ಗಲ, ಧರ್ಮ ಮತ್ತು ಅಧರ್ಮಗಳು.

ಪಂಥಾತಿಚಾರ/೨೪೩ ನಡೆಯುವಾಗ ಆಗಬಹುದಾದ ಜೀವಹಾನಿಗೆ ಮಾಡಿಕೊಳ್ಳುವ ಪ್ರಾಯಶ್ಚಿತ್ತ.

ಪರಮಾವಧಿಲೋಚನ/೧೫೨
ಪರಮ+ಅವಧಿಲೋಚನ.

ಪರೀಷಹ/೧೦ ಇಪ್ಪತ್ತೆರಡು ಬಗೆಯ ಕಷ್ಟಗಳು: ಕ್ಷುತ್ತು, ಪಿಪಾಸೆ, ಶೀತ, ಉಷ್ಣ, ದಂತಮಕ್ಷಿಕ, ನಗ್ನತೆ, ಆರತಿ, ಸ್ತ್ರೈಣ, ಚರ್ಯಾ, ಶಯ್ಯಾ, ನಿಷದ್ಧ, ಆಕ್ರೋಶ, ವಧಾ, ಯಾಜ್ಞಾ, ಅಲಾಭ, ಆದರ್ಶನ, ರೋಗ, ಸತೃಣಸ್ಪರ್ಶ, ಪ್ರಜ್ಞಾ, ಅಜ್ಞಾನ, ಮಲ ಮತ್ತು ಸತ್ಕಾರಪುರಸ್ಕಾರ – ಇವು ಮಹಾಪುರಾಣದಲ್ಲಿ ಉಕ್ತವಾದ ಪರೀಷಹಗಳು. ಇತರ ಕೆಲವು ಗ್ರಂಥಗಳಲ್ಲು ಉಕ್ತವಾದವುಗಳಲ್ಲಿ ಸ್ವಲ್ಪ ವ್ಯತ್ಯಾಸಗಳಿವೆ.

ಪರ್ಣಲಘುವಿದ್ಯೆ/೪೩ ಒಣಗಿದ ಎಲೆಯಷ್ಟು ಹಗುರವಾಗಬಲ್ಲ ಶಕ್ತಿ.

ಪರ್ವೋಪವಾಸ/೧೬೦ ಪುಣ್ಯದಿನದ ಉಪವಾಸ.

ಪಳಿತ/೨೮೦ ಲೆಕ್ಕಕ್ಕೆ ಸಿಕ್ಕದಷ್ಟು ದೀರ್ಘಕಾಲ.

ಪ್ರಜ್ಞಪ್ತಿ/೧೬೨ ಅರಿವು, ಜ್ಞಾನ; ಒಬ್ಬ ದೇವತೆಯ ಹೆಸರು.

ಪ್ರತಿಮಾಯೋಗ/೧೩೨ ಆಹಾರತ್ಯಾಗ ಮಾಡಿ ಒಂದು ವರ್ಷದವರೆಗೆ ಒಂದೇ ಸ್ಥಳದಲ್ಲಿ ನಿಂತುಕೊಂಡು ತಪಸ್ಸು ಮಾಡುವುದು.

ಪ್ರತಿಲೇಖನ/೨೪೩ ಪ್ರತಿನಿತ್ಯವೂ ಭೂಶುದ್ಧಿ, ಉಪಕರಣಗಳ ಶುದ್ಧಿ ಮುಂತಾದುವನ್ನು ಮಾಡುವುದು.

ಪ್ರತಿವಿದ್ಯೆ/೧೬೨ ಮಾಯೆಯಿಂದ ಏನನ್ನಾದರೂ ಸೃಷ್ಟಿಸುವ ವಿದ್ಯೆಗೆ ವಿರುದ್ಧವಾಗಿ ಅದನ್ನೆಲ್ಲ ನಾಶಪಡಿಸುವ ವಿದ್ಯೆ.

ಪ್ರಥಮಾನುಯೋಗ/೧೧೦ ತ್ರಿಷಷ್ಟಿಶಲಾಕಾಪುರುಷರ ಹಾಗೂ ಇತರ ಮಹಾಪುರುಷರ ಕತೆಗಳಿರುವ ಗ್ರಂಥ

ಪ್ರಾಯೋಪಗಮನ/೨೧೮ ಉಪವಾಸದಿಂದ ಮರಣ ಹೊಂದುವ ವ್ರತ.

ಬಹುರೂಪಿಣೀವಿದ್ಯೆ/೧೬೨ ತಾನು ಬಯಸಿದ ರೂಪವನ್ನು ಧರಿಸಬಹುದಾದ ಮಾಯಾವಿದ್ಯೆ.

ಭವಪ್ರತ್ಯಯಜ್ಞಾನ/೧೪ ಕಾಲ ದೇಶಗಳು ಎಷ್ಟೇ ದೂರವಾಗಿದ್ದರೂ ಅಲ್ಲಿನ ವಿಷಯಗಳನ್ನು ತಿಳಿಯುವುದು; ಇದು ದೇವ ನಾರಕರಿಗೆ ಸಹಜವಾಗಿರುತ್ತದೆ.

ಭವ್ಯಜನ/೪ ಸಿದ್ಧಸ್ಥಿತಿಗೆ ಏರುವ ಯೋಗ್ಯತೆ ಇರುವ ಜೀವ.

ಮಹರ್ಧಿಕದೇವ/೧೦೦ ಇಂದ್ರ, ತ್ರಯಸ್ತ್ರಿಂಶ, ಪಾರಿಷದಾತ್ಮರಕ್ಷ, ಲೋಕಪಾಲ, ಅಹಮಿಂದ್ರ.

ಮಹಾವ್ರತ/೮೭ ಸಾಧುಗಳು ಪಾಲಿಸಬೇಕಾದ ಮುಖ್ಯ ನಿಯಮ; ಅಹಿಂಸೆ ಮುಂತಾದ ಐದು ವ್ರತಗಳು.

ಮಿಥ್ಯಾಜ್ಞಾನಿ/೮೫ ತಾನು ಜ್ಞಾನಿಯೆಂಬ ತಪ್ಪು ತಿಳಿವಳಿಕೆಯನ್ನು ಹೊಂದಿದವನು.

ಮಿಥ್ಯಾತ್ವ/೧೫ ತತ್ತ್ವಾರ್ಥದಲ್ಲಿ ನಂಬಿಕೆಯಿಲ್ಲದಿರುವುದು; ಶರೀರವನ್ನು ಆತ್ಮವೆಂದು ಭಾವಿಸುವುದು.

ಮಿಥ್ಯಾದೃಷ್ಟಿ/೨೦೦ ಮಿಥ್ಯಾದರ್ಶನಸಹಿತನಾದ ಜೀವಿ;

ಸಮ್ಯಕ್ತ್ವಜ್ಞಾನವಿಲ್ಲದವನು; ಅಭವ್ಯ.

ತ್ರಿವಶ್ಯಗಳು/೧೮೩ ಮುಖವಶ್ಯ, ಜನವಶ್ಯ, ರಾಜ ವಶ್ಯ

ಮೂಢತ್ರಯ/೯೮/ ಲೋಕಮೂಢ, ದೇವತಾಮೂಢ ಮತ್ತು ಪಾಖಂಡಿಮೂಢಗಳು.

ಮೂಲಗುಣ/೧೦ ಮುನಿಗಳು ಆಚರಿಸಬೇಕಾದ ಇಪ್ಪತ್ತೆಂಟು ಬಗೆಯ ಆಚರಣೆಗಳು; ಪಂಚಾಣುವ್ರತಗಳು, ಪಂಚಸಮಿತಿ, ಪಂಚೇಂದ್ರಿಯ ಸಂಯಮ, ಪಂಚಾವಶ್ಯಕಗಳು, ಸ್ನಾನಾಭಾವ, ಭೂಮಿಶಯನ, ನಗ್ನತ್ವ, ಕೇಶೋತ್ಪಾಟನ, ಏಕಾಶನ, ದಂತಧಾವನಾಭಾವ ಮತ್ತು ಸ್ಥಿತಾಶನ.

ರತ್ನತ್ರಯ/೧೦ ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ ಮತ್ತು ಸಮ್ಯಕ್‌ಚಾರಿತ್ರಗಳು.

ಲೋಚು/೮ ಮುನಿಧರ್ಮಗಳಲ್ಲಿ ಒಂದು: ತನ್ನ ತಲೆಯ ಮತ್ತು ಮುಖದ ಕೂದಲನ್ನು ತಾನೇ ಕಿತ್ತು ತೆಗೆಯುವುದು ಅಥವಾ ಬೇರೆಯವರಿಂದ ಕೀಳಿಸಿಕೊಳ್ಳುವುದು.

ವಶ್ಯಮಂತ್ರ/೧೮೩ ಬೇಕಾದುದನ್ನು ಅಧೀನಗೊಳಿಸಿಕೊಳ್ಳಲು ಪ್ರಯೋಗಿಸುವ ಮಂತ್ರ.

ವಿದ್ಯಾಧರಕರಣ/೨೬೧ ವಿದ್ಯಾಧರರು ಆಕಾಶಕ್ಕೆ ನೆಗೆಯುವಾಗ ಬಳಸುವ ಹಸ್ತಪಾದಗಳ ಒಂದು ಭಂಗಿ.

ವಿಭಂಗಜ್ಞಾನ/೨೮೦ ಆತ್ಮನಿಗೆ ಅಹಿತವನ್ನುಂಟುಮಾಡುವ ಪದಾರ್ಥಗಳನ್ನು ತಿಳಿಯಬಲ್ಲ ಜ್ಞಾನ.

ವೈಕ್ರಿಯಿಕಋದ್ಧಿಪ್ರಾಪ್ತಿ/೨೨೩ ಅನೇಕರೂಪಗಳನ್ನು ಧರಿಸುವ ಸಾಮರ್ಥ್ಯವನ್ನು ಪಡೆಯುವುದು.

ವ್ಯಂತರಕುಲ/೨೮೦ ಜ್ಯೋತಿಷೀ, ವಿಮಾನವಾಸೀ, ಭವನಪತಿ ಮತ್ತು ವ್ಯಂತರವೆಂಬ ನಾಲ್ಕು ಬಗೆಯ ದೇವತೆಗಳಲ್ಲಿನ ಒಂದು ಗುಂಪು.

ಶಲ್ಯತ್ರಯ/೮೮ ಮಿಥ್ಯಾಶಲ್ಯ, ಮಾಯಾಶಲ್ಯ ಮತ್ತು ನಿದಾನಶಲ್ಯಗಳು.

ಶಿಕ್ಷಾವ್ರತ/೮೯ ಸಾಮಾಯಿಕವ್ರತ, ಪ್ರೋಷಧೋಪವಾಸವ್ರತ, ಉಪಭೋಗ ಪರಿಭೋಗ ಪರಿಮಾಣವ್ರತ ಮತ್ತು ಅತಿಥಿಸಂವಿಭಾಗವ್ರತ

ಶೀಲಸಪ್ತತೆ/೮೮ ಮೂರು ಗುಣವ್ರತಗಳು ಹಾಗೂ ನಾಲ್ಕು ಶಿಕ್ಷಾವ್ರತಗಳು.

ಶುಕ್ರಧ್ಯಾನ/೧೬೨ ಶುಕ್ಲಧ್ಯಾನ: ಜೈನಭಟ್ಟಾರಕರ ಸಮಾಧಿಜ್ಞಾನ.

ಶೂನ್ಯವಾದ/೨೩೨ ಎಲ್ಲವೂ ಶೂನ್ಯವೆಂಬ ವಾದ; ನಿರೀಶ್ವರವಾದ.

ಶ್ರವಣ/೪ ಸವಣ, ಜೈನ ಸನ್ಯಾಸಿ.

ಶ್ರಾವಕ/೪ ಹನ್ನೆರಡು ಉಪಾಸಕ ವ್ರತಗಳನ್ನು ಪಾಲಿಸುವ ಜೈನಗೃಹಸ್ಥ.

ಷಡಾಯತನ/೧೬೬ ಪಂಚೇಂದ್ರಿಯಗಳು ಮತ್ತು ಮನಸ್ಸು.

ಷಡ್ದ್ರವ್ಯ/೯೪ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ.

ಸನ್ಯಸನವಿಧಿ/೧೪೮ ಕಷಾಯಗಳು ಹಾಗೂ ಆಚಾರವನ್ನು ಕಡಿಮೆ ಮಾಡಿ ಪಂಚಪರಮೇಷ್ಠಿಧ್ಯಾನದಲ್ಲಿ ತತ್ಪರನಾಗಿ ಪ್ರಾಣತ್ಯಾಗ ಮಾಡುವ ಒಂದು ಬಗೆಯ ನೇಮ.

ಸಪ್ತಗುಣ/೬೯ ದಾತೃವಿನ ಶ್ರದ್ಧಾ, ಶಕ್ತಿ, ಭಕ್ತಿ, ವಿಜ್ಞಾನ, ಅಲುಬ್ಧತಾ, ಕ್ಷಮಾ ಮತ್ತು ತ್ಯಾಗಗಳು.

ಸಪ್ತತತ್ವ /೯೪ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ ಮತ್ತು ಮೋಕ್ಷ.

ಸಪ್ತಾಂತರಾಯ/೮೯ ಮೋಕ್ಷಸಂಪಾದನೆಗಿರುವ ಏಳು ಬಗೆಯ ಅಡ್ಡಿಗಳು.

ಸಮಾಧಿಮರಣ/೩೫ ರಾಗ, ದ್ವೇಷ, ಕ್ರೋಧ, ಮಾನ,

ಮಾಯಾ, ಲೋಭಗಳನ್ನು ತ್ಯಜಿಸಿ ಶುದ್ಧ ಅಹಿಂಸಾತ್ಮಕ ವೃತ್ತಿಯನ್ನು ಪಾಲಿಸುತ್ತ ಮರಣವನ್ನು ಹೊಂದುವುದು.

ಸಮಾಧಿವಿಧಿ/೫೮ ನೋಡಿ, ಸಮಾಧಿಮರಣ.

ಸರ್ವಾರ್ಥಸಿದ್ಧಿ/೧೪೮ ಐದು ಅಣೂತ್ತರಗಳೆಂಬ ವಿಮಾನದಲ್ಲಿ ಮಧ್ಯದಲ್ಲಿರುವ ವಿಮಾನ.

ಸಹಸ್ರಾರ ಕಲ್ಪ/೧೫೨ ಹದಿನಾರು ಬಗೆಯ ಸ್ವರ್ಗಗಳಲ್ಲಿ ಒಂದು; ಷೋಡಶ ಕಲ್ಪಗಳಲ್ಲಿ ಒಂದು

ಸಾಗರ/೧೪ ಜೈನರಲ್ಲಿನ ಕಾಲದ ಒಂದು ಅಳತೆ; ಹತ್ತು ಕೋಟಾಕೋಟಿಪಲ್ಯೋಪಮ ಪರಿಮಿತ ಕಾಲ.

ಸಾಮಾನಿಕದೇವ/೨೭೮ ಮಹರ್ಧಿಕದೇವರಲ್ಲಿನ ಒಂದು ಪ್ರಭೇದ.

ಸೌಧರ್ಮಕಲ್ಪ/೧೯೨ ಹದಿನಾರು ಸ್ವರ್ಗಗಳಲ್ಲಿ ಮೊದಲನೆಯದು.

ಸೌಧರ್ಮೇಂದ್ರ/೧೯೪ ಸೌಧರ್ಮಕಲ್ಪದ ಅಧಿಪತಿ; ಹದಿನಾರು ಇಂದ್ರರಲ್ಲಿ ಒಬ್ಬ.

ಸ್ವಾಧ್ಯಾಯ/೭ ಶ್ರಾವಕನು ಪ್ರತಿದಿನ ಆಚರಿಸಬೇಕಾದ ಇಜ್ಯೆ, ವಾರ್ತೆ, ದತ್ತಿ, ಸ್ವಾಧ್ಯಾಯ, ಸಂಯಮ ಮತ್ತು ತಪ ಎಂಬ ಷಟ್ಕರ್ಮಗಳಲ್ಲಿ ಒಂದು

ಹದಿನೆಂಟು ದೋಷ/೨ ಕ್ಷುಧೆ, ತೃಷೆ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಜರೆ, ರೋಗ, ಮೃತ್ಯು, ಖೇದ, ಸ್ವೇದ, ಮದ, ಅರತಿ, ವಿಸ್ಮಯ, ಜನ್ಮ, ನಿದ್ರೆ ಮತ್ತು ವಿಷಾದ.

ಹನ್ನೆರಡು ಬಗೆಯ ತಪಸ್ಸು/೧೩೬ ಅನಶನ, ಅವಮೋದಾರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಾವಾಸ ಮತ್ತು ಕಾಯಕ್ಲೇಶ ಎಂಬ ಆರು ಬಗೆಯ ಬಾಹ್ಯ ತಪಸ್ಸುಗಳು; ಹಾಗೂ ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ಧ್ಯಾನ ಮತ್ತು ವ್ಯುತ್ಸರ್ಗ ಎಂಬ ಆರು ಬಗೆಯ ಆಂತರಿಕ ತಪಸ್ಸುಗಳು.